


ವೀರ ಹನುಮಾನ್

ಪೂರ್ವ ಕಾಲದಲ್ಲಿ ಸುಪರ್ವಗಿರಿ ಎಂಬ ದೊಡ್ಡ ಂದು ಪರ್ವತವಿದ್ದಿತು. ಆ ಪರ್ವತದ ಕಾಡಿನಲ್ಲಿ ರುವತ್ತು ಸಾವಿರದಷ್ಟು ವಾನರರಿದ್ದರು. ಕೇಸರಿ ಂಬ ಹೆಸರಿನ ವಾನರನು ಎಲ್ಲಾ ವಾನರರಿಗೂ ರಾಜ ವಿದ್ದ. ಆತನು ಬಹುದೊಡ್ಡ ಶಕ್ತಿಶಾಲಿಯಾದ ವಾನರನಾಗಿದ್ದ. ಕೇಸರಿ ಎಂಬುದು ಅವನ ಪೌರುಷ ಂದ ಬಂದ ಹೆಸರಾಗಿತ್ತು.

ಅದೇನೆಂದರೆ ಹಿಂದೆ ಪ್ರಭಾಸ ತೀರ್ಥವೆಂಬಲ್ಲಿ ನೇಕ ಮುನಿಗಳು ತಪಸ್ಸು ಮಾಡಿಕೊಂಡಿದ್ದರು. ವರಿಗೆ ಆಗಾಗ ಶಂಖ ಮತ್ತು ಶಬಲ ಎಂಬ ಆನೆ ಳು ಕಾಟ ಕೊಡುತ್ತಿದ್ದುವು. ಆ ಬಲಿಷ್ಠ ಆನೆಗಳನ್ನು ಗ್ರಹಿಸಲು ಯಾರಿಗೂ ಸಾಧ್ಯವಾಗಲಿಲ್ಲ. ತಪಸ್ವಿ ಆ ದುಷ್ಟ ಆನೆಗಳ ಕಾಟವನ್ನು ತಿಳಿದು ಕೇಸರಿ ರನು ಆ ಎರಡೂ ಆನೆಗಳನ್ನು ತನ್ನ ಬಾಹು ಗಳಿಂದಲೇ ಕೊಂದುಬಿಟ್ಟನು.

ಅಂದಿನಿಂದ ಅವನಿಗೆ ಕೇಸರಿ (ಸಿಂಹ) ಎಂಬ ಹೆಸರು ದಿತು. ಕೇಸರಿ ಅಷ್ಟೊಂದು ಬಲಿಷ್ಠನಾಗಿ, ಭಾಗ್ಯವಂತನಾಗಿ, ಸಕಲ ಸಂಪದಗಳಿಂದ ಕೂಡಿದ್ದರೂ ಮದುವೆಯಾಗಿರಲಿಲ್ಲ. ಬ್ರಹ್ಮಚರ್ಯ ವ್ರತವನ್ನೇ ಅವಲಂಬಿಸಿ ಕಠಿನವಾದ ತಪಸ್ಸುಗಳನ್ನು ಮಾಡಿ, ಇನ್ನಷ್ಟು ಶಕ್ತಿಗಳನ್ನು ಸಂಪಾದಿಸಿಕೊಂಡನು.

ಹೀಗಿರಲು ಆ ಕಾಲದಲ್ಲಿ ಶಂಬಸಾಧನನೆಂಬ ರಾಕ್ಷಸನು ಘನಘೋರವಾದ ತಪಸ್ಸನ್ನು ಮಾಡಿ, ಬ್ರಹ್ಮನನ್ನು ಮೆಚ್ಚಿಸಿ, ಮೂರು ಲೋಕಗಳನ್ನೂ ಜಯಿಸುವಂತೆ ವರಗಳನ್ನು ಪಡೆದಿದ್ದನು. ಆ ವರದ ಮದದಿಂದ ಮತ್ತನಾಗಿ ಮುನಿಗಳನ್ನೂ, ಸಿದ್ಧರನ್ನೂ, ದೇವತೆಗಳನ್ನೂ ಪೀಡಿಸತೊಡಗಿದನು.

ಆ ಬಲಿಷ್ಠ ರಾಕ್ಷಸನ ಕಾಟವನ್ನು ತಾಳಲಾರದೆ ದೇವತೆಗಳೆಲ್ಲರೂ ಇಂದ್ರನನ್ನು ಮುಂದಿಟ್ಟುಕೊಂಡು ಬ್ರಹ್ಮನ ಬಳಿಗೆ ಹೋಗಿ ಶಂಬಸಾಧನನ ಕಾಟವನ್ನು ತಾಳಲಾರೆವೆಂದು ಮೊರೆಯಿಟ್ಟುಕೊಂಡರು. ಬ್ರಹ್ಮನು ಅವರನ್ನೆಲ್ಲ ಕೇಸರಿಯ ಬಳಿಗೆ ಹೋಗಿ ಹೇಳಿಕೊಳ್ಳಲು ಕಳುಹಿಸಿ ಕೊಟ್ಟನು. ಅದರಂತೆ ದೇವತೆಗಳು ಕೇಸರಿಯ ಬಳಿಗೆ ಬಂದು ಅವನಿಗೆ ಆಶೀರ್ವಾದ ಮಾಡಿ,

೧. ಹನುಮಂತನ ಜನನ



ಶಂಬಸಾಧನನೆಂಬ ರಾಕ್ಷಸನ ಗರ್ವವನ್ನೂ ಚೇಷ್ಟೆಗಳನ್ನೂ ಹೇಳಿ, "ಅಪ್ಪಾ, ಆ ದುಷ್ಟನ ಬಾಧೆಯಿಂದ ಲೋಕವನ್ನು ಕಾಪಾಡಲು ನೀನೇ ತಕ್ಕವನೆಂದು ಬ್ರಹ್ಮಾಜ್ಞೆಯಾಗಿದೆ! ಆದ್ದರಿಂದ ಎಲ್ಲರನ್ನೂ ನೀನೇ ರಕ್ಷಿಸಬೇಕು" ಎಂದರು.

ಇದೇ ಸಮಯದಲ್ಲಿ ಲೋಕ ಸಂಚಾರಿಯಾದ ನಾರದನು ಶಂಬಸಾಧನನ ಬಳಿಗೆ ಹೋಗಿ, "ಶುಭವಾಗಲಿ ನಿನಗೆ ಶಂಬಸಾಧನಾ" ಎಂದು ಹರಸಿದನು.

ಶಂಬಸಾಧನನು ನಾರದನಿಗೆ ನಮಸ್ಕಾರ ಮಾಡಿ, ಉಪಚರಿಸಿ ಕೂಡಿಸಿ, "ಎಲ್ಲಿಂದ ಬರುತ್ತಿದ್ದೀರಿ? ಎಲ್ಲಿಗೆ ಹೋಗುತ್ತಿದ್ದೀರಿ? ವಿಶೇಷ ಸಮಾಚಾರಗಳೇನು?" ಎಂದು ವಿಚಾರಿಸಿದನು.

"ಹೇಮಕೂಟದಿಂದ ಬರುತ್ತಿದ್ದೇನೆ. ಅಲ್ಲಿ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಸೇರಿ, ನಿನ್ನನ್ನು ಕೊಲ್ಲಬೇಕೆಂದು ಒಬ್ಬ ವಾನರನನ್ನು ಬೇಡಿಕೊಳ್ಳುತ್ತಿರುವ ವಿಶೇಷವನ್ನು ನೋಡಿದೆ. ನಿನ್ನಂಥವನನ್ನು ಕೊಲ್ಲಲು ದೇವತೆಗಳು ಒಬ್ಬ ವಾನರನನ್ನು ಪ್ರಾರ್ಥಿ-ಸುವುದಕ್ಕಿಂತಲೂ ಬೇರೆ ವಿಶೇಷವೇನಿದೆ? ಈ ಸಂಗತಿ ತಿಳಿಸಬೇಕೆಂತಲೇ ಬಂದೆ" ಎಂದ ನಾರದ.

ಈ ಮಾತು ಕೇಳಿದ ಕೂಡಲೇ ಶಂಬ ಸಾಧನನಿ-ಒಮ್ಮೆಗೇ ಕೋಪವೆದ್ದಿತು. ತುಪ್ಪದ ಧಾರೆಯನ್ನೊ-ಗೊಂಡ ಹೋಮಾಗ್ನಿಯಂತೆ ಅವನು ಉರಿಯುತ್ತ "ಏನೇನು? ಹೋಗಲಿ ಪಾಪವೆಂದು ದೇವತೆಗಳನ-ಜೀವದೊಂದಿಗೆ ಇರಲು ಬಿಟ್ಟರೆ ಅವರು ಇಂತ-ದುರಾಲೋಚನೆ ಮಾಡುತ್ತಿದ್ದಾರೆಯೆ? ನನ್ನ ನ-ಕೋತಿಯಿಂದ ಹೇಗೆ ಕೊಲ್ಲಿಸುವರೋ ನಾನ-ನೋಡಿಬಿಡುತ್ತೇನೆ. ಇಷ್ಟೊಂದು ದಿನಗಳವರೆ-ನನ್ನ ಶೌರ್ಯಕ್ಕೆ ಹೆದರಿ ಸತ್ತ ಹಾಗೆ ಬಿದ್ದಿದ್ದ ಅವ-ಈಗ ನನ್ನನ್ನು ಕೊಲ್ಲಲಿಕ್ಕೆ ನೋಡುತ್ತಾರೋ? ನ-ಭುಜಬಲವೆಂತಹುದೆಂಬುದನ್ನು ಈ ಸಾರಿ ಚೆನ್ನಾ-ತೋರಿಸಿಬಿಡುತ್ತೇನೆ!" ಎಂದನು.

ನಾರದನು ನಾರಾಯಣ ಸ್ಮರಣೆ ಮಾಡುತ-ಅಲ್ಲಿಂದ ಹೊರಟುಹೋದ ಮೇಲೆ, ಶಂಬ ಸಾಧನ-ಪ್ರಳಯಕಾಲದ ರುದ್ರನಂತೆ ಕೈಯಲ್ಲಿ ಹೊ-ಹೊಳೆಯುವ ದೀರ್ಘವಾದ ಕತ್ತಿಯನ್ನು ಹಿಡಿದ-ಕೊಂಡು ಕೇಸರಿ ಇರುವ ಪರ್ವತಕ್ಕೆ ಅತಿವೇಗವಾ-ಬಂದು ಗರ್ಜಿಸಿದನು. ನೆಲವನ್ನು ಭೇದಿಸುವಂತ-ಅವನ ಬೊಬ್ಬೆಯನ್ನು ಕೇಳಿ ಕೇಸರಿಯ ಬಳಿಯಲ್ಲಿ-ದೇವತೆಗಳ ಗುಂಡಿಗೆಗಳು ನಡುಗಿದುವು. ಅವರೆ-ಕಾಲಿಗೆ ಬುದ್ಧಿ ಹೇಳಿ ಗುಹೆಗಳಲ್ಲಿಯೂ, ಬಂಡೆಗ-ಮರೆಯಲ್ಲಿಯೂ, ಕೇಸರಿಯ ಬೆನ್ನ ಹಿಂದೆಯ-ಅಡಗಲು ನೋಡಿದರು. ಅದನ್ನು ಗಮನಿಸಿದ ಶಂ-ಸಾಧನನು, "ಹೇಡಿಗಳೇ, ಎಲ್ಲಿಗೆ ಓಡುವಿರಿ-ನೀವೆಲ್ಲಿ ಅಡಗಿದರೂ ಹಿಡಿಯದೆ ಬಿಡಲಾ-ಒಂದೊಂದು ಪೆಟ್ಟಿಗೆ ಒಬ್ಬೊಬ್ಬನನ್ನೇ ಕೊಂದು ಎ-ರನ್ನೂ ನಿರ್ನಾಮ ಮಾಡಿಬಿಡುತ್ತೇನೆ. ನನ್ನ ನ-ಕೊಲ್ಲುವ ಆಲೋಚನೆ ಮಾಡುವಂತಹ ನಿಮ್ಮನ-





ಇನ್ನು ಉಳಿಯಲು ಬಿಡುವೆನೇ ?" ಎನ್ನುತ್ತ ದೇವತೆಗಳನ್ನು ಓಡಿಸಿಕೊಂಡು ಹೋಗತೊಡಗಿದನು.

ಆಗ ಕೇಸರಿ ತುಂಬ ಕೆರಳಿ ಶಂಬಸಾಧನನನ್ನು ಅಡ್ಡ ಗಟ್ಟಿ, "ಎಲೋ ದುಷ್ಟ ರಾಕ್ಷಸನೇ! ನನ್ನ ಕೈಯಲ್ಲಿ ಸಾಯಬೇಕೆಂತಲೇ ಇಲ್ಲಿಗೆ ಬಂದು, ತಪ್ಪಿಸಿಕೊಳ್ಳುವೆಯಾ ? ಕೈಲಾದರೆ ಯುದ್ಧ ಮಾಡು. ಇಲ್ಲದಿದ್ದರೆ ದುಷ್ಟ ಮೃಗವನ್ನು ಕೊಲ್ಲುವಂತೆ ನಿನ್ನನ್ನು ತುಂಡು ತುಂಡು ಮಾಡುತ್ತೇನೆ" ಎಂದನು.

"ಛೀಛೀ ! ಕೋತಿಯೊಂದಿಗೆ ಯುದ್ಧ ಮಾಡುವುದೆ ? ನನ್ನ ಹತ್ತಿರ ಯುದ್ಧ ಮಾಡಲು ಶಿವನೇ ಹೆದರುತ್ತಾನೆ. ನಿನ್ನ ತಲೆಯನ್ನು ಚಿವುಟಿ ತೆಗೆಯಲು ನನ್ನ ಎರಡು ಬೆರಳುಗಳೇ ಸಾಕು !" ಎನ್ನುತ್ತಾ ಶಂಬಸಾಧನನು ಕೇಸರಿಯ ಮೇಲೆ ಧುಮುಕಿದನು.

ಕೇಸರಿ ದೊಡ್ಡದೊಂದು ಕಲ್ಲನ್ನೆತ್ತಿ ಶಂಬಸಾಧನನ ಎದೆ ಅದುರುವ ಹಾಗೆ ಹೊಡೆದನು. ರಾಕ್ಷಸನು ಕೇಸರಿಯ ಮೇಲೆ ಗದೆಯಿಂದ ಅಪ್ಪಳಿಸಿದನು. ಆ ಗದೆ ಕೇಸರಿಯ ಎದೆಗೆ ತಾಗಿ ಹಿಟ್ಟಿನ ಹಾಗೆ ಪು ಯಾಗಿ ನೆಲಕ್ಕೆ ಉದುರಿತು. ಕೇಸರಿಯ ಎದೆಯ ಒಂದು ಗಾಯವೂ ಆಗಲಿಲ್ಲ. ಶಂಬಸಾಧನ ಒಂದು ಶೂಲವನ್ನು ಬೀಸಿ ಒಗೆದಾಗ ಕೇಸರಿ ಅದನ ಕೈಯಿಂದ ಹಿಡಿದು ಮೊಣಕಾಲಿನಲ್ಲಿಟ್ಟು ಮುರಿ ಬಿಸುಟನು. ಆಗ ರಾಕ್ಷಸನು ಕೇಸರಿಯ ಮೇ ಕತ್ತಿಯನ್ನೆತ್ತಿ ಹೊಡೆಯಲು ಬಂದನು. ಕೇಸರಿ ತ ಬಾಲದಿಂದ ರಾಕ್ಷಸನ ಕೈಯ ಮೇಲೆ ಹೊಡೆಯ ಕತ್ತಿ ಜಾರಿ ಕೆಳಗೆ ಬಿದ್ದುಹೋಯಿತು.

ಕೆಳಗೆ ಬಿದ್ದ ಕತ್ತಿಯನ್ನು ಹೆಕ್ಕಿಕೊಳ್ಳುವುದ ಅವಮಾನವೆಂದುಕೊಂಡು ಶಂಬಸಾಧನನು ಬಾಹ ಯುದ್ಧಕ್ಕೆ ತಯಾರಾಗಿ ತೋಳುತಟ್ಟಿ ಮುಂದೆ ಹಾ ದನು. ಅದರಂತೆ ಕೇಸರಿಯೂ ಮುಷ್ಟಿಬಿಗಿದು ರಾಕ್ಷಸನ ಎದೆಯ ಮೇಲೆ ಒಂದು ಗುದ್ದು ಕೊಟ್ಟನ ಕೂಡಲೇ ಶಂಬಸಾಧನ ರಾಕ್ಷಸ ರಕ್ತವನ್ನು ಕಾ ಸತ್ತುಬಿದ್ದನು. ಅವನ ಸಾವಿನಿಂದ ದೇವತೆಗಳ ಕಷ್ಟ ಗಳೆಲ್ಲ ನಿವಾರಣೆಯಾಯಿತು.

ದೇವತೆಗಳು ಕೇಸರಿಯನ್ನು ಬಹಳವಾಗಿ ಮೆಚ "ಅಪ್ಪಾ, ನಿನ್ನಂಥವನು ಸರ್ವಸೌಖ್ಯಗಳನ್ನೂ ಅನ ಭವಿಸಿ ತುಂಬು ಜೀವನ ನಡೆಸಬೇಕು. ಇನ್ನು ಮೇ ಬ್ರಹ್ಮಚರ್ಯ ವ್ರತವನ್ನು ಬಿಟ್ಟು ಮದುವೆಯಾ ಗೃಹಸ್ಥಾಶ್ರಮವನ್ನು ಸ್ವೀಕರಿಸಪ್ಪಾ" ಎಂದು ಹೇ ಅವನಿಗೆ ಶುಭವನ್ನು ಕೋರಿ ಹೊರಟುಹೋದರು

ದೇವತೆಗಳ ಪ್ರೋತ್ಸಾಹದಿಂದ ಕೇಸರಿಗೆ ಮದು ಯಾಗುವ ಆಲೋಚನೆ ಬಂದಿತು. ತನಗೆ ಅನುಕೂ ವತಿಯಾದ ಕನ್ಯೆಗಾಗಿ ಶೋಧಿಸತೊಡಗಿದನು. ಹಾ ರುವಾಗ ಬ್ರಹ್ಮದೇವನು ಸರ್ವಾಂಗ ಸುಂದರಿಯಾ ಅಹಲ್ಯ ಎಂಬ ಕನ್ಯೆಯನ್ನು ಸೃಷ್ಟಿಸಿ ಗೌತಮನೆಂ ಮುನಿಗೆ ಮದುವೆಮಾಡಿ ಕೊಟ್ಟಿದ್ದನು. ಆಮೇ ಅಹಲ್ಯಾ ಗೌತಮರಿಗೆ ಒಂದು ಹೆಣ್ಣು ಮಗ ಹುಟ್ಟಿತ್ತು. ಆ ಮಗುವಿನ ಹೆಸರು ಅಂಜನ.

ಪೂರ್ವ ಜನ್ಮದಲ್ಲಿ ಈ ಅಂಜನ ಒಬ್ಬ ವಿದ್ಯಾಧರನಿಗೆ ಮಗಳಾಗಿದ್ದಳು. ಅಂತೆಯೇ ಅವಳು ಸಂಗೀತ ವಿದುಷಿಯಾಗಿ, ಒಳ್ಳೆಯ ಗಾಯಕಿಯಾಗಿ ಹೆಸರು ಗೊಂಡಿದ್ದಳು. ಆದುದರಿಂದ ಅವಳಿಗೆ ಸುಕಂಠಿ ಎಂಬ ಹೆಸರು ಬಂದಿತ್ತು. ಒಂದುಸಾರಿ ಅವಳು ತನ್ನ ಗೆಳತಿಯರೊಂದಿಗೆ ಹಿಮಾಲಯಕ್ಕೆ ಹೋಗಿ, ಅಲ್ಲಿ ಒಂದು ಸರೋವರದಲ್ಲಿ ಜಲಕ್ರೀಡೆಯಾಡಿದಳು. ಆಮೇಲೆ ಅವಳು ಒಂದು ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ಅಗ್ನಿದೇವನು ಆ ದಾರಿಯಾಗಿ ಎಲ್ಲಿಗೋ ಹೋಗುತ್ತಿದ್ದನು. ಅವನ ರೂಪವೇನೋ ವಿಚಿತ್ರವಾಗಿ ಕಂಡುದರಿಂದ ಸುಕಂಠಿಗೆ ನಗುಬಂದಿತು. ತನ್ನನ್ನು ನೋಡಿ ನಕ್ಕುದಕ್ಕೆ ಅಗ್ನಿಹೋತ್ರನು ಸಿಟ್ಟುಗೊಂಡು, "ಬರುವ ಜನ್ಮದಲ್ಲಿ ವಾನರನನ್ನು ಮಗಳಾಗಿ ಪಡೆ" ಎಂದು ಶಪಿಸಿಬಿಟ್ಟನು.


ಅದಾದ ನಂತರ ಕುಂಜರನೆಂಬ ವಾನರನು ತನಗೆ ಸಂತಾನವಾಗಬೇಕೆಂದು ಶಿವನನ್ನು ಕುರಿತು ತಪಸ್ಸು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾಗಿ, "ಕಂದಾ, ನಿನಗೆ ಗಂಡು ಮಕ್ಕಳಾಗುವ ಯೋಗವಿಲ್ಲ. ಆದರೆ ನಿನಗೊಬ್ಬಳು ಮಗಳು ಸಿಗುತ್ತಾಳೆ. ಆ ನಿನ್ನ ಮಗಳಿಗೆ ನನ್ನ ಅಂಶದಿಂದ ಉತ್ತಮ ಪುತ್ರನೊಬ್ಬ ಹುಟ್ಟಿ ನಿನ್ನ ವಂಶವನ್ನು ಉದ್ಧಾರ ಮಾಡುತ್ತಾನೆ. ಸಂತೋಷವಾಗಿರು" ಎಂದು ಅನುಗ್ರಹಿಸಿ ಮಾಯವಾದನು.

ಕುಂಜರನು ತನಗೆ ಮಗಳು ಯಾವಾಗ ಸಿಗುವಳೋ ಎಂದು ಕಾಲ ನಿರೀಕ್ಷೆ ಮಾಡಿಕೊಂಡಿರುವಾಗ, ಒಂದಾನೊಂದುದಿನ ಗೌತಮಮುನಿ ಅಂಜನಳನ್ನು ಅವನ ಬಳಿಗೆ ಕರೆದುಕೊಂಡು ಬಂದು, "ನೀನು ಇವಳನ್ನು ನಿನ್ನ ಮಗಳಾಗಿ ಸ್ವೀಕರಿಸು. ಬೆಳೆಸಿ ದೊಡ್ಡವಳನ್ನಾಗಿ ಮಾಡು" ಎಂದನು. ಕುಂಜರನು ಸಂತೋಷವಾಗಿ ಅಂಜನಳನ್ನು ಮಗಳಾಗಿ ಸ್ವೀಕರಿಸಿ ತೃಪ್ತನಾದನು. ಬಾಲೆಯಾಗಿದ್ದ ಅಂಜನ ಬೇಗದಲ್ಲೇ ತನ್ನ ನಿಜ



ವಾದ ತಂದೆತಾಯಿಯರನ್ನು ಮರೆತು, ಕುಂಜರನನ್ನೇ ತನ್ನ ತಂದೆಯೆಂದೂ, ಆತನ ಪತ್ನಿ ವಿಂಧ್ಯಾವಳಿಯನ್ನೇ ತನ್ನ ತಾಯಿಯೆಂದೂ ಭಾವಿಸಿಕೊಂಡಳು. ಕ್ರಮವಾಗಿ ಅವಳಿಗೆ ಪ್ರಾಪ್ತ ವಯಸ್ಸು ಬಂದಿತು. ಕುಂಜರನಲ್ಲಿ ಅವಳಿಗೆ ವಿವಾಹ ಮಾಡಬೇಕೆಂಬ ಆಲೋಚನೆ ಪ್ರಾರಂಭವಾಯಿತು.

ಇದೇ ಸಮಯದಲ್ಲಿ ಕೇಸರಿಗೂ ಮದುವೆಯಾಗಬೇಕೆಂಬ ಆಲೋಚನೆ ಬಂದಿತ್ತು. ಆಗ ಅವನಿಗೆ ಅಂಜನಳ ಅಂದ ಚೆಂದ, ಅವಳ ಕಂಠದ ಇಂಪು ಮುಂತಾದುವುಗಳು ತಿಳಿದುಬಂದುವು. ಅವನು ಅವಳನ್ನು ನೋಡಲು ಹೊರಟು ಬಂದನು. ಅಂಜನ ವನದಲ್ಲಿ ವಿಹರಿಸಿಕೊಂಡಿದ್ದಾಗ ಕೇಸರಿ ಅವಳನ್ನು ನೋಡಿದನು. ಅವಳ ಬಂಗಾರದಂತಹ ಶರೀರ ಛಾಯೆ, ಸೌಂದರ್ಯಗಳನ್ನು ನೋಡಿ ಕೇಸರಿ ಆಶ್ಚರ್ಯ ಪರವಶನಾದನು. ಅವಳು ತನ್ನ ಕೊರಳಿಗೆ ಮಾಲೆ ಹಾಕಿಬಿಟ್ಟರೆ, ತನ್ನ ಜೀವನವು ಸಾರ್ಥಕವಾಗುವು



ದೆಂದು ಅವನಿಗೆ ತೋರಿತು. ಒಂದುವೇಳೆ ಅಂಜನ ತನ್ನನ್ನು ನಿರಾಕರಿಸಿದಳಾದರೆ ತಾನು ಬದುಕಲಾರೆನೆಂದೂ ಅವನಿಗನಿಸಿತು.

ಅಂಜನ ಕೂಡಾ ಕೇಸರಿಯನ್ನು ನೋಡಿದಳು. ಅವಳಿಗೂ ಕೇಸರಿಯ ಮೇಲೆ ಮೋಹವುಂಟಾಯಿತು. ಅವಳ ಮನಸ್ಸು ಅವನನ್ನೇ ನೆನೆಯತೊಡಗಿತು. ಆದರೆ ಅವಳು ತನ್ನ ಮನಸ್ಸಿನಲ್ಲಾದ ಗೊಂದಲವನ್ನು ಗೆಳತಿಯರಿಗೆ ತಿಳಿಯಗೊಡದಂತೆ, ವನವಿಹಾರವನ್ನು ಸಾಕುಮಾಡಿ ಮನೆಗೆ ಹಿಂದಿರುಗಿಬಿಟ್ಟಳು.

ಮಾರನೆಯದಿನ ಕೇಸರಿ ತನ್ನ ಆಪ್ತರೊಂದಿಗೆ ವನದಲ್ಲಿ ನೋಡಿದ ಅಂಜನ ಎಂಬ ಕನ್ಯೆ ತನಗೆ ಹಿಡಿಸಿದೆ ಎಂಬ ಸಮಾಚಾರವನ್ನು ತಿಳಿಸಿ, "ಅವಳನ್ನು ಮದುವೆ ಮಾಡಿಕೊಳ್ಳಲು ಏನು ಉಪಾಯ ಮಾಡಬೇಕು?" ಎಂದು ವಿಚಾರಿಸಿದನು.

"ಅವಳ ತಂದೆಯಾದ ಕುಂಜರನೆಂಬವನು ನಮಗೆ ಸಂಬಂಧಿಕನಾಗಲು ಯೋಗ್ಯನಾದವನೇ ಸರಿ. ಅವನ
ಹತ್ತಿರ ಹೋಗಿ ಒಳ್ಳೆಯ ರೀತಿಯಲ್ಲಿ ಕೆ
ನೋಡೋಣ. ಕೊಡಲಾರೆನೆಂದು ಹೇಳಿದರೆ ಬ
ಪ್ರಯೋಗ ಮಾಡೋಣ" ಎಂದು ಕೇಸರಿ
ಬಂಧು ಮೊದಲಾದವರು ಆಲೋಚನೆ ಹೇಳಿದ

ಅದರಂತೆ ಕೇಸರಿ ಕೆಲಮಂದಿ ಹಿರಿಯರ
ಕುಂಜರನ ಬಳಿಗೆ ಕಳುಹಿಸಿದನು. ಅವರು ಬ
ಕುಂಜರನೊಂದಿಗೆ ಕೇಸರಿಯ ಪರಿಚಯವನ್ನು ಹೇ
ಅವನ ಉದ್ದೇಶವನ್ನು ತಿಳಿಸಿದರು. ಕೇಸರಿಯಂ
ಮಹಾಪುರುಷನು ತನ್ನ ಅಳಿಯನಾಗಲು ಬಯಸು
ದನ್ನು ತಿಳಿದು ಕುಂಜರನಿಗೆ ಬಹಳ ಸಂತೋ
ವಾಯಿತು. ಆಮೇಲೆ ಬೇಗದಲ್ಲಿ ಅಂಜನಾ ಕೇ
ಯರ ವಿವಾಹವು ಶಾಸ್ತ್ರೋಕ್ತವಾಗಿ ಜರುಗಿತು.

ಮದುವೆಯಾಗಿ ಅನೇಕ ವರ್ಷಗಳಾದರೂ ಅಂ
ಳಿಗೆ ಸಂತಾನವಾಗಲಿಲ್ಲ. ಸಂತಾನದ ಬಯಕೆಯಿಂ
ಅಂಜನಾ ಕೇಸರಿಯರು ಎಷ್ಟೋ ವ್ರತೋಪವ
ಗಳನ್ನು ಮಾಡಿದರು. ಏನೂ ಪ್ರಯೋಜನವಿಲ್ಲ
ಹೋಯಿತು. ಕಡೆಗೆ ಅಂಜನ ಸಂತಾನದ ಬಯ
ಯಿಂದ ವಾಯುದೇವನನ್ನು ಕುರಿತು ತಪ
ಮಾಡಲು ನಿಶ್ಚಯಿಸಿದಳು. ಹೆಂಡತಿಯ ನಿಶ್ಚಯ
ಕೇಸರಿಯ ಒಪ್ಪಿಗೆಯೂ ದೊರೆಯಿತು. ಅವ
ಅವಳನ್ನು ಪುಂಜಕಸ್ಥಳ ಎಂಬ ಪ್ರದೇಶಕ್ಕೆ
ದೊಯ್ದು ಅಲ್ಲಿ ತಪಸ್ಸು ಮಾಡಲು ಹೇಳಿದ
ಅಂಜನ ಅಲ್ಲಿ ವಾಯುದೇವನನ್ನು ಧ್ಯಾನಿಸು
ತಪಸ್ಸು ಮಾಡಲು ತೊಡಗಿದಳು.

ಅವಳ ತಪಸ್ಸನ್ನು ನೋಡಿ ವಾಯುದೇವ
ಕರುಣೆಯುಂಟಾಯಿತು. ಅವನು ಬಹಳ ಕಾಲದಿ
ತನ್ನ ಬಳಿಯಲ್ಲಿದ್ದ ಶಿವನ ತೇಜಸ್ಸನ್ನು ಒಂದು ಹ
ರೂಪದಲ್ಲಿ ತಂದು ಅಂಜನಳ ಮುಂದಿಟ್ಟು ಮಾ
ವಾಗಿ ಹೋದನು. ಅಂಜನ ಆ ಹಣ್ಣನ್ನು ತಿಂ
ಗರ್ಭಿಣಿಯಾದಳು. ಒಬ್ಬಂಟಿಗಳಾಗಿ ತಪ
ಮಾಡುತ್ತಿರುವ ತನ್ನಲ್ಲಿ ಗರ್ಭ ಚಿಹ್ನೆ ದಿನದಿ



ದಿನಕ್ಕೆ ಅಭಿವೃದ್ಧಿಯಾಗುವುದನ್ನು ತಿಳಿದು ಅಂಜನಳಿಗೆ ಆಶ್ಚರ್ಯವೂ ತಳಮಳವೂ ಉಂಟಾಯಿತು. ಒಂಟಿಯಾಗಿರುವ ತನಗೆ ಈ ಗರ್ಭವು ಹೇಗೆ ಉಂಟಾಯಿತು? ಇದನ್ನು ತಿಳಿದರೆ ನಾಲ್ಕು ಮಂದಿ ಏನು ಹೇಳಿಯಾರು?

ಹೀಗೆ ಅವಳು ಚಿಂತಿಸಿಕೊಂಡಿರುವಾಗ, ಆಕಾಶದಿಂದ ಈ ರೀತಿಯಾಗಿ ಅಶರೀರವಾಣಿ ಹೇಳಿತು:

"ಅಂಜನಾ, ಚಿಂತಿಸಬೇಡ. ಒಂದು ಕಾಲದಲ್ಲಿ ಶಿವನು ವಾನರ ರೂಪದಲ್ಲಿದ್ದು ತನ್ನ ತೇಜಸ್ಸನ್ನು ವಾಯುದೇವನಿಗೆ ಕೊಟ್ಟನು. ವಾಯುದೇವನು ಅದನ್ನು ನಿನಗೆ ಹಣ್ಣಿನ ರೂಪದಲ್ಲಿ ಕೊಟ್ಟಿದ್ದಾನೆ. ಅದನ್ನು ನೀನು ತಿಂದುದರಿಂದ ಆ ಶಿವನೇ ನಿನ್ನ ಗರ್ಭದಲ್ಲಿ ಬೆಳೆಯುತ್ತಿದ್ದಾನೆ. ನಿನ್ನ ಕೋರಿಕೆ ಈಡೇರುವಂತೆ ವಾಯುದೇವನು ನಿನಗೆ ಸಹಕರಿಸಿದ್ದಾನೆ. ಆದುದರಿಂದ ನಿನ್ನ ಮಗನು ವಾಯುಪುತ್ರನೆಂದು ಪ್ರಖ್ಯಾತನಾಗುವನು. ಮೂರು ಲೋಕಗಳಲ್ಲಿಯೂ ಅಪಾರ ಕೀರ್ತಿಯನ್ನು ಗಳಿಸುವನು. ನೀನು ಧನ್ಯಳಾದಿ!"

ಈ ವಾಣಿ ನಿಂತಕೂಡಲೇ ವಾಯುದೇವನು ಅಂಜನಳ ಮುಂದೆ ಪ್ರತ್ಯಕ್ಷನಾಗಿ, "ಹೆದರಬೇಡ. ಈ ಅಶರೀರವಾಣಿ ಸತ್ಯವಾದುದು. ನೀನು ಹೋಗಿ ನಿನ್ನ ಗಂಡನ ಹತ್ತಿರ ಹೀಗೆ ಆಯಿತೆಂದು ಮರೆಮಾಜದೆ ಹೇಳು" ಎಂದು ಹೇಳಿ ಅದೃಶ್ಯನಾದನು.

ಅಂಜನ ತಪಸ್ಸನ್ನು ಸಾಕುಮಾಡಿ ಕೇಸರಿಯ ಬಳಿಗೆ ಹಿಂದಿರುಗಿ ಬಂದು, ನಡೆದ ಎಲ್ಲಾ ಸಂಗತಿಯನ್ನೂ ಅವನೊಡನೆ ಹೇಳಿದಳು. ಅದನ್ನು ಕೇಳಿ ಕೇಸರಿಗೆ ಬಹಳ ಸಂತೋಷವಾಯಿತು.

ಒಂದುವರ್ಷ ಕಳೆದ ಮೇಲೆ ಒಂದು ಶುಭದಿನದಲ್ಲಿ ಅಂಜನ ಒಂದು ಗಂಡು ಶಿಶುವನ್ನು ಹಡೆದಳು. ಕೂಡಲೇ ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ಪುಷ್ಪ ವೃಷ್ಟಿಯಾಯಿತು. ತನ್ನ ಮಗನನ್ನು ನೋಡಿ ಕೇಸರಿ ಅತ್ಯಾನಂದದಿಂದ ಹಬ್ಬ ಮಾಡಿಕೊಂಡನು. ಎಲ್ಲರೂ ಸಂತೋಷದಿಂದ ನಲಿದರು.

ಹುಟ್ಟಿದ ಆ ಸಣ್ಣ ಮಗುವಿಗೆ ಹಸಿವು ಜಾಸ್ತಿ. ಅವನ ಹಸಿವೆಗೆ ಬೇಕಾದಷ್ಟು ಹಣ್ಣುಗಳನ್ನು ತರಲು ಅಂಜನ ಮಗುವನ್ನು ಚಿಗುರೆಲೆಗಳ ಹಾಸಿಗೆಯಲ್ಲಿ ಮಲಗಿಸಿ ಅರಣ್ಯದೊಳಗೆ ಹೋದಳು. ತಾಯಿಯ ಬೆನ್ನ ಹಿಂದೆಯೇ ಹೊರಗೆ ಬಂದ ಆ ಹುಡುಗ ಪೂರ್ವದಿಕ್ಕನ್ನು ನೋಡಿದ. ತುಂಬ ಹಸಿವೆಯಲ್ಲಿದ್ದ ಅವನ ಕಣ್ಣಿಗೆ ಮೂಡುದಿಕ್ಕಿನ ಗುಡ್ಡದ ಮೇಲಿನಿಂದ ಕೆಂಪಗೆ ಮೇಲೆ ಬರುತ್ತಿದ್ದ ಸೂರ್ಯಬಿಂಬ ಹಣ್ಣಿನ ಹಾಗೆ ತೋರಿತು.

ಅದನ್ನು ನೋಡಿ ಬಾಲಕನು ಅದನ್ನು ಹಿಡಿದು ತಿಂದುಬಿಡಬೇಕೆಂಬ ಉದ್ದೇಶದಿಂದ ಆಕಾಶಕ್ಕೆ ಹಾರಿದನು. ಹಾಗೆ ಸೂರ್ಯನ ಕಡೆಗೆ ಹಾರಿ ಹೋಗುತ್ತಿರುವ ಆ ಚಿಣ್ಣನನ್ನು ನೋಡಿ ಯಕ್ಷರೂ ರಾಕ್ಷಸರೂ ನಾಗರೂ ಬೆರಗಾದರು. ಯಾವುದೋ ಪ್ರಳಯದ

ಸೂಚನೆಯಾಗಿರಬೇಕೆಂದು ಅವರೆಲ್ಲ ತುಂಬ ಗಾಬರಿಯಾದರು. ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು.

ಸೂರ್ಯನ ಅನುಚರರು ಸಮೀಪಿಸಿಕೊಂಡಿರುವ ಆ ಬಾಲಕನನ್ನು ನೋಡಿ ಹೆದರಿ ಕೂಗತೊಡಗಿದರು. ಆಗ ಸೂರ್ಯನು ಅವರನ್ನು ಕುರಿತು, "ಇವನು ಈಶ್ವರ ತೇಜಸ್ಸಿನಿಂದ ಲೋಕವನ್ನು ರಕ್ಷಿಸಲು ಹುಟ್ಟಿದ ಆಂಜನೇಯ. ಈತನ ಶಕ್ತಿಗೆ ಈಡು ಜೋಡುಗಳಿಲ್ಲ. ಹುಡುಗ ಬುದ್ಧಿಯಿಂದ ನನ್ನನ್ನು ನೋಡಿ ಹಣ್ಣೆಂದು ಭ್ರಮಿಸಿ ಬರುತ್ತಿದ್ದಾನೆ. ಹೆದರಬೇಡಿ" ಎಂದು ಧೈರ್ಯ ಹೇಳಿದನು.

ಆಂಜನೇಯನು ಸಮೀಪಿಸಿದಂತೆ ಸೂರ್ಯನು ಅವನಿಗೆ ಬಾಧೆಯಾಗದಂತೆ ತನ್ನ ಬಿಸಿಯನ್ನು ಆದಷ್ಟು ತಗ್ಗಿಸಿಕೊಂಡನು. ಅಷ್ಟರಲ್ಲಿ ಆಂಜನೇಯನು ಸೂರ್ಯನ ಬಳಿಗೆ ಬಂದು, ಅವನನ್ನು ಹಿಡಿದು ತನ್ನ ಬಾಯಲ್ಲಿಟ್ಟುಕೊಂಡು, ಬಿಸಿಯಾಗಿರಲು ಕೈಯಲ್ಲಿ ಹಿಡಿದು, ಆಚೀಚಿ ತಿರುಗಿಸಿ, ಹೊಡೆದು ಬಡೆದು ಏನೇನೋ ತಂಟೆಗೆ ತೊಡಗಿದನು. ಸೂರ್ಯನು ಏನೂ ಪ್ರತಿಭಟಿಸಲಿಲ್ಲ.


ಆ ದಿನ ಅಮಾವಾಸ್ಯೆಯಿದ್ದು, ರಾಹು ಸೂರ್ಯನನ್ನು ಹಿಡಿಯುವ ಗ್ರಹಣ ಯೋಗವೂ ಇತ್ತು. ಆದುದರಿಂದ ಸೂರ್ಯನನ್ನು ನುಂಗಲು ರಾಹು ಆ ಸಮಯದಲ್ಲಿ ಬಂದನು. ರಾಹುವನ್ನು ನೋಡಿ ಆಂಜನೇಯನು ಭಯಂಕರವಾಗಿ ಗರ್ಜಿಸಿದನು. ಅದನ್ನು ನೋಡಿ ರಾಹು ಹೆದರಿ, ಬಹುವೇಗವಾ ಓಡಿಹೋಗಿ ಇಂದ್ರನ ಸಭೆಯನ್ನು ಹೊಕ್ಕನು.

ಇಂದ್ರ ಸಭೆಯಲ್ಲಿ ಇಂದ್ರನಿಗೆ ವಿದ್ಯಾಧರರ ಸ್ತೋತ್ರ ಪಾಠಗಳನ್ನು ಒಪ್ಪಿಸಿಕೊಂಡಿದ್ದರು ತುಂಬುರು ನಾರದರು ವೀಣೆ ಬಾರಿಸಿಕೊಂಡಿದ್ದರು ಅಪ್ಸರೆಯರು ನಾಟ್ಯವಾಡಿಕೊಂಡಿದ್ದರು. ಇಂದ್ರನ ಚಿಂತಾಮಣಿ ಪೀಠದ ಮೇಲೆ ವೈಭವದಿಂದ ಕುಳಿತ ಕೊಂಡಿದ್ದನು. ರಾಹು ಇಂದ್ರನನ್ನು ನೋಡಿ, "ನಿ ಗೇನಪ್ಪ ಚಿಂತೆ? ಹಾಯಾಗಿ ಆಟಪಾಟಗಳ ಮುಳುಗಿರುವಿ. ನನಗಂತೂ ಏನೂ ತೋರುವುದಿಲ್ಲ ಎಂದನು. "ಏನಾಯಿತು?" ಎಂದು ಇಂದ್ರನ ರಾಹುವನ್ನು ಕೇಳಿದ.

"ಈ ದಿನ ಪರ್ವದಿನವಲ್ಲವೆ? ಸೂರ್ಯನನ ಹಿಡಿಯಲು ನಾನು ಹೋದಾಗ, ನನಗೆ ಶತ್ರುವಾ ಮತ್ತೊಬ್ಬ ರಾಹು ಬಂದು ಸೂರ್ಯನನ್ನು ಹಿಡಿದ ಬಿಟ್ಟಿದ್ದ. ಇನ್ನೊಬ್ಬ ರಾಹು ಇರುವನಾದ ನಾನೇಕೆ?" ಎಂದ ರಾಹು.

ಇಂದ್ರನು ಬೆರಗಾಗಿ "ಏನಿದು? ಇನ್ನೊಬ್ಬನ ಬಂದು ಸೂರ್ಯನನ್ನು ಹಿಡಿದನೆ? ಎಲ್ಲಿ ತೋರಿಸು ಬಾ" ಎಂದು ಇಂದ್ರನು ಐರಾವತದ ಮೇಲೇ ಕೈಯಲ್ಲಿ ವಜ್ರಾಯುಧವನ್ನು ಹಿಡಿದುಕೊಂಡು ವೇ ದಿಂದ ಹೊರಟನು.





Dec 1974


ವೀರಹನುಮಾನ್

ಇಂದ್ರನು ತನ್ನ ಬೆಂಬಲಕ್ಕಿರುವನೆಂಬ ಧೈರ್ಯದಲ್ಲಿ ರಾಹು ಬಾಲಾಂಜನೇಯನನ್ನು ಹೊಡೆದೋಡಿಸಲು ಅವನ ಬಳಿಗೆ ಹೋದನು. ಆಂಜನೇಯನು ವಿಚಿತ್ರ ರೂಪದ ರಾಹುವನ್ನು ಆಶ್ಚರ್ಯದಿಂದಲೂ ಆತುರದಿಂದಲೂ ಕಣ್ಣರಳಿಸಿ ನೋಡುತ್ತ, ಇದೂ ಒಂದು ಬಗೆಯ ಹಣ್ಣೆಂದು ಅವನನ್ನೆ ಹಿಡಿಯಲು ಹೋದನು. ಆಗ ಆಂಜನೇಯನ ಆರ್ಭಟನೆಯನ್ನೂ, ಉಗ್ರ ನರಸಿಂಹನಂತಹ ಮುಖ ಭಾವವನ್ನೂ ನೋಡಿ ರಾಹು ಇಂದ್ರನ ಬಳಿಗೆ ಓಡಿ ಹೋಗಿ, "ಅಯ್ಯೊ! ಈ ಹುಡುಗ ನನ್ನನ್ನು ಕೊಲ್ಲುತ್ತಾನೆ, ರಕ್ಷಿಸು!" ಎಂದು ಕೂಗಿದನು.

"ಹೆದರಬೇಡ" ಎಂದು ಇಂದ್ರನು ತನ್ನ ಆನೆಯನ್ನು ಮುಂದಕ್ಕೆ ಓಡಿಸಿದನು. ಘೀಂಕರಿಸಿಕೊಂಡು ತನ್ನ ಮೇಲೆ ಬರುವ ಬಿಳಿಯಾಗಿ ಹೊಳೆಯುವ ಐರಾವತವನ್ನು ನೋಡಿ ಆಂಜನೇಯನು "ಆಹಾ! ಈ ಹಣ್ಣು ಬೆಳ್ಳಗಾಗಿದೆ. ಇದು ತಿನ್ನಲು ಇನ್ನೂ ರುಚಿಯಾಗಿದ್ದೀತು" ಎಂದುಕೊಂಡು ಅದರ ಕಡೆಗೆ ಹಾರಿದನು. ಐರಾವತವೂ ಹೆದರಿ ಕೂಗಿತು. ಇದನ್ನು ನೋಡಿ ಇಂದ್ರನಿಗೆ ಬಹಳ ಕೋಪ ಬಂತು. ಬಾಲಾಂಜನೇಯನ ಮೇಲೆ ತನ್ನ ವಜ್ರಾಯುಧವನ್ನು ಬೀಸಿದನು. ಅದರ ಪೆಟ್ಟು ಆಂಜನೇಯನ ದವಡೆಯ ಮೇಲೆ ಬಿದ್ದಿತು. ಆ ಏಟಿನಿಂದ ಆಂಜನೇಯನು ಉದಯಾದ್ರಿಯ ಮೇಲೆ ಬಿದ್ದುಬಿಟ್ಟ.

ಇದಾವುದನ್ನೂ ಅರಿಯದ ಅಂಜನಾದೇವಿ ಪರ್ಣಶಾಲೆಗೆ ಹಿಂದಿರುಗಿ ಬಂದು ಹಾಸಿಗೆಯಲ್ಲಿ ಮಲಗಿಸಿದ್ದ ಮಗು ಮಾಯವಾಗಿರುವುದನ್ನು ನೋಡಿ, ಅತ್ತಿತ್ತ ಹುಡುಕುತ್ತಾ, ಅಳಲಾರಂಭಿಸಿದಳು.

ಎಲ್ಲಿಗೋ ಹೋಗಿದ್ದ ಕೇಸರಿಯೂ ಮನೆಗೆ ಬಂದು ಅವಳಿಗೆ ಸಮಾಧಾನ ಹೇಳುತ್ತ, "ಅಳಬೇಡ. ನಿನ್ನ ಮಗನ ಪ್ರತಾಪವನ್ನು ನಾನು ದೂರದಿಂದ ನೋಡಿದೆ. ಅವನು ಉದಯಿಸುವ ಸೂರ್ಯನನ್ನು ನೋಡಿ ಎಂಥದೋ ಹಣ್ಣು ಅಂದುಕೊಂಡು ಅದನ್ನು ಹಿಡಿಯಲು ಆಕಾಶಕ್ಕೆ ಹಾರಿ ಹೋದ. ಈ ಸಮಾಚಾರ ರಾಹುವಿನಿಂದ ತಿಳಿದು ಇಂದ್ರನು ಬಂದು ನಮ್ಮ



ಆಂಜನೇಯನ ದವಡೆ ಒಡೆಯುವಂತೆ ವಜ್ರಾಯುಧ ದಿಂದ ಹೊಡೆದ. ನಿನ್ನ ಮಗ ಜ್ಞಾನತಪ್ಪಿ ಪೂರ್ವಾದ್ರಿಯ ಶಿಖರದ ಮೇಲೆ ಬಿದ್ದಿದ್ದಾನೆ. ಇದನ್ನು ನೋಡಿ ವಾಯುದೇವನಿಗೆ ಇಂದ್ರನ ಮೇಲೆ ಕೋಪ ಬಂದು, ತನ್ನ ಸಂಚಾರವನ್ನು ಬಿಟ್ಟು ಸ್ತಬ್ಧನಾಗಿ ನಿಂತಿದ್ದಾನೆ. ಇನ್ನು ಮೇಲೆ ಒಳ್ಳೆಯ ಪರಿಣಾಮ ಆಗುತ್ತದೆ, ನೋಡುತ್ತಾ ಇರು." ಎಂದನು.

ಈ ಮಾತುಗಳಿಂದ ಅಂಜನಳ ದುಃಖ ಶಾಂತ ವಾಯಿತು. ಕೇಸರಿ ಹೇಳಿದ ಹಾಗೆ ವಾಯುದೇವನು ಸಂಚಾರ ನಿಲ್ಲಿಸಿದ ಕೂಡಲೇ ಗಾಳಿಯಿಲ್ಲದೆ ಜಗತ್ತು ಹಾಹಾಕಾರ ಮಾಡತೊಡಗಿತು. ಅದನ್ನು ನೋಡಿ ದೇವತೆಗಳೆಲ್ಲ ಗಾಬರಿಯಾಗಿ ಇಂದ್ರನನ್ನು ಮುಂದಿಟ್ಟು ಕೊಂಡು ಬ್ರಹ್ಮನ ಬಳಿಗೆ ಓಡಿದರು. ಇಂದ್ರನು ಆಂಜನೇಯನ ಕಾರ್ಯಗಳನ್ನೂ, ತಾನು ಅವನನ್ನು ವಜ್ರಾಯುಧದಿಂದ ಹೊಡೆದುದನ್ನೂ, ಆಂಜನೇಯನ ಮೂರ್ಛೆಯಿಂದ ವಾಯುದೇವನು ಅಚಲನಾದು ದನ್ನೂ ಬ್ರಹ್ಮನೊಂದಿಗೆ ಹೇಳಿ, ಏನಾದರೂ ಮಾಡಿ ಲೋಕವನ್ನು ಕಾಪಾಡಬೇಕೆಂದು ಕೇಳಿಕೊಂಡನು.

ತತ್‌ಕ್ಷಣ ಬ್ರಹ್ಮದೇವನು ಹಂಸವಾಹನದ ಮೇಲೇರಿ ವಾಯುವಿನ ಬಳಿಗೆ ಹೋಗಿ, "ಇದೇ ನಪ್ಪಾ ವಾಯು ?. ಸಮಸ್ತ ಪ್ರಾಣಿಗಳಿಗೂ ಪ್ರಾ ಸ್ವರೂಪನಾದವನು, ಜಗತ್ತನ್ನೆಲ್ಲಾ ತುಂಬಿಕೊಂಡಿ ಬೇಕಾದವನು, ಹೀಗೆ ಕೋಪಿಸಿ ನಿಂತುಬಿಡುವುದ ಧರ್ಮವೇ ?" ಎಂದು ಕೇಳಿದ.

"ಇಂದ್ರನು ಹಿಂದುಮುಂದು ಯೋಚನೆ ಮಾಡದ ಬಾಲಾಂಜನೇಯನ ಮೇಲೆ ವಜ್ರಾಯುಧದಿಂ ಹೊಡೆಯಬಹುದೇ ?" ಎಂದು ವಾಯುದೇವನ ಆಂಜನೇಯನನ್ನು ಎತ್ತಿ ತಂದು ಬ್ರಹ್ಮನ ಪಾದದ ಬಳಿಯಲ್ಲಿಟ್ಟನು. ಬ್ರಹ್ಮನು ಆಂಜನೇಯನನ್ನು ತಡವಿದ ಕೂಡಲೇ ಆತನಿಗೆ ಮತ್ತೆ ಚೈತನ್ಯ ಬಂದಿತು

ಅದನ್ನು ನೋಡಿದ ಕೂಡಲೇ ವಾಯು ಮತ್ತೆ ಅಲ್ಲಿ ಒಂದು ಕ್ಷಣವೂ ನಿಲ್ಲದೆ, ತನ್ನ ಕರ್ತವ್ಯದಂ ಸಂಚಾರ ಮಾಡಲು ಹೊರಟುಬಿಟ್ಟನು. ಮರ ಕ್ಷಣವೇ ಪ್ರಪಂಚಕ್ಕೂ ಜೀವ ಬಂದಿತು.


ಬ್ರಹ್ಮನು ದೇವತೆಗಳನ್ನು ನೋಡಿ, "ಈ ಹುಡು ಗನು ಲೋಕಗಳನ್ನು ಸಂತೋಷಪಡಿಸುವಂಥವನು ನಮ್ಮೆಲ್ಲರನ್ನೂ ಬರಮಾಡಿಸಿಕೊಂಡಿರುವ ಈ ಹುಡು ಗನಿಗೆ, ನಾವು ವರಗಳನ್ನು ಕೊಟ್ಟು ಹೋಗೋಣ ಇವನು ಸಾಕ್ಷಾತ್ ಶಿವನ ಅವತಾರವಾಗಿದ್ದಾನೆ" ಎಂದನು. ದೇವತೆಗಳೆಲ್ಲರೂ ಸಂತೋಷದಿಂದ ಆಂ ನೇಯನಿಗೆ ವರಗಳನ್ನು ಕೊಡಲು ಸಿದ್ಧರಾದರು ಭೂದೇವಿ ಆಂಜನೇಯನಿಗೆ ಸಮಸ್ತ ಶಾಸ್ತ್ರಗಳು ಬರುವಂತೆ ಶಕ್ತಿಯನ್ನು ಕೊಟ್ಟಳು. ಅವನಿಗೆ ನೀ ನಲ್ಲಿ ಭಯವಿಲ್ಲದಂತೆ ವರುಣನು ವರ ಕೊಟ್ಟನು ಮೃತ್ಯು ಭಯವೂ, ವಾರ್ಧಕ್ಯವೂ ಇಲ್ಲದಂ ಯಮನು ವರ ಕೊಟ್ಟನು. ಯುದ್ಧಗಳಲ್ಲಿ ವಿಜಯವ ಉಂಟಾಗುವಂತೆ ಕುಬೇರನು ವರ ಕೊಟ್ಟನು. ದೇ

ಲ್ಪಿ ವಿಶ್ವಕರ್ಮನು ಆಂಜನೇಯನಿಗೆ ಶಾಶ್ವತವಾದ ನಕ ಕುಂಡಲಗಳನ್ನು ಕೊಟ್ಟನು. ಇಂದ್ರನು ಆಂಜ ೇಯನಿಗೆ ಹನುಮಂತ ಎಂಬ ಹೆಸರಿಟ್ಟು, ವಜ್ರಾ ಯುಧದಿಂದ ಅವನಿಗೇನೂ ಹಾನಿಯಾಗದಂತೆ ವರ ವನ್ನು ಕೊಟ್ಟನು. "ಹನು" ಎಂದರೆ ದವಡೆ. ವಜ್ರಾ ಯುಧದ ಪೆಟ್ಟಿನಿಂದ ದವಡೆ ದೊಡ್ಡದಾಗಿ ಹೋದುದ ಂದ ಇಂದ್ರನು ಹಾಗೆ ಹೆಸರಿಟ್ಟನು. ಕಡೆಗೆ ಬ್ರಹ್ಮನು ನುಮಂತನಿಗೆ ದೀರ್ಘಾಯುಷ್ಯವನ್ನೂ ಚಿರಂ ಜೀವಿತ್ವವನ್ನೂ ಕೊಟ್ಟನು.

ಆಮೇಲೆ ಬ್ರಹ್ಮನು ವಾಯುದೇವನನ್ನು ಕರೆದು, ಈ ಮಗನಿಂದ ನಿನಗೂ ದೊಡ್ಡ ಹೆಸರು ಬರು ಂತಾಯಿತು. ಇವನು ನಿಷ್ಕಲ್ಮಷವಾದ ಕೀರ್ತಿ ಯನ್ನು ಸಂಪಾದಿಸುತ್ತಾನೆ. ಇವನು ಯಾವುದ ಲ್ಲಿಯೂ ಸೋಲಲಾರ; ಏಕೈಕವೀರನಾಗಿರುತ್ತಾನೆ. ರ್ವತಕ್ಕೆ ಸಮಾನವಾದ ಧೀರತ್ವವೂ ಇವನಿಗಿದೆ. ಣಿಮಾದಿ ಸಿದ್ಧಿಗಳೆಲ್ಲವೂ ಇವನಿಗೆ ಸಿದ್ಧಿಸುತ್ತವೆ. ನೆದ ಮಾತ್ರಕ್ಕೆ ಇಡಿಯ ವಿಶ್ವವನ್ನೇ ನೋಡ ಲ್ಲನು. ವೈರಾಗ್ಯ ಬುದ್ಧಿಯುಳ್ಳವನಾದುದರಿಂದ ಾವ ಬಗೆಯ ವಿಷಯ ವಿಕಾರಗಳೂ ಇವನಲ್ಲಿ ಪ್ರವೇಶಿಸಲಾರವು. ಕಾಮರೂಪದ ಶಕ್ತಿಯೂ ಇವನಿ ಗಿದೆ. ಅಪಾರವಾದ ಧೈರ್ಯ, ಶೌರ್ಯ, ದಯೆ ಮೊದಲಾದ ಸುಗುಣಗಳು ಇವನಲ್ಲಿ ನೆಲೆಸಿರುತ್ತವೆ." ಎಂದು ಹೇಳಿ ಹೋದನು.

ಆಮೇಲೆ ವಾಯುದೇವನು ಹನುಮಂತನನ್ನು ತ್ತಿ ತಂದು ಅಂಜನಳಕೈಗೆ ಕೊಟ್ಟನು. ಅವಳು ಎಲ್ಲಾ ಂಗತಿಗಳನ್ನೂ ತಿಳಿದು, ಆನಂದಬಾಷ್ಪ ಸುರಿಸಿದಳು.


ಆ ಪ್ರಾಂತದಲ್ಲಿ ತಪಸ್ಸು ಮಾಡಿಕೊಂಡಿರುವ ಋಷಿ ಮುನಿಗಳು ಹನುಮಂತನ ಸಂಗತಿಗಳನ್ನು ೇಳಿ ಆಶ್ಚರ್ಯ ಪಡುತ್ತಾ, "ಸೂರ್ಯನ ಕಾಂತಿ ಾಗಿದ ಕೂಡಲೇ ಸಹಿಸಲಾರದ ತಾಪ ವುಂಟಾಗು ಾಗ, ಈ ಹುಡುಗ ಹಾರಿಹೋಗಿ ಸೂರ್ಯನನ್ನು



ಕೈಯಿಂದ ಹಿಡಿಯುವುದೆಂದರೇನು ? ಬಾಯಿಗಿಟ್ಟು ಕೊಳ್ಳುವುದೆಂದರೇನು ?" ಎಂದು ತಮ್ಮೊಳಗೆ ತಾವು ಅಂದುಕೊಂಡರು. ತನ್ನ ಮಗನಿಗೆ ದೇವತೆಗಳೆಲ್ಲ ಅಪೂರ್ವವಾದ ವರಗಳನ್ನು ಕೊಟ್ಟ ಸಂಗತಿ ತಿಳಿದು ಕೇಸರಿಗೂ ಬಹಳ ಸಂತೋಷವಾಯಿತು.

ಹನುಮಂತನು ದಿನದಿಂದ ದಿನಕ್ಕೆ ಬೆಳೆಯುತ್ತ, ಸಮಸ್ತ ಜ್ಞಾನವನ್ನೂ ಗಳಿಸುತ್ತ, ಸುಗುಣ ಪುಂಜ ನಾಗಿದ್ದರೂ ತನ್ನ ಹುಡುಗಾಟಗಳನ್ನು ಮಾತ್ರ ಬಿಡ ಲಿಲ್ಲ. ಒಳ್ಳೆಯ ಕೆಲಸಗಳನ್ನೇ ಮಾಡಬೇಕಲ್ಲದೆ, ಮರ್ಕಟ ಚೇಷ್ಟೆಗಳನ್ನು ಮಾಡಬಾರದೆಂದೂ, ಬಡವ ರನ್ನೂ ಬಲಹೀನರನ್ನೂ ಬಾಧಿಸುವುದು ಒಳ್ಳೆಯ ದಲ್ಲವೆಂದೂ ತಂದೆ ತಾಯಿಗಳು ಎಷ್ಟು ಬುದ್ಧಿ ಹೇಳಿದರೂ ಅವನು ಕೇಳುತಿದ್ದಿಲ್ಲ.

ಲೋಕಗಳನ್ನು ರಕ್ಷಿಸಲಿಕ್ಕಾಗಿ ಅವತರಿಸಿದ ಈ ಹನುಮಂತನು ಚಿಕ್ಕ ಪ್ರಾಯದಲ್ಲಿಯೇ ಇಷ್ಟೊಂದು ಪುಂಡಾಟ ಮಾಡುವುದರ ಮರ್ಮವೇನೆಂಬುದು



ಅಲ್ಲಿರುವ ಬ್ರಾಹ್ಮಣರಿಗೆ ಅರ್ಥವಾಗಲಿಲ್ಲ. ಅವನಿಗೇನಾದರೂ ಶಾಪ ಕೊಡೋಣವೆಂದರೆ, ಯಾವ ಶಾಪಗಳೂ ಅವನಿಗೆ ತಗಲದಂತೆ ಬ್ರಹ್ಮನು ವರವನ್ನು ಕೊಟ್ಟಿದ್ದಾನೆ. ಹಾಗೆಂದ ಮಾತ್ರಕ್ಕೆ ಇಷ್ಟೊಂದು ಮಹಾಶಕ್ತಿಗಳಿರುವವನಿಗೆ ಏನಾದರೊಂದು ಅಡೆ ತಡೆ ಹಾಕದೆ ಹೋದರೆ ಲೋಕಗಳನ್ನು ತಾರು ಮಾರು ಮಾಡಿಬಿಡಲಾರನೆ? ಹೀಗೆ ಆಲೋಚಿಸಿ ಬ್ರಾಹ್ಮಣರು ಹನುಮಂತನಿಗೆ "ತನ್ನ ಬಲವು ತಿಳಿಯದಂತಿರಲಿ" ಎಂದು ಹದವಾದ ಶಾಪವನ್ನು ಹಾಕಿದರು. ಯಾರಾದರೂ ನೆನಪು ಮಾಡಿದ ಹೊರತು ಅವನಿಗೆ ತನ್ನ ಬಲಗಳ ನೆನಪು ಬಾರದಿರಲೆಂಬುದು, ಅವರ ಶಾಪವಾಕ್ಯದ ಅಭಿಪ್ರಾಯ. ಆ ಕೂಡಲೇ ಹನುಮಂತನ ಪುಂಡಾಟ, ಕೋತಿ ಚೇಷ್ಟೆಗಳೆಲ್ಲ ನಿಂತುವು.

ಅವನು ಪರಮ ಸಾತ್ವಿಕನಾಗಿ ಬದಲಾವಣೆ ಹೊಂದುತಿರಲು, ಕೆಲವು ವರ್ಷಗಳು ಕಳೆದ ಮೇಲೆ

ಅಂಜನ ಹನುಮಂತನೊದಿಗೆ, "ಅಪ್ಪಾ, ಕಿಷ್ಕಿಂ
ಎಂಬಲ್ಲಿ ವಾಲಿ ಸುಗ್ರೀವರೆಂಬ ಅಣ್ಣತಮ್ಮಂದಿರಿದ್ದಾ
ನನ್ನ ತಾಯಿಯಾದ ಅಹಲ್ಯೆಯೇ ಅವರಿಗೂ ತಾಯಿ
ಸೂರ್ಯನೂ ಇಂದ್ರನೂ ರಹಸ್ಯವಾಗಿ ಅಹ
ಯನ್ನು ಸಂಧಿಸಿ ಪುತ್ರರನ್ನು ಪ್ರಸಾದಿಸಿದ್ದಾ
ಈ ಸಂಗತಿ ನಮ್ಮ ತಂದೆ ಗೌತಮನಿ
ಗೊತ್ತಾಗಿ ಆ ಪುತ್ರರು ವಾನರರಾಗಿರುವಂತೆ ಶಾ
ಕೊಟ್ಟನು. ಆದುದರಿಂದ ವಾಲಿ ಸುಗ್ರೀವರು ನಿನ
ಸೋದರ ಮಾವಂದಿರಾಗಬೇಕು. ನೀನು ಈ
ದೊಡ್ಡವನಾಗಿ ತಕ್ಕ ಯೋಗ್ಯತೆ ಪಡೆದಿರು
ಕಿಷ್ಕಿಂಧೆಗೆ ಹೋಗಿ ಸುಗ್ರೀವನನ್ನು ಆಶ್ರಯಿಸು
ವಾಲಿಸುಗ್ರೀವರು ಈಗ ಒಳ್ಳೆಯದರಲ್ಲಿದ್ದರು
ಮುಂದೆ ಹೇಗೋ ಹೇಳಲಾಗದು. ಅವರಿಬ್ಬರೊಳ
ವೈರಬರಬಹುದೆಂದು ನನಗೆ ತೋರುತ್ತದೆ. ಹಾ
ನಾದರೂ ಜಗಳ ಬಂದರೆ ನೀನು ವಾಲಿಯನ್ನ
ಕೊಂದುಗಿಂದು ಬಿಡಬೇಡ. ಸುಗ್ರೀವನೊಂದಿ
ಇರು" ಎಂದಳು.

ಹನುಮಂತನು ತಾಯಿಗೆ ನಮಸ್ಕಾರ ಮಾ
ಅಪ್ಪಣೆ ಪಡೆದುಕೊಂಡು ಕಿಷ್ಕಿಂಧೆಗೆ ಹೋದನ
ಅಲ್ಲಿ ಅವನು ವಾಲಿಸುಗ್ರೀವರನ್ನು ನೋಡಿ ನಮ
ಸ್ಕಾರ ಮಾಡಿ ತನ್ನ ಸಮಾಚಾರವನ್ನು ಹೇಳಿದನ
ಅವರಿಬ್ಬರೂ ಅವನ ಮೇಲೆ ಆದರಣೆ ತೋರಿದರ
ವಿಶೇಷವಾಗಿ ಸುಗ್ರೀವನು ಅವನ ಮೇಲೆ ತುಂ
ವಿಶ್ವಾಸ ತೋರಿದುದರಿಂದ, ತಾಯಿ ಹೇಳಿದಂ
ಅವನಿಗೆ ಮಂತ್ರಿಯಾಗಿದ್ದನು. ಹಾಗಿರುವಾಗ ಹನ
ಮಂತನಿಗೆ ವೇದಗಳನ್ನೂ ಶಾಸ್ತ್ರಗಳನ್ನೂ ಕಲಿಯ
ಬೇಕೆಂಬ ಕೋರಿಕೆಯುಂಟಾಯಿತು.

ಒಂದುದಿನ ಬೆಳಗ್ಗೆ ಹನುಮಂತನು ಶುಚಿರ್ಭೂ
ನಾಗಿ ಕಾಲಕೃತ್ಯಗಳನ್ನು ತೀರಿಸಿಕೊಂಡು, ಸೂರ್ಯನ
ಉದಯಿಸಿ ಮೇಲೆ ಬರುವ ಸಮಯಕ್ಕೆ ಗಗ
ಮಾರ್ಗದಲ್ಲಿ ಹಾರಿ ಸೂರ್ಯನಬಳಿಗೆ ಹೋಗಿ ನಮ

ಸ್ಕಾರ ಮಾಡಿದನು. ಸೂರ್ಯನು ಸಂತೋಷದಿಂದ "ಸಂಕಲ್ಪ ಸಿದ್ಧಿರಸ್ತು. ಏನಪ್ಪಾ ಹನುಮಾನ್ ? ಏನಾಗಬೇಕು ? " ಎಂದು ಕೇಳಿದನು.


"ಅಯ್ಯಾ, ನಿಮ್ಮ ಮುಖದಿಂದ ವೇದಶಾಸ್ತ್ರಗಳನ್ನು ಕಲಿಯಬೇಕೆಂದು ಬಂದೆ. ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಅವುಗಳನ್ನು ಕಲಿಸಿಕೊಡಬೇಕು" ಎಂದು ಕೇಳಿಕೊಂಡ ಹನುಮಂತ.

"ಅದೇನೋ ಸರಿಯೇ ; ನಿನ್ನಂಥವನು ಶಿಷ್ಯನೆಂದರೆ ನನಗೂ ಹೆಮ್ಮೆಯೇ, ಸಂತೋಷವೇ. ಆದರೆ ನಾನು ಮೇರು ಪರ್ವತದ ಸುತ್ತಲೂ ಅತಿವೇಗದಿಂದ ತಿರುಗುತ್ತಲೇ ಇರುತ್ತೇನೆ. ಕ್ಷಣ ವಿರಾಮಪಡುವಂತಿಲ್ಲ. ನನ್ನಿಂದ ವೇದಶಾಸ್ತ್ರಗಳನ್ನು ಕಲಿಯುವುದೆಂದರೆ ನಿನಗೆ ಬಹಳ ಕಷ್ಟವಾಗುವುದಲ್ಲ ? ಹೇಗೆ ಕಲಿಯುವೆಯಪ್ಪಾ ? " ಎಂದು ಕೇಳಿದ ಸೂರ್ಯ.

ಅದಕ್ಕೆ ಹನುಮಂತನು, "ಮಹಾತ್ಮಾ, ನಾನು ಉದಯ ಪರ್ವತದ ಮೇಲೆ ಒಂದು ಕಾಲನ್ನೂ, ಅಸ್ತಪರ್ವತದ ಮೇಲೆ ಒಂದು ಕಾಲನ್ನೂ ಇಟ್ಟು ನೀವು ಹೇಳುತ್ತಾ ಇದ್ದರೆ ನಾನು ಕಲಿಯುತ್ತೇನೆ. ಅಥವಾ ನಿಮ್ಮ ಮುಂದೆ ನಡೆಯುತ್ತಾ ನೀವು ಹೇಳಿಕೊಡುವುದನ್ನು ಗ್ರಹಿಸುತ್ತೇನೆ. ನಿಮ್ಮ ಚಿತ್ತ ಹೇಗೋ ಹೇಳಬೇಕು " ಎಂದನು.

ಈ ಮಾತು ಕೇಳಿ ಸೂರ್ಯನು ಸಂತೋಷಪಟ್ಟು, "ಹಾಗಾದರೆ ಅಪ್ಪಾ, ನಿನ್ನಂಥವನು ಸೃಷ್ಟಿಯಲ್ಲಿ ಬೇರೆ ಯಾರೂ ಇಲ್ಲ. ನೀನು ಉದಯಾದ್ರಿ ಅಸ್ತಾದ್ರಿಗಳ ಮೇಲೆ ಪಾದಗಳನ್ನಿಟ್ಟು ನಿಂತುಕೋ. ಅದೇ ಒಳ್ಳೆಯದು " ಎಂದನು.


ಕೂಡಲೇ ಹನುಮಂತನು ಸೂರ್ಯನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ತನ್ನ ಶರೀರವನ್ನು ನಕ್ಷತ್ರಗಳಿಗೂ ಮೇಲೆ ಇರುವಷ್ಟು ದೊಡ್ಡದಾಗಿ ಬೆಳೆಯಿಸಿ, ಎಲ್ಲಾ ದಿಕ್ಕುಗಳನ್ನೂ ಆಕ್ರಮಿಸಿ ಬ್ರಹ್ಮಾಂಡವು ತುಂಬಿ ಹೋಗುವಂತೆ ಮಾಡಿದನು. ಈ ಬೃಹದವ



ತಾರವನ್ನು ನೋಡಿ ಬ್ರಹ್ಮದೇವನೇ ಬೆರಗಾದನು. ಮುನಿಗಳೂ ದೇವತೆಗಳೂ ಹನುಮಂತನಿಗೆ ಬಾರಿ ಬಾರಿಗೂ ನಮಸ್ಕಾರ ಮಾಡುತ್ತಿದ್ದರು.

ಹೀಗೆ ನಿಂತ ತನ್ನ ಶಿಷ್ಯನನ್ನು ನೋಡಿ ಸೂರ್ಯನಿಗಾದ ಆನಂದ ಅಷ್ಟಿಷ್ಟಲ್ಲ. ಅವನು ಎಂದೂ ನೋಡದ ಅದ್ಭುತವನ್ನು ನೋಡಿದವನಂತೆ ಹನುಮಂತನೊಂದಿಗೆ, "ಪ್ರತ್ಯಕ್ಷ ರುದ್ರಾವತಾರವೇ ಸರಿ. ನನಗೆ ಕೀರ್ತಿಯನ್ನು ಕೊಡಲು ಹೀಗೆ ಬಂದೆಯೋ ಹೊರತು ನಾನು ನಿನಗೆ ಏನನ್ನು ಉಪದೇಶಿಸಬಲ್ಲೆನಯ್ಯಾ ಮಹಾಮಹಿಮಾ ?" ಎಂದನು.

ಹನುಮಂತನು ವಿನಯದಿಂದ, "ಮಹಾತ್ಮರೇ, ನೀವು ಹೀಗೆ ಹೇಳಬಹುದೆ ? ವೇದಗಳಿಗೆಲ್ಲ ಮೂಲರೂಪರಾದವರು ನೀವು. ಬ್ರಹ್ಮಾಂಡವನ್ನೇ ಬೆಳಗಿಸುವ ನಿಮ್ಮಿಂದ ಉಪದೇಶ ಪಡೆಯಲು ಈ ಬ್ರಹ್ಮಾಂಡದ ರೂಪ ಧರಿಸಬೇಕಾಯಿತೇ ಹೊರತು, ನಿಮ್ಮನ್ನು ಬೆರಗುಗೊಳಿಸಲಿಕ್ಕೋ ಮೀರಿಸಲಿಕ್ಕೋ



ನಾನು ಹೀಗ ಬೆಳೆದುದಲ್ಲ. ಗುರುವೇ ! ದಯವಿಟ್ಟು ನನ್ನನ್ನು ಶಿಷ್ಯನ ದೃಷ್ಟಿಯಲ್ಲಿ ನೋಡಿ, ವೇದತ್ರಯಗಳನ್ನು ಬೋಧಿಸಬೇಕು" ಎನ್ನುತ್ತಾ ತನ್ನ ಸಾದಾರಣ ರೂಪದಲ್ಲಿ ನಿಂತನು.

ಸೂರ್ಯನು ಗಳಿಗೆಗೆ ಒಂಬತ್ತು ಲಕ್ಷ ಎಪ್ಪತ್ತು ಸಾವಿರ ಯೋಜನಗಳ ವೇಗದಲ್ಲಿ ನಡೆಯುತ್ತಿದ್ದ. ಅಷ್ಟೇ ವೇಗದಿಂದ ಹನುಮಂತನೂ ಹಾರುತ್ತ ಸೂರ್ಯನ ಇದಿರಿನಲ್ಲಿಯೇ ಇದ್ದು ಕಲಿಯಬೇಕಾದುದನ್ನೆಲ್ಲಾ, ವೇದಗಳು ಮಾತ್ರವಲ್ಲದೆ ಸ್ಮೃತಿ ಪುರಾಣಗಳನ್ನು ಕೂಡಾ ಕಲಿತುಕೊಂಡನು. ಸಂಗೀತದಲ್ಲಿಯೂ ಪ್ರಾವೀಣ್ಯತೆ ಪಡೆದನು. ಸಮಸ್ತ ವಿದ್ಯೆಗಳೂ ಹನುಮಂತನಲ್ಲಿ ಸೇರಿದುವು.

ಈ ರೀತಿಯಾಗಿ ಓದು ಮುಗಿದ ಮೇಲೆ ಹನುಮಂತನು ಸೂರ್ಯನಿಗೆ ನಮಸ್ಕಾರ ಮಾಡಿ, ಅಪ್ಪಣೆ ಪಡೆದುಕೊಂಡು, ಕಿಷ್ಕಿಂಧೆಗೆ ಮರಳಿ ತನ್ನ ಸಂಗತಿಗಳನ್ನು ವಾಲಿ ಸುಗ್ರೀವರೊಂದಿಗೆ ಹೇಳಿದನು. ಅಂದಿನಿಂದ ಸುಗ್ರೀವನಿಗೆ ಹನುಮಂತನ ಮೇಲೆ ಹೆಚ್ಚು ಪ್ರೇಮವೂ ಮಮಕಾರವೂ ಉಂಟಾಯಿತು.

ವಾಲಿ ಸುಗ್ರೀವರು ಬಹಳ ಅನ್ಯೋನ್ಯರಾಗಿ ಒಬ್ಬರಿಗೊಬ್ಬರು ಸಹಾಯಕರಾಗಿದ್ದರು. ಅವರನ್ನು ಬೆಳೆಯಿಸಿ ದೊಡ್ಡವರನ್ನಾಗಿ ಮಾಡಿದ ತಂದೆ ಋ ವಿರಜನು ಸತ್ತು ಹೋದಮೇಲೆ ವಾನರ ರಾಜ್ಯಕ್ಕೆ ವಾಲಿ ರಾಜನಾಗಿ, ಸುಗ್ರೀವನು ಯುವರಾಜನಾ ಅಭಿಷಿಕ್ತರಾಗಿ ಗದ್ದುಗೆಯೇರಿದರು.

ವಾಲಿಯ ಬಲ ಪರಾಕ್ರಮಗಳಿಗೆ ಸಾಟಿಯಿರಲಿಲ್ಲ ಅವನೊಂದಿಗೆ ಯುದ್ಧ ಮಾಡಿದರೆ ಯಾರೂ ಗೆ ಲಾರರು. ಒಮ್ಮೆ ಲಂಕಾಧೀಶನಾದ ರಾವಣ ಎಲ್ಲಾ ರಾಜರನ್ನೂ ಗೆದ್ದು ದಿಗ್ವಿಜಯ ಮಾಡಿ ಮದದಲ್ಲಿ ವಾಲಿಯ ಬಳಿಗೆ ಬಂದು ಅವನನ್ ಯುದ್ಧಕ್ಕೆ ಕರೆದನು. ವಾಲಿ ರಾವಣಾಸುರನೊಂದಿ ಯುದ್ಧ ಮಾಡಿ ಅವನನ್ನು ಹೊಡೆದು ಬೀಳಿ ಸೋಲಿಸಿ ಮಣ್ಣು ಮುಕ್ಕಿಸಿದನು. ಆಮೇಲೆ ರಾ ಣನು ವಾಲಿಯೊಡನೆ ಸ್ನೇಹ ಮಾಡಿಕೊಂಡನು.

ಅನಂತರ ವಾಲಿಯನ್ನು ಯುದ್ಧಕ್ಕೆ ಕರೆದವ ದುಂದುಭಿ ಎಂಬ ರಾಕ್ಷಸ. ಅವನು ಕೊಬ್ಬಿನಿಂ ಮದೋನ್ಮತ್ತನಾಗಿ ಹಿಮವಂತನನ್ನು ಯುದ್ಧ ಕರೆದನು. ಹಿಮವಂತನು ದುಂದುಭಿಯೊಂದಿ "ನಿನ್ನೊಂದಿಗೆ ಯುದ್ಧ ಮಾಡುವ ಶಕ್ತಿ ನನಗಿಲ್ಲಪ್ಪಾ ನಿನ್ನೊಂದಿಗೆ ಸರಿಯಾಗಿ ನಿಂತು ಯುದ್ಧ ಮಾಡಬ ವನು ಕಿಷ್ಕಿಂಧೆಯ ರಾಜ ವಾಲಿಯೇ. ನೀನು ಅ ಮಧುವನಕ್ಕೆ ಹೋಗಿ ಅವನನ್ನು ಯುದ್ಧಕ್ಕೆ ಕ ತಪ್ಪದೆ ಯುದ್ಧ ಮಾಡುತ್ತಾನೆ" ಎಂದನು.

ಆ ಮಾತು ಕೇಳಿ ದುಂದುಭಿ ಮಧು ವ ಬಂದು, ಆ ವನವನ್ನು ಧ್ವಂಸ ಮಾಡುತ್ತ ಕ ಸ್ವರದಿಂದ ವಾಲಿಯನ್ನು ಯುದ್ಧಕ್ಕೆ ಕರೆದನು. ಮ ವನವು ಕಿಷ್ಕಿಂಧೆಯ ಹೊರ ಭಾಗದಲ್ಲಿದೆ. ವಾ ದುಂದುಭಿಯ ಕರೆಯನ್ನು ಕೇಳಿ, ಸಿಟ್ಟಿನಿಂದ ಬಂ




ದುಂದುಭಿಯೊಂದಿಗೆ ಕಲೆತು ಹೋರಾಡಿ ಅವನನ್ನು ಕೊಂದು ಅವನ ಶರೀರವನ್ನು ಬೀಸಿ ಒಗೆದನು. ದುಂದುಭಿಯ ಕಳೇಬರವು ದೂರದಲ್ಲಿದ್ದ ಋಷ್ಯಮೂಕ ಪರ್ವತದ ಮೇಲೆ ಬಿತ್ತು. ಅವನ ರಕ್ತವು ಆ ಪರ್ವತದಲ್ಲಿ ತಪಸ್ಸು ಮಾಡಿಕೊಂಡಿದ್ದ ಮತಂಗ ಮಹಾಮುನಿಯ ಮೇಲೆ ತೊಟ್ಟಿಕ್ಕಿತು. ಕೂಡಲೇ ಆ ಮುನಿ ಕೋಪದಿಂದ ವಾಲಿ ಋಷ್ಯಮೂಕ ಪರ್ವತದ ಮೇಲೆ ಬಂದರೆ ಅವನ ತಲೆ ಒಡೆದುಹೋಗುವಂತೆ ಶಾಪ ಕೊಟ್ಟನು.

ದುಂದುಭಿಯಿಂದಾಗಿ ದುಂದುಭಿಯ ಮಗನಾದ ಮಾಯಾವಿ ಎಂಬ ರಕ್ಕಸನೊಂದಿಗೆ ವಾಲಿಗೆ ವೈರ ಉಂಟಾಯಿತು. ದುಂದುಭಿಯನ್ನು ವಾಲಿ ಕೊಂದುದಕ್ಕೆ ಮಾತ್ರವಲ್ಲದೆ, ಒಬ್ಬಳು ಸ್ತ್ರೀಯ ವಿಷಯದಲ್ಲಿ ಕೂಡಾ ಮಾಯಾವಿಗೂ ವಾಲಿಗೂ ವೈರತ್ವವು ಏರ್ಪಟ್ಟಿತ್ತು. ಒಂದುದಿನ ಅರ್ಧ ರಾತ್ರಿಯ ಹೊತ್ತಿಗೆ ಮಾಯಾವಿ ಕಿಷ್ಕಿಂಧೆಯ ನಗರ ದ್ವಾರಕ್ಕೆ ಬಂದು ಕರ್ಕಶ ಸ್ವರದಿಂದ ಬೈದು ಕೂಗಿ ವಾಲಿಯನ್ನು ಯುದ್ಧಕ್ಕೆ ಕರೆದನು. ನಿದ್ದೆಯಲ್ಲಿದ್ದ ವಾಲಿ ಎದ್ದು ಆ ಶತ್ರುವಿನ ದರ್ಪವನ್ನು ಸಹಿಸಲಾಗದೆ, ಅವನೊಂದಿಗೆ ಯುದ್ಧಕ್ಕೆ ಹೊರಟುಬಿಟ್ಟನು. ಸುಗ್ರೀವನೂ ವಾಲಿಯ ಹೆಂಡತಿಯಾದ ತಾರೆಯೂ ಬೇಡವೆಂದು ನಿವಾರಿಸಿದರೂ ವಾಲಿ ಕೇಳಲಿಲ್ಲ. ಆದುದರಿಂದ ವಾಲಿಯ ಹಿಂದೆ ಸುಗ್ರೀವನೂ ಹೊರಟನು. ಅಣ್ಣತಮ್ಮಂದಿರಿಬ್ಬರೂ ಬರುವುದನ್ನು ನೋಡಿ ಮಾಯಾವಿ ಹೆದರಿ ಓಡಿಹೋಗಲು ತೊಡಗಿದ. ವಾಲಿ ಸುಗ್ರೀವರು ಅವನ ಬೆಂಬತ್ತಿಕೊಂಡು ಹೋದರು. ಮಾಯಾವಿ ಅವರನ್ನು ಬಹಳದೂರದವರೆಗೆ ಕರೆದೊಯ್ದು, ಮುಳ್ಳು ಗಿಡಗಳಿಂದ ಮುಚ್ಚಲ್ಪಟ್ಟ ಒಂದು ಗುಡ್ಡದ ಗುಹೆಯೊಳಗೆ ಪ್ರವೇಶಿಸಿದನು.

ವಾಲಿ ಸುಗ್ರೀವನನ್ನು ನೋಡಿ "ನಾನು ಮಾಯಾವಿಯನ್ನು ಹತಮಾಡಿ ಬರುವವರೆಗೆ ನೀನು ಇಲ್ಲೇ ಇರು" ಎಂದು ಹೇಳಿ ವಾಲಿ ಕೂಡಾ ಗುಹೆಯೊಳಗೆ ಹೊಕ್ಕನು. ಸುಗ್ರೀವನು ಹೊರಗೇ ಕಾದಿದ್ದನು.

ಎಷ್ಟು ಹೊತ್ತಾದರೂ ವಾಲಿ ಹಿಂದಿರುಗಿ ಬಾರದಿರಲು ಅವನು ಸತ್ತುಹೋದನೇನೋ ಎಂದು ಸುಗ್ರೀವನಿಗೆ ಭಯವಾಯಿತು. ಅಷ್ಟರಲ್ಲಿ ಗುಹೆಯೊಳಗಿನಿಂದ ನೊರೆನೊರೆಯಾದ ರಕ್ತವು ಹೊರಗೆ ಬರಲಾರಂಭಿಸಿತು. ಒಳಗಡೆಯಿಂದ ಸಾಯುವವನ ಆರ್ತನಾದವೂ ಹೊರಟಿತು. ಅದು ತನ್ನ ಅಣ್ಣನ ಬೊಬ್ಬೆಯಂತೆಯೇ ಇದ್ದಿತು.

ಸುಗ್ರೀವನು ತನ್ನ ಅಣ್ಣನನ್ನು ನೆನೆದು ದುಃಖಿಸುತ್ತ ಆ ಗುಹೆಗೆ ದೊಡ್ಡದೊಂದು ಬಂಡೆಗಲ್ಲನ್ನು ಅಡ್ಡವಿಟ್ಟು ಹಿಂದಿರುಗಿ, ಅಣ್ಣನಿಗೆ ಜಲತರ್ಪಣಗಳನ್ನು ಬಿಟ್ಟು ಕಿಷ್ಕಿಂಧೆಯನ್ನು ಪ್ರವೇಶಿಸಿದನು. ವಾನರರು ಅವನನ್ನು ರಾಜನನ್ನಾಗಿ ಅಭಿಷೇಕ ಮಾಡಿದರು.





ವೀರಹನುಮಾನ್

ಮಾಯಾವಿ ರಕ್ಕಸನ ಕೈಯಲ್ಲಿ ವಾಲಿ ಸತ್ತನೆಂದು ಸುಗ್ರೀವನೇ ಮೊದಲಾದವರು ನಂಬಿದರೂ, ವಾಲಿ ಸಾಯಲಿಲ್ಲ. ಅವನು ಮಾಯಾವಿಯನ್ನು ಕೊಂದು ವಿಜಯ ಗರ್ವದಿಂದ ಹಿಂದಿರುಗಿದನು. ಆಕಸ್ಮಿಕವಾಗಿ ಅಣ್ಣನನ್ನು ನೋಡಿದ ಸುಗ್ರೀವನು ಓಡಿಬಂದು ಇದಿರುಗೊಂಡು ಗೌರವದಿಂದಲೂ ವಿನಯದಿಂದಲೂ ವಾಲಿಗೆ ನಮಸ್ಕಾರ ಮಾಡಿದನು. ಆದರೆ ಬಹಳ ಕೋಪದಿಂದಿದ್ದ ವಾಲಿ ಸುಗ್ರೀವನಿಗೆ ಆಶೀರ್ವಾದ ಮಾಡುವ ಬದಲಿಗೆ, ಅವನನ್ನು ನಿಂದಿಸುತ್ತ ವಾಗ್ಬಾಣಗಳಿಂದ ನೋಯಿಸತೊಡಗಲು, ಸುಗ್ರೀವನು ತನ್ನ ತಲೆಯ ಮೇಲಿದ್ದ ಕಿರೀಟವನ್ನು ತೆಗೆದು ವಾಲಿಯ ಪಾದಗಳ ಮೇಲಿಟ್ಟು ಸಾಷ್ಟಾಂಗ ಬಿದ್ದನು.

ವಾಲಿಯ ಕೋಪವನ್ನು ತಣಿಸಬೇಕೆಂಬ ಉದ್ದೇಶದಿಂದ ಸುಗ್ರೀವನು, "ಅಣ್ಣಯ್ಯ, ನೀನು ಶತ್ರುವನ್ನು ಕೊಂದು ಹಿಂದಿರುಗಿ ಬಂದುದು ನನ್ನ ಮಹಾಭಾಗ್ಯವೇ ಸರಿ. ಇದಕ್ಕಿಂತ ಹೆಚ್ಚಿನ ಸಂತೋಷವು ನನಗೆ ಬೇರೇನಿದ್ದೀತು? ನಾನು ಆ ಬಿಲದ ಹೊರಗೆ ಬಹಳ ಕಾಲದವರೆಗೆ ನಿನ್ನ ದಾರಿಯನ್ನು ಕಾದು ನಿಂತೆ. ಆ ಗುಹೆಯೊಳಗಿನಿಂದ ರಕ್ತವು ಹರಿದು ಹೊರಗೆ ಬಂದಾಗ ನನಗಾದ ದುಃಖವನ್ನು ಏನೆಂದು ಹೇಳಲಿ? ಇನ್ನು ರಾಕ್ಷಸರ ಬಾಧೆ ಬರಬಾರದೆಂಬ ಉದ್ದೇಶದಿಂದ ಗುಹೆಯ ದ್ವಾರಕ್ಕೆ ಬಂಡೆ ಕಲ್ಲನ್ನು ಮುಚ್ಚಿ ಕಿಷ್ಕಿಂಧೆಗೆ ಹಿಂದಿರುಗಿ ಬಂದೆ. ರಾಜ್ಯಾಭಿಷೇಕವನ್ನು ನಾನಾಗಿ ಅಪೇಕ್ಷಿಸಲಿಲ್ಲ ಅಣ್ಣಾ. ಪೌರರೂ ಮಂತ್ರಿಗಳೂ ರಾಜನೊಬ್ಬ ಇರಲೇಬೇಕೆಂದು ಹಟ ಹಿಡಿದು ನನಗೆ, ರಾಜ್ಯಾಭಿಷೇಕ ಮಾಡಿಬಿಟ್ಟರು. ಇನ್ನೀಗ ನೀನೇ ರಾಜ. ನಾನು ಎಂದಿನಂತೆ ಯುವರಾಜನೇ. ಅಪಾರ್ಥ ಮಾಡಬೇಡ" ಎಂದನು.

ಆದರೆ ಸುಗ್ರೀವನ ಯಾವ ಮಾತೂ ವಾಲಿಯ ಕಿವಿಗೇರಲಿಲ್ಲ. ಅವನು ಎಲ್ಲರನ್ನೂ ಕರೆದು, ಅವರೆಲ್ಲರ ಇದಿರಿನಲ್ಲಿ ವಾಲಿಯನ್ನು ನಾನಾ ವಿಧವಾಗಿ ಜರೆಯತೊಡಗಿದನು:

"ಇವನೂ ನಾನೂ ಮಾಯಾವಿಯನ್ನು ಬೆಂಬತ್ತಿ ಕೊಂಡು ಹೋದೆವು. ಮಾಯಾವಿ ಒಂದು ಭಯಂಕರ

೩. ಸ್ನೇಹ ಸಾಧಕ



ವಾದ ಗುಹೆಯೊಳಗೆ ನುಗ್ಗಿದ. ಅವನನ್ನು ಕೊಂದ ಹೊರತು ಕಿಷ್ಕಿಂಧೆಗೆ ಹಿಂದಿರುಗುವುದಿಲ್ಲವೆಂದು ನಾನು ಶಪಥ ಮಾಡಿ, ಈ ಸುಗ್ರೀವನನ್ನು ಗುಹೆಯ ದ್ವಾರದ ಹತ್ತಿರವೇ ಕುಳಿತಿರುವಂತೆ ಹೇಳಿ ಒಳಗೆ ಹೋದೆ. ಆ ಬಿಲದೊಳಗೆ ಮಾಯಾವಿ ಸುಲಭದಲ್ಲಿ ನನಗೆ ಸಿಗಲಿಲ್ಲ. ಬಹಳ ಕಷ್ಟಪಟ್ಟು ಹುಡುಕಿ ಅವನನ್ನು ಹಿಡಿದು ಹೊಡೆದು ಕೊಂದು ಹಿಂದಿರುಗಿ ಬರುವಾಗ, ಗುಹೆಯ ದ್ವಾರವೇ ನನಗೆ ಕಾಣಿಸಲಿಲ್ಲ. ಸುಗ್ರೀವಾ ಎಂದು ಎಷ್ಟು ಕೂಗಿದರೂ ಮರುನುಡಿ ಬರಲಿಲ್ಲ. ಈ ದುರಾತ್ಮನು ರಾಜ್ಯದ ಆಸೆಯಿಂದ ಆ ಗುಹೆಯ ದ್ವಾರವನ್ನು ಬಂಡೆಗಲ್ಲಿನಿಂದ ಮುಚ್ಚಿ ನಾನು ಹೊರಗೆ ಬಾರದಂತೆ ಹಂಚಿಕೆ ಮಾಡಿದ್ದಾನೆ. ನಾನು ಆ ಬಂಡೆಗಲ್ಲನ್ನು ಒಡೆದು ಹೇಗೋ ಹೊರಗೆ ಬಂದೆ.'' ಎಂದನು.

ಹೀಗೆಂದು ವಾಲಿ ಸುಗ್ರೀವನನ್ನು ಘೋರ ಅಪರಾಧಿಯನ್ನಾಗಿ ಮಾಡಿ, ಉಟ್ಟ ಬಟ್ಟೆಯೊಂದಿಗೆ ಓಡಿಸಿಬಿಟ್ಟನು. ಸುಗ್ರೀವನು ಓಡಿಹೋಗದಿರುತ್ತಿದ್ದರೆ ವಾಲಿ ಅವನನ್ನು ಕೊಂದೇಬಿಡುತ್ತಿದ್ದ. ಆಮೇಲೆ ಸುಗ್ರೀವನ ಹೆಂಡತಿಯನ್ನು ಕೂಡಾ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡನಾ ವಾಲಿ. ಸುಗ್ರೀವನು ಹೆಂಡತಿಯನ್ನೂ, ಸರ್ವಸ್ವವನ್ನೂ ಕಳೆದುಕೊಂಡುದು ಮಾತ್ರವಲ್ಲದೆ, ತುಂಬ ಕಷ್ಟಗಳ ಪಾಲಿಗೆ ಬಿದ್ದು, ವಾಲಿಯ ಭಯದಿಂದ ಬೇರೆಲ್ಲಿ ಹೋದರೂ ಉಳಿಗಾಲವಿಲ್ಲವೆಂದು ಭಾವಿಸಿ, ಋಷ್ಯಮೂಕ ಪರ್ವತದ ಮೇಲೆ ಬದುಕಿಕೊಂಡಿದ್ದನು. ಈ ವನವಾಸದಲ್ಲಿ ಸುಗ್ರೀವನೊಂದಿಗೆ ಹನುಮಂತ, ಜಾಂಬವಂತ, ಮೈಂದ, ದ್ವಿವಿಧ ಎಂಬ ನಾಲ್ಕು ಮಂದಿ ವಾನರರು ಅವನ ಮಂತ್ರಿಗಳಾಗಿದ್ದರು.


ಹೀಗೆ ಸುಗ್ರೀವನೊಂದಿಗಿದ್ದ ಕಾಲದಲ್ಲಿಯೇ ಹನುಮಂತನಿಗೆ ರಾಮಲಕ್ಷ್ಮಣರ ಪರಿಚಯ ಭಾಗ್ಯವುಂಟಾಯಿತು. ಅದು ನಡೆದುದು ಹೀಗೆ:

ಋಷ್ಯಮೂಕದ ಮೇಲಿದ್ದ ಸುಗ್ರೀವನು ಒಂದು ದಿನ, ಪರ್ವತದ ಕೆಳಗೆ ತುಸುದೂರದಲ್ಲಿ ಕಾಣುವ ಪಂಪಾಸರೋವರದ ಬಳಿಯಲ್ಲಿ ಇಬ್ಬರು ಮಾನವೋತ್ತಮರು ಏನನ್ನೋ ಹುಡುಕುವಂತೆ ಸಂಚರಿಸುವುದನ್ನು ನೋಡಿದನು. ಅವರು ಸಾಮಾನ್ಯ ಮಾನವರಂತೆ ಕಾಣದುದರಿಂದಲೇ ಸುಗ್ರೀವನ ಲಕ್ಷ್ಯವನ್ನು ಬಹಳವಾಗಿ ಸೆಳೆದರು. ಅವರಿಬ್ಬರೂ ಧನುರ್ಬಾಣಗಳನ್ನು ಧರಿಸಿ, ನೋಡಲು ಮಹಾವೀರರಾಗಿಯೂ, ಅದ್ಭುತ ಪ್ರಭಾವದವರಾಗಿಯೂ ಕಾಣುತ್ತಿದ್ದರು. ಅವರನ್ನು ನೋಡಿದ ಕೂಡಲೇ ಸುಗ್ರೀವನಿಗೆ ಭಯವಾಯಿತು. ಅವರು ವಾಲಿಯಿಂದ ಕಳುಹಿಸಲ್ಪಟ್ಟ ಮನುಷ್ಯರೇ ಆಗಿರಬೇಕೆಂದೂ, ವಾಲಿ ಋಷ್ಯಮೂಕ ಪರ್ವತದ ಮೇಲೆ ಬರುವಂತಿಲ್ಲವಾದುದರಿಂದ, ತನ್ನನ್ನು ಕೊಲ್ಲಲು ಈ ಹೊಸ ಮಾನವ ವೀರಾಗ್ರಣಿಗಳನ್ನು ಕಳುಹಿಸಿರಬೇಕೆಂದೂ ಸುಗ್ರೀವನಿಗೆ ತೋರಿತು. ಭೀತಿಗೊಂಡ ಅವನು


ಕಾಲು ಸುಟ್ಟ ಬೆಕ್ಕಿನ ಹಾಗೆ ತಿರುಗುತ್ತ, ಎತ್ತಾದರೂ ಓಡಿಹೋಗಬೇಕೆಂದು, ಎಲ್ಲಿಗೆ ಓಡುವುದೆಂದು ತೋರದೆ ತುಂಬ ಇರುಕಾಟದಲ್ಲಿ ಬಿದ್ದ.

ಆಗ ಹನುಮಂತನು ಸುಗ್ರೀವನೊಂದಿಗೆ, "ಹೆದರ ಬೇಡ. ವಾಲಿಯಂತೂ ಇಲ್ಲಿಗೆ ಬರಲಾರ. ಅವನು ಸಮೀಪದಲ್ಲಿರುವ ಸುಳಿವು ಕೂಡಾ ಇಲ್ಲ. ಹಾಗಿರಲು ಈ ಅಪರಿಚಿತರನ್ನು ನೋಡಿ ಹೆದರುವ ಕಾರಣ ವೇನೂ ನನಗೆ ಕಾಣುವುದಿಲ್ಲ" ಎಂದನು.

"ವಾಲಿ ಇಲ್ಲಿಗೆ ಬಂದಿರಬೇಕೆಂದು ನಾನು ಹೇಳ ಲಿಲ್ಲ. ಆ ಇಬ್ಬರು ಮನುಷ್ಯರನ್ನು ಸರಿಯಾಗಿ ನೋಡು. ಅವರ ಹತ್ತಿರವಿರುವ ಧನುರ್ಬಾಣ ಗಳನ್ನೂ ಖಡ್ಗಗಳನ್ನೂ ನೋಡು. ಅವರ ತೋಳು ಗಳನ್ನು ನೋಡು. ಅವರನ್ನು ನೋಡಿದರೆ ಯಾರಿ ಗಾದರೂ ಭಯವಾಗುವಂತಿದೆ. ಅವರನ್ನು ವಾಲಿಯೇ ನನ್ನ ಮೇಲೆ ಕಳುಹಿಸಿರಬೇಕೆಂದು ನನ್ನ ಅನುಮಾನ. ರಾಜನಾಗಿರುವವನಿಗೆ ಎಂತೆಂತಹರೋ ಸಹಾಯಕ ರಾಗಿರುವರು. ನಾವು ಗೂಢಚಾರರನ್ನು ಕುರಿತು ಯೋಚನೆ ಮಾಡದೆ ಇರಲು ಸಾಧ್ಯವಿಲ್ಲ. ಅಲಕ್ಷ್ಯ ವಾಗಿದ್ದರೆ ಸತ್ತುಹೋದೇವು. ರಾಜರು ಶತ್ರುಗಳನ್ನು ನಾಶ ಮಾಡಲು ಅನೇಕ ಬಗೆಯ ಉಪಾಯಗಳನ್ನು ಆಲೋಚಿಸುತ್ತಾರೆ. ಅವರ ಮೇಲೆ ವಾಲಿ ಬಹಳ ಬುದ್ಧಿವಂತ. ಹನುಮಂತಾ, ನೀನು ಉಪಾಯವಾಗಿ ಅವರ ಹತ್ತಿರ ಹೋಗಿ ಅವರು ಆಡಿಕೊಳ್ಳುವ ಮಾತುಗಳನ್ನು ಕೇಳಿ, ಅವರು ಒಳ್ಳೆಯವರೋ ಕೆಡುಕು ಮಾಡುವವರೋ ತಿಳಿದುಕೊಂಡು ಬರು ಬೇಯಾ? ಸಂದರ್ಭ ಬರಿಸಿ ಅವರನ್ನು ಮಾತಾಡಿಸಿ, ಅವರು ಅರಣ್ಯದಲ್ಲಿ ಆಯುಧಗಳನ್ನು ಧರಿಸಿಕೊಂಡು ಏಕೆ ತಿರುಗುತ್ತಿದ್ದಾರೆಂಬುದನ್ನು ತಿಳಿ. ಅವರಿಗೆ ನನ್ನ ಮೇಲೆ ಏನಾದರೂ ದ್ವೇಷಭಾವವಿದ್ದರೆ, ಅದನ್ನು ಹೋಗಲಾಡಿಸಿ, ನನ್ನ ಮೇಲೆ ಅವರಿಗೆ ಒಳ್ಳೆಯ ಭಾವ ಬರುವಂತೆ ಮಾಡು" ಎಂದನು ಸುಗ್ರೀವ.



ಹಾಗೆಯೇ ಮಾಡುವೆನೆಂದು ಹೇಳಿ ಹನುಮಂತನು ರಾಮಲಕ್ಷ್ಮಣರು ಸಂಚರಿಸುತ್ತಿರುವ ಸ್ಥಳಕ್ಕೆ ಹೊರ ಟನು. ಆಗ ಅವನು ತನ್ನ ವಾನರ ರೂಪವನ್ನು ಬಿಟ್ಟು, ಒಬ್ಬ ಬ್ರಹ್ಮಚಾರಿಯ ರೂಪವನ್ನು ಧರಿಸಿ ರಾಮಲಕ್ಷ್ಮಣರ ಸಮೀಪ ಹೋಗಿ, ಅವರಿಗೆ ಬಹಳ ವಿನಯದಿಂದ ಕೈಮುಗಿದು, "ಅಯ್ಯಗಳಿರಾ, ನಿಮ್ಮನ್ನು ನೋಡಿದರೆ ರಾಜರ್ಷಿಗಳ ಹಾಗೂ ಕಾಣು ವಿರಿ; ದೇವತೆಗಳಿಗೆ ಸಮಾನರಾಗಿಯೂ ಇರುವಿರಿ; ತಪೋವ್ರತಗಳಿಂದ ಪುನೀತರಾಗಿಯೂ ತೋರುವಿರಿ. ನೀವು ಈ ಪಂಪಾ ಸರೋವರ ತೀರಕ್ಕೆ ಹೇಗೆ ಬಂದಿರಿ? ನಿಮ್ಮನ್ನು ನೋಡಿ ಇಲ್ಲಿಯ ವನ್ಯಮೃಗ ಗಳು ಹೆದರಿ ಓಡುತ್ತಿವೆ. ನಿಮ್ಮ ವಿಶಾಲವಾದ ಭುಜಗಳನ್ನೂ, ಆನೆಯ ಸೊಂಡಲಿನಂತಹ ಕೈಗಳನ್ನೂ ನೋಡಿದರೆ, ಸರ್ವಾಭರಣಗಳನ್ನೂ ಧರಿಸಿ ರಾಜ್ಯ ಗಳನ್ನು ಆಳುವವರ ಹಾಗೂ ಕಾಣುತ್ತದೆ. ದಯ ವಿಟ್ಟು ತಿಳಿಸುವಿರಾ?" ಎಂದನು.



ರಾಮಲಕ್ಷ್ಮಣರು ಏನೂ ಮಾತಾಡದಿರುವುದನ್ನು ನೋಡಿ, ಹನುಮಂತನು ಮತ್ತೆ ಹೀಗೆಂದನು:

"ಈ ಪ್ರಾಂತದಲ್ಲಿರುವ ಸುಗ್ರೀವನೆಂಬ ವಾನರ ರಾಜನು ತುಂಬ ಧರ್ಮಾತ್ಮ, ದೊಡ್ಡ ಬಲಶಾಲಿ. ಆದರೆ ಅವನನ್ನು ಅವನ ಅಣ್ಣ ಮನೆಯಿಂದ ಓಡಿಸಿಬಿಟ್ಟುದರಿಂದ ಅವನೀಗ ಬಹಳ ಕಷ್ಟದಲ್ಲಿ ಸಿಕ್ಕಿಬಿದ್ದಿದ್ದಾನೆ. ನಾನು ಆ ಸುಗ್ರೀವನಿಗೆ ಮಂತ್ರಿಯಾಗಿರುವ ಹನುಮಂತನೆಂಬವನು. ಸುಗ್ರೀವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ. ಅವನಿರುವ ಆ ಋಷ್ಯಮೂಕ ಪರ್ವತದಿಂದ ನಾನು ಬಂದೆ. ನಾನು ಕಾಮರೂಪದ ಶಕ್ತಿಯುಳ್ಳ ವಾನರನಾದುದರಿಂದ, ಈ ಬ್ರಹ್ಮಚಾರಿಯ ವೇಷ ಧರಿಸಿ ಬಂದಿದ್ದೇನೆ. ಯಾವ ಲೋಕಕ್ಕಾದರೂ ಹೋಗಿಬರುವ ಶಕ್ತಿ ನನಗಿದೆ. ನಮ್ಮ ಸುಗ್ರೀವನು ನಿಮ್ಮ ಸ್ನೇಹವನ್ನು ಅಪೇಕ್ಷಿಸುತ್ತಾನೆ."

ಈ ಮಾತು ಕೇಳಿದ ಕೂಡಲೇ ಗಂಭೀರವಾಗಿದ್ದ ರಾಮನ ಮುಖವು ಸಂತೋಷದಿಂದ ಅರಳಿತು. ರಾವಣನು ಎತ್ತಿಕೊಂಡು ಹೋದ ತನ್ನ ಪತ್ನಿಯಾದ ಸೀತೆಯನ್ನು ತಿರುಗಿ ಸಂಪಾದಿಸಿಕೊಂಡು ಬರಲು, ಸುಗ್ರೀವನ ಸಹಾಯವನ್ನು ಹೊಂದಬೇಕೆಂದು ಕಬಂಧನೆಂಬವನು ರಾಮನಿಗೆ ಈ ಮೊದಲೇ ಹೇಳಿದ್ದ.

ಅಂತೆಯೇ ರಾಮನು ಲಕ್ಷ್ಮಣನೊಂದಿಗೆ, "ತಮ್ಮಾ, ಹುಡುಕಲು ಹೋದ ಬಳ್ಳಿ ಕಾಲಿಗೆ ಸಿಕ್ಕಿಕೊಂಡ ಹಾಗೆ, ನಾವು ಹುಡುಕಿಕೊಂಡು ಹೊರಟಿರುವ ಸುಗ್ರೀವನೇ ನಮಗಾಗಿ ತನ್ನ ಮಂತ್ರಿಯನ್ನು ಕಳುಹಿಸಿದ್ದಾನೆ. ಇದು ನಮಗೆ ಶುಭ ಸೂಚನೆಯೇ ಸರಿ. ಇವನು ಬಹಳ ಬುದ್ಧಿವಂತನಂತೆ ತೋರುತ್ತಾನೆ. ಮಾತಾಡುತ್ತಿರುವಷ್ಟು ಹೊತ್ತೂ ಇವನ ಮುಖವು ನಿರ್ಮಲವಾಗಿಯೂ ನಿಷ್ಕಪಟವಾಗಿಯೂ ಇದ್ದಿತು. ಇವನೊಂದಿಗೆ ನೀನು ಮಾತಾಡು" ಎಂದನು.

ಆಗ ಲಕ್ಷ್ಮಣನು ಹನುಮಂತನೊಂದಿಗೆ, "ಹೌದು, ಸುಗ್ರೀವನ ವಿಷಯ ನಾವೂ ತಿಳಿದಿದ್ದೇವೆ. ಅವನ ಸುಗುಣಗಳನ್ನೂ ಕೇಳಿದ್ದೇವೆ. ನಾವು ಆ ಸುಗ್ರೀವನನ್ನೇ ಹುಡುಕುತ್ತಾ ಹೀಗೆ ಬಂದೆವು. ನಾವು ಸುಗ್ರೀವನೊಂದಿಗೆ ಸ್ನೇಹ ಮಾಡಿಕೊಳ್ಳುತ್ತೇವೆ. ಆತನ ದರ್ಶನವನ್ನು ಮಾಡಿಸು" ಎಂದನು.

ರಾಮನಿಗೆ ಸುಗ್ರೀವನಿಂದ ಏನೋ ಕೆಲಸವಿದೆ. ಆದುದರಿಂದ ರಾಮನು ಸುಗ್ರೀವನಿಗೆ ಮತ್ತೆ ರಾಜ್ಯವು ಸಿಗುವ ಹಾಗೆ ಮಾಡಲು ಸಹಾಯಕನಾಗಬಹುದು, ಎಂದು ಹನುಮಂತನು ಊಹಿಸಿ ಸಂತೋಷಪಟ್ಟು, "ಮಹಾನುಭಾವರಾದ ನೀವಿಬ್ಬರೂ ಭಯಂಕರವಾದ ಈ ದಂಡಕಾರಣ್ಯಕ್ಕೆ ಏಕೆ ಬಂದಿರಿ? ರಾಜಪರಿವಾರಗಳೊಂದಿಗಿರಬೇಕಾದ ನೀವು ಇಂತಹ ಸ್ಥಳದಲ್ಲಿ ಹೀಗೆ ಬಂದಿರುವುದು ಆಶ್ಚರ್ಯವಾಗಿದೆ. ತಿಳಿಸಬಹುದಾದರೆ ತಿಳಿಸಬೇಕು" ಎಂದ ವಿನಯದಿಂದ

ರಾಮನು ಲಕ್ಷ್ಮಣನಿಗೆ ತಮ್ಮ ವೃತ್ತಾಂತವನ್ನು ಹೇಳುವಂತೆ ಹೇಳಿದನು. ಲಕ್ಷ್ಮಣನು ಹೀಗೆಂದ: "ಈತನು ಅಯೋಧ್ಯಾ ನಗರವನ್ನಾಳುವ ದಶರಥ

ಮಹಾರಾಜನ ಹಿರಿಯ ಮಗ ರಾಮ. ಈತನು ರಾಜನಾಗಿರಬೇಕಾದವನು. ತಂದೆಯ ಮಾತನ್ನು ಜವೆ ದಾಟದ ಗುಣದವನು. ಅಂತಹ ಮಹಾನುಭಾವನು ರಾಜ್ಯವನ್ನು ತ್ಯಾಗಮಾಡಿ ನನ್ನನ್ನು ಜತೆಗೂಡಿಕೊಂಡು ವನವಾಸ ವ್ರತವನ್ನು ಕೈಕೊಂಡು ಬಂದಿದ್ದಾನೆ. ನಮ್ಮ ಜತೆಯಲ್ಲಿ ಈತನ ಪತ್ನಿ ಸೀತಾದೇವಿ ಕೂಡಾ ವನಕ್ಕೆ ಬಂದಿದ್ದಳು. ನಾನು ಈತನ ತಮ್ಮ ಲಕ್ಷ್ಮಣ. ಈ ರಾಮನ ದೊಡ್ಡ ಗುಣಗಳಿಗೆ ನಾನು ಪರಮದಾಸ. ನಾವು ಪರ್ಣಶಾಲೆಯಲ್ಲಿಲ್ಲದ ವೇಳೆಯಲ್ಲಿ ಯಾವನೋ ರಾಕ್ಷಸನೊಬ್ಬ ಇವನ ಪತ್ನಿಯನ್ನು ಅಪಹರಿಸಿಕೊಂಡು ಹೋದನು. ಆ ರಾಕ್ಷಸನ ಜಾಡು ಸುಗ್ರೀವನ ಮೂಲಕವಾಗಿ ತಿಳಿಯಬರುವುದೆಂದು ಮತ್ತೊಬ್ಬ ರಾಕ್ಷಸನು ನಮಗೆ ಹೇಳಿದ್ದಾನೆ. ನೀನಾಗಿ ಕೇಳಿದುದರಿಂದ ನಮ್ಮ ಸಮಾಚಾರವನ್ನು ಇದ್ದುದಿದ್ದ ಹಾಗೆ ಹೇಳಿದ್ದೇವೆ. ಎಂತಹರಿಗಾದರೂ ಶರಣಾಗತಕ್ಕೆ ಆಶ್ರಯದವನಾದ ಈ ಮಹಾಪುರುಷನು, ಈಗ ಸುಗ್ರೀವನಿಗೆ ಶರಣು ಹೋಗುವ ತವಕದಲ್ಲಿದ್ದಾನೆ. ಸುಗ್ರೀವನು ಅನುಗ್ರಹಿಸಬೇಕು. ಆತನ ದರ್ಶನದಿಂದ ನಮಗೆ ಮೇಲಾಗುವುದೆಂಬ ನಂಬುಗೆಯಲ್ಲಿದ್ದೇವೆ"

ಈ ಮಾತಿಗೆ ತಲೆದೂಗಿ ಹನುಮಂತನು, "ನಿಜ ನೋಡಿದರೆ ನಮ್ಮ ರಾಜ ಸುಗ್ರೀವನೇ ನಿಮ್ಮನ್ನು ಹುಡುಕಿಕೊಂಡು ಬರಬೇಕಾದ ಪರಿಸ್ಥಿತಿಯಿದು. ತನ್ನ ರಾಜ್ಯವನ್ನೂ ಹೆಂಡತಿಯನ್ನೂ ಅಣ್ಣನಾದ ವಾಲಿ ಅಪಹರಿಸಿಕೊಂಡುದರಿಂದ ಆತನು ತುಂಬ ದುಃಖಕರವಾದ ಸ್ಥಿತಿಯಲ್ಲಿದ್ದಾನೆ. ಸೀತಾದೇವಿಯನ್ನು ಹುಡುಕಲು ಆತನು ನಿಮಗೆ ಸಹಾಯ ಮಾಡಬಲ್ಲನೆಂದು ನಾನು ಭರವಸೆಯಾಗಿ ಹೇಳಬಲ್ಲೆ. ನಿಮ್ಮ ದರ್ಶನದಿಂದ ಆತನ ಕಷ್ಟಗಳೂ ಪರಿಹಾರವಾಗಬಹುದು" ಎಂದನು.

ತರುವಾಯ ಹನುಮಂತನು ಶಿರಬಾಗಿ, "ಹೀಗೆ ದಯಮಾಡಬೇಕು" ಎನ್ನಲು, ರಾಮನೊಂದಿಗೆ



ಲಕ್ಷ್ಮಣನು, "ಹಾಗಾದರೆ ನಾವು ಸುಗ್ರೀವನ ಬಳಿಗೆ ಹೋಗೋಣ. ಅವನಿಂದ ನಿನ್ನ ಕಾರ್ಯವು ನೆರವೇರುವುದರಲ್ಲಿ ಸಂದೇಹವಿರದೆಂದು ನನಗೆ ಕಾಣುತ್ತದೆ" ಎಂದನು.

ಕೂಡಲೇ ಹನುಮಂತನು ತನ್ನ ಬ್ರಹ್ಮಚಾರೀ ರೂಪವನ್ನು ಬಿಟ್ಟು ವಾನರರೂಪವನ್ನು ಧರಿಸಿ, ರಾಮಲಕ್ಷ್ಮಣರನ್ನು ತನ್ನ ಭುಜಗಳ ಮೇಲೆ ಏರಿಸಿಕೊಂಡು, ಋಷ್ಯಮೂಕ ಪರ್ವತದ ಮೇಲೆ ಹೋದನು. ಅಲ್ಲಿ ನೋಡಿದಾಗ ಸುಗ್ರೀವನು ಋಷ್ಯಮೂಕ ಪರ್ವತದ ಮೇಲೆ ಕಾಣಲಿಲ್ಲ. ಭಯದಿಂದ ಅವನು ಸಮೀಪದಲ್ಲಿದ್ದ ಮಲಯ ಪರ್ವತದ ಮೇಲೆ ಅಡಗಿಕೊಂಡಿದ್ದನೆಂದು ತಿಳಿಯಿತು.

ಹನುಮಂತನು ಮಲಯ ಪರ್ವತದ ಮೇಲಿದ್ದ ಸುಗ್ರೀವನನ್ನು ನೋಡಿ, "ಆ ಬಂದವರಿಂದ ಭಯವೇ ಇಲ್ಲ. ಅವರು ರಾಮಲಕ್ಷ್ಮಣರೆಂಬವರು. ಇಕ್ಷ್ವಾಕು ವಂಶದಲ್ಲಿ ಹುಟ್ಟಿದವರು. ದಶರಥ ಮಹಾರಾಜನ



ಕುಮಾರರು. ರಾಮನು ನ್ಯಾಯ ಧರ್ಮಗಳನ್ನು ಪಾಲಿಸಿ ತಂದೆಯ ಮಾತಿನಂತೆ ಅರಣ್ಯವಾಸಕ್ಕೆ ಬಂದವನು. ಆತನ ಹೆಂಡತಿಯನ್ನು ಯಾವನೋ ರಾಕ್ಷಸನು ಎತ್ತಿಕೊಂಡು ಹೋದನಂತೆ. ಆದುದರಿಂದ ಆ ರಾಮನು ನಿನಗೆ ಶರಣಾಗಲು ಬಂದಿದ್ದಾನೆ. ಅಣ್ಣ ತಮ್ಮಂದಿರಾದ ರಾಮಲಕ್ಷ್ಮಣರು ನಿನ್ನ ಸ್ನೇಹವನ್ನು ಕೋರುತ್ತಿದ್ದಾರೆ. ಇವರನ್ನು ಕರೆದು ಆದರಿಸಿ ಮಾತ ನಾಡಿಸುವುದರಿಂದ ಮೇಲುಂಟು. ಏನೂ ಶಂಕಿಸ ಬೇಡ. ತ್ವರೆ ಮಾಡು" ಎಂದನು.

ಹನುಮಂತನ ಮಾತುಗಳು ಸುಗ್ರೀವನ ಮನಸ್ಸಿಗೆ ಅಮೃತ ಧಾರೆಯಂತಾಯಿತು. ಅವನು ಅತ್ಯಂತ ಸಂತೋಷದಿಂದ ಸುಂದರ ಮಾನವನ ರೂಪ ಧರಿಸಿ ರಾಮಲಕ್ಷ್ಮಣರ ಬಳಿಗೆ ಬಂದು, "ಬನ್ನಿ. ನಿಮ್ಮನ್ನು ಕುರಿತು ಹನುಮಂತನು ನನ್ನೊಂದಿಗೆ ಎಲ್ಲವನ್ನೂ ಹೇಳಿದ್ದಾನೆ. ಮಹಾರಾಜನಾದ ರಾಮಾ! ನೀನು ನನ್ನಂತಹ ವಾನರನ ಸ್ನೇಹ ಬಯಸುವಿಯೆಂದು ತಿಳಿದು, ಅದು ನನಗೆ ಬಹಳ ಗೌರವದಾಯಕವೆನಿಸಿದೆ; ಲಾಭದಾಯಕವೂ ಆಗಿದೆ. ನಿನಗೆ ನನ್ನ ಸ್ನೇಹವನ್ನು ಆಗತ್ಯವಾಗಿ ಕೊಡುತ್ತೇನೆ. ದಯವಿಟ್ಟು ನೀನು ಕೂಡಾ ನನ್ನ ಕೈಯಲ್ಲಿ ಕೈಯನ್ನಿಟ್ಟು ಸ್ನೇಹ ಧರ್ಮ ವನ್ನು ನಿರ್ವಹಿಸಬೇಕು" ಎಂದನು.

ರಾಮನು ಸುಗ್ರೀವನ ಕೈಯಲ್ಲಿ ತನ್ನ ಕೈಯನ್ನು ಹಾಕಿ, ಅವನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಈ ಪ್ರಸಿದ್ಧ ಸುಯೋಗವನ್ನು ಹೊಂದಿಸಿದ ಹನು ಮಂತನು ಅರಣಿಯನ್ನು ಮಥಿಸಿ ಅಗ್ನಿಯನ್ನು ಪ್ರಜ್ವಲಗೊಳಿಸಿ, ಪೂಜಿಸಿ ರಾಮ ಸುಗ್ರೀವರ ಮಧ್ಯ ದಲ್ಲಿ ಅಣಿಗೊಳಿಸಿದನು. ರಾಮಸುಗ್ರೀವರು ಅ ಅಗ್ನಿಗೆ ಪ್ರದಕ್ಷಿಣೆ ಮಾಡಿ ಅಗ್ನಿ ಸಾಕ್ಷಿಯಾಗಿ ಸಖ್ಯ ಪ್ರಮಾಣ ಮಾಡಿಕೊಂಡರು. ಅನಂತರ ರಾಮನು ಸುಗ್ರೀವನೊಂದಿಗೆ "ಸುಗ್ರೀವ, ನೀನು ನನಗೆ ಸ್ನೇಹಿತ ನಾದೆ. ಇನ್ನು ಮೇಲೆ ನಿನ್ನ ದುಃಖವು ನನ್ನ ದುಃಖ. ನಿನ್ನ ಸುಖವೇ ನನ್ನ ಸುಖ. ಇದು ನಿಜ" ಎಂದನು.

ಸುಗ್ರೀವನು ದಟ್ಟವಾಗಿ ಎಲೆಗಳು ತುಂಬಿದ ಒಂದು ಕರಿಮರವನ್ನು ಮುರಿದು ಅದರ ಮೇಲೆ ರಾಮನ ಜತೆಯಲ್ಲಿ ಕುಳಿತುಕೊಂಡನು. ಲಕ್ಷ್ಮಣನು ಕುಳಿತುಕೊಳ್ಳಲು ಹನುಮಂತನು ಒಂದು ಚಂದ ವೃಕ್ಷದ ಕೊಂಬೆಯನ್ನು ಮುರಿದು ಹಾಕಿದನು. ಲಕ್ಷ್ಮಣನು ಅದರ ಮೇಲೆ ಕುಳಿತನು.

ತರುವಾಯ ಸುಗ್ರೀವನು ತನಗೂ ವಾಲಿಗೂ ನಡುವೆ ಹೇಗೆ ವೈರ ಬಂತೆಂಬುದನ್ನು ವಿವರವಾ ಹೇಳಿದನು. ಎಲ್ಲಾ ಹೇಳಿ ಆದ ಮೇಲೆ ಅವನ ರಾಮನೊಂದಿಗೆ, "ವಾಲಿಯ ಭಯದಿಂದ ನಾನ ಕುಂದಿ ಹೋಗುತ್ತಿದ್ದೇನೆ. ನನ್ನ ಭಯವನ್ನು ನೀನ ತೊಲಗಿಸಬೇಕು" ಎಂದನು.

ರಾಮನು ವಾಲಿ ಸುಗ್ರೀವರ ವೃತ್ತಾಂತವನ್ನೆಲ್ಲ ಕೇಳಿ, ಕಿರುನಗು ನಗುತ್ತ "ಸಂದೇಹಪಡಬೇಡ ಸ್ನೇಹಕ್ಕೆ ಉಪಕಾರವೇ ಫಲ, ನಿನ್ನ ಮೇಲೆ ಅನ್ಯಾಯ




ವೆಸಗಿದ ವಾಲಿಯನ್ನು ನಾನು ಕೊಲ್ಲುವೆನು. ನನ್ನ ಬಾಯಿಯಿಂದ ಹೊರಬಿದ್ದ ಮಾತು ಸುಳ್ಳಾಗುವುದಿಲ್ಲ" ಎಂದನು. ಸುಗ್ರೀವನು ರಾಮನ ಮಾತು ಕೇಳಿ ಬಹಳ ಸಂತೋಷಪಡುತ್ತ, "ರಾಮಾ, ನಿನ್ನ ದಯದಿಂದಲೇ ನನಗೆ ನನ್ನ ಹೆಂಡತಿಯೂ ರಾಜ್ಯವೂ ತಿರುಗಿ ಬರಬೇಕಾಗಿದೆ. ಅದಕ್ಕಾಗಿ ನೀನು ವಾಲಿಯನ್ನು ಕೊಲ್ಲುವ ಪ್ರಯತ್ನ ಮೊದಲು ಮಾಡಿಬಿಡಬೇಕು. ಸೀತಾದೇವಿ ಎಲ್ಲಿದ್ದರೂ ಹುಡುಕಿ ಕರೆತಂದು ನಿನಗೆ ಒಪ್ಪಿಸುವ ಕೆಲಸ ನನ್ನದು. ಆಕೆ ಪಾತಾಳದಲ್ಲೇ ಇರಲಿ, ಸ್ವರ್ಗದಲ್ಲೇ ಇರಲಿ, ನಾನು ಅವಳನ್ನು ಹುಡುಕಿ ತರುವ ಮಾತು ಮಾತ್ರ ನಿಜ. ಈಗ ನನಗೆ ಜ್ಞಾಪಕ ಬರುತ್ತಿದೆ. ನಾನು ನೋಡಿದುದು ಆ ಸೀತೆಯನ್ನೇ ಆಗಿರಬೇಕು; ಆಕೆ ನನ್ನನ್ನೂ ನನ್ನೊಂದಿಗಿರುವ ನಾಲ್ಕು ಮಂದಿ ವಾನರ ವೀರರನ್ನೂ ನೋಡಿ ನಮ್ಮ ಮುಂದೆ ಒಂದು ಆಭರಣಗಳ ಚಿಕ್ಕ ಮೂಟೆಯನ್ನು ಬಿಸುಟಳು. ಅದನ್ನು ಭದ್ರವಾಗಿರಿಸಿದ್ದೇನೆ. ಈಗಲೇ ತರುತ್ತೇನೆ. ಆಭರಣಗಳ ಗುರುತು ಹಿಡಿಯಬಲ್ಲೆಯಾ ನೋಡು" ಎಂದನು.

ರಾಮನು ಆತುರದಿಂದ, "ಮಿತ್ರಾ, ಅವುಗಳನ್ನು ಬೇಗನೇ ತಂದು ತೋರಿಸು" ಎಂದನು. ಕೂಡಲೇ ಸುಗ್ರೀವನು ಎದ್ದು ಒಂದು ಗುಹೆಯೊಳಗೆ ಹೋಗಿ, ಸೀತಾದೇವಿಯ ಸೆರಗಿನ ಬಟ್ಟೆಯ ಹರಿದ ತುಂಡಿನಲ್ಲಿ ಕಟ್ಟಲ್ಪಟ್ಟಿದ್ದ ಮೂಟೆಯನ್ನು ತಂದು ಬಿಚ್ಚಿ ಅದರೊಳಗಿರುವ ಸುಂದರವಾದ ಆಭರಣಗಳನ್ನು ರಾಮನ ಮುಂದೆ ತೆಗೆದಿಟ್ಟು "ನೋಡು" ಎಂದನು.

ರಾಮನು ಅವುಗಳನ್ನು ನೋಡಿದ ಕೂಡಲೇ "ಹಾ! ಸೀತಾ!" ಎಂದು ಪ್ರಲಾಪಿಸಿ ಹಿಂದಕ್ಕೊರಗಿ ಕಣ್ಣೀರು ಸುರಿಸುತ್ತ ನಿಟ್ಟುಸಿರು ಬಿಡತೊಡಗಿದನು. ಬಳಿಕ ಅವನು ಲಕ್ಷ್ಮಣನೊಂದಿಗೆ, "ಲಕ್ಷ್ಮಣಾ, ರಾಕ್ಷಸನು ತನ್ನನ್ನು ಎತ್ತಿಕೊಂಡು ಹೋಗುವಾಗ, ಸೀತೆ ಈ ಆಭರಣಗಳನ್ನು ಮೆತ್ತಗಿನ ಹುಲ್ಲು ನೆಲದಲ್ಲಿ ಹಾಕಿರಬೇಕು. ಆದುದರಿಂದಲೇ ಇವು ಒಂದಿಷ್ಟೂ ಕೆಡಲಿಲ್ಲ. ಎಲ್ಲವೂ ಅವಳ ಶರೀರದಲ್ಲಿ ಹೇಗಿದ್ದುವೋ ಹಾಗೆಯೇ ಇವೆ" ಎಂದನು.

ಆಗ ಲಕ್ಷ್ಮಣನು ರಾಮನೊಂದಿಗೆ, "ಈ ಕೇಯೂರಗಳನ್ನೂ ಕುಂಡಲಗಳನ್ನೂ ನಾನು ಗುರುತಿಸಲಾರೆನಣ್ಣಾ. ಇಗೋ ಸೀತೆಯ ಕಾಲಿಗೆ ದಿನಾ ನಮಸ್ಕಾರ ಮಾಡುವಾಗ ಕಾಣಿಸುವ ಈ ಅಂದುಗೆಗಳನ್ನು ಗುರುತಿಸಬಲ್ಲೆ, ಶುಭಸೂಚನೆಯಣ್ಣಾ. ಇವು ಆಕೆಯದೇ" ಎಂದನು.

ರಾಮನು ದೀನನಾಗಿ ಸುಗ್ರೀವನೊಂದಿಗೆ, "ಮಿತ್ರಾ, ನೀನು ನೋಡುವಾಗ ಆ ರಾಕ್ಷಸನು ಸೀತೆಯನ್ನು ಯಾವ ಕಡೆಗೆ ಎತ್ತಿಕೊಂಡು ಹೋದನು?" ಎಂದು ಗದ್ಗದ ಕಂಠದಿಂದ ಕೇಳಿದ.





Feb 1975

ವೀರ ಹನುಮಾನ್

ರಾಮನು ರಾವಣನನ್ನು ಕುರಿತು ಸುಗ್ರೀವನೊಡನೆ ಆ ಪ್ರಶ್ನೆ ಮಾಡಿದುದನ್ನು ಕೇಳಿದ ಕೂಡಲೇ, ಸುಗ್ರೀವನಿಗೆ ಬಹಳ ದುಃಖವಾಯಿತು. ಸೀತೆಯ ವಿಷಯದಲ್ಲಿ ರಾಮನಿಗಿರುವ ಪ್ರೇಮದ ಆಳತೆಯೆಷ್ಟೆಂಬುದು ಗೊತ್ತಾಗಿ ಸುಗ್ರೀವನು ಕಣ್ಣೀರು ಸುರಿಸುತ್ತ, ಗದ್ಗದ ಸ್ವರದಿಂದ, "ರಾಮಾ, ಒಮ್ಮೆ ನೋಡಿದೆನೇ ಹೊರತು ಆ ರಾವಣನು ಎಲ್ಲಿರುವನೆಂಬುದು ನನಗೆ ತಿಳಿಯದು. ಆದರೆ ನನ್ನನ್ನು ದೃಢವಾಗಿ ನಂಬು. ಬೇಕಾದರೆ ಪ್ರತಿಜ್ಞೆಯನ್ನೇ ಮಾಡುತ್ತೇನೆ. ಸೀತಾದೇವಿ ಮತ್ತೆ ನಿನ್ನ ಕೈಗೆ ಸಿಕ್ಕುವುದಕ್ಕೆ ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇನೆ. ನಿನಗೆ ಸಂತೋಷ ಉಂಟಾಗುವಂತೆ ಮಾಡುವುದೇ ನನ್ನ ವ್ರತವಾಗಿರುತ್ತದೆ. ರಾವಣನು ಸೀತೆಯನ್ನು ಯಾವ ಲೋಕಕ್ಕಾದರೂ ಕೊಂಡೊಯ್ದಿರಬಹುದು. ಹುಡುಕಿಸುವ ಭಾರ ನನ್ನದು. ಕಾಲ ಕೂಡಿ ಬರುವವರೆಗೆ ನೀನು ಧೈರ್ಯವಾಗಿರಬೇಕು. ನಾನು ಕೂಡಾ ನಿನ್ನಂತೆಯೇ ಹೆಂಡತಿಯನ್ನು ಕಳೆದುಕೊಂಡವನು. ಧೈರ್ಯವಾಗಿದ್ದೇನೆ. ನಿನ್ನ ಸಂಕಟವನ್ನು ಅರಿಯಬಲ್ಲೆ. ಚಿಂತೆ ಮಾಡಬೇಡ" ಎಂದನು.

ಸುಗ್ರೀವನು ಈ ರೀತಿಯಾಗಿ ಸಮಾಧಾನ ಮಾಡುತಿರಲು ರಾಮನು ಕಂಬನಿಯಿಂದ ಒದ್ದೆಯಾದ ತನ್ನ ಮುಖವನ್ನು ಒರೆಸಿಕೊಂಡನು. ಒಂದು ನಿಟ್ಟುಸಿರಿನಿಂದ ದುಃಖಶಮನ ಮಾಡಿಕೊಂಡವನಂತೆ. "ಸುಗ್ರೀವಾ, ನಿಜವಾದ ಮಿತ್ರನಂತೆಯೇ ಮಾತಾಡಿದೆ. ಈಗ ನಾನಿರುವ ಸ್ಥಿತಿಯಲ್ಲಿ ನಿನ್ನಂತಹ ಆಪ್ತನ ಸ್ನೇಹ ದೊರಕುವುದೇ ದುರ್ಲಭ. ನೀನು ಮಾತ್ರ ಆ ರಾವಣನು ಎಲ್ಲಿರುವನೆಂದು, ಸೀತೆಯನ್ನು ಎಲ್ಲಿ ಅಡಗಿಸಿಟ್ಟಿರುವನೆಂದು ಹುಡುಕಿಸಬೇಕು. ಅದಕ್ಕೆ ಬೇಕಾದ ಬಲ ಪರಿವಾರಗಳೆಲ್ಲ ನಿನ್ನಿಂದಲೇ ಲಭಿಸಬೇಕಾಗಿದೆ. ಅದಕ್ಕಾಗಿ ನನ್ನಿಂದ ನಿನಗೇನಾಗಬೇಕೆಂಬುದನ್ನು ಹೇಳು. ಆ ಕಾರ್ಯ ನನ್ನಿಂದ ಆಗುವುದೋ ಇಲ್ಲವೋ ಎಂದು ಸಂಶಯ ಪಡಬೇಡ. ನಾನು ವಾಲಿಯನ್ನು ಕೊಲ್ಲುವೆನೆಂದ ಮಾತು ಯಥಾರ್ಥವೆಂದು ತಿಳಿ. ಅವನು ಎಷ್ಟೇ ಬಲವಂತನಾಗಿದ್ದರೂ ಸರಿಯೇ

೪. ವಾಲಿ ಸುಗ್ರೀವರ ಯುದ್ಧ



ನಾನು ಈ ವರೆಗೂ ಸುಳ್ಳು ಮಾತು ಹೇಳದವನಲ್ಲ; ಇನ್ನು ಮುಂದೆಯೂ ಹೇಳುವುದಿಲ್ಲ" ಎಂದನು.

ರಾಮನ ಮಾತು ಕೇಳಿ ಸುಗ್ರೀವ ಮತ್ತು ಅವನ ಮಂತ್ರಿಗಳೆಲ್ಲ ತುಂಬಾ ಸಂತೋಷಪಟ್ಟರು. ಸುಗ್ರೀವನು ರಾಮನೊಂದಿಗೆ ಹೀಗೆಂದನು:

"ರಾಮಾ. ನನ್ನನ್ನು ನನ್ನ ಅಣ್ಣ ಮೋಸಪಡಿಸಿ ನನ್ನ ಹೆಂಡತಿಯನ್ನು ಅಪಹರಿಸಿದನು. ನನಗೆ ಏನು ಮಾಡಬೇಕೆಂದೇ ತಿಳಿಯುವುದಿಲ್ಲ. ಹೀಗೆ ಕಾಡು ಬದುಕು ಬದುಕುತ್ತಿದ್ದೇನೆ. ಬಲವಂತನಾದ ವಾಲಿ ನನ್ನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದ್ದು ಮಾತ್ರವಲ್ಲದೆ, ನನ್ನನ್ನು ಕೊಲ್ಲಿಸಲಿಕ್ಕೂ ಪ್ರಯತ್ನ ಮಾಡಿದ್ದಾನೆ. ಅವನು ನನ್ನ ಮೇಲೆ ಕಳುಹಿಸಿದ ಎಷ್ಟೋ ವಾನರ ವೀರರನ್ನು ನಾನು ಕೊಂದಿದ್ದೇನೆ. ಆ ನನ್ನ ಅಣ್ಣನ ಭಯದಿಂದಲೇ ನಾನು ನಿನ್ನನ್ನು ನೋಡಿ ಹೆದರಿ ಅಡಗಿದೆ. ಈ ಸ್ಥಿತಿಯಲ್ಲಿರುವ ನನಗೆ ಈ ಹನುಮಂತನೇ ಮೊದಲಾದವರು ತುಂಬ ವಿಶ್ವಾಸದಿಂದ ಸಹಾಯಕರಾಗಿದ್ದಾರೆ. ನನ್ನ ಮೇಲಿನ ಸ್ನೇಹದಿಂದ ಸದಾ ಕಾಲ ನನ್ನನ್ನು ಕಾಪಾಡಿಕೊಂಡಿದ್ದಾರೆ. ನಾನು ಎಲ್ಲಿಗೆ ಹೋದರೆ ಅಲ್ಲಿಗೆ ಬರುತ್ತಾರೆ. ನನ್ನೊಂದಿಗೆ ಇವರೂ ಕಷ್ಟಪಡುತ್ತಿದ್ದಾರೆ. ನಾನೊಬ್ಬ ಕಷ್ಟಪಡುವುದಲ್ಲದೆ, ಇವರೆಲ್ಲರ ಕಷ್ಟಗಳೂ ನನಗೆ ವೇದನೆಯಾಗಿದೆ. ಹೀಗೆ ಎಷ್ಟು ಕಾಲ ಜೀವಿಸಿಕೊಂಡಿರಲಿ. ವಾಲಿ ಸತ್ತರೆ ಹೊರತು ನನಗೆ ಕ್ಷೇಮವಿಲ್ಲ!"

ರಾಮನು ಸುಗ್ರೀವನ ಮಾತು ಕೇಳಿ ಮುಗುಳು ನಗುತ್ತ, "ಶಂಕಿಸಬೇಡ. ನನ್ನ ಒಂದೇ ಬಾಣವು ವಾಲಿಯನ್ನು ಕೊಲ್ಲುತ್ತದೆ. ನನ್ನ ಕಣ್ಣಿಗೆಬಿದ್ದ ಮರುಕ್ಷಣದಲ್ಲಿ ಅವನು ಸಾಯುತ್ತಾನೆ. ನೀನು ಕೂಡಾ ಈಗ ನಾನಿರುವ ಸ್ಥಿತಿಯಲ್ಲೇ ಇರುವಿ. ಬೇಗದಲ್ಲೇ ನಿನ್ನ ದುಃಖವು ತೀರಿಹೋಗುತ್ತದೆ. ಅವನು ನನ್ನ ಕಣ್ಣಿಗೆ ಬೀಳುವಂತೆ ಮಾಡು" ಎಂದನು.

ಸುಗ್ರೀವನಿಗೆ ರಾಮನ ಮಾತಿನಲ್ಲಿ ಇನ್ನೂ ಪೂರ್ಣ ವಿಶ್ವಾಸ ಹುಟ್ಟಿದುದರಿಂದ, ಅವನು ವಾಲಿಯ ಬಲ ಸತ್ವಗಳನ್ನು ವಿವರಿಸಿ ಹೇಳಿದನು: ವಾಲಿ ಬೆಳಗಾಗುವುದಕ್ಕೆ ಮೊದಲೇ ಏಳುತ್ತಾನೆ. ಸೂರ್ಯೋದಯವಾಗುವುದರೊಳಗೆ ಅವನು ನಾಲ್ಕು ದಿಕ್ಕಿನ ಸಮುದ್ರಗಳಲ್ಲಿಯೂ ಸ್ನಾನಮಾಡಿ ಸೂರ್ಯನಿಗೆ ಅರ್ಘ್ಯಬಿಟ್ಟು ಸಂಧ್ಯಾವಂದನ ಮಾಡುತ್ತಾನೆ. ಪರ್ವತ ಶಿಖರಗಳ ಮೇಲೆ ಏರಿ ದೊಡ್ಡ ದೊಡ್ಡ ಬಂಡೆ ಕಲ್ಲುಗಳನ್ನು ಚೆಂಡಿನ ಹಾಗೆ ಮೇಲೆ ಹಾರಿಸಿ ಹಿಡಿದು ಆಟವಾಡುತ್ತಾನೆ. ಅರಣ್ಯಗಳಲ್ಲಿ ದೊಡ್ಡ ದೊಡ್ಡ ಮರಗಳನ್ನು ಮುರಿದು ತನ್ನ ಬಲವನ್ನು ನೋಡಿಕೊಳ್ಳುತ್ತಾನೆ. ಸಾವಿರ ಆನೆಗಳ ಬಲವಿರುವ ದುಂದುಭಿ ಎಂಬವನನ್ನು ಗುದ್ದಿ ಕೊಂದವನು ವಾಲಿ.

ಆ ದುಂದುಭಿ ಸಾಮಾನ್ಯದವನೇನಲ್ಲ. ಕೋಣ ಮುಖದವನು. ಅವನು ಗರ್ವದಿಂದ ಮದಿ ಮೊದಲು ಸಮುದ್ರ ರಾಜನ ಬಳಿಗೆ ಹೋ



ತನ್ನೊಂದಿಗೆ ದ್ವಂದ್ವ ಯುದ್ಧ ಮಾಡಲು ಕರೆದನು. ಆಗ ಸಮುದ್ರ ರಾಜನು ಅವನನ್ನು ನೋಡಿ, "ನಿನ್ನೊಡನೆ ಯುದ್ಧ ಮಾಡುವ ಶಕ್ತಿ ನನಗಿಲ್ಲಪ್ಪಾ. ಅದಕ್ಕೆ ತಕ್ಕ ಸಮರ್ಥನಾದವನೆಂದರೆ ಹಿಮವಂತನೇ. ಅವನೊಂದಿಗೆ ನೀನು ಯುದ್ಧ ಮಾಡಿದರೆ ನಿನ್ನ ಭುಜಗಳ ತುರಿಕೆ ತೀರಿಹೋಗುತ್ತದೆ. ಅಲ್ಲಿಗೆ ಹೋಗಿ ಗುದ್ದಾಡು" ಎಂದು ಹೇಳಿದನು.

ಸಮುದ್ರ ರಾಜನೇ ತನ್ನನ್ನು ನೋಡಿ ಹೆದರಿದನೆಂದು ದುಂದುಭಿ ಬಹಳ ಸಂತೋಷಪಟ್ಟು ಶರವೇಗದಿಂದ ಹಿಮಾಲಯಕ್ಕೆ ಹೋಗಿ, ಅಲ್ಲಿಯ ಬೆಟ್ಟಗಳನ್ನು ಕೊಂಬುಗಳಿಂದ ತಿವಿತಿವಿದು ಗರ್ಜಿಸಿದನು.

ಇದನ್ನು ನೋಡಿ ಹಿಮವಂತನು ದೊಡ್ಡದೊಂದು ಪರ್ವತ ಶಿಖರದ ಮೇಲೆ ಬಂದು ನಿಂತು, "ದುಂದುಭೀ, ಸುಮ್ಮಸುಮ್ಮನೆ ಯುದ್ಧ ಮಾಡಿ ನನ್ನನ್ನೇಕೆ ಬಾಧಿಸುವೆ? ನಾನು ಯುದ್ಧ ಮಾಡಲು ಉಪಯೋಗವಿಲ್ಲದವನು. ಇಲ್ಲಿ ಸಾವಿರಾರು ಮುನಿಗಳು ತಪಸ್ಸು ಮಾಡಿಕೊಂಡಿದ್ದಾರೆ. ಇವರಿಗೆಲ್ಲ ಕಷ್ಟ ಕೊಡಲು ನನಗಿಷ್ಟವಿಲ್ಲ. ಪರ್ವತಮಯವಾದ ಇದು ಯುದ್ಧಕ್ಕೆ ತಕ್ಕ ಸ್ಥಳವೂ ಅಲ್ಲ" ಎಂದನು.


ದುಂದುಭಿ ಮಹಾಕೋಪದಿಂದ, "ಯುದ್ಧ ಮಾಡಲು ನಿನ್ನ ಕೈಲಾಗದಿದ್ದರೆ ಅದಕ್ಕೆ ತಕ್ಕವನಾರೆಂಬುದನ್ನಾದರೂ ಹೇಳು. ಆಮೇಲೆ ನಿನ್ನನ್ನು ಮಾತಾಡಿಸುತ್ತೇನೆ" ಎಂದನು.

"ನಿನಗೆ ಯುದ್ಧವೇ ಬೇಕೆಂದಿದ್ದರೆ ಕಿಷ್ಕಿಂಧೆಯಲ್ಲಿರುವ ವಾಲಿಯ ಬಳಿಗೆ ಹೋಗು. ಅವನನ್ನು ಗೆಲ್ಲಲು ಯಾರಿಂದಲೂ ಸಾಧ್ಯವಿಲ್ಲ. ಅಲ್ಲಿಗೆ ಹೋದರೆ ಎಂದೂ ಆಗದಷ್ಟು ತೃಪ್ತಿ ನಿನಗಾಗುತ್ತದೆ. ಇದು ನಿಜ" ಎಂದು ಹಿಮವಂತನು ಹೇಳಿದನು.

ಅಲ್ಲಿಂದ ಹೊರಟ ದುಂದುಭಿ ಕಿಷ್ಕಿಂಧಾ ನಗರದ ದ್ವಾರದ ಬಳಿಗೆ ಬಂದು ದೊಡ್ಡ ಗರ್ಜನೆ ಮಾಡಿದನು. ಅವನು ಅದರ ಸುತ್ತಮುತ್ತಲಿದ್ದ ದೊಡ್ಡ ದೊಡ್ಡ ಮರಗಳನ್ನು ಮುರಿಯುತ್ತ, ತನ್ನ ಗೊರಸುಗಳಿಂದ ನೆಲವನ್ನು ಗೀರುತ್ತ, ಕೊಂಬುಗಳಿಂದ ದ್ವಾರವನ್ನು ಹೊಡೆಯುತ್ತ, ಭಾರಿ ಸೈನ್ಯವು ಮಾಡುವ ಆರ್ಭಟೆಯೆಬ್ಬಿಸುವುದನ್ನು ಕೇಳಿ ವಾಲಿ ಸಿಡಿದೆದ್ದನು.

ಅವನು ಅಂತಃಪುರದ ಸ್ತ್ರೀಯರನ್ನೂ ಹಿಂದಿಟ್ಟುಕೊಂಡು, ದುಂದುಭಿಯ ಬಳಿಗೆ ಬಂದು, "ಎಲೋ ದುಂದುಭೀ, ನಾನು ನಿನ್ನನ್ನು ಬಲ್ಲೆ. ಏತಕ್ಕಾಗಿ ಈ ಬಗೆಯ ಪುಂಡಾಟ ಮಾಡಿ ಗರ್ಜಿಸುತ್ತಿ? ಏಕೆ ಬಂತು ನಿನಗೀ ಕೊಬ್ಬು? ನಿನಗೆ ಪ್ರಾಣದ ಮೇಲೆ ಆಶೆಯಿಲ್ಲವೆ?" ಎಂದು ಕೇಳಿದನು.

ಈ ಪ್ರಶ್ನೆ ಕೇಳಿ ದುಂದುಭಿ ಉರಿದು ಬೀಳುತ್ತ, "ಈ ಹೆಂಗುಸರ ಮುಂದೆ ಜಂಬ ಹೊಡೆದುಕೊಂಡರಾಗಲಿಲ್ಲ. ನನ್ನೊಂದಿಗೆ ಖಾಡಾಖಾಡಿ ಯುದ್ಧ ಮಾಡಿ ನಿನ್ನ ಶಕ್ತಿಯನ್ನು ತೋರಿಸು. ಅದಕ್ಕೆ ಮೊದಲು ನಿನಗೆ ನಾಳೆ ಬೆಳಗ್ಗಿನವರೆಗೆ ಗಡುವು



ಕೊಟ್ಟಿದ್ದೇನೆ. ಅನುಭವಿಸಬೇಕಾದ ಸುಖಗಳನ್ನೆಲ್ಲ ಈ ರಾತ್ರಿಯೇ ಅನುಭವಿಸಿಬಿಡು. ನಿನ್ನ ಬಂಧುಗಳಿಗೆ ಕೊಡುವಂಥಾದ್ದನ್ನೆಲ್ಲ ಕೊಟ್ಟುಬಿಡು. ಮಿತ್ರರೊಂದಿಗೆ ಹೇಳುವ ಮಾತುಗಳನ್ನು ಹೇಳಿ ಮುಗಿಸಿಬಿಡು. ನಿನ್ನ ನಗರವನ್ನೆಲ್ಲ ಒಂದುಸಾರಿ ಕಡೇಬಾರಿ ನೋಡಿಬಿಡು. ನಿನ್ನ ಬದಲಿಗೆ ಬೇರೊಬ್ಬನನ್ನು ರಾಜನನ್ನಾಗಿ ನಿಯಮಿಸಿ ಬಿಟ್ಟು ನನ್ನ ಮುಂದೆ ಬಾ. ನಿನ್ನ ಮದವನ್ನೆಲ್ಲ ಅಡಗಿಸಿ ಹಾಕುತ್ತೇನೆ. ಸುಲಭವಾಗಿ ಪರಲೋಕಕ್ಕೆ ಕಳುಹಿಸುತ್ತೇನೆ '' ಎಂದನು.

ಅಷ್ಟೆಲ್ಲ ತಡಮಾಡಬೇಡವೆಂದು ವಾಲಿ ಸ್ತ್ರೀಯರನ್ನು ಅಂತಃಪುರಕ್ಕೆ ಕಳುಹಿಸಿ, ದೇವೇಂದ್ರನು ತನಗೆ ಕೊಟ್ಟ ಕಾಂಚನಮಾಲೆಯನ್ನು ಕೊರಳಿನಲ್ಲಿ ಹಾಕಿಕೊಂಡು ದುಂದುಭಿಯ ಮೇಲೆ ಹಾರಿದನು. ಅಷ್ಟೊಂದು ಶಕ್ತಿ ಪಡೆದಿದ್ದ ದುಂದುಭಿ ವಾಲಿಯ ಕೈಯಲ್ಲಿ, ಹುಲಿಯ ಕೈಗೆ ಸಿಕ್ಕಿದ ಜಿಗರೆಯಾದನು. ವಾಲಿ ದುಂದುಭಿಯ ಕೊಂಬುಗಳನ್ನು ಹಿಡಿದು ಎತ್ತಿ ಗಿರಗಿರ ತಿರುಗಿಸಿ ನೆಲಕ್ಕೆ ಹೊಡೆದು ಸಿಂಹನಾದ ಮಾಡಿದನು. ದುಂದುಭಿಯ ಕಿವಿಗಳಿಂದ ರಕ್ತವು ಪ್ರವಾಹವಾಗಿ ಹರಿಯಿತು.

ಆದರೂ ಅವರಿಬ್ಬರೂ ಬಹಳ ಹೊತ್ತು ಮುಷ್ಟಿಗಳಿಂದ, ಮೊಣಕಾಲುಗಳಿಂದ ಕಲ್ಲುಗಳಿಂದ, ಮರಗಳಿಂದ ಭಯಂಕರವಾಗಿ ಯುದ್ಧ ಮಾಡಿದರು. ಕ್ರಮವಾಗಿ ದುಂದುಭಿಯ ಬಲವು ಕ್ಷೀಣಿಸಿ, ವಾಲಿಯ ಬಲವು ಬೆಳೆಯಿತು. ಕಡೆಗೆ ವಾಲಿ ದುಂದುಭಿಯನ್ನು ಮೇಲೆತ್ತಿ ನೆಲಕ್ಕೆ ಬೀಸಿ ಬಡಿದು ಕೊಂದನು.

ಅಷ್ಟಕ್ಕೆ ಬಿಟ್ಟಿದ್ದರೆ ಕಥೆ ಬೇರೆ ವಿಧವಾಗುತ್ತಿತ್ತು. ಆದರೆ ವಾಲಿ ಅಷ್ಟಕ್ಕೆ ಬಿಡದೆ ದುಂದುಭಿಯ ಕಳೇಬರವನ್ನು ಎತ್ತಿ ಆಡಿಸಿ ಹರದಾರಿ ದೂರ ಹೋಗಿ ಬೀಳುವಂತೆ ಆಕಾಶದ ಮೇಲೆ ಬಿಸುಟನು. ಬಾಯಿಯಿಂದ ರಕ್ತ ಸುರಿಯುತ್ತಿದ್ದ ಆ ಕಳೇಬರವು ಮತಂಗ ಮುನಿಯ ಆಶ್ರಮದ ಮೇಲಿನಿಂದಾಗಿ ಹೋಗಿಬಿತ್ತು. ಅದರ ಹೊಡೆತದಿಂದ ಆಶ್ರಮದ ಕೆಲವು ಮರಗಳು ಮುರಿದುಬಿದ್ದುವು.

ಆಶ್ರಮದಲ್ಲಿ ಬಿದ್ದ ರಕ್ತದ ಕಲೆಗಳನ್ನು ನೋಡಿ ಮತಂಗ ಮಹಾಮುನಿ ಕೋಪದಿಂದ, ಇದಕ್ಕೆಲ್ಲ ಕಾರಣನಾದವನು ವಾಲಿ ಎಂಬುದನ್ನು ತಿಳಿದು, ವಾಲಿ ತನ್ನ ಆಶ್ರಮಕ್ಕೆ ಹರದಾರಿ ದೂರಕ್ಕೆ ಬಂದರೂ ಸತ್ತುಹೋಗುವನೆಂದು ಶಾಪಕೊಟ್ಟನು. ಅಷ್ಟು ಮಾತ್ರವಲ್ಲ, ಆ ವನಪ್ರಾಂತದಲ್ಲಿ ತಿರುಗಾಡಿಕೊಂಡಿದ್ದ ವಾಲಿಯ ಭೃತ್ಯರನ್ನೆಲ್ಲಾ ನೋಡಿ, '' ನೀವೆಲ್ಲಾ ಒಂದು ದಿನದೊಳಗೆ ಈ ಪ್ರಾಂತದಿಂದ ಹೊರಟುಹೋಗಬೇಕು. ತಪ್ಪಿದಲ್ಲಿ ಶಿಲೆಗಳಾಗುವಿರಿ '' ಎಂದು ಶಪಿಸಿದನು ಮತಂಗಮುನಿ. ಅದರಿಂದಾಗಿ ವಾಲಿಯ ಕಡೆಯವರಿಗೂ ದೊಡ್ಡ ಭಯ ಹಿಡಿಯಿತು. ಅವರೆಲ್ಲರೂ ತಡಮಾಡದೆ ವಾಲಿಯ ಬಳಿಗೆ ಓಡಿಬಂದರು. ವಾಲಿ ಅವರನ್ನು

ನೋಡಿ, "ನೀವೆಲ್ಲಾ ಏಕೆ ಓಡಿಬಂದಿರಿ ? ಏನಾಯಿತು ? ನಮ್ಮ ವಾನರರಿಗೆ ಅಪಾಯವೇನೂ ಬರಲಿಲ್ಲ ವಷ್ಟೆ ?" ಎಂದು ಕೇಳಿದನು. ಅವರು ನಡೆದ ಎಲ್ಲಾ ಸಂಗತಿಯನ್ನೂ ಹೇಳಿದರು.


ಕೂಡಲೇ ವಾಲಿ ಮತಂಗ ಮಹಾಮುನಿಗೆ ತನ್ನ ಪಶ್ಚಾತ್ತಾಪವನ್ನು ತಿಳಿಸುತ್ತ, ಕೊಟ್ಟ ಶಾಪವನ್ನು ಹಿಂದಿರುಗಿಸುವಂತೆ ಬೇಡಿಕೊಂಡನು. ಆದರೆ ಮತಂಗ ಮುನಿ ಅವನ ಬೇಡಿಕೆಗಳನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

ಅಂದಿನಿಂದ ವಾಲಿ ಮತಂಗಾಶ್ರಮವೆನಿಸಿದ ಋಷ್ಯಮೂಕ ಪರ್ವತದ ಕಡೆಗೆ ನೋಡುವು ದನ್ನೂ ಬಿಟ್ಟನು. ಈಶಾಪವು ಸುಗ್ರೀವನಿಗೆ ವರವಾಗಿ ಪರಿಣಮಿಸಿತ್ತು. ಅವನು ತನ್ನ ಮಂತ್ರಿ ಗಳೊಂದಿಗೆ ಋಷ್ಯಮೂಕ ಪರ್ವತದಲ್ಲಿ ನಿರ್ಭಯ ದಿಂದಿರುವಂತಾಯಿತು.

ಈ ಸಮಾಚಾರವನ್ನೆಲ್ಲ ಸುಗ್ರೀವನು ರಾಮನಿಗೆ ಹೇಳಿ, ಒಣಗಿಹೋದ ದುಂದುಭಿಯ ಕಳೇಬರವನ್ನು ಕೂಡ ರಾಮನಿಗೆ ತೋರಿಸಿದನು. "ಅಲ್ಲಿ ನೋಡು ರಾಮಾ, ದಪ್ಪವಾದ ಏಳು ಸಾಲ ವೃಕ್ಷಗಳು ಇರುವು ವಷ್ಟೆ ? ಅವುಗಳಲ್ಲಿ ಯಾವುದಾದರೊಂದು ಮರ ದೊಳಗೆ ಹೊಕ್ಕು ಹೊರಗೆ ಬರುವ ಹಾಗೆ ಬಾಣ ಪ್ರಯೋಗ ಮಾಡುವಷ್ಟು ಶಕ್ತಿ ವಾಲಿಗಿದೆ. ಅಂತಹ ಬಲಶಾಲಿಯನ್ನು ಯುದ್ಧದಲ್ಲಿ ಯಾವ ವಿಧವಾಗಿ ಕೊಲ್ಲುವಿಯೋ ? ನೀನು ತುಂಬ ಯೋಚಿಸಿ ಈ ಕಾರ್ಯಕ್ಕೆ ಸಿದ್ಧನಾಗಬೇಕು" ಎಂದನು.

ಈ ಮಾತು ಕೇಳಿ ಲಕ್ಷ್ಮಣನು ನಕ್ಕು, "ಇವನು ಏನು ಮಾಡಿದರೆ ವಾಲಿಯನ್ನು ಕೊಲ್ಲಬಲ್ಲನೆಂಬ ನಂಬುಗೆ ನಿನಗೆ ಉಂಟಾಗುತ್ತದೆ ? ಅದನ್ನು ಹೇಳಿ ಬಿಡು" ಎಂದು ಕೇಳಿದ.

"ರಾಮನು ಕೂಡಾ ಸಾಲವೃಕ್ಷದೊಳಗೆ ತೂರಿ ಹೋಗುವಂತೆ ಬಾಣ ಹೊಡೆದು, ದುಂದುಭಿಯ ಈ




ಕಳೇಬರವನ್ನು ಇನ್ನೂರು ಮಾರುದೂರ ಹೋಗಿ ಬೀಳುವಂತೆ ಎಸೆಯಬಲ್ಲನಾದರೆ, ಇವನು ವಾಲಿ ಯನ್ನು ಕೊಲ್ಲುವುದು ನಿಜವೆಂದು ನಂಬುತ್ತೇನೆ" ಎಂದು ಸುಗ್ರೀವನು ಲಕ್ಷ್ಮಣನೊಂದಿಗೆ ಹೇಳಿದನು.

ಆ ಮೇಲೆ ಸುಗ್ರೀವನು ರಾಮನ ಕಡೆಗೆ ತಿರುಗಿ, "ರಾಮಾ, ವಾಲಿ ಮಹಾಬಲಶಾಲಿ. ಅವನು ಈವರೆಗೂ ಅಪಜಯವನ್ನು ಕಂಡವನಲ್ಲ. ಅವನ ಬಲವು ಎಷ್ಟೆಂಬುದು ನನಗೆ ಚೆನ್ನಾಗಿ ಗೊತ್ತು. ಆದುದರಿಂದ ನಾನು ತುಂಬ ಹೆದರುತ್ತೇನೆಯೇ ಹೊರತು, ನಿನ್ನನ್ನು ಹೆದರಿಸಲು ಈ ಮಾತು ಹೇಳುವುದಲ್ಲ" ಎಂದನು.

ರಾಮನು ಕಿರುನಗೆ ನಕ್ಕು, "ಒಳ್ಳೆಯದು ಸುಗ್ರೀವಾ. ನನ್ನ ಪರಾಕ್ರಮದಲ್ಲಿ ನಿನಗೆ ನಂಬುಗೆ ಹುಟ್ಟುವಂತೆ ಮಾಡುತ್ತೇನೆ" ಎಂದು ಹೇಳಿ, ದುಂದುಭಿಯ ಕಳೇಬರದ ಎಲುಬಿನ ಗೂಡನ್ನು ತನ್ನ ಕಾಲಿನ ಉಂಗುಷ್ಠದಿಂದ ಎತ್ತಿ ಒಗೆದನು.

4



ಅದು ಆಕಾಶದಲ್ಲಿ ಹತ್ತು ಹರದಾರಿ ದೂರ ಹಾರಿ ಹೋಗಿ ಬಿದ್ದುಬಿಟ್ಟಿತು.

ಅದನ್ನು ನೋಡಿ ಸುಗ್ರೀವನು, "ರಾಮಾ, ಈಗ ಆ ಕಳೇಬರವು ಒಣಗಿ ಹಗುರಾಗಿ ಹೋಯಿತು. ದುಂದುಭಿಯೊಂದಿಗೆ ಭಯಂಕರವಾಗಿ ಯುದ್ಧ ಮಾಡಿ ಆಯಾಸಗೊಂಡಿದ್ದ ಸಮಯದಲ್ಲಿಯೇ ವಾಲಿ ಹಸೀ ಕಳೇಬರವನ್ನು ಇಷ್ಟು ದೂರ ಬೀಸಿ ಒಗೆದಿದ್ದಾನೆ. ಆದುದರಿಂದ ನಿನಗೂ ವಾಲಿಗೂ ಬಲದಲ್ಲಿರುವ ವ್ಯತ್ಯಾಸವನ್ನು ಕುರಿತು ನನಗಿರುವ ಸಂದೇಹವು ತೀರಲಿಲ್ಲ. ಒಂದು ಸಾಲವೃಕ್ಷದಲ್ಲಿ ತೂರಿ ಹೋಗುವಂತೆ ಬಾಣ ಪ್ರಯೋಗ ಮಾಡುವೆಯಾದರೆ ನನಗಿರುವ ಸಂದೇಹವು ನಿಶ್ಶೇಷವಾಗಿ ತೀರಿ ಹೋಗುತ್ತದೆ" ಎಂದನು.

ಸುಗ್ರೀವನಿಗೆ ತನ್ನ ಮೇಲೆ ನಂಬುಗೆ ಯುಂಟಾಗಲಿಕ್ಕಾಗಿ ರಾಮನು ಧನುಸ್ಸನ್ನೆತ್ತಿ ಹಿಡಿದು, ಒಂದು ಬಾಣವನ್ನು ಸಾಲವೃಕ್ಷದ ಕಡೆಗೆ ಪ್ರಯೋಗಿಸಿದನು. ಆ ಬಾಣ ಒಂದರ ಹಿಂದೊಂದರಂತೆ ಏಳು ಸಾಲ ವೃಕ್ಷದೊಳಗಿನಿಂದ ತೂರಿ ಹೋಗಿ ಬೆಟ್ಟವನ್ನು ಭೇದಿಸಿ ಭೂಮಿಯೊಳಗೆ ಹೊಕ್ಕಿತು. ರಾಮಬಾಣದ ಮಹತ್ವವನ್ನು ನೋಡಿ ಸುಗ್ರೀವನು ಬೆರಗಾಗಿ ಮಾತುಬಾರದೆ ಸಂಭೀಭೂತನಾದನು. ಹಾಗೆಯೇ ಕೈಜೋಡಿಸಿ ರಾಮನ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ, "ರಾಮಾ, ನೀನು ಸಾಮಾನ್ಯನಲ್ಲ. ಇಂದ್ರನನ್ನೂ ದೇವತೆಗಳನ್ನು ಕೂಡಾ ಜಯಿಸಿ ಬಿಡುವವನು. ವಾಲಿ ನಿನಗೆ ತೃಣಸಮಾನನು. ನಿನ್ನ ಸ್ನೇಹವು ದೊರೆತುದು ನನ್ನ ಭಾಗ್ಯ! ನಿನ್ನನ್ನು ಪರೀಕ್ಷಿಸಿದುದಕ್ಕಾಗಿ ಕ್ಷಮಿಸು" ಎಂದನು.

ರಾಮನು ಸುಗ್ರೀವನನ್ನು ಆಲಿಂಗಿಸಿಕೊಂಡು, ಲಕ್ಷ್ಮಣನೊಡನೆ ಸಂಪ್ರದಿಸಿ, "ಸುಗ್ರೀವಾ, ನಾವು ಹೊರಟು ಕಿಷ್ಕಿಂಧೆಗೆ ಹೋಗೋಣ. ನೀನು ನಮಗಿಂತ ಮುಂದಾಗಿ ಹೋಗಿ ವಾಲಿಯನ್ನು ಯುದ್ಧಕ್ಕೆ ಕರೆ. ನಿನ್ನ ಕಾರ್ಯ ಪರಾಕ್ರಮಗಳೂ ಚೆನ್ನಾಗಿ ಪ್ರದರ್ಶನವಾಗಲಿ" ಎಂದನು.

ಆ ಕೂಡಲೇ ರಾಮಲಕ್ಷ್ಮಣರೂ, ಸುಗ್ರೀವನ ಅನುಚರರೂ ಕಿಷ್ಕಿಂಧೆಗೆ ಹೋಗಿ, ನಗರದ ಹೊರಗಣ ವನ ವೃಕ್ಷಗಳ ಮರೆಯಲ್ಲಿ ಅಡಗಿಕೊಂಡರು.

ಸುಗ್ರೀವನು ಮುಂದೆ ಹೋಗಿ ದಟ್ಟಿ ಬಿಗಿದು ಭುಜಾಸ್ಫಾಲನೆ ಮಾಡುತ್ತ ವಾಲಿಯ ಕಿವಿಗೆ ಕೇಳಿಸುವಂತೆ ದೊಡ್ಡ ಸ್ವರದಿಂದ ಭಯಂಕರವಾಗಿ ಗರ್ಜನೆ ಮಾಡಿದನು. ತನ್ನ ತಮ್ಮನ ಸ್ವರದ ಗುರುತು ಹಿಡಿದ ವಾಲಿಗೆ ಬಹಳ ಸಿಟ್ಟುಬಂದಿತು. ಅವನು ಸುಗ್ರೀವನ ಬಳಿಗೆ ಓಡಿಬಂದನು. ಅಣ್ಣ ತಮ್ಮಂದಿರಿಬ್ಬರು ದಾರುಣವಾಗಿ ಯುದ್ಧ ಮಾಡಿದರು. ಒಬ್ಬರನ್ನೊಬ್ಬರು ಮುಷ್ಟಿಯಿಂದಲೂ, ಅಂಗೈಯಿಂದಲೂ ಹೊಡೆದುಕೊಂಡರು. ಹಿಡಿದು ಬಡಿದಾಡಿಕೊಂಡರು.

ಅವರಿಬ್ಬರೂ ಒಂದೇ ಹೋಲಿಕೆಯುಲ್ಲಿರುವುದನ್ನು ನೋಡಿ, ರಾಮನಿಗೆ ಅವರೊಳಗೆ ಯಾರು ಸುಗ್ರೀವ



ಯಾರು ವಾಲಿ ಎಂಬುದು ತಿಳಿಯದಾಯಿತು. ಆದುದರಿಂದ ಅವನು ಬಾಣ ಪ್ರಯೋಗ ಮಾಡಲಾರದೆ ಹೋದನು. ಇಷ್ಟರೊಳಗೆ ಸುಗ್ರೀವನು ಸೋತು ಓಡಿಹೋಗ ತೊಡಗಿದನು.

ವಾಲಿ ಅವನನ್ನು ಸ್ವಲ್ಪ ದೂರದವರೆಗೆ ಓಡಿಸಿಕೊಂಡು ಹೋಗಿ. ಮತಂಗ ಮುನಿಯ ಶಾಪವು ನೆನಪಿಗೆ ಬರುತ್ತಲೇ " ಬದುಕಿ ಉಳಿದೆ ಹೋಗೆಲಾ !" ಎಂದು ಜರೆದು ಕಿಷ್ಕಿಂಧೆಗೆ ಹಿಂದಿರುಗಿದನು.

ರಾಮನು ಹನುಮಂತನನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಸುಗ್ರೀವನ ಹಿಂದೆಯೇ ಹೋದನು. ಸೋತು ಸುಣ್ಣಾಗಿ ಹೋದ ಸುಗ್ರೀವನು ರಾಮನನ್ನು ನೋಡಿ, ನಾಚಿಕೆಯಿಂದ ತಲೆ ಬಗ್ಗಿಸಿಕೊಂಡು, " ನಿನ್ನ ಪರಾಕ್ರಮವನ್ನೆಲ್ಲಾ ನನಗೆ ತೋರಿಸಿ. ನನ್ನನ್ನು ವಾಲಿಯ ಮೇಲೆ ಯುದ್ಧಕ್ಕೆ ಕಳುಹಿಸಿ. ಅವನ ಕೈಯಿಂದ ಸಾಯುವ ಹಾಗೆ ಹೊಡೆತ ಬೀಳಿಸಿದೆಯಲ್ಲಾ ? ವಾಲಿಯನ್ನು ಕೊಲ್ಲಲು ಸಾಧ್ಯವಿಲ್ಲವೆಂದು ಮೊದಲೇ ಹೇಳಿದ್ದರೆ ನಾನು ಸುಮ್ಮನಿರುತ್ತಿದ್ದೆನಲ್ಲ ? ಏನು ನಿನ್ನ ಉದ್ದೇಶವೋ ತಿಳಿದಿಲ್ಲ. ವಾಲಿ ಕಣ್ಣಿಗೆ ಬಿದ್ದ ಮರುಕ್ಷಣದಲ್ಲಿ ಸಾಯುವನೆಂದೆಯಲ್ಲಾ ?" ಎಂದು ದೀನನಾಗಿ ಹೇಳಿದನು.

" ಸುಗ್ರೀವಾ, ನಾನು ವಾಲಿಯನ್ನು ಹೊಡೆಯದೇ ಹೋಗಲು ಕಾರಣ ಹೇಳುತ್ತೇನೆ ಕೇಳು. ನಿಮ್ಮಿಬ್ಬರ ರೂಪಾಲಂಕಾರ, ಅಂಗವಿನ್ಯಾಸಗಳು, ನಡಿಗೆಯ ರೀತಿಗಳೆಲ್ಲಾ ಒಂದೇ ರೀತಿಯಾಗಿವೆ. ಕಂಠಧ್ವನಿಯೂ, ಕಣ್ಣುಗಳೂ, ಶರೀರಛಾಯೆಯೂ ಒಂದೇ ವಿಧವಾಗಿವೆ. ನಿಮ್ಮಿಬ್ಬರೊಳಗೆ ನನಗೆ ಸ್ವಲ್ಪ ಕೂಡಾ ವ್ಯತ್ಯಾಸ ಕಾಣಲಿಲ್ಲ. ನೀನು ಸೋತು ಓಡಿದಾಗ ಯಾರು ವಾಲಿಯೆಂದು ಗೊತ್ತಾದರೂ ವೇಳೆಮೀರಿ ಅವನೂ ಓಡಿದ. ಈ ಪರಿಸ್ಥಿತಿಯಲ್ಲಿ ಮೂಲಕ್ಕೇ ಮೋಸ ಬರಬಾರದೆಂದು ನಾನು ಬಾಣ ಪ್ರಯೋಗ ಮಾಡಲಿಲ್ಲ. ನಿನಗೆ ಅಭಯ ವಿತ್ತವನು ನಿನ್ನ ಪ್ರಾಣವನ್ನೇ ತೆಗೆದುಬಿಟ್ಟರೆ ಮಹಾಪಾಪವಾಗುವುದಷ್ಟೆ ? ನಾನೂ ಲಕ್ಷ್ಮಣನೂ ಸೀತೆ ಕೂಡಾ ನಿನ್ನ ಅಧೀನದಲ್ಲಿರುವವರು. ನನ್ನನ್ನು ಕುರಿತು ಸಂದೇಹ ಪಡಬೇಡ. ನೀನು ಇನ್ನೊಮ್ಮೆ ಹೋಗಿ ವಾಲಿಯೊಂದಿಗೆ ಯುದ್ಧ ಮಾಡು. ಈಸಾರಿ ನನಗೆ ಸ್ಪಷ್ಟ ಗುರುತು ತಿಳಿಯುವಂತೆ ಏನಾದರೂ ಧರಿಸು. ಒಂದೇ ಒಂದು ಬಾಣದಿಂದ ವಾಲಿಯನ್ನು ಕೊಲ್ಲುತ್ತೇನೆ. ಲಕ್ಷ್ಮಣಾ ಪುಷ್ಪಿತವಾಗಿರುವ ಆ ಗಜಪುಷ್ಪಿಲತೆಯನ್ನು ತಂದು ಸುಗ್ರೀವನ ಕೊರಳಿಗೆ ಸುತ್ತು," ಎಂದನು.

ರಾಮನ ಮಾತಿನಲ್ಲಿರುವ ಯಥಾರ್ಥತೆಯನ್ನು ಸುಗ್ರೀವನು ತಿಳಿದನು; ನಂಬುಗೆಗೊಂಡನು. ಅವನು ಗಜಪುಷ್ಪಿಲತೆಯನ್ನು ಕೊರಳಿಗೆಸುತ್ತಿಕೊಂಡು, ಮತ್ತೆ ಕಿಷ್ಕಿಂಧೆಗೆ ಹೊರಟ ಹೊಸ ಉತ್ಸಾಹದಿಂದ.





March 1975

ವೀರಹನುಮಾನ್

ಸುಗ್ರೀವನು ಗಜಪುಷ್ಪಿಲತೆಯನ್ನು ಕೊರಳಿಗೆ ಸುತ್ತಿಕೊಂಡು ರಾಮನ ಜತೆಯಲ್ಲಿ ಕಿಷ್ಕಿಂಧೆಯ ಕಡೆಗೆ ಹೊರಟನು. ಮುಂದಿನಿಂದ ಸುಗ್ರೀವನು ಹೋಗುತ್ತಿರಲು, ಅವನ ಹಿಂದೆ ಧನುರ್ಬಾಣಗಳೊಂದಿಗೆ ರಾಮನೂ ಲಕ್ಷ್ಮಣನೂ ನಡೆಯುತ್ತಿದ್ದರು. ಅವರ ಹಿಂದೆ ವೀರನಾದ ಹನುಮಂತನೂ, ನಳನೂ ನೀಲನೂ, ತಾರನೂ ನಡೆಯುತ್ತಿದ್ದರು. ಈ ಸಾರಿ ಸುಗ್ರೀವನು ರಾಮನ ಮೇಲೆ ಪೂರ್ಣ ವಿಶ್ವಾಸವಿಟ್ಟು ತುಂಬ ಉತ್ಸಾಹದಿಂದಿದ್ದನು. ಇನ್ನು ಋಷ್ಯಮೂಕ ಪರ್ವತ ಗುಹೆಗಳವಾಸ ತಪ್ಪಿದಂತೆಯೇ ಸಂತೋಷವಾಗಿದ್ದನು.

ಹೋಗುವ ದಾರಿಯಲ್ಲಿ ಕಪ್ಪಾಗಿರುದ ಮರಗಳಿಂದ ನಿಬಿಡವಾದ ದೊಡ್ಡದೊಂದು ಅರಣ್ಯವು ಕಾಣಿಸಿತು. ಅದನ್ನು ನೋಡಿ ರಾಮನು ಅದು ಎಂತಹ ಅರಣ್ಯವೆಂದು ಸುಗ್ರೀಫನನ್ನು ಕೇಳಿದನು. ನಡೆಯುತ್ತಾ ಸುಗ್ರೀವನು ಆ ಅರಣ್ಯದ ವಿಷಯ ಹೇಳಿದನು. ಅದೇನೆಂದರೆ. "ಹಿಂದಿನ ಕಾಲದಲ್ಲಿ ಅದೊಂದು ಶಾಂತವಾದ ಋಷ್ಯಾಶ್ರಮವಾಗಿತ್ತು. ತಣ್ಣಗಿನ ನೆರಳನ್ನೀಯುವ ಮರಗಳಿಂದ, ರುಚಿಯಾದ ಕಂದ ಮೂಲ ಫಲಗಳಿಂದ ಆಹ್ಲಾದಕರವಾಗಿತ್ತು. ಅಲ್ಲಿ ಸಪ್ತಜನರೆಂಬ ಋಷಿಗಳು ತಪಸ್ಸು ಮಾಡಿ, ಮರ್ತ್ಯ ಶರೀರದೊಂದಿಗೆ ಸ್ವರ್ಗಕ್ಕೆ ಹೋಗಿದ್ದಾರೆ. ಈಗ ಅದರೊಳಗೆ ಪ್ರವೇಶ ಮಾಡಲು ಯಾರಿಗೂ ಸಾಧ್ಯವಿಲ್ಲ. ಪಕ್ಷಿಗಳೂ, ಇತರ ಯಾವ ಪ್ರಾಣಿಗಳೂ ಆ ಕಾಡಿನೊಳಗೆ ಹೋಗುವುದಿಲ್ಲ. ಅಪ್ಪಿತಪ್ಪಿ ಒಳಗೆ ಪ್ರವೇಶ ಮಾಡಿದ ಪ್ರಾಣಿಗಳು ಹಿಂದಿರುಗಿ ಹೊರಗೆ ಬರಲಾರವು. ಈಗ ಈ ಅರಣ್ಯದೊಳಗಿನಿಂದ ಆಗಾಗ ಅಪ್ಸರಸಿಯರು ನಾಟ್ಯವಾಡುವ ನಿನಾದ ಕೇಳಿ ಬರುತ್ತದೆ. ಒಂದೊಂದು ಸಾರಿ ಅವರು ಸುಶ್ರಾವ್ಯವಾಗಿ ಹಾಡುತ್ತಾರೆ. ಆ ಸಮಯದಲ್ಲಿ ಅರಣ್ಯದ ಸುತ್ತಲೂ ಸುವಾಸನೆ ಹರಡುತ್ತದೆ. ಮರಗಳ ಮೇಲು ಭಾಗದಲ್ಲಿ ಯಾವಾಗಲೂ ಕರ್ರಗಾಗಿ ಮಸಿ ಕೂಡಿಕೊಳ್ಳುತ್ತದೆ. ಅದಕ್ಕೆ ಕಾರಣವೇನೆಂದರೆ ಈ ಅರಣ್ಯದೊಳಗೆ ಸದಾ ಕಾಲವೂ ತ್ರೇತಾಗ್ನಿಗಳು ಬೆಳಗಿಕೊಂಡಿರುತ್ತವೆ"


ಸುಗ್ರೀವನ ಮುಖದಿಂದ ಆ ವನದ ಮಹತ್ವ ವನ್ನು ಕೇಳಿ ರಾಮಲಕ್ಷ್ಮಣರು ಸಪ್ತಜನ ಋಷಿಗಳನ್ನು ನೆನೆದು ಆ ಅರಣ್ಯಕ್ಕೆ ನಮಸ್ಕಾರ ಮಾಡಿದರು. ಆ ಪ್ರದೇಶದಿಂದ ಬಹಳದೂರ ನಡೆದ ಮೇಲೆ, ಕಿಷ್ಕಿಂಧೆ ಸಮೀಪವಾಯಿತು. ಆಮೇಲೆ ರಾಮಲಕ್ಷ್ಮಣರು ಮರಗಳ ಮರೆಯಲ್ಲಿ ಅಡಗಿಕೊಂಡರು.

ಸುಗ್ರೀವನು ಸಾಕಷ್ಟು ಮುಂದೆ ಹೋಗುತ್ತ ಸುತ್ತಲೂ ಕತ್ತು ತಿರುಗಿಸಿ ನೋಡುತ್ತ, ದಿಕ್ಕುಗಳು ಭೇದಿಸುವಂತೆ ಗರ್ಜಿಸುತ್ತ ವಾಲಿಯನ್ನು ಯುದ್ಧಕ್ಕೆ ಬರುವಂತೆ ಕರೆದನು. ಹಾಗೆಯೇ ರಾಮನನ್ನು ನೋಡಿ, "ಈ ಸಾರಿ ನಿನ್ನ ಮಾತನ್ನು ನಡೆಯಿಸದೆ ಬಿಡಬೇಡ" ಎಂದು ಕೇಳಿಕೊಂಡನು.

ರಾಮನು ಅವನನ್ನು ಕುರಿತು, "ಈ ಸಾರಿ ತಪ್ಪುವುದಿಲ್ಲ. ನಿನ್ನ ಕೊರಳಿನಲ್ಲಿ ಗಜಪುಷ್ಪಲತೆ ಯಿರುವುದರಿಂದ ನಿನ್ನನ್ನು ಸುಲಭವಾಗಿ ಗುರುತಿಸ ಬಲ್ಲೆ. ಒಂದೇ ಬಾಣದಿಂದ ನಾನು ವಾಲಿಯನ್ನು ನೆಲಕ್ಕೆ ಒರಗಿಸುತ್ತೇನೆ. ಮತ್ತೆ ಎಂದೂ ಅವನು ಏಳಲಾರನು. ನೀನು ಹೆದರಬೇಡ. ನಾನು ಎಂತಹ ಕಷ್ಟದಲ್ಲಿದ್ದರೂ ಸುಳ್ಳಾಡಲಾರೆ. ವ್ಯರ್ಥ ಮಾತು ನನ್ನ ಬಾಯಿಯಿಂದ ಬಾರದು. ಈ ಮಾತು ತ್ರಿಕಾಲ ಸತ್ಯವೆಂದು ನಂಬಿ, ನೀನು ನಿಶ್ಚಿಂತೆಯಿಂದ ವಾಲಿ ಯನ್ನು ಕರೆ" ಎಂದನು.

ಸುಗ್ರೀವನು ಆಕಾಶ ಪಾತಾಳಗಳೊಂದಾಗುವಂತೆ ಭಯಂಕರವಾಗಿ ಗರ್ಜಿಸಿದನು. ಆ ಕರ್ಕಶ ಧ್ವನಿ ಯನ್ನು ಕೇಳಿ ಪಶುಪಕ್ಷಿಗಳು ಬೆದರಿದುವು. ವನ ದೊಳಗೆ ತಿರುಗುವ ಜಿಂಕೆಗಳು ಗೊಂಬೆಗಳ ಹಾಗೆ ಅಲ್ಲಲ್ಲೇ ನಿಂತುಬಿಟ್ಟುವು.

ಸುಗ್ರೀವನ ಸಿಂಹನಾದವು ಅಂತಃಪುರದಲ್ಲಿದ್ದ ವಾಲಿಯ ಕಿವಿಗೆ ಮುಟ್ಟಿತು. ತನ್ನ ಹೆಸರು ಕೇಳಿದರೆ ನಡುಗುವವನಾದ ಸುಗ್ರೀವನು ಅಷ್ಟೊಂದು ಗರ್ವ ದಿಂದ ಅರಚುವನೇ? ತನ್ನ ಮನೆಯ ಹತ್ತಿರ ಬಂದು ಹೀಗೆ ಕೂಗುವಷ್ಟು ಧೈರ್ಯವೇ ಅವನಿಗೆ? ಎಂದು ಕೊಳ್ಳುತ್ತ ವಾಲಿಗೆ ತಾಳಲಾರದಷ್ಟು ಸಿಟ್ಟು ಬಂತು. ಅವನು ಕೂಡಲೇ ಎದ್ದು ಯುದ್ಧಕ್ಕೆ ಹೊರಟನು.



ಆಗ ಅವನ ಪತ್ನಿ ತಾರೆ ಅವನ ಕೈಹಿಡಿದು ತಡೆಯುತ್ತ, "ಆ ಸುಗ್ರೀವನನ್ನು ಕೊಲ್ಲಲಿಕ್ಕೆ ಈ ರಾತ್ರಿಯ ಹೊತ್ತಿನಲ್ಲೇ ಹೋಗಬೇಕೇನು ? ಬೆಳಗಾದ ಮೇಲೆ ಹೋದರಾಯಿತು. ಅಷ್ಟರವರೆಗೆ ಅವನು ಬೇಕಾದರೆ ಕೂಗಿಕೊಂಡಿರಲಿ. ಇದರಲ್ಲಿ ಪೌರುಷದ ಪ್ರಸಕ್ತಿಯೇನಿಲ್ಲ. ಏಕೆಂದರೆ ಅವನು ನಿನಗೆ ಸಮಾನನಾದ ಬಲಶಾಲಿಯಲ್ಲ. ಈಗಲೇ ಅವಸರಪಟ್ಟು ಅವನೊಂದಿಗೆ ಯುದ್ಧಕ್ಕೆ ಹೋಗಬೇಡವೆಂದು ನಾನು ಏಕೆ ಹೇಳುತ್ತೇನೆ ಗೊತ್ತೇ ? ಒಂದುಸಾರಿ ನಿನ್ನ ಕೈಯಲ್ಲಿ ಸಾಯುವ ಹಾಗೆ ಏಟು ತಿಂದು ಓಡಿದವನು, ಮತ್ತೆ ನಿನ್ನ ಮೇಲೆ ಯುದ್ಧಕ್ಕೆ ಏರಿಬರುವನೆಂದರೆ ಅವನಿಗೆ ಯಾರದೋ ಸಹಾಯವಿರಬೇಕು. ಇಲ್ಲದಿದ್ದರೆ ಅವನು ಹೀಗೆ ಬರಲಾರ. ಅವನಿಗೆ ಯಾರ ಸಹಾಯವಿದ್ದರೂ ಚಿಂತೆಯಿಲ್ಲ, ನಾನು ಕೊಲ್ಲಬಲ್ಲೆನೆಂದು ಭಾವಿಸಿಬಿಡಬೇಡ. ಸುಗ್ರೀವನು ಬುದ್ಧಿವಂತ. ತನಗೆ ಸಹಾಯ ಮಾಡುವವರ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಪರೀಕ್ಷೆ ಮಾಡಿಯೇ ಧೈರ್ಯದಿಂದ ಬಂದಿದ್ದಾನೆ. ನಿನ್ನ ಶಕ್ತಿಯೂ ಅವನಿಗೆ ಗೊತ್ತು. ಆದುದರಿಂದ ನಿನಗಿಂತ ಹೆಚ್ಚು ಪರಾಕ್ರಮವಂತನ ಸಹಾಯವನ್ನು ತೆಗೆದುಕೊಂಡೇ ಅವನು ಬಂದಿರಬೇಕು. ಅಂಗದನು ಅರಣ್ಯ ಪ್ರಾಂತದಲ್ಲಿ ತಿರುಗಾಡಿ ಬಂದು ಒಂದು ಸಮಾಚಾರ ತಂದಿದ್ದಾನೆ. ಇಕ್ಷ್ವಾಕು ವಂಶದವರಾಗಿ, ದಶರಥ ಮಹಾರಾಜನ ಪುತ್ರರಾದ ರಾಮಲಕ್ಷ್ಮಣರೆಂಬವರು ಋಷ್ಯಮೂಕ ಪರ್ವತದ ಮೇಲೆ ಹೋದರಂತೆ. ಅಸಮಾನ ಬಲ ಪರಾಕ್ರಮ ಸಂಪನ್ನರಾದ ಆ ಅಣ್ಣತಮ್ಮಂದಿರು ಸುಗ್ರೀವನಿಗೆ ಸಹಾಯಕರಾಗಿದ್ದಾರಂತೆ. ಆ ರಾಮನು ವಿರಾಧನನ್ನೂ, ಖರದೂಷಣರನ್ನೂ, ಕಬಂಧನನ್ನೂ ಕೊಂದಿರುವನಂತೆ. ಅವರ ಶಕ್ತಿ ಸಾಮರ್ಥ್ಯಗಳಿಗೆ ಪ್ರಪಂಚದಲ್ಲಿ ಯಾರೂ ಇದಿರಿಲ್ಲವಂತೆ" ಎಂದಳು.

ಹೀಗೆ ಹೇಳುತ್ತ ತಾರೆ ವಾಲಿಗೆ ಈ ವಿಧವಾಗಿ ಆಲೋಚನೆ ಕೂಡಾ ಹೇಳತೊಡಗಿದಳು:

"ಈ ಸಂದರ್ಭದಲ್ಲಿ ರಾಮನೊಂದಿಗೆ ವಿರೋಧ ತಂದುಕೊಳ್ಳುವುದಕ್ಕಿಂತ ಸುಗ್ರೀವನೊಂದಿಗೆ ರಾಜಿ





ಮಾಡಿಕೊಂಡು ಸ್ನೇಹದಿಂದಿರುವುದು ಲೇಸು. ಅವನನ್ನು ಕರೆದು ಮತ್ತೆ ಯುವರಾಜನನ್ನಾಗಿ ಮಾಡಿಬಿಡು. ಅವನು ನಿನ್ನ ಸಹೋದರನೇ ಹೊರತು ಪರಕೀಯನಲ್ಲವಷ್ಟೆ? ನಿನಗೆ ಒಳಿತಾಗಬೇಕೆಂಬ ಕೋರಿಕೆಯಿಂದಲೇ ನಾನು ಈ ಮಾತು ಹೇಳುತ್ತಿದ್ದೇನೆ. ನಿನ್ನ ಶಕ್ತಿ ಸಾಮರ್ಥ್ಯಗಳನ್ನು ಕಡಮೆ ಮಾಡಲಿಕ್ಕಲ್ಲ" ಎಂದಳು.

ಆದರೆ ತಾರೆಯ ಮಾತುಗಳಾವುದೂ ವಾಲಿಗೆ ರುಚಿಸಲಿಲ್ಲ. ಅವನು ತುಸು ನಿಂತು ತಾರೆಗೆ ಹೀಗೆ ಸಮಾಧಾನ ಹೇಳಿದನು:

"ನನ್ನನ್ನು ತಡೆಯಬೇಡ. ಕ್ಷುದ್ರನಾದ ಸುಗ್ರೀವನು ಆ ಕಡೆಯಲ್ಲಿ ನಿಂತು ನನ್ನನ್ನು ಯುದ್ಧಕ್ಕೆ ಕರೆಯುವಾಗ ನಾನು ಸಹಿಸಿಕೊಂಡಿರಬೇಕೆ? ಅಂಜುಕುಳಿಯಾದ ನಿನಗೆ ಯಾವುದೂ ಗೊತ್ತಾಗುವುದಿಲ್ಲ. ಮಹಾಶೂರರಿಗೆ ಯುದ್ಧದ ಮನಸ್ಸನ್ನು ಹಿಂದಿರುಗಿಸುವುದೂ ಸಾಯುವುದೂ ಸಮಾನವೆಂದು ತಿಳಿ. ರಾಮನನ್ನು ಕುರಿತು ನೀನೇನೂ ಹೆದರಬೇಡ. ಅವನು ನಿರಪರಾಧಿಯಾದ ನನ್ನನ್ನು ಕೊಂದು ಪಾಪ ಕಟ್ಟಿಕೊಳ್ಳಲಾರ. ಅವನಿಗೂ ನನಗೂ ಯಾವ ಹಗೆಯೂ ಇಲ್ಲ; ವ್ಯವಹಾರವೂ ಇಲ್ಲ. ನೀನು ನನ್ನ ಒಳಿತಿಗಾಗಿ ಹೇಳುವುದನ್ನು ಹೇಳಿದೆ, ಸಂತೋಷ. ಇನ್ನು ಸುಮ್ಮನಿರು. ನನ್ನೊಂದಿಗೆ ಬರುವುದು ಬೇಡ. ನಾನು ಸುಗ್ರೀವನ ಗರ್ವವನ್ನು ಅಡಗಿಸುತ್ತೇನೆಯೇ ಹೊರತು, ಕೊಲ್ಲುವೆನೆಂದು ತಿಳಿಯಬೇಡ. ನನ್ನ ಏಟುಗಳನ್ನು ತಾಳಲಾಗದೆ ಅವನೇ ಓಡಿ ಹೋಗುತ್ತಾನೆ."


ಇನ್ನು ಹೇಳಿ ಪ್ರಯೋಜನವಿಲ್ಲವೆಂದು ತಾರೆ ಗೊತ್ತಾದುದರಿಂದ, ಅವಳು ಅವನಿಗೆ ಪ್ರದಕ್ಷಿ ಮಾಡಿ ಯುದ್ಧದಲ್ಲಿ ಜಯವಾಗುವಂತೆ ಇಷ್ಟದೈ ವನ್ನು ಸ್ತೋತ್ರಮಾಡಿ ಹಿಂದಕ್ಕೆ ಹೋದಳು.

ವಾಲಿ ಹೊರಗೆ ಹೋಗಿ ಮುಂದೆ ನಡೆದು ತನ್ನೊಂದಿಗೆ ಯುದ್ಧಕ್ಕೆ ಸಿದ್ಧನಾಗಿ ಕಾಲು ಕೆದರು ರುವ ಸುಗ್ರೀವನನ್ನು ನೋಡಿದನು. ಕೂಡಲೆ ಅವನು ಸುಗ್ರೀವನ ಹಾಗೆಯೇ ದಟ್ಟಬಿಗಿದ ತೋಳು ತಟ್ಟಿ, ಮುಷ್ಟಿಗಳನ್ನು ಹಿಡಿದುಕೊಂಡು ಸುಗ್ರೀವನ ಮೇಲೆ ಏರಿ ಹೋದನು. ಸುಗ್ರೀವನು ಮುಷ್ಟಿಗಳಿಂದ ಅವನನ್ನು ಇದಿರಿಸಿದನು. ಇಬ್ಬರಿಗ ಯುದ್ಧ ತೊಡಗಿತು.

ಅವರಿಬ್ಬರೂ ಒಬ್ಬರನ್ನೊಬ್ಬರು ಮುಷ್ಟಿಯಿಂ ಗುದ್ದಿಕೊಂಡರು. ಸುಗ್ರೀವನು ಒಂದು ಸಾಲವೃ ವನ್ನು ಕಿತ್ತು ಅದರಿಂದ ವಾಲಿಯನ್ನು ಹೊಡೆದನ ಆ ಪೆಟ್ಟಿನ ರಭಸ ವಾಲಿಯನ್ನು ಸ್ವಲ್ಪ ಸ್ತಬ್ಧ ಗೊಳಿಸಿತು. ಆಮೇಲೆ ಕ್ರಮವಾಗಿ ವಾಲಿಯ ವಿಜೃಂಭಣೆ ಹೆಚ್ಚಾಯಿತು. ಸುಗ್ರೀವನ ಬಲ ತಗ್ಗಿ

ಹೀಗೆ ಇಬ್ಬರ ನಿಜ ಶೌರ್ಯ ಪ್ರದರ್ಶನ ಸಾಕಷ್ಟು ಅವಕಾಶ ಕೊಟ್ಟ ಮೇಲೆ, ಸುಗ್ರೀವ ಸೋಲುವ ಸೂಚನೆ ಕಂಡು ಬಂದು ದಿಕ್ಕುಗಳ






ನೋಡುವುದನ್ನು ರಾಮನು ನೋಡಿ, ತನ್ನ ಧನುಸ್ಸನ್ನು ಎತ್ತಿದನು. ವಾಲಿಯನ್ನು ಕೊಲ್ಲಲು ತಕ್ಕುದಾದ ಒಂದು ಬಾಣವನ್ನು ಆರಿಸಿಕೊಂಡು ಧನುಸ್ಸಿಗೆ ಹೂಡಿ ಗುರಿನೋಡಿ ಕಿವಿಯವರೆಗೆ ನಾಣೆಳೆದು ಆ ಬಾಣವನ್ನು ಬಿಟ್ಟನು. ಅದು ಬಿರುಗಾಳಿಯ ಸದ್ದಿನೊಂದಿಗೆ ಹೋಗಿ ವಾಲಿಯ ಎದೆಯನ್ನು ಚುಚ್ಚಿಕೊಂಡಿತು. ಅದರ ಹೊಡೆತದಿಂದ ವಾಲಿ ಮರಗಟ್ಟಿದಂತಾಗಿ ನೆಲಕ್ಕೆ ಬಿದ್ದನು.

ಇಂದ್ರನು ಪ್ರಸಾದಿಸಿದ ಕಾಂಚನಮಾಲೆ ವಾಲಿಯ ಕಂಠದಲ್ಲಿದ್ದ ಕಾರಣದಿಂದ ವಾಲಿಯ ಪ್ರಾಣ ಕೂಡಲೇ ಹೋಗಲಿಲ್ಲ. ಏಳಲಾಗದೆ ಬಿದ್ದಿದ್ದ ಅವನು ತನ್ನನ್ನು ಹೊಡೆದವನಾರೆಂದು ಸುತ್ತಲೂ ಕಣ್ಣು ಹೊರಳಿಸಿಕೊಂಡಿರಲು, ಲಕ್ಷ್ಮಣನೊಂದಿಗೆ ರಾಮನೇ ಅವನ ಬಳಿಗೆ ಬರುತ್ತಿದ್ದನು. ಅವನು ಸಮೀಪ ಬಂದ ಕೂಡಲೇ ವಾಲಿ ಅವನನ್ನು ನೋಡಿ ಗುರುತಿಸಿ ಹೀಗೆ ಹೇಳತೊಡಗಿದನು:

"ರಾಮಾ, ನೀನು ಧಶರಥನ ಮಗನಾಗಿ, ಮಹಾ ಗುಣವಂತನೆಂಬ ಕೀರ್ತಿಯನ್ನು ಪಡೆದವನಾಗಿ, ಶಾಸ್ತ್ರಗಳನ್ನೆಲ್ಲ ತಿಳಿದುಕೊಂಡವನಾಗಿ, ಕ್ಷತ್ರಿಯ ವಂಶದಲ್ಲಿ ಹುಟ್ಟಿದ ಮಹಾ ಪರಾಕ್ರಮಶಾಲಿಯಾಗಿ ಏನು ಕಾರ್ಯ ಮಾಡಿಬಿಟ್ಟೆ ? ನಾನು ಮತ್ತೊಬ್ಬನೊಂದಿಗೆ ಯುದ್ಧ ಮಾಡಿಕೊಂಡಿರುವಾಗ ನನ್ನ ಎದೆಗೆ ಬಾಣ ಹೊಡೆದುದರಿಂದ ನಿನಗೆಂತಹ ದೊಡ್ಡತನ ಬಂತೆಂದು ಯೋಚಿಸಿದೆಯಾ ? ನೀನು ಹೀಗೆ ಮರೆಯಲ್ಲಿದ್ದು ಹೊಂಚು ಹಾಕಿ ನನ್ನನ್ನು ಹೊಡೆಯುವಿಯೆಂದು ನನಗೆ ತಿಳಿಯಲಿಲ್ಲ. ರಾಜರಿಗೆ ಅಗತ್ಯವಾಗಿರಬೇಕಾದ ಇಂದ್ರಿಯ ನಿಗ್ರಹ, ಚಿತ್ತಶುದ್ಧಿ, ಸಹನೆ, ಸತ್ಯ, ಧರ್ಮ ಪರಾಕ್ರಮ, ದುಷ್ಟ ಶಿಕ್ಷಣ ಇವೆಲ್ಲಾ ನಿನ್ನಲ್ಲಿರುತ್ತವೆಂದು ನಂಬಿ, ತಾರೆ ಬೇಡಬೇಡವೆಂದರೂ ಕೇಳದೆ ಯುದ್ಧಕ್ಕೆ ಬಂದೆ. ನೀನು ದುರ್ಬುದ್ಧಿಯವನೆಂದೂ, ಪಾಪಾಚರಣೆಯವನೆಂದೂ ವಂಚಕನೆಂದೂ ನಾನು ಊಹಿಸಲಾರದೆ ಹೋದೆ. ನಿನಗೋ, ನಿನ್ನ ದೇಶಕ್ಕೋ ನಾನೇನೂ ಕೆಡುಕು ಮಾಡಲಿಲ್ಲ. ನಿನ್ನನ್ನು ಅವಮಾನಪಡಿಸಲೂ ಇಲ್ಲ. ನಾನು ಇನ್ನೊಬ್ಬನೊಡನೆ ಯುದ್ಧ ಮಾಡುತ್ತಿದ್ದಾಗ ನೀನು ನನ್ನನ್ನು ಏತಕ್ಕಾಗಿ ಹೊಡೆದೆ ? ನನ್ನನ್ನು ಬೇಟೆಯ ಧರ್ಮದಂತೆ ಹೊಡೆದೆನೆನ್ನಲೂ ಸಾಧ್ಯವಿಲ್ಲ. ನನ್ನ ಚರ್ಮ, ರೋಮ, ಎಲುವು ಮಾಂಸಗಳೊಂದೂ ನಿನಗೆ ಉಪಯೋಗವಿಲ್ಲ. ಇಂತಹ ನೀನು ರಾಜನಾಗುವುದರಿಂದ ದೇಶಕ್ಕೆ ಕ್ಷೇಮವಾಗಲಾರದು; ನಿನ್ನಂತಹ ಕುಟಿಲನೂ ಪಾಪಿಯೂ ದಶರಥಮಹಾರಾಜನ ಮಗನಾಗಿ ಹೇಗೆ ಹುಟ್ಟಿದನೋ ? ಯಾರಾದರೂ ನಿನ್ನನ್ನು ಹೀಗೇಕೆ ಮಾಡಿದೆಯೆಂದು ಕೇಳಿದರೆ ಏನು ಉತ್ತರ ಹೇಳುವೆ ? ನಿನಗಿರುವ ಪರಾಕ್ರಮವನ್ನು ಅನ್ಯಾಯವಾಗಿ ನನ್ನ ಮೇಲೆ ತೋರಿಸುವ ಬದಲಿಗೆ, ನಿನಗೆ ಕೇಡು ಬಗೆದ ರಾವಣನ ಮೇಲೆ ತೋರಿಸಬಾರದಿತ್ತೆ ? ನೀನು ನನ್ನ ಎದುರಿನಲ್ಲಿ ನಿಂತು ಯುದ್ಧ ಮಾಡಿರುತ್ತಿದ್ದರೆ ಇಷ್ಟು

ಹೊತ್ತಿಗೆ ನಿನ್ನ ಜನ್ಮ ಮುಗಿದು ಹೋಗುತಿತ್ತು. ನನ್ನನ್ನು ಕೇಳಿದ್ದರೆ ಒಂದೇದಿನದೊಳಗೆ ಸೀತೆಯನ್ನು ಹುಡುಕಿ ನಿನಗೆ ತಂದು ಕೊಡುತ್ತಿದ್ದೆ. ಸುಗ್ರೀವನು ನನ್ನನ್ನು ಕೊಲ್ಲಿಸಿ ವಾನರರಾಜನಾಗ ಬಯಸುವುದು ಸಹಜ, ಯಾವ ಸಂಬಂಧವೂ ಇಲ್ಲದೆ ನೀನು ನನ್ನನ್ನು ಮರೆಯಲ್ಲಿದ್ದು ಹೊಡೆದುದು ಅನ್ಯಾಯ."

ಹೀಗೆ ಹೇಳಿ ಕ್ರಮವಾಗಿ ಎಚ್ಚರ ಕಳೆದುಕೊಳ್ಳುತ್ತಿದ್ದ ವಾಲಿಗೆ, ರಾಮನು ಈ ರೀತಿಯಾಗಿ ಸಮಾಧಾನ ಹೇಳತೊಡಗಿದನು: "ವಾಲಿಯೇ, ಗರ್ವಿಷ್ಠನಾದ ನಿನಗೆ ಧರ್ಮ ಸೂಕ್ಷ್ಮಗಳು ತಿಳಿಯದುದರಿಂದ ನನ್ನನ್ನು ನಿಂದನೆ ಮಾಡುತ್ತಿರುವೆ. ಈ ಭೂಪ್ರಪಂಚಕ್ಕೆಲ್ಲಾ ಇಕ್ಷ್ವಾಕು ವಂಶದವರು ಚಕ್ರವರ್ತಿಗಳು. ಈಗ ಭರತನು ರಾಜ್ಯವಾಳುತ್ತಿದ್ದಾನೆ. ಅವನ ಅಪ್ಪಣೆಯ ಮೇರೆಗೆ ನಾವು ಧರ್ಮವನ್ನು ಕಾಪಾಡುತ್ತ ಸಂಚರಿಸುತ್ತಿದ್ದೇವೆ. ನೀನು ಧರ್ಮ ಮಾರ್ಗದಿಂದ ತಪ್ಪಿದವನು. ಸ್ವಂತ ತಮ್ಮನ ಸತ್ಯಪ್ರವರ್ತನೆಯನ್ನು ಅರಿಯದವನು. ತಮ್ಮನ ಹೆಂಡತಿಯಾದ ರುಮೆಯನ್ನು ಎಳೆದುಕೊಂಡವನು. ಈ ಬಗೆಯ ಅಪರಾಧಗಳಿಗೆ ಇದುವೇ ನಿನಗೆ ತಕ್ಕ ಶಿಕ್ಷೆ. ಇದು ಮಾತ್ರವಲ್ಲದೆ ಸುಗ್ರೀವನು ನನಗೆ ಲಕ್ಷ್ಮಣನಿಗೆ ಸಮಾನನು. ಅವನ ಸ್ನೇಹಕ್ಕಾಗಿಯೂ ನಾನು ಈ ಕೆಲಸ ಮಾಡಿದೆ. ನಿನ್ನನ್ನು ಮರೆಯಲ್ಲಿದ್ದು ಕೊಂದುದಕ್ಕಾಗಿ ನಾನೇನೂ ಚಿಂತಿಸುವುದಿಲ್ಲ. ನನ್ನ ಮುಂದೆ ನೀನು ಯುದ್ಧ ಮಾಡಲಾರೆ; ಅದಕ್ಕೆ ನಿನಗೆ ಕಾರಣವಿಲ್ಲ. ಯುದ್ಧ ಮಾಡುತ್ತಾ ನೀನು ವೀರನಂತೆ ಸಾಯುವ ಅವಕಾಶವನ್ನಿತ್ತು ನಿನ್ನನ್ನು ಹೊಡೆದಿದ್ದೇನೆ. ಇದು ಅಧರ್ಮವಲ್ಲ. ವನಮೃಗಗಳನ್ನು ಹೊಡೆಯುವವರು ಮರೆಯಾಗಿದ್ದು, ಬಲೆ ಹಾಕಿ ಇನ್ನೂ ಅನೇಕ ಮಾಯೋಪಾಯಗಳನ್ನು ಅವಲಂಭಿಸುತ್ತಾರೆ, ತಿನ್ನುವ ಪ್ರಾಣಿಗಳನ್ನು ಮಾತ್ರವಲ್ಲದೆ ತಿನ್ನಲಾಗದ ಪ್ರಾಣಿಗಳನ್ನು ಕೂಡಾ ರಾಜರ್ಷಿಗಳು ಕೊಲ್ಲುತ್ತಾರೆ."



ರಾಮನ ಮಾತುಗಳು ಕಿವಿಗೆ ಬಿದ್ದಂತೆ ವಾಲಿ ಕಣ್ಣು ಮುಚ್ಚಿ ಬಿಡಿಸುತ್ತಾ, "ನಾನು ಸಾಯುವುದಕ್ಕಾಗಿ ಚಿಂತಿಸುವುದಿಲ್ಲ. ರಾಮಾ, ತಾರೆಯನ್ನು ಕುರಿತೂ, ಬಂಧುಗಳನ್ನು ಕುರಿತೂ ನನಗೇನೂ ಚಿಂತೆಯಿಲ್ಲ. ನನಗೆ ಅಂಗದನನ್ನು ಕುರಿತೇ ಚಿಂತೆಯಾಗಿದೆ. ಅವನಿಗೆ ನಾನೆಂದರೆ ಪ್ರಾಣ. ನನ್ನ ವಿಯೋಗದಿಂದ ಅವನು ತುಂಬಾ ದುಃಖಿಸುತ್ತಾನೆ. ಅವನು ದುಃಖಿಸುತ್ತಿದ್ದರೆ ನನ್ನ ಆತ್ಮಕ್ಕೆ ಶಾಂತಿಯಿಲ್ಲ. ಅವನನ್ನು ನೀನೇ ಕಾಪಾಡಬೇಕು. ನೀನು ಸುಗ್ರೀವನನ್ನು ನೋಡುವಂತೆಯೇ ಅಂಗದನನ್ನೂ ನೋಡಬೇಕು. ನಿನ್ನನ್ನೇ ನಂಬಿದ್ದೇನೆ" ಎಂದು ಹೇಳಿ ಸ್ಪೃಹೆ ತಪ್ಪಿದನು.

ರಾಮನು ಹಾಗೆಯೇ ಮಾಡುವೆನೆಂದು ವಾಲಿಗೆ ಮಾತು ಕೊಟ್ಟನು. ವಾಲಿ ಮತ್ತೇನೂ ಮಾತಾಡಲಿಲ್ಲ. ಕಣ್ಣು ತೆರೆಯಲೂ ಇಲ್ಲ.

ಅಷ್ಟರೊಳಗೆ ಈ ಸಂಗತಿ ತಾರೆಗೆ ತಿಳಿಯಿತು. ಅವಳು ಅಪಾರವಾದ ದುಃಖದಿಂದ ಮಗನನ್ನೂ

ಹಿಂದಿಟ್ಟುಕೊಂಡು ಅಳುತ್ತ ಕಿಷ್ಕಿಂಧೆಯಿಂದ ಬರತೊಡಗಿದಳು. ದಾರಿಯಲ್ಲಿ ಅವಳಿಗೆ ಕೆಲವು ಮಂದಿ ವಾನರರು ಇದಿರಾಗಿ, "ಹಿಂದಿರುಗಿ ಹೋಗು ತಾರಾ. ಮೊದಲು ನಿನ್ನ ಮಗನಾದ ಅಂಗದನನ್ನು ಕಾಪಾಡಿಕೋ. ಅವನನ್ನು ಅಡಗಿಸಿಡು. ಘೋರವಾದ ಮೃತ್ಯು ರಾಮನ ರೂಪದಲ್ಲಿ ಬಂದು ವಾಲಿಯನ್ನು ಎತ್ತಿಕೊಂಡು ಹೋಗುತ್ತಿದೆ. ನಗರದ ದ್ವಾರಗಳನ್ನು ಭದ್ರವಾಗಿ ಮುಚ್ಚಿಸಿ, ಈ ಕೂಡಲೇ ಅಂಗದನಿಗೆ ಪಟ್ಟಾಭಿಷೇಕ ಮಾಡು. ಇಲ್ಲದಿದ್ದರೆ ನಿಮಗೆ ಕಿಷ್ಕಿಂಧೆಯಲ್ಲಿ ನಿಲ್ಲಲು ಜಾಗು ಸಿಗಲಾರದು. ಶತ್ರುಗಳಾದ ಸುಗ್ರೀವನ ಕಡೆಯ ವಾನರರು ಬಂದು ಎಲ್ಲವನ್ನೂ ಆಕ್ರಮಿಸಿಕೊಳ್ಳುತ್ತಾರೆ" ಎಂದರು.

ಭೀತಾವಹವಾದ ಅವರ ಮಾತುಗಳನ್ನು ತಾರೆ ಲಕ್ಷ್ಯಮಾಡದೆ, "ನನ್ನ ಗಂಡನೇ ಹೋದಮೇಲೆ ಮಗನೂ, ರಾಜ್ಯವೂ, ನನ್ನ ಶರೀರವೂ ಏನಾದರೇನು ? ವಾಲಿ ಹೋದ ಕಡೆಗೇ ನಾನೂ ಹೋಗುತ್ತೇನೆ" ಎಂದು ಅಪಾರ ದುಃಖದಿಂದ ಅಳುತ್ತಾ, ವೇಗವಾಗಿ ವಾಲಿ ಬಿದ್ದಲ್ಲಿಗೆ ಬಂದುಬಿಟ್ಟಳು. ಅಲ್ಲಿಯೇ ನಿಂತಿದ್ದ ರಾಮಲಕ್ಷ್ಮಣರನ್ನು ಒಮ್ಮೆ ಮಾತ್ರ ನೋಡಿ ಅವಳು ವಾಲಿಯ ಬಳಿಯಲ್ಲಿ ಕುಳಿತು ಅವನನ್ನು ಆಲಿಂಗಿಸಿಕೊಂಡು ರೋದಿಸತೊಡಗಿದಳು. ತಾರೆಯನ್ನೂ ಅಂಗದನನ್ನೂ ನೋಡಿದ ಕೂಡಲೇ ಸುಗ್ರೀವನಿಗೆ ಕೂಡಾ ದುಃಖವು ಉಕ್ಕಿ ಬಂದಿತು

ಆಗ ಹನುಮಂತನು ತಾರೆಗೆ ಈ ವಿಧವಾಗಿ ಸಮ
ಧಾನ ಹೇಳತೊಡಗಿದನು: "ಅಮ್ಮಾ! ಎಲ್ಲ
ಮುಗಿಸಿ ಹೊರಟುಹೋಗುವ ವಾಲಿಯನ್ನು ಕುರಿತ
ಇನ್ನು ರೋದಿಸಿ ಪ್ರಯೋಜನವೇನಿಲ್ಲ. ಯಾವುದೊ
ಒಂದುದಿನ ಎಲ್ಲರೂ ಅವನ ಹಾಗೆ ಹೋಗಬೇಕಾ
ವರೇ. ಈಗ ನಿನ್ನನ್ನು ಕುರಿತು ನಾವೆಲ್ಲಾ ವಿಚಾ
ಮಾಡಬೇಕಾಗಿದೆ. ನಿನಗೆ ಮಗನಿದ್ದಾನೆ. ಅವ
ಯೋಗ ಕ್ಷೇಮಗಳನ್ನು ನೋಡಿ ಸರಿಯಾಗಿ ನಡೆದ
ಕೊಳ್ಳುವಂತೆ ತಿದ್ದಬೇಕು. ವೀರನಂತೆ ಹೋರಾ
ರಾಮಬಾಣದಿಂದ ಹೊರಟುಹೋದ ವಾಲಿ ಮಹಾತ
ನಾಗಿರುವನು. ಅವನಿಗೆ ಉತ್ತಮ ಲೋಕಗ
ದೊರಕುತ್ತವೆ. ಇನ್ನು ಮೇಲೆ ಅಂಗದನು ರಾ
ನಾಗಿರುವಾಗ, ನೀನು ಅವನಿಗೆ ದಾರಿ ತೋರಿಸುವ
ಳಾಗಿ ಸಹಾಯಕಳಾಗಿ ಇರಬೇಕು. ವಾಲಿಗೆ ಮಾ
ಬೇಕಾದ ಉತ್ತರ ಕ್ರಿಯೆಗಳನ್ನು ನೆರವೇರಿಸಿ, ಅಂಗ
ನಿಗೆ ಪಟ್ಟಾಭಿಷೇಕ ಮಾಡಬೇಕು"

ಈ ಮಾತುಗಳನ್ನು ಕೇಳಿ ತಾರೆ, "ಹನುಮಂತ
ನೀನು ಹೇಳಿದ ಕೆಲಸಗಳನ್ನು ಮಾಡಬೇಕಾದವ
ನಾನಲ್ಲ; ಸುಗ್ರೀವನು ಮಾಡಬೇಕಾದುವು. ನಾ
ವಾಲಿಯೊಂದಿಗೆ ಹೊರಟು ಹೋಗುವವಳು. ನ
ಬೇರೆ ಯಾವ ಕೋರಿಕೆಯೂ ಇಲ್ಲ" ಎಂದಳು.






April 1975

ವೀರಹನುಮಾನ್

ವಾಲಿ ರಾಮಬಾಣದಿಂದ ಪ್ರಾಣಾಂತಿಕ ಸ್ಥಿತಿಯಲ್ಲಿ ಬಿದ್ದಿದ್ದಾನೆಯೇ ಹೊರತು, ಸಾಯಲಿಲ್ಲ. ಸ್ಮೃತಿಯೂ ಅವನ ಮಸ್ತಿಷ್ಕದಲ್ಲಿ ಆಡುತ್ತಿತ್ತು. ಮೆಲ್ಲನೆ ಕಣ್ಣುಗಳನ್ನು ತೆರೆದು ಅತ್ತ ಇತ್ತ ನೋಡುತ್ತಿದ್ದ. ತನ್ನ ಮಗ ಅಂಗದನನ್ನು ನೋಡುತ್ತಾ, ಅವನ ಬಳಿಯಲ್ಲಿ ನಿಂತಿರುವ ಸುಗ್ರೀವನನ್ನೂ ನೋಡಿದ. ಅವನ ತುಟಿಗಳು ಕದಲತೊಡಗಿ ಸುಗ್ರೀವನನ್ನು ಕುರಿತು ಹೀಗೆ ಹೇಳತೊಡಗಿದ:

"ಸುಗ್ರೀವಾ, ನಿನ್ನನ್ನು ರಾಜ್ಯದಿಂದ ಓಡಿಸಿ, ನಿನ್ನ ಹೆಂಡತಿಯನ್ನು ವಶಮಾಡಿಕೊಂಡೆನೆಂದು ನನ್ನಲ್ಲಿ ಹಗೆಯಿಟ್ಟುಕೊಳ್ಳಬೇಡಪ್ಪಾ. ನಾವಿಬ್ಬರೂ ರಾಜ್ಯ ಸುಖವನ್ನು ಹಂಚಿಕೊಂಡು ಸೋದರ ಸ್ನೇಹದಿಂದ ಬದುಕಲು ಹಣೆಯಲ್ಲಿ ಬರೆದಿಲ್ಲ. ಆದ್ದರಿಂದಲೇ ನನ್ನ ಬುದ್ಧಿ ಹಾಗೆ ಹೋಯಿತು. ನಾನು ಸತ್ತು ಹೋಗುತ್ತಿದ್ದೇನೆ. ಇನ್ನು ಮೇಲೆ ನೀನೇ ವಾನರರಿಗೆಲ್ಲ ರಾಜನಾಗಿರು; ನನ್ನದೊಂದು ಕೊನೆಯ ಕೋರಿಕೆಯನ್ನು ಹೇಳುತ್ತೇನೆ. ಅದು ಎಷ್ಟು ಕಷ್ಟವಾಗಿದ್ದರೂ ನೆರವೇರಿಸದೆ ಬಿಡಬೇಡ. ನನಗೆ ನನ್ನ ಪ್ರಾಣಕ್ಕಿಂತಲೂ ಪ್ರಿಯನಾದವನು ಅಂಗದಕುಮಾರ. ಅವನನ್ನು ನಿನ್ನ ಮಗನಂತೆಯೇ ನೋಡಿಕೋ. ಅವನಿಗೆ ಯಾವುದರಲ್ಲಿಯೂ ಕೊರತೆ ಬರುವಂತೆ ಮಾಡಬೇಡ. ಅವನಿಗೆ ಇನ್ನು ನಿನ್ನ ಹೊರತು ಬೇರೆ ಯಾರೂ ಗತಿಯಿಲ್ಲ. ಅವನಿಗೆ ನಿನಗಿರುವಷ್ಟು ಪರಾಕ್ರಮವೂ ಇದೆ. ಆದುದರಿಂದ ಅವನು ಎಲ್ಲಾ ವಿಷಯಗಳಲ್ಲಿಯೂ ನಿನಗೆ ಸಹಾಯಕನಾಗಿರಬಲ್ಲನು. ಸುಷೇಣನ ಮಗಳೂ ನನ್ನ ಹೆಂಡತಿಯೂ ಆದ ತಾರೆ ತುಂಬಾ ಸೂಕ್ಷ್ಮ ಬುದ್ಧಿ ಉಳ್ಳವಳು. ಬರಲಿರುವ ಕಷ್ಟಗಳನ್ನು ಮುಂದಾಗಿಯೇ ತಿಳಿದುಕೊಳ್ಳಲು ಸಮರ್ಥಳು. ಆದುದರಿಂದ ಅವಳು ಹೇಳಿದ ಹಾಗೆ ಮಾಡು. ನನ್ನ ಕೊರಳಲ್ಲಿರುವ ದೇವೇಂದ್ರನ ಕಾಂಚನ ಮಾಲೆಯನ್ನು ಈಗಲೇ ನೀನು ತೆಗೆದುಕೋ. ನಾನು ಸತ್ತುಹೋದ ಕೂಡಲೇ ಇದರ ಕಾಂತಿಯೂ ಪ್ರಭಾವವೂ ಹೋಗಿಬಿಡುತ್ತವೆ." ಈ ಮಾತಿನಂತೆ ಸುಗ್ರೀವನು ಅವನ ಕೊರಳಿನ ಕಾಂಚನ ಮಾಲೆ

೬. ಸುಗ್ರೀವನಿಗೆ ಪಟ್ಟಾಭಿಷೇಕ



ಯನ್ನು ತೆಗೆದುಕೊಂಡನು. ತರುವಾಯ ವಾಲಿ ಅಂಗದನನ್ನು ಕರೆದು ಕೆಲವು ಹೇಳಿದನು :

"ಮಗನೇ, ಇನ್ನು ನೀನು ನನ್ನ ಹತ್ತಿರ ನಡೆದು ಕೊಂಡ ಹಾಗೆಯೇ ಸುಗ್ರೀವನ ಹತ್ತಿರವೂ ನಡೆದು ಕೊಂಡಿರಬೇಕು. ಸುಗ್ರೀವನ ಶತ್ರುಗಳೊಂದಿಗೆ ನೀನೆಂದೂ ಸೇರಬಾರದು. ಸುಗ್ರೀವನು ಹೇಳಿದ ಕೆಲಸಗಳನ್ನು ಮನಸ್ಸಿಟ್ಟು ಮಾಡಬೇಕು. ಯಾರೊಂದಿಗೇ ಆಗಲಿ, ಅಮಿತ ಸ್ನೇಹ ಮಾಡಬೇಡ; ಸ್ನೇಹ ಮಾಡದೆಯೂ ಇರಬೇಡ. ಸುಗ್ರೀವನೇ ನಿನಗಿನ್ನು ತಂದೆ" ಹೀಗೆ ಹೇಳಿ ವಾಲಿ ಪ್ರಾಣಬಿಟ್ಟನು.

ವಾಲಿ ಸತ್ತುಹೋದುದನ್ನು ನೋಡಿ ವಾನರರೆಲ್ಲಾ ರೋದಿಸಿದರು. ವಾಲಿ ಮಾಡಿದ ಮಹಾ ಮಹಾ ಕಾರ್ಯಗಳನ್ನು ಹೇಳಿ ಹೇಳಿ ಗೋಳಾಡಿದರು. ಈ ವಾಲಿಯೊಮ್ಮೆ ಗೋಲಭನೆಂಬ ಗಂಧರ್ವ ನೊಂದಿಗೆ ಹದಿನೈದು ವರ್ಷಗಳವರೆಗೆ ಹೋರಾಡಿ ಅವನನ್ನು ಕೊಂದನೆಂಬ ಸಂಗತಿ ಆಗ ಹೇಳಿಕೊಂಡರು.

ತಾರೆ ಕೂಡಾ ತನ್ನ ಗಂಡನ ಗುಣಗಣಗಳನ್ನು ನೆನೆನೆನೆದು ತುಂಬಾ ರೋದಿಸಿದಳು. ನೀಲನು ವಾಲಿಯ ಎದೆಯಲ್ಲಿ ನಟ್ಟ ರಾಮಬಾಣವನ್ನು ಕಿತ್ತು ತೆಗೆದನು. ತಾರೆ ಹೇಳಿದ ರೀತಿಯಾಗಿ ಅಂಗದನು ವಾಲಿಯ ಕಾಲು ಹಿಡಿದು ನಮಸ್ಕಾರ ಮಾಡಿದನು. ತಾರೆಯ ಶೋಕವನ್ನು ನೋಡುತ್ತಾ ಸುಗ್ರೀವನಿಗೆ ದುಃಖ ಸಹಿಸಲಾಗಲಿಲ್ಲ. ತಾನು ವಾಲಿಯನ್ನು ಕೊಲ್ಲಿಸಿದುದಕ್ಕೆ ತುಂಬಾ ಬಾಧೆಪಟ್ಟನು. ಅವನು ಕಣ್ಣೀರು ತುಂಬಿಕೊಂಡು ರಾಮನ ಬಳಿಗೆ ಹೋಗಿ, ಗದ್ಗದ ಕಂಠದಿಂದ, "ರಾಮಾ, ನೀನು ನನಗೆ ಕೊಟ್ಟ ಮಾತನ್ನು ಉಳಿಸಲು ವಾಲಿಯನ್ನು ಒಂದೇ ಬಾಣ ದಿಂದ ಕೊಂದೆ. ನನಗೆ ರಾಜ್ಯ ಬರುವಂತೆ ಮಾಡಿದೆ. ಆದರೆ ನಾನೆಂತಹ ಕಟುಕನೋ ಕಾಣೆನು. ನನಗೀಗ ಜೀವಿತದ ಮೇಲೆ ಯಾವ ಆಶೆಯೂ ಕಾಣುವುದಿಲ್ಲ. ವಾನರರೆಲ್ಲಾ ಹೀಗೆ ಅಳುತ್ತಿರುವಾಗ ಇದಕ್ಕೆಲ್ಲಾ ಕಾರಣನಾದ ನನಗೆ ಇನ್ನು ರಾಜ್ಯವೇಕೆ ? ಪರಾಕ್ರಮ ವೇಕೆ ? ಮೊದಲು ವಾಲಿ ನನಗೆ ಕೊಟ್ಟ ಕಷ್ಟಗಳನ್ನು ತಾಳಲಾರದೆ ವಾಲಿ ಸಾಯಬೇಕೆಂದು ಬಯಸಿದ್ದು ನಿಜ. ಆದರೆ ಈಗ ನಿಜವಾಗಿಯೇ ವಾಲಿ ಸತ್ತು ಹೋದ ಮೇಲೆ ಪಶ್ಚಾತ್ತಾಪವು ನನ್ನನ್ನು ದಹಿಸುತ್ತಾ ಇದೆ. ಬೇಡ, ನನಗೇನೂ ಬೇಡ. ನನ್ನ ಶೇಷಾಯುಷ ವನ್ನು ಋಷ್ಯಮೂಕ ಪರ್ವತದಲ್ಲಿಯೇ ಕಳೆಯ ಬೇಕೆಂದು ನಿಶ್ಚಯಿಸಿದ್ದೇನೆ. ಈಗ ನನಗೆ ಸ್ವರ್ಗ ಕೂಡಾ ಬೇಡವೆನಿಸುತ್ತದೆ. ವಾಲಿ ನನ್ನನ್ನು ಜೀ ದೊಂದಿಗೆ ಉಳಿಸಿದ್ದಾನೆ. ನಾನು ಅವನ ಪ್ರಾಣಗಳನ್ನು ಹಾರಿಸಿದೆ. ನನಗಿಂತಲೂ ಹೆಚ್ಚಿನ ಪಾಪಿ ನಿದ್ದಾನೆಯೆ ? ಈಗ ನಾನು ಯುವ ರಾಜನಾಗಿರಲಿಕ್ಕೂ ಅರ್ಹನಲ್ಲ. ಇಷ್ಟು ಮಾಡಿಸಿದ ನಾನು ಇನ್ನು ಮೇ ಹೇಗೆ ವಾನರರನ್ನು ಮಾತಾಡಿಸಲಿ ? ನಾನು ಕೂಡ ವಾಲಿಯೊಂದಿಗೇ ದಹನವಾಗಿ ಹೋಗುವುದು ಒಳ್ಳೆಯದು. ನಿನ್ನ ಕಾರ್ಯವನ್ನು ವಾನರ

6

ನೆರವೇರಿಸಿ ಕೊಡಬಲ್ಲರು." ಎಂದನು. ಆಗ ತಾರೆ ಮುಂದೆ ಬಂದು ರಾಮನನ್ನು ನೋಡಿ, "ರಾಮಾ, ವಾಲಿಯನ್ನು ಕೊಂದ ಬಾಣದಿಂದ ನನ್ನನ್ನೂ ಕೊಂದು, ವಾಲಿಯ ಬಳಿಗೆ ಕಳಿಸಿಬಿಡು. ನಾನು ಜೊತೆಯಲ್ಲಿಲ್ಲದೆ ಹೋದರೆ ವಾಲಿಗೆ ಸುಖ ಆಗದು. ಸೀತೆಯ ವಿಯೋಗದಿಂದ ನೀನು ಹೇಗೆ ದುಃಖವನ್ನು ಅನುಭವಿಸುವಿಯೋ ಹಾಗೆಯೇ ವಾಲಿ ಕೂಡಾ ಸ್ವರ್ಗದಲ್ಲಿ ನನ್ನ ವಿಯೋಗದಿಂದ ದುಃಖಿಸುತ್ತಾನೆ. ನನ್ನನ್ನೂ ಕೊಂದುಬಿಟ್ಟರೆ ನಿನಗೆ ವಾಲಿಯನ್ನು ಕೊಂದ ಪಾಪ ಹೋಗುತ್ತದೆ." ಎಂದಳು.

ರಾಮನು ಅವಳಿಗೆ ಸಮಾಧಾನ ಹೇಳುತ್ತ, "ವೀರಪತ್ನಿಯಾದ ತಾರಾ, ನೀನು ಹೀಗೆ ಅಳುವುದೂ, ದುಃಖದಿಂದ ಪರವಶಳಾಗುವುದೂ ಸರಿಯಲ್ಲ. ವಾಲಿ ಬದುಕಿರುವಾಗ ನೀನು ಸುಖಭೋಗಗಳಿಂದಿದ್ದ ಹಾಗೆಯೇ ಇನ್ನು ಮುಂದೆಯೂ ಸುಖಪಡುವೆ. ನಿನ್ನ ಮಗನು ಅಂಗದನು ಯುವರಾಜನಾಗುತ್ತಾನೆ." ಎಂದನು.

ಆಮೇಲೆ ರಾಮನು ವಾನರರನ್ನು ನೋಡಿ, "ನೀವೆಲ್ಲರೂ ಅಳುತ್ತಾ ನಿಂತಿದ್ದರೆ ಏನೂ ಆಗದು. ಯಾರು ಸತ್ತರೂ ಯಾರು ಬದುಕಿದರೂ ಕಾಲವು ಸಾಗುತ್ತಾ ಇರುತ್ತದೆ. ನೀವೆಲ್ಲಾ ಎಷ್ಟೇ ಅತ್ತರೂ ಸತ್ತವನಿಗೆ ಏನೂ ಒಳ್ಳೆಯದಾಗುವುದಿಲ್ಲ. ವಾಲಿಗೆ ಊರ್ಧ್ವ ಲೋಕಗಳು ಸಿಗುವ ಕಾರ್ಯಕ್ರಮಗಳು ಯಥಾ ವಿಧಿಯಾಗಿ ನಡೆಯಬೇಕಾದುದೇ ಈಗಿನ ಅಗತ್ಯವಾಗಿದೆ." ಎಂದನು.

ಆಗ ಲಕ್ಷ್ಮಣನು ದುಃಖದಲ್ಲಿ ಮುಳುಗಿದ ಸುಗ್ರೀವನನ್ನು ಕುರಿತು, "ಸುಗ್ರೀವಾ, ಈಗ ವಾಲಿಗೆ ದಹನ ಸಂಸ್ಕಾರ ನಡೆಯಬೇಕು. ವಾನರರ ಮೂಲಕ ಚಂದನವೇ ಮೊದಲಾದ ಸುಗಂಧದ ಕಟ್ಟಿಗೆಗಳನ್ನು ತರಿಸು. ಅಂಗದನಿಗೆ ಸಮಾಧಾನ ಹೇಳಿ, ತಂದೆಯ ಕ್ರಿಯಾಕರ್ಮಗಳಿಗೆ ಅವನನ್ನು ತಯಾರುಗೊಳಿಸು. ಇನ್ನು ಮೇಲೆ ಕಿಷ್ಕಿಂಧೆಯನ್ನು ಪರಿಪಾಲಿಸ ಬೇಕಾಗಿರುವ ನೀನು ದುಃಖಿಸುತ್ತಾ ಕುಳಿತರೆ ಅರ್ಥವಿಲ್ಲ. ನ್ಯಾಯವೂ ಇಲ್ಲ. ಅಂಗದನಿಂದ ಪುಷ್ಪಗಳನ್ನು, ಬಟ್ಟೆ





ಗಳನ್ನು, ಎಣ್ಣೆ, ತುಪ್ಪ, ಗಂಧದ್ರವ್ಯಗಳನ್ನೂ ತರಿಸು, ಪಲ್ಲಕಿ ಸಿದ್ಧವಾಗಲಿ. ಅದನ್ನು ಹೊರುವ ವಾನರರು ಸಿದ್ಧರಾಗಲಿ. ಇವೆಲ್ಲಾ ಕಾಲೋಚಿತವಾಗಿ ಆಗಬೇಕಾದ ಕಾರ್ಯಗಳು" ಎಂದನು.'


ಲಕ್ಷ್ಮಣನ ಮಾತನ್ನು ಕೇಳಿ, ತಾರನೆಂಬ ವಾನರನು ಕೂಡಲೇ ಕಿಷ್ಕಿಂಧೆಗೆ ಹೋಗಿ ಬೇಗದಲ್ಲೇ ಪಲ್ಲಕಿಯೊಂದಿಗೆ ತಿರುಗಿ ಬಂದನು. ಅಷ್ಟರೊಳಗೆ ಸುಗ್ರೀವನೇ ಮೊದಲಾದವರು ವಾಲಿಯ ಶರೀರವನ್ನು ಸ್ನಾನಮಾಡಿಸಿ, ಗಂಧಪುಷ್ಪಾದಿಗಳಿಂದ ಅಲಂಕರಿಸಿದರು. ಸುಗ್ರೀವನೂ ಅಂಗದನೂ ಕೂಡಿ ವಾಲಿಯ ಶರೀರವನ್ನೆತ್ತಿ ಪಲ್ಲಕಿಯಲ್ಲಿ ಮಲಗಿಸಿದರು. ಸುಗ್ರೀವನು ದೊಡ್ಡದೊಂದು ಹೂ ಮಾಲೆಯನ್ನು ವಾಲಿಯ ಶರೀರದ ಮೇಲೆ ಇಟ್ಟು, ಪಲ್ಲಕಿ ಹೋಗುವ ದಾರಿಯುದ್ದಕ್ಕೂ ಹೂಗಳನ್ನು ಚೆಲ್ಲುವಂತೆ ವಾನರರಿಗೆ ಆಜ್ಞೆ ಮಾಡಿದನು. ಹೀಗೆ ವಾಲಿಯ ಶವವು ಹೊರಡಲು, ಮುಂದಿನಿಂದ ಅಗ್ನಿಯೊಂದಿಗೆ

ಅಂಗದನು ಸಾಗಿದನು. ವಾಲಿಯ ಬಂಧುಗಳಾ
ಸ್ತ್ರೀಯರೂ ಪಲ್ಲಕಿಯ ಹಿಂದೆ ನಡೆದರು. ಒಂದ
ಕಿರುದೊರೆಯ ಸಮೀಪದಲ್ಲಿ ಮರಳಿನ ದಂಡೆಯ
ಮೇಲೆ ಚಿತಿಯನ್ನು ಏರ್ಪಡಿಸಿದ್ದರು. ವಿಧಿಪ್ರಕಾ
ವಾಲಿಯ ಶವಕ್ಕೆ ಅಗ್ನಿ ಸಂಸ್ಕಾರವಾಯಿತು. ದಹ
ವಾದ ಮೇಲೆ ಅಂಗದನಿಂದ ತರ್ಪಣಗಳನ್ನು
ಕೊಡಿಸಿದರು. ರಾಮನೇ ಸಮೀಪವಿದ್ದು ಎಲ್ಲ
ಕರ್ಮಕಾಂಡಗಳನ್ನೂ ಮಾಡಿಸಿದನು.

ಸುಗ್ರೀವನು ಸ್ನಾನಮಾಡಿ ಒದ್ದೆ ಬಟ್ಟೆಯೊಂದಿ
ರಾಮಲಕ್ಷ್ಮಣರ ಬಳಿಗೆ ಬಂದನು. ಆಗ ಅವನೊಂ
ಗಿದ್ದ ಹನುಮಂತನು ರಾಮನನ್ನು ನೋಡಿ ವಿನಯ
ದಿಂದ, "ರಾಮಾ, ನಿನ್ನ ದಯದಿಂದ ಸುಗ್ರೀವನಿ
ರಾಜ್ಯವು ಸಿಗುವ ಹಾಗಾಯಿತು. ನಿನ್ನ ಅಪ್ಪಣೆ
ಯಾದರೆ ಇನ್ನು ಅವನು ಕಿಷ್ಕಿಂಧೆಯನ್ನು ಪ್ರವೇ
ಮಾಡಿ ಎಷ್ಟೋ ಕೆಲಸಗಳನ್ನು ಮಾಡಬೇಕು. ಅವನ
ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕ ಮಾಡಿಕೊಂಡು
ನಿನ್ನನ್ನು ತಕ್ಕ ರೀತಿಯಲ್ಲಿ ಸನ್ಮಾನಿಸುತ್ತಾನೆ. ನೀನ
ಕಿಷ್ಕಿಂಧೆಗೆ ಬಂದು, ನಿನ್ನ ಕೈಯಿಂದಲೇ ಸುಗ್ರೀವನ
ಪಟ್ಟಾಭಿಷೇಕ ಮಾಡಿ ವಾನರರಿಗೆ ಸಂತೋ
ಉಂಟುಮಾಡಬೇಕು" ಎಂದನು.

ಅದಕ್ಕೆ ರಾಮನು, "ಹನುಮಂತಾ, ನಾ
ತಂದೆಯ ಆಜ್ಞೆಯ ಪ್ರಕಾರ ಹದಿನಾಲ್ಕು ವ
ವನವಾಸ ಮಾಡಬೇಕಾಗಿ ಬಂದವನು. ಈ ವ್ರ
ನಿಯಮದ ಪ್ರಕಾರ ನಾನು ಗ್ರಾಮಗಳನ್ನೂ ಪಟ್ಟ
ಗಳನ್ನೂ ಪ್ರವೇಶಮಾಡಕೂಡದು. ನೀವೇ ಸುಗ್ರೀ
ನನ್ನು ಕರೆದುಕೊಂಡು ಹೋಗಿ ಅವನಿಗೆ ವೈಭ
ದಿಂದ ಪಟ್ಟಾಭಿಷೇಕ ಮಾಡಿರಿ. ಹಾಗೆಯೇ ಅಂ
ಕುಮಾರನಿಗೂ ಯುವರಾಜ ಪಟ್ಟಾಭಿಷೇಕ ಮಾ
ಬಿಡಿ. ಶ್ರಾವಣ ಮಾಸವು ಪ್ರಾರಂಭವಾಗಿದೆ. ಇ
ನಾಲ್ಕು ತಿಂಗಳವರೆಗೂ ವರ್ಷಾಕಾಲವಾಗಿದೆ. ಇ
ಯುದ್ಧಕ್ಕೆ ತಕ್ಕ ಕಾಲವಲ್ಲ. ನೀವೆಲ್ಲರೂ ಕಿಷ್ಕಿಂ





ಹೋಗಿಬಿಡಿ. ನಾನೂ ಲಕ್ಷ್ಮಣನೂ ಈ ಪರ್ವತದ ಮೇಲಿರುತ್ತೇವೆ. ಇಲ್ಲಿ ಇರುವ ಗುಹೆ ವಿಶಾಲವಾಗಿ, ಸೌಕರ್ಯವಾಗಿದೆ, ಬದಿಯಲ್ಲೇ ನೀರಿನ ಕೊಳವೂ ಕೊಳದಲ್ಲಿ ಹೂಗಳೂ ಇವೆ. ಮತ್ತೆ ಕಾರ್ತಿಕಮಾಸವು ಪ್ರಾರಂಭವಾದಾಗ, ಸೀತೆಯನ್ನು ಹುಡುಕಿಸುವ ಪ್ರಯತ್ನ ಮಾಡೋಣ" ಎಂದು ಹೇಳಿದನು.

ಈ ವಿಧವಾಗಿ ರಾಮನ ಅಪ್ಪಣೆ ಪಡೆದ ಮೇಲೆ. ಸುಗ್ರೀವನು ವಾನರರೊಂದಿಗೆ ಕಿಷ್ಕಿಂಧೆಯನ್ನು ಪ್ರವೇಶಿಸಿದನು. ವಾನರರಲ್ಲಿ ಮತ್ತೆ ಸಂಭ್ರಮ ಸಂಚಾರವಾಯಿತು. ಎಲ್ಲೆಲ್ಲಿಯೂ ಹೊಸ ಚೇತನ ಕಾಣತೊಡಗಿತು. ಸುಗ್ರೀವನು ತನ್ನನ್ನು ನೋಡಲು ಬಂದ ವಾನರರನ್ನು ಸ್ವತಃ ಸವಿಯಾಗಿ ಮಾತಾಡಿಸಿದನು. ಆಮೇಲೆ ಅವನು ತಾರೆಯನ್ನು ಸಮಾಧಾನ ಪಡಿಸಲು ವಾಲಿಯ ಅಂತಃಪುರಕ್ಕೆ ಹೋದನು.

ಸುಗ್ರೀವನ ದೊಡ್ಡ ಗುಣವನ್ನು ನೋಡಿ ತಾರೆ ಸಮಾಧಾನಗೊಂಡು, ಅವನ ಪಟ್ಟಾಭಿಷೇಕಕ್ಕೆ ಸುಮುಖಿಯಾದಳು. ಸುಗ್ರೀವನು ವಾಲಿಯ ಅಂ ಪುರದಿಂದ ಹಿಂದಿರುಗಿ ಬಂದಮೇಲೆ, ವಾನರರು ಅ ಮುಂದೆ ಬಂಗಾರದ ಅಲಂಕಾರಗಳನ್ನು ತಂದಿಟ್ಟ ಬಿಳಿಯ ಕೊಡೆಯನ್ನು ಹಿಡಿದು, ಚಾಮರಗಳ ಬೀಸ ತೊಡಗಿದರು. ಸುಗ್ರೀವನು ರಾಜೋಚಿತವ ತನ್ನನ್ನು ಅಲಂಕರಿಸಿಕೊಂಡನು. ಎಲ್ಲಾ ಬಗೆ ಮಣಿಗಳೂ, ಸಮಸ್ತ ತರುಲತೆಗಳ ಬೀಜಗಳ ಔಷಧಗಳೂ, ಪುಷ್ಪಚಂದನ ಕುಂಕುಮ ಅಕ್ಷತೆಗಳ ಜೇನು ತುಪ್ಪ, ಮೊಸರು ಮುಂತಾದ ಎಲ್ಲಾ ಪ ಗಳೂ ಅಣಿಯಾದುವು. ಕಾಡು ಹಂದಿಯ ಚ ದಿಂದಾದ ಪಾದರಕ್ಷೆಗಳನ್ನು ಸುಗ್ರೀವನಿಗಾ ತಯಾರು ಮಾಡಿದರು.

ತರುವಾಯ ಬ್ರಾಹ್ಮಣರು ಅಗ್ನಿಹೋತ್ರವ ಬೆಳಗಿಸಿ, ಹೋಮಕಾರ್ಯಗಳನ್ನು ಮಾ ವೇದೋಕ್ತ ವಿಧಿಯಿಂದ ಸುಗ್ರೀವನಿಗೆ ಪಟ್ಟಾಭಿ ಮಾಡಿದರು. ಗಜ, ಗವಾಕ್ಷ, ಗವಯ, ಶರಭ, ಗ ಮಾದನ, ಮೈಂದ, ದ್ವಿವಿಧ, ಹನುಮಂತ, ಜಾ ವಂತ, ನಳ ಎಂಬ ಇಷ್ಟುಮಂದಿ ವಾನರ ಪ್ರಮುಖ ಬಂಗಾರದ ಕಲಶಗಳಲ್ಲಿಯ ಜಲವನ್ನು ಎ ಕೊಂಬಿನ ಮೂಲಕವಾಗಿ ಸುಗ್ರೀವನಿಗೆ ಅಭಿ ಮಾಡಿದರು. ಅನಂತರ ರಾಮನು ಹೇಳಿದ ಪ್ರ ಸುಗ್ರೀವನು ಅಂಗದನಿಗೆ ಯುವರಾಜ ಪಟ ಷೇಕವನ್ನೂ ಮಾಡಿದನು. ಹಾಗೆ ಮಾಡಿದುದ ನೋಡಿ ವಾನರರೆಲ್ಲರೂ ಸುಗ್ರೀವನನ್ನು ಮನ ಹೊಗಳಿ ಮೆಚ್ಚಿದರು.


ಹೀಗೆ ಪಟ್ಟಾಭಿಷೇಕ ಕಾರ್ಯಕ್ರಮ ಗ ಮುಗಿದು ರಾಜನಾದ ಸುಗ್ರೀವನು ಆ ಕೂ ರಾಮನಬಳಿಗೆ ಹೋಗಿ, ನಡೆದ ಎಲ್ಲಾ ಸಮಾ ಗಳನ್ನೂ ಹೇಳಿ, ಅವನ ಅಪ್ಪಣೆ ಪಡೆದು ಹಿಂದಿ ಕಿಷ್ಕಿಂಧೆಗೆ ಬಂದನು. ಬಹಳಕಾಲ ಕಷ್ಟಪಟ್ಟ ಸುಗ್ರೀವನಿಗೆ ಬೇಕಾದ ಎಲ್ಲಾ ಸುಖಗಳೂ

ಲಭಿಸಿದುವು. ತನ್ನ ಹೆಂಡತಿಯಾದ ರುಮೆಯೊಂದಿಗೆ ದಿವಸಗಳನ್ನು ನಿಮಿಷಗಳಂತೆ ಕಳೆಯುತೊಡಗಿದನು.

ರಾಮಲಕ್ಷ್ಮಣರು ಮಳೆಗಾಲವನ್ನು ಕಳೆಯಲು ನಿಶ್ಚಯಿಸಿಕೊಂಡಿದ್ದ ಗುಹೆ ಪ್ರಸ್ರವಣ ಪರ್ವತದ ಮೇಲಿದ್ದಿತು. ಅದು ತುಂಬ ಸುಂದರವಾದ ಪರ್ವತ. ಆ ಗುಹೆಯ ಸಮೀಪದಲ್ಲೇ ಅಂದವಾಗಿ, ಹಂಸ ಕಾರಂಡಕಾದಿ ಜಲಚರಪಕ್ಷಿಗಳಿಂದ ಕೂಡಿದ ಒಂದು ತಾವರೆ ಕೊಳವಿದ್ದಿತು. ಗುಹೆಯ ದ್ವಾರವು ನೈಋತಿ ದಿಕ್ಕಿಗೆ ಇದ್ದುದರಿಂದ ಮಳೆಯ ಹನಿಗಳು ಒಳಗೆ ಹಾರುವ ತೊಂದರೆ ಇರಲಿಲ್ಲ. ಪೂರ್ವದಿಕ್ಕಿನಿಂದ ಬೀಸುವ ತಣ್ಣಗಿನ ಗಾಳಿಯೂ ಒಳಗೆ ನುಸುಳು ವಂತಿಲ್ಲ. ಗುಹೆಯ ಮುಂದೆ ಸುಂದರವಾದ ಸಮತಲ ಪ್ರದೇಶವಿತ್ತು. ಸ್ವಲ್ಪ ದೂರದಲ್ಲಿ ಚಿಕ್ಕದೊಂದು ನದಿ ಕೂಡಾ ಪ್ರವಹಿಸುತ್ತಿದ್ದಿತು. ಕಿಷ್ಕಿಂಧೆ ಅಲ್ಲಿಗೆ ಬಹಳ ದೂರವೇನಲ್ಲ. ಕಿಷ್ಕಿಂಧೆಯಲ್ಲಿ ನಡೆಯುವ ಕೋಲಾಹಲ ಧ್ವನಿಗಳು ಗುಹೆಯೊಳಗೆ ಸ್ಪಷ್ಟವಾಗಿ ಕೇಳಿಸುತ್ತಿದ್ದುವು.

ಅಂತಹ ಸುಂದರ ಮತ್ತು ಸೌಕರ್ಯದಿಂದೊಡ ಗೂಡಿದ ಸ್ಥಳದಲ್ಲಿರುತ್ತ ರಾಮನು, ಸಂತೋಷದಿಂದ ಕಾಲಕಳೆಯುವ ಸ್ಥಿತಿಯಲ್ಲಿರಲಿಲ್ಲ. ಸೀತೆಯ ವಿರಹ ತಾಪವು ಅವನನ್ನು ಕೊರೆದುಕೊಂಡಿದ್ದಿತು. ರಾವಣ ನನ್ನು ಕಂಡುಹಿಡಿದು ಕೊಲ್ಲುವುದಕ್ಕೆ ಸುಗ್ರೀವನು ಸಹಾಯ ಮಾಡುವನೆಂಬ ಆಶೆಯನ್ನಿಟ್ಟುಕೊಂಡು, ಶರತ್ಕಾಲ ಯಾವಾಗ ಬರುವುದೋ ಎಂದು ಇದಿರು ನೋಡುತ್ತಿದ್ದನು.

ಅಂತೂ ಕಡೆಗೆ ಮಳೆಗಾಲ ಹಿಂದೆ ಹೋಯಿತು. ಆಕಾಶವು ಶುಭ್ರವಾಯಿತು. ರಾಮನಂತೆ ಹನು ಮಂತನೂ ಕಾಲವನ್ನು ಗಮನಿಸಿಕೊಂಡಿದ್ದನು. ಮಳೆ ಗಾಲ ಕಳೆದು ದಿನಗಳುರುತ್ತಿದ್ದರೂ ಸುಗ್ರೀವನು ರಾಮಕಾರ್ಯವನ್ನು ಮರೆತುಹೋದ ಹಾಗೆ ಹನು ಮಂತನಿಗೆ ತೋರಿತು. ರಾಜನಾದಂದಿನಿಂದ



ಸುಗ್ರೀವನು ರಾಜ್ಯಭಾರವನ್ನೆಲ್ಲಾ ಮಂತ್ರಿಗಳ ಮೇಲೆ ಬಿಟ್ಟುಕೊಟ್ಟು, ತನ್ನ ಕಾಲವನ್ನೆಲ್ಲಾ ಸ್ತ್ರೀಯರ ನಡುವೆಯೇ ಕಳೆಯುವುದರಲ್ಲಿ ಮಗ್ನನಾಗಿದ್ದನು. ಅವನು ತನ್ನ ಅಣ್ಣನ ಹೆಂಡತಿ ತಾರೆಯನ್ನು ಕೂಡಾ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡು ಸಂತೋಷ ಸಮುದ್ರದಲ್ಲಿದ್ದನು.

ಇದನ್ನು ಗಮನಿಸಿಕೊಂಡಿದ್ದ ಹನುಮಂತನು, ಒಂದುದಿನ ತಾನೇ ಸುಗ್ರೀವನ ಬಳಿಗೆ ಹೋಗಿ, "ವಾನರರಾಜನೇ. ನಿನಗೀಗ ರಾಜ್ಯವೂ, ಸಕಲ ವೈಭವಗಳೂ ಬಂದಿವೆ. ಈ ಸಮಯದಲ್ಲಿ ಸ್ನೇಹಿತರ ಮೇಲಿರುವ ನಿನ್ನ ಬಾಧ್ಯತೆಯನ್ನು ಕೂಡಾ ನಡೆಸಿ ಕೊಡಬೇಕು. ಸ್ವಂತ ಕೆಲಸಗಳು ಕೆಟ್ಟು ಹೋಗುವ ಹಾಗೆ ಬಿಟ್ಟಾದರೂ ಸ್ನೇಹಿತರ ಕೆಲಸವನ್ನು ಮೊದಲು ಮಾಡುವವನು. ಎಂದಿಗೂ ಕೆಡಲಾರನು. ನಾವೀಗ ರಾಮನಿಗಾಗಿ ಸೀತಾದೇವಿಯನ್ನು ಹುಡುಕಿಸ ಬೇಕಾಗಿದೆ. ಈ ಕೆಲಸ ಇಷ್ಟರಲ್ಲೇ ಪ್ರಾರಂಭವಾಗಿಬಿಡ

ಬೇಕಿತ್ತು. ರಾಮನು ಸಾವಧಾನವುಳ್ಳ, ಒಳ್ಳೆಯವನಾದುದರಿಂದ ತಾಳ್ಮೆಯನ್ನು ವಹಿಸಿಕೊಂಡಿದ್ದಾನೆ. ಇನ್ನು ತಡಮಾಡಬೇಡ. ಸೀತಾದೇವಿಯನ್ನು ಹುಡುಕಲು ವಾನರರನ್ನು ಕಳುಹಿಸುವ ಕಾರ್ಯಕ್ಕೆ ಆಜ್ಞೆ ಮಾಡು" ಎಂದನು.

ಹನುಮಂತನ ಎಚ್ಚರಿಕೆಯ ಮಾತುಗಳು ಸುಗ್ರೀವನನ್ನು ಬಡಿದೆಬ್ಬಿಸಿಬಿಟ್ಟಿತು. ಕೂಡಲೇ ಅವನು ಅವಸರವಾಗಿ ನೀಲನನ್ನು ಕರೆಯಿಸಿ ಎಂಟು ದಿಕ್ಕುಗಳಲ್ಲಿಯೂ ಇರುವ ವಾನರ ಸೇನೆಗಳನ್ನೆಲ್ಲಾ ಕಿಷ್ಕಿಂಧೆಗೆ ಬರಮಾಡಬೇಕೆಂದು ಆಜ್ಞೆ ಮಾಡಿದನು. ಹದಿನೈದು ದಿನಗಳೊಳಗೆ ಬಂದು ಸೇರದಿರುವ ವಾನರರಿಗೆ ಮರಣ ದಂಡನೆ ಕೊಡುವುದಾಗಿ ಪ್ರಕಟಪಡಿಸಿದನು. ಸುಗ್ರೀವನ ಈ ಆಜ್ಞೆ ಎಲ್ಲಾ ವಾನರರಿಗೂ ಬಹುಬೇಗನೇ ಮುಟ್ಟಿತು.

ಇಷ್ಟರೊಳಗೆ ಸಮಯ ಮೀರಿದುದರಿಂದ ರಾಮನ ತಾಳ್ಮೆಯೂ ತುಂಬಿ ನಿಂತಿತ್ತು. ಮಳೆಗಾಲ ಕಳೆದರೂ ಸುಗ್ರೀವನು ತನ್ನ ಬಳಿಗೆ ಬಾರದಿರುವುದನ್ನು ನೋಡಿ ರಾಮನು ತಳಮಳಿಸತೊಡಗಿದನು. ಅವನು ಲಕ್ಷ್ಮಣನನ್ನು ಕುರಿತು, "ನೋಡಿದೆಯಾ ಲಕ್ಷ್ಮಣಾ, ಶರತ್ಕಾಲವು ಪ್ರಾರಂಭವಾದ ಕೂಡಲೇ ಸೀತೆಯನ್ನು ಹುಡುಕಿಸುತ್ತೇನೆಂದು ಸುಗ್ರೀವನು ಮಾತು ಕೊಟ್ಟು, ತನ್ನ ಕಾರ್ಯವಾದ ಮೇಲೆ ತನ್ನ ಮಾತನ್ನು ಮರೆತು ಉಪೇಕ್ಷೆಯಿಂದಿದ್ದಾನೆ. ನೀನು ಅವನ ಬಳಿಗೆ ಹೋಗಿ ನಾನು ಕೋಪದಿಂದಿರುವ ಸಂಗತಿಯನ್ನು ಹೇಳು. ವಾಲಿಯನ್ನು ಕಳುಹಿಸಿದ ದಾರಿ ಸುಗ್ರೀವನಿಗೂ ಬೇಕೇ ಎಂದು ಕೇಳು. ಮೊದಲು ನಾನು ವಾಲಿಯೊಬ್ಬನನ್ನೇ ಕೊಂದೆ. ಈಗ ಸುಗ್ರೀವನು ಮಾತು ತಪ್ಪಿದರೆ ಅವನನ್ನೂ ಅವನ ಬಂಧುಗಳನ್ನು ಕೂಡಾ ಕೊಲ್ಲುತ್ತೇನೆ. ಇದನ್ನೆಲ್ಲಾ ಅವನಿಗೆ ಹೇಗೆ ಹೇಳಬೇಕೋ ಹೇಳಿ ಬಾ" ಎಂದನು.

ಲಕ್ಷ್ಮಣನು ಕೂಡಾ ಸುಗ್ರೀವನ ಮೇಲೆ ಬಹಳ ಕೋಪಗೊಂಡು, "ಹುಂ, ಈ ಸುಗ್ರೀವನು ತನಗೆ ರಾಜ್ಯ ಹೇಗೆ ಬಂತೆಂಬುದನ್ನು ಮರೆತುಬಿಟ್ಟ. ಇನ್ನು ಮೇಲೆ ಅವನ ರಾಜ್ಯ ದಕ್ಕಲಾರದು. ನಾನು ಈಗಲೇ ಹೋಗಿ ಆ ಸುಗ್ರೀವನನ್ನು ಕೊಂದು, ಅಂಗದನ ಸಹಾಯದಿಂದ ಸೀತಾದೇವಿಯನ್ನು ಹುಡುಕಿಸುತ್ತೇನೆ" ಎನ್ನುತ್ತ ಹೊರಡುವಾಗ, ರಾಮನು ಅವನನ್ನು ತಡೆದು, "ತಾಳು ಲಕ್ಷ್ಮಣಾ, ದುಡುಕಿ ಹಾಗೇನೂ ಮಾಡಿಬಿಡಬೇಡ. ನಮಗೂ ಅವನಿಗೂ ನಡುವೆ ಇರುವ ಸ್ನೇಹವನ್ನು ಮರೆಯಬೇಡ. ಸುಗ್ರೀವನೊಂದಿಗೆ ಒಳ್ಳೆಯ ರೀತಿಯಲ್ಲೇ ಮಾತಾಡು. ಅವನು ಉದಾಸೀನನಾಗಿರುವನೇ ಹೊರತು ನಮಗೆ ಅಪಚಾರವೇನೂ ಮಾಡಲಿಲ್ಲವಷ್ಟೇ?" ಎಂದು ಎಚ್ಚರಿಕೆ ಹೇಳಿ ಕಳುಹಿಸಿದನು.





May 1975

ವೀರಹನುಮಾನ್

ರಾಮನ ಮಾತು ಕೇಳಿ ಲಕ್ಷ್ಮಣನು ತುಸು ಶಾಂತನಾಗಿ ಕಿಷ್ಕಿಂಧೆಗೆ ಹೊರಟನು. ಆಗ ಅವನು ತನ್ನ ಭುಜದ ಮೇಲೆ ಬಿಲ್ಲನ್ನು ತಗಲಿಸಿಕೊಂಡಿದ್ದನು. ಬಾಣ ತುಂಬಿದ ಬತ್ತಳಿಕೆಯೂ ಹೆಗಲಲ್ಲಿದ್ದಿತು. ಸುಗ್ರೀವನ ಬಳಿಗೆ ತಾನು ಹೋಗಿ ಏನು ಹೇಳಬೇಕು, ಅದಕ್ಕೆ ಸುಗ್ರೀವನು ಏನು ಉತ್ತರ ಕೊಡುತ್ತಾನೆ, ಆಗ ತಾನು ಯಾವ ರೀತಿಯಾಗಿ ಮಾತಾಡಬೇಕು ಎಂಬುದನ್ನೆಲ್ಲ ಆಲೋಚಿಸುತ್ತ ಬೇಗಬೇಗ ನಡೆಯುತ್ತಿದ್ದನು.

ಕಿಷ್ಕಿಂಧೆ ಸಮೀಪವಾದಂತೆ ದೂರದಿಂದ ಲಕ್ಷ್ಮಣನನ್ನು ನೋಡಿ ಅಲ್ಲಿಯ ವಾನರರು ಯಾವನೋ ಶತ್ರು ಮನುಷ್ಯನು ಬರುತ್ತಿದ್ದಾನೆಂದುಕೊಂಡು ಕಲ್ಲುಬಂಡೆಗಳನ್ನೂ ಮರಗಳನ್ನೂ ಕೈಗೆತ್ತಿಕೊಂಡು ಯುದ್ಧ ಮಾಡಲು ಸಿದ್ಧರಾಗತೊಡಗಿದರು. ಅದನ್ನು ನೋಡಿ ಲಕ್ಷ್ಮಣನಿಗೆ ಇನ್ನಷ್ಟು ಕೋಪ ಏರತೊಡಗಿತು. ಅವನ ಕಣ್ಣು ಮುಖಭಾವಗಳಲ್ಲಿ ತಾಂಡವಿಸುವ ಕೋಪವನ್ನು ನೋಡಿ ಅವನ ಮೇಲೆ ಬೀಳಲು ಬಂದ ವಾನರರಿಗೆ ದಿಗಿಲಾಯಿತು. ಅವರು ತಮ್ಮ ಕೈಯಲ್ಲಿದ್ದುದನ್ನೆಲ್ಲ ಕೆಳಕ್ಕೆ ಚೆಲ್ಲಿ ಸುಗ್ರೀವನ ಬಳಿಗೆ ಓಡಿದರು. ಅಷ್ಟರಲ್ಲಿ ಕೆಲವರು ಲಕ್ಷ್ಮಣನ ಗುರುತು ಹಿಡಿದು ಇನ್ನಷ್ಟು ಹೆದರಿ ಸುಗ್ರೀವನ ಬಳಿಗೆ ಹೋಗಿ ಲಕ್ಷ್ಮಣನು ಕೋಪದಿಂದ ಬರುತ್ತಿರುವ ಸಂಗತಿಯನ್ನು ಅವಸರವಸರವಾಗಿ ಹೇಳಿದರು. ಆಗ ತಾರೆಯೊಂದಿಗೆ ಸರಸಾಲಾಪದಲ್ಲಿ ಮೈಮರೆತಿದ್ದ ಸುಗ್ರೀವನಿಗೆ ಅದಾವುದೂ ಕೇಳಿಸಲಿಲ್ಲ.

ಆದರೆ ಅಂಗದನು ಸಂಗತಿ ಅರ್ಥ ಮಾಡಿಕೊಂಡು ಹೆದರುತ್ತಾ ಲಕ್ಷ್ಮಣನ ಇದಿರಿಗೆ ಬಂದನು. ಅವನನ್ನು ನೋಡಿ ಲಕ್ಷ್ಮಣನು, "ಹುಡುಗಾ, ನಾನು ಬಂದಿರುವೆನೆಂದು ಸುಗ್ರೀವನಿಗೆ ತಿಳಿಸು. ರಾಮನು ಬಹಳ ದುಃಖದಲ್ಲಿರುವುದರಿಂದ. ನಾನು ಬಂದೆನೆಂದು ಹೇಳು." ಎಂದನು.

ಅಂಗದನು ಸುಗ್ರೀವನ ಬಳಿಗೆ ಓಡಿಹೋಗಿ, ಲಕ್ಷ್ಮಣನು ಮಾತಾಡಲು ಬಂದಿರುವನೆಂದೂ, ತುಂಬ ಕೋಪದಲ್ಲಿರುವನೆಂದೂ ಹೇಳಿದನು. ಅಂಗದನ ಮಾತಿನಿಂದ ಸುಗ್ರೀವನು ಜರ್ರನೆ ಅರಿವಿಗೆ ಬಂದವ

೭. ಸುಗ್ರೀವನ ಸಹಾಯ



ನಾಗಿ, "ಓಹೋ! ಲಕ್ಷ್ಮಣನು ಕೋಪದಿಂದ ಬಂದಿರುವನೇ? ನಾನು ಯಾವ ತಪ್ಪು ಮಾತುಗಳನ್ನೂ ಹೇಳಲಿಲ್ಲವಲ್ಲಾ? ತಪ್ಪು ಕೆಲಸ ಕೂಡ ನಾನು ಮಾಡಲಿಲ್ಲ. ಹಾಗಿರುವಾಗ ಲಕ್ಷ್ಮಣನಿಗೆ ನನ್ನ ಮೇಲೆ ಕೋಪವೇಕೆ ಬಂದಿರಬೇಕು? ನನ್ನ ಶತ್ರುಗಳಾರೋ ನನ್ನ ಮೇಲೆ ಅವನ ಹತ್ತಿರ ಏನೋ ಚಾಡಿ ಹೇಳಿರಬೇಕು. ಅದಕ್ಕಾಗಿ ನಾನು ಹೆದರುವೆನೆಂದು ಯಾರೂ ಭಾವಿಸಬೇಡಿ. ಸ್ನೇಹಿತರಾಗಿರುವವರಿಗೆ ನಿಷ್ಕಾರಣವಾಗಿ ಕೋಪ ಬಂದರೆ ಯಾರಿಗಾದರೂ ಸಂಕಟವಾಗುತ್ತದಷ್ಟೆ? ನನಗಿರುವ ಭಯವೇನೆಂದರೆ, ರಾಮನು ನನಗೆ ಮಾಡಿದ ಉಪಕಾರಕ್ಕೆ ತಕ್ಕುದಾದ ಪ್ರತ್ಯುಪಕಾರ ನಾನಿನ್ನೂ ಮಾಡಿಲ್ಲ. ಅದಕ್ಕಾಗಿ ರಾಮನ ಕೋಪಕ್ಕೆ ಹೆದರಬೇಕಾಗಿದೆ. ಅವನಿಗೆ ಕೋಪ ಬಾರದಿದ್ದರೆ ಲಕ್ಷ್ಮಣನಿಗೂ ಕೋಪ ಬರಲಿಕ್ಕಿಲ್ಲ" ಎಂದು ತನ್ನ ಸುತ್ತಲೂ ಇರುವವರೊಂದಿಗೆ ಹೇಳಿದನು.

ಆಗ ಬುದ್ಧಿವಂತನಾದ ಹನುಮಂತನು ಉಳಿ
ಮಂತ್ರಿಗಳ ಸಮಕ್ಷಮದಲ್ಲಿ ಸುಗ್ರೀವನೊಂದಿಗೆ
"ರಾಜಾ, ನೀನು ರಾಮನು ಮಾಡಿದ ಉಪಕಾರವನ್ನು
ಸ್ಮರಿಸಬೇಕಾದುದು ಸಹಜವೇ. ಸ್ವಲ್ಪ ಕಾಲ
ಮೈಮರೆತು ಕಾಲಗತಿಯನ್ನು ಗಮನಿಸದೆ ಬಿಟ್ಟುದ
ಸ್ವಲ್ಪ ತಪ್ಪಾಯಿತು. ಶರದೃತುವು ಪ್ರವೇಶಿಸಿಬಿಟ್ಟಿದೆ
ಯುದ್ಧದ ಪ್ರಯತ್ನಗಳಿಗೆಲ್ಲ ಇದೇ ತಕ್ಕುದಾದ ಕಾಲ
ಅದನ್ನು ನೆನಪು ಮಾಡಲಿಕ್ಕಾಗಿಯೇ ಲಕ್ಷ್ಮಣನು
ಬಂದಿರುತ್ತಾನೆ. ಹೆಂಡತಿಯನ್ನು ಕಳೆದುಕೊಂ
ದುಃಖದಲ್ಲಿರುವ ರಾಮನು, ಲಕ್ಷ್ಮಣನ ಮೂಲ
ವಾಗಿ ಕಟುವಾಗಿ ನಿನ್ನನ್ನು ಮಾತಾಡಿಸಿದರೂ ನೀನು
ಸಹಿಸಿಕೊಳ್ಳಬೇಕು. ದುಡುಕುತನದಿಂದ ನೀನು
ಕೋಪಿಸಿ ಏನಾದರೂ ಹೇಳಿಬಿಡಬಾರದು. ಕರ್ತವ್ಯ
ವನ್ನು ಮರೆತು ಸುಮ್ಮನಿದ್ದ ತಪ್ಪೊಂದನ್ನು ಮಾಡಿರು
ವುದರಿಂದ, ಈಗ ಎಚ್ಚರಿಕೆ ಕೊಡಲು ಬಂದಿರು
ಲಕ್ಷ್ಮಣನನ್ನು ಒಳ್ಳೆಯ ರೀತಿಯಲ್ಲಿ ಸಮಾಧಾನಪಡಿ
ಸುಮುಖನನ್ನಾಗಿ ಮಾಡುವುದರ ಹೊರತು ಬೇ
ದಾರಿಯಿರುವಂತೆ ನನಗೆ ಕಾಣುವುದಿಲ್ಲ. ಮಂ
ಸ್ಥಾನದಲ್ಲಿ ನಿನ್ನ ಹಿತವನ್ನು ಬಯಸಿ ಈ ಮಾ
ಹೇಳುತ್ತಿದ್ದೇನೆ. ನೀನು ಈಗಲೇ ನಿನ್ನ ಮಗನನ್ನು
ಬಂಧುವರ್ಗದವರನ್ನೂ ಹಿಂದಿಟ್ಟುಕೊಂಡು ಲಕ್ಷ್ಮ
ಬಳಿಗೆ ಹೋಗಿ ಅವನು ಹೇಳಿದಂತೆ ನಡೆಯುವುದ
ಒಪ್ಪಿಕೋ." ಎಂದನು.

ಕೂಡಲೇ ಸುಗ್ರೀವನು ಲಕ್ಷ್ಮಣನನ್ನು ಒ
ಕರೆದುಕೊಂಡು ಬರಲು ಅಂಗದನನ್ನು ಕಳುಹಿಸಿದ
ಅದರಂತೆ ಅಂಗದನು ಲಕ್ಷ್ಮಣನನ್ನು ಕರೆದುಕೊಂ
ಬರುವಾಗ, ಲಕ್ಷ್ಮಣನು ಕಿಷ್ಕಿಂಧೆಯಲ್ಲಿರುವ ವಾ
ಪ್ರಮುಖರ ಮನೆಗಳನ್ನು ನೋಡುತ್ತ ಸುಗ್ರೀ
ಗೃಹವನ್ನು ಪ್ರವೇಶ ಮಾಡಿದನು. ಆ ಮನೆ ಇ
ಭವನದಂತೆ ಕಂಡುಬಂದಿತು. ಸುಗ್ರೀವನ ಅಂತಃ
ದಿಂದ ವೀಣೆಯ ನಾದವು ಕೇಳಿಬರುತ್ತಿದ್ದಿತು. ಅ





ಸುಂದರಿಯರಾದ ಸ್ತ್ರೀಯರು ಅನೇಕರು ಅಲ್ಲಲ್ಲಿ ಕಂಡುಬಂದರು. ಅದನ್ನೆಲ್ಲ ನೋಡುವಾಗ ಸುಗ್ರೀವನು ದೊಡ್ಡ ಭೋಗಪುರುಷನಂತೆ ಕಾಲ ಕಳೆಯುತ್ತಿದ್ದ ನೆಂಬುದು ಸ್ಪಷ್ಟವಾಗುತ್ತಿದ್ದಿತು. ರಾಮನ ದುಃಖ ವನ್ನೂ ಸುಗ್ರೀವನ ಸುಖವನ್ನೂ ನೆನೆಯುತ್ತ ಲಕ್ಷ್ಮಣನಿಗೆ ಕೋಪವು ಉಕ್ಕುತ್ತಿರಲು ಬಿಲ್ಲಿನ ನಾರನ್ನೆಳೆದು ದೊಡ್ಡ ಧ್ವನಿಯನ್ನೆಬ್ಬಿಸಿದನು. ಆ ಶಬ್ದವು ಮಂದಿರದ ಕೋಣೆಗಳಲ್ಲೆಲ್ಲಾ ಪ್ರತಿಧ್ವನಿ ಕೊಟ್ಟು ಎಲ್ಲರನ್ನೂ ನಡುಗಿಸಿತು.

ಲಕ್ಷ್ಮಣನ ಬಿಲ್ಲಿನ ಧ್ವನಿಯನ್ನು ಕೇಳಿದ ಕೂಡಲೇ ಅವನು ಸಮೀಪಿಸಿಬಿಟ್ಟನೆಂದು ಸುಗ್ರೀವನ ಎದೆ ಡಡಡಡ ಹೊಡೆದುಕೊಳ್ಳತೊಡಗಿತು. ತನ್ನ ನಾಲಗೆ ಒಣಗಿಹೋಗುವುದನ್ನರಿತು ಅವನು ತಾರೆಯೊಂದಿಗೆ, "ತಾರಾ, ಈ ಲಕ್ಷ್ಮಣನು ಬಹಳ ಶಾಂತ ಸ್ವಭಾವ ದವನೆಂದು ಮಾಡಿದ್ದೆ. ಈ ಶಬ್ದ ಕೇಳಿದರೆ ಅವನಿಗೆ ಬಹಳ ಕೋಪ ಬಂದಿರುವ ಹಾಗೆ ಕಾಣುತ್ತದೆ. ಅಷ್ಟು


ಕೋಪ ಬರಲು ಕಾರಣವೇನೋ? ನಾನು ಮ
ಬಾರದಂತಹ ತಪ್ಪು ಏನಾದರೂ ಮಾಡಿದ್ದೇನೆಯೆ
ಯಾವುದಕ್ಕೂ ಒಳ್ಳೆಯದು, ಮೊದಲು ನೀನು ಅ
ಬಳಿಗೆ ಹೋಗಿ ಮಾತಾಡಿಸಿ ಅವನನ್ನು ಪ್ರಸ
ಗೊಳಿಸು. ಆಮೇಲೆ ನಾನು ಬರುತ್ತೇನೆ" ಎಂದ

ಜಾಣೆಯಾದ ತಾರೆ ಕೂಡಲೇ ಲಕ್ಷ್ಮಣನ ಬ
ಬಂದಳು. ಅವಳ ಕಣ್ಣು ಮುಖಭಾವಗಳಲ್ಲಿ ಇನ
ಸುರೆಯು ಮತ್ತು ತೇಲಾಡುತ್ತಿದ್ದಿತು. ಅಂತೆಯ
ಆಗತಾನೇ ಮಂಚದಿಂದೆದ್ದು ಬಂದವಳಂತೆ, ಅಸ್ತವ್ಯ
ವಾದ ಉಡುಗೆ ಆಭರಣಗಳೊಂದಿಗೆ ನಿಂತ ತ
ಯನ್ನು ನೋಡಿ ಲಕ್ಷ್ಮಣನು ತಲೆತಗ್ಗಿಸಿಕೊಂಡ

ತಾರೆ ಅವನೊಂದಿಗೆ, "ಲಕ್ಷ್ಮಣಾ, ನಿನಗೆ ಇ
ಸಿಟ್ಟು ಬರುವಹಾಗೆ ಯಾರು ಮಾಡಿದರು
ಅಷ್ಟೊಂದು ಸಾಹಸ ಯಾರಿಗೆತಾನೇ ಬಂದಿತು?
ಎಂದು ಕೇಳಿದಳು.

"ನೀನು ಗಂಡನ ಹಿತವನ್ನು ಬಯಸುವವಳಾ
ಅದು ನಿನಗೆ ತಿಳಿಯದೇ? ನಿನ್ನ ಗಂಡ ಯಾವಾಗ
ಮದ್ಯಪಾನ ಮಾಡುತ್ತ, ಸ್ತ್ರೀಯರ ನಡುವೆ ಹ
ಚೆಕ್ಕಂದವಾಡುತ್ತ ಧರ್ಮಾರ್ಥಗಳನ್ನು ಸಂಪೂ
ಮರೆತುಹೋದ. ಉಪಕಾರಕ್ಕೆ ಪ್ರತ್ಯುಪ
ಮಾಡದೆ ಬಿಡುವುದೆಂದರೆ, ಧರ್ಮಕ್ಕೂ ಅರ್ಥ
ಹಾನಿ ಮಾಡಿದ ಹಾಗೆಯೇ ಆಯಿತು. ನಮ್ಮ
ಹೀಗೆ ಉಪೇಕ್ಷೆ ಮಾಡಿ ಸುಮ್ಮನಿದ್ದರೆ ನಾವ
ಮಾಡಬೇಕೆಂಬುದನ್ನು ನೀನೇ ಹೇಳು" ಎ
ಲಕ್ಷ್ಮಣನು ತಾರೆಯೊಂದಿಗೆ ಹೇಳಿದನು.

ಅದಕ್ಕೆ ತಾರೆ, "ಲಕ್ಷ್ಮಣಾ, ನಿನ್ನ ಮ
ನಿಜವೇ. ಅದರಲ್ಲಿ ಸ್ವಲ್ಪವೂ ತಪ್ಪಿಲ್ಲ. ಆದರೆ
ಸಾಕ್ಷಿಯಾಗಿ ಸ್ನೇಹಿತನಾದವನು ಸ್ವಲ್ಪ ಮಾತ್ರ
ಗತಿಯನ್ನು ತಪ್ಪಿದುದಕ್ಕೆ ಇಷ್ಟೊಂದು ಕ
ಮಾಡಬಹುದೆ? ಸುಗ್ರೀವನು ನಿಮ್ಮ ಕೆ
ಗುರಿಯಲ್ಲೇ ಇದ್ದಾನೆ. ಸ್ವಲ್ಪ ತಡಮಾಡಿದ್ದು



ಅದಕ್ಕಾಗಿ ನಿನ್ನಂತಹ ಮಹಾಪುರುಷನು ಅಲ್ಪನ ಮೇಲೆ ಆಗ್ರಹ ತೋರಬಾರದು. ಅವನು ನಿಮ್ಮ ಕೆಲಸವನ್ನು ಸ್ವಲ್ಪ ಉದಾಸೀನ ಮಾಡಲು, ನಾನು ಅವನ ಬಳಿಯಲ್ಲಿದ್ದುದೇ ಕಾರಣವಾಗಿದೆ. ನೀನು ಸುಗ್ರೀವನನ್ನು ಕ್ಷಮಿಸಿ ಶಾಂತನಾಗಬೇಕು. ಎಂತೆಂತಹ ಮಹಾಪುರುಷರೇ ಹೆಣ್ಣಿನ ಮೋಹದಲ್ಲಿ ಮೈಮರೆತು ಹೋಗಿರುವಾಗ ಈ ಸುಗ್ರೀವನೆಷ್ಟು ಮಾತ್ರದವನು? ನೀನು ದಯವಿಟ್ಟು ಸುಮುಖನಾಗಿ ಒಳಕ್ಕೆ ಬರಬೇಕು.'' ಎಂದಳು.

ಅವಳು ಮುಂದೆ ಹೋಗಲು ಲಕ್ಷ್ಮಣನು ಅವಳ ಹಿಂದೆ ಹೋದನು. ಸುಗ್ರೀವನು ಮಹಾವೈಭವದಿಂದ ಜಗಜಗಿಸುವ ಆಭರಣಗಳನ್ನೂ, ಪುಷ್ಪಮಾಲಿಕೆಗಳನ್ನೂ ಧರಿಸಿಕೊಂಡು ಸಿಂಹಾಸನದ ಮೇಲೆ ಕುಳಿತಿದ್ದ. ಅವನ ಸುತ್ತಲೂ ಅನೇಕ ಮಂದಿ ಅಪ್ಸರಸಿಯಂತಹ ಸ್ತ್ರೀಯರಿದ್ದರು. ಸುಗ್ರೀವನು ತನ್ನ ಪತ್ನಿ ರುಮೆಯನ್ನು ಆಲಿಂಗಿಸಿಕೊಂಡಿದ್ದವನು ಲಕ್ಷ್ಮಣನನ್ನು ನೋಡಿ ಧಿಗ್ಗನೆದ್ದನು. ಅವನ ವೈಭವವನ್ನು ನೋಡಿ ಲಕ್ಷ್ಮಣನು ಕಾಲರುದ್ರನಂತಾದನು.

ಸುಗ್ರೀವನು ಸಿಂಹಾಸನದಿಂದೆದ್ದು ದಡದಡನೆ ಕೆಳಗಿಳಿದು ನಿಂತನು. ಅವನೊಂದಿಗೆ ಎಲ್ಲ ಸ್ತ್ರೀಯರೂ ಎದ್ದು ನಿಂತರು. ತನಗೆ ನಮಸ್ಕಾರ ಮಾಡುತ್ತ ನಿಂತ ಸುಗ್ರೀವನೊಂದಿಗೆ, ಲಕ್ಷ್ಮಣನು ಹೀಗೆಂದನು :

''ಸುಗ್ರೀವಾ, ನಿನಗೆ ರಾಮನ ಮಾತಿನಂತೆ ಎಚ್ಚರಿಸಲು ಬಂದಿದ್ದೇನೆ. ಹೇಳುವ ಮಾತುಗಳನ್ನು ಕೇಳು. ರಾಮನಿಂದ ನಿನ್ನ ಕೆಲಸವು ತೀರಿಹೋದ ಮೇಲೆ, ನೀನು ರಾಮನ ಕಾರ್ಯವನ್ನು ನೋಡಬೇಕೋ ಬೇಡವೋ? ಕೃತಘ್ನನಾಗುವೆಯಾ? ಅಸತ್ಯವಾದಿಯೆನಿಸುವೆಯಾ? ಸೀತೆಯನ್ನು ಹುಡುಕಿಸಲು ನೀನು ಏನೂ ಮಾಡಲಿಲ್ಲವೇಕೆ? ಹೀಗೆ ಕುಡಿದು ಮೈಮರೆತು ಬಿದ್ದುಕೊಂಡಿರುವುದರ ಅರ್ಥವೇನು? ನೀನು ಇಂಥವನೆಂದು ತಿಳಿದಿದ್ದರೆ ರಾಮನು ನಿನ್ನನ್ನು ವಾನರ ರಾಜನನ್ನಾಗಿ ಮಾಡುತ್ತಿದ್ದನೆ? ಈಗಲೂ ನಿನ್ನನ್ನು ಒಂದೇ ಬಾಣದಿಂದ ವಾಲಿಯ ಬಳಿಗೆ ಕಳುಹಿಸಲು ರಾಮನೇ ಬರಬೇಕಾಗಿಲ್ಲ.''

ತಾರೆ ಮತ್ತೆ ಸುಗ್ರೀವನಿಗೆ ಅಡ್ಡ ನಿಂತು ಲಕ್ಷ್ಮಣನೊಂದಿಗೆ, ''ಲಕ್ಷ್ಮಣಾ, ಸುಗ್ರೀವನು ನೀನು ಹೇಳುವಂತೆ ಕೃತಘ್ನನೂ ದ್ರೋಹಿಯೂ ದುಷ್ಟನೂ ಅಲ್ಲ. ಎಷ್ಟೋ ವರ್ಷಗಳವರೆಗೆ ಕಷ್ಟಗಳನ್ನು ಅನುಭವಿಸಿ ಅನುಭವಿಸಿ, ಕಡೆಗೆ ಈಗತಾನೇ ಸುಖಲಾಲಸನಾಗಿದ್ದಾನೆ. ಮಿತ್ರನ ಈ ತಪ್ಪನ್ನು ನೀನು ಕ್ಷಮಿಸಬಹುದು. ರಾಮನಿಂದಲೇ, ರಾಮನ ಅನುಮತಿ ಪಡೆದೇ ಹೀಗೆ ಸುಖದಲ್ಲಿ ಬಿದ್ದಿದ್ದಾನೆ. ಈಗ ಎಚ್ಚೆತ್ತ ಸುಗ್ರೀವನು ರಾಮನಿಗಾಗಿ ನನ್ನನ್ನೂ ರುಮೆಯನ್ನೂ ತನ್ನ ಸಮಸ್ತವನ್ನೂ ಬಿಟ್ಟುಬಿಡಲು ಸಿದ್ಧನೇ. ಸಂದೇಹಿಸಬೇಡ. ಸೀತೆಯನ್ನು ಹುಡುಕಿಸಿ ರಾಮನ ಕಾರ್ಯವನ್ನು ಸಾಧಿಸುತ್ತಾನೆ. ಅದಕ್ಕಾಗಿ ರಾವಣನೊಂದಿಗೆ ತಾನೇ ಯುದ್ಧ ಮಾಡುತ್ತಾನೆ. ಹಾಗೆ




ನೋಡಿದರೆ ಈಗಾಗಲೇ ಅವನು ರಾಮಕಾರ್ಯಕ್ಕಾಗಿ ವಾನರರಿಗೆಲ್ಲಾ ಸಮಾಚಾರ ಕಳುಹಿಸಿದ್ದಾನೆ. ಅವರೆಲ್ಲ ಬಂದು ಸೇರಬೇಕಾಗಿದೆ. ಅದಕ್ಕಾಗಿ ಸುಗ್ರೀವನಿಟ್ಟ ದಿನವೂ ಇದೇ ದಿನ. ಸುತ್ತುಮುತ್ತಲಿರುವವರೆಲ್ಲರೂ ಇವತ್ತೇ ಬರಬೇಕೆಂದು ಆಜ್ಞೆಯಾಗಿದೆ. ನೀನು ಕೋಪವನ್ನು ಬಿಟ್ಟು ಪ್ರಸನ್ನನಾಗು" ಎಂದಳು.

ತಾರೆಯ ಮಾತುಗಳಿಂದ ಲಕ್ಷ್ಮಣನು ಮೆತ್ತಗಾದನು. ಅವನ ಮುಖದಲ್ಲಿ ಎದ್ದ ಶಾಂತಿಯ ಕಳೆಯನ್ನು ನೋಡಿ, ಸುಗ್ರೀವನ ಮನಸ್ಸು ಸ್ಥಿಮಿತಕ್ಕೆ ಬಂದಿತು. ಆಗ ಅವನು ಮುಂದೆ ಬಂದು ಲಕ್ಷ್ಮಣನೊಂದಿಗೆ, "ಲಕ್ಷ್ಮಣಾ, ನನ್ನಿಂದ ಸ್ವಲ್ಪ ಆಲಸ್ಯವಾಗಿರುವುದಾದರೆ ಕ್ಷಮಿಸು. ಲೋಕದಲ್ಲಿ ತಪ್ಪು ಮಾಡದವರಾರಿದ್ದಾರೆ? ಹಾಗೆ ನನ್ನ ತಪ್ಪನ್ನೂ ಮರೆತುಬಿಡು" ಎಂದನು.

ಲಕ್ಷ್ಮಣನ ಕೋಪ ಸಂಪೂರ್ಣ ಇಳಿದುಹೋಯಿತು. ಅವನು ಸುಗ್ರೀವನನ್ನು ಮೆಚ್ಚಿಕೊಳ್ಳುತ್ತ, "ಸುಗ್ರೀವಾ, ರಾವಣನೊಂದಿಗೆ ಯುದ್ಧ ಮಾಡಲು ನಿನ್ನ ಸಹಾಯವೊಂದಿದ್ದುಬಿಟ್ಟರೆ ಅದಕ್ಕಿಂತ ಹೆಚ್ಚಿನ ಪ್ರತ್ಯುಪಕಾರವೇನು ಬೇಕು? ನೀನು ಈಗಲೇ ನನ್ನೊಂದಿಗೆ ಬಂದು, ಸೀತೆಯನ್ನು ನೆನೆದು ದುಃಖಿಸುತ್ತಿರುವ ರಾಮನನ್ನು ಸಮಾಧಾನಪಡಿಸು." ಎಂದನು.

ಸುಗ್ರೀವನು ತನ್ನ ಪಕ್ಕದಲ್ಲಿದ್ದ ಹನುಮಂತನೊಂದಿಗೆ ಹೀಗೆಂದನು: "ಹನುಮಂತಾ, ಪ್ರಪಂಚದಲ್ಲಿರುವ ಎಲ್ಲಾ ವಾನರರನ್ನೂ ಕರೆಯಲು ದೂತರನ್ನು ಕಳುಹಿಸು. ನಾನು ಈಮೊದಲು ಕಳುಹಿಸಿದ ದೂತರು ಬೇಗನೇ ಬರುವಂತೆ ಅವಸರಪಡಿಸು. ನಡೆಯಲು ಉದಾಸೀನ ಮಾಡುವ ಸೋಮಾರಿಗಳನ್ನು ನನ್ನ ಬಳಿಗೆ ಪ್ರತ್ಯೇಕವಾಗಿ ಎಳೆದು ತರಲಿ. ಇಂದಿನಿಂದ ಹತ್ತು ದಿನಗಳೊಳಗೆ ಇಲ್ಲಿಗೆ ಬಂದು ಸೇರದಿರುವ ವಾನರರಿಗೆ ಮರಣ ದಂಡನೆ ಕೊಡುವೆನೆಂದು ಪ್ರಕಟಪಡಿಸು. ಇದು ನಿಜ" ಎಂದನು. ಕೂಡಲೇ ಹನುಮಂತನು ಸುಗ್ರೀವನ ಆಜ್ಞೆಯನ್ನು ಕಿಷ್ಕಿಂಧೆಯಲ್ಲಿರುವ ವಾನರರ ಮೂಲಕವಾಗಿ ಎಂಟು ದಿಕ್ಕುಗಳಿಗೂ ಕಳುಹಿಸಿದನು.

ಆಮೇಲೆ ಸುಗ್ರೀವನು ಒಂದು ಚಿನ್ನದ ಪಲ್ಲಕಿಯನ್ನು ತರಿಸಿ, ಅದರಲ್ಲಿ ತನ್ನೊಂದಿಗೆ ಲಕ್ಷ್ಮಣನನ್ನೂ ಕೂಡಿಸಿಕೊಂಡು ರಾಮನ ಬಳಿಗೆ ಹೊರಟನು. ಅವನ ಹಿಂದೆ ಅವನ ಪರಿವಾರವೂ ನಡೆಯಿತು. ಹೀಗೆ ಮಹಾ ವೈಭವದಿಂದ ರಾಮನ ಬಳಿಗೆ ಹೊರಟ ಸುಗ್ರೀವನು, ರಾಮನು ಅಷ್ಟು ದೂರದಲ್ಲಿರುವಾಗಲೇ ಪಲ್ಲಕಿಯಿಂದಿಳಿದನು. ಕೈಮುಗಿದುಕೊಂಡೇ ರಾಮನ ಬಳಿಗೆ ಹೋಗಿ, ಅವನ ಕಾಲಿನ ಬುಡದಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಕೂಡಲೇ ರಾಮನು ತನ್ನ ಕಾಲಿಗೆ ಬಿದ್ದ ಸುಗ್ರೀವನನ್ನು ಪ್ರೇಮದಿಂದ ಎಬ್ಬಿಸಿ ಗಾಢಾಲಿಂಗನ ಮಾಡಿಕೊಂಡು, ತನ್ನ ಬಳಿಯಲ್ಲಿ ಕೂಡಿಸಿ ತಾನೂ ಕುಳಿತನು. ಎಲ್ಲರೂ ರಾಮನಿಗೆ ಕೈಮುಗಿದು ಕುಳಿತುಕೊಂಡರು.



ರಾಮನು ಸುಗ್ರೀವನೊಂದಿಗೆ ಕುಶಲ ವಿಚಾರಿಸಿ ಯುದ್ಧಕಾಲವು ಸಮೀಪಿಸಿತೆಂಬುದನ್ನು ಜ್ಞಾಪಕ ಪಡಿಸಿದನು. ಆಗ ಸುಗ್ರೀವನು, "ರಾಮಾ, ವೀರಾಧಿ ವೀರರಾದ ವಾನರರು ಕೋಟಿ ಸಂಖ್ಯೆಯಲ್ಲಿ ನಿನಗೆ ಸಹಾಯ ಮಾಡಲು ಬರುತ್ತಿದ್ದಾರೆ. ಅವರೆಲ್ಲ ಕೂಡಿ ರಾವಣನನ್ನು ಕುಟುಂಬ ಸಹಿತವಾಗಿ ಕೊಂದು ಸೀತೆಯನ್ನು ಹುಡುಕಿ ನಿನಗೆ ತಂದು ಕೊಡುತ್ತಾರೆ." ಎಂದು ತಾನು ಅದುವರೆಗೆ ಮಾಡಿದ ಕೆಲಸಗಳನ್ನು ಅರಿಕೆ ಮಾಡಿದನು. ಅದನ್ನು ಕೇಳಿ ರಾಮನು ಸಂತೋಷದಿಂದ, "ಸುಗ್ರೀವಾ, ನಿನ್ನ ಸಹಾಯದಿಂದ ನಾನು ಶತ್ರುವನ್ನು ಕೊಲ್ಲಬಲ್ಲೆ" ಎಂದನು.

ಆ ಸಮಯದಲ್ಲಿ ಆಕಾಶದಲ್ಲಿ ಬಹಳ ಎತ್ತರದ ವರೆಗೆ ಧೂಳಿ ಏಳುತ್ತಿರುವುದನ್ನು ನೋಡಿದರು. ಅದು ಗುಂಪುಗುಂಪಾಗಿ ವಾನರರ ಸಮೂಹವು ಅಲ್ಲಿಗೆ ಬರುವಾಗ ಅವರ ಪಾದಾಘಾತದಿಂದ ಏಳುವ ಧೂಳು. ಎಲ್ಲೆಲ್ಲಿಯ ನದೀತೀರಗಳಿಂದ, ಸಮುದ್ರ ತೀರಗಳಿಂದ, ಬೆಟ್ಟಗಳ ತಪ್ಪಲಿಂದ ಹೊರಟು ಹೊರಟು ಬರುವ ವಾನರರು ಕೋಟಿ ಸಂಖ್ಯೆಯಲ್ಲಿ ತುಂಬಿದ್ದರು. ಅವರಲ್ಲಿ ಕೆಂಪಗಿನ ವಾನರರು, ಬೆಳ್ಳಗಿನ ವಾನರರು, ಕಪ್ಪಗಿನ ವಾನರರು, ಬೂದು ಬಣ್ಣದಲ್ಲಿರುವವರು ಗುಂಪುಗುಂಪಾಗಿ ಶತವಲಿ ಎಂಬ ವಾನರ ಶ್ರೇಷ್ಠನ ಹಿಂದೆ ಬಂದರು. ಬಂಗಾರದ ಬಣ್ಣದಿಂದ ಹೊಳೆಯುವ ತಾರೆಯ ತಂದೆಯಾದ ಮಹಾವೀರ ಸುಷೇಣನು ಕೆಲವು ಕೋಟಿ ವಾನರರೊಂದಿಗೆ ಬಂದನು. ಹಾಗೆಯೇ ಭಾರೀ ಗುಂಪಿನೊಂದಿಗೆ ರುಮೆಯ ತಂದೆ ತಾರನೂ ಬಂದನು. ಇಪ್ಪತ್ತೆರಡು ಸಾವಿರ ವಾನರರೊಂದಿಗೆ ಹನುಮಂತನ ತಂದೆ ಕೇಸರಿ ಬಂದನು. ಗವಾಕ್ಷ, ಧೂಮ್ರ ಎಂಬ ವಾನರರು ವಾನರ ಭಲ್ಲೂಕ ಸೇನೆಯೊಂದಿಗೆ ಬಂದರು. ಮೈಂದ, ದ್ವಿವಿಧ, ದರೀಮುಖ, ಗಜ ಎಂಬವರು ಅಸಂಖ್ಯಾಕ ವಾನರರೊಂದಿಗೆ ಬಂದರು. ಕಪ್ಪು ಬಣ್ಣದ ದೊಡ್ಡ ವಾನರ ಸೇನೆಯೊಂದಿಗೆ ನೀಲನೂ, ಕೆಲವು ಕೋಟಿ ವಾನರರೊಂದಿಗೆ ಗವಯನೂ ಬಂದು ಸೇರಿದರು. ಜಾಂಬವಂತನು ಹತ್ತು ಕೋಟಿ ಭಲ್ಲೂಕ ಯೋಧರನ್ನು ತೆಗೆದುಕೊಂಡು ಬಂದನು. ಗಂಧಮಾದನನೂ, ಅಂಗದನೂ ಸಹ ದೊಡ್ಡದೊಡ್ಡ ವಾನರರ ಗುಂಪನ್ನು ಕರೆದುಕೊಂಡು ಬಂದರು. ಒಟ್ಟಿನಮೇಲೆ ಪ್ರಪಂಚದಲ್ಲಿರುವ ವಾನರ ಯೋಧರೆಲ್ಲರೂ ಕಿಷ್ಕಿಂಧೆಯನ್ನು ತಲಪಿದರು. ಅವರೆಲ್ಲರ ಕೋಲಾಹಲ ಧ್ವನಿಯಿಂದ ಆಕಾಶವು ತುಂಬಿತು.

ವಾನರ ಮುಖ್ಯರೆಲ್ಲರೂ ಸುಗ್ರೀವನ ಸುತ್ತಲೂ ನಿಂತು ನಮಸ್ಕಾರ ಮಾಡಿದರು. ಸುಗ್ರೀವನು ಅವರನ್ನೆಲ್ಲ ರಾಮನಿಗೆ ಸಮರ್ಪಿಸಿ, ಅವರನ್ನು ಕುರಿತು, "ನೀವು ನಿಮ್ಮ ನಿಮ್ಮ ಸೇನೆಯನ್ನು ನದಿಗಳ ಬದಿಯಲ್ಲಿಯೂ, ವನಗಳಲ್ಲಿಯೂ ಬೀಡುಬಿಡಿಸಿ. ಅವರೆಲ್ಲರನ್ನು ನೋಡಿಕೊಂಡಿರಿ" ಎಂದನು. ಆಮೇಲೆ ಅವನು ರಾಮನ ಕಡೆಗೆ ತಿರುಗಿ, "ರಾಮಾ,

ನಿನ್ನ ಅಪ್ಪಣೆಯಂತೆ ನಡೆಯಲು ವಾನರರು ಕೋಟಿ ಸಂಖ್ಯೆಯಲ್ಲಿ ಬಂದಿದ್ದಾರೆ. ಇವರಲ್ಲಿ ಕಾಮರೂಪಿಗಳಿದ್ದಾರೆ. ಪರ್ವತಾಕಾರರಿದ್ದಾರೆ. ಕಾಮಗಮನ ಶಕ್ತಿಯುಳ್ಳವರಿದ್ದಾರೆ. ಭಯಂಕರ ಪರಾಕ್ರಮಶಾಲಿಗಳಿದ್ದಾರೆ. ಅವರನ್ನೆಲ್ಲ ನೀನು ಇಷ್ಟಬಂದಹಾಗೆ ಉಪಯೋಗಿಸಬಹುದು. ನಿನ್ನ ಆಜ್ಞೆಯನ್ನು ಜವದಾಟದಂತೆ ಪಾಲಿಸುತ್ತಾರೆ. ಇವರೆಲ್ಲ ಏನು ಮಾಡಬೇಕೆಂದು ನನಗೂ ಗೊತ್ತಿದೆ. ಆದರೂ ಅವರಿಗೆ ನೀನೇ ಆಜ್ಞೆ ಮಾಡು. ನನಗೂ ಆಜ್ಞೆ ಮಾಡು. ನಾವೆಲ್ಲ ನಿನ್ನ ಆಜ್ಞಾಧೀನರು." ಎಂದನು.


ರಾಮನು ಸಂತೋಷದಿಂದ ಸುಗ್ರೀವನನ್ನು ಆಲಿಂಗಿಸಿಕೊಂಡು, "ಸುಗ್ರೀವಾ, ನನ್ನ ಸೀತೆ ಇನ್ನೂ ಬದುಕಿರಬಹುದೆ? ಇದ್ದರೆ ಎಲ್ಲಿ ಇದ್ದಾಳೆ? ಈ ಸಂಗತಿ ಮೊದಲು ಗೊತ್ತಾಗಬೇಕು. ಸೀತೆ ಒಂದು ಕಡೆಯಲ್ಲಿ ಬದುಕಿರುವುದು ನಿಜವೆಂದು ತಿಳಿದುಬಿಟ್ಟರೆ, ಆಮೇಲೆ ಏನು ಮಾಡಬೇಕೆಂಬುದನ್ನು ನಾವಿಬ್ಬರೂ ಕೂಡಿ ಆಲೋಚಿಸಬಹುದು. ಆದುದರಿಂದ ನನ್ನ ಇಚ್ಛೆಗೆ ತಕ್ಕಹಾಗೆ ನೀನೇ ವಾನರ ಪ್ರಮುಖರಾದವರಿಗೆ ಆಜ್ಞೆ ಮಾಡು" ಎಂದನು.

ಸುಗ್ರೀವನು ಪರ್ವತಾಕಾರದ ವಿನತನೆಂಬವನನ್ನು ಕರೆದು ಒಂದು ಲಕ್ಷ ವಾನರರನ್ನು ಕರೆದುಕೊಂಡು ಪೂರ್ವ ದಿಕ್ಕಿಗೆ ಹೋಗಿ ಸೀತೆಯನ್ನು ಹುಡುಕಬೇಕೆಂದು ಹೇಳಿದನು. ಅಲ್ಲಿ ರಾವಣನ ಗಮನಕ್ಕೆ ಸಾಧವಾದ ಎಲ್ಲಾ ಪ್ರದೇಶಗಳನ್ನೂ ಶೋಧಿಸಬೇಕೆಂದು ಎಚ್ಚರಿಕೆ ಕೊಟ್ಟನು. ಶೋಧನೆ ಮುಗಿಸಿ ಒಂದು ತಿಂಗಳಿನೊಳಗೆ ಹಿಂದಿರುಗಿ ಬಂದುಬಿಡಬೇಕೆಂದೂ ಒತ್ತಿ ಹೇಳಿದನು.

ಆಮೇಲೆ ಸುಗ್ರೀವನು ಹೀಗೆಯೇ ಆಜ್ಞೆ ಮಾಡಿ ಕೆಲವು ವಾನರರನ್ನು ದಕ್ಷಿಣ ದಿಕ್ಕಿಗೆ ಕಳುಹಿಸಿದನು. ದಕ್ಷಿಣ ದಿಕ್ಕಿಗೆ ಹೋಗುವ ವಾನರರಲ್ಲಿ ನೀಲ, ಹನುಮಂತ, ಜಾಂಬವಂತ, ಸುಹೋತ್ರ, ಶರಾರಿ, ಶರಗುಲ್ಮ, ಗಜ, ಗವಾಕ್ಷ, ಗವಯ, ಋಷಭ, ಮೈಂದ, ದ್ವಿವಿಧ, ವಿಜಯ, ಗಂಧಮಾದನ, ಉಲ್ಕಾಮುಖ, ಅನಂಗ, ಅಂಗದ ಮೊದಲಾದ ವಾನರ ಶ್ರೇಷ್ಠರಿದ್ದರು. ಅವರ ಹಿಂದೆ ಭಾರಿ ಸೈನ್ಯವೂ ಇದ್ದಿತು. ರಾವಣನ ರಾಜ್ಯವು ದಕ್ಷಿಣ ದಿಕ್ಕಿನಲ್ಲಿರುವುದರಿಂದ ಆ ದಿಕ್ಕಿಗೆ ಸುಗ್ರೀವನು ವಿಶೇಷ ಗಮನ ಕೊಟ್ಟಿದ್ದನು. ತರುವಾಯ ಸುಗ್ರೀವನು ತಾರೆಯ ತಂದೆಯಾದ ಸುಷೇಣನನ್ನು ಅನೇಕ ಮಂದಿ ವಾನರ ವೀರರೊಂದಿಗೆ, ಪಶ್ಚಿಮ ದಿಕ್ಕಿಗೂ, ಶತವಲಿಯನ್ನು ಲಕ್ಷಮಂದಿ ವಾನರ ವೀರರೊಂದಿಗೆ ಉತ್ತರ ದಿಕ್ಕಿಗೂ ಕಳುಹಿಸಿಕೊಟ್ಟನು. ಈ ಬಗೆಯ ತ್ವರಿತ ಕಾರ್ಯಗಳನ್ನು ನೋಡಿ ರಾಮನಿಗೆ ಬಹಳ ಸಮಾಧಾನವಾಯಿತು.

(ಇನ್ನೂ ಇದೆ)





ವೀರಹನುಮಾನ್


June 1975

ಎಲ್ಲಾ ವಾನರರಿಗಿಂತಲೂ ಹನುಮಂತನಲ್ಲಿ ಕಾರ್ಯ ವನ್ನು ಸಾಧಿಸುವ ಶಕ್ತಿಯೂ ಅದಕ್ಕೆ ತಕ್ಕ ಅವಕಾಶವೂ ಹೆಚ್ಚಾಗಿರುವುದನ್ನು ತಿಳಿದು ಸುಗ್ರೀವನು, ಹನುಮಂತನನ್ನು ಪ್ರತ್ಯೇಕವಾಗಿ ಕರೆದು ಹೇಗೆಂದನು:

"ಹನುಮಂತಾ, ನಿನ್ನಮೇಲೆ ನನಗೇಕೋ ಹೆಚ್ಚಿನ ವಿಶ್ವಾಸ ಮೂಡುತ್ತಿದೆ. ನೀನು ಮಹಾವೀರನಾಗಿರುವಿ. ಅದರಮೇಲೆ ಗಾಳಿಯಲ್ಲಿಯೂ, ನೀರಿನಲ್ಲಿಯೂ, ನೆಲ ದಲ್ಲಿಯೂ, ಆಕಾಶದಲ್ಲಿಯೂ ಸಂಚರಿಸುವ ವಿಶೇಷ ಶಕ್ತಿ ನಿನಗಿದೆ. ನಿನಗೆ ತಿಳಿಯದ ಲೋಕವಾಗಲಿ, ಸಮುದ್ರವಾಗಲಿ, ಪರ್ವತವಾಗಲಿ ಯಾವುದೂ ಇಲ್ಲ. ನೀನು ವಾಯುದೇವನಂತಹ ವೇಗವಾದ ಗಮನ ಶಕ್ತಿಯುಳ್ಳವನು. ಭೂಮಿಯಲ್ಲಂತೂ ನಿನ್ನನ್ನು ಮೀರಿಸುವ ಬಲಶಾಲಿ ಯಾರೂ ಇಲ್ಲ. ಆದುದರಿಂದ ಸೀತಾದೇವಿಯನ್ನು ಹುಡುಕಿ ಕಂಡುಹಿಡಿಯುವ ಕಾರ್ಯವು ನಿನ್ನಿಂದಲೇ ನೆರವೇರುವುದೆಂದು ನನಗೆ ಕಾಣುತ್ತದೆ. ಬಲವೂ ಬುದ್ಧಿಯೂ ದೇಶ ಕಾಲಾನು ಗುಣವಾಗಿ ಪ್ರವರ್ತಿಸುವ ವಿವೇಕವೂ ಪರಾಕ್ರಮವೂ ನಿನ್ನಲ್ಲಿರುವ ಹಾಗೆ ಬೇರೆ ಯಾರಲ್ಲಿಯೂ ಕಾಣುವು ದಿಲ್ಲ. ಸ್ನೇಹಿತನಿಗೆ ನಾನು ಕೊಟ್ಟ ಮಾತು, ನನ್ನ ಪ್ರತ್ಯುಪಕಾರ ನಿನ್ನಿಂದಲೇ ಸಾಧ್ಯವಾಗುವಂತಾಗ ಬೇಕು. ಹೋಗಿ ಕಾರ್ಯವನ್ನು ಸಾಧಿಸಿಯೇ ಬಾರಯ್ಯ."

ಹೀಗೆ ಸುಗ್ರೀವನು ಹನುಮಂತನೊಂದಿಗೆ ಹೇಳು ವುದನ್ನು ಕೇಳಿ ರಾಮನು, ಕಾರ್ಯಭಾರವನ್ನು ಹನು ಮಂತನ ಮೇಲೆಯೇ ಸುಗ್ರೀವನು ಹಾಕುವುದನ್ನು ಗಮನಿಸಿದನು. ಹನುಮಂತನ ಶಕ್ತಿಸಾಮರ್ಥ್ಯಗಳು ಸುಗ್ರೀವನಿಗೆ ಚೆನ್ನಾಗಿ ಗೊತ್ತಿರಬೇಕೆಂದು ತೋರಲು, ರಾಮನ ಆಶೆಗಳೆಲ್ಲಾ ಹನುಮಂತನ ಮೇಲೆ ತಿರುಗಿತು. ಅಂತೆಯೇ ರಾಮನು ತನ್ನ ಹೆಸರಿನ ಉಂಗುರವನ್ನು ಹನುಮಂತನಿಗೆ ಕೊಡುತ್ತ, "ವಾನರ ಶ್ರೇಷ್ಠನಾದ ಹನುಮಾನ್, ಈ ಉಂಗುರವನ್ನು ನೋಡಿದರೆ ಸೀತಾದೇವಿ ನಿನ್ನನ್ನು ನೋಡಿ ಹೆದರುವುದಿಲ್ಲ. ಸಂದೇಹಪಡಲಾರಳು. ನೀನು ನನ್ನ ಸಂದೇಶದೊಂದಿಗೆ ಬಂದವನೆಂದು ಗುರುತು ಹಿಡಿಯುತ್ತಾಳೆ. ನಿನ್ನಿಂದಲೇ ಕಾರ್ಯಸಾಧನೆಯಾಗುವುದೆಂದು ಸುಗ್ರೀವನ ಮಾತಿನ

೮. ಸ್ವಯಂಪ್ರಭೆಯ ಕಥೆ



ಮೂಲಕವಾಗಿ ನನಗೆ ತೋರುತ್ತದೆ. ಆದುದರಿಂದಲೇ ಈ ಗುರುತುಗಳನ್ನು ನಿನ್ನ ಕೈಗೆ ಕೊಡುತ್ತೇನೆ. ಆದಷ್ಟು ಬೇಗ ಶುಭ ಸಮಾಚಾರದೊಂದಿಗೆ ಹಿಂದಿರುಗಿ ಬರುವವನಾಗು " ಎಂದನು.

ಹನುಮಂತನು ಆ ಉಂಗುರವನ್ನು ತೆಗೆದುಕೊಂಡು ಕೈಗಳನ್ನು ತಲೆಯಮೇಲೆ ಜೋಡಿಸಿ ರಾಮನ ಪಾದ ಗಳಿಗೆ ಪ್ರಣಾಮ ಮಾಡಿ, ಪ್ರಯಾಣ ಹೊರಟನು. ಆಗ ರಾಮನು ಅವನೊಂದಿಗೆ ಮತ್ತೊಂದು ಸಾರಿ, " ಹನುಮಂತಾ, ನಾನು ನಿನ್ನ ಶಕ್ತಿಯನ್ನೇ ನಂಬಿ ಕೊಂಡಿರುತ್ತೇನೆ. ನನಗೆ ಸುಗ್ರೀವನಂತಹ ಮಹಾನು ಭಾವನ ಸಖ್ಯ ಮಾಡಿಸಿದವನೇ ನೀನೆಂಬುದನ್ನು ಮರೆಯಲಾರೆ. ನೀನು ಶಕ್ತಿವಂಚನೆಯಿಲ್ಲದೆ ಪೂರ್ಣ ಶ್ರದ್ಧೆಯಿಂದ ಸೀತಾದೇವಿಯನ್ನು ಹುಡುಕಿ ಕಂಡು ಹಿಡಿಯಬೇಕು " ಎಂದನು.

ಹನುಮಂತನು ಮತ್ತೊಮ್ಮೆ ರಾಮನಿಗೆ ನಮಸ್ಕಾರ ಮಾಡಿ ಹೊರಟನು. ವಾನರರ ದಂಡು ಮಿಡಿತೆಗಳ ದಂಡಿನಂತೆ ಎಲ್ಲಾ ದಿಕ್ಕುಗಳಿಗೂ ಹೊರಟಿತು. ಅವರು ಹಿಂದಿರುಗಿ ಬರಲು ಒಂದು ತಿಂಗಳು ಮಾತ್ರ ಗಡುವಿತ್ತು. ಅಷ್ಟರೊಳಗೆ ಹಣ್ಣೋ ಕಾಯೋ ಗೊತ್ತಾಗಬೇಕಿತ್ತು.

ವಾನರರು ಹೊರಟುಹೋದ ಮೇಲೆ ರಾಮ ಲಕ್ಷ್ಮಣರು ಪ್ರಸ್ರವಣ ಪರ್ವತದ ಮೇಲಿನ ಗುಹೆ ಯಲ್ಲಿರುತ್ತ, ಶೋಧಿಸಲು ಹೊರಟ ವಾನರರು ಹಿಂದಿರುಗಿ ಬರುವುದನ್ನು ನಿರೀಕ್ಷಿಸುತ್ತ ದಿನಗಳನ್ನು ಎಣಿಸತೊಡಗಿದರು.

ವಿನತನೆಂಬ ವಾನರನೊಂದಿಗೆ ಹೊರಟ ಬೃಂದವು ಪೂರ್ವದಿಕ್ಕಿಗೆ ಹೋಯಿತು. ಸುಷೇಣನು ತನ್ನ ಬೃಂದ ದೊಂದಿಗೆ ಪಶ್ಚಿಮ ದಿಕ್ಕಿಗೆ ಹೋದನು. ಹಾಗೆಯೇ ಇನ್ನೊಂದು ವಾನರರ ದೊಡ್ಡ ಸಮೂಹ ಉತ್ತರ ದಿಕ್ಕಿಗೂ ಹೋಯಿತು. ಹನುಮಂತ, ತಾರ, ಅಂಗದ ಮೊದಲಾದವರು ತಮ್ಮ ಗುಂಪಿನೊಂದಿಗೆ ದಕ್ಷಿಣ ದಿಕ್ಕಿಗೆ ಹೊರಟರು.

ಎಲ್ಲರನ್ನೂ ಎಲ್ಲ ದಿಕ್ಕುಗಳಿಗೂ ಕಳುಹಿಸಿ, ಸುಗ್ರೀ ವನು ರಾಮನಿಗೆ ತಾನು ಕೊಟ್ಟ ಮಾತನ್ನು ಕಾಪಾಡಿದೆ ನೆಂಬ ಸಂತೃಪ್ತಿಯಿಂದ ನಿಶ್ಚಿಂತನಾಗಿ, ತನ್ನ ಅರಮನೆ ಯೊಳಗೆ ಹೊಕ್ಕು ಮೊದಲಿಗಿಂತ ಹೆಚ್ಚಿನ ಸುಖ ಭೋಗಗಳಲ್ಲಿ ಓಲಾಡ ತೊಡಗಿದನು.

ಸುಗ್ರೀವನಿಂದ ಕಳುಹಿಸಲ್ಪಟ್ಟ ವಾನರರು ತಮ್ಮ ತಮ್ಮ ದಿಕ್ಕುಗಳಲ್ಲಿ ಸೀತಾದೇವಿಯನ್ನು ಬಹಳ ಶ್ರದ್ಧೆ ಯಿಂದ ಹುಡುಕಿದರು. ಹಗಲೆಲ್ಲಾ ಪ್ರತಿ ಸರೋವರ, ನದಿ, ಬಾವಿ, ಪೊದೆ, ವನ, ಗುಡ್ಡ, ಗುಹೆ ಮೊದಲಾದ ಕಷ್ಟ ಇಕ್ಕಟ್ಟುಗಳ ಪ್ರದೇಶದಲ್ಲೆಲ್ಲಾ ಹುಡುಕುತ್ತ, ರಾತ್ರಿಯಾಗುತ್ತಲೇ ಒಂದೇ ಸ್ಥಳದಲ್ಲಿ ಸೇರುತ್ತ, ಯಾವ ಮರಗಳ ಕೆಳಗೋ ರಾತ್ರಿಯನ್ನು ಕಳೆಯುತ್ತ ಮುಂದಕ್ಕೆ ಸಾಗುತ್ತಿದ್ದರು.

ಪೂರ್ವ ಪಶ್ಚಿಮ, ಉತ್ತರ ದಿಕ್ಕುಗಳಿಗೆ ಹೋದ ವಾನರರು ಒಂದು ತಿಂಗಳ ಗಡುವಿನೊಳಗೆ ಹಿಂದಿರುಗಿ

ಬಂದು ಸೀತೆಯ ಜಾಡು ಎಲ್ಲಿಯೂ ತಿಳಿಯಲಿಲ್ಲವೆಂದು ಸುಗ್ರೀವನೊಂದಿಗೆ ಹೇಳಿದರು. ಆ ಸಮಯದಲ್ಲಿ ಸುಗ್ರೀವನು ಪ್ರಸ್ರವಣ ಪರ್ವತದ ಮೇಲೆ ರಾಮನ ಪಕ್ಕದಲ್ಲೇ ಕುಳಿತಿದ್ದನು. ವಾನರರು ತಂದ ಸುದ್ದಿ ಕೇಳಿ ರಾಮನು ಚಿಂತೆಯನ್ನು ಸೂಚಿಸುವ ದೀರ್ಘವಾದೊಂದು ನಿಟ್ಟುಸಿರು ಬಿಟ್ಟನು.

ಸುಗ್ರೀವನು ತಕ್ಕ ರೀತಿಯಲ್ಲಿ ಸಮಾಧಾನ ಹೇಳಿದನು. ಇನ್ನೂ ಪೂರ್ತಿ ನಿರಾಶೆಯಾಗಲಿಲ್ಲವಷ್ಟೆ? ದಕ್ಷಿಣ ದಿಕ್ಕಿಗೆ ಹೋದವರಾರೂ ಹಿಂದಿರುಗಿ ಬಂದಿಲ್ಲ. ಸೀತೆಯನ್ನು ಅಪಹರಿಸಿಕೊಂಡು ಹೋದ ರಾವಣನು ದಕ್ಷಿಣ ದಿಕ್ಕಿಗೇ ಹೋಗಿದ್ದಾನೆ. ಅವನ ರಾಜ್ಯವೂ ದಕ್ಷಿಣದಿಕ್ಕಿನಲ್ಲಿದೆ. ಆದುದರಿಂದ ಅಲ್ಲಿಂದ ಶುಭ ಸಮಾಚಾರ ಬರುವ ನಿರೀಕ್ಷೆ ಇನ್ನೂ ಇದೆ. ಯಾವನ ಕೈಯಲ್ಲಿ ರಾಮನ ಗುರುತಿನ ಉಂಗುರವಿದೆಯೋ ಆ ಹನುಮಂತನು ಸೀತೆಯನ್ನು ನೋಡಿಯೇ ಹಿಂದಿರುಗುವನೆಂದು ಸುಗ್ರೀವನು ರಾಮನಿಗೆ ಒತ್ತಿ ಹೇಳಿದನು.

ದಕ್ಷಿಣ ದಿಕ್ಕಿಗೆ ಹೋದ ಹನುಮಂತನೇ ಮೊದಲಾದವರು ಸೀತೆಯನ್ನು ಹುಡುಕುತ್ತಾ, ವಿಂಧ್ಯ ಪರ್ವತ ಪ್ರಾಂತವನ್ನು ತಲಪಿದರು. ಅದು ಬಹಳ ವಿಸ್ತಾರವಾದ ಪ್ರದೇಶ. ಅಲ್ಲಿ ಎಷ್ಟೋ ಗುಹೆಗಳಿವೆ, ಕೊಳ್ಳಗಳಿವೆ, ಶಿಖರಗಳಿವೆ, ಕಾಡುಗಳಿವೆ; ದಾಟಲಿಕ್ಕೆ ಕಷ್ಟವಾದ ನದಿಗಳಿವೆ; ಆಕಾಶಕ್ಕೆ ಮುತ್ತಿಡುವಂತಹ ಮರಗಳೆಷ್ಟೋ ಇವೆ. ವಾನರರು ಹಣ್ಣು, ಕಾಯಿ, ಗಡ್ಡೆ ಗೆಣಸುಗಳನ್ನು ತಿನ್ನುತ್ತ ಒಂದೊಂದು ಪ್ರದೇಶವನ್ನಾಗಿ ನೋಡುತ್ತ ಮುಂದೆ ಮುಂದೆ ಸಾಗಿದರು.


ಒಂದಾನೊಂದು ಕಡೆಯಲ್ಲಿ ಏನೂ ಇಲ್ಲದ ಶೂನ್ಯ ಪ್ರದೇಶವೊಂದು ಹತ್ತಿತು. ಅಲ್ಲಿನ ಮರಗಳೆಲ್ಲಾ ಒಣಗಿ ಹೋಗಿದ್ದುವು. ನದಿಗಳಲ್ಲಿ ನೀರೇ ಇರಲಿಲ್ಲ. ಒಂದು ಚೂರು ಹುಲ್ಲೂ ಸಹ ಕಾಣಲಿಲ್ಲ. ಇನ್ನು ಗೆಡ್ಡೆ ಗೆಣಸುಗಳೆಲ್ಲಿಂದ ಬರಬೇಕು? ಒಂದೇ ಒಂದು ಪ್ರಾಣಿ—ಸಣ್ಣ ಹುಳು ಕೀಟ ಕೂಡಾ ಅಲ್ಲಿಲ್ಲ. ಅದೊಂದು



ಭಯಂಕರವಾದ ಪ್ರದೇಶ. ಅಂತಹ ಭಣಭಣಿಸುವ ಒಣಕಲು ಪ್ರದೇಶವನ್ನು ಕಂಡು ವಾನರರಿಗೆ ತಾವೆಲ್ಲಿಗೆ ಬಂದೆವೆಂದು ತಿಳಿಯದೆ ಭಯವಾಯಿತು.

ಅಂತಹ ಶೂನ್ಯವಾದ ವನಪ್ರದೇಶದಲ್ಲಿ ಹಿಂದೆ ಕಂಡುಮಹರ್ಷಿ ತಪಸ್ಸಿನಲ್ಲಿ ಕುಳಿತಿದ್ದ. ಅವನದೇ ಆಶ್ರಮ ಪ್ರದೇಶವದು. ಅವನಿಗೆ ಎಷ್ಟೊಂದು ತಪೋಬಲವಿದ್ದಿತೋ, ಅಷ್ಟೊಂದು ಕೋಪವೂ ಇದ್ದಿತು. ಹದಿನಾರು ವರ್ಷ ಪ್ರಾಯದ ತನ್ನ ಮಗನು ಅಕಾಲ ಮರಣವನ್ನು ಅಪ್ಪಿದುದರಿಂದ, ಅವನಿಗೆ ಆ ವನ ಪ್ರದೇಶದ ಮೇಲೆ ಕೋಪ ಬಂದು, ಅದೆಲ್ಲಾ ಒಣ ನೆಲವಾಗಿಹೋಗುವಂತೆ ಶಪಿಸಿಬಿಟ್ಟಿದ್ದನು. ಅಂತಹ ಶೂನ್ಯಪ್ರದೇಶದಲ್ಲಿ ಕೂಡಾ ಭೀತಿಯನ್ನು ಧೈರ್ಯದಿಂದ ಮೆಟ್ಟಿಕೊಂಡು ವಾನರರು ಸೀತಾದೇವಿಯನ್ನು ಹುಡುಕಿ ಪಾರಾದರು.

ಅಲ್ಲಿಂದ ಹುಡುಕುತ್ತಾ ಹೊರಟ ಆ ವಾನರ ಸಮೂಹವು ಇನ್ನೊಂದು ವಿಧವಾದ ಭೀತಿ



ಹುಟ್ಟಿಸುವ ಅರಣ್ಯದೊಳಗೆ ಪ್ರವೇಶ ಮಾಡಿತು. ಅಲ್ಲಿ ಅವರು ಕಣ್ಣಿನ ಮೇಲೆ ಕಣ್ಣಿಟ್ಟು ಹುಡುಕುವಾಗ ಅವರಿಗೊಬ್ಬ ರಾಕ್ಷಸನು ಕಾಣಿಸಿದ. ಮಹಾಕಾಯನಾದ ಆ ರಾಕ್ಷಸನನ್ನು ನೋಡಿದ ಕೂಡಲೇ, ವಾನರರು ದಟ್ಟಿ ಬಿಗಿದುಕೊಂಡು ಅವನೊಂದಿಗೆ ಯುದ್ಧಮಾಡಲು ಸಿದ್ಧರಾದರು.

ಆ ರಾಕ್ಷಸನು ಕೂಡಾ ವಾನರರನ್ನು ನೋಡಿದ ಕೂಡಲೇ "ನಿಮ್ಮೆಲ್ಲರನ್ನೂ ಕೊಂದುಬಿಡುತ್ತೇನೆ. ಬಹಳ ಕಾಲದವರೆಗೆ ಆಹಾರವಾಗಿ ಸಿಕ್ಕಿದಿರಿ" ಎನ್ನುತ್ತಾ ಅವರ ಕಡೆಗೆ ಓಡಿಬಂದ. ಅಂಗದನು ಅವನೇ ರಾವಣನೆಂದುಕೊಂಡು ಅವನ ತಲೆಯಮೇಲೆ ಬಲವಾಗಿ ಹೊಡೆದ. ಅಂಗದನ ಒಂದೇ ಏಟು ಅವನನ್ನು ಏಳಲಾಗದಂತೆ ನೆಲಕ್ಕೆ ಕೆಡವಿತು. ನೆಲ ತುಂಬ ನೆತ್ತರು ಕಕ್ಕುತ್ತ ಪ್ರಾಣ ಬಿಟ್ಟ ಆ ರಾಕ್ಷಸ.

ರಾವಣನು ಸತ್ತನೆಂದೂ, ಸೀತೆ ಇವನ ಗುಹೆಯೊಳಗೆಲ್ಲಿಯೋ ಇರಬಹುದೆಂದೂ ಊಹಿಸಿಕೊಂಡು ವಾನರರು, ಅಲ್ಲಿ ಕಾಣಿಸಿದ ಗುಹೆಗಳನ್ನೆಲ್ಲಾ ಹುಡುಕಲಾರಂಭಿಸಿದರು. ಎಲ್ಲಿಯೂ ಸೀತೆಯ ಜಾಡು ತಿಳಿಯಲಿಲ್ಲ. ಆ ಅರಣ್ಯವೆಲ್ಲಾ ಗಾಳಿಸಿದ್ದಾಯಿತು. ಎಲ್ಲಾ ನಿಷ್ಪ್ರಯೋಜನವಾಗಿಹೋಗಲು, ಎಲ್ಲ ವಾನರರೂ ಮುಂದೇನು ಮಾಡಲೂ ತೋರದೆ ಒಂದು ಮರದ ತಳದಲ್ಲಿ ಸೇರಿ ಕುಳಿತರು.

ಆಗ ಅಂಗದನು ಅವರನ್ನು ಕುರಿತು, "ನಾವು ಹುಡುಕಲು ಹೊರಟಂದಿನಿಂದ ಇವತ್ತಿನವರೆಗೆ ಎಷ್ಟೋ ಅರಣ್ಯಗಳು, ನದಿಗಳು, ಪರ್ವತಗಳು, ಗುಹೆಗಳು ಒಂದು ಬಿಡದೆ ಹುಡುಕಿದೆವು. ನಮಗೆ ಸೀತಾದೇವಿಯ ಜಾಡು, ಅವಳನ್ನು ಎತ್ತಿಕೊಂಡು ಹೋದ ರಾವಣನ ಸುಳಿವು ಯಾವುದೂ ತಿಳಿಯಲಿಲ್ಲ. ನಾವು ಕೊಂದ ರಾಕ್ಷಸನೇ ರಾವಣನೆಂದು ಸುಮ್ಮನೆ ಊಹಿಸಿದೆವು. ಸೀತಾದೇವಿಯನ್ನು ತಂದವನು ಅಷ್ಟು ಸುಲಭದಲ್ಲಿ ಸಾಯುವಂಥ ರಾಕ್ಷಸನಾಗಿರಲಾರ. ಸುಗ್ರೀವನ ಆಜ್ಞೆ ಅತ್ಯಂತ ದಾರುಣವಾದುದು. ನಾವು ಉತ್ಸಾಹವಿಲ್ಲದೆ ಅಲೆದಾಡಲಾರೆವು. ಸೋಮಾರಿತನವೂ ಪ್ರಯೋಜನವಿಲ್ಲ. ಆದುದರಿಂದ ನೀವೆಲ್ಲರೂ ಇನ್ನೊಂದು ಸಾರಿ ಈ ವನವನ್ನೆಲ್ಲಾ ಹುಡುಕಿರಿ. ನಾವೆಲ್ಲಾ ಈಗ ನಿದ್ರೆ ಕೂಡ ಮಾಡಬಾರದು. ಅಥವಾ ಒಳ್ಳೆಯ ದಾರಿ ಯಾವುದಾದರೂ ಇದ್ದರೆ ನೀವೇ ಹೇಳಿರಿ." ಎಂದನು. ಆಗ ಉಳಿದೆಲ್ಲರ ಪರವಾಗಿ ಗಂಧಮಾದನನು ಅಂಗದನು ಹೇಳಿದ ಮಾತನ್ನೇ ಬಲಪಡಿಸಿ ಹೇಳಿದನು.

ಈ ಅಭಿಪ್ರಾಯ ಬಲದಿಂದ ವಾನರರೆಲ್ಲ ತಮ್ಮ ಶ್ರಮವನ್ನು ಮರೆತು, ಹೊಸ ಉತ್ಸಾಹದಿಂದ ವಿಂಧ್ಯ ಪರ್ವತದ ಅರಣ್ಯಗಳಲ್ಲಿ ಮತ್ತೆ ಸೀತೆಯನ್ನು ಹುಡುಕಲು ತೊಡಗಿದರು.

ಹಾಗೆ ಹುಡುಕುತ್ತಾ, ಬೆಳ್ಳಿಯ ಶಿಖರದಂತಹ ಒಂದು ಬೆಟ್ಟದ ಮೇಲೆ ಹತ್ತಿ, ಅಲ್ಲೆಲ್ಲಿಯೂ ಸೀತೆಯನ್ನು ಕಾಣದೆ ನಿಟ್ಟುಸಿರು ಬಿಟ್ಟರು. ಎಲ್ಲರೂ

ಆ ಶಿಖರದಿಂದ ಕೆಳಗಿಳಿದು, ಸ್ವಲ್ಪ ಮಾತ್ರ ವಿಶ್ರಾಂತಿ ಪಡೆದು ಮತ್ತೆ ಹುಡುಕಲು ಪ್ರಾರಂಭಿಸಿದರು. ಅವರು ವಿಂಧ್ಯಪರ್ವತದ ಮೇಲೆ ಸೀತೆಯನ್ನು ಹುಡುಕುತ್ತಿರುವಾಗಲೇ, ಸುಗ್ರೀವನು ಇಟ್ಟ ಒಂದು ತಿಂಗಳ ಗಡು ದಾಟಿಹೋಯಿತು.


ವಾನರರು ಒಂದೊಂದು ಪ್ರದೇಶವನ್ನೇ ಹುಡುಕುತ್ತ ವಿಂಧ್ಯಪರ್ವತದ ನೈಋತಿ ದಿಕ್ಕಿನ ಕೊನೆಗೆ ಹೋದರು. ಇಲ್ಲಿಗೆ ಸೇರಿದ ವಾನರರಲ್ಲಿ ಪ್ರಮುಖರು ಹನುಮಂತ, ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ, ಮೈಂದ, ದ್ವಿವಿಧ, ಸುಷೇಣ, ಜಾಂಬವಂತ, ನಳ, ಯುವರಾಜ ಅಂಗದ, ಮತ್ತು ತಾರ ಇವರೆಲ್ಲ ಇದ್ದರು. ಎಲ್ಲರೂ ಒಂದೇ ಬಗೆಯ ಸಾಹಸವಂತರೇ.


ಅವರು ಪ್ರತಿ ಗುಹೆಯನ್ನೂ ಶೋಧಿಸುತ್ತಾ ಒಂದು ದೊಡ್ಡ ಬಿಲದ ಬಳಿಗೆ ಬಂದರು. ಅದು ಋಕ್ಷಬಿಲವೆಂದು ಅವರಾರಿಗೂ ತಿಳಿಯದು. ಅದನ್ನು ಮಯನು ಅಲ್ಲಿ ನಿರ್ಮಿಸಿದ್ದನು. ಅದರ ದ್ವಾರದಲ್ಲಿ ಲತೆಗಳು ಬಲೆಯಂತೆ ಬೆಳೆದಿದ್ದುವು. ಪ್ರವೇಶಿಸಲು ಬಹಳ ಕಷ್ಟವಾದ ಗುಹೆ. ಅಲ್ಲಿಗೆ ಬಂದಾಗ ವಾನರರು ಹಸಿವೆಬಾಯಾರಿಕೆಗಳಿಂದ ತುಂಬ ಬಳಲಿಹೋಗಿದ್ದರು. ಎಲ್ಲಿಯೂ ನೀರು ಸಿಕ್ಕಿರಲಿಲ್ಲ. ಅವರೆಲ್ಲರ ಬಾಯಿ ಒಣಗಿ ನಾಲಗೆ ಅಂಗಳದಲ್ಲಿ ಅಂಟಿಕೊಂಡಿತ್ತು.

ಆ ಋಕ್ಷ ಬಿಲದೊಳಗಿನಿಂದ ಕ್ರೌಂಚ, ಹಂಸ, ಚಕ್ರವಾಕ ಮೊದಲಾದ ಕೆಲವು ನೀರು ಹಕ್ಕಿಗಳು ಹೊರಕ್ಕೆ ಹಾರುತ್ತಾ ಬರುತ್ತಿದ್ದುವು. ಅವುಗಳನ್ನು ನೋಡಿ ಹನುಮಂತನೇ ಮೊದಲಾದವರು ಬಹಳ ಆಶ್ಚರ್ಯಪಟ್ಟರು. ಎಲ್ಲರೂ ಬೇಗಬೇಗನೇ ಆ ಬಿಲದ ಬಳಿಗೆ ಹೋದರು.

ಪರ್ವತಗಳನ್ನೂ ಅರಣ್ಯಗಳನ್ನೂ ಕುರಿತು ವಿಶೇಷವಾಗಿ ತಿಳಿದಿದ್ದ ಹನುಮಂತನು ಉಳಿದವರೊಂದಿಗೆ ಹೀಗೆಂದನು :

"ನೋಡಿದಿರಾ; ಈ ಗುಹೆಯ ಮುಖದಿಂದ ನೀರಿನ ಹಕ್ಕಿಗಳು ಹಾರಿ ಹಾರಿ ಬರುತ್ತಿವೆ. ಇದರ ದ್ವಾರದಲ್ಲಿ ಲತೆಗಳೂ ಮರಗಳೂ ಬೆಳೆದಿರಬೇಕಾದರೆ ಸಮೀಪದಲ್ಲಿ ಜಲಾಶಯವಿರಲೇಬೇಕು. ಅಥವಾ





ಗುಹೆಯೊಳಗೆ ನೀರುತುಂಬಿದ ಬಾವಿಯೋ ಕೊಳವೋ ಇರಬಹುದು. ನಾವಂತೂ ದಾಹದಿಂದ ಒಣಗಿ ಹೋಗಿದ್ದೇವೆ. ಆದುದರಿಂದ ಲತೆಗಳನ್ನು ಸರಿಸಿ ಬಿಲದೊಳಗೆ ಜಾಗರೂಕತೆಯಿಂದ ಹೋಗೋಣ."

ಹನುಮಂತನು ಹೀಗೆ ಹೇಳಿದ ಕೂಡಲೇ ಆ ವಾನರರೆಲ್ಲ ಋಕ್ಷ ಬಿಲದೊಳಗೆ ಪ್ರವೇಶ ಮಾಡಿದರು. ಒಳಗೆ ಕಣ್ಣು ಕುತ್ತಿದರೂ ಕಾಣಲಾಗದಷ್ಟು ಕಗ್ಗತ್ತಲೆ. ವಾನರರು ತಾವು ಎತ್ತ ಹೋಗುತ್ತಿರುವೆವೆಂಬುದನ್ನು ಸಹಾ ಅರಿಯದೆ ತಡವುತ್ತಾ ಮುಂದೆ ಮುಂದೆ ಹೋದರು.

ಹೋಗಹೋಗುತ್ತಿದ್ದಂತೆ ಕತ್ತಲೆ ಕಡಿಮೆಯಾಗುತ್ತಾ ಕಾಂತಿ ಬರತೊಡಗಿತು. ಕಟ್ಟಕಡೆಗೆ ಶುಭ್ರ ಕಾಂತಿಯಿಂದೊಪ್ಪುವ ಅತ್ಯಂತ ಸುಂದರವಾದ ಪ್ರದೇಶವನ್ನು ಅವರು ತಲಪಿದರು.

ಅಲ್ಲಿ ಪ್ರಕಾಶವನ್ನು ಬೀರುವ ಕಾಂಚನ ಮರಗಳು, ತಾಳೆ, ಸುರಹೊನ್ನೆ, ಅಶೋಕ, ಚಂದನ ಮೊದಲಾದ ಮರಗಳು ತುಂಬಿದ್ದುವು. ಕೆಲವು ಮರಗಳ ಹೂ ಕಾಯಿ ಹಣ್ಣುಗಳು ಜಗಜಗಿಸುತ್ತ ಕಾಂತಿಯುಗುಳುತ್ತಿದ್ದುವು. ಅಲ್ಲಿ ಒಂದು ತಾವರೆಯ ಕೊಳದಲ್ಲಿ ಚಿನ್ನದ ತಾವರೆಗಳಿದ್ದುವು. ಆ ಕೊಳದಲ್ಲಿರುವ ಮೀನುಗಳೂ, ಆಮೆಗಳೂ, ಹಾವುಗಳೂ ಚಿನ್ನದ ಬಣ್ಣದವುಗಳೇ. ಅದು ಭೂಮಿಯೋ ಬೇರೆ ಯಾವುದೋ ಲೋಕವೋ ಎಂಬಂತಿತ್ತು.

ಇನ್ನೊಂದು ಕಡೆ ತಿರುಗಿದರೆ ದೊಡ್ಡ ದೊಡ್ಡ ಮನೆಗಳೂ ಮಂದಿರಗಳೂ ಕಾಣಿಸುತ್ತಿದ್ದುವು. ಅವುಗಳ ಕಿಟಕಿ, ಬಾಗಿಲು, ಮುಚ್ಚಿಗೆಗಳೆಲ್ಲ ಚಿನ್ನ ಬೆಳ್ಳಿಗಳಿಂದಲೇ ತಯಾರಾಗಿದ್ದುವು. ಆ ಮನೆಮಂದಿರಗಳ ಬಾಗಿಲುಗಳಲ್ಲಿ ಮುತ್ತು, ಮಣಿ ಮಾಣಿಕ್ಯಗಳ ತೋರಣಗಳಿದ್ದುವು.

ವಾನರರು ಆಶ್ಚರ್ಯದಿಂದ ನೋಡುತ್ತ ಮತ್ತೊಂದು ಬದಿಗೆ ತಿರುಗಿದಾಗ, ಹವಳದ ಕಾಂತಿಯನ್ನುಗುಳುವ ಮರಗಳ ಮೇಲೆ ಹೂಗಳೂ ಹಣ್ಣುಗಳೂ ತೋರಿದುವು. ಒಂದು ಕಡೆ ಬಗೆಬಗೆಯ ಮದ್ಯಗಳನ್ನು ತುಂಬಿಸಿಟ್ಟಿದ್ದರು. ಅಲ್ಲಲ್ಲಿ ರತ್ನಗಳನ್ನು ಹುದುಗಿಸಿದ ಚಿನ್ನದ ಆಸನಗಳೂ, ಮಂಚಗಳೂ, ವಾಹನಗಳೂ ಕಂಡುಬಂದುವು. ಬೇರೊಂದು ಬದಿಯಲ್ಲಿ ಚಿನ್ನ ಬೆಳ್ಳಿ ಕಂಚುಗಳಿಂದಾದ ಬಗೆಬಗೆಯ ಆಕಾರದ ಪಾತ್ರೆಗಳು ರಾಶಿರಾಶಿಯಾಗಿದ್ದುವು. ಮಗದೊಂದು ಪ್ರದೇಶದಲ್ಲಿ ಅಗರು ಚಂದನಗಳ ಸುವಾಸನೆ ಹೊರಡುತ್ತಿದ್ದುವು. ಹಣ್ಣುಗಳು, ಗಡ್ಡೆಗಳು, ಗೆಣಸುಗಳು, ಪಾನೀಯಗಳು, ಜೇನು, ವಸ್ತ್ರಗಳು, ಕಂಬಳಿಗಳು, ಬೇರೆ ಬೇರೆ ಬಗೆಯ ಚರ್ಮಗಳು ಚಿನ್ನ ಬೆಳ್ಳಿಗಳ ಗಟ್ಟಿಗಳು ರಾಶಿರಾಶಿಯಾಗಿ ಅಲ್ಲಿದ್ದುವು.


ವಾನರರು ಆ ಅದ್ಭುತ ಪ್ರದೇಶವನ್ನು ಹುಡುಕುತ್ತಾ, ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುತ್ತಿರಲು, ಒಂದು ಪ್ರಶಾಂತ ಪ್ರದೇಶದಲ್ಲಿ ಕುಳಿತಿದ್ದ

ತಪಸ್ವಿನಿಯೊಬ್ಬಳನ್ನು ನೋಡಿದರು. ಅವಳ ಶರೀರದಿಂದ ಪ್ರಕಾಶ ಕಿರಣಗಳು ಹೊರಡುತ್ತಿದ್ದುವು. ಅದನ್ನು ನೋಡಿ ವಾನರರು ಆಶ್ಚರ್ಯಪಡುತ್ತ ಭಯದಿಂದ ನಡುಗಿದರು.

ಹನುಮಂತನು ಅವಳ ಮುಂದೆ ಕೈಮುಗಿದು, "ನಾವೆಲ್ಲಾ ತಿಳಿಯದೆ ಈ ಪ್ರದೇಶಕ್ಕೆ ಬಂದೆವು. ನೀನು ಯಾರೋ ? ಈ ಬಿಲವು ಯಾರದೋ ? ಈ ಅದ್ಭುತ ಪ್ರದೇಶವು ಭೂಮಿಯಲ್ಲಿ ಏಕೆ ಇದೆಯೋ ? ನಮಗೊಂದೂ ಗೊತ್ತಾಗುವುದಿಲ್ಲ. ನಾವು ಮಾರ್ಗಾಯಾಸದಿಂದಲೂ, ಹಸಿವು ಬಾಯಾರಿಕೆಗಳಿಂದಲೂ ಸಂಕಟಪಡುತ್ತ ಇಲ್ಲಿ ಎಲ್ಲಿಯಾದರೂ ಆಹಾರವೋ ನೀರೋ ಸಿಗಬಹುದೆಂಬ ಆಶೆಯಿಂದ ಕತ್ತಲೆಯಾದ ಬಿಲದೊಳಗೆ ಹೊಕ್ಕು ಇಲ್ಲಿಗೆ ಬಂದಿದ್ದೇವೆ. ಆದರೆ ಇಲ್ಲಿರುವ ಅದ್ಭುತ ವಸ್ತುಗಳನ್ನೆಲ್ಲ ನೋಡಿದ ಮೇಲೆ, ಇದು ಯಾವುದೋ ರಾಕ್ಷಸರ ಮಾಯೆಯೋ ಎಂದು ಭಯವಾಗುತ್ತದೆ. ಈ ಬಂಗಾರದ ಮರಗಳೆಂದರೇನು ? ಆ ಬೆಳ್ಳಿ ಬಂಗಾರದ ಮನೆಗಳು ಯಾರವು ? ಕೊಳದಲ್ಲಿರುವ ಬಂಗಾರದ ತಾವರೆಗಳನ್ನು ಸೃಷ್ಟಿಸಿದವರು ಯಾರು ? ಬಂಗಾರದ ಮೀನು ಆಮೆ ಮೊಸಳೆಗಳೆಲ್ಲ ಯಾರ ಕಲ್ಪನೆಯೋ ? ಒಂದೂ ತಿಳಿಯದೆ ಅಯೋಮಯದ ಅವಸ್ಥೆಯಲ್ಲಿರುವ ನಮ್ಮ ಮೇಲೆ ದಯವಿಟ್ಟು ಅದನ್ನೆಲ್ಲ ತಿಳಿಸಿದರೆ ಒಳ್ಳೆಯದಿತ್ತು."

ಹನುಮಂತನ ಮಾತುಗಳಿಗೆ ಆ ತಪಸ್ವಿನಿ ತಲೆದೂಗಿ ಕಡೆಗೆ ಹೀಗೆ ಸಮಾಧಾನ ಹೇಳಿದಳು :

"ಮಯನೆಂಬ ದೊಡ್ಡ ದಾನವನು ಇಲ್ಲಿ ವಾಸವಾಗಿದ್ದನು. ಅವನು ದಾನವರಿಗೆಲ್ಲ ವಿಶ್ವಕರ್ಮ ಶಿಲ್ಪಿ. ಆತನ ಮಾಯಾಶಕ್ತಿಗಳಿಂದ ಈ ಪ್ರದೇಶವೆಲ್ಲಾ ಹೀಗೆ ಸೃಷ್ಟಿಯಾಗಿದೆ. ಅವನು ಇಲ್ಲಿ ದೊಡ್ಡ ತಪಸ್ಸು ಮಾಡಿ, ಬ್ರಹ್ಮಾಂಡದಷ್ಟು ಧನಸಂಪತ್ತನ್ನು ಬ್ರಹ್ಮನಿಂದ ವರವನ್ನಾಗಿ ಪಡೆದನು. ಅವನು ಹೇಮ ಎಂಬ ಅಪ್ಸರೆಯೊಂದಿಗೆ ಈ ಪ್ರದೇಶದಲ್ಲಿ ಸುಖವಾಗಿರುವಾಗ, ಇಂದ್ರನಿಗೆ ಕೋಪಬಂದು ಮಯನನ್ನು ವಜ್ರಾಯುಧದಿಂದ ಹೊಡೆದನು. ಆಮೇಲೆ ಬ್ರಹ್ಮನು ಈ ಪ್ರದೇಶ



ವನ್ನು ಹೇಮಳಿಗೇ ಕೊಟ್ಟನು. ನಾನು ಮೇರು ಸಾವರ್ಣಿಯ ಕುಮಾರಿ. ನನ್ನ ಹೆಸರು ಸ್ವಯಂಪ್ರಭ. ಹೇಮಳಿಗೆ ಸೇರಿದ ಈ ಪ್ರದೇಶವನ್ನು ರಕ್ಷಿಸುತ್ತ ಇಲ್ಲಿಯೇ ಇದ್ದೇನೆ. ಹೇಮ ನನ್ನ ಪರಮ ಸ್ನೇಹಿತೆ. ಅವಳು ಸಂಗೀತ ನೃತ್ಯಗಳಲ್ಲಿ ಪ್ರವೀಣಳಾದವಳು. ಅವಳು ನನಗೆ ಕೊಟ್ಟ ವರಗಳ ಕಾರಣದಿಂದ ನನ್ನನ್ನು ಯಾರೂ ಜಯಿಸುವಂತಿಲ್ಲ. ನೀವುಗಳು ಯಾವ ಕಾರಣಕ್ಕಾಗಿ ಪ್ರಯಾಣ ಹೊರಟು ಇಲ್ಲಿಗೆ ಬಂದಿರಿ ? ಪ್ರವೇಶಿಸಲಿಕ್ಕೆ ಸಾಧ್ಯವಿಲ್ಲದ ಈ ಸ್ಥಳಕ್ಕೆ ಅಷ್ಟು ಸಾಹಸ ಮಾಡಿ ಏಕೆ ಬಂದಿರಿ ? ತುಂಬಾ ದಣಿದಿದ್ದೀರಿ. ನೀವು ಮೊದಲು ಹಣ್ಣು ಮೊದಲಾದ ಆಹಾರ ತಿಂದು ನೀರು ಕುಡಿದು ನಿಮ್ಮ ವೃತ್ತಾಂತವನ್ನು ಏನೂ ಮುಚ್ಚಿಡದೆ ವಿಸ್ತಾರವಾಗಿ ಹೇಳಿರಿ."

ಅವಳು ಹೇಳಿದಂತೆ ವಾನರರೆಲ್ಲ ನಡೆದುಕೊಂಡರು. ಹನುಮಂತನು ಏನೂ ಮುಚ್ಚುಮರೆ ಮಾಡದೆ ತಮ್ಮ ಸಮಾಚಾರಗಳನ್ನು ಸ್ವಯಂಪ್ರಭೆಗೆ ವಿವರವಾಗಿ ಹೇಳಿದನು. ಕಡೆಗೆ ಅವನು ಅವಳೊಂದಿಗೆ, "ಅಮ್ಮಾ. ನೀನು ನಮಗೆ ಆಹಾರವಿತ್ತು ಪ್ರಾಣ ರಕ್ಷಣೆ ಮಾಡಿದೆ. ನಮ್ಮೆಲ್ಲರ ಹೃದಯವೂ ಕೃತಜ್ಞತೆಯಿಂದ ತುಂಬಿದೆ. ನಾವು ಏನುತಾನೇ ಪ್ರತ್ಯುಪಕಾರ ಮಾಡಬೇಕೋ ತಿಳಿಯದು. ನೀನೇ ನಮ್ಮಿಂದಾಗ ಬೇಕಾದುದನ್ನು ತಿಳಿಸಬೇಕು" ಎಂದನು.

"ಬಹಳ ಸಂತೋಷ. ನನಗೆ ನಿಮ್ಮಿಂದ ಯಾವ ಪ್ರತ್ಯುಪಕಾರವೂ ಬೇಡ. ನೀವು ಹೊರಟ ಕಾರ್ಯ ನೆರವೇರಿದರೆ ಸಾಕು. ಹಾಗಾಗುವಂತೆ ಹರಸುತ್ತೇನೆ." ಎಂದಳು ಸ್ವಯಂಪ್ರಭ.


"ಅಮ್ಮಾ, ಈಗಾಗಲೇ ಸುಗ್ರೀವನು ನಮಗಿತ್ತ ಗಡು ಮುಗಿದುಹೋಯಿತು. ಈ ಬಿಲದೊಳಗಿನಿಂದ ನಾವು ಹೊರಬೀಳುವ ದಾರಿ ನೀನೇ ತಿಳಿಸಬೇಕು. ನಮ್ಮನ್ನು ಕಾಪಾಡು. ನಾವು ಇದರೊಳಗೆ ಸಿಕ್ಕಿಕೊಂಡಿದ್ದರೆ ಸೀತಾದೇವಿಯನ್ನು ಹುಡುಕುವ ಕಾರ್ಯ ನಿಂತುಹೋಗುತ್ತದೆ." ಎಂದ ಹನುಮಂತ.

"ನಾನು ತಪಶ್ಶಕ್ತಿಯಿಂದ ನಿಮ್ಮನ್ನು ಹೊರಗೆ ಕಳುಹಿಸುತ್ತೇನೆ. ನೀವೆಲ್ಲರೂ ಕಣ್ಣು ಮುಚ್ಚಿಕೊಳ್ಳಿ" ಎಂದಳು ಸ್ವಯಂಪ್ರಭೆ.

ವಾನರರೆಲ್ಲ ಬೆರಳುಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡರು. ಮರುಕ್ಷಣದಲ್ಲಿ ಅವರಿಗೆ ಬೇರೆಲ್ಲಿಯೋ ಇರುವ ಅನುಭವವಾಗಿ ಕಣ್ಣು ಬಿಡಿಸಿದರು. ಎಲ್ಲರೂ ಋಕ್ಷ ಬಿಲದ ಹೊರಬದಿಯಲ್ಲಿದ್ದಾರೆ.

ಪಕ್ಕದಲ್ಲಿ ನಿಂತಿದ್ದ ಸ್ವಯಂಪ್ರಭೆ ಅವರನ್ನು ಕುರಿತು, "ಋಕ್ಷ ಬಿಲದಿಂದ ನೀವೀಗ ಹೊರಗೆ ಬಂದಿದ್ದೀರಿ. ಇದು ವಿಂಧ್ಯ ಪರ್ವತ. ಅದು ಸಮುದ್ರ. ನಿಮಗೆಲ್ಲ ಶುಭವಾಗಲಿ !" ಎಂದು ಹೇಳಿ ಹಿಂದಿರುಗಿ ಗುಹೆಯೊಳಗೆ ಹೋದಳು.





ವೀರಹನುಮಾನ್

ಹನುಮದಾದಿ ವಾನರರು ಸ್ವಯಂಪ್ರಭೆಯ ಪುಣ್ಯದಿಂದ ಮಾಯಾಪ್ರದೇಶವಾದ ಋಕ್ಷಬಿಲದಿಂದ ಕಣ್ಣು ಮುಚ್ಚಿ ಬಿಡಿಸುವುದರೊಳಗೆ ವಿಮೋಚನೆಯಾಗಿ, ಇದಿರಿನಲ್ಲಿ ಸಮುದ್ರವಿರುವುದನ್ನು ನೋಡಿದರು. ದೊಡ್ಡದೊಡ್ಡ ತೆರೆಗಳನ್ನು ಹೊರಳಿಸಿಕೊಂಡು ಮಹಾಘೋಷ ಮಾಡುವ ಸಮುದ್ರವನ್ನು ಆಕಸ್ಮಿಕವಾಗಿ ನೋಡಿದುದರಿಂದ ಎಲ್ಲರಿಗೂ ಅತ್ಯಾಶ್ಚರ್ಯವಾಯಿತು.

ಅವರು ವಿಂಧ್ಯಪರ್ವತದ ನೈಋತಿಪ್ರಾಂತದ ಪುಷ್ಪವೃಕ್ಷಗಳ ಕೆಳಗೆ ಕುಳಿತುಕೊಂಡು ಆಲೋಚನೆ ಮಾಡಲು ತೊಡಗಿದರು. ಅವರಿಗೆ ತೋರಿದ ದೊಡ್ಡ ಚಿಂತೆಯೆಂದರೆ, ಸುಗ್ರೀವನು ವಿಧಿಸಿದ ಗಡುವಿನ ಕಾಲ ದಾಟಿಹೋಗಿತ್ತು. ಸುಗ್ರೀವನ ಕೋಪವು ಎಲ್ಲರ ಮನಸ್ಸನ್ನೂ ನಡುಗಿಸಿಕೊಂಡಿತ್ತು. ತಮ್ಮ ಮುಂದಿನ ಕರ್ತವ್ಯವೇನೆಂಬುದೀಗ ನಿರ್ಣಯವಾಗ ಬೇಕಿತ್ತು. ಇದೇನೂ ಸಣ್ಣ ವಿಷಯವಲ್ಲ. ಈ ಪರಿಸ್ಥಿತಿಯಲ್ಲಿ ಯುವರಾಜನಾದ ಅಂಗದನು ಎಲ್ಲರನ್ನು ಕುರಿತು ಹೀಗೆಂದನು: "ವಾನರಬಂಧುಗಳೇ, ನಾವೀಗ ಇಕ್ಕಟ್ಟಿನಲ್ಲಿದ್ದೇವೆ. ನಮ್ಮನ್ನು ಕಳುಹಿಸಿದ ಸುಗ್ರೀವನು ನಮಗೆ ನಿಯಮಿಸಿದ ಒಂದು ತಿಂಗಳ ಗಡು, ನಾವು ಋಕ್ಷಬಿಲದೊಳಗಿರುವಾಗಲೇ ಕಳೆದುಹೋದ ಸಂಗತಿ ನಿಮಗೆಲ್ಲರಿಗೂ ಗೊತ್ತಿದೆಯಷ್ಟೆ? ಮೊತ್ತಮೊದಲು ಸುಗ್ರೀವನು ಹನುಮಂತನ ಸೂಚನೆಯಿಂದ ಅರಿವಿಗೆ ಬಂದು ಹದಿನೈದು ದಿನಗಳ ಗಡುವಿಟ್ಟು ಎಲ್ಲರನ್ನೂ ಕರೆಸಿದನು. ಇದು ಆಶ್ವೀಜ ಮಾಸದಲ್ಲಿ ನಡೆಯಿತು. ತರುವಾಯ ಲಕ್ಷ್ಮಣನು ಕೋಪಿಸಿಕೊಂಡು ಬಂದ ಮೇಲೆ ಮತ್ತೆ ಹದಿನೈದು ದಿನಗಳ ಗಡುವಿಟ್ಟು ಸುಗ್ರೀವನು ನಮ್ಮೆಲ್ಲರನ್ನೂ ಕರೆಸಿದನು. ಆಮೇಲೆ ನಮ್ಮನ್ನೆಲ್ಲ ಕಳುಹಿಸುತ್ತ ಹಿಂದಿರುಗಿ ಬರಲು ಒಂದು ತಿಂಗಳ ಗಡು ವಿಧಿಸಿದ್ದಾನೆ. ಆ ಗಡು ಈಗ ತೀರಿಹೋಯಿತು. ಈಗ ನಾವು ಏನು ಮಾಡಬೇಕೆಂಬುದನ್ನು ಆಲೋಚಿಸಬೇಕಾಗಿದೆ. ಸೀತೆಯ ಜಾಡು ನಮಗೇನೂ ಸಿಗಲೇ ಇಲ್ಲ. ಆದುದರಿಂದ ನಾವು ಸುಗ್ರೀವನ




ಆಜ್ಞೆಯನ್ನು ಎರಡು ವಿಧದಿಂದಲೂ ಮೀರಿಬಿಟ್ಟಿದ್ದೇವೆ. ಅತ್ಯಂತ ಕ್ರೂರಸ್ವಭಾವದವನಾದ ಸುಗ್ರೀವನು ನಮ್ಮೆಲ್ಲರನ್ನೂ ಕೊಂದುಹಾಕುವನು. ನಾವು ಅವನ ಬಳಿಗೆ ತಿರುಗಿಹೋಗಿ ಭಯಂಕರವಾದ ಮರಣವನ್ನು ಅನುಭವಿಸುವುದಕ್ಕಿಂತ ಇಲ್ಲಿಯೇ ಪ್ರಾಯೋಪವೇಶಮಾಡಿ ಪ್ರಾಣತ್ಯಾಗ ಮಾಡುವುದೇ ಒಳ್ಳೆಯದು. ಸುಗ್ರೀವನಿಗೆ ನನ್ನ ಮೇಲೆ ಒಂದಿಷ್ಟೂ ಒಳ್ಳೆಯ ಭಾವವಿಲ್ಲ. ನನ್ನನ್ನು ಯುವರಾಜನನ್ನಾಗಿ ಮಾಡಿದವನು ರಾಮನೇ ಹೊರತು ಸುಗ್ರೀವನಲ್ಲ. ಎಷ್ಟಾದರೂ ನಾನು ಅವನ ಶತ್ರುವಿನ ಮಗನಾದುದರಿಂದ ಯಾವುದೋ ಒಂದು ನೆವನ ಸಿಕ್ಕಿದರೆ ಸಾಕು, ನನ್ನನ್ನು ಕೊಲ್ಲುತ್ತಾನೆ. ಹೀಗೆ ನಾನು ಸಾಯುವುದಂತೂ ಖಂಡಿತ. ನನ್ನ ಹಿತಚಿಂತಕರಿಗೆಲ್ಲಾ ದುಃಖವಾಗುವಂತೆ ನಾನು ಕಿಷ್ಕಿಂಧೆಗೆ ಹೋಗಿ ಸುಗ್ರೀವನ ಕೈಯಲ್ಲೇ ಏತಕ್ಕೆ ಸಾಯಬೇಕು ? ಇಲ್ಲಿಯೇ ನಿರಶನವ್ರತವನ್ನು ಹಿಡಿದು ಈ ಸಮುದ್ರತೀರದಲ್ಲಿಯೇ ಸತ್ತು ಹೋಗುತ್ತೇನೆ. ಇದು ನನ್ನ ನಿರ್ಧಾರ. ನೀವೆಲ್ಲಾ ನಿಮ್ಮನಿಮ್ಮ ಇಷ್ಟದಂತೆ ಮಾಡಿ."

ಅಂಗದನು ಹೇಳಿದ ಮಾತನ್ನು ಕೇಳಿ ವಾನರವೀರರೆಲ್ಲ ಬಹಳವಾಗಿ ದುಃಖಿಸುತ್ತ, "ನಾವು ಸೀತೆಯ ಸಮಾಚಾರವನ್ನು ತಿಳಿಯಲು ಸಾಧ್ಯವಾಗಿದ್ದರೆ ಸುಗ್ರೀವನ ಬಳಿಗೆ ಹೋಗಬಹುದಿತ್ತು. ಆದರ ಆಶೆ ಇಲ್ಲದ ಮೇಲೆ, ಇಲ್ಲಿಯೇ ಸಾಯುವುದು ಒಳ್ಳೆಯದು." ಎಂದರು.

ಆಗ ತಾರನು ಸ್ವಲ್ಪ ಧೈರ್ಯಬರುವಂತೆ, "ನಾವು ವ್ಯರ್ಥವಾಗಿ ಸಾಯುವ ಅಗತ್ಯವೇನಿಲ್ಲ. ನಾವೆಲ್ಲಾ ಮತ್ತೆ ಈ ಮಾಯಾಬಿಲದೊಳಗೆ ಹೋಗಿ ಅಲ್ಲಿ ನಿಶ್ಚಿಂತೆಯಿಂದ ಇರಬಹುದು. ಆ ಬಿಲದೊಳಗೆ ಯಾರೂ ಬರುವುದಿಲ್ಲ. ಅಲ್ಲಿ ತಿನ್ನಲು ತಿಂಡಿಗಳೂ ತೀರ್ಥವೂ ಪುಷ್ಕಳವಾಗಿವೆ. ರಾಮನ ಭಯವಾಗಲಿ, ಸುಗ್ರೀವನ ಭಯವಾಗಲೀ ಅಲ್ಲೇನಿಲ್ಲ. ಹೊರ ಪ್ರಪಂಚಕ್ಕೆ ಸತ್ತವರ ಹಾಗೆ ಅಲ್ಲಿ ಆಯುಷ್ಯತೀರುವವರೆಗೆ ಇರಬಹುದು." ಎಂದನು.

ಈ ಮಾತುಗಳನ್ನೆಲ್ಲ ಕೇಳುತ್ತಿದ್ದ ಹನುಮಂತನು ತನ್ನೊಳಗೆ, "ಸುಗ್ರೀವನು ಈಗ ರಾಜನಾದರೂ ಆದರ ಉತ್ತರಾಧಿಕಾರಿಯಾಗುವ ಯೋಗ್ಯತೆಯುಳ್ಳವನು ಅಂಗದನೇ. ವಾಲಿಯ ಮಗನಾದ ಈ ಅಂಗದನು ಸೂಕ್ಷ್ಮಬುದ್ಧಿಯುಳ್ಳವನು. ದೇಶಕಾಲಗಳನ್ನು ತಿಳಿದು ಆದರಂತೆ ನಡೆಯುವ ಸಾಮರ್ಥ್ಯವುಳ್ಳವನು. ಸುಗ್ರೀವನ ಮೇಲೆ ಇವನಿಗಿರುವ ಅಪೋಹವನ್ನು ಬೆಳೆಯ ಗೊಡಬಾರದು" ಎಂದುಕೊಂಡನು. ಬಳಿಕ ಹನುಮಂತನು ಅಂಗದನನ್ನು ಕುರಿತು, "ಅಂಗದಾ, ನೀನು ಯುದ್ಧದಲ್ಲಿ ನಿನ್ನ ತಂದೆಗಿಂತ ದೊಡ್ಡವನಾಗಲು ಸಾಧ್ಯವಿಲ್ಲ. ಚಪಲಚಿತ್ತರಾದ ಈ ವಾನರರು ಯಾವಾಗಲೂ ನಿನ್ನ ಜತೆಯಲ್ಲಿ ಬೆಂಬಲರಾಗಿರುವರೆಂದು ನಂಬಬೇಡ. ಅವರಿಗೆಲ್ಲ ಹೆಂಡತಿ ಮಕ್ಕಳಿದ್ದಾರೆ. ನನ್ನನ್ನೂ, ಜಾಂಬವಂತ




ನ್ನು ಇತರ ವಾನರವೀರರನ್ನೂ ಸುಗ್ರೀವನಿಂದ ಬೇರ್ಪಡಿಸಿ ನಿನ್ನ ಪಕ್ಷಕ್ಕೆ ತಂದುಕೊಳ್ಳಲು ನಿನಗೆ ಸಾಧ್ಯವಿಲ್ಲ. ಈ ಋಕ್ಷಬಿಲವು ಎಂತಹ ಮಾಯಾಜಾಲದಿಂದ ಕೂಡಿದ್ದರೂ ಲಕ್ಷ್ಮಣನ ಬಾಣಗಳಿಗೆ ನಿಲ್ಲಲಾರದು. ಅವನು ಈ ಬಿಲವನ್ನು ಎಲೆಯನ್ನು ಛೇದಿಸಿದಂತೆ ಛೇದಿಸಿಬಿಡುವನು. ಮುಖ್ಯವಾಗಿ ನೀನು ಸುಗ್ರೀವನ ಮೇಲೆ ವಿರೋಧ ಕಟ್ಟಿಕೊಂಡು ಈ ಬಿಲದೊಳಗೆ ಪ್ರವೇಶಿಸಿದರೆ ಈ ವಾನರರು ನಿನ್ನನ್ನು ಬಿಟ್ಟುಬಿಡುತ್ತಾರೆ. ತರುವಾಯ ನಿನಗೆ ಹುಲ್ಲುಕಡ್ಡಿಯ ಬೆಲೆಯೂ ಬಾರದು. ರಾಮಲಕ್ಷ್ಮಣರು ನಿನ್ನನ್ನು ಜೀವದೊಂದಿಗೆ ಬಿಡುವವರೂ ಅಲ್ಲ. ಆದುದರಿಂದ ಅಂತಹ ಆಲೋಚನೆಯನ್ನು ಮಾಡಬೇಡ. ಅದು ನಿನಗೆ ಕೆಟ್ಟ ಹೆಸರನ್ನೇ ತರುವಂತಹುದು. ಸುಗ್ರೀವನು ಧರ್ಮಾತ್ಮನು. ಅವನಿಗೆ ನಿನ್ನ ಮೇಲೆ ಯಾವ ಹಗೆಯೂ ಇಲ್ಲ: ಹಗೆಗೆ ಕಾರಣವೂ ಇಲ್ಲ. ನಿನ್ನ ತಾಯಿಯ ಮೇಲೆ ಅವನಿಗೆ ಅತ್ಯಂತ ಪ್ರೇಮವಿದೆ. ಅವಳ ಮಗನಾದ ನಿನ್ನನ್ನು ತನ್ನ ಮಗನಂತೆಯೇ ನೋಡಿಕೊಳ್ಳುತ್ತಾನೆ. ವೃಥಾ ಸಂಶಯಪಡಬೇಡ " ಎಂದನು.

ಹನುಮಂತನ ಮಾತು ಕೇಳಿ ಅಂಗದನು ಒಪ್ಪದೆ, "ಇಲ್ಲ, ಹನುಮಾನ್. ನೀನು ಹೇಳುವಂತೆ ಸುಗ್ರೀವನಲ್ಲಿ ಯಾವ ಸುಗುಣಗಳೂ ಇಲ್ಲ. ತನ್ನ ಅಣ್ಣನನ್ನು ಗುಹೆಯ ಹತ್ತಿರ ಕಾವಲಿಗೆ ಕೂಡಿಸಿ, ಶತ್ರು ಹೊರಗೆಬಾರದಂತೆ ನೋಡಿಕೊಂಡಿರಬೇಕೆಂದು ಹೇಳಿದರೆ, ಸುಗ್ರೀವನು ದುರ್ಬುದ್ಧಿಯಿಂದ ಗುಹೆಯ ದ್ವಾರಕ್ಕೆ ದೊಡ್ಡ ಕಲ್ಲನ್ನು ಅಡ್ಡವಿಟ್ಟು ಅಣ್ಣನನ್ನು ಒಳಗೆ ಸಿಕ್ಕಿಸಿಹಾಕಿಬಿಟ್ಟ. ರಾಮನಿಂದ ಅಷ್ಟೊಂದು ಉಪಕಾರ ಹೊಂದಿ ಪ್ರತ್ಯುಪಕಾರ ಮಾಡುವ ಮಾತನ್ನು ಮರೆತುಬಿಟ್ಟ. ಕಡೆಗೆ ಅವನು ಸೀತೆಯನ್ನು ಹುಡುಕಿಸುತ್ತಿರುವುದು ಕೂಡಾ ಲಕ್ಷ್ಮಣನಿಗೆ ಭಯಪಟ್ಟೇ ಹೊರತು ಒಳ್ಳೆಯ ಬುದ್ಧಿಯಿಂದೇನಲ್ಲ. ಅಂತಹವನಿಗೆ ನಾನೀಗ ಎಲ್ಲರಿಗೂ ತಿಳಿಯುವ ಹಾಗೆ ಮಾಡಿದ ಆಲೋಚನೆ ತಿಳಿದ ಮೇಲೆ ನಾನು ಜೀವದಿಂದಿರುವ ಆಶೆ ಎಲ್ಲಿಯದು? ನಾನು ಕಿಷ್ಕಿಂಧೆಗೆ ಬರಲಾರೆ. ಇಲ್ಲಿಯೇ ಪ್ರಾಯೋಪವೇಶ ಮಾಡುತ್ತೇನೆ. ನೀವೆಲ್ಲಾ ಕಿಷ್ಕಿಂಧೆಗೆ ಹೋಗಿಬಿಡಿ. ರಾಮಲಕ್ಷ್ಮಣರ ಕ್ಷೇಮವನ್ನು ಬಯಸುವೆನೆಂದು ಹೇಳಿ!" ಎಂದು ಹೇಳುತ್ತ ಕಡೆಯ ಮಾತುಗಳನ್ನು ಗದ್ಗದಸ್ವರದಿಂದ ಹೇಳಿದನು.

ಆಮೇಲೆ ಅಂಗದನು ತನ್ನ ತಾಯಿಯಾದ ತಾರೆಯನ್ನು ನೆನೆದುಕೊಂಡು ದುಃಖಿಸುತ್ತ ವೃದ್ಧರಾದ ವಾನರರಿಗೆ ನಮಸ್ಕಾರಗಳನ್ನು ಮಾಡಿ, ನೆಲದ ಮೇಲೆ ದರ್ಭೆಗಳನ್ನು ಹರಡಿಕೊಂಡು ಅವುಗಳ ಮೇಲೆ ನೀಟಾಗಿ ಮಲಗಿಬಿಟ್ಟನು.

ಅದನ್ನು ನೋಡಿ ವಾನರರೆಲ್ಲಾ ಗೋಳೆಂದು ಅಳತೊಡಗಿದರು. ಅಂಗದನ ನಿಶ್ಚಯವು ಬದಲಾಗಲಾರದೆಂದು ತಿಳಿದು ಎಲ್ಲಾ ವಾನರರೂ ಸಮುದ್ರದಲ್ಲಿ



ಸ್ನಾನಮಾಡಿ, ದರ್ಭೆಗಳನ್ನು ಹರಡಿಕೊಂಡು ತಾವು ಕೂಡಾ ಅಂಗದನಂತೆಯೇ ಮಲಗಿಕೊಂಡರು. ಸ್ವಲ್ಪ ಹೊತ್ತಿನಲ್ಲಿ ವಾನರರೆಲ್ಲಾ ತಮ್ಮೊಳಗೆ ತಾವು ರಾಮನ ವನವಾಸವನ್ನು ಕುರಿತು, ಸೀತಾಪಹರಣ, ಜಟಾಯುವಿನ ಮರಣ, ವಾಲಿಯ ವಧೆ, ತಾವೆಲ್ಲಾ ಸೀತೆಯನ್ನು ಹುಡುಕುತ್ತಾ ಹೊರಟುದು ಮುಂತಾದುವನ್ನು ಕುರಿತು ಮಾತಾಡಲು ತೊಡಗಿದರು. ಇದರಿಂದ ತಮ್ಮ ಸಂಕಟ ಮರೆತು ಸಾಯುವವರೆಗೆ ಹೊತ್ತು ಕಳೆಯಬಹುದೆಂದುಕೊಂಡರು.

ವಾನರರ ಕೋಲಾಹಲವು ಸ್ವಲ್ಪ ದೂರದವರೆಗೆ ಕೇಳಿಸುತ್ತಿದ್ದಿತು. ಅದನ್ನು ಕೇಳಿ ಗುಡ್ಡದ ಗುಹೆಯೊಳಗಿದ್ದ ದೊಡ್ಡದೊಂದು ಪಕ್ಷಿ ಹೊರಕ್ಕೆ ಬಂದು, "ಆಹಾ ! ನನಗೆ ಹೊಟ್ಟೆ ತುಂಬಾ ಬೇಕಾದಷ್ಟು ತಿಂಡಿಯ ರಾಶಿ !" ಎಂದು ತನಗೆತಾನೇ ಹೇಳಿಕೊಂಡಿತು. ಅದರ ಧ್ವನಿಯನ್ನು ಕೇಳಿ ವಾನರರು ಬೆದರಿಬಿದ್ದರು. ದೊಡ್ಡದೊಂದು ಹದ್ದು ತಮ್ಮ ಕಡೆಗೆ ಮೆಲ್ಲಮೆಲ್ಲನೆ ಬರುವುದನ್ನು ನೋಡಿ ಎಲ್ಲರೂ ಸಾವಿನ ಅಂಚಿಗೆ ಬಂದವರಂತೆ ಹೆದರಿದರು.

ಅಂಗದನು ಹನುಮಂತನೊಂದಿಗೆ, "ಆಯಿತು. ಸಾಯಲು ಸಿದ್ಧರಾದ ನಮ್ಮ ಬಳಿಗೆ ಮೃತ್ಯು ತಾನಾಗಿ ಬರುತ್ತಿದೆ. ಇದು ಸಾಧಾರಣದ ಹದ್ದಲ್ಲ : ಸೂರ್ಯನ ಮಗನಾದ ಸಂಪಾತಿಯಾಗಿರಬೇಕು : ಜಟಾಯುವಿನ ಅಣ್ಣ. ರಾಮನಿಗಾಗಿ ಜಟಾಯು ರಾವಣನೊಂದಿಗೆ ಯುದ್ಧಮಾಡಿ ಹೇಗೆ ಪ್ರಾಣ ಬಿಟ್ಟನೆಂದು ನಾವೆಲ್ಲಾ ಕೇಳಿದ್ದೇವಷ್ಟೆ ? ನಾವು ಜಟಾಯುವಿನ ಹಾಗೆ ರಾಮನ ಕಾರ್ಯದಲ್ಲಿ ಸಾಯುವವರ ಪುಣ್ಯ ಕೂಡ ಪಡೆದಿಲ್ಲ. ಕಾರ್ಯ ಸಾಧಿಸಲಾರದವರಾಗಿ ಸಾಯುತ್ತಿದ್ದೇವೆ" ಎಂದನು.

ಈ ಮಾತನ್ನು ಕೇಳಿ ಆ ಪಕ್ಷಿ ಗಟ್ಟಿಯಾಗಿ, "ಏನು ಮಾತು ಕೇಳುತ್ತಿದ್ದೇನೆ ? ನನ್ನ ತಮ್ಮ ಜಟಾಯು ಸತ್ತನೆಂದು ಹೇಳಿ ನನಗೆ ದುಃಖವನ್ನುಂಟು ಮಾಡುವವನು ಯಾರಪ್ಪಾ ಅದು ? ಜಟಾಯುವಿಗೆ ರಾವಣನೊಂದಿಗೆ ಯುದ್ಧ ನಡೆಯಿತೆ ? ಏಕೆ ? ಬಹಳ ಕಾಲದ ಮೇಲೆ ನನ್ನ ತಮ್ಮ ಜಟಾಯುವಿನ ಹೆಸರು ಕಿವಿಗೆ ಬೀಳುತ್ತಿದೆ" ಎಂದು ಕೂಗಿ ಹೇಳಿತು.

ಹಾಗೆಯೇ ಸಂಪಾತಿ ವಾನರರನ್ನು ನೋಡಿ "ವಾನರರೇ, ಸೂರ್ಯಕಿರಣಗಳಿಂದ ನನ್ನ ರೆಕ್ಕೆಗಳು ಸುಟ್ಟುಹೋಗಿವೆ. ಈ ಪರ್ವತದ ಮೇಲಿನಿಂದ ಬೇಗ ಇಳಿದು ನಿಮ್ಮ ಬಳಿಗೆ ಬರಲು ಸಾಧ್ಯವಿಲ್ಲ. ಬೇಗ ನನ್ನನ್ನು ನಿಮ್ಮ ಬಳಿಗೆ ಇಳಿಸಿಕೊಳ್ಳಿ. ನನ್ನ ತಮ್ಮನ ವಿಷಯ ಕೂಲಂಕಷವಾಗಿ ತಿಳಿಯಬೇಕು" ಎಂದನು.

ತಮ್ಮನ್ನೆಲ್ಲ ತಿಂದು ಬಿಡುವುದಾಗಿ ಹೇಳಿದ ಸಂಪಾತಿ, ಹೀಗೆ ಹೇಳುವುದನ್ನು ವಾನರರು ನಂಬಲಾರದೆ ಹೋದರು. ಕಡೆಗೆ ತಾವೆಲ್ಲ ಹೇಗೂ ಸಾಯಲು ಸಿದ್ಧರಾಗಿರುವುದರಿಂದ, ಸಂಪಾತಿ ತಮ್ಮನ್ನು ತಿನ್ನುವನೆಂದು ಹೆದರುವುದರಲ್ಲಿ ಅ...

ವಿಲ್ಲವೆಂದು ಅವರಿಗೆ ತೋರಿತು. ಅಂತೆಯೇ ಅಂಗದನು ಗುಡ್ಡದ ಮೇಲಕ್ಕೆ ಹತ್ತಿ, ಸಂಪಾತಿಗೆ ಆಧಾರ ಕೊಟ್ಟು ಕೆಳಕ್ಕೆ ತಂದನು. ಬಳಿಕ ಸಂಪಾತಿಯು ಕೋರಿಕೆಯಂತೆ, ನಡೆದ ಸಂಗತಿಯನ್ನು ಈ ರೀತಿಯಾಗಿ ಹೇಳಿದನು :

"ಇಕ್ಷ್ವಾಕುವಂಶದ ರಾಜನಾದ ದಶರಥನ ಮಗ ರಾಮನು ತಂದೆಯ ಮಾತನ್ನು ಶಿರಸಾವಹಿಸಿಕೊಂಡು, ತಮ್ಮನಾದ ಲಕ್ಷ್ಮಣ ಮತ್ತು ಹೆಂಡತಿಯಾದ ಸೀತೆಯೊಂದಿಗೆ ವನವಾಸ ಮಾಡಲು ದಂಡಕಾರಣ್ಯಕ್ಕೆ ಬಂದನು. ಅವನು ಜನಸ್ಥಾನದಲ್ಲಿರುವಾಗ, ರಾವಣನೆಂಬವನು ಸೀತೆಯನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋದನು. ಆ ರಾವಣ ಆಕಾಶಮಾರ್ಗದಲ್ಲಿ ಹೋಗುತ್ತಿದ್ದಾಗ ದಶರಥನ ಮಿತ್ರನಾದ ಜಟಾಯುವು ನೋಡಿದ. ಕೂಡಲೇ ಜಟಾಯು ರಾವಣನನ್ನು ಅಡ್ಡಗಟ್ಟಿ ಯುದ್ಧಮಾಡಿ, ಸ್ವಲ್ಪ ಹೊತ್ತು ಸೀತೆಯನ್ನು ಕಾಪಾಡಿದನಾದರೂ ಕಡೆಗೆ ರಾವಣನಿಂದ ಸತ್ತುಹೋದ. ರಾಮನು ಜಟಾಯುವಿಗೆ ಅಂತ್ಯ ಸಂಸ್ಕಾರಮಾಡಿ, ನಾವಿರುವ ಪ್ರಾಂತಕ್ಕೆ ಬಂದು, ನನ್ನ ಚಿಕ್ಕಪ್ಪನಾದ ಸುಗ್ರೀವನೊಂದಿಗೆ ಸ್ನೇಹಬೆಳೆಸಿ, ನನ್ನ ತಂದೆಯಾದ ವಾಲಿಯನ್ನು ಕೊಂದು, ಸುಗ್ರೀವನನ್ನು ವಾನರರಾಜ್ಯಕ್ಕೆ ರಾಜನನ್ನಾಗಿ ಮಾಡಿದ. ಆ ಸುಗ್ರೀವನ ಆಜ್ಞೆಯ ಮೇಲೆಯೇ ನಾವು ಸೀತೆಯನ್ನು ಹುಡುಕುತ್ತಾ ಹೀಗೆ ಬಂದೆವು. ನಮಗೆ ಸೀತೆಯ ಜಾಡು ಎಲ್ಲಿಯೂ ಕಾಣಲಿಲ್ಲ. ನಾವು ಕಾರ್ಯಸಾಧನೆ ಮಾಡದೆ ಹಿಂದಿರುಗಿಹೋದರೆ ನಿಶ್ಚಯವಾಗಿ ರಾಮನ ಕೈಯಲ್ಲಿಯೋ ಸುಗ್ರೀವನ ಕೈಯಲ್ಲಿಯೋ ಸಾಯುತ್ತೇವೆ. ಆದಕ್ಕೇ ಹೀಗೆ ಸಾಯಲು ಬಿದ್ದಿದ್ದೇವೆ" ಎಂದನು. ಎಲ್ಲ ವಾನರರೂ ಹೌದು ಹೌದೆಂದರು.

ಸಂಪಾತಿ ದುಃಖದಿಂದ ನಡುಗುವ ದೊಡ್ಡ ಕಂಠದಿಂದ, "ಅಯ್ಯಾ, ವಾನರರೇ, ನೀವು ರಾವಣ



ನೊಂದಿಗೆ ಯುದ್ಧಮಾಡಿ ಸತ್ತನೆಂದು ಹೇಳುವ ಆ ಜಟಾಯು ನನ್ನ ತಮ್ಮನೇ. ನಾನೀಗ ಮುದುಕನಾದೆ; ರೆಕ್ಕೆಗಳು ಸುಟ್ಟುಬಿದ್ದವನು. ಆ ದುಷ್ಟ ರಾವಣನನ್ನು ಕೊಂದು ಹಗೆ ತೀರಿಸಿಕೊಳ್ಳಲು ನನ್ನಿಂದಾಗದೆ ಹೋಗಿದೆ. ಏನು ಮಾಡಲಿ? ವೃತ್ರಾಸುರನನ್ನು ವಧೆ ಮಾಡಿದ ಆ ದಿನಗಳಲ್ಲಿ ನಾವಿಬ್ಬರೂ, ಅಣ್ಣತಮ್ಮಂದಿರು ಸ್ಪರ್ಧೆಯಿಂದ ಆಕಾಶದಲ್ಲಿ ಹಾರುತ್ತ ಸೂರ್ಯನ ಸಮೀಪಕ್ಕೆ ಹೋದೆವು. ಸೂರ್ಯನು ನಡುನೆತ್ತಿಗೆ ಬರುವಾಗ ಜಟಾಯು ಬಿಸಿಲಿನ ಹೊಡೆತ ತಾಳಲಾಗದೆ ಗೋಳಾಡತೊಡಗಿದ. ಆಗ ನಾನು ಅವನಿಗೆ ಬಿಸಿಲು ತಾಗದಂತೆ ನನ್ನ ರೆಕ್ಕೆಗಳನ್ನು ಅಡ್ಡಹಿಡಿದೆ. ಆ ಕಾರಣದಿಂದ ನನ್ನ ರೆಕ್ಕೆಗಳು ಸುಟ್ಟುಕರಕಾಗಿ ಉದುರಿಹೋದುವು. ನಾನು ಈ ವಿಂಧ್ಯಪರ್ವತದ ಮೇಲೆ ಬಿದ್ದೆ. ಅಂದಿನಿಂದಲೂ ನಾನು ಇಲ್ಲೇ ಇದ್ದೇನೆ. ಇಂದಿನವರೆಗೂ ನನ್ನ ತಮ್ಮನ ಸಮಾಚಾರವಾವುದೂ ನನಗೆ ತಿಳಿಯು



ಲಿಲ್ಲ. ಈ ದಿನ ಆ ತಮ್ಮನ ಮರಣವಾರ್ತೆಯನ್ನು ಕೇಳಿದೆನಲ್ಲಾ ! ಅವನು ಧನ್ಯನಾದ !" ಎಂದನು.


ಈ ಮಾತು ಕೇಳಿ ಅಂಗದನು ಸಂಪಾತಿಯನ್ನು ಕುರಿತು, "ಆ ರಾಕ್ಷಸರಾಜನಾದ ರಾವಣನು ಎಲ್ಲಿರುವನೆಂಬ ಸಂಗತಿ ನಿನಗೇನಾದರೂ ಗೊತ್ತಿದೆಯೆ ?" ಎಂದು ಕೇಳಿದ.

"ಅಪ್ಪಗಳಿರಾ, ಆ ರಾವಣನು ಒಬ್ಬಳು ಸುಂದರಿಯಾದ ಸ್ತ್ರೀಯನ್ನು ಎತ್ತಿಕೊಂಡು ಹೋದುದನ್ನು ನಾನು ಬಲ್ಲೆ. ಅವಳು ಅವನ ಕೈಗೆ ಸಿಕ್ಕಿಬಿದ್ದು ಒದರಿಕೊಂಡ. ಸಂಗತಿಯನ್ನೂ ತಿಳಿದಿದ್ದೇನೆ. ಅವಳು ರಾಮಾ. ಲಕ್ಷ್ಮಣಾ ಎಂದು ಕೂಗಿಕೊಂಡಿದ್ದರಿಂದ ಅವಳೇ ಸೀತೆಯಾಗಿರಬೇಕು. ನಿಮಗೆ ರಾವಣನ ಸಂಗತಿ ತಿಳಿಯಬೇಕಾದರೆ ನನಗೆ ತಿಳಿದುದನ್ನು ಹೇಳುತ್ತೇನೆ. ಅವನು ಲಂಕೆ ಎಂಬ ನಗರಕ್ಕೆ ರಾಜನಾಗಿರುವವನು. ವಿಶ್ರವಸುವಿನ ಮಗ: ಕುಬೇರನ ತಮ್ಮ. ಇಲ್ಲಿಗೆ ನೂರು ಯೋಜನ ದೂರದಲ್ಲಿ ಸಮುದ್ರದ ನಡುವೆ ಒಂದು ದ್ವೀಪದ ಮೇ ಲಂಕಾನಗರವಿದೆ. ನೀವು ಸಮುದ್ರವನ್ನು ದಾ ಲಂಕಾನಗರವನ್ನು ಸೇರಿಬಿಟ್ಟರೆ ಅಲ್ಲಿ ರಾವಣನ ಬಹುಶಃ ಸೀತೆಯೂ ಕಾಣಬಹುದು. ನೀವು ರಾ ನಿಂದ ಆ ರಾವಣನನ್ನು ಕೊಲ್ಲಿಸಿಬಿಟ್ಟರೆ ನನ್ನ ತಮ್ಮ ನನ್ನು ಕೊಂದ ನನ್ನ ಹಗೆಯೂ ತೀರುತ್ತದೆ. ನೀ ಸಾಯುವ ಮಾತನ್ನು ಮುಂದುವರಿಸಿಟ್ಟು. ಮೊದ ನೂರು ಯೋಜನ ಸಮುದ್ರ ದಾಟಿಹೋಗು ಉಪಾಯ ನೋಡಿರಿ" ಎಂದ ಸಂಪಾತಿ.

ಆಮೇಲೆ ಸಂಪಾತಿಯ ಇಚ್ಛೆಯಂತೆ ವಾನರರ ಅವನನ್ನು ಎತ್ತಿ ಸಮುದ್ರದ ಬದಿಗೆ ಸೇರಿಸಿದರ ಅಲ್ಲಿ ಸಂಪಾತಿ ತನ್ನ ತಮ್ಮನಾದ ಜಟಾಯುವಿ ಜಲತರ್ಪಣ ಬಿಟ್ಟನು. ಅವನ ಮೂಲಕ ವಾ ಸೀತೆಯ ಜಾಡು ತಿಳಿದುದರಿಂದ ವಾನರರಿಗೆ ತುಂಬ ಸಂತೋಷವಾಗಿತ್ತು. ಸಾಯುವ ಆಲೋ ಚನೆ ಯಾರಿಗೂ ಇಲ್ಲ.

ಜಾಂಬವಂತನು ಉಳಿದೆಲ್ಲ ವಾನರರ ಪರವಾ ಸಂಪಾತಿಯೊಂದಿಗೆ, ಸೀತೆಯ ಅಪಹರಣವನ್ನ ಕುರಿತು ಇನ್ನಷ್ಟು ವಿವರಗಳನ್ನು ವಿಚಾರಿಸಿದನ ಆಗ ಸಂಪಾತಿ ಹೀಗೆಂದ:

"ನಾನು ರೆಕ್ಕೆಗಳು ಸುಟ್ಟು ಈ ಪರ್ವತ ಮೇಲೆ ಬಿದ್ದಂದಿನಿಂದ ಇಲ್ಲೇ ಇದ್ದು ವೃದ್ಧನಾ ಹೋದೆನಷ್ಟೆ? ಆದುದರಿಂದ ನನ್ನ ಮಗ ಸುಪ ರ್ಶ್ವನು ನನಗೆ ಹೊತ್ತಿಗಿಷ್ಟು ಆಹಾರ ತಂ ಕೊಡುತ್ತಾ ಇರುತ್ತಾನೆ. ಒಂದುದಿನ ಅವ ಹೊತ್ತು ಮುಳುಗುವವರೆಗೂ ಬಾರದೆಹೋದು ಮಾತ್ರವಲ್ಲದೆ, ಕತ್ತಲಾಗುವಾಗ ಬರೀಗೈಯಿ ಬಂದ. ಮೊದಲೇ ಮುದುಕನಾದ ನಾನು ಹ ಯಿಂದ ಉರಿಯುತ್ತಾ ಅವನ ಮೇಲೆ ಕೋ ಕಾರಿದೆ. ಆಗ ಅವನು ನನ್ನನ್ನು ಶಾಂತಪಡಿಸು ನಡೆದ ಸಂಗತಿಯನ್ನು ಹೇಳಿದ. ಅವನು ಸರಿಯಾ



ಹೊತ್ತಿಗೇ ಆಹಾರ ತರಲು ಮಹೇಂದ್ರಪರ್ವತಕ್ಕೆ ಹೋದನಂತೆ. ಆಗ ಅವನು ಕರ್ರಗಿನ ರಾಕ್ಷಸಾಕಾರದವನೊಬ್ಬ ಧಗಧಗ ಹೊಳೆಯುವ ಸ್ತ್ರೀಯೊಬ್ಬಳನ್ನು ಎತ್ತಿಕೊಂಡು ಹೋಗುವುದನ್ನು ನೋಡಿದ. ನನ್ನ ಮಗ ಅವರನ್ನೇ ಆಹಾರವಾಗಿ ಹಿಡಿದು ತರೋಣವೆಂದು ಅವರನ್ನು ಅಡ್ಡಕಟ್ಟಿದ. ಆ ಕರ್ರಗಿನವನು ಮರ್ಯಾದೆಯಿಂದ ದಾರಿಬಿಡುವಂತೆ ಸುಪಾರ್ಶ್ವನಿಗೆ ಹೇಳಿದ. ಅವನ ಮರ್ಯಾದೆಗೆ ಬೆಲೆ ಕೊಟ್ಟು ನನ್ನ ಮಗ ಅವರಿಗೆ ದಾರಿಬಿಟ್ಟ. ಆಮೇಲೆ ಆ ಕರ್ರಗಿನವನು ಅತಿವೇಗವಾಗಿ ಹೋಗಿಬಿಟ್ಟನಂತೆ. ತರುವಾಯ ಸುಪಾರ್ಶ್ವನು ಆಕಾಶದ ಭೂತಗಳನ್ನು ಕೇಳಲು, ಆ ಕರ್ರಗಿನವನು ರಾಕ್ಷಸರಾಜನಾದ ರಾವಣನೆಂದೂ, ರಾಮಾ ಲಕ್ಷ್ಮಣಾ ಎಂದು ಹೆಸರೆತ್ತಿ ಕೂಗುವವಳು ರಾಮನ ಹೆಂಡತಿ ಸೀತೆಯೆಂದೂ ಗೊತ್ತಾಯಿತು. ಅದೇ ಅವನು ತಡವಾಗಿ ಬರಿಗೈಯಿಂದ ಬರಲು ಕಾರಣ"

ತರುವಾಯ ವಾನರರು ಸಂಪಾತಿಯನ್ನು ಸಮುದ್ರತೀರದಿಂದ ಮತ್ತೆ ಎತ್ತಿಕೊಂಡು ಪರ್ವತದ ಮೇಲೆ ಸೇರಿಸಿದರು. ಅಲ್ಲಿ ತನ್ನ ಸುತ್ತಲೂ ಸೇರಿದ ವಾನರ ಪ್ರಮುಖರನ್ನು ನೋಡಿ, ಸಂಪಾತಿ ತನ್ನ ಹಳೆಯ ಅನುಭವಗಳನ್ನು ಹೇಳತೊಡಗಿದ:


"ನಾನು ರೆಕ್ಕೆ ಸುಟ್ಟವನಾಗಿ ಈ ಪರ್ವತದ ಮೇಲೆ ಬಿದ್ದ ಕಾಲದಲ್ಲಿ ಇಲ್ಲಿ ಒಂದು ಆಶ್ರಮವಿದ್ದಿತು. ಅದರಲ್ಲಿ ನಿಶಾಕರನೆಂಬ ದೊಡ್ಡ ಮಹರ್ಷಿ ತಪಸ್ಸು ಮಾಡಿಕೊಂಡಿದ್ದ. ಇದೆಲ್ಲಾ ಎಂಟು ಸಾವಿರ ವರ್ಷಗಳ ಹಿಂದಿನ ಸಂಗತಿ. ಪರ್ವತದ ಮೇಲೆ ಬಿದ್ದುಬಿಟ್ಟ ನಾನು, ಅತಿಕಷ್ಟದಿಂದ ಏರು ತಗ್ಗುಗಳನ್ನು ದಾಟುತ್ತಾ ಆ ಮಹರ್ಷಿಯ ಆಶ್ರಮಕ್ಕೆ ಬಂದೆ. ಅಲ್ಲಿ ಒಂದು ಮರದ ಕೆಳಗೆ ಮಹರ್ಷಿಯ ದರ್ಶನಕ್ಕಾಗಿ ಕಾದುಕೊಂಡಿದ್ದೆ. ಆಗ ನನಗೊಂದು ವಿಚಿತ್ರದೃಶ್ಯ ಕಂಡಿತು. ಆ ಮಹರ್ಷಿ ದಕ್ಷಿಣ ದಿಕ್ಕಿನಿಂದ ಸ್ನಾನಮಾಡಿ ಬರುತ್ತಿದ್ದ. ಅವನ ಹಿಂದೆ ಕರಡಿಗಳೂ, ಚಮರೀಮೃಗಗಳೂ, ಹುಲಿಗಳೂ, ಸಿಂಹಗಳೂ, ಆನೆಗಳೂ ಸರ್ಪಗಳೂ ಬರುತ್ತಿರುವುದನ್ನು ನೋಡಿ ಬೆರಗಾದೆ. ಅವನು ಆಶ್ರಮಕ್ಕೆ ಬಂದ ಕೂಡಲೇ ಅವೆಲ್ಲಾ ಹೊರಟುಹೋದುವು. ಒಳಗೆ ಹೋಗುವಾಗ ನನ್ನನ್ನು ಒಮ್ಮೆ ನೋಡಿದ ಆ ಮಹರ್ಷಿ, ಸ್ವಲ್ಪ ಹೊತ್ತಿನ ಮೇಲೆ ತಿರುಗಿ ಬಂದು, 'ಹದ್ದುಗಳ ರಾಜನಾದ ಇಬ್ಬರು ಅಣ್ಣತಮ್ಮಂದಿರನ್ನು ನಾನು ಬಲ್ಲೆ. ಅವರಲ್ಲಿ ದೊಡ್ಡವನಾದ ಸಂಪಾತಿ ನೀನುತಾನೆ? ಜಟಾಯು ನಿನ್ನ ತಮ್ಮನಲ್ಲವೆ? ನೀವಿಬ್ಬರೂ ಆಗಾಗ ಮನುಷ್ಯರೂಪದಲ್ಲಿ ನನಗೆ ನಮಸ್ಕಾರಮಾಡಲು ಬಂದಿದ್ದೀರಿ. ಈಗ ನಿಮಗೇನಾದರೂ ರೋಗವು ಬಂದಿದೆಯೇ? ನಿನ್ನ ರೆಕ್ಕೆಗಳು ಹೀಗಾದುದೇಕೆ? ಬಿದ್ದುಹೋಗಲು ಕಾರಣವೇನು? ನಿನ್ನನ್ನು ಯಾರಾದರೂ ಶಿಕ್ಷಿಸಿದರೇನು?' ಎಂದು ಕೇಳಿದ.

"ನಾನು ಮಹರ್ಷಿಗೆ ನಡೆದ ಸಮಾಚಾರವನ್ನೆಲ್ಲಾ ಹೇಳಿದೆ. ಕೈಲಾಸಪರ್ವತದ ಮೇಲೆ ಋಷಿಗಳ ಹತ್ತಿರ ನಾನೂ ನನ್ನ ತಮ್ಮನೂ ಶಪಥಮಾಡಿ ಸೂರ್ಯನು ಅಸ್ತಮಿಸುವುದರೊಳಗೆ, ಸೂರ್ಯನ ಹಿಂದೆ ಹಾರುತ್ತೇವೆಂದು ಹೊರಟೆವು. ನಾವು ಬಹಳ ಎತ್ತರಕ್ಕೆ ಹಾರಿದೆವು. ಭೂಮಿಯ ಮೇಲಿನ ನಗರಗಳೆಲ್ಲವೂ ಬಂಡಿಯ ಚಕ್ರಗಳಂತೆ ಕಾಣಿಸಿದುವು. ಆಕಾಶಮಾರ್ಗದಲ್ಲಿ ನಮಗೆ ವೇದಘೋಷಗಳು ಕೇಳಿಬಂದುವು. ಕೆಂಪು ಬಟ್ಟೆಗಳನ್ನು ಧರಿಸಿಕೊಂಡು ಹಾಡುವ ಸ್ತ್ರೀಯರು ಕಂಡು ಬಂದರು. ಇನ್ನೂ ಎತ್ತರಕ್ಕೆ ಹಾರಿದೆವು. ಕಾಡುಗಳೆಲ್ಲ ಹಸಿರುಹೊಲದ ಹಾಗೆ, ಪರ್ವತಗಳು ಚಿಕ್ಕಚಿಕ್ಕ ಕಲ್ಲಿನ ರಾಶಿಗಳ ಹಾಗೆ ಕಾಣುತ್ತಿದ್ದುವು. ನಮಗೆ ಆಯಾಸದಿಂದ ಭಯವಾಯಿತು. ಬುದ್ಧಿ ಚಂಚಲವಾಯಿತು. ಕಣ್ಣು ಕತ್ತಲೆ ಕವಿದು ಮೂರ್ಛೆಬರುವ ಸ್ಥಿತಿಯೂ ಬಂತು. ದಿಕ್ಕುಗಳು ತಿಳಿಯಲಿಲ್ಲ. ಅಷ್ಟೆತ್ತರದಲ್ಲಿ ಸೂರ್ಯನೂ ಭೂಮಿಯೂ ಒಂದೇ ಪ್ರಮಾಣದಲ್ಲಿ ಕಾಣಿಸಿದುವು.

"ಅಷ್ಟರಲ್ಲಿ ಜಟಾಯು ಸ್ಮೃಹೆ ತಪ್ಪಿ ನೆಲದ ಮೇಲೆ ಬೀಳತೊಡಗಿದ. ಕೂಡಲೇ ನಾನು ಕೆಳಗಿಳಿದು ಬರುತ್ತ ಜಟಾಯುವನ್ನು ನನ್ನ ರೆಕ್ಕೆಗಳಿಂದ ಮುಚ್ಚಿದೆ. ಅದರಿಂದ ಜಟಾಯು ಸೂರ್ಯನ ಬೇಗೆಯಿಂದ ತಪ್ಪಿಸಿಕೊಂಡನಾದರೂ ನನ್ನ ರೆಕ್ಕೆಗಳು ಸುಟ್ಟುಹೋದುವು. ಜಟಾಯು ಜನಸ್ಥಾನದಲ್ಲಿ ಬಿದ್ದನೆಂದು ಕಾಣುತ್ತದೆ. ಈ ಸಮಾಚಾರವನ್ನೆಲ್ಲಾ ನಿಶಾಕರಮಹರ್ಷಿಗೆ ಹೇಳಿ, ನನಗೆ ಈ ಸ್ಥಿತಿಯಲ್ಲಿ ಜೀವಿಸಬೇಕೆಂಬ ಆಸೆಯಿಲ್ಲವೆಂದೂ ಪರ್ವತದ ಮೇಲಿನಿಂದ ಕೆಳಗೆ ಹಾರಿ ಸಾಯುವೆನೆಂದೂ ಹೇಳಿದೆ.

"ಆಗ ಮಹರ್ಷಿ ನನಗೆ ಮುಂದೆ ಆಗುವುದನ್ನು ಹೇಳಿದ. ನೀವು ಸೀತೆಯನ್ನು ಹುಡುಕುತ್ತಾ ಹೀಗೆ ಬರುವಿರೆಂದೂ, ನಾನು ನಿಮಗೆ ಸಹಾಯ ಮಾಡುವೆನೆಂದೂ ತರುವಾಯ ನನಗೆ ರೆಕ್ಕೆಗಳು ಬರುತ್ತವೆಂದೂ. ಆದುದರಿಂದ ನಾನು ಕಾಲನಿರೀಕ್ಷೆ ಮಾಡುತ್ತ ಇಲ್ಲೇ ಇರಬೇಕೆಂದೂ ನಿಶಾಕರಮಹರ್ಷಿ ಹೇಳಿದ. ಆ ಕಾಲ ಈಗ ಬಂತು."

ಸಂಪಾತಿ ಹೀಗೆ ಹೇಳುತ್ತಿದ್ದಾಗಲೇ ಅವನ ರೆಕ್ಕೆಗಳು ಮೊಳೆತು ಬೆಳೆಯುತ್ತಿರುವುದನ್ನು ವಾನರರು ನೋಡಿದರು. ಆ ಹೊಸ ಗರಿಗಳು ಕೆಂಪಗಿದ್ದುವು. ಸಂಪಾತಿ ಪರಮಾನಂದದಿಂದ, "ಆಹಾ ! ನಿಶಾಕರ ಮಹರ್ಷಿ ಹೇಳಿದಂತೆಯೇ ನನಗೆ ರೆಕ್ಕೆಗಳು ಬಂದುವು. ಮೊದಲಿನ ಬಲವೂ ಬಂದಿದೆ. ವಾನರರೇ, ನಿಮ್ಮ ಪ್ರಯತ್ನಕ್ಕೆ ತಪ್ಪದೆ ವಿಜಯವಾಗುತ್ತದೆಂದು ನಂಬಿರಿ. ನಾನು ನನ್ನ ರೆಕ್ಕೆಗಳ ಬಲವನ್ನು ನೋಡಿಕೊಳ್ಳುತ್ತೇನೆ" ಎಂದು ಹೇಳಿ ಆಕಾಶದ ಮೇಲೆ ಹಾರಿಹೋದ.





ವೀರಹನುಮಾನ್

Aug 1975


ಸಂಪಾತಿಯ ಮುಖದಿಂದ ರಾವಣನ ಊರು, ಸೀತೆಯ ಜಾಡು ಮುಂತಾದ ಮುಖ್ಯ ಮುಖ್ಯ ಸಂಗತಿಗಳನ್ನು ತಿಳಿದ ಮೇಲೆ ವಾನರರಿಗಾದ ಆನಂದವೂ ಉತ್ಸಾಹವೂ ಒಂದನ್ನೊಂದು ಮೀರಿಸುವಂತಾಯಿತು. ಕೈ ಕಾಲುಗಳನ್ನು ಹಾರಿಸುತ್ತಾ ಸಿಂಹನಾದಗಳನ್ನು ಮಾಡಿದರು. ಎಲ್ಲರೂ ಲಂಕೆಗೆ ಆಗಲೇ ದಾಳಿಯಿಡುವವರಂತೆ ಸಮುದ್ರ ತೀರಕ್ಕೆ ಹೋಗಿ ಸೇರಿ ಗಕ್ಕನೆ ನಿಂತರು.

ತಮ್ಮ ಕಾಲಡಿಯಲ್ಲಿ ಅಪಾರವಾಗಿ ಚಾಚಿ ಬಿದ್ದಿರುವ ಮಹಾಸಮುದ್ರವನ್ನು ನೋಡಿದ ಕೂಡಲೇ ಅವರ ಉತ್ಸಾಹವೆಲ್ಲ ಒಮ್ಮೆಗೇ ಸೋರಿಹೋಯಿತು. ಪಾತಾಳವನ್ನು ಮುಟ್ಟುವ ಆ ಜಲರಾಶಿಯಲ್ಲಿ ಎಂಥೆಂತಹ ಭಯಂಕರ ಪ್ರಾಣಿಗಳಿವೆಯೋ? ಈ ಸಮುದ್ರವು ಒಂದು ಪ್ರಾಂತದಲ್ಲಿ ಪ್ರಶಾಂತವಾಗಿ ನಿದ್ರಿಸುವಂತೆ ಕಂಡರೂ ಅಲ್ಲಲ್ಲಿ ಎತ್ತರವಾದ ತರಂಗಗಳೆದ್ದು ದೊಡ್ಡ ಶಬ್ದದಿಂದ ಒಡೆದು ಬೀಳುತ್ತ ನುಂಗಲು ಬರುವಂತೆ ಹೊರಳಿ ಬರುತ್ತಿವೆ. ಆದರ ಆಚೆಯ ತೀರ ಕಣ್ಣಿಗೆ ಕಾಣಿಸುವುದೇ ಇಲ್ಲ. ಹೇಗೆ ಈ ಸಮುದ್ರವನ್ನು ದಾಟಿ ಸೀತೆಯನ್ನು ಹುಡುಕುವುದು? “ಹೇಗೆ? ಏನು ಮಾಡಬೇಕು?” ಎಂದು ಒಬ್ಬರನ್ನೊಬ್ಬರು ಸಣ್ಣ ಶಬ್ದದಿಂದ ಪ್ರಶ್ನೆ ಮಾಡಿಕೊಳ್ಳುತ್ತಿದ್ದರು. ಪ್ರಶ್ನೆ ಹಾಕುತ್ತಿದ್ದರೇ ಹೊರತು “ಹೀಗೆ” ಎಂದು ಹೇಳುವವನಿರಲಿಲ್ಲ.

ತನ್ನವರೆಲ್ಲಾ ಸಮುದ್ರವನ್ನು ನೋಡಿ ಹೆದರುವುದನ್ನು ಮನಗಂಡು ಅಂಗದನು ಹೀಗೆಂದನು: “ಭಯಪಡಬೇಡಿ. ಭಯದಿಂದ ಪ್ರಯೋಜನವಾಗುವುದಕ್ಕೆ ಬದಲಾಗಿ, ಅದೇ ನಮ್ಮನ್ನು ತಿಂದು ಹಾಕುತ್ತದೆ. ಇದೀಗ ನಾವು ನಮ್ಮ ಪರಾಕ್ರಮವನ್ನು ತೋರಿಸಬೇಕಾದ ಸಮಯ. ಪರಾಕ್ರಮದ ಹೊರತು ಕೆಲಸ ನಡೆಯುವುದಿಲ್ಲ.”

ಅಂಗದನ ಮಾತಿನಿಂದ ಹೊಸ ಪರಿಣಾಮವಾದುದೇನೂ ಕಾಣಲಿಲ್ಲ. ಆ ದಿನ ರಾತ್ರಿ ಎಲ್ಲರೂ ಸಮುದ್ರತೀರದಲ್ಲೇ ಉಳಿದುಬಿಟ್ಟರು. ಮರುದಿನ ಬೆಳಗಾದಕೂಡಲೇ ಅಂಗದನು ಎಲ್ಲರನ್ನೂ ಮತ್ತೆ

೧೦. ಹನುಮಂತನ ಲಂಕಾ ಪ್ರಯಾಣ



ಸಮಾವೇಶ ಗೊಳಿಸಿದನು. ಹೀಗೆ ವಾನರ ಸೇನೆಯನ್ನು ಸಮಾವೇಶಗೊಳಿಸುವ ಶಕ್ತಿ ಅಂಗದನಿಗೂ ಹನುಮಂತನಿಗೂ ಹೊರತು, ಮತ್ತಾರಿಗೂ ಇರಲಿಲ್ಲ.

"ಸುಮ್ಮನೆ ಯೋಚಿಸುತ್ತಾ ಕಾಲಹರಣ ಮಾಡಿದರಾಗಲಿಲ್ಲ. ಈಗ ನಮ್ಮೊಳಗೆ ಯಾವ ಮಹಾವೀರನು ಈ ಸಮುದ್ರವನ್ನು ದಾಟಿ, ಲಂಕೆಯಲ್ಲಿ ಶೋಧಿಸಿ ಸೀತಾದೇವಿಯನ್ನು ನೋಡಿ ತಿರುಗಿ ಬಂದು, ಸುಗ್ರೀವನ ಆಜ್ಞೆಯನ್ನು ಪಾಲಿಸುತ್ತೇವೆಂಬ ಮಾತು ಉಳಿಯುವಂತೆ ಮಾಡಬಲ್ಲನು ? ಲಂಕೆಗೂ ಇಲ್ಲಿಗೂ ಇರುವ ದೂರವು ನೂರು ಯೋಜನವೆಂದು ಸಂಪಾತಿಯಿಂದ ಗೊತ್ತಾಗಿದೆ. ಅಷ್ಟು ದೂರವನ್ನು ದಾಟಬಲ್ಲವನೇ ನಾವು ಮನೆಗೆ ಹಿಂದಿರುಗಿ ಹೆಂಡತಿ ಮಕ್ಕಳೊಂದಿಗೆ ಸಂತೋಷವಾಗಿ ಜೀವಿಸುವಂತೆ ಮಾಡಬಲ್ಲನು. ನಾವು ಹಿಂದಿರುಗಿ ಹೋಗಿ ಸುಗ್ರೀವನಿಗೂ ರಾಮಲಕ್ಷ್ಮಣರಿಗೂ ನಮ್ಮ ಮುಖಗಳನ್ನು ತೋರಿಸಲು ಅಂಥವನ ಪುಣ್ಯವೇ ಕಾರಣವಾಗಬೇಕಾಗಿದೆ. ಈ ನೂರು ಯೋಜನ ದೂರವನ್ನು ಯಾರು ದಾಟಬಲ್ಲರೆಂಬುನ್ನು ಹೇಳಿಬಿಡಿರಿ. ಈ ಸತ್ವಪರೀಕ್ಷೆಯ ಕಾಲದಲ್ಲಿ ಸ್ಪರ್ಧೆಗೆ ನಿಲ್ಲುವವನಾರೋ ಮುಂದೆ ಬರಲಿ. ಎಲ್ಲರ ಚಿಂತೆಗಳೂ ಅಂಥವನ ಒಂದು ಮಾತಿನಿಂದ ದೂರವಾಗುತ್ತದೆ. ಯಾರಿದ್ದೀರಿ ?" ಎಂದು ಅಂಗದನು ವಾನರ ಪರಿವಾರದೊಂದಿಗೆ ಹೇಳಿದನು.


ಯಾರೂ ಏನೂ ಮಾತಾಡಲಿಲ್ಲ. ಎಲ್ಲರೂ ಕಡೆದ ಬೊಂಬೆಯಂತೆ ನಿಶ್ಚಲರಾಗಿದ್ದರು. ಅದನ್ನು ನೋಡಿ ಅಂಗದನು ಪುನಃ ಹೀಗೆಂದನು: "ನೀವೆಲ್ಲರೂ ಹೆಚ್ಚಾದ ಬಲಪರಾಕ್ರಮಗಳಿಂದ ತುಂಬಿದವರೆನ್ನಲು ಸಂದೇಹವಿಲ್ಲ. ಹುಟ್ಟಿನಲ್ಲಿಯೇ ವಿಶೇಷ ತುಂಬಿದವರು; ದೊಡ್ಡ ಹೆಸರು ಪ್ರಖ್ಯಾತಿಗಳುಳ್ಳವರು. ಒಬ್ಬೊಬ್ಬರಿಗೂ ದೂರದೂರ ಹಾರುವಂತಹ ಮಹಾ ಮಹಾ ಲಂಘನ ಶಕ್ತಿಯಿದೆ. ಕಡೇಪಕ್ಷ ನೀವು ಎಷ್ಟೆಷ್ಟು ದೂರ ಹಾರಬಲ್ಲಿರೆಂಬುದನ್ನಾದರೂ ಯಥಾರ್ಥವಾಗಿ ಹೇಳಿರಿ."

ಈ ಮಾತಿಗೆ ವಾನರ ವೀರರಲ್ಲಿ ಚಲನೆಯುಂಟಾಯಿತು. ಕೆಲವರು ತಮ್ಮ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರಾಮಾಣಿಕವಾಗಿ ಹೇಳಿದರು: ಗಜನು ತಾನು ಹತ್ತು ಯೋಜನ ದೂರ ಹಾರಬಲ್ಲೆನೆಂದು ಹೇಳಿದನು. ಗವಾಕ್ಷನು ಇಪ್ಪತ್ತು ಯೋಜನ ದೂರ ಹಾರುವೆನೆಂದನು. ಗವಯನು ಮೂವತ್ತು ಯೋಜನದಷ್ಟು ಹಾರುತ್ತೇನೆಂದನು. ಶರಭನು ತಾನು ನಲುವತ್ತು ಯೋಜನ ದೂರ ಖಂಡಿತ ಹಾರುತ್ತೇನೆಂದು ಹೇಳಿದನು. ಗಂಧಮಾದನನು ಐವತ್ತು ಯೋಜನ ದೂರ ಹಾರಲು ತನ್ನ ಶಕ್ತಿ ಸಾಕೆಂದನು. ಮೈಂದನು ಅರುವತ್ತು ಯೋಜನಗಳನ್ನೂ, ದ್ವಿವಿದನು ಎಪ್ಪತ್ತು ಯೋಜನಗಳನ್ನೂ ಹಾರಬಲ್ಲೆವೆಂದು ಹೇಳಿದರು. ಆದರೆ ನಿಜವಾಗಿ ಹಾರಬೇಕಾಗಿರುವ ನೂರುಯೋಜನ ದೂರ ಹಾರುವ ಶಕ್ತಿ ತನಗಿದೆ

ಎಂದು ಯಾರ ಬಾಯಿಯಿಂದಲೂ ಬರಲಿಲ್ಲ. ಜಾಂಬವಂತನು, "ಹಾರುವುದರಲ್ಲಿ ನನಗೆ ಬಹು ದೊಡ್ಡ ಸಾಮರ್ಥ್ಯವಿತ್ತು. ಈಗ ನಾನು ಮುದುಕನಾಗಿ ಬಿಟ್ಟೆ. ಆದರೂ ರಾಮನ ಕಾರ್ಯಕ್ಕಾಗಿ ಸೋಗಳ್ತನ ಮಾಡಲಾರೆ. ನೀವೆಲ್ಲರೂ ನನ್ನನ್ನೇ ಹಾರಬೇಕೆಂದು ಹೇಳುವಿರಾದರೆ ತೊಂಬತ್ತು ಯೋಜನ ದೂರವನ್ನು ನಿಸ್ಸಂದೇಹವಾಗಿ ಹಾರುತ್ತೇನೆ. ಆದರಿಂದ ನಮ್ಮ ಕೆಲಸವಾಗಲಾರದಷ್ಟೆ? ಅದನ್ನೇ ಆಲೋಚಿಸುತ್ತಿದ್ದೇನೆ" ಎಂದನು.


ಹೀಗೆ ಎಲ್ಲರೂ ತಮ್ಮ ತಮ್ಮ ಶಕ್ತಿಯನ್ನು ಕುರಿತು ಹೇಳಿದ ಮೇಲೆ ಅಂಗದನು, "ಈ ನೂರು ಯೋಜನ ದೂರ ಸಮುದ್ರವನ್ನು ನಾನೇ ಹಾರಿಬಿಡುತ್ತೇನೆ. ಆಮೇಲೆ ಶ್ರಮವನ್ನು ಸಹಿಸಿಕೊಂಡು ಹಿಂದಿರುಗಿ ಹಾರಿಬರಲು ಸಾಧ್ಯವಾದೀತೇ ಎಂಬುದು ಸಂದೇಹವಾಗಿದೆ. ಹಾಗೆ ಹಿಂದಿರುಗಿಬಾರದಿದ್ದರೆ ಹಾರಿಹೋಗಿಯೂ ಪ್ರಯೋಜನವಿಲ್ಲವಲ್ಲ? ಅದಕ್ಕೇ ಯೋಚನೆ" ಎಂದನು.

ಅವನ ಮಾತು ಕೇಳಿ ಜಾಂಬವಂತನು, "ಅಬ್ಬಾ! ನಿನ್ನ ಶಕ್ತಿ ಸಾಮರ್ಥ್ಯಗಳು ನಮಗೆ ಗೊತ್ತಿಲ್ಲವೆ? ನೂರು ಯೋಜನಗಳೇಕೆ, ಸಾವಿರ ಯೋಜನಗಳನ್ನು ಕೂಡಾ ನೀನು ಅವಲೀಲೆಯಾಗಿ ಹಾರಬಲ್ಲೆ. ಹಿಂದಿರುಗಿಯೂ ಅದೇ ವೇಗದಲ್ಲಿ ಬರಬಲ್ಲೆ. ಆ ವಿಷಯದಲ್ಲಿ ಸಂದೇಹವೇ ಇಲ್ಲ. ಆದರೆ ನೀನು ರಾಜನಾದುದರಿಂದ ನಾವೆಲ್ಲಾ ಸೇರಿ ನಿನ್ನನ್ನು ಕಳುಹಿಸಲು ಸಾಧ್ಯವೇ ಇಲ್ಲ, ಅದು ನ್ಯಾಯವೂ ಅಲ್ಲ. ನಾವು ನಮ್ಮೊಳಗೆ ಯಾರನ್ನಾದರೂ ಕಳುಹಿಸಬೇಕೇ ಹೊರತು ನೀನೇ ಹೋಗಬಾರದು. ನಿನ್ನ ಕ್ಷೇಮವನ್ನು ನೋಡಬೇಕಾದುದು ನಮಗೆಲ್ಲರಿಗೂ ಕರ್ತವ್ಯ. ನೀನು ಲಂಕೆಗೆ ಹಾರಿಹೋದರೆ ನಮ್ಮನ್ನು ಆಳುವವರಾರು? ನಾವೇನು ಮಾಡಬೇಕು?" ಎಂದು ಆಕ್ಷೇಪಿಸಿದನು.



ಅದಕ್ಕೆ ಅಂಗದನು, "ಹಾಗಾದರೆ ಹೇಗೆ? ಸಮುದ್ರವನ್ನು ನಾನು ದಾಟದೆ, ನಿಮ್ಮಲ್ಲಿ ಯಾರಿಗೂ ದಾಟಲು ಸಾಧ್ಯವಿಲ್ಲದೆ ಹೋದರೆ, ಮೊದಲು ನಿಶ್ಚಯಮಾಡಿದ ಹಾಗೆ ನಾವೆಲ್ಲರೂ ಪ್ರಾಯೋಪವೇಶವನ್ನೇ ಮಾಡೋಣವೆ? ಕೆಲಸ ಪೂರ್ತಿಮಾಡದೆ ಕಿಷ್ಕಿಂಧೆಗೆ ತಿರುಗಿಹೋಗಿ ಜೀವದೊಂದಿಗೆ ಇರುತ್ತೇವೆಂಬ ಆಶೆಯಿಲ್ಲವಷ್ಟೆ? ಆ ಸುಗ್ರೀವನು ನಮ್ಮನ್ನೆಲ್ಲ ಖಂಡಿತ ಕೊಂದುಬಿಡುತ್ತಾನೆ. ಆದುದರಿಂದ ರಾಜನಾಗಿ ನಾನೇ ನಿನಗೆ ಆಜ್ಞೆ ಮಾಡುತ್ತೇನೆ. ನಮ್ಮಲ್ಲಿ ಹಿರಿಯನಾದ ನೀನು ನಮ್ಮ ಕೆಲಸ ಸಾಗುವ ಒಂದು ಮಾರ್ಗವನ್ನು ಹೇಳಿಬಿಡು. ಯಾರು ಎಂಥವರೆಂಬುದೆಲ್ಲ ನಿನಗೆ ಗೊತ್ತಿದೆ" ಎಂದನು.

ಆ ಮಾತಿಗೆ ಜಾಂಬವಂತನು ಮುಗುಳುನಕ್ಕು ತಲೆಯಾಡಿಸುತ್ತ, "ಕೆಲಸ ಸಾಗಿ ತೀರುತ್ತದೆ. ಈ ಕೆಲಸವನ್ನು ಸರಿಯಾಗಿ ಈಡೇರಿಸುವಂತಹ ಸಾಮರ್ಥ್ಯ ತುಂಬಿದ ಪುಣ್ಯವಂತನನ್ನು ಈಗಲೇ



ತೋರಿಸುತ್ತೇನೆ" ಎಂದು ಹೇಳಿ, ಒಂದು ಬದಿಯಲ್ಲಿ ಇದಾವುದನ್ನೂ ಹಚ್ಚಿಕೊಳ್ಳದೆ ಸುಮ್ಮನೆ ಕುಳಿತಿದ್ದ ಹನುಮಂತನಬಳಿಗೆ ಹೋಗಿ ಹೀಗೆಂದನು :

"ಎಲೈ ಹನುಮಂತನೇ, ಇದೇನು ಹೀಗೆ ಕುಳಿತಿರುವೆ ? ನೀನು ವಾನರ ವೀರರೊಳಗೆಲ್ಲಾ ಮೇಲಾದವನಲ್ಲವೇನು ? ಸಮಸ್ತ ಶಾಸ್ತ್ರಗಳನ್ನೂ ಓದಿದ ಮೇಧಾವಿಯಾಗಿದ್ದು ಕೂಡಾ ಮಾತುಕತೆಯಿಲ್ಲದೆ ಹೀಗೆ ಸುಮ್ಮನೆ ಕುಳಿತಿರುವೆಯೇಕೆ ? ಆ ಗರುತ್ಮಂತನ ರೆಕ್ಕೆಗಳಿಗೆ ಇರುವಷ್ಟು ಶಕ್ತಿ ನಿನ್ನ ಬಾಹುಗಳಿಗಿವೆ. ಪರಾಕ್ರಮದಲ್ಲಿ ನೀನು ಸುಗ್ರೀವನಿಗೂ, ಲಕ್ಷ್ಮಣನಿಗೂ ಸರಿಸಮನಾಗಬಲ್ಲವನು. ಇನ್ನು ಇತರ ಪ್ರಾಣಿಗಳನ್ನು ನಿನಗೆ ಹೋಲಿಸಲಿಕ್ಕೇ ಸಾಧ್ಯವಿಲ್ಲ. ಈ ಸಂಗತಿ ನಿನಗೆ ಗೊತ್ತಿಲ್ಲದೆ ಏನೋ ಮರೆತಂತಿರುವೆ. ನಾನು ನೆನಪು ಮಾಡುತ್ತೇನೆ. ಅಪ್ಪಾ, ಆಂಜನೇಯಾ, ನೀನು ಹುಟ್ಟಿದ ಕೂಡಲೇ ಸೂರ್ಯನನ್ನು ನೋಡಿ ಹಣ್ಣೆಂದು ಭ್ರಮಿಸಿ ಹಿಡಿದು ನುಂಗಲು ಆಕಾಶಕ್ಕೆ ಹಾರಿದೆಯಷ್ಟೆ? ಹಾರುವುದರಲ್ಲಿ ನಿನಗೆ ಸಾಟಿಯಾದವನು ಯಾರಾದರೂ ಇರಬಲ್ಲರೆ ? ನಮ್ಮೆಲ್ಲರಿಗೂ ನಿನ್ನ ಶಕ್ತಿಯನ್ನು ಈಗ ತೋರಿಸಯ್ಯಾ. ಈ ಸಮುದ್ರವು ನಿನಗೊಂದು ಲೆಕ್ಕವೆ ? ಲಂಕೆಗೆ ಗುರಿಯಿಟ್ಟು ಸಮುದ್ರವನ್ನು ಹಾರಿ ಸೀತೆಯನ್ನು ಕಂಡುಹಿಡಿದು ಹಿಂದಿರುಗಿ, ಬಂದು ನಮ್ಮೆಲ್ಲರನ್ನೂ ಉಳಿಸು."

ಜಾಂಬವಂತನು ಇಷ್ಟು ಮಾತುಗಳನ್ನು ಹೇಳುತ್ತಿದ್ದ ಹಾಗೆ, ಹನುಮಂತನು ಕೇಳುತ್ತಾ ಉಬ್ಬತೊಡಗಿದನು. ನೋಡ ನೋಡುವಷ್ಟರಲ್ಲಿ ಹನುಮಂತನ ಶರೀರವು ವಿಪರೀತವಾಗಿ ಬೆಳೆಯಿತು. ಹನುಮಂತನು ಬೃಹದಾಕಾರನಾಗಿ ಸಮುದ್ರವನ್ನು ಹಾರಲು ಸಿದ್ಧನಾಗುವುದನ್ನೂ, ಅವನ ಪರಾಕ್ರಮದ ಕಾಂತಿಯನ್ನೂ ನೋಡಿ, ಉಳಿದ ವಾನರರು ಹರ್ಷಾತಿರೇಕದಿಂದ ಅವನನ್ನು ಪ್ರಶಂಸಿಸುತ್ತಾ ಸಿಂಹನಾದಗಳನ್ನು ಮಾಡಿದರು. ಆಗ ಹನುಮಂತನು ತಲೆಯಾಡಿಸುತ್ತಾ ಇನ್ನಿಷ್ಟು ಬೆಳೆದನು.

ಅವರ ಮೆಚ್ಚುಗೆಯ ಮಾತುಗಳನ್ನು ಕೇಳುತ್ತಿದ್ದಂತೆ ಹನುಮಂತನು ವಾಮನ ಮೂರ್ತಿಯಂ ಬೆಳೆದುಬಿಟ್ಟನು. ಆಕೃತಿಯ ದಿಗೆ ಅವನ ಬಲಪರಾಕ್ರಮಗಳೂ ಬೆಳೆದುವು. ಅವನ ಮುಖವು ಕೆಂಪ ಹೊಗೆಯಿಲ್ಲದ ಬೆಂಕಿಯಂತಿದ್ದಿತು.


ಆಗ ಎದ್ದು ನಿಂತಿದ್ದ ಹನುಮಂತನು ವೃ ವಾನರರಿಗೆ ನಮಸ್ಕಾರ ಮಾಡಿ ಹೀಗೆಂದನು : "ಇ ನೀವಾರೂ ಚಿಂತಿಸಬೇಡಿರಿ. ನಾನು ಈ ಸಮು ವನ್ನು ವಾಯುವಿನಷ್ಟು ಸುಲಭವಾಗಿ ದಾ ಬಿಡುತ್ತೇನೆ. ಮಧ್ಯದಲ್ಲಿ ಎಲ್ಲಿಯೂ ನಿಲ್ಲಲಾರೆ. ನಾ ಉದಯಗಿರಿಯಿಂದ ಸೂರ್ಯನೊಂದಿಗೇ ಹೊರ ಅವನಿಗಿಂತ ಮುಂದಾಗಿ ಅಸ್ತಗಿರಿಯನ್ನು ಸೇರಿ ಮ ಅವನ ಎದುರಿಗೇ ಬರಬಲ್ಲೆನು. ನಾನು ಆಕಾಶದ ಹೋಗುವ ವೇಗಕ್ಕೆ ಸಮುದ್ರವೇ ನನ್ನ ಹಿಂದೆ

ು, ಬರುತ್ತದೆ ನೋಡಿರಿ. ನಾನು ಆಕಾಶ ಮಾರ್ಗ ಲ್ಲಿ ಹಾರುವಾಗ ಮೇಘಗಳು ಚೆಲ್ಲಾಚೆದರಾಗುತ್ತವೆ. ರ್ವತಗಳು ನಡುಗುತ್ತವೆ. ಸಂಪಾತಿಯ ಮಾತು ವಾದರೆ ನಾನು ಸೀತಾದೇವಿಯನ್ನು ನೋಡಿಯೇ ಂದಿರುಗುತ್ತೇನೆ. ನನಗೆ ಒಳ್ಳೆಯ ಶಕುನಗಳೂ ಗುತ್ತಿವೆ. ಆದುದರಿಂದ ನಾನು ಹಿಂದಿರುಗುವ ರೆಗೂ ನೀವು ನಿಶ್ಚಿಂತರಾಗಿರಿ. ಆಗತ್ಯವೆನಿಸಿದರೆ ಕೆಯನ್ನೇ ಎಬ್ಬಿಸಿ ಎತ್ತಿಕೊಂಡು ಬರುತ್ತೇನೆ."

ಹನುಮಂತನ ಮಾತು ಕೇಳಿ ವಾನರರಿಗೆ ಆನಂದ ೊಂದಿಗೆ ಅತ್ಯಾಶ್ಚರ್ಯವೂ ಆಯಿತು. ಏಕೆಂದರೆ ್ಟೊಂದು ಮಹಾಶಕ್ತಿ ಹನುಮಂತನಿಗಿದೆ ಎಂಬುದು ಗ ತಾನೇ ಅವರಿಗೆ ತಿಳಿದು ಬಂದಿತ್ತು. ಆಗ ಂಬವಂತನು ಹನುಮಂತನನ್ನು ಕುರಿತು, "ಅಪ್ಪಾ, ಹನುಮಂತಾ, ನೀನೀಗ ನಮ್ಮೆಲ್ಲರ ಸಂಕಟಗಳನ್ನೂ ಾರಣೆ ಮಾಡಿದೆ. ನೀನು ಹೋಗುವ ಕಾರ್ಯ ಯವಾಗುವಂತೆ ನಾವೆಲ್ಲರೂ ಪ್ರಾರ್ಥಿಸುತ್ತೇವೆ. ು ಆಶೀರ್ವಾದಗಳಿಂದ ನೀನು ಸಮುದ್ರವನ್ನು ಟಿ ಸಫಲನಾಗಿ ಬಾ. ನಮ್ಮೆಲ್ಲರ ಪ್ರಾಣಗಳೂ ್ನ ಕೈಯಲ್ಲಿವೆ" ಎಂದನು.

"ಒಳ್ಳೆಯದು. ನಾನೀಗ ಮೇಲಕ್ಕೆ ಹಾರುವಾಗ ್ನ ಪಾದಗಳ ಒತ್ತಡವನ್ನು ಭೂಮಿ ತಾಳಲಾರದು. ುದರಿಂದ ನಾನು ಈ ಮಹೇಂದ್ರ ಪರ್ವತದ ೇಲಿನಿಂದ ಹಾರುತ್ತೇನೆ" ಎಂದು ಹೇಳಿ ಹನು ಂತನು ದೊಡ್ಡ ದೊಡ್ಡ ಹೆಜ್ಜೆಗಳನಿಟ್ಟುಕೊಂಡು ಪರ್ವತದ ಮೇಲಕ್ಕೆ ಹತ್ತಿದನು.


ುಮಂತನು ಮಹೇಂದ್ರ ಪರ್ವತದ ಮೇಲೆ ತ್ತಿ, ಹಾರುವುದಕ್ಕೆ ಮೊದಲು ಪರ್ವತವು ಗಟ್ಟಿ ಾಗಿದೆಯೇ ಎಂದು ಅದನ್ನು ಕೈಗಳಿಂದಲೂ ಲುಗಳಿಂದಲೂ ಅಲುಗಾಡಿಸಿ ನೋಡಿದನು. ಲವಾಗಿದ್ದ ಆ ಪರ್ವತವು ಬಹಳ ಹೊತ್ತು ುಕೊಡಗಿತು. ಪರ್ವತದಲ್ಲಿದ್ದ ಮರಗಳ ಹೂಗ



ಳೆಲ್ಲಾ ಬಳಬಳನೆ ಉದುರಿದುವು; ಕಲ್ಲುಗಳು ಹೊರಳಿ ಕೊಂಡುವು; ಬಂಡೆಗಳು ಜಾರಿದುವು. ಬೆಟ್ಟದ ಗುಹೆ ಗಳಲ್ಲಿದ್ದ ಪ್ರಾಣಿಗಳು ಹೆದರಿ ದೀನ ಸ್ವರದಿಂದ ಕೂಗಿ ದುವು. ಪರ್ವತದ ಮೇಲಿದ್ದ ಋಷಿಗಳೂ, ವಿದ್ಯಾ ಧರರೂ ಪರ್ವತವು ಸಿಡಿದು ಹೋಗುವುದೇನೋ ಎಂದು ಹೆದರಿದರು. ವಿದ್ಯಾಧರರು ತಮ್ಮ ಪತ್ನಿಯ ರೊಂದಿಗೆ ಸಹಾ ಆಕಾಶಕ್ಕೆ ಹಾರಿ ಹೋಗಿ, ಪರ್ವ ತದ ಮೇಲೆ ನಿಂತಿದ್ದ ಹನುಮಂತನನ್ನು ಬೆರಗು ಗಣ್ಣುಗಳಿಂದ ನೋಡಿದರು.

ಹನುಮಂತನು ಆಕಾಶದಲ್ಲಿ ಹಾರಲು ಸಿದ್ಧನಾಗಿ ಬಾಲವನ್ನಾಡಿಸಿ, ಕೈಗಳನ್ನು ಬಿಗಿದುಕೊಂಡು, ಕಾಲು ಗಳನ್ನು ಬಗ್ಗಿಸಿ, ಶ್ವಾಸವನ್ನು ಸ್ತಂಭಿಸಿ, ತಾನು ಹೋಗಲಿರುವ ಆಕಾಶ ಮಾರ್ಗದ ಗುರಿಯನ್ನು ನೋಡಿ ವಾನರರೊಂದಿಗೆ, "ನಾನೀಗ ಲಂಕೆಗೆ ಹೋಗುತ್ತಿದ್ದೇನೆ. ಅಲ್ಲಿ ಸೀತೆಯನ್ನು ಕಾಣಲಾಗದೆ ಹೋದರೆ ಅಲ್ಲಿಂದ ನೆಟ್ಟಗೆ ಸ್ವರ್ಗಕ್ಕೆ ಹೋಗುತ್ತೇನೆ.

10



ಅಲ್ಲಿ ಕೂಡಾ ಸೀತೆ ಕಾಣಲಿಲ್ಲವೆಂದಾದರೆ ಮತ್ತೆ ಲಂಕೆಗೆ ಬಂದು ರಾವಣನನ್ನು ಬಂಧಿಸಿ ಹೊತ್ತು ಕೊಂಡು ಬರುತ್ತೇನೆ. ಅಥವಾ ರಾವಣನೊಂದಿಗೆ ಲಂಕೆಯನ್ನೇ ಕಿತ್ತುಕೊಂಡು ತರುತ್ತೇವೆ.'' ಎಂದನು. ಅವನ ಧ್ವನಿ ಮೇಘಗಂಭೀರವಾಗಿತ್ತು.

ಆ ಕೂಡಲೇ ಹನುಮಂತನು ಆಕಾಶದ ಮೇಲಕ್ಕೆ ಹಾರಿದನು. ಅವನೊಂದಿಗೇ ಅವನ ವೇಗದ ಶಕ್ತಿಯಿಂದ ಅನೇಕ ಮರಗಳು ಕೂಡಾ ಆಕಾಶದಲ್ಲಿ ಹಾರಿದುವು. ಅವನ ಶರೀರದ ಮೇಲೆಯೂ, ಸಮುದ್ರದಲ್ಲಿಯೂ ಆ ಮರಗಳ ಹೂಗಳೂ ಎಲೆ ಚಿಗುರುಗಳೂ ಉದುರಿದುವು. ಮುಂದಕ್ಕೆ ಚಾಚಿಕೊಂಡ ಹನುಮಂತನ ಕೈಗಳು ಐದು ತಲೆಗಳ ಸರ್ಪದಂತಿದ್ದುವು. ಅವನ ಕಣ್ಣುಗಳು ಸೂರ್ಯ ಚಂದ್ರರು ಒಂದೇಬಾರಿ ಉದಯಿಸಿದಂತಿದ್ದುವು. ಅವನ ಬಾಲವು ಧ್ವಜದಂತೆ ಮೇಲಕ್ಕೆ ಚಾಚಿಕೊಂಡಿದ್ದಿತು. ಹೀಗೆ ಹನುಮಂತನು ವಾಯುವೇಗದಿಂದ ಆಕಾಶದಲ್ಲಿ ಹಾರುತ್ತಿರಲು, ಅವನ ಕೈಬೆರಳು ಕಾಲ್ಬೆರಳುಗಳ ಸಂದಿನಿಂದ ಹೊರಡುವ ಗಾಳಿಯ ಶಬ್ದ ಮೇಘ ಗರ್ಜನೆಯಂತೆ ಕೇಳುತ್ತಿತ್ತು. ಅವನು ಲಂಕೆಗೆ ಕೇಡು ಮೂಡಿಸುವಂತಹ ಧೂಮಕೇತುವಿನಂತೆ ಹಾರುತ್ತಿದ್ದ. ಅವನ ನೆರಳು ಅವನೊಂದಿಗೇ ಸಮುದ್ರದಲ್ಲಿ ಓಡುತ್ತಿದ್ದಿತು. ಅವನು ಹೋಗುವ ದಿಕ್ಕಿಗೇ ಸಮುದ್ರವೂ ಓಡುತ್ತಿದ್ದಿತು. ಅದರಿಂದ ಹೆದರಿದ ಎಷ್ಟೋ ಜಲಚರ ಪ್ರಾಣಿಗಳು ಆಕಾಶಕ್ಕೆ ಹಾರಿ ಹಾರಿ ಮತ್ತೆ ಸಮುದ್ರಕ್ಕೆ ಬೀಳುತ್ತಿದ್ದುವು.


ತನ್ನ ಮೇಲೆ ಹಾರಿಹೋಗುವ ಹನುಮಂತನನ್ನು ನೋಡಿ ಸಮುದ್ರರಾಜನು ತನ್ನಲ್ಲಿ, ''ನಾನೀಗ ಈ ಹನುಮಂತನಿಗೆ ಸಹಾಯಮಾಡಬೇಕು. ಇವನು ಇಕ್ಷ್ವಾಕು ಕುಲಕ್ಕೆ ಸೇರಿದ ರಾಮನ ಕಾರ್ಯಕ್ಕಾಗಿ ಹೋಗುತ್ತಿದ್ದಾನೆ. ನನ್ನನ್ನು ಉದ್ಧರಿಸಿದ ಸಗರನು ಇಕ್ಷ್ವಾಕು ಕುಲದವನಲ್ಲವೆ? ಅವನಿಂದ ತಾನೇ ನನಗೆ ಸಾಗರವೆಂಬ ಹೆಸರು ಬಂದಿತು? ಆದುದರಿಂದ ಈ ಹನುಮಂತನಿಗೆ ದಾರಿಯಲ್ಲಿ ಸ್ವಲ್ಪ ವಿಶ್ರಾಂತಿ ದೊರೆಯುವಂತೆ ಮಾಡುವುದು ನನ್ನ ಕರ್ತವ್ಯ.'' ಹೀಗೆ ನೆನೆದುಕೊಂಡು, ತನ್ನಲ್ಲಿ ಅಡಗಿರುವ ಮೈನಾಕವೆಂಬ ಪರ್ವತವನ್ನು ನೋಡಿ, ''ಎಲೈ ಮೈನಾಕನೇ ಸ್ವಲ್ಪ ಏಳೇಳು! ಇಂದ್ರನ ಭಯದಿಂದ ನಿನ್ನನ್ನು ತಪ್ಪಿಸಿ ವಾಯುಭಗವಾನನು ನಿನ್ನನ್ನು ಇಲ್ಲಿ ಅಡಗಿಸಿದ್ದಾನಲ್ಲವೆ? ಈಗ ಆ ವಾಯುಕುಮಾರ ಹನುಮಂತನು ಆಕಾಶದಲ್ಲಿ ಹಾರಿ ಹೋಗುತ್ತಿದ್ದಾನೆ. ನೀನೀಗ ನೀರಿನಡಿಯಿಂದ ಮೇಲೆದ್ದು ಹನುಮಂತನಿಗೆ ಸ್ವಲ್ಪ ವಿಶ್ರಾಂತಿ ನೀಡು. ಅವನು ನಿನ್ನನ್ನು ದಾಟಿ ಹೋಗುವುದಕ್ಕೆ ಮುಂಚೆಯೇ ನಿನ್ನ ಬಂಗಾರದ ಶಿಖರಗಳನ್ನು ಮೇಲಕ್ಕೆ ಚಾಚಿ, ಅದರ ಮೇಲೆ ಹನುಮಂತನು ಸ್ವಲ್ಪ ವಿಶ್ರಮಿಸಿಕೊಳ್ಳುವಂತೆ ನೋಡು'' ಎಂದನು. ಕೂಡಲೇ ಮೈನಾಕ ಪರ್ವತವು ನೀರಿನ ಮೇಲೆ ಬೆಳೆದು ನಿಂತಿತು.

10



ಇದ್ದಕ್ಕಿದ್ದ ಹಾಗೆ ಸಮುದ್ರದಲ್ಲಿ ಸೂರ್ಯನು ಮೂಡಿ ನಿಂತಂತೆ ತೋರಿತು. ಹೀಗೆ ತನ್ನ ದಾರಿಗೆ ಅಡ್ಡವಾಗಿ ಎದ್ದುನಿಂತ ಕೆಂಪು ಪರ್ವತವನ್ನು ನೋಡಿ ಹನುಮಂತನು, ಆ ಪರ್ವತವು ತನಗೆ ವಿಘ್ನ ಮಾಡಲು ಎದ್ದಿರುವಂತೆ ಅಂದುಕೊಂಡನು. ಈ ಆಪೋಹದಿಂದ ಅವನು ಆ ಪರ್ವತವನ್ನು ತನ್ನ ಎದೆಯಿಂದ ದೂಡಿ ಉರುಳಿಸಿದನು. ಹನುಮಂತನ ಈ ಶಕ್ತಿಯನ್ನು ನೋಡಿ ಮೈನಾಕನು ಪರವಶನಾಗಿ, ಮಾನವ ರೂಪದಲ್ಲಿ ಪರ್ವತ ಶಿಖರದ ಮೇಲೆ ಪ್ರತ್ಯಕ್ಷನಾಗಿ, "ಅಯ್ಯಾ, ಹನುಮಂತನೇ, ನಿನ್ನ ಶಕ್ತಿಗೆ ಈಡಿಲ್ಲ. ಯಾವ ಪ್ರಾಣಿಗೂ ಸಾಧ್ಯವಾಗದ ರೀತಿಯಲ್ಲಿ ಸಮುದ್ರವನ್ನು ಲಂಘಿಸುತ್ತಿದ್ದರೂ, ಸ್ವಲ್ಪ ಕೂಡ ದಣಿವಿಲ್ಲದೆ ನಿನ್ನ ಬಲದಿಂದ ನನ್ನನ್ನೇ ಉರುಳಿಸಿಬಿಟ್ಟೆಯಲ್ಲಾ ? ಸ್ವಲ್ಪ ಹೊತ್ತು ಈ ಶಿಖರದ ಮೇಲೆ ವಿಶ್ರಾಂತಿಪಡೆ. ರಾಮನ ಪೂರ್ವಿಕನಾದ ಸಗರನಿಂದಲೂ ಆತನ ಮಕ್ಕಳಿಂದಲೂ ಸಮುದ್ರನು ಎಷ್ಟೋ ಒಳಿತುಗಳನ್ನು ಪಡೆದಿದ್ದಾನೆ. ಆ ಕಾರಣದಿಂದ, ರಾಮಕಾರ್ಯದ ಮೇಲೆ ಹೋಗುತ್ತಿರುವ ನಿನಗೆ ತಕ್ಕ ಸತ್ಕಾರಮಾಡಿ ಸಗರವಂಶಕ್ಕೆ ಕೃತಜ್ಞತೆ ತೋರಿಸಲು ಸಮುದ್ರ ರಾಜನು ನನ್ನನ್ನು ಕಳುಹಿಸಿದ್ದಾನೆ. ನಾನೂ ನಿನ್ನ ತಂದೆಯಾದ ವಾಯುವಿನಿಂದ ಉಪಕಾರ ಪಡೆದ ಮೈನಾಕನು. ಆದುದರಿಂದ ನೀನು ಅಗತ್ಯವಾಗಿ ಸ್ವಲ್ಪ ಮಾತ್ರವಾದರೂ ವಿಶ್ರಾಂತಿ ಪಡೆದು ಮುಂದೆ ಹೋಗಬೇಕು" ಎಂದನು.

ಹನುಮಂತನು ಲಕ್ಷ್ಯಮಾಡದೆ ಹೋಗುವುದನ್ನು ನೋಡಿ ಮೈನಾಕನು, "ವಾಯುಕುಮಾರನಾದ ನೀನು ನನ್ನ ಪೂಜೆಯನ್ನು ನಿರಾಕರಿಸಬಾರದು. ಕಾರಣ ಹೇಳುತ್ತೇನೆ, ಕೇಳು. ಕೃತಯುಗದಲ್ಲಿ ಪರ್ವತಗಳಿಗೆ ರೆಕ್ಕೆಗಳಿದ್ದುವು. ಅವು ಆಕಾಶದಲ್ಲಿ ಇಷ್ಟಪ್ರಕಾರ ಹಾರಾಡುವಾಗ ಎಲ್ಲಿ ಕೆಳಗೆ ಬಿದ್ದು ಪ್ರಾಣಿಗಳ ನಾಶಕ್ಕೆ ಕಾರಣವಾಗುತ್ತವೋ ಎಂದು ಋಷಿಗಳೂ ದೇವತೆಗಳೂ ಭಯಪಡುತ್ತಿದ್ದರು. ಅದನ್ನು ತಿಳಿದು ದೇವೇಂದ್ರನು ತನ್ನ ವಜ್ರಾಯುಧದಿಂದ ಅನೇಕ ಸಾವಿರ ಪರ್ವತಗಳ ರೆಕ್ಕೆಗಳನ್ನು ಖಂಡಿಸಿಬಿಟ್ಟನು. ಹಾಗೆಯೇ ಇಂದ್ರನು ನನ್ನ ರೆಕ್ಕೆಗಳನ್ನೂ ಖಂಡಿಸಲು ಬರುವಾಗ ವಾಯುದೇವನು ನನ್ನನ್ನು ಎಳೆದುಕೊಂಡು ದೂರ ಒಯ್ದು ಸಮುದ್ರದಲ್ಲಿ ಹಾಕಿದನು. ಆ ವಿಧವಾಗಿ ನಾನು ವಾಯುದೇವನಿಗೆ ಋಣಪಟ್ಟಿದ್ದೇನೆ. ಆದುದರಿಂದ ನೀನು ನನ್ನ ಆತಿಥ್ಯವನ್ನು ಸ್ವೀಕರಿಸಬೇಕು. ನಿನ್ನನ್ನು ನೋಡಲು ನನಗೆ ಬಹಳ ಸಂತೋಷವಾಗಿದೆ. ನಿನ್ನನ್ನು ಉಪಚರಿಸುವುದರಿಂದ ನಿನ್ನ ತಂದೆ ವಾಯುವಿಗೂ ಸಂತೋಷವಾಗುತ್ತದೆ. ರಾಮಕಾರ್ಯಕ್ಕೆ ನೆರವಾದ ಪುಣ್ಯವೂ ಬರುತ್ತದೆ" ಎಂದನು.





ವೀರಹನುಮಾನ್

Sept 1975

ಪರ್ವತ ಮೈನಾಕವು ತನಗೆ ಅತ್ಯಾದರದ ಆತಿಥ್ಯ ನೀಯುವೆನೆಂದು ಹೇಳಿದುದನ್ನು ಕೇಳಿ ಹನುಮಂತನು ಸಂತೋಷಪಟ್ಟು "ನಿನ್ನ ಮಾತುಗಳೇ ಬಹು ದೊಡ್ಡ ಆತಿಥ್ಯವಾಯಿತು. ನಿನ್ನ ಆತಿಥ್ಯವನ್ನು ನಿರಾಕರಿಸುವೆನೆಂದು ಕೋಪಿಸಬೇಡ. ನಾನು ಈ ಸಮಯದಲ್ಲಿ ಒಂದು ತೃಟಿಕಾಲವನ್ನು ಕೂಡಾ ವ್ಯರ್ಥ ಮಾಡಬಾರದು. ಸಾಯಂಕಾಲವಾಗುವುದರೊಳಗೆ ಲಂಕೆಗೆ ಹೋಗುವೆನೆಂದು ಮಾತು ಕೊಟ್ಟಿದ್ದೇನೆ. ಮಧ್ಯದಲ್ಲೆಲ್ಲಿಯೂ ನಿಲ್ಲುವಂತಿಲ್ಲ" ಎಂದನು.

ಹೀಗೆಂದು ಮೈನಾಕವನ್ನು ತನ್ನ ಕೈಯಿಂದ ಮಾತ್ರ ಮುಟ್ಟಿ, ಹನುಮಂತನು ಆಕಾಶಮಾರ್ಗದಲ್ಲಿ ಮುಂದಕ್ಕೆ ಸಾಗಿದನು. ಮೈನಾಕನೂ ಸಮುದ್ರನೂ ಶುಭಾರ್ಥವನ್ನು ಗ್ರಹಿಸಿ "ನಿನಗೆ ಕಾರ್ಯಸಿದ್ಧಿಯುಂಟಾಗಲಿ" ಎಂದು ಹನುಮಂತನಿಗೆ ಆಶೀರ್ವಾದ ಮಾಡಿದರು. ಹನುಮಂತನು ಮೈನಾಕಪರ್ವತವನ್ನು ನೋಡುತ್ತಾ ಆಕಾಶದಲ್ಲಿ ನೆಟ್ಟಗೆ ಮೇಲೆ ಹೋಗಿ, ಆಮೇಲೆ ಮುಂದಕ್ಕೆ ಸಾಗಿದನು. ಇದೆಲ್ಲವನ್ನೂ ನೋಡುತ್ತಿದ್ದ ದೇವತೆಗಳೂ, ಮಹರ್ಷಿಗಳೂ, ಸಿದ್ಧಚಾರಣರರೂ, ದೇವೇಂದ್ರನೂ ಮೈನಾಕನನ್ನು ಮೆಚ್ಚಿಕೊಂಡು "ಆಹ! ಮೈನಾಕನ ಆತಿಥ್ಯವನ್ನು ನಿರಾಕರಿಸುವ ಸಾಮರ್ಥ್ಯ ಒಬ್ಬ ಹನುಮಂತನಿಗೆ ಮಾತ್ರವೇ ಸರಿ. ಇನ್ನಾರೂ ಹಾಗೆ ಮಾಡಲಾರರು" ಎಂದು ತಮ್ಮೊಳಗೆ ಹೇಳಿಕೊಂಡರು.

ಆಮೇಲೆ ಇಂದ್ರನು ಮೈನಾಕನ ಬಳಿಗೆ ಬಂದು, "ಎಲೈ ಮೈನಾಕನೇ, ಎಲ್ಲೋ ಅಡಗಿದ್ದ ನಿನ್ನನ್ನು ನೋಡಿ ನನಗೆ ಬಹಳ ಸಂತೋಷವಾಯಿತಯ್ಯ. ಇನ್ನೆಂದಿಗೂ ನಿನಗೆ ನನ್ನ ಭಯವಿಲ್ಲ" ಎಂದನು. ಇಂದ್ರನ ಮಾತು ಕೇಳಿ ಮೈನಾಕನು ತನಗೆ ಇಂದ್ರನ ಭಯ ತೊಲಗಿಹೋದುದಕ್ಕೆ ಬಹಳ ಸಮಾಧಾನಗೊಂಡನು. ಇದರಿಂದ ಅವನಿಗೊಂದು ಹೊಸ ಸಂತೋಷವಾಯಿತು.

ಅತ್ತ ಹನುಮಂತನು ಸಮುದ್ರದ ಮೇಲೆ ಬಹಳ ದೂರ ಹೊರಟುಹೋಗುತ್ತಿದ್ದನು. ಆ ಸಮಯದಲ್ಲಿ ದೇವತೆಗಳೂ ಗಂಧರ್ವರೂ, ವಿದ್ಯಾಧರರೂ,



ಮಹರ್ಷಿಗಳೂ ಹನುಮಂತನಿಗೆ ಇನ್ನೆಷ್ಟು ಬಲವಿದೆ ಯೆಂಬುದನ್ನು ಪರೀಕ್ಷಿಸಲು ತೀರ್ಮಾನಿಸಿದರು. ಅವರು ಸರ್ಪಗಳಿಗೆ ತಾಯಿಯಾಗಿರುವ ಸುರಸ ಎಂಬವಳನ್ನು ಕರೆದು, "ಸುರಸಾದೇವಿಯೇ, ನೀನು ಈಗಲೇ ಒಂದು ಕೆಲಸ ಮಾಡಬೇಕು. ವಾಯು ಪುತ್ರನಾದ ಹನುಮಂತನೆಂಬವನು ಸಮುದ್ರದ ಮೇಲೆ ಹಾರಿಹೋಗುತ್ತಿದ್ದಾನೆ. ನೀನು ಪರ್ವತಾ ಕಾರದ ರಾಕ್ಷಸಿಯ ರೂಪ ಧರಿಸಿ, ದೊಡ್ಡದೊಡ್ಡ ಕೋರೆಹಲ್ಲುಗಳಿಂದ, ಗೋರೋಚನದ ಬಣ್ಣಗಳ ಕಣ್ಣುಗಳಿಂದ ಆ ಹನುಮಂತನನ್ನು ಅಡ್ಡಗಟ್ಟು. ಅವನನ್ನು ಮುಂದೆ ಹೋಗಲು ಬಿಡದೆ ನಿನ್ನ ಸಂಪೂರ್ಣ ಬಲವನ್ನೂ ತೋರಿಸು. ಅವನು ನಿನ್ನನ್ನು ಗೆದ್ದು ಮುಂದಕ್ಕೆ ಹೋಗುವನೋ ಅಥವಾ ನಿನ್ನನ್ನು ನೋಡಿ ಹೆದರಿ ಕಂಗೆಡುವನೋ ನೋಡಬೇಕು. ಏಕೆಂದರೆ ಮುಂದಿನ ಕಾರ್ಯಗಳೆಲ್ಲ ಅವನ ಬಲ ಧೈರ್ಯಸಾಹಸಗಳನ್ನೇ ಅವಲಂಬಿಸಿವೆ" ಎಂದರು.

ಸುರಸ ದೇವತೆಗಳ ಕೋರಿಕೆಯನ್ನು ನೆರವೇರಿಸಲು ಕೂಡಲೇ ಹೊರಟಳು. ಅವಳು ಮಹಾ ಭಯಂಕರವೂ, ವಿಕಾರವೂ ಆದ ರೂಪವನ್ನು ಧಾರಣೆ ಮಾಡಿದಳು. ಅವಳು ಹಾರಿಹೋಗಿ ಹನುಮಂತನ ದಾರಿಗೆ ಅಡ್ಡಗಟ್ಟಿ, "ಓ ಹನುಮಂತ! ಬಾ ಬಾ! ದೇವತೆಗಳು ನಿನ್ನನ್ನು ನನಗೆ ಆಹಾರವಾಗಿ ಕೊಟ್ಟುಬಿಟ್ಟರು. ನಿನ್ನನ್ನು ನುಂಗಿಬಿಡುತ್ತೇನೆ. ಬಾ. ನನ್ನ ಬಾಯಿಯೊಳಗೆ ಪ್ರವೇಶಿಸಿಬಿಡು" ಎಂದು ಬಾಯಿ ತೆರೆದಳು.

ಅವಳ ಮಾತು ಕೇಳಿ ಹನುಮಂತನ ಮುಖದಲ್ಲಿ ಮಂದಹಾಸ ತೇಲಿತು. ಅವನು ಸಂತೋಷದಿಂದ ಅವಳಿಗೆ ಕೈಜೋಡಿಸಿ, "ಅದಕ್ಕೆ ಈಗ ಸಮಯ ವಿಲ್ಲ; ಕಾರಣವೇನೆಂದರೆ, ದಶರಥನ ಮಗನಾದ ರಾಮನೆಂಬವನು, ಲಕ್ಷ್ಮಣನೆಂಬ ತನ್ನ ತಮ್ಮನೊಂದಿಗೆ, ಸೀತೆಯೆಂಬ ತನ್ನ ಹೆಂಡತಿಯೊಂದಿಗೆ ದಂಡಕಾರಣ್ಯಕ್ಕೆ ಬಂದನು. ಒಂದುದಿನ ರಾಮನು ಕಾರ್ಯಾಂತರದ ಮೇಲೆ ದೂರಹೋದ ಸಮಯ ನೋಡಿ ರಾವಣನೆಂಬವನು ಸೀತೆಯನ್ನು ಎತ್ತಿಕೊಂಡು ಹೋದ. ನಾನೀಗ ಮಹಾತ್ಮನಾದ ಆ ರಾಮನ ದೂತನಾಗಿ ಸೀತೆಯ ಬಳಿಗೆ ಹೋಗುತ್ತಿದ್ದೇನೆ. ಈ ಮಹಾಕಾರ್ಯಕ್ಕೆ ನೀನು ಕೂಡಾ ಸಹಾಯಕಳಾಗಿರು. ನಾನು ಸೀತೆಯನ್ನು ನೋಡಿ, ರಾಮನ ಕೆಲಸವನ್ನು ಪೂರ್ತಿಗೊಳಿಸಿ ಆಮೇಲೆ ನಾನಾಗಿಯೇ ನಿನ್ನ ಬಾಯಿಯೊಳಗೆ ಪ್ರವೇಶಿಸುತ್ತೇನೆ. ಇದು ನಿಜ. ದಾರಿಬಿಡು" ಎಂದನು.

ಅವನ ಮಾತು ಕೇಳಿ ಸುರಸ, "ನನ್ನನ್ನು ದಾ ಯಾರೂ ಹೋಗಲಾರದಂತೆ ನನಗೆ ವರವಿ ನನ್ನನ್ನು ದಾಟಿ ಹೋಗಲು ನಿನಗೆ ಸಾಧ್ಯವೇ ಇಲ್ಲ" ಎಂದು ತನ್ನ ಬಾಯಿಯನ್ನು ತೆರೆದೇ ಇದ್ದಳು. ಅ ಬಾಯಿ ದೊಡ್ಡದೊಂದು ಗುಹೆಯ ಹಾಗಿದ್ದಿ ಹನುಮಂತನು ತನ್ನ ಶರೀರವನ್ನು ಇದ್ದಕ್ಕಿದ್ದ ಹಾ

ಒಂದಂಗುಲ ಪ್ರಮಾಣಕ್ಕೆ ತಗ್ಗಿಸಿ, ಅತಿ ವೇಗವಾಗಿ ಸುರಸಳ ಬಾಯೊಳಗೆ ಹೋಗಿ ಮತ್ತೆ ಹೊರಗೆ ಬಂದು, "ಎಲೈ ದಕ್ಷಪುತ್ರಿ ಸುರಸಾ, ನಿನಗೆ ನಮಸ್ಕಾರ. ನಿನ್ನ ಬಾಯಿಯೊಳಗೆ ಹೊಕ್ಕು ಹೊರಬಂದಿದ್ದೇನೆ. ಇನ್ನು ನನ್ನನ್ನು ಮುಂದೆ ಹೋಗಲು ಬಿಡು" ಎಂದನು.

ಸುರಸ ಕೂಡಲೇ ವಿಕಾರವಾದ ರಾಕ್ಷಸ ರೂಪವನ್ನು ಬಿಟ್ಟು ತನ್ನ ಸಾಧಾರಣವಾದ ನಿಜ ರೂಪದಿಂದ ಶಾಂತಳಾಗಿ ಕಾಣಿಸಿ, "ಎಲೌ ಹನುಮಂತನೇ, ನೀನು ಸುಖವಾಗಿ ಹೋಗಿ ಕೃತಕೃತ್ಯನಾಗಿ ಹಿಂತಿರುಗುವವನಾಗು. ನೀನು ಕೈಗೊಂಡ ಕಾರ್ಯ ಜಯವಾಗುತ್ತದೆ. ಸೀತಾರಾಮರನ್ನು ಒಂದುಗೂಡಿಸಿದ ಕೀರ್ತಿ ನಿನಗೆ ಬರಲಿ" ಎಂದು ಹರಸಿದಳು.

ಹನುಮಂತನು ಲಂಕೆಯ ಕಡೆಗೆ ತನ್ನ ಲಂಘನವನ್ನು ಮುಂದುವರಿಸಿದನು. ಸ್ವಲ್ಪ ಹೊತ್ತಿನಲ್ಲೆ ಇನ್ನೊಂದು ವಿಘ್ನವು ಅವನಿಗುಂಟಾಯಿತು. ಅದೇನೆಂದರೆ ಅವನು ಸಮುದ್ರದ ಮೇಲೆ ಆಕಾಶದಲ್ಲಿ ಹಾರಿಕೊಂಡಿರುವಾಗ ಸಮುದ್ರದಲ್ಲಿದ್ದ ಸಿಂಹಿಕಳೆಂಬ ರಾಕ್ಷಸಿ ಅವನನ್ನು ನೋಡಿದಳು. "ಓ! ಇದಾವುದೋ ಪ್ರಾಣಿ ನನ್ನ ಬೊಗಸೆಗೆ ಬಿತ್ತು. ಇದನ್ನು ತಿಂದು ನನ್ನ ಹಸಿವೆಯನ್ನು ನೀಗಿಸಿಕೊಳ್ಳುತ್ತೇನೆ" ಎಂದುಕೊಂಡು, ಸಮುದ್ರದಲ್ಲಿ ಬಿದ್ದ ಹನುಮಂತನ ನೆರಳನ್ನು ಹಿಡಿದು ಎಳೆಯ ತೊಡಗಿದಳು.

ಮುಂದಕ್ಕೆ ಸಾಗುತ್ತಿದ್ದ ಹಡಗನ್ನು ಬಲವಾದ ಎದಿರು ಗಾಳಿ ಹಿಂದಕ್ಕೆ ದೂಡಿಕೊಂಡು ಹೋಗುವ ಹಾಗೆ ಹನುಮಂತನಿಗೆ ಅನುಭವವಾಯಿತು. ಮುಂದೆ ಹೋಗಲು ತಡೆಯಾದ ಈ ಶಕ್ತಿ ಎಲ್ಲಿಂದ ಬರುತ್ತಿದೆ ಎಂದು ಎಲ್ಲಾ ಬದಿಗಳಿಗೂ ಮೇಲೆಯೂ ಕೆಳಗೂ ನೋಡಿದಾಗ, ಸಮುದ್ರದಲ್ಲಿ ತೇಲುವ ಮಹಾ ಪ್ರಾಣಿ ಒಂದು ಕಾಣಿಸಿತು. ದಕ್ಷಿಣ ಸಮುದ್ರದಲ್ಲಿ ಅದ್ಭುತ ಶಕ್ತಿಯುಳ್ಳ ಪ್ರಾಣಿಯಂತಹ, ಸಿಂಹಿಕಾ ಎಂಬ ರಾಕ್ಷಸಿ



ಇರುವಳೆಂತಲೂ, ಅವಳು ನೆರಳನ್ನು ಹಿಡಿದು ಆಸಲನ್ನು ಎಳೆಯುವ ಶಕ್ತಿಯುಳ್ಳವಳೆಂತಲೂ ಸುಗ್ರೀವನು ಮೊದಲೇ ಹೇಳಿದ್ದ. ಆ ರಾಕ್ಷಸೀ ಪ್ರಾಣಿ ಇದುವೇ ಎಂದು ಹನುಮಂತನಿಗೆ ತಿಳಿಯಿತು.

ಕೂಡಲೇ ಹನುಮಂತನು ತನ್ನ ದೇಹವನ್ನು ಬೆಳೆಸಿದನು. ಅದನ್ನು ನೋಡಿ ಸಿಂಹಿಕಳೂ ತನ್ನ ದೇಹವನ್ನು ಬೆಳೆಸಿ ತಲೆಯೆತ್ತಿ ತನ ಬಾಯಿಯನ್ನು ಹನುಮಂತನ ಶರೀರಕ್ಕಿಂತಲೂ ದೊಡ್ಡದಾಗಿ ತೆರೆದು ಅವನನ್ನು ನುಂಗಲು ಸಿದ್ಧಳಾದಳು. ಆ ಸಮಯದಲ್ಲಿ ಹನುಮಂತನು ಸಿಂಹಿಕಳ ಶರೀರದೊಳಗಿನ ಮರ್ಮ ಪ್ರದೇಶವನ್ನು ಕಂಡುಹಿಡಿದನು. ತತ್‌ಕ್ಷಣವೇ ಅವನು ತನ್ನ ಶರೀರವನ್ನು ಚಿಕ್ಕದು ಮಾಡಿ, ಸಿಂಹಿಕಳ ಬಾಯಿಯೊಳಗೆ ಹೊಕ್ಕು ಮರ್ಮ ಪ್ರದೇಶವನ್ನು ಸೀಳಿ, ಅವಳು ಬಾಯಿ ಮುಚ್ಚುವುದರೊಳಗೆ ಹೊರಗೆ ಬಂದು, ಶರೀರವನ್ನು ಮೊದಲಿನಂತೆ ಬೆಳೆಸಿಕೊಂಡನು. ಅಷ್ಟರಲ್ಲಿ ಎದೆಗುಂಡಿಗೆ ಸೀಳಿಹೋದ ಸಿಂಹಿಕಳ ಕಳೇ



ಒರವು ದೊಡ್ಡ ಪರ್ವತದಂತೆ ಸಮುದ್ರದ ಮೇಲೆ ತೇಲತೊಡಗಿತು. ಸುತ್ತುಮುತ್ತಲಿನ ಸಮುದ್ರದ ನೀರು ಅವಳ ರಕ್ತದಿಂದ ಕೆಂಪಗಾಯಿತು.

ಆಮೇಲೆ ಹನುಮಂತನ ಪ್ರಯಾಣ ನಿರಾತಂಕವಾಗಿ ಸಾಗುತ್ತಿರಲು, ಸಿಂಹಿಕಳಂತಹ ಘೋರ ರಾಕ್ಷಸ ಪ್ರಾಣಿಯನ್ನು ಕೊಂದುಹಾಕಿದ ಅವನ ಪರಾಕ್ರಮಕ್ಕೆ ದೇವತಾದಿಗಳೆಲ್ಲ ಮೆಚ್ಚುತ್ತಿದ್ದರು.


ಹನುಮಂತನ ಪ್ರಯಾಣ ಕೊನೆಮುಟ್ಟುವ ಹೊತ್ತು ಹತ್ತಿರವಾಯಿತು. ಸಮುದ್ರದ ಆಚೆಯ ತೀರವು ಕಾಣಿಸತೊಡಗಿತು. ಆದರಾಚೆಗೆ ಬಹು ದೂರದಲ್ಲಿ ಅರಣ್ಯಗಳೂ, ಶಿಖರದ ಮೇಲೆ ದ್ವೀಪದಂತೆ ಕಾಣುವ ಲಂಕಾ ನಗರವೂ, ಮಲಯ ಪರ್ವತದ ಮೇಲಿರುವ ವನಗಳೂ, ಪ್ರಾಣಿಗಳ ಗದ್ದಲದ ಸಾಂಧ್ರ ಧ್ವನಿಯೂ, ನದಿಗಳು ಸಮುದ್ರವನ್ನು ಸೇರುವ ಪ್ರದೇಶಗಳೂ ಸಹಾ ಹನುಮಂತನಿಗೆ ಕಾಣತೊಡಗಿದುವು. ಗುರಿ ಸಮೀಪಿಸುತ್ತಿದ್ದಂತೆ ಹನುಮಂತನಿಗೆ ಒಂದು ಆಲೋಚನೆ ಬಂದಿತು. ತನ್ನ ಈ ದೊಡ್ಡ ದೇಹವನ್ನೂ ವೇಗವನ್ನೂ ರಾಕ್ಷಸರು ನೋಡಿಬಿಟ್ಟರೆ ತಾನು ಬಂದ ಕೆಲಸವೆಲ್ಲ ಕೆಟ್ಟುಹೋಗಬಹುದು. ಆದುದರಿಂದ ಅವನು ತನ್ನ ಶರೀರವನ್ನು ಆದಷ್ಟು ಸಣ್ಣದಾಗಿ ತಗ್ಗಿಸಿಕೊಂಡನು.

ಅಷ್ಟರಲ್ಲಿ ಲಂಕಾತೀರವು ಬಂದುಬಿಟ್ಟಿತು. ಹನುಮಂತನು ಸಮುದ್ರತೀರದ ಒಂದು ಗುಡ್ಡದ ಶಿಖರದ ಮೇಲೆ ಎರಗಿ, ದೇವೇಂದ್ರನ ಅಮರಾವತಿಯಂತೆ ಕಾಣುವ ಲಂಕಾ ನಗರವಿರುವ ಅದ್ಭುತವಾದ ಶಿಖರವನ್ನು ನೋಡಿದನು.

ಲಂಕಾ ನಗರವು ತ್ರಿಕೂಟ ಶಿಖರದ ಮೇಲೆ ಆಕಾಶ ನಗರಿಯಂತೆ ದೂರಕ್ಕೆ ಕಾಣುತ್ತಿತ್ತು. ಹನುಮಂತನು ನೋಡುತ್ತಾ ನಿಂತು ಸಮಯಕಳೆಯದೆ, ಅಲ್ಲಿಂದ ಲಂಕಾ ನಗರದ ಕಡೆಗೆ ನಡೆಯತೊಡಗಿದನು. ಅವನು ನಡೆಯುವ ದಾರಿಯಲ್ಲಿ ವಿಧವಿಧದಾದ ಹೂಗಳಿಂದ ದಟ್ಟವಾಗಿ ತುಂಬಿ ಪರಿಮಳವನ್ನು ಬೀರುವ ಮರಗಳು ತುಂಬಿದ ಪರ್ವತ ಶಿಖರಗಳೂ, ಉದ್ಯಾನವನಗಳೂ ಕಂಡುಬಂದುವು. ಅನೇಕ ಬಗೆಯ ಪಕ್ಷಿಗಳೂ, ರಾಜೋದ್ಯಾನಗಳೂ ವಿಹಾರ ಪ್ರದೇಶಗಳೂ ಇನ್ನೂ ಅನೇಕ ಅಂದಚಂದದ ದೃಶ್ಯಗಳೂ ಅವನ ಕಣ್ಣಿಗೆ ಬಿದ್ದುವು.

ಲಂಕಾ ನಗರದ ಸುತ್ತಲೂ ಆಳವಾದ ಅಗಳ್ತೆಗಳಿದ್ದುವು. ಅವುಗಳಲ್ಲಿ ತುಂಬಿದ ನೀರಿನಲ್ಲಿ ಕಮಲ ಕುಮುದ ಮೊದಲಾದ ಜಲಪುಷ್ಪಗಳು ರಂಜಿಸುತ್ತಿದ್ದುವು. ನಗರದ ಸುತ್ತಲೂ ಬಂಗಾರದ ಪ್ರಾಕಾರಗಳು ಎದ್ದು ಕಾಣುತ್ತಿದ್ದುವು. ನಗರದೊಳಗೆ ಯಾರೂ ಪ್ರವೇಶಿಸಲಾಗದಂತೆ ಆಯುಧ ಧಾರಿಗಳಾದ ರಾಕ್ಷಸರು ಕಾವಲಿದ್ದರು. ಆಕಾಶವನ್ನು ಮುತ್ತಿಡುವಂತೆ ಎತ್ತರವಾದ ಮನೆಮಂದಿರಗಳ ನಡುವೆ ಬೀದಿಗಳು ಹೋಗುತ್ತಿದ್ದುವು. ಕೋಟೆಯಲ್ಲಿ ಅಲ್ಲಲ್ಲಿ ವಿಶಾಲವಾದ ಬುರುಜುಗಳೂ, ಧ್ವಜಸ್ತಂಭಗಳೂ ನಿಂತಿದ್ದುವು.





ಇಂತಹ ಅಪೂರ್ವ ನಗರವು ತ್ರಿಕೂಟ ಪರ್ವತದ ಶಿಖರದ ಮೇಲಿರುವುದರಿಂದ ಆಕಾಶದಲ್ಲಿ ನಿರ್ಮಿಸಲ್ಪಟ್ಟಂತೆಯೇ ಕಾಣುತ್ತಿದಿತು. ಅದನ್ನು ನಿರ್ಮಿಸಿದವನು ದೇವಶಿಲ್ಪಿ ವಿಶ್ವಕರ್ಮ.

ಹನುಮಂತನು ಹಾಗೆಯೇ ಸಾಗಿ ಉತ್ತರದ ಬಾಗಿಲಿನ ಬಳಿಯನ್ನು ತಲಪಿ, ರಾವಣನ ಬಲವು ಎಂತಹುದೆಂಬುದನ್ನು ತಿಳಿಯಲು ಪ್ರಯತ್ನಿಸಿದನು. ಈ ಮಹಾ ಬಲಿಷ್ಠವಾದ ನಗರವನ್ನು ಜಯಿಸಲು ಯಾರಿಗೆ ತಾನೇ ಸಾಧ್ಯವಾದೀತು ? ಒಂದು ಕಾಲದಲ್ಲಿ ಇದು ಕುಬೇರನ ನಗರವಾಗಿತ್ತಂತೆ, ಆದರೆ ಈಗ ಕುಬೇರನು ಕೂಡಾ ಇದರೊಳಗೆ ಪ್ರವೇಶಿಸಲು ಸಾಧ್ಯವಿಲ್ಲ. ಗುಹೆಗೆ ಹಾವುಗಳು ಕಾವಲಾಗಿರುವಂತೆ, ಈ ನಗರಕ್ಕೆ ಭಯಂಕರ ಮಾರಣಾಯುಧಗಳನ್ನು ಧರಿಸಿದ ರಾಕ್ಷಸರು ಕಾವಲಾಗಿದ್ದಾರೆ. ಅದಕ್ಕೆ ರಕ್ಷಣೆಯಾಗಿ ಸುತ್ತಲೂ ದಾಟಲಸಾಧ್ಯವಾದ ಸಮುದ್ರವಿದೆ. ವಾನರರು ಸಮುದ್ರವನ್ನು ದಾಟಿ ಇಲ್ಲಿಗೆ ಬರಲು ಸಾಧ್ಯವೇ ಇಲ್ಲ. ಒಂದು ವೇಳೆ ಬಂದರೂ ಪ್ರಯೋ-ಜನವೇನಿಲ್ಲ. ಏಕೆಂದರೆ, ಈ ಲಂಕೆಯನ್ನು ದೇವತೆ-ಗಳು ಕೂಡಾ ಜಯಿಸಲಾರರು. ರಾಮನು ಎಷ್ಟೇ ಪರಾಕ್ರಮಶಾಲಿಯಾದರೂ ಏನು ಪ್ರಯೋಜನ ? ಒಳಗೆ ಹೋಗುವುದೇ ಅಸಾಧ್ಯವಾದ ಈ ಲಂಕಾ ನಗರವನ್ನು ರಾಮನು ಏನು ಮಾಡಬಲ್ಲನು ? ರಾಕ್ಷಸ-ರೆಂದ ಮೇಲೆ ಬಹಳ ಕ್ರೂರರಾಗಿರುತ್ತಾರೆ. ಸಾಮೋ-ಪಾಯದಿಂದ ಅವರನ್ನು ಜಯಿಸಲು ಸಾಧ್ಯವಿಲ್ಲ. ಸಂಪತ್ತಿನಲ್ಲಿ ಮುಳುಗಿ ತೇಲುವವರಾದುದರಿಂದ ದಾನೋಪಾಯವೂ ಫಲಿಸದು. ಬಲಗರ್ವದಿಂದ ಮತ್ತರಾಗಿರುವವರು ಭೇದೋಪಾಯಕ್ಕೂ ಮಣಿ-ಯರು. ಅತೀವ ಬಲಗಳಿಂದ ಕೂಡಿದವರು ಯುದ್ಧಕ್ಕೂ ಹಿಂಜರಿಯುವವರಲ್ಲ, ಯುದ್ಧದಲ್ಲಿ ಸೋಲುವವರೂ ಅಲ್ಲ. ಇವೆಲ್ಲಕ್ಕೂ ಮೊದಲು ಸಮುದ್ರ ದಾಟಿ ಇಲ್ಲಿಗೆ ಬರುವ ಶಕ್ತಿ ನಾಲ್ಕುಮಂದಿಗೆ ಮಾತ್ರವೇ ಇದೆ—ತನಗೆ, ಅಂಗದನಿಗೆ, ನೀಲನಿಗೆ, ಸುಗ್ರೀವನಿಗೆ ; ಉಳಿದವರಾರೂ ಬರುವಂತಿಲ್ಲ.


ಹೀಗೆ ಆಲೋಚಿಸುವ ಹನುಮಂತನಿಗೆ ತ... ಆಲೋಚನೆ ಕೇವಲ ಅಪ್ರಸ್ತುತವೆನಿಸಿತು. "ಈ... ಬೇಡದ ಆಲೋಚನೆಗಳೆಲ್ಲ ಈಗ ಏತಕ್ಕೆ ? ಮೊದಲು ಸೀತೆ ಬದುಕಿದ್ದಾಳೋ ಇಲ್ಲವೋ ಎಂದು ತಿಳಿಯಬೇಕು ಬದುಕಿದ್ದಾಳಾದರೆ ಸೀತಾದೇವಿಯನ್ನು ನೋಡಬೇಕು ಯಾವ ಆಲೋಚನೆಗಳಾದರೂ ಆಮೇಲೆ ತಾನೇ ? ಎಂದುಕೊಂಡನು.

ಅವನ ಮೊದಲನೇ ಸಮಸ್ಯೆ ಲಂಕಾ ನಗರದೊ... ಪ್ರವೇಶ ಮಾಡಬೇಕಾದುದು. ಬಹಳ ದೊಡ್ಡ ಶರೀ... ದೊಂದಿಗೆ ಪ್ರವೇಶಿಸಿಬಿಟ್ಟರೆ ರಾಕ್ಷಸರ ಕೈಗೆ ... ಬೀಳುವ ಸಾಧ್ಯತೆಯಿದೆ. ಬಹು ಚಿಕ್ಕ ಶರೀರವ... ಬಿಟ್ಟರೆ ಲಂಕಾ ನಗರವನ್ನೆಲ್ಲಾ ತಿರುಗುತ್ತಾ ನೋಡ... ಕಷ್ಟವಾದೀತು. ಆದುದರಿಂದ ಹನುಮಂತನು ... ಶರೀರವನ್ನು ಬಹಳ ದೊಡ್ಡದಾಗಿಯೋ ತುಂಬ ...

ದಾಗಿಯೋ ಇಲ್ಲದಂತೆ ಮಧ್ಯಮ ಪ್ರಮಾಣದಲ್ಲಿರಿಸಿಕೊಂಡು, ರಾತ್ರಿಯಲ್ಲಿಯೇ ಲಂಕೆಯೊಳಗೆಲ್ಲ ತಿರುಗಾಡಿಬಿಡುವುದೆಂದು ನಿಶ್ಚಯಿಸಿಕೊಂಡನು. ಸೀತೆಯನ್ನು ನೋಡುವುದರೊಳಗೆ ಅವನು ರಾಕ್ಷಸರ ಕೈಗೆ ಸಿಕ್ಕಿ ಬೀಳದಂತೆ ಜಾಗ್ರತೆ ಪಡಬೇಕಾಗಿತ್ತು. ರಾಕ್ಷಸ ದೂತರು ತನ್ನನ್ನು ಕಂಡಕೂಡಲೇ ರಾವಣನ ಮುಂದೆ ಎಳೆದುಕೊಂಡು ಹೋಗುತ್ತಾರೆ. ರಾವಣನು ದೂತರನ್ನು ಮನ್ನಿಸುವ ಗುಣದವನಾಗಿರಲು ಸಾಧ್ಯವಿಲ್ಲ.

ಆದುದರಿಂದ ಹನುಮಂತನು ಸೂರ್ಯನು ಅಸ್ತಮಿಸುವ ವರೆಗೂ ಕಾದಿದ್ದು, ತನ್ನ ಶರೀರವನ್ನು ಬೆಕ್ಕಿನ ಪ್ರಮಾಣಕ್ಕೆ ತಗ್ಗಿಸಿಕೊಂಡು, ವಿಚಿತ್ರವಾಗಿ ಕಾಣಿಸಿದನು. ಕತ್ತಲೆಯಾದ ಕೂಡಲೇ ಅವನು ಸಾಮಾನ್ಯ ಕೋತಿಯ ಹಾಗೆ ಹಾರುತ್ತಾ, ಲಂಕಾ ನಗರವನ್ನು ಸಮೀಪಿಸಿದನು. ಎತ್ತರವಾದ ಸ್ಥಳದಲ್ಲಿ ನಿಂತು ಲಂಕೆಯೊಳಗೆ ಕಣ್ಣೋಡಿಸಿದನು.

ನಗರದ ಬೀದಿಗಳೆಲ್ಲ ತಿದ್ದಿತೀಡಿದಂತೆ ಕಂಗೊಳಿಸುತ್ತಿದ್ದುವು. ಪ್ರತಿ ಮನೆಗಳಿಗೂ ಸುಂದರವಾದ ಆವರಣದಂತೆ ಗೋಡೆಗಳು ಕಂಡುಬಂದುವು. ಬೆಳ್ಳಿ ಬಂಗಾರಗಳ ಕಂಬಗಳೂ ದ್ವಾರಬಂಧಗಳೂ ಕಿಟಿಕಿಗಳೂ ಕಾಣುತ್ತಿದ್ದುವು. ಏಳೆಂಟು ಉಪ್ಪರಿಗೆಗಳ ಭಾರಿ ಭಾರಿ ಆರಮನೆಗಳಿದ್ದುವು. ನಗರದಲ್ಲಿ ಎಲ್ಲಿ ನೋಡಿದರೂ ಸ್ಫಟಿಕದಿಂದಲೂ ಮಣಿಗಳಿಂದಲೂ ಮಾಡಿದ ಅಲಂಕಾರಗಳು ಕಾಣುತ್ತಿದ್ದುವು. ಮೊತ್ತದಲ್ಲಿ ಲಂಕಾ ನಗರವು ಗಂಧರ್ವನಗರಿಯಂತಿದ್ದಿತು. ಭಯಂಕರರಾದ ರಾಕ್ಷಸರ ರಕ್ಷಣೆಯಲ್ಲಿರುವ ಆ ನಗರವನ್ನು ವಾನರರು ಹೇಗೆ ಜಯಿಸುವರೋ ಎಂಬ ಹಾಳು ಯೋಚನೆ ಹನುಮಂತನಲ್ಲಿ ಪದೇ ಪದೇ ತಲೆಯೆತ್ತುತ್ತಿದ್ದಿತು. ಕಡೆಗೆ ಸೀತೆಯನ್ನು ಕಾಣಲಿರುವೆನೆಂಬ ಯೋಚನೆಯನ್ನು ಮುಂದೆ ಮಾಡಿ ಬೇರೆ ವಿಚಾರ ಏಳದಂತೆ ತನ್ನನ್ನು ತಾನೇ ನಿಗ್ರಹಿಸಿಕೊಂಡು ಬಂದ ಕೆಲಸಕ್ಕೆ ಮನಸ್ಸು ಓಡಿಸಿದನು. ಅಷ್ಟರಲ್ಲಿ ಚಂದ್ರೋದಯವಾಯಿತು.



ಆ ನಗರದ ಅಧಿದೇವತೆಯಾದ ಲಂಕಾದೇವಿ ಸ್ತ್ರೀ ರೂಪದಲ್ಲಿ ಭಯಂಕರಾಕಾರದಿಂದ ಹನುಮಂತನ ಮುಂದೆ ಪ್ರತ್ಯಕ್ಷಳಾಗಿ, "ಯಾರು ನೀನು ? ಏತಕ್ಕಾಗಿ ಇಲ್ಲಿಗೆ ಬಂದೆ ? ನಿನ್ನಂತಹ ಕೋತಿ ಈ ಲಂಕಾ ನಗರದೊಳಗೆ ನುಸುಳುವುದುಂಟೆ ?" ಎಂದಳು.

ಅದಕ್ಕೆ ಹನುಮಂತನು, "ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ಮೊದಲು ನೀನು ಯಾರೆಂಬುದನ್ನು ಹೇಳು. ನಗರದ ದ್ವಾರದ ಹತ್ತಿರ ನನ್ನನ್ನು ತಡೆದು ಹೆದರಿಸುತ್ತಿರುವ ನೀನು ಯಾರು ? ಏಕೆ ತಡೆಯುವೆ ?" ಎಂದು ಕೇಳಿದ.

"ಮಹಾ ಪರಾಕ್ರಮಶಾಲಿಯಾದ ರಾವಣನ ಕಿಂಕರಿ ನಾನು. ನಾನೇ ಲಂಕಿಣಿ. ರಾವಣನ ಆಜ್ಞೆಯಿಂದ ನಾನು ಲಂಕಾ ಪಟ್ಟಣವನ್ನು ರಕ್ಷಿಸುತ್ತಿದ್ದೇನೆ. ನನ್ನನ್ನು ಮೀರಿ ಈ ನಗರದೊಳಗೆ ಒಂದು ನೊಣವೂ ಹೋಗಲಾರದು. ನಿನ್ನನ್ನು ಈಗಲೇ ಕೊಂದುಬಿಡುತ್ತೇನೆ. ಸಾಯುವ ಮೊದಲು ನಿನ್ನ ಸಂಗತಿ ಹೇಳಿ

ಬಿಡು. ಸುಳ್ಳು ಮಾತು ಹೇಳಬೇಡ" ಎಂದಳು ಲಂಕಿಣಿ. "ನನಗೆ ಲಂಕಾ ನಗರವನ್ನು ನೋಡ ಬೇಕೆಂದು ತೋರಿತು. ಅದಕ್ಕೇ ಹೀಗೆ ಬಂದೆ" ಎಂದನು ಹನುಮಂತ.


"ಏನು ಧೈರ್ಯ ನಿನಗೆ? ನನ್ನನ್ನು ಜಯಿಸಿದ ಹೊರತು ನೀನು ಒಂದಡಿ ಮುಂದೆ ಹೋಗಲಾರೆ, ಬದುಕಬೇಕೆಂದಿದ್ದರೆ ಈಗಿಂದೀಗಲೇ ಹಿಂದಿರುಗಿ ಬಿಡು" ಎಂದಳು ಲಂಕಿಣಿ.

"ನಾನು ಮುಂದಿಟ್ಟ ಅಡಿ ಹಿಂದಿಡುವವನಲ್ಲ. ನಗರವನ್ನು ನೋಡಿ ನನ್ನ ದಾರಿ ಹಿಡಿದು ಹೋಗಿ ಬಿಡುತ್ತೇನೆ" ಎಂದ ಹನುಮಂತ.

"ಅಷ್ಟು ಪೊಗರೇ ನಿನಗೆ?" ಎಂದು ಲಂಕಿಣಿ ಭಯಂಕರವಾಗಿ ಅರಚಿ ತನ್ನ ಕೈಯಿಂದ ಹನುಮಂತ ನನ್ನು ಹೊಡೆದಳು. ಹನುಮಂತನು ಅವಳಿಗಿಂತ ಭಯಂಕರವಾಗಿ ಅರಚಿ ಎಡಗೈಯ ಮುಷ್ಟಿಯಿಂದ ಲಂಕಿಣಿಯನ್ನು ಗುದ್ದಿದನು. ಆ ಒಂದೇ ಪೆಟ್ಟಿಗೆ ಲಂಕಿಣಿ ವಿಲವಿಲನೆ ಒದರಾಡುತ್ತ ಕೆಳಗೆ ಬಿದ್ದು, "ಅಯ್ಯೋ! ನನ್ನನ್ನು ಕೊಲ್ಲಬೇಡ. ನೀನು ಮಹಾ ಬಲಿಷ್ಠ ನಾಗಿರುವೆ. ನನ್ನನ್ನು ಒಂದು ಕೋತಿ ಜಯಿಸಿದ ದಿನ ರಾಕ್ಷಸರಿಗೆಲ್ಲ ಕಷ್ಟಕಾಲದ ಪ್ರಾರಂಭವೆಂದು ಬ್ರಹ್ಮ ದೇವನೊಮ್ಮೆ ಹೇಳಿದ್ದ. ರಾವಣನು ಸೀತೆಯನ್ನು ಎತ್ತಿಕೊಂಡು ಬಂದುದರಿಂದ ಅಪಾಯ ಬರುವಂತೆ ಕಾಣುತ್ತದೆ. ಹೋಗಪ್ಪ, ನಗರದೊಳಗೆಲ್ಲಾ ನಿನ್ನ ಇಷ್ಟಪ್ರಕಾರ ತಿರುಗಾಡು." ಎಂದಳು.

ಆಮೇಲೆ ಹನುಮಂತನು ಮುಂದುವರಿದು, ನಗರ ವನ್ನು ದ್ವಾರದ ಮೂಲಕವಾಗಿ ಪ್ರವೇಶಿಸದೆ, ಶತ್ರು ವಿನ ಮನೆಗೆ ಹೋಗುವ ನ್ಯಾಯದಂತೆ, ಕೋಟೆಯ ಮೇಲೆ ಹತ್ತಿ ಕೆಳಗೆ ಧುಮುಕಿ ತನ್ನ ಎಡದ ಕಾಲನ್ನು ಮೊದಲು ನಗರದೊಳಗಿಟ್ಟನು. ಅವನು ರಾಜ ಬೀದಿ ಯಲ್ಲಿ ಹೋಗುತ್ತಿರಲು, ಸಂಗೀತ ವಾದ್ಯಗಳ ಧ್ವನಿ ಗಳು, ನಗುಚೇಷ್ಟೆ ಮಾತುಗಳು ಅವನ ಕಿವಿಗೆ ಬೀಳು ತ್ತಿದ್ದುವು. ಬೀದಿಯ ಇರ್ಕೆಲಗಳಲ್ಲಿಯ ಮನೆಗಳು ಬಹಳ ಎತ್ತರವಾಗಿ ಮಣಿಮಾಣಿಕ್ಯಗಳಿಂದಲೂ, ಪುಷ್ಪಮಾಲೆಗಳಿಂದಲೂ ಅಲಂಕೃತವಾಗಿದ್ದುವು. ಹೆಂಗುಸರು ಮದ್ಯವನ್ನು ಕುಡಿದು ಮೂರು ಸ್ಥಾಯಿ ಗಳಲ್ಲಿ ಸ್ವರವನ್ನು ಏರಿಸಿಯೂ ತಗ್ಗಿಸಿಯೂ ಹಾಡು ತ್ತಿದ್ದರು. ಕೆಲವು ರಾಕ್ಷಸರ ಮನೆಗಳಿಂದ ವೇದಪಠನ ಧ್ವನಿಕೇಳಿ ಬರುತ್ತಿದ್ದಿತು. ಕೆಲವು ರಾಸಕ್ಷರು ಗಟ್ಟಿ ಯಾಗಿ ಅರಚುತ್ತಿದ್ದರು. ಬೀದಿಗಳಲ್ಲಿ ಅಲ್ಲಲ್ಲಿ ರಾಕ್ಷಸ ಸೈನಿಕರು ಕೂಡಿ ಗುಂಪಾಗಿ ನಿಂತಿದ್ದರು.

"ಪ್ರವೇಶಿಸುವುದೇ ಅಸಾಧ್ಯವಾದ ಈ ಲಂಕಾ ನಗರಿಗೆ ಪ್ರವೇಶಿಸಿಬಿಟ್ಟೆನು. ಇನ್ನು ಸೀತೆಯನ್ನು ಖಂಡಿತವಾಗಿಯೂ ನೋಡುವೆನು" ಎಂಬ ನಂಬುಗೆ ಹನುಮಂತನಿಗಾಯಿತು.





ವೀರಹನುಮಾನ್

ಹನುಮಂತನು ಲಂಕಾ ನಗರದೊಳಗೆ ಅತ್ತಿತ್ತ ನೋಡುತ್ತಾ ಹೋಗುತ್ತಿದ್ದನು. ಅವನಿಗೆ ಬಗೆಬಗೆಯ ರಾಕ್ಷಸರು ಕಂಡುಬಂದರು. ಕೆಲವು ರಾಕ್ಷಸರು ಹೋಮಕುಂಡದ ಮುಂದೆ ಕುಳಿತು ಯಜ್ಞದೀಕ್ಷೆಯಲ್ಲಿದ್ದರು. ಗಡ್ಡ ಮೀಸೆ ತಲೆಗೂದಲುಗಳನ್ನು ಜಡೆಗಟ್ಟಿಸಿಕೊಂಡು ಕೆಲವು ರಾಕ್ಷಸರು ಕಂಡರು. ಬೋಳು ತಲೆಯ ರಾಕ್ಷಸರು. ಎತ್ತಿನ ಚರ್ಮವನ್ನು ಕಟ್ಟಿಕೊಂಡವರು, ಅಭಿಚಾರ ಹೋಮಮಾಡಿ, ತಮಗಾಗದವರ ಮೇಲೆ ಕೈಮಾಟ ಮಾಡುವವರು, ಚಿತ್ರವಿಚಿತ್ರವಾಗಿ ಭಯಂಕರವೆನಿಸುವಂತಹ ಆಯುಧಗಳನ್ನು ಹಿಡಿದುಕೊಂಡು ತಿರುಗುವವರು, ಗಿಡ್ಡಗಾಗಿ ಉದ್ದಗಿರುವವರು, ಕಪ್ಪಗಿರುವವರು. ಮೊರಗಳ ಹಾಗಿರುವ ಕಿವಿಗಳುಳ್ಳವರು, ಉದ್ದಾಗಿ ಬಳುಕಿದ ಕೋರೆ ಹಲ್ಲುಗಳುಳ್ಳವರು, ಕೆಂಪಗೆ ಸುಂದರಾಕಾರದಿಂದಿರುವವರು, ಧ್ವಜಪತಾಕೆಗಳನ್ನು ಹಿಡಿದುಕೊಂಡು ತಿರುಗುವವರು ಹೀಗೆ ನಾನಾ ವಿದವಾದ ರಾಕ್ಷಸರು ಲಂಕೆಯಲ್ಲಿರುವುದನ್ನು ಹನುಮಂತನು ನೋಡಿದನು.

ರಾತ್ರಿಯ ವೇಳೆ ಉರುಳುತ್ತಲೇ ಇದ್ದಿತು. ಆಕಾಶದಲ್ಲಿ ಚಂದ್ರನು ಪ್ರಕಾಶಿಸುತ್ತಿದ್ದನು. ಹನುಮಂತನು ಅಪೂರ್ವ ಸುಂದರವಾದೊಂದು ಭವ್ಯ ಭವನದ ಅಂತರ್ಭಾಗಕ್ಕೆ ಪ್ರವೇಶ ಮಾಡಿದನು. ಅದು ಸಾಕ್ಷಾತ್ ರಾವಣನ ಅರಮನೆಯೇ.

ಅಲ್ಲಿ ಅನೇಕ ಸ್ತ್ರೀಯರು ಒಂದೇ ಕೊರಳನ್ನು ಹೊಂದಿಸಿಕೊಂಡು ಇಂಪಾಗಿ ಹಾಡುತ್ತಿದ್ದರು. ಕೆಲವು ಸ್ತ್ರೀಯರು ತಮ್ಮ ಶರೀರಗಳಿಗೆ ಚಂದನವನ್ನು ಲೇಪಿಸಿಕೊಳ್ಳುತ್ತಿದ್ದರು. ಕೆಲವು ಹೆಂಗುಸರು ತಮ್ಮ ತಮ್ಮ ಪ್ರಿಯ ಪುರುಷರೊಂದಿಗೆ ವಿಹರಿಸುತ್ತಿದ್ದರು. ಕೆಲವರು ಆಗಲೇ ಮಲಗಿ ನಿದ್ರೆಯಲ್ಲಿ ಮುಳುಗಿ ಹೋಗಿದ್ದರು. ಅವರೆಲ್ಲರನ್ನೂ ಹನುಮಂತನು ಜಾಗರೂಕತೆಯಿಂದ ನೋಡಿದನು.

ತನ್ನ ಕಣ್ಣಿಗೆ ಕಂಡ ಸ್ತ್ರೀಯರಲ್ಲಿ ಮಾನವ ಸ್ತ್ರೀಯಾದ ಸೀತೆ ಇಲ್ಲೆಲ್ಲಿಯಾದರೂ ಕಾಣಿಸುವಳೇನೋ ಎಂದು ಹನುಮಂತನು ಮನಸ್ಸಿಟ್ಟು ಶ್ರದ್ಧೆಯಿಂದಲೇ ನೋಡುತ್ತಿದ್ದನು. ಆದರೆ ಅವನಿಗೆ ರಾಮನು ಹೇಳಿದ



ಲಕ್ಷಣವುಳ್ಳವಳು ಅಲ್ಲೆಲ್ಲಿಯೂ ಕಾಣಿಸಲಿಲ್ಲ. ರಾವಣನು ಹೊತ್ತುಕೊಂಡು ಬಂದವಳು ರಾವಣನ ಅಂತಃಪುರದಲ್ಲಿ ಇಲ್ಲದಿದ್ದರೆ ಮತ್ತೆಲ್ಲಿರಬೇಕು? ಹನು ಮಂತನಿಗೆ ಅಲ್ಲಿಗೆ ಪ್ರವೇಶಿಸಿದಾಗ ಇದ್ದ ಉತ್ಸಾಹ ಮಾಯವಾಗಿ ದಿಗಿಲು ಹಿಡಿಯಿತು. ಅವನು ಕಾಮ ರೂಪಿಯಾದುದರಿಂದ ಅನುಕೂಲವಾದ ರೂಪವನ್ನು ಧರಿಸಿ, ಲಂಕೆಯನ್ನೆಲ್ಲಾ ಅಲೆದಾಡಿ ನಿರಾಶನಾಗಿ ಮತ್ತೆ ರಾವಣನ ಮನೆಗೇ ಬಂದನು.

ರಾವಣನ ಅರಮನೆ ಅತ್ಯತ್ಭುತವಾಗಿತ್ತು. ಅದನ್ನು ಬೆಳ್ಳಿಯಿಂದಲೇ ನಿರ್ಮಿಸಿ, ಬಂಗಾರದಿಂದ ಬಗೆಬಗೆ ಯಾಗಿ ಅಲಂಕಾರ ಮಾಡಿದ್ದರು. ಬಾಗಿಲುಗಳೆಲ್ಲ ಅನೇಕ ಬಣ್ಣಗಳ ತೋರಣಗಳಿಂದ ಚಿತ್ರವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದುವು. ಉತ್ತಮ ಜಾತಿಯ ಆನೆ ಗಳೂ ಕುದುರೆಗಳೂ ಮಹಾ ಶೂರರಾದ ರಾಕ್ಷಸರೂ ಆ ಮನೆಯನ್ನು ಕಾಯುತ್ತಿದ್ದರು. ಎತ್ತ ನೋಡಿದರೂ ಯಾರೋ ಸ್ತ್ರೀಯರು ಅಥವಾ ಪುರುಷರು ತಿರುಗಾಡಿ ಕೊಂಡೇ ಇದ್ದರು. ಏನೇನೋ ಶಬ್ದಗಳು ಕೇಳಿ ಕೊಂಡೇ ಇದ್ದುವು. ಸುಖಸಂತೋಷಗಳು ಅಲ್ಲಿ ತಾಂಡವವಾಡುತ್ತಿದ್ದುವು. ಎಲ್ಲಿ ಹೋದರೂ ಏನೋ ಒಂದು ಹೊಸತನವೇ ಕಾಣುತಿತ್ತು. ಆ ಮನೆ ಇಂದ್ರ ಭವನದಂತೆ ಲಂಕಾನಗರಕ್ಕೊಂದು ಅಲಂಕಾರ ಪ್ರಾಯವಾಗಿ ಕಂಗೊಳಿಸುತಿತ್ತು.

ಹನುಮಂತನು ರಾವಣನ ಅರಮನೆಯೊಳಗೆಲ್ಲಾ ತಿರುಗಾಡತೊಡಗಿದನು. ಎಲ್ಲಿಯಾದರೂ ಸೀತೆ ಕಣ್ಣಿಗೆ ಬೀಳಲಾರಳೇ ಎಂಬುದೇ ಅವನ ಗುರಿ ಯಾಗಿತ್ತು. ಆ ಮಹಾ ಭವನದೊಳಗೆ ಮಂಚಗಳು. ಪೀಠಗಳು. ಆಸನಗಳು. ಪಾತ್ರೆಗಳು ಎಲ್ಲವೂ ಚಿನ್ನ ದಿಂದಲೇ ತಯಾರಿಸಲ್ಪಟ್ಟಿದ್ದುವು. ಮಣಿಗಳನ್ನು ರತ್ನಗಳನ್ನೂ ಹುದುಗಿಸಿದ ಕಿಟಿಕಿಗಳಲ್ಲಿ ಸುಂದರವಾದ ಪಕ್ಷಿಗಳ ಪಂಜರಗಳಿದ್ದುವು. ಅಲ್ಲೊಂದೆಡೆ ಹನು ಮಂತನು ಅತ್ಯದ್ಭುತವಾಗಿ ಹೇಳಲ್ಪಡುವ ಪುಷ್ಪ ವಿಮಾನವನ್ನೂ ನೋಡಿದನು.

ಅದು ಮೊತ್ತಮೊದಲು ಕುಬೇರನದಾಗಿತ್ತು. ಅದ ರೊಳಗಿನ ಅದ್ಭುತಗಳು ಹನುಮಂತನನ್ನು ಆಶ್ಚರ್ಯ ಪಡಿಸಿದುವು. ಅದರೊಳಗೆ ಗುಡ್ಡಗಳು. ಭೂವಿ ಹೂವಿನ ಮರಗಳು. ಕಮಲ ಸರೋವರ ಮೊ ಲಾದುವುಗಳನ್ನು ಯಥಾವತ್ತಾಗಿ ಚಿತ್ರೀಕರಿ ಲ್ಪಟ್ಟಿದ್ದುವು. ದೊಡ್ಡ ದೊಡ್ಡ ಭವನಗಳೆಲ್ಲವೂ ಪುಷ್ಪಕವಿಮಾನದ ಮುಂದೆ ಚಿಕ್ಕವುಗಳೇ. ಅ ರೊಳಗೂ ಸೀತೆಯನ್ನು ಕಾಣದೆ. ಹನುಮಂತ ಮತ್ತೆ ಮತ್ತೆ ರಾವಣನ ಅರಮನೆಯೊಳಗೆ ತಿರು ಸಾಗಿದನು. ಎಷ್ಟು ತಿರುಗಿದರೂ ಮತ್ತೆ ಮ ಹೊಸ ಸ್ಥಳದಂತೆ ತೋರಿದುದರಿಂದ ಸೀತೆ ಇ ಬಹುದು ಎಂಬ ಆಶೆ ಕ್ಷಣೇಕ್ಷಣೇ ಮೂಡುತ್ತಿ ಆದರೆ ಸೀತೆ ಮಾತ್ರ ಅವನಿಗೆ ಅಲ್ಲೆಲ್ಲಿಯೂ ಕಾಣಲಿ

ತಿರುಗುತ್ತಾ ಹನುಮಂತನು ರಾವಣನ ಹೆಂಡತಿ ರಿರುವ ಅಂತಃಪುರದೊಳಗೆ ಪ್ರವೇಶ ಮಾಡಿದ

ಅದರೊಳಗೆ ರಾಕ್ಷಸ ಸ್ತ್ರೀಯರೂ, ರಾವಣನು ತನ್ನ ಪರಾಕ್ರಮದಿಂದ ತಂದ ರಾಜಕನ್ಯೆಯರೂ, ಅವನನ್ನು ಒಲಿದು ತಾವಾಗಿ ಬಂದವರೂ ಇದ್ದರು. ಎಲ್ಲರ ಮುಖಗಳೂ ಕಾಣುವಂತೆ ದೀಪಗಳು ಜಗಜಗನೆ ಬೆಳಗಿಕೊಂಡಿದ್ದುವು

ಅಲ್ಲಿರುವ ಅನೇಕ ಮಂದಿ ಸ್ತ್ರೀಯರು ನಿದ್ರಾವಸ್ಥೆಯಲ್ಲಿದ್ದರು. ಚಿತ್ರಮಯವಾದ ರತ್ನಕಂಬಳಿಯ ಮೇಲೆ ಬಗೆಬಗೆಯ ಬಟ್ಟೆಗಳ ಮೇಲೆ ಮಲಗಿದ್ದರು. ಒಬ್ಬೊಬ್ಬರು ಒಂದೊಂದು ಬಗೆಯ ಆಭರಣಗಳ ಅಲಂಕಾರಗಳಿಂದ, ಹೂಗಳ ಮಾಲೆಗಳಿಂದ ಆನಂದವಾಗಿ ಮಲಗಿಕೊಂಡಿದ್ದರು. ಆಗಲೇ ಅರ್ಧರಾತ್ರಿ ಕಳೆದುಹೋದುದರಿಂದ. ಎಲ್ಲರೂ ತೃಪ್ತಿಯಾಗುವಷ್ಟು ಮಧುಪಾನಮಾಡಿ ಮತ್ತರಾದುದರಿಂದ, ಕುಳಿತಲ್ಲಿಯೇ, ಒರಗಿದಲ್ಲಿಯೇ, ಹೊರಳಿಕೊಂಡಲ್ಲಿಯೇ ಹೀಗೆ ಬೇರೆ ಬೇರೆ ಭಂಗಿಗಳಲ್ಲಿ ಯಾರೂ ಕೇಳುವವರಿಲ್ಲದಂತೆ ಮೈಮರೆತು ನಿದ್ರಿಸುತ್ತಿದ್ದರು.


ಹನುಮಂತನು ಶ್ರದ್ಧೆಯಿಂದ ಎಲ್ಲರ ಮುಖಗಳನ್ನೂ ನೋಡಿದನು. ಭವ್ಯವಾದ ಬಂಗಾರದ ಮಂಚದಲ್ಲಿ ಮಲಗಿರುವ ರಾವಣನನ್ನೂ ಹನುಮಂತನು ನೋಡಿದನು. ಅವನ ಕೈಗಳು ಐದು ತಲೆಯಿರುವ ಮಹಾ ಸರ್ಪಗಳ ಹಾಗಿದ್ದುವು. ಅವನ ಶರೀರದಲ್ಲಿ ರಕ್ತಚಂದನ ಪೂಸಲಾಗಿತ್ತು. ಮಹಾ ಶರೀರದವನಾದ ರಾವಣನು ಮಲಗಿದ ಪರ್ವತದಂತೆ ಕಾಣಿಸಿದನು. ಶರೀರದ ತುಂಬಾ ಆಭರಣಗಳು ಹೊಳೆಯುತ್ತಿದ್ದುವು.

ರಾವಣನ ಪಟ್ಟದರಾಣಿ ಮಂಡೋದರಿ ಕೂಡಾ ಬದಿಯಲ್ಲಿದ್ದ ಇನ್ನೊಂದು ಅಲಂಕಾರ ಮಂಚದಲ್ಲಿ ಮಲಗಿದ್ದಳು. ಅವಳ ಅಂಗಚೆಂದ ಮತ್ತು ಯೌವನದ ಹೊಳೆಯುವ ಲಕ್ಷಣಗಳನ್ನು ನೋಡಿ. ಹನುಮಂತನು ಇವಳೇ ಸೀತೆಯೆಂದು ತಿಳಿದು ಕಡೆಗೂ ಕಂಡೆನಲ್ಲಾ ಎಂದು ಸಂತೋಷಪಟ್ಟನು.



ಆದರೆ ಮರುಕ್ಷಣವೇ ಅವನ ಆನಂದವೆಲ್ಲಾ ಮಾಯವಾಗಿ ಹೋಯಿತು. ರಾಮನ ವಿಯೋಗದಲ್ಲಿರುವ, ಸೀತೆ ಅಲಂಕಾರ ಮಾಡಿಕೊಳ್ಳುವಳೇ ? ಅವಳು ಸಕ್ರಮವಾಗಿ ನಿದ್ರೆಯನ್ನೂ, ಆಹಾರವನ್ನೂ ಕೈಕೊಳ್ಳುವುದುಂಟೆ ? ಪರಪುರುಷನ ಸಮೀಪದಲ್ಲಿ ಹೆಂಡತಿಯಂತೆ ಮಲಗಿ ನಿದ್ರೆಮಾಡುವುದುಂಟೆ ? ಇವಳು ಸೀತೆಯೇ ಅಲ್ಲವೆಂದು ಮರುಕ್ಷಣವೇ ನಿರ್ಧರಿಸಿಕೊಂಡನು. ತನ್ನ ಅವಸರ ಬುದ್ಧಿಗೆ ತಲೆ ಕುಟ್ಟಿಕೊಂಡು ಅಲ್ಲಿಂದ ಬೇರೆಕಡೆಯಲ್ಲಿ ಸೀತೆಯನ್ನು ಹುಡುಕಲು ಹೊರಟನು.

ಹನುಮಂತನು ಕಣ್ಣಿಗೆ ಕಂಡ ಲತಾಮಂಟಪಗಳಲ್ಲಿ, ಪೂದರಿನ ಮನೆಗಳಲ್ಲಿ, ಚಿತ್ರಶಾಲೆಗಳಲ್ಲಿ ಹುಡುಕಿದನು. ಅವನಿಗೊಂದು ಅನುಮಾನ ಬಂದಿತು. ಅಸಲು ಸೀತೆ ಬದುಕಿರುವುದು ನಿಜವೆ ? ತನ್ನ ಇಷ್ಟಕ್ಕೆ ಒಪ್ಪದೆ ಹೋದವಳನ್ನು ರಾವಣನು ಕೊಂದುಹಾಕಿದನೇನೋ ? ಅಥವಾ ಇಲ್ಲಿರುವ ವಿಕಾರಾಕಾರರಾದ




ರಾಕ್ಷಸ ಸ್ತ್ರೀಯರನ್ನು ನೋಡಿ ಸೀತೆಯ ಪ್ರಾಣ ಭೀತಿಯಿಂದಲೇ ಹೊರಟುಹೋಗಿದ್ದೀತು! ಸುಗ್ರೀವನು ಕೊಟ್ಟ ಗಡುವು ಮುಗಿದು ಬಹಳ ಕಾಲವಾಗಿ ಹೋಯಿತು. ಸೀತೆಯನ್ನು ನೋಡದೆ ಹಿಂದಿರುಗಿ ಹೋಗುವಂತೆಯೂ ಇಲ್ಲ. ಏನೂ ಗೊತ್ತಿಲ್ಲದವನಂತೆ ಹಿಂದಿರುಗಿ ಹೋದರೆ "ನೀನು ಹೋದುದೇಕೆ? ಬಂದುದೇಕೆ?" ಎಂದು ಎಲ್ಲರೂ ತನ್ನನ್ನು ಕೇಳುವರು. ಏನೆಂದು ಉತ್ತರಕೊಡಲಿ? ಆದುದರಿಂದ ಸೀತೆಯ ವಿಷಯ ಏನೋ ಒಂದು ಕಂಡುಹಿಡಿಯಲೇಬೇಕು.


ಯಾವುದು ಹೇಗಾದರೂ ಇಲ್ಲಿ ಚಿಂತಿಸುತ್ತಾ ಹೊತ್ತು ಕಳೆಯುವುದು ಯುಕ್ತವಲ್ಲ. ಇನ್ನೂ ಇಲ್ಲಿ ಹುಡುಕಬೇಕಾದ ಜಾಗವಿದ್ದೀತು. ಸೀತೆಯನ್ನು ಎಲ್ಲಿಯಾದರೂ ಅಡಗಿಸಿಟ್ಟಿರಲೂ ಬಹುದಷ್ಟೆ? ಹೀಗೆಂದುಕೊಂಡು ಅಲ್ಲಿಂದ ಹೊರಟ ಹನುಮಂತನು ಎತ್ತರವಿದ್ದಲ್ಲಿ ಏರಿದನು: ತಗ್ಗಿನಲ್ಲಿ ಇಳಿದನು. ಪಾತಾಳ ಗೃಹಗಳಲ್ಲಿ ಪ್ರವೇಶಿಸಿದನು; ವನಗಳಲ್ಲಿ ಅರಸಿದನು. ಬಾವಿಗಳಲ್ಲಿ ಹುಡುಕಿದನು. ಅವನಿಗೆ ಎಷ್ಟೆಷ್ಟೋ ವಿಧದ ಸ್ತ್ರೀಯರು ಕಾಣಿಸಿದರೂ ಸೀತೆ ಮಾತ್ರ ಕಾಣಲೇ ಇಲ್ಲ. ಸುಂದರಿಯರನ್ನು ನೋಡಿದ ಕೂಡಲೇ ಇವಳೇನೋ ಎಂದುಕೊಂಡು, ಮರುಕ್ಷಣ ಅಲ್ಲವೆಂದು ಮುಖವಿಳಿದು ಹೋಗುತಿತ್ತು. ಸೀತೆ ಲಂಕೆಯವರೆಗೆ ಬಂದೇ ಇಲ್ಲವೇನೋ? ರಾವಣನು ಎತ್ತಿಕೊಂಡು ಬರುವಾಗ ಮಧ್ಯದಾರಿಯಲ್ಲೇ ಬಿದ್ದುಬಿಟ್ಟಿರಬೇಕು; ಹೆದರಿ ಸಮುದ್ರದಲ್ಲಿ ಬಿದ್ದಿರಲೂಬಹುದು. ಅಥವಾ ರಾಮನನ್ನೇ ನೆನೆದು ಕೃಶಳಾಗಿ ಸತ್ತುಹೋದಳೋ? ಇದಕ್ಕೆಲ್ಲ ಉತ್ತರ ಹೇಳುವರಾರು?

ಸೀತೆಯನ್ನು ನೋಡಲು ಸಾಧ್ಯವಾಗದೆ ಹೋದರೆ, ಸಮುದ್ರ ತೀರದಲ್ಲಿ ಚಿತೆಯನ್ನು ಪೇರಿಸಿ ಬೆಂಕಿಹಚ್ಚಿ ಅದರಲ್ಲಿ ಬಿದ್ದು ಸಾಯಬೇಕೆಂದು ಹನುಮಂತನು ನಿಶ್ಚಯಿಸಿಕೊಂಡನು. ಅದಕ್ಕಿಂತ ಮೊದಲು ರಾವಣಾಸುರನನ್ನು ಕೊಂದುಬಿಟ್ಟರೆ ಇಷ್ಟೆಲ್ಲಕ್ಕೂ ತಕ್ಕ ಪ್ರತಿಕ್ರಿಯೆ ಮಾಡಿದಂತೆಯೂ ಆಯಿತು. ಅಥವಾ ರಾವಣನನ್ನು ಯಜ್ಞಪಶುವಿನಂತೆ ಹಿಡಿದು ತೆಗೆದುಕೊಂಡು ಹೋಗಿ ರಾಮನ ಮುಂದೆ ಹಾಕಿದರೂ ಆಗಬಹುದು.

ಹೀಗೆಲ್ಲ ಅಂದುಕೊಳ್ಳುತ್ತಿದ್ದ ಹನುಮಂತನಿಗೆ ದೂರದಲ್ಲಿ ಎತ್ತರವಾದ ಮರಗಳಿಂದ ತುಂಬಿದ ಒಂದು ವನವು ಕಣ್ಣಿಗೆ ಬಿತ್ತು. ಅದು ಅಶೋಕವನ. ಹನುಮಂತನು ಇನ್ನೂ ಅಲ್ಲಿಗೆ ಹೋಗಿ ಹುಡುಕಿರಲಿಲ್ಲ. ಅದು ಈಗತಾನೇ ಅವನ ಕಣ್ಣಿಗೆ ಬಿದ್ದಿತು. ಅದೊಂದನ್ನು ಹುಡುಕಿ ತೀರಿಸಿಬಿಡೋಣವೆಂದುಕೊಂಡು ಹನುಮಂತನು ಅತಿ ವೇಗದಿಂದ ಹಾರುತ್ತಾ ಅಶೋಕವನದ ಪ್ರಾಕಾರವನ್ನು ಸೇರಿದನು.

ಆಗ ಅವನು ತನ್ನ ದೇಹವನ್ನು ಇನ್ನಿಷ್ಟು ಚಿಕ್ಕದು ಮಾಡಿ ಆ ವನದ ತರತರದ ಮರಗಳನ್ನೆಲ್ಲ ಅರ





ನೋಡಿದನು. ಆಗಲೇ ಪ್ರಾರಂಭವಾಗುತ್ತಿರುವ ವಸಂತ ಕಾಲದಿಂದಾಗಿ, ವನವು ಹೊಸ ಶೋಭೆಯಿಂದ ನಳನಳಿಸುತ್ತಿದ್ದಿತು. ಸಾಲ, ಅಶೋಕ, ಚಂಪಕ, ಉದ್ದಾಲಕ, ನಾಗ, ಮಾವು, ಕಪಿ ಮುಖವೆಂಬ ಮರಗಳು ಸುಂದರವಾದ ಹೂಗಳನ್ನು ಬಿಟ್ಟು ಸುವಾಸನೆ ಬೀರುತ್ತಿದ್ದುವು. ಅನೇಕ ವೃಕ್ಷಗಳಿಗೆ ಲತೆಗಳು ಸುಂದರವಾಗಿ ಸುತ್ತಿಕೊಂಡಿದ್ದುವು.

ಪ್ರಾಕಾರದ ಮೇಲಿದ್ದ ಹನುಮಂತನು ಮರಗಳ ಮೇಲೆ ಬಾಣದ ಹಾಗೆ ಹಾರಿ, ಮರಗಳ ಮೇಲಿಂದಲೇ ಸಾಗತೊಡಗಿದನು. ಮರಗಳಲ್ಲಿ ನಿದ್ರಿಸಿಕೊಂಡಿದ್ದ ಹಕ್ಕಿಗಳು ಕಲಕಲ ರವದಿಂದ ಎಚ್ಚೆತ್ತು, ಚಿಲಿಪಿಲಿಗುಟ್ಟಿ ರೆಕ್ಕೆ ಬಡೆದುಕೊಳ್ಳುತ್ತಿದ್ದುವು. ಆಗ ಮರಗಳಲ್ಲಿದ್ದ ಹೂಗಳು ಹನುಮಂತನ ಮೇಲೆ ಉದುರಿದುವು. ಅವನಿಗೆ ಅಶೋಕವನದಲ್ಲಿರುವ ಸರೋವರಗಳೂ, ಆರಾಮದ ಜಗಲಿಗಳೂ, ಬೆಳ್ಳಿ ಬಂಗಾರಗಳಿಂದ ಅಲಂಕಾರಕ್ಕಾಗಿ ಮಾಡಲ್ಪಟ್ಟ ಮಂಟಪಗಳೂ ಕೃತ್ರಿಮ ವೃಕ್ಷಗಳೂ ಕಾಣಿಸಿದುವು. ಆ ವನದಲ್ಲಿ ಸುಂದರವಾದ ಒಂದು ಕ್ರೀಡಾ ಪರ್ವತ ಕೂಡ ಇದ್ದಿತು. ಅದರಲ್ಲಿ ಎತ್ತರವಾದ ಚಿತ್ರವಿಚಿತ್ರ ಆಕೃತಿಯಲ್ಲಿ ಶಿಖರಗಳಿದ್ದುವು. ಕಲ್ಲಿನ ಮನೆಗಳೂ, ಮಂದಿರಗಳೂ, ನೀರೋಳಿಗಳೂ, ಜಲಪಾತಗಳೂ ಇದ್ದುವು. ಒಂದು ನದಿ ಕೂಡಾ ಅದರ ಬುಡದಿಂದ ಹರಿದು ಹೋಗುತ್ತಿದ್ದಿತು. ಆ ವನದ ಇನ್ನೊಂದು ಭಾಗದಲ್ಲಿ ಅಂದವಾದೊಂದು ನೆಲಬಾವಿ ಕಂಡುಬಂತು. ಅದರ ಸುತ್ತಲೂ ಎತ್ತರವಾದ ಜಗಲಿಗಳೂ ಚಿತ್ರಸ್ತಂಭಗಳೂ ಇದ್ದುವು ಕೆಲವು ಜಗಲಿಗಳು ಬಂಗಾರದವು


ಹನುಮಂತನು ದಟ್ಟವಾಗಿ ಎಲೆಗಳಿರುವ ಮರದ ಮೇಲೆ ಕುಳಿತುಕೊಂಡು ಸುತ್ತಲೂ ನೋಡಿದನು. ಸ್ವಲ್ಪ ದೂರದಲ್ಲಿ ಬಿಳಿಬಣ್ಣದ ಚೈತ್ಯಪ್ರಾಸಾದವೊಂದು ಅವನ ಕಣ್ಣಿಗೆ ಬಿತ್ತು. ಅದಕ್ಕೆ ಸಾವಿರ ಕಂಬಗಳಿದ್ದುವು. ಆ ಪ್ರಾಂತದಲ್ಲಿ ಅವನ ಕಣ್ಣಿಗೆ ಬಿದ್ದವಳು ಸೀತೆಯೆ ನಿಜ. ಕುತೂಹಲದಿಂದ ನೋಡಿದನು.

ಅವಳು ಸೊರಗಿ ಸಣ್ಣಗಾಗಿದ್ದಳು. ಮಾಸಿಹೋ ಹಳದಿ ಬಣ್ಣದ ಸೀರೆಯನ್ನುಟ್ಟಿದ್ದಳು. ಚಿಂತಿಸು ಕಣ್ಣೀರು ಸುರಿಸುತ್ತಿದ್ದಾಳೆ. ಅವಳ ಸುತ್ತಲೂ ರಾ ಸ್ತ್ರೀಯರು ಎಚ್ಚರಿಕೆಯಿಂದ ಕುಳಿತಿದ್ದಾರೆ. ರಾವ ಎತ್ತಿಕೊಂಡು ಹೋಗುತ್ತಿದ್ದಾಗ ಹನುಮಂತನೊ ಸೀತೆಯನ್ನು ನೋಡಿದ್ದನು. ಅದೇ ಹೋಲಿಕೆ ಇವ ಕಾಣಿಸುತ್ತಿದ್ದರೂ ಇವಳಲ್ಲಿ ತುಂಬ ಬದಲಾವಣೆಯು ಇದೆ. ಅವಳು ಋಷ್ಯಮೂಕ ಪರ್ವತದ ಮೇ ಕೆಲವು ನಗಗಳನ್ನು ಕೆಳಗೆ ಹಾಕಿದ್ದಾಳೆ. ಅವುಗ ನೋಡಿ ರಾಮನು ಹೇಳುವಾಗ, ಅವಳ ಶರೀರ ಉಳಿದಿರುವ ಆಭರಣಗಳನ್ನು ವರ್ಣಿಸಿ ಹೇಳಿ ಅವುಗಳನ್ನೆಲ್ಲ ಹನುಮಂತನು ಇವಳಲ್ಲಿ ನೋ ಗುರುತಿಸಿದನು. ಅಷ್ಟೇ ಅಲ್ಲ, ಅವಳು ತೆಗೆದು ಹಾಕಿದ ಆಭರಣಗಳ ಸ್ಥಾನದಲ್ಲಿ ಯಾವ ಆಭ ಗಳೂ ಇರಲಿಲ್ಲ. ಸೊರಗಿ ಹೋದುದರಿಂದ ಗುರು

ಹಿಡಿಯುವುದು ಎಷ್ಟು ಕಷ್ಟವಾಗಿದ್ದರೂ, ಇವಳೇ ಸೀತೆಯೆಂದು ಹನುಮಂತನು ನಿಶ್ಚಯಿಸಿಕೊಂಡನು. ಆಗ ಅವನಿಗಾದ ಆನಂದಕ್ಕೆ ಮೇರೆಯಿರಲಿಲ್ಲ. ತಾನು ರಾಕ್ಷಸ ಸ್ತ್ರೀಯರ ಕಣ್ಣಿಗೆ ಬೀಳದಂತೆ ಮರದ ಕೊಂಬೆಗಳ ಮರೆಯಲ್ಲಿ ಅಡಗಿದ್ದು, ಸೀತೆಯನ್ನೂ ಅವಳ ಸುತ್ತಲೂ ಇರುವ ರಾಕ್ಷಸ ಸ್ತ್ರೀಯರನ್ನೂ ಶ್ರದ್ಧೆಯಿಂದ ನೋಡಿಕೊಂಡಿದ್ದನು.

ರಾತ್ರಿ ಬಹಳ ಮಟ್ಟಿಗೆ ಕಳೆದು ಹೋಗುತ್ತಿದ್ದಿತು. ರಾಕ್ಷಸರು ಉದಯಕಾಲದ ವೇದಪಠನವನ್ನು ಪ್ರಾರಂಭಿಸಿದುದು ಹನುಮಂತನ ಕಿವಿಗೆ ಕೇಳಿಸತೊಡಗಿತು. ಅದೇ ಸಮಯದಲ್ಲಿ ಮಂಗಳ ವಾದ್ಯಗಳು ಮೊಳಗತೊಡಗಿದವು. ರಾವಣನು ನಿದ್ದೆಯಿಂದ ಎದ್ದಿದ್ದಾನೆ. ಎದ್ದಕೂಡಲೇ ಅವನಿಗೆ ಸೀತೆಯ ಜ್ಞಾಪಕ ಬಂದುಬಿಟ್ಟಿದೆ. ಅವನು ತನ್ನನ್ನು ಚೆಂದಾಗಿ ಅಲಂಕಾರ ಮಾಡಿಕೊಂಡು ಅಶೋಕವನಕ್ಕೆ ಹೊರಟು ಬರುತ್ತಿದ್ದಾನೆ. ಅವನ ಸುತ್ತಲೂ ನೂರುಮಂದಿ ದೇವತಾ ಸ್ತ್ರೀಯರೂ, ಗಂಧರ್ವ ಸ್ತ್ರೀಯರೂ ಇದ್ದರು. ಕೆಲವು ಸ್ತ್ರೀಯರು ಬಂಗಾರದ ದೀವಟಿಗೆ ಹಿಡಿದುಕೊಂಡಿದ್ದರು. ಮತ್ತೆ ಕೆಲವು ಸ್ತ್ರೀಯರು ಚಾಮರ ಸೇವೆ ಮಾಡುತ್ತಿದ್ದಳು. ಕೆಲವರು ಬೀಸಣಿಗೆ ಹಿಡಿದುಕೊಂಡು ಅವನ ಹಿಂದೆ ನಡೆಯುತ್ತಿದ್ದಲು. ಮತ್ತೆ ಕೆಲ ಮಂದಿ ಸುಂದರಿಯರು ಬಂಗಾರದ ಪಾತ್ರೆಗಳಲ್ಲಿ ನೀರು ತುಂಬಿಸಿಕೊಂಡು ಅವನ ಮುಂದಿನಿಂದ ನಡೆಯುತ್ತಿದ್ದರು. ಒಬ್ಬಳು ರಾವಣನಿಗೆ ಕೊಡೆಯನ್ನು ಹಿಡಿದಿದ್ದಳು. ಆ ಕೊಡೆ ದೀವಟಿಗೆಯ ಪ್ರಕಾಶದಲ್ಲಿ ಥಳಥಳಿಸುತ್ತಿದ್ದಿತು.

ಹೆಂಗುಸರು ನಡೆಯುವಾಗ ಹೊರಡುವ ನೂಪುರಗಳ ಇಂಚರ ಹನುಮಂತನ ಲಕ್ಷ್ಯವನ್ನು ಸೆಳೆಯಿತು. ದೀಪಗಳ ಬೆಳಕಿನಲ್ಲಿ ವೈಭವವನ್ನು ಮೆರೆಯಿಸಿಕೊಂಡು ನಡೆದು ಬರುತ್ತಿರುವ ರಾವಣನನ್ನು ಅವನು ನೋಡಿದನು. ರಾವಣನು ಏಕೆ ಬರುತ್ತಿದ್ದಾನೆ, ಏನು ಮಾಡುತ್ತಾನೆ ಎಂಬುದನ್ನೆಲ್ಲ ನೋಡಬೇಕೆಂದು ಹನುಮಂತನು. ಬೆಕ್ಕಿನ ಹಾಗೆ ಸ್ವಲ್ಪವೂ ಸದ್ದು ಮಾಡದೆ ತಾನು ಕುಳಿತ ಮೇಲಿನ ಕೊಂಬೆಯಿಂದ




ಕೆಳಗಿನ ಕೊಂಬೆಗೆ ಇಳಿದು, ಬೇರೆಯವರಿಗೆ ಕಾಣದಂತೆ, ಎಲೆಗಳ ಮರೆಯಲ್ಲಿ ಅಡಗಿಕೊಂಡು, ಕಣ್ಣು ಕಿವಿಗಳನ್ನು ಕೂರಾಗಿಟ್ಟು ಗಮನಿಸತೊಡಗಿದನು.

ರಾವಣನು ನೆಟ್ಟಗೆ ಬಂದು ಸೀತೆಯ ಸಮೀಪದಲ್ಲಿ ನಿಂತನು. ಅವನ ಬರುವಿಕೆಯನ್ನು ದೂರದಲ್ಲೇ ಗುರುತಿಸಿದ ಸೀತೆ, ಹುಲಿಯನ್ನು ನೋಡಿ ಹೆದರುವ ಜಿಂಕೆಯಂತೆ ನಡುಗತೊಡಗಿದಳು. ಅವಳು ಕಾಲುಗಳನ್ನು ಮುದುಡಿಕೊಂಡು, ಎದೆಗೆ ಕೈಗಳನ್ನು ಅಡ್ಡವಿಟ್ಟು ಅಳುತ್ತಾ ಕುಳಿತಳು. ತನಗೆ ಯಾರಾದರೂ ಅಡ್ಡ ನಿಲ್ಲಲಾರರೇ ಎಂದು ನಾಲ್ಕು ಸುತ್ತಲೂ ನೋಡಿದಳು.

ಮೂರ್ತೀಭವಿಸಿರುವ ಶೋಕದೇವತೆಯಂತಹ ಸೀತೆಯನ್ನು ನೋಡಿ ರಾವಣನು ಹೀಗೆ ಹೇಳಿದನು :

"ಸೀತಾ, ನನ್ನನ್ನು ನೋಡಿ ಸುಮ್ಮನೆ ಹೆದರಿ ಹಾಗೇಕೆ ಮುದುಡಿಹೋಗುವೆ ? ನಿನ್ನಂತಹ ಎಷ್ಟು ಸ್ತ್ರೀಯರು ನನ್ನನ್ನು ಮೆಚ್ಚಿಕೊಂಡಿದ್ದಾರೆ ನೋಡು. ಇವರೆಲ್ಲರಿಗಿಂತಲೂ ನಿನ್ನ ಸೌಂದರ್ಯಕ್ಕೇ ನಾನು ಮೋಹಿಸಿದ್ದೇನೆ; ನನ್ನನ್ನು ನೋಡಿ ಹೆದರಬೇಡ. ನಿರಾಕರಿಸಬೇಡ. ನನ್ನ ಆಶ್ರಯದಲ್ಲಿ ನಿನಗೆ ಯಾರ ಭಯವೂ ಇಲ್ಲ. ನಿನಗೆ ನನ್ನ ಮೇಲೆ ಪ್ರೇಮ ಹುಟ್ಟುವವರೆಗೂ ನಾನು ನಿನ್ನನ್ನು ಮುಟ್ಟುವುದಿಲ್ಲ. ಆದುದರಿಂದ ಮೊದಲು ದುಃಖಿಸುವುದನ್ನು ಬಿಟ್ಟುಬಿಡು. ಮಾಸಿದ ಬಟ್ಟೆಯೊಂದಿಗೆ, ತಲೆ ಬಾಚಿಕೊಳ್ಳದೆ ಉಪವಾಸವಿರುವುದು ನಿನಗೆ ತರವಲ್ಲ. ಇದರಿಂದ ಯಾವ ಪ್ರಯೋಜನವೂ ಇಲ್ಲ. ಇಲ್ಲಿಂದ ಪಾರಾಗಿಹೋಗುವ ಆಶೆ ಕೂಡಾ ನಿನಗಿಲ್ಲ. ಇದನ್ನೆಲ್ಲ ಯೋಚಿಸು. ನನ್ನನ್ನು ಸ್ವೀಕರಿಸು. ಹೂಮಾಲೆಗಳನ್ನು ಧರಿಸು. ಉತ್ತಮ ಬಟ್ಟೆಗಳನ್ನು ತೊಟ್ಟುಕೋ. ಆಭರಣಗಳನ್ನು ಅಲಂಕರಿಸಿಕೋ. ಶ್ರೇಷ್ಠವಾದ ಮದ್ಯವನ್ನು ಪಾನಮಾಡಿ ಉತ್ಸಾಹತಾಳು. ಒಳ್ಳೆಯ ಮಂಚದ ಮೇಲೆ ಸುಪ್ಪತ್ತಿಗೆಯಲ್ಲಿ ಮಲಗು. ಆಟಪಾಟಗಳಿಂದ ಸಂತೋಷವಾಗಿ ಕಾಲಕಳೆ. ನಿನ್ನ ಯೌವನವು ವೃಥಾ ಹಾಳಾಗದಂತೆ ಕಾಪಾಡಿಕೋ. ನಿನ್ನಂತಹ ಸುಂದರಿ ಸೃಷ್ಟಿಯಲ್ಲಿ ಇನ್ನೊಬ್ಬಳಿಲ್ಲ. ನಾನು ಪರಪುರುಷನೆಂಬ ಭ್ರಾಂತಿಯನ್ನು ಬಿಟ್ಟುಬಿಡು. ನಿನ್ನನ್ನು ನನ್ನ ಪಟ್ಟಮಹಿಷಿಯಾಗಿ ಮಾಡಿಬಿಡುತ್ತೇನೆ. ನಿನ್ನ ದಾಸನಾಗಿ ನೀನು ಹೇಳಿದ ಹಾಗೆ ಕೇಳುತ್ತೇನೆ. ನಿನಗೆ ಏನು ಬೇಕಾದರೂ ನನಗೆ ಆಜ್ಞೆ ಮಾಡು. ಕಾಡುಪಾಲಾದ ಮನುಷ್ಯ ಆ ರಾಮನ ಚಿಂತೆ ಇನ್ನೇಕೆ ? ಅವನು ಇನ್ನೂ ಬದುಕಿದ್ದಾನೆಂದು ನನಗೆ ತೋರುವುದಿಲ್ಲ. ಅವನೆಲ್ಲಿ ನಿನ್ನನ್ನು ಹುಡುಕಿಕೊಂಡು ಬರುತ್ತಾನೆ? ನೂರು ಯೋಜನೆ ದೂರ ಸಮುದ್ರವನ್ನು ದಾಟಿ ಮನುಷ್ಯನಾದವನು ಬರುವುದುಂಟೆ ? ಸಾಧ್ಯವೇ ಇಲ್ಲ. ಆ ಯೋಚನೆ ಬಿಡು."






ವೀರಹನುಮಾನ್

ರಾವಣನ ಕೆಟ್ಟ ಮಾತುಗಳನ್ನು ಕೇಳುತ್ತಿದ್ದ ಹಾಗೆ ಸೀತೆಯು ಕೃಶಾಂಗದಲ್ಲಿ ಭಯಸಂಚಾರವಾಗುತ್ತ ನಡುಗ ತೊಡಗಿದಳು. ಹಾಗೆಯೇ ಅವಳು ನಡುಗುವ [illegible]ಂದ ಒಣಗಿದ ಹುಲ್ಲು ಕಡ್ಡಿಯೊಂದನ್ನು ಎತ್ತಿ ಕೊಂಡು ಅದನ್ನು ನೋಡುತ್ತಾ ಅಳುಗೊರಲಿನಿಂದ [illegible]ದಳು :

"ನೀನು ನನ್ನನ್ನು ಕುರಿತು ಸರ್ವಥಾ ಆಲೋಚನೆ ಮಾಡಬಾರದು. ಪಾಪ ಮಾಡಿದವನಿಗೆ ಉತ್ತಮ ಲೋಕಗಳು ಎಷ್ಟರಮಟ್ಟಿಗೆ ಅಸಾಧ್ಯವೋ ನಾನು ನಿನಗೆ ಅಷ್ಟರಮಟ್ಟಿಗೆ ಅಸಾಧ್ಯಳಾದವಳು. ನಾನು ಪುಣ್ಯಕುಲದಲ್ಲಿ ಹುಟ್ಟಿದವಳು, ಪುಣ್ಯಾತ್ಮರ ನಡುವೆ ಸೇರಿದವಳು; ಪುಣ್ಯಾತ್ಮಳಾಗಿದ್ದೇನೆ. ತಪ್ಪಾದ ಕೆಲಸ ಮಾಡುವವಳು ನಾನಲ್ಲ. ಪತಿವ್ರತೆಯಾದವಳು ಪರ ಪುರುಷನನ್ನು ಯೋಚಿಸುವಳೇ? ನಿನ್ನ ಹೆಂಡತಿಯರು ಇರಬೇಕೆಂದು ನೀನು ಬಯಸುವಿಯೋ ಇತರರ ಹೆಂಡತಿಯರೂ ಹಾಗೆಯೇ ಇರಬೇಕೆಂದು ತಿಳಿ. ನಿನಗೆ ಬುದ್ಧಿ ಹೇಳುವವರು ಇಲ್ಲದೆ ಇಂತಹ ದುರ್ಬುದ್ಧಿಯ ಕೆಲಸ ಮಾಡುತ್ತಿಯೇ. ಅಥವಾ ವಿನಾಶಕಾಲ ಬಂದು ದರಿಂದ ಹೇಳುವವರ ಮಾತನ್ನು ನೀನು ಕೇಳುವು ದಿಲ್ಲವೇನೋ? ನಿನ್ನ ಈ ಪಾಪಕಾರ್ಯದಿಂದಾಗಿ ಈ ಲಂಕೆ ಬೇಗದಲ್ಲೇ ನಾಶವಾಗಿ ಹೋಗುತ್ತದೆ. ಆಗ ಪ್ರಜೆಗಳೆಲ್ಲಾ ಸಂತೋಷ ಪಡುತ್ತಾರೆ. ದೂರ ಹೋಗು. ನನಗೆ ನಿನ್ನ ಅಂತಃಪುರವೂ ಅಧಿಕಾರಗಳೂ ಸಿರಿಸಂಪತ್ತುಗಳೂ ಬೇಕಾಗಿಲ್ಲ. ನಾನು ರಾಮನಿಗೆ ಮಾತ್ರವೇ ತಕ್ಕವಳು. ನೀನು ಕ್ಷೇಮವಾಗಿರಬೇಕೆಂದು ಬಯಸುವಿಯಾದರೆ ಆ ರಾಮನನ್ನು ಒಲಿಸಿ ಒಳಿತು ಮಾಡಿಕೋ. ಅವನು ತುಂಬ ಉದಾರ ಗುಣದವ ನಾದುದರಿಂದ ನಿನ್ನ ತಪ್ಪನ್ನು ಕ್ಷಮಿಸಿ ಬಿಟ್ಟು ಬಿಡುತ್ತಾನೆ. ನಾನು ಕೂಡಾ ನಿನ್ನ ಪಕ್ಷವಾಗಿ ಮಾತಾಡುತ್ತೇನೆ. ಚಿತ್ತಶುದ್ಧಿಯಿಂದ ನನ್ನನ್ನು ರಾಮನಿಗೇ ತಿರುಗಿ ಒಪ್ಪಿಸಿಬಿಡು. ಜನಸ್ಥಾನದಲ್ಲಿ ರಾಮನು ನಿನ್ನವರೆಲ್ಲರನ್ನೂ ಕೊಂದುದನ್ನು ನೋಡಿ, ಕಳ್ಳತನದಿಂದ ನನ್ನನ್ನು ಎತ್ತಿಕೊಂಡು ಬಂದ ಅಧಮನು ನೀನು! ನಿನ್ನಂಥವನನ್ನು ರಾಮ

೧೩. ತ್ರಿಜಟೆಯ ಸ್ವಪ್ನ



ಲಕ್ಷ್ಮಣರು ಅವಲೀಲೆಯಿಂದ ಕೊಂದುಬಿಡುತ್ತಾರೆ. ಇದರಲ್ಲಿ ನನಗೇನೂ ಸಂದೇಹವಿಲ್ಲ."

ಈ ಮಾತುಗಳನ್ನು ಕೇಳಿ ರಾವಣನಿಗೆ ಬಹಳ ಕೋಪ ಬಂದಿತು. ಅವನು ಸೀತೆಯೊಂದಿಗೆ ಹೀಗೆಂದನು :

"ಸೀತಾ, ನೀನು ಹೇಳಿದ ಪ್ರತಿ ಮಾತಿಗೂ ನಾನು ನಿನ್ನನ್ನು ಕೊಲ್ಲಬಹುದು. ನಿನ್ನ ಮೇಲೆ ನನಗಿರುವ ಮೋಹವೇ ನನ್ನ ಕೋಪವನ್ನು ತಡೆಯುತ್ತಿದೆ. ನಾನು ನಿನಗಾಗಿ ಇಟ್ಟ ಗಡುವಿಗೆ ಇನ್ನೂ ಎರಡು ತಿಂಗಳು ಅವಕಾಶವಿದೆ. ಅಷ್ಟರೊಳಗೆ ನಿನ್ನ ನಂಬುಗೆ ಪೂರಾ ನೀರಾಗಿ ಹೋಗುವುದರಲ್ಲಿ ಸಂದೇಹವಿಲ್ಲ. ಆಮೇಲೆ ನೀನು ನನ್ನ ಹೆಂಡತಿಯಾಗಿ ತೀರುವಿ, ತೀರಲೇಬೇಕು. ಅದು ಬಿಟ್ಟು ನಿನಗೆ ಬೇರೆ ದಾರಿಯೇ ಇಲ್ಲ. ಅದಕ್ಕೆ ತಪ್ಪಿಬಿಟ್ಟರೆ ನಿನ್ನನ್ನು ಕೊಂದು ಬೇಯಿಸಿ ತಿಂದು ಬಿಡುತ್ತೇನೆ. ಈ ಮಾತು ನೆನಪಿಟ್ಟುಕೋ." ಈ ರೀತಿಯಾಗಿ ರಾವಣನು ಕೋಮಲೆಯಾದ ಸೀತೆಯೊಂದಿಗೆ ಕ್ರೂರವಾಗಿ ಮಾತಾಡಿದುದನ್ನು ನೋಡಿ, ಅವನೊಂದಿಗಿರುವ ಕೆಲವು ರಾಕ್ಷಸ ಸ್ತ್ರೀಯರಿಗೆ ಕಸಿವಿಸಿಯಾಯಿತು. ಅವರು ಸೀತೆಯ ಮೇಲೆ ಸಹಾನುಭೂತಿಯ ದೃಷ್ಟಿಯನ್ನು ಹರಿಸಿದರು. ಮತ್ತೇನು ಮಾಡಲೂ ಅವರಿಗೆ ಸಾಧ್ಯವಿರಲಿಲ್ಲ.

ರಾವಣನು ಭಯಂಕರ ಆಕಾರಗಳಿಂದಿರುವ ರಾಕ್ಷಸ ಸ್ತ್ರೀಯರನ್ನು ನೋಡಿ, "ನೀವೆಲ್ಲಾ ಈ ಸೀತೆಯ ಮನಸ್ಸು - ಆದಷ್ಟು ಬೇಗದಲ್ಲಿ ನನ್ನ ಮೇಲೆ ತಿರುಗುವಂತೆ ಮಾಡಬೇಕು. ಅದಕ್ಕಾಗಿ ನೀವು ಸಾಮದಾನ ಭೇದ ದಂಡಗಳೆಂಬ ನಾಲ್ಕು ಉಪಾಯಗಳನ್ನು ಪ್ರಯೋಗಿಸಿ ನೋಡಿರಿ" ಎಂದನು.

ಆಗ ರಾವಣನ ಹೆಂಡತಿಯರಲ್ಲಿ ಚಿಕ್ಕವಳಾದ ಧಾನ್ಯಮಾಲಿನಿ ಎಂಬ ರಾಕ್ಷಸಸ್ತ್ರೀ ರಾವಣನನ್ನು ಆಲಿಂಗಿಸಿಕೊಂಡು, "ನಿನಗೆ ನಾನಿರುವೆನಲ್ಲವೆ? ರಾಕ್ಷಸರ ರಾಜನಾದ ನಿನಗೆ ಈ ಸಾಮಾನ್ಯ ಮನುಷ್ಯ ಸ್ತ್ರೀಯ ಮೇಲೆ ಆಶೆ ಏತಕ್ಕೆ? ಈ ಸೀತೆಯ ಹಣೆಯಲ್ಲಿ ನಿನ್ನ ಹೆಂಡತಿಯಾಗುವ ಯೋಗವನ್ನು ಬ್ರಹ್ಮ ಬರೆದಿರಲಾರ. ಅದಕ್ಕೇ ನಿನ್ನನ್ನು ನಿರಾಕರಿಸುತ್ತಿದ್ದಾಳೆ. ಇಷ್ಟವಿಲ್ಲದವಳನ್ನು ಕೋರುವುದರಿಂದ ಏನು ಸುಖ ಸಿದ್ಧೀತು? ಏನು ಪ್ರಯೋಜನ? ನಿನಗೆ ತಪಿಸಿಕೊಂಡಿರುವ ನಾನು ಇದ್ದೇನಲ್ಲಾ ... ಹೋಗೋಣ" ಎಂದಳು.

ರಾವಣನು ಧಾನ್ಯಮಾಲಿನಿಯ ಮಾತಿಗೆ ನಗುತ್ತಾ ಅವಳಿಂದ ಬಿಡಿಸಿಕೊಂಡು, ಹಿಂದಕ್ಕೆ ತಿರುಗಿ ಅರಮನೆಗೆ ಹೊರಟುಹೋದನು. ಅವನ ... ಪರಿವಾರದವರೂ ಹಿಂದೆಯೇ ಹೋದರು.

ಆಮೇಲೆ ರಾಕ್ಷಸ ಸ್ತ್ರೀಯರು ಸೀತೆಯ ಸುತ್ತ ಸೇರಿ ಅವಳನ್ನು ನಾನಾ ವಿಧವಾಗಿ ... ತೊಡಗಿದರು. ಅವರಲ್ಲಿ ಏಕಜಟೆ, ಹರಿಜಟೆ, ಪ್ರ... ವಿಕಟೆ, ದುರ್ಮುಖಿ ಎಂಬವರು ಮುಖ್ಯ... ಅವರೆಲ್ಲ ರಾವಣನ ದೊಡ್ಡತನವನ್ನು, ಅವ...


ಮದುವೆ ಯಾಗುವುದು ಎಷ್ಟು ದೊಡ್ಡ ವಿಷಯ ಎಂಬುದನ್ನು, ಸೀತೆ ಅವನನ್ನು ನಿರಾಕರಿಸುವುದು ಎಂತಹ ಬುದ್ಧಿಗೇಡಿತನವೆಂಬುದನ್ನು ಬಣ್ಣಿಸಿ ಬಣ್ಣಿಸಿ ಸೀತೆಗೆ ತಿಳಿಸಿ ಹೇಳಿದರು.

ಆಗ ಸೀತೆ ಆ ರಾಕ್ಷಸ ಸ್ತ್ರೀಯರನ್ನು ಕುರಿತು, " ಹೀಗೆಲ್ಲಾ ಮಾತಾಡುವುದು ಮಹಾ ಪಾಪವೆಂಬುದು ನಿಮಗೆ ತಿಳಿಯದೇ ? ನೀವೆಲ್ಲರೂ ಕೂಡಿ ನನ್ನನ್ನು ಕಿತ್ತು ಹರಿದು ತಿಂದರೂ ನಾನು ಒಪ್ಪುತ್ತೇನೆ. ರಾವಣನ ಸುದ್ದಿಮಾತ್ರ ಹೇಳಬೇಡಿ " ಎಂದಳು.

ಈ ಮಾತು ಕೇಳಿ ರಾಕ್ಷಸ ಸ್ತ್ರೀಯರು ಸೀತೆಯನ್ನು ಹೆದರಿಸಲು ತೊಡಗಿದರು. ಅವರು ಹೇಳುವ ಮಾತುಗಳನ್ನು ಮರದ ಮೇಲೆ ಹುದುಗಿರುವ ಹನುಮಂತನು ಕೇಳಿಕೊಂಡೇ ಇದ್ದನು.

ವಿನತೆ ಎಂಬ ರಾಕ್ಷಸಿ ಸೀತೆಯನ್ನು ನೋಡಿ, " ನೀನು ತುಂಬಾ ಗುಣವತಿಯಾಗಿರುವಿ, ಮಹಾ ಪತಿವ್ರತೆ. ಈ ಮಾತು ಎಲ್ಲರೂ ಮೆಚ್ಚಿಕೊಳ್ಳುವ ವಿಷಯ. ಅದೆಲ್ಲಾ ನಿಜವೇ ಬಿಡು. ಆದರೆ ಎಲ್ಲಕ್ಕೂ ಒಂದು ಮಿತಿ ಇರಬೇಕು ಗೊತ್ತೇ ? ರಾವಣನು ಎಷ್ಟೊಂದು ಸುಂದರನಾಗಿದ್ದಾನೆ ! ಹಾಗೆಯೇ ಅಸಮಾನ ಪರಾಕ್ರಮಶಾಲಿ. ಅಂತೆಯೇ ರಾಕ್ಷಸರಿಗೆಲ್ಲ ರಾಜ. ನೀನು ನಿಶ್ಚಿಂತೆಯಿಂದ ಅವನಿಗೆ ಹೆಂಡತಿಯಾಗಿಬಿಡು, ಏಳು, ಚೆನ್ನಾಗಿ ಅಲಂಕಾರ ಮಾಡಿಕೋ, ಸುಖವಾಗಿರು. ರಾಮ, ಪಾಪ, ದುಃಖ ಮರೆ. ರಾವಣನೊಂದಿಗೆ ಶತ್ರುತ್ವವಿಟ್ಟುಕೊಂಡವನು ಬದುಕಿರಲು ಸಾಧ್ಯವಿಲ್ಲ. ಕಾಡಾಡಿಯಾದ ರಾಘವನ ಮೇಲಿನ ಆಶೆ ಬಿಟ್ಟುಬಿಡು. ಅದು ನಿನಗೆ ಭಯಂಕರ ಮೃತ್ಯುವನ್ನೇ ತರುವಂಥದು. ಬುದ್ಧಿಯನ್ನು ತಿಳಿದುಕೋ " ಎಂದಳು.


" ನಾವೆಲ್ಲಾ ನಿನ್ನ ಮೇಲು ಕೋರಿಯೇ ಹೇಳುತ್ತೇವೆ. ನಿನ್ನ ಹಾಗೇ ಸ್ತ್ರೀಯರಾಗಿರುವ ನಮ್ಮ ಮಾತನ್ನು ನೀನೇಕೆ ಕೇಳುವುದಿಲ್ಲ ? ನಿನಗಿರುವ



ಯೌವನವು ಶಾಶ್ವತವೆಂದು ತಿಳಿದಿದ್ದೀಯಾ ? ರಾವಣ ನನ್ನು ಒಪ್ಪದಿದ್ದರೆ ನೀನು ಬದುಕಿರಲಾರೆ. ನಾವೇ ನಿನ್ನನ್ನು ಕೊಂದು ತಿಂದು ಬಿಡುತ್ತೇವೆ " ಎಂದರು ಮತ್ತೆ ಕೆಲವಂದಿ ರಾಕ್ಷಸಿಯರು.

" ಒಂದು ಮಾಡುವ. ಮೊದಲು ಸೀತೆಯನ್ನು ಕೊಂದು ರಾವಣನೊಂದಿಗೆ ಸೀತೆ ಸತ್ತಳೆಂದು ಹೇಳಿಬಿಡೋಣ. ಹಾಗಾದರೆ ನೀವೇ ತಿಂದುಬಿಡಿ ಅನ್ನುತ್ತಾನೆ ರಾವಣ. ಇವಳ ಮಾಂಸವನ್ನು ಎಲ್ಲರಿಗೂ ಸಮಾನವಾಗಿ ಹಂಚಬೇಕು. ಇಲ್ಲದಿದ್ದರೆ ನಮ್ಮೊಳಗೆ ಜಗಳ ಬಂದೀತು." ಎಂದು ಮುಂತಾಗಿ ರಾಕ್ಷಸ ಸ್ತ್ರೀಯರು ತಮ್ಮಲ್ಲಿ ತಾವು ಮಾತಾಡಿಕೊಳ್ಳ ತೊಡಗಿದರು.

ಅವರ ಅಪಲಾಪಗಳನ್ನು ಕೇಳುತ್ತಿರುವಾಗ ಸೀತೆಗೆ ಅಪಾರವಾದ ದುಃಖಬಂದಿತು. ರಾಮಲಕ್ಷ್ಮಣರನ್ನೂ, ಕೌಸಲ್ಯಾ ಸುಮಿತ್ರೆಯರನ್ನೂ ನೆನೆಯುತ್ತ ಧಾರೆ ಧಾರೆಯಾಗಿ ಕಣ್ಣೀರಿಳಿಸುತ್ತ ಅಳ ತೊಡಗಿದಳು.



ತನ್ನ ಎದೆಯೊಡೆದು ಮರಣ ಬರುವುದಿಲ್ಲವೇಕೋ ಎನಿಸುತ್ತಿತ್ತು. ತನ್ನ ದೆಂತಹ ಪಾಷಾಣ ಹೃದಯವೋ ಎಂದು ಕೊರಗ ತೊಡಗಿದಳು.

ಅದುವರೆಗೂ ಮಲಗಿಕೊಂಡಿದ್ದ ತ್ರಿಜಟೆ ಎಂಬ ಮುದುಕಿ ರಾಕ್ಷಸಿ, ಎದ್ದು ಕುಳಿತು ಉಳಿದ ರಾಕ್ಷಸ ಸ್ತ್ರೀಯರನ್ನು ನೋಡಿ, "ಏನು ಮಾತಾಡುವಿರಿ ನಿಮ್ಮ ಕರ್ಮ? ನೀವೆಲ್ಲಾ ಈ ಸೀತೆಯನ್ನು ಕೊಂದು ತಿನ್ನುತ್ತೀರೇನು? ನನ್ನನ್ನು ಕೊಂದು ತಿನ್ನಿ. ನಾನು ಇದೇ ಈಗ ನಿದ್ದೆಯಲ್ಲಿ ಭಯಂಕರವಾದ ಸ್ವಪ್ನ ನೋಡಿದೆ. ರಾಕ್ಷಸರಿಗೆ ನಾಶವೂ ರಾಮನಿಗೆ ಜಯವೂ ಬರುತ್ತವೆ." ಎಂದಳು. ರಾಕ್ಷಸ ಸ್ತ್ರೀಯರು ಅವಳನ್ನು ನೋಡಿ, "ಏನು ಸ್ವಪ್ನ? ಹೇಳು ಹೇಳು" ಎಂದು ಅವಸರ ಪಡಿಸಿದರು.

ಆಗ ತಾನೇ ಬೆಳಗಾಗಲು ತೊಡಗಿತ್ತು. ತ್ರಿಜಟೆ ತನ್ನ ಸ್ವಪ್ನವನ್ನು ಕುರಿತು ಹೀಗೆ ಹೇಳ ತೊಡಗಿದಳು: "ರಾಮನು ಬಿಳೀ ಬಣ್ಣದ ಹೂವಿನ ಮಾಲೆಯನ್ನೂ ಬಿಳೀ ಬಟ್ಟೆಗಳನ್ನೂ ಧರಿಸಿಕೊಂಡು ಲಕ್ಷ್ಮಣನೊಂದಿಗೆ ಪಲ್ಲಕಿಯಲ್ಲಿ ಕುಳಿತುಕೊಂಡು ಆಕಾಶ ಮಾರ್ಗದಲ್ಲಿ ಲಂಕೆಗೆ ಬರುವುದನ್ನು ನೋಡಿದೆ. ಅದನ್ನು ಸಾವಿರ ಹಂಸಗಳು ಹೊತ್ತುಕೊಂಡು ಹಾರಿ ಬಂದುವು. ಈ ಸೀತೆ ಬಿಳೀ ಬಟ್ಟೆಗಳನ್ನು ಧರಿಸಿ ಸಮುದ್ರದ ಮಧ್ಯದಲ್ಲಿ ಒಂದು ಬೆಳ್ಳಗಿನ ಪರ್ವತದ ಮೇಲೆ ನಿಂತಿದ್ದಾಳೆ. ಅವಳೂ ರಾಮನೊಂದಿಗೆ ಸೇರಿಕೊಂಡಳು. ಆಮೇಲೆ ರಾಮನು ಸೀತಾಲಕ್ಷ್ಮಣರೊಂದಿಗೆ ಗುಡ್ಡದಂತಹ ಒಂದು ಆನೆಯ ಮೇಲೆ ಏರಿ ಈ ಲಂಕೆಯ ಬೀದಿಗಳಲ್ಲಿ ತಿರುಗಾಡುವುದನ್ನು ನೋಡಿದೆ. ಸ್ವಲ್ಪ ಹೊತ್ತಿಗೆ ಸೀತಾರಾಮಲಕ್ಷ್ಮಣರು ಆನೆಯ ಮೇಲೆ ಲಂಕೆಯ ಮೇಲು ಭಾಗದ ಆಕಾಶದಲ್ಲಿ ಕಾಣಿಸಿದರು. ಕಡೆಗೆ ರಾಮನು ಸೀತೆಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಪುಷ್ಪಕ ವಿಮಾನವನ್ನೇರಿ ಉತ್ತರ ಮುಖವಾಗಿ ಹೋಗುವುದನ್ನೂ ನೋಡಿದೆ. ರಾವಣನು ಕೆಂಪು ಹೂಗಳ ಮಾಲೆಗಳನ್ನು ಧರಿಸಿ, ಶರೀರಕ್ಕೆಲ್ಲಾ ಎಣ್ಣೆ ಲೇಪಿಸಿಕೊಂಡು ಎಣ್ಣೆ ಕುಡಿದು ಕಹೀ ಮುಖ ಮಾಡಿಕೊಂಡು ನೆಲದ ಮೇಲೆ ಬಿದ್ದು ಹೊರಳುವುದನ್ನು ನೋಡಿದೆ. ಇನ್ನೊಂದುಸಾರಿ ರಾವಣ ಪುಷ್ಪಕ ವಿಮಾನದಿಂದ ಜಾರಿ ಬೀಳುವುದನ್ನೂ ಕಂಡೆ. ರಾವಣನ ತಲೆಯ ಮೇಲೆ ಕೂದಲೇ ಇರಲಿಲ್ಲ. ಕಪ್ಪು ಬಣ್ಣದ ಬಟ್ಟೆ ಉಟ್ಟುಕೊಂಡಿದ್ದ ರಾವಣನನ್ನು ಯಾವಳೋ ಹೆಂಗುಸೊಬ್ಬಳು ಎಳೆದುಕೊಂಡು ಹೋಗುತ್ತಿದ್ದಳು. ಮತ್ತೊಂದುಸಾರಿ ರಾವಣನು ಕತ್ತೆಯ ಮೇಲೆ ಕುಳಿತುಕೊಂಡು ದಕ್ಷಿಣ ದಿಕ್ಕಿಗೆ ಹೋಗುತ್ತಿರುವುದನ್ನೂ ನೋಡಿದೆ. ಅವನನ್ನು ಎಳೆದುಕೊಂಡು ಹೋಗುವವಳು ಕೆಂಪು ಬಟ್ಟೆ ಉಟ್ಟುಕೊಂಡು ತನ್ನ ಶರೀರಕ್ಕೆ ಕೆಸರು ಹಚ್ಚಿಕೊಂಡಿದ್ದಳು. ಅವಳು ರಾವಣನ ಕುತ್ತಿಗೆಗೆ ಹಗ್ಗ ಹಾಕಿ ದಕ್ಷಿಣಕ್ಕೆ ಎಳೆದುಕೊಂಡು ಹೋದಳು. ಕುಂಭಕರ್ಣನಿಗೆ ಕೂಡಾ ಅದೇ ಗ






ಯಾಗಿರುವುದನ್ನೂ ಕಂಡೆ. ರಾವಣನ ಕುಮಾರರೆಲ್ಲರೂ ಎಣ್ಣೆಯಿಂದ ಅಭಿಷೇಕ ಮಾಡಿಕೊಂಡಂತೆ ಕಂಡು ಬಂದರು. ರಾವಣನು ಹಂದಿಯ ಮೇಲೆಯೂ, ಇಂದ್ರಜಿತ್ತು ಮೊಸಳೆಯ ಬೆನ್ನಿನಲ್ಲಿಯೂ, ಕುಂಭಕರ್ಣ ಒಂಟೆಯ ಮೇಲೆಯೂ ದಕ್ಷಿಣದಿಕ್ಕಿಗೆ ಹೋಗುತ್ತಿದ್ದರು. ವಿಭೀಷಣನೊಬ್ಬ ಮಾತ್ರ ಬಿಳೀ ಹೂಗಳ ಮಾಲೆಗಳನ್ನೂ ಬಿಳೀ ಬಟ್ಟೆಗಳನ್ನೂ ಧರಿಸಿ, ಶರೀರಕ್ಕೆ ಗಂಧ ಹಚ್ಚಿಕೊಂಡು ತನ್ನ ನಾಲ್ಕು ಮಂದಿ ಮಂತ್ರಿಗಳೊಂದಿಗೆ, ನಾಲ್ಕು ದಂತಗಳಿರುವ ದೊಡ್ಡ ಆನೆಯ ಮೇಲೆ ಕುಳಿತುಕೊಂಡು ಲಂಕೆಯಲ್ಲಿ ತಿರುಗಾಡುವುದನ್ನು ನೋಡಿದೆ. ಮತ್ತೊಂದುಸಾರಿ ಲಂಕಾನಗರವು ಲಟಲಟಾಲ್ಲನೆ ಮುರಿದು ಸಮುದ್ರದಲ್ಲಿ ಮುಗುಚಿ ಬೀಳುವುದನ್ನೂ ಕಂಡೆ.''

ಹೀಗೆ ತ್ರಿಜಟೆ ಬಹಳ ಹೊತ್ತು ತನಗೆ ಬಂದ ಸ್ವಪ್ನವಿಶೇಷವನ್ನು ರಾಕ್ಷಸ ಸ್ತ್ರೀಯರಿಗೆ ಹೇಳಿ, "ನೀವೆಲ್ಲಾ ಸೀತೆಯಿಂದ ಸ್ವಲ್ಪ ದೂರವೇ ಇದ್ದುಬಿಡಿ. ಅವಳಿಗೆ ನೋವಾಗುವಂತೆ ಮಾಡಬೇಡಿ. ರಾಮನು ಸೀತೆಯೊಂದಿಗೆ ಸೇರಿದ್ದಾನೆಂದೇ ತಿಳಿದುಕೊಳ್ಳಿ. ಸೀತೆಯೊಂದಿಗೆ ಒಳ್ಳೆಯ ಮಾತುಗಳನ್ನೇ ಮಾತಾಡಿರಿ. ನಾವು ಈಗಲೇ ಸೀತೆಯಿಂದ ಅಭಯದಾನ ಪಡೆಯುವುದು ಒಳ್ಳೆಯದೆಂದು ನನಗೆ ಕಾಣುತ್ತದೆ'' ಎಂದಳು.

ಮರದ ಕೊಂಬೆಯಲ್ಲಿ ಎಲೆಗಳ ನಡುವೆ ಅಡಗಿ ಕುಳಿತುಕೊಂಡು ಇದನ್ನೆಲ್ಲಾ ಕೇಳುತ್ತಲೇ ಇರುವ ಹನುಮಂತನಿಗೆ ಸೀತೆಯನ್ನು ಹೇಗೆ ಸಮಾಧಾನಪಡಿಸಬೇಕೆಂಬುದು ಗೊತ್ತಾಗಲಿಲ್ಲ. ಅವಳೊಂದಿಗೆ ಮಾತಾಡದೆ ಸುಮ್ಮನೆ ಹಿಂದಿರುವುದು ಅರ್ಥವಿಲ್ಲದ ಕೆಲಸವಾಗುತ್ತದೆ. ರಾಕ್ಷಸ ಸ್ತ್ರೀಯರಿಗೆ ಅನುಮಾನ ಬರುವಂತೆ ಮಾಡಿ ರಾಕ್ಷಸರ ವೀರರೊಂದಿಗೆ ಯುದ್ಧವನ್ನು ಎಳೆದುಕೊಂಡರೆ ಅವಿವೇಕವಾದೀತು. ಯುದ್ಧದಲ್ಲಿ ಜಯವೇ ದೊರೆಯುವುದೆಂದು ಹೇಳುವುದಕ್ಕಾಗದು. ಒಂದು ವೇಳೆ ತಾನು ಎಲ್ಲಾ ರಾಕ್ಷಸರನ್ನೂ ಕೊಂದು ಹಾಕಿದರೂ ಮತ್ತೆ ಸಮುದ್ರವನ್ನು ದಾಟುವ ಶಕ್ತಿ ಉಳಿಯದೆ ಹೋಗಬಹುದು. ಇದೆಲ್ಲ ಹಾಗಿರಲಿ. ಈ ಸೀತೆ ತನ್ನನ್ನು ಕಂಡ ಕೂಡಲೇ ನಾನೊಬ್ಬ ಮಾಯಾರೂಪದಲ್ಲಿರುವ ರಾಕ್ಷಸನೆಂದು ಹೆದರದಂತೆ ನೋಡಬೇಕು.

ಹೀಗೆ ಎಲ್ಲಾ ವಿಧದಲ್ಲಿಯೂ ಆಲೋಚನೆ ಮಾಡಿದ ಮೇಲೆ ಹನುಮಂತನು ಒಂದು ಕಥೆಯನ್ನು ಸೀತೆಯ ಕಿವಿಗೆ ಬೀಳುವಂತೆ ಹೇಳಬೇಕೆಂದು ನಿಶ್ಚಯಿಸಿಕೊಂಡನು. ತ್ರಿಜಟೆಯ ಸ್ವಪ್ನ ವೃತ್ತಾಂತದಿಂದ ಹೆದರಿದ ರಾಕ್ಷಸಿಯರೆಲ್ಲಾ ದೂರದೂರ ಸರಿದು ಕುಳಿತು ಹಾಗೆಯೇ ತೂಕಡಿಸುತ್ತಿದ್ದರು. ಇದೇ ಸರಿಯಾದ ಸಮಯವೆಂದುಕೊಂಡು ಹನುಮಂತನು ಹೇಳತೊಡಗಿದನು :

"ದಶರಥನೆಂಬ ದೊಡ್ಡ ರಾಜನಿಗೆ ರಾಮನೆಂಬ ಹಿರಿಯ ಮಗನಿದ್ದಾನೆ. ಆ ರಾಮನು ತಂದೆಯ ಆಜ್ಞೆಯಂತೆ ತನ್ನ ಹೆಂಡತಿಯೊಂದಿಗೂ, ತಮ್ಮನಾದ



ಲಕ್ಷ್ಮಣನೊಂದಿಗೂ ವನವಾಸ ಮಾಡಲಿಕ್ಕಾಗಿ ಅರಣ್ಯಕ್ಕೆ ಹೋದನು. ಅರಣ್ಯದಲ್ಲಿ ಆ ರಾಮನು ಶೂರರಾದ ಅನೇಕಮಂದಿ ರಾಕ್ಷಸರನ್ನು ಕೊಂದನು. ಜನಸ್ಥಾನದಲ್ಲಿ ಅನೇಕಮಂದಿ ರಾಕ್ಷಸರು ರಾಮನ ಕೈಯಲ್ಲಿ ಸತ್ತರೆಂದು ಕೇಳಿ, ರಾವಣನು ಮಾಯದ ಜಿಂಕೆಯ ಮೂಲಕವಾಗಿ ಮೋಸಮಾಡಿ ರಾಮನ ಹೆಂಡತಿಯಾದ ಸೀತೆಯನ್ನು ಎತ್ತಿಕೊಂಡು ಹೋಗಿ ಬಿಟ್ಟನು. ರಾಮನು ತನ್ನ ಹೆಂಡತಿಯನ್ನು ಹುಡುಕುತ್ತಾ, ಕಾಡಿನಲ್ಲಿ ಸುತ್ತುತ್ತಿರುವಾಗ ಸುಗ್ರೀವ ಎಂಬ ವಾನರನೊಂದಿಗೆ ಅವನಿಗೆ ಸ್ನೇಹವಾಯಿತು. ರಾಮನು ವಾಲಿ ಎಂಬ ವಾನರ ರಾಜನನ್ನು ಕೊಂದು ಸುಗ್ರೀವನಿಗೆ ವಾನರ ರಾಜ್ಯವನ್ನು ಕೊಡಿಸಿದನು. ರಾಮನ ಕಾರ್ಯಕ್ಕಾಗಿ ಸುಗ್ರೀವನ ಆಜ್ಞೆಯ ಮೇರೆಗೆ ಅನೇಕ ಸಾವಿರ ವಾನರರು ಸೀತಾದೇವಿಯನ್ನು ಹುಡುಕಲಿಕ್ಕೆ ಎಲ್ಲಾ ದಿಕ್ಕುಗಳಿಗೂ ಹೊರಟರು. ಅವರಲ್ಲಿ ಒಬ್ಬನಾದ ನಾನು ನೂರು ಯೋಜನ ದೂರದ ಸಮುದ್ರವನ್ನು ದಾಟಿ ಬಂದೆನು. ರಾಮನು ವರ್ಣಿಸಿದಂತೆಯೇ ಇರುವ ಸೀತೆಯನು. ಈಗ ನೋಡುತ್ತಿದ್ದೇನೆ.''

ಇಷ್ಟರವರೆಗೆ ಹೇಳಿ ಹನುಮಂತನು ಮಾತು ನಿಲ್ಲಿಸಿದನು. ಅವನ ಮಾತುಗಳನ್ನು ಕಿವಿಗೊಟ್ಟು ಕೇಳಿದ ಸೀತೆ ಅತ್ಯಾಶ್ಚರ್ಯ ಪಡುತ್ತ ತಲೆಯೆತ್ತಿ ಮರದ ಮೇಲೆ ನೋಡಿದಳು. ಬಹಳ ಶ್ರಮಪಟ್ಟು ಎಲೆಗಳನ್ನೆಲ್ಲಾ ಕಣ್ಣುಗಳಿಂದ ಹುಡುಕುವಾಗ ಒಂದೆಡೆ ಹನುಮಂತನಿರುವುದನ್ನು ನೋಡಿದಳು.

ಬಿಳಿಯ ಬಟ್ಟೆಯನ್ನು ಉಟ್ಟುಕೊಂಡು ಮರದ ಎಲೆಗಳ ನಡುವೆ ಮಿಂಚಿನಂತೆ ಕಾಣಿಸಿದ ಹನುಮಂತನನ್ನು ನೋಡಿದ ಕೂಡಲೇ ಸೀತೆಗೆ ಸ್ವಲ್ಪ ಸಮಾಧಾನವಾಯಿತು. ಆಪತ್ತಿನ ವೇಳೆಯಲ್ಲಿ ಇನ್ನಿಷ್ಟು ... ರೂಪದಂತೆ ಕಾಣುವ ಕೋತಿ ರೂಪವು ತನಗೆ ...ಕೊಂಡುದನ್ನು ನೋಡಿ ತುಂಬ ದುಃಖಿಸಿದಳು.

ತಾನು ಅಳುವುದು ರಾಕ್ಷಸ ಸ್ತ್ರೀಯರಿಗೆ ಕೇಳಬಾರದೆಂದುಕೊಂಡು ನಿಃಶಬ್ದವಾಗಿ ಅತ್ತಳು. ಲಂಕೆಯಲ್ಲಿ ರಾಮನ ಕಥೆ ಹೇಳುವವರಿರುವುದು ಅಸಂಭವವೆನಿಸಿತು. ಆದುದರಿಂದ ತಾನೀಗ ಸ್ವಪ್ನ ಕಾಣುವೆನೆಂದು ಭಾವಿಸಿದಳು. ಸ್ವಪ್ನದಲ್ಲಿ ಕೋತಿ ಕಂಡರೆ ಬಹಳ ಕೆಟ್ಟುದಂತೆ. ರಾಮನಿಗೆ ಏನು ಅಪಾಯ ಬಂದಿತೋ ಎಂದು ಹೆದರಿದಳು. ಆದರೆ ತನಗೆ ನಿದ್ದೆ ಬಾರದಿರುವಾಗ ಸ್ವಪ್ನ ಕಾಣುವುದು ಹೇಗೆ ? ತಾನು ಸದಾಕಾಲವೂ ರಾಮನನ್ನು ಕುರಿತೇ ಆಲೋಚನೆ ಮಾಡುವುದರಿಂದ ತನ್ನ ಕಿವಿಗಳಿಗೆ ರಾಮನ ಕಥೆ ಕೇಳುವ ಹಾಗೆ ಭ್ರಮೆಯುಂಟಾಗಿರಬೇಕೆಂದು ಅವಳಿಗೆ ತೋರಿತು. ಏನಾದರೂ ತನ್ನ ಕಿವಿಗೆ ಬಿದ್ದ ಮಾತುಗಳು ನಿಜವಾಗಬೇಕೆಂದು ಇಂದ್ರನಿಗೂ ಬೃಹಸ್ಪತಿಗೂ ಬ್ರಹ್ಮನಿಗೂ ಅಗ್ನಿಹೋತ್ರನಿಗೂ ಮನಸ್ಸಿನಲ್ಲೇ ನಮಸ್ಕಾರ ಮಾಡಿದಳು. ಹೀಗೆ ಸೀತೆ ತನ್ನೊಳಗೆ ತಳಮಳಿಸಿಕೊಂಡಿರಲು, ಹನುಮಂತನು ಮರದ ಮೇಲಿ

ನಿಂದ ನೆಲಕ್ಕೆ ಹಾರಿ, ಸೀತೆಯ ಸಮೀಪದಲ್ಲಿ ನಿಂತು, ಕೈಗಳನ್ನು ಜೋಡಿಸಿ ನಮಸ್ಕಾರ ಮಾಡಿ, "ಅಮ್ಮಾ, ನಿನ್ನನ್ನು ನೋಡಿದರೆ ಪತಿವ್ರತೆಯಾಗಿ ಕಾಣಿಸುವಿ. ನಿನ್ನ ಕಣ್ಣುಗಳಲ್ಲಿ ನೀರಿಳಿಯುತ್ತಿದೆ. ನೀನು ಯಾರು? ಇಲ್ಲಿ ಹೀಗೆ ಅಳುತ್ತಿರಲು ಕಾರಣವೇನು ? ನಿನ್ನನ್ನು ನೋಡಿದರೆ ಯಾವ ದೇವಗಣದವಳೋ ಎಂಬ ಹಾಗೆ ಕಾಣುವೆ. ನಿನ್ನ ಮಗನೂ, ಗಂಡನೂ, ತಂದೆಯೂ, ಸೋದರನೂ ಯಾರು ? ಒಂದು ವೇಳೆ ನೀನು ರಾವಣನಿಂದ, ಜನಸ್ಥಾನದಲ್ಲಿ ಅಪಹರಿಸಲ್ಪಟ್ಟ ಸೀತೆಯೋ ನಿಜವಾದರೆ ಆ ಸಂಗತಿ ಬೇಗನೇ ಹೇಳಿಬಿಡು. ನಿನಗೆ ಶುಭವಾಗುತ್ತದೆ" ಎಂದನು.

ಹನುಮಂತನ ಮಾತುಗಳನ್ನು ಕೇಳುತ್ತಿದ್ದಂತೆ, ಸೀತೆಗೆ ಧೈರ್ಯ ಬಂದಿತು. ಅವಳು ಹನುಮಂತನೊಂದಿಗೆ ಹೀಗೆಂದಳು :

"ನಾನು ದಶರಥ ಮಹಾರಾಜನ ಸೊಸೆ. ವಿದೇಹ ರಾಜನಾದ ಜನಕನ ಮಗಳು. ನನ್ನ ಹೆಸರು ಸೀತೆ. ರಾಮನೊಂದಿಗೆ ಮದುವೆಯಾಗಿ ಹನ್ನೆರಡು ವರುಷ ಸಮಸ್ತ ಸಂತೋಷಗಳನ್ನೂ ಅನುಭವಿಸಿದೆ. ಹದಿಮೂರನೇ ವರ್ಷದಲ್ಲಿ ರಾಮನಿಗೆ ಪಟ್ಟಾಭಿಷೇಕದ ಪ್ರಯತ್ನ ನಡೆಯುವಾಗ ಕೈಕೇಯಿ ಎಂಬವಳು ರಾಮನಿಗೆ ಪಟ್ಟಾಭಿಷೇಕವಾಗಿಬಿಟ್ಟರೆ, ತಾನು ಆಹಾರ ಬಿಟ್ಟು ನೀರು ಸಹಾ ಕುಡಿಯದೆ ಸಾಯುವೆನೆಂದೂ ರಾಮನನ್ನು ಅರಣ್ಯಕ್ಕೆ ಕಳುಹಿಸಬೇಕೆಂದೂ ಪಟ್ಟು ಹಿಡಿದಳು. ಹಿಂದೊಮ್ಮೆ ಕೈಕೇಯಿಗೆ ವರಗ ವಾಗ್ದಾನ ಮಾಡಿದ್ದ ದಶರಥನು ಆ ಮಾತಿಗೆ ಸಿ ಬಿದ್ದು, ರಾಮನಿಗೆ ಕೊಡುವುದಾಗಿದ್ದ ರಾಜ್ಯವನ್ನು ತಿರುಗಿ ರಾಮನಿಂದ ಹಿಂದೆ ಪಡೆದುಕೊಂಡನು ರಾಮನು ತಂದೆಯ ಮಾತಿಗೆ ಮನಃಪೂರ್ವಕವಾ ಸಮ್ಮತಿಸಿ ನಾರಬಟ್ಟೆಗಳನ್ನು ಕಟ್ಟಿಕೊಂಡು ಹೊರ ವಾಗ, ನನ್ನನ್ನು ಕೌಸಲ್ಯೆಯೊಂದಿಗೆ ಇರ ಹೇಳಿದನು. ನಾನು ರಾಮನನ್ನು ಬಿಟ್ಟು ಸ್ವರ್ಗ ಕೂಡಾ ಇರುವವಳಲ್ಲ. ಆದುದರಿಂದ ನಾನು ಅ ಗಿಂತಲೂ ಮುಂದಾಗಿ ಅರಣ್ಯಕ್ಕೆ ಹೊ ಹಾಗೆಯೇ ಸುಮಿತ್ರೆಯ ಮಗನಾದ ಲಕ್ಷ್ಮಣ ಕೂ ರಾಮನೊಂದಿಗೆ ಹೊರಟುಬಿಟ್ಟನು. ನಾವು ದ ಕಾರಣ್ಯದಲ್ಲಿ ನಮ್ಮ ಪಾಡಿಗೆ ವನವಾಸದ ಕಾಲ ಕಳೆಯುತ್ತಿದ್ದಾಗ, ದುಷ್ಟನಾದ ರಾವಣನು ನ ಅಪಹರಿಸಿ ಇಲ್ಲಿಗೆ ತಂದು ಇಂತಹ ಕಾವಲಿನಲ್ಲಿಟ್ಟ ರಾವಣನು ಇನ್ನು ಎರಡು ತಿಂಗಳು ಮಾತ್ರ ನನ್ನ ಜೀವದಿಂದಿರಲು ಬಿಡುತ್ತಾನೆ. ತರುವಾಯ ನ ಸತ್ತುಹೋಗುತ್ತೇನೆ."

ಇಷ್ಟು ಹೇಳಿ ಸೀತೆ ಮಾತು ನಿಲ್ಲಿಸಲು, ಮಂತನು ಚಿಂತಿಸುತ್ತಾ, ಸೀತೆಗೆ ತಕ್ಕ ಸಮಾ ಹೇಳಲು ಸಿದ್ಧನಾದನು.





ವೀರಹನುಮಾನ್


ಹನುಮಂತನು ಸೀತೆಗೆ ಬಾಗಿ ನಮಸ್ಕರಿಸುತ್ತಾ, "ಸೀತಾದೇವಿ, ನಾನು ರಾಮದೂತನಾಗಿ ನಿನ್ನ ಬಳಿಗೆ ಬಂದಿದ್ದೇನೆ. ರಾಮನು ಕ್ಷೇಮವಾಗಿದ್ದಾನೆ. ಅವನೊಂದಿಗೆ ಕ್ಷೇಮವಾಗಿರುವ ಲಕ್ಷ್ಮಣನು ನಿನಗೆ ತನ್ನ ನಮಸ್ಕಾರವನ್ನು ಹೇಳಲು ಹೇಳಿದ್ದಾನೆ. ರಾಮಲಕ್ಷ್ಮಣರಿಬ್ಬರೂ ನಿನ್ನ ಕ್ಷೇಮವನ್ನು ತಿಳಿಯಲು ಆತುರರಾಗಿದ್ದಾರೆ" ಎಂದನು.

ರಾಮಲಕ್ಷ್ಮಣರ ಕ್ಷೇಮ ಸಮಾಚಾರವನ್ನು ಕೇಳಿದ ಕೂಡಲೇ ಸೀತೆಗೆ ಒಮ್ಮೆಗೇ ಸಂತೋಷವು ಉಕ್ಕಿ ಉಕ್ಕಿತು. ಆದರೆ ಅಷ್ಟರಲ್ಲಿ ಹನುಮಂತನು ಮೆಲ್ಲನೆ ತನ್ನನ್ನು ಸಮೀಪಿಸುವುದನ್ನು ನೋಡಿ, ರಾವಣನೇ ಈ ಕೋತಿ ರೂಪದಲ್ಲಿ ಬಂದಿರುವನೆಂಬ ಶಂಕೆಯಿದ್ದು ಅವಳನ್ನು ನಡುಗಿಸಿತು. ಅವಳು ತಡೆದುಕೊಳ್ಳಲಾರದವಳಾಗಿ, ತಾನು ಹಿಡಿದುಕೊಂಡಿದ್ದ ಮರದ ಕೊಂಬೆಯನ್ನು ಬಿಟ್ಟು ನೆಲದ ಮೇಲೆ ಕುಸಿದು ಕುಳಿತಳು. ಈ ರಾಕ್ಷಸ ಮಾಯೆಯನ್ನು ತಾಳಲಾರೆನಲ್ಲಾ ಎಂದು ತನ್ನಲ್ಲೇ ಹಲುಬಿದಳು.

ಬುದ್ಧಿವಂತನಾದ ಹನುಮಂತನು ಸೀತೆ ಸಂಶಯದಿಂದ ಭಯಪಡುತ್ತಿರುವುದನ್ನು ತಿಳಿದು, ಅವಳಿಗೆ ಪುನಃ ಪುನಃ ನಮಸ್ಕಾರ ಮಾಡುತ್ತ ನಿಂತುಬಿಟ್ಟ. ಸೀತೆ ಅವನ ಕಡೆ ನೋಡದೆ ನಿಟ್ಟುಸಿರುಬಿಡುತ್ತ, "ನೀನು ರಾವಣನೇ ನಿಜವಾದರೆ ನಿನ್ನ ಮಾಯಾ ವಿದ್ಯೆಯಿಂದ ಹೀಗೆ ಕೋತಿ ರೂಪದಲ್ಲಿ ಬಂದು ನನ್ನನ್ನು ದುಃಖಪಡಿಸುವುದು ಒಳ್ಳೆಯದಲ್ಲ. ಜನಸ್ಥಾನದಲ್ಲಿ ಹೀಗೆಯೇ ಮಾಯದ ಸನ್ಯಾಸಿರೂಪದಲ್ಲಿ ಬಂದೆ. ಹಾಗಿಲ್ಲದೆ ನೀನು ನಿಜವಾಗಿಯೂ ರಾಮನ ದೂತನೇ ಆಗಿದ್ದರೆ ರಾಮನ ಗುಣಗಣಗಳನ್ನು ಹೇಳಬಲ್ಲೆಯಾ ? " ಎಂದಳು.

ಹನುಮಂತನು ರಾವಣನೇ ಮಾಯಾರೂಪದಲ್ಲಿ ಬಂದವನೆಂಬ ಅನುಮಾನದೊಂದಿಗೆ, ತಾನು ಸ್ವಪ್ನ ಕಾಣುತ್ತಿರುವೆನೆಂದೂ, ತನ್ನ ಬುದ್ಧಿಗೆ ಮಂಕು ಕವಿಯುತ್ತದೆಂದೂ, ಚಂಚಲವಾಗುತ್ತಿದೆಯೆಂದೂ ಬೇರೆ ಅನುಮಾನಗಳೂ ಏಳತೊಡಗಿ ಸೀತೆಯ ಮನಸ್ಸು ತುಂಬ ಕ್ಷೋಭೆಗೊಳ್ಳತೊಡಗಿತು.

೧೪. ಅಶೋಕವನ ವಿಧ್ವಂಸ



ಅವಳ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡ ಹನುಮಂತನು ಮೊದಲು ರಾಮನ ಮುದ್ರಿಕೆಯನ್ನು ಸೀತೆಗೆ ಕೊಟ್ಟನು. ಅದನ್ನು ನೋಡಿ ಅವಳ ನಂಬುಗೆ ದೃಢವಾಗುತ್ತಿರಲು, ರಾಮನ ಲಕ್ಷಣಗಳನ್ನೂ, ಗುಣಗಣಗಳನ್ನೂ ಒಂದೊಂದಾಗಿ ಹೇಳಿ ಮಾತಾಡಿದನು. ತಾನು ಲಂಕೆಗೆ ಹೇಗೆ ಬಂದೆನೆಂಬುದನ್ನೂ ತಿಳಿಸಿದನು.

ಇಷ್ಟೆಲ್ಲ ಕೇಳಿದ ಮೇಲೆ ಸೀತೆಯ ಮನಸ್ಸು ನೆಮ್ಮದಿಗೊಂಡಿತು. ರಾಮಲಕ್ಷ್ಮಣರ ಮುಖ್ಯ ಲಕ್ಷಣಗಳನ್ನು ಇನ್ನೊಮ್ಮೆ ಹೇಳುವಂತೆ ಅವಳು ಕೇಳಿಕೊಂಡಳು. ಹನುಮಂತನು ಇನ್ನಷ್ಟು ವಿವರವಾಗಿ ಹೇಳಿದನು. ತರುವಾಯ ಅವನು ರಾಮನಿಗೂ ಸುಗ್ರೀವನಿಗೂ ಮೈತ್ರಿ ಏರ್ಪಟ್ಟಲ್ಲಿಂದ ನಡೆದ ಕಥೆಗಳೆಲ್ಲವನ್ನೂ ಹೇಳಿ, ತಾನು ಸೀತೆಗಾಗಿ ಲಂಕೆಯನ್ನು ಎಷ್ಟರಮಟ್ಟಿಗೆ ಗಾಳಿಸಿದೆನೆಂಬುದನ್ನು ವಿವರಿಸಿದನು. ಎಲ್ಲವನ್ನು ಕೇಳುತ್ತಿದ್ದಂತೆ ಸಂದೇಹಗಳೆಲ್ಲ ಮರೆಯಾಗಿ, ಸೀತೆ ಆನಂದಬಾಷ್ಪವನ್ನುದುರಿಸಿದಳು. ಅವಳಿಗೆ ಹನುಮಂತನ ಮೇಲೆ ಗಟ್ಟಿ ವಿಶ್ವಾಸವೂ ಪ್ರೀತಿಯೂ ಉಂಟಾಯಿತು.

ಹೇಳುವುದನ್ನೆಲ್ಲಾ ಹೇಳಿಯಾದ ಮೇಲೆ ಹನುಮಂತನು ಸೀತೆಯೊಂದಿಗೆ, "ನಾನೀಗ ಏನು ಮಾಡಬೇಕು ? ನಿನಗೇನು ತೋರುತ್ತದೆ ? ನಾನು ರಾಮನ ಬಳಿಗೆ ಬೇಗನೇ ಹೋಗಿ ನಿನ್ನ ಸಮಾಚಾರವನ್ನು ರಾಮನಿಗೆ ಹೇಳಬೇಕು. ನಿನ್ನ ವಿಷಯವಾಗಿ ಏನೆಂದು ಹೇಳಬೇಕೆಂಬುದನ್ನು ಸ್ಪಷ್ಟವಾಗಿ ನನ್ನೊಡನೆ ಹೇಳಬೇಕು" ಎಂದನು.

ಸೀತೆ ಹನುಮಂತನನ್ನು ವಾತ್ಸಲ್ಯದಿಂದ ನೋಡಿ, "ವಿಶಾಲವಾದ ಸಮುದ್ರವನ್ನು ದಾಟಿ, ರಾಕ್ಷಸರ ಕಣ್ಣು ತಪ್ಪಿಸಿಕೊಂಡು ಲಂಕೆಯಲ್ಲಿ ತಿರುಗುತ್ತಿರುವ ನಿನ್ನ ಪ್ರಜ್ಞೆ ಬಹಳ ದೊಡ್ಡದು. ನನಗೆ ರಾವಣನು ಇಟ್ಟಿರುವ ಕಾಲಗಡು ಮುಗಿಯುವುದರೊಳಗೆ ರಾಮನು ಇಲ್ಲಿಗೆ ಬರಬೇಕೆಂದು ಹೇಳು. ರಾವಣನ ತಮ್ಮನಾದ ವಿಭೀಷಣನು ನನ್ನನ್ನು ರಾಮನಿಗೆ ಹಿಂದಿರುಗಿಸುವುದೇ ಒಳ್ಳೆಯದೆಂದು ಬುದ್ಧಿ ಹೇಳಿದರೂ ರಾವಣನು ಕೇಳಲಿಲ್ಲವಂತೆ. ವಿಭೀಷಣನ ಮಗಳು ನಳಾ ಎಂಬುವಳು, ತಾಯಿಯ ಪ್ರೇರಣೆಯಿಂದ ನನ್ನ ಹತ್ತಿರ ಬಂದು ಈ ಸಂಗತಿ ರಹಸ್ಯವಾಗಿ ನನಗೆ ಹೇಳಿದಳು" ಎಂದಳು.

ಹನುಮಂತನು ಸೀತೆಯೊಂದಿಗೆ, "ನಾನೀಗ ಹೋಗಿ ಈ ಮಾತನ್ನು ರಾಮನಿಗೆ ಹೇಳುತ್ತೇನೆ. ಆ ಕೂಡಲೇ ರಾಮನು ಅಪರಿಮಿತ ವಾನರಭಲ್ಲೂಕ ಸೇನೆಯನ್ನು ಕರೆದುಕೊಂಡು ಇಲ್ಲಿಗೆ ಬಂದು ಬಿಡುವನು. ಹಾಗಿಲ್ಲದಿದ್ದರೆ ಒಂದು ಕೆಲಸ ಮಾಡಬಹುದು. ನೀನು ನನ್ನ ಹೆಗಲಲ್ಲಿ ಕುಳಿತುಬಿಟ್ಟರೆ ನಾನು ಸಮುದ್ರವನ್ನು ದಾಟಿ ನಿನ್ನನ್ನು ಭದ್ರವಾಗಿ ರಾಮನ ಬಳಿಗೆ ಕರೆದೊಯ್ಯಬಲ್ಲೆ. ಇದರಲ್ಲೇನೂ ಸಂದೇಹಪಡಬೇಡ. ಬೇಕಾದರೆ ಈ ರಾವಣನೊಂದಿ



ಲಂಕೆಯನ್ನೇ ಕಿತ್ತು ಎತ್ತಿಕೊಂಡು ಹೋಗಬಲ್ಲೆ. ಹಾಗೆ ಮಾಡಿದರೆ ಬಹು ಬೇಗದಲ್ಲಿ ನಿನಗೆ ರಾಮನು ಕಾಣುವನು" ಎಂದನು.

"ಇಷ್ಟು ಸಣ್ಣ ಶರೀರದವನಾದ ನೀನು ನನ್ನನ್ನು ಅಷ್ಟೊಂದು ದೂರದವರೆಗೆ ಎತ್ತಿಕೊಂಡು ಸಮುದ್ರದ ಮೇಲೆ ಆಕಾಶದಲ್ಲಿ ಹೋಗುವೆನೆನ್ನುವೆಯಲ್ಲಾ! ಹನುಮಂತಾ, ಅದುದರಿಂದಲೇ ನೀನು ಕೋತಿಯಾಗಿರುವೆಯೇನೋ!" ಎಂದಳು ಸೀತೆ.

ತನ್ನ ಶಕ್ತಿ ಸಾಮರ್ಥ್ಯಗಳು ಎಷ್ಟೆಂಬುದು ತಿಳಿಯದೆ ಸೀತೆ ಹೀಗೆ ಹೇಳುವಳೆಂದು ತಿಳಿದು ಹನುಮಂತನು ತನ್ನ ನಿಜರೂಪವನ್ನು ಅವಳಿಗೆ ತೋರಿಸಲೆಳಸಿದನು. ಅವನು ಸ್ವಲ್ಪ ದೂರ ಸರಿದು, ತನ್ನ ದೇಹವನ್ನು ಬೆಳಸತೊಡಗಿದನು. ಪರ್ವತದಂತಹ ಅವನ ಬೃಹದಾಕಾರವನ್ನು, ಕೆಂಪಗಿನ ಮುಖವನ್ನು, ಕೋರೆಹಲ್ಲು, ಮೊನಚಾದ ಉಗುರುಗಳನ್ನೆಲ್ಲ ನೋಡಿ ಸೀತೆ, "ಇವನು ನಿಜವಾಗಿಯೂ ಲಂಕೆಯನ್ನೆಬ್ಬಿಸಿ ಹಾರಿಹೋಗಬಲ್ಲವನೇ ಹೌದು" ಎಂದುಕೊಂಡಳು.

ಆಗ ಹನುಮಂತನು ಅವಳನ್ನು ನೋಡಿ, "ಸೀತಾದೇವಿ, ಅನುಮಾನ ಪಡಬೇಡ. ತಡಮಾಡದೆ ಹೊರಡು. ರಾಮಲಕ್ಷ್ಮಣರ ದುಃಖವನ್ನು ಹೋಗಲಾಡಿಸು" ಎಂದನು.

"ಹನುಮಂತಾ, ನಿನ್ನ ಶಕ್ತಿ ಸಾಮರ್ಥ್ಯಗಳು ಚೆನ್ನಾಗಿ ನನಗೆ ಗೊತ್ತಾಯಿತು. ನೀನು ನನ್ನನ್ನು ಎತ್ತಿಕೊಂಡುಹೋದರೆ ಯಾವ ರಾಕ್ಷಸರೂ ನಿನಗೆ ಅಡ್ಡಬರಲಾರರು. ಅದೆಲ್ಲ ನಿಜ. ಆದರೆ ರಾಮನ ಕೆಲಸವು ಇದರಿಂದ ಹಾಳಾಗುವ ಸಂಭವವಿದೆ. [illegible]ಗಾಗುವ ಕೆಲಸ ನಾವು ಮಾಡಬಾರದು. ನಾನು ನಿನ್ನೊಂದಿಗೆ ಬರುವುದು ತಪ್ಪು ಕೆಲಸವಾಗುತ್ತದೆ. ನೀನು ವಾಯುವೇಗದಿಂದ ಹೋಗುವಾಗ ನಾನು ಹೆದರಿ ನಡುಗಬಹುದು. ಸಮುದ್ರವನ್ನು ನೋಡಿ ಕಣ್ಣು ತಿರುಗಿ ಅದರಲ್ಲಿ ಬಿದ್ದುಹೋಗಲೂಬಹುದು. ನೀನು ಎಷ್ಟೇ ದೊಡ್ಡ ವೀರನಾದರೂ, ನನ್ನ ರಕ್ಷಣೆಯ ಬಾಧ್ಯತೆಯೊಂದು ನಿನ್ನ ಮೇಲಿರುವುದರಿಂದ, ನಿನಗೂ ಅಪಾಯ ಬರಬಹುದು. ನಿನ್ನನ್ನು ನೋಡಿ ರಾಕ್ಷಸರು ಬೆಂಬತ್ತಿ, ನಿನ್ನ ಮೇಲೆ ಯುದ್ಧವನ್ನು ಪ್ರಾರಂಭಿಸಿದಾಗ, ನಾನು ಕೆಳಗೆ ಬಿದ್ದು ರಾಕ್ಷಸರ ಕೈಗೆ ಸಿಕ್ಕಬಹುದು. ಆಗ ಇಷ್ಟರವರೆಗೆ ನೀನು ಮಾಡಿದ ಸಾಹಸವೂ ಶ್ರಮವೂ ವ್ಯರ್ಥವಾಗುತ್ತದೆ. ಅದಕ್ಕಿಂತ ನೀನು ಹೋಗಿ ರಾಮನಿಗೆ ನನ್ನ ಸಂಗತಿಯನ್ನೆಲ್ಲ ಹೇಳಿ, ಆತನನ್ನೇ ಕರೆದುಕೊಂಡು ಬರುವುದು ಎಲ್ಲದಕ್ಕಿಂತಲೂ ಮೇಲು. ಇದೆಲ್ಲಾ ಹಾಗಿರಲಿ, ನಾನು ಪರಪುರುಷನನ್ನು ಮುಟ್ಟುವವಳಲ್ಲ. ರಾವಣನು ನನ್ನನ್ನು ಬಲಾತ್ಕಾರದಿಂದ ತರುವಾಗ ನಾನು ನಿಸ್ಸಹಾಯಳಾಗಿದ್ದು ಏನೂ ಮಾಡಲಾರದೆಹೋದೆ." ಎಂದು ಸೀತೆ ಹನುಮಂತನಿಗೆ ತಿಳಿಯಹೇಳಿದಳು.

ಸೀತೆ ಹೇಳಿದ ಮಾತುಗಳೆಲ್ಲಾ ಯುಕ್ತವಾದು



ದೆಂದು ಹನುಮಂತನು ಒಪ್ಪಿಕೊಂಡನು. ಕಡೆಗೆ ಅವನು ಸೀತೆಯೊಂದಿಗೆ, ರಾಮನಿಗೆ ತೋರಿಸಲು ಏನಾದರೂ ಗುರುತು ಕೊಡುವಂತೆ ಕೇಳಿದನು. ಆಗ ಸೀತೆ ಹೀಗೆಂದಳು:

"ಹನುಮಂತಾ, ಹಿಂದೆ ನಡೆದ ಒಂದು ಘಟನೆಯನ್ನು ಹೇಳುತ್ತೇನೆ. ಅದನ್ನು ರಾಮನೊಂದಿಗೆ ಹೇಳು. ನಾನೂ ರಾಮನೂ ಗಂಗಾನದಿಯ ತೀರದಲ್ಲಿರುವ ಚಿತ್ರಕೂಟ ಪರ್ವತಕ್ಕೆ ಈಶಾನ್ಯ ದಿಕ್ಕಿನ ಒಂದು ಆಶ್ರಮದಲ್ಲಿರುವಾಗ ಒಂದುದಿನ ರಾಮನು ನನ್ನ ತೊಡೆಯ ಮೇಲೆ ತಲೆಯಿಟ್ಟುಕೊಂಡು ನಿದ್ದೆ ಮಾಡುತ್ತಿದ್ದ. ಆಗ ಒಂದು ಕಾಗೆ ಬಂದು ನನ್ನ ಎದೆಯನ್ನು ತಿವಿದು ಗಾಯಮಾಡಿತು. ನನ್ನ ರಕ್ತದಿಂದ ರಾಮನ ಭುಜವು ಒದ್ದೆಯಾಯಿತು. ಅವನು ಎಚ್ಚೆತ್ತು ನನ್ನ ರಕ್ತವನ್ನು ನೋಡಿ ಮಹಾಕೋಪದಿಂದ ಒಂದು ದರ್ಭೆಯನ್ನು ಎತ್ತಿ ಬ್ರಹ್ಮಾಸ್ತ್ರವನ್ನು ಮಂತ್ರಿಸಿ ಆ ಕಾಗೆಯ ಮೇಲೆ ಪ್ರಯೋಗಿಸಿದನು. ಆ ಬ್ರಹ್ಮಾಸ್ತ್ರವು ಕಾಗೆಯನ್ನು ಓಡಿಸಿಕೊಂಡು ಸಮಸ್ತ ಲೋಕಗಳನ್ನೂ ಸುತ್ತಾಡಿಸಿತು. ಇಂದ್ರನ ಮಗನಾದ ಆ ಕಾಗೆಗೆ ಎಲ್ಲಿಯೂ ರಕ್ಷಣೆ ದೊರೆಯಲಿಲ್ಲ. ಕಡೆಗೆ ಅದು ರಾಮನ ಕಾಲಿನ ಮೇಲೆ ಬಿದ್ದು ರಕ್ಷಿಸೆಂದು ಹೊರಳಾಡಿತು. ಬ್ರಹ್ಮಾಸ್ತ್ರವನ್ನು ವ್ಯರ್ಥಗೊಳಿಸಲು ಸಾಧ್ಯವಿರಲಿಲ್ಲ. ಆದುದರಿಂದ ಕಾಗೆ ತನ್ನ ಬಲದ ಕಣ್ಣನ್ನು ಆ ಬ್ರಹ್ಮಾಸ್ತ್ರಕ್ಕೆ ಬಲಿಕೊಟ್ಟು, ಅಲ್ಲಿಂದ ಹೊರಟುಹೋಯಿತು. ಅಂತಹ ಶಕ್ತಿಯುಳ್ಳ ರಾಮನು ಶತ್ರುಗಳನ್ನು ನಾಶಮಾಡಿ ನನ್ನ ಕಷ್ಟಗಳನ್ನು ಏಕೆ ತೀರಿಸುವುದಿಲ್ಲ? ನಾನೇನು ಪಾಪ ಮಾಡಿದೆ? ರಾಮನು ಮನಸ್ಸು ಮಾಡಿದರೆ ರಾವನನ್ನು ಕೊಲ್ಲುವುದೊಂದು ಲೆಕ್ಕವೆ? ಇದನ್ನೇ ರಾಮನೊಂದಿಗೆ ಹೇಳಪ್ಪ."

ಇಷ್ಟು ಹೇಳಿ ಮುಗಿಸುವಾಗ ಸೀತೆಯ ಕಣ್ಣುಗಳಿಂದ ನೀರಿಳಿಯಿತು. ಹನುಮಂತನು ಅವಳಿಗೆ ಸಮಾಧಾನವಾಗುವ ಮಾತುಗಳನ್ನು ಹೇಳಿದನು.

"ಅಮ್ಮಾ, ರಾಮನು ಪರಿಪೂರ್ಣ ದುಃಖಮೂರ್ತಿಯಾಗಿದ್ದಾನೆ. ನಾನು ಬಹಳ ಪ್ರಯಾಸಪಟ್ಟು ನಿನ್ನನ್ನು ನೋಡಿದೆ. ಇಂತಹ ಒಳ್ಳೆಯ ಸಮಯದಲ್ಲಿ ನೀನು ಸಂತೋಷಪಡಬೇಕೇ ಹೊರತು ದುಃಖಿಸಬಾರದು. ರಾಮನು ಬೇಗದಲ್ಲೇ ಬಂದು ರಾವಣನನ್ನು ಸಪರಿವಾರವಾಗಿ ಕೊಂದು ನಿನ್ನನ್ನು ಕೂಡಿಕೊಂಡು ಅಯೋಧ್ಯೆಗೆ ಹೋಗುತ್ತಾನೆ. ಇನ್ನು ಮುಂದೆ ಬರುವುದೆಲ್ಲ ನಿನಗೆ ಒಳ್ಳೆಯ ಕಾಲವೆಂದು ನಂಬು" ಎಂದ ಹನುಮಂತ.


ಸೀತೆ ಹನುಮಂತನೊಂದಿಗೆ, "ಹನುಮಂತಾ, ನೀನು ರಾಮನನ್ನು ನೋಡಿದ ಕೂಡಲೇ ನನಗೆ ಬದಲಾಗಿ ಸಾಷ್ಟಾಂಗ ನಮಸ್ಕಾರ ಮಾಡು. ಲಕ್ಷ್ಮಣನು ಅತ್ಯುತ್ತಮನಾದವನು. ಸಮಸ್ತವನ್ನೂ ತ್ಯಾಗಮಾಡಿ ರಾಮನ ಹಿಂದೆ ಆರಣ್ಯಕ್ಕೆ ಬಂದವನು. ಅವನ ಕ್ಷೇಮವನ್ನು ಕೇಳಿದೆನೆಂದು ಹೇಳು. ಈ

ಚೂಡಾಮಣಿಯನ್ನು ರಾಮನಿಗೆ ಕೊಡು" ಎಂದು ಹೇಳಿ, ತನ್ನ ಸೆರಗಿನಲ್ಲಿ ಕಟ್ಟಿಕೊಂಡಿದ್ದ ಚೂಡಾಮಣಿಯನ್ನು ತೆಗೆದು ಹನುಮಂತನಿಗೆ ಕೊಟ್ಟಳು.

ಹನುಮಂತನು ಚಿಕ್ಕ ರೂಪದಲ್ಲಿದ್ದರೂ, ತಲೆ ಕೂದಲು ತೂರುವಂತಹ ಚೂಡಾಮಣಿಯ ರಂಧ್ರದೊಳಗೆ ಅವನ ಕೈ ತೂರಲಿಲ್ಲ. ಆದುದರಿಂದ ಅವನು ಅದನ್ನು ತನ್ನ ಬೆರಳಿಗೆ ತಗಲಿಸಿಕೊಂಡು ಸೀತೆಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಹೊರಡಲು ಸಿದ್ಧನಾಗಿ ನಿಂತನು.

"ಹನುಮಂತಾ, ರಾಮನು ಈ ಚೂಡಾಮಣಿಯನ್ನು ನೋಡಿದ ಕೂಡಲೇ ನನ್ನ ತಾಯಿಯನ್ನು, ನನ್ನನ್ನು, ದಶರಥನನ್ನೂ ಜ್ಞಾಪಿಸಿಕೊಳ್ಳುತ್ತಾನೆ. ಇನ್ನು ಮುಂದೆ ನಡೆಯುವಂತಹುದೆಲ್ಲವೂ ನಿನ್ನನ್ನೇ ಅವಲಂಬಿಸಿಕೊಂಡಿದೆ. ನನ್ನ ದುಃಖವು ತೀರುವ ಮಾರ್ಗವನ್ನು ನೀನೇ ಆಲೋಚಿಸಿ ಮಾಡಬೇಕಾದುದನ್ನು ಮಾಡಬೇಕಪ್ಪಾ" ಎಂದಳು ಸೀತೆ. ಅವಳು ಸುಗ್ರೀವನನ್ನೂ, ಅವನ ಮಂತ್ರಿಗಳನ್ನೂ, ವಾನರ ಶ್ರೇಷ್ಠರನ್ನೂ, ಕುಶಲ ವಿಚಾರಿಸಿದುದಾಗಿಯೂ ಹನುಮಂತನೊಂದಿಗೆ ಹೇಳಿದಳು. ಹೀಗೆ ಹೇಳುವಾಗ ಅವಳಿಗೊಂದು ಸಂದೇಹ ಬರಲಾರಂಭವಾಯಿತು: "ಹನುಮಂತಾ, ನೀನೊಬ್ಬನೇನೋ ಈ ಸಮುದ್ರವನ್ನು ಹಾರಿ ಹೇಗೋ ಬಂದುಬಿಟ್ಟೆ. ರಾಮಲಕ್ಷ್ಮಣರೂ, ಇತರ ಸೇನೆಗಳೂ ಇಲ್ಲಿಗೆ ಬರುವ ಬಗೆ ಹೇಗೆ? ಈ ರಾಕ್ಷಸರ ರಾಜನಾದ ರಾವಣನೊಂದಿಗೆ ಯಾವ ರೀತಿಯಾಗಿ ಯುದ್ಧ ಮಾಡುವರು? ನೀನೊಬ್ಬನೇ ಯುದ್ಧ ಮಾಡಿ ರಾವಣನನ್ನು ಕೊಂದುಬಿಟ್ಟರೆ ರಾಮನಿಗೂ ನನಗೂ ಏನು ಹೆಸರು ಬಂದೀತು?" ಎಂದು ಕೇಳಿದಳು.

ಅದಕ್ಕೆ ಹನುಮಂತನು, "ಸೀತಾದೇವಿ, ವಾನರ ಭಲ್ಲೂಕ ಸೈನ್ಯಗಳಿಗೆಲ್ಲ ಅಧಿಪತಿಯಾದ ಸುಗ್ರೀವನು ಮನಸ್ಸು ಮಾಡಿದರೆ ಏನಾದರೂ ಮಾಡಬಲ್ಲನು. ಅವನ ಸೇನೆಯಲ್ಲಿ ನನಗೆ ಸಮಾನರಾದವರೂ ನನ್ನನ್ನು ಮೀರಿಸುವವರೂ ಎಷ್ಟೋ ಮಂದಿ ಇದ್ದಾರೆ. ಯಾವ ಸಂದೇಹವೂ ಬೇಡ. ಸಾಮಾನ್ಯ





ದೂತನಾದ ನಾನೇ ಸಮುದ್ರವನ್ನು ದಾಟಿರುವಾಗ ಅವರು ದಾಟುವುದೊಂದು ಲೆಕ್ಕವೆ? ಆದುದರಿಂದ ನೀನೇನೂ ಚಿಂತಿಸಬೇಡಮ್ಮ. ನಿನಗೆ ಕ್ಷೇಮವಾಗಲಿ" ಎಂದು ಹೇಳಿ ಸೀತೆಯಿಂದ ಅನುಜ್ಞೆ ಪಡೆದು ಅಲ್ಲಿಂದ ಹೊರಟನು.


ಸ್ವಲ್ಪ ದೂರ ಹೋದ ಅವನು ತನ್ನಲ್ಲಿ, "ಸೀತೆಯನ್ನು ನೋಡಿದೆ. ಆದರೆ ಇನ್ನೊಂದು ಸಣ್ಣ ಕೆಲಸ ಉಳಿದುಬಿಟ್ಟಿದೆ. ಇದು ಶೌರ್ಯಪರಾಕ್ರಮಗಳಿಂದ ನಡೆಯಬೇಕಾಗಿದೆ. ಕೆಲ ಮಂದಿ ರಾಕ್ಷಸರನ್ನು ಕೊಂದು ಹಾಕಿದ ಹೊರತು ಉಳಿದ ರಾಕ್ಷಸರು ಮೆತ್ತಗಾಗಲಾರರು. ರಾಕ್ಷಸರು ಹೇಗೆ ಯುದ್ಧ ಮಾಡುವರೋ ಅವರ ಶಕ್ತಿಸಾಮರ್ಥ್ಯಗಳು ಎಷ್ಟರ ಮಟ್ಟಿನದೋ ನೋಡಿ ಆಮೇಲೆ ಕಿಷ್ಕಿಂಧೆಗೆ ಹೋಗಬೇಕು. ಈಗ ಈ ರಾಕ್ಷಸರು ಯುದ್ಧಕ್ಕೆ ಬರುವ ಹಾಗೆ ಮಾಡಲು ಸುಲಭವಾದ ಮಾರ್ಗ ಯಾವುದು? ಎಂದು ಆಲೋಚನೆಗೆ ತೊಡಗಿದನು.

ಅವನ ಕಣ್ಣುಗಳು ತಿರುತಿರುಗಿ ಅದ್ಭುತವಾದ ಅಶೋಕವನವನ್ನು ನೋಡತೊಡಗಿದುವು. ಅಶೋಕವನವು ಅತ್ಯಂತ ಸುಂದರವಾಗಿದೆ. ಇದು ಇಂದ್ರನ ವನದೊಂದಿಗೆ ಸ್ಪರ್ಧಿಸುವಂತಿದೆ. ಇದು ರಾವಣನಿಗೆ ಬಹಳ ಇಷ್ಟವಾದ ಪ್ರದೇಶವೇ ಇರಬೇಕು. ಇದನ್ನು ತಾನು ಧ್ವಂಸಮಾಡಿಬಿಟ್ಟರೆ ರಾವಣನಿಗೆ ಖಂಡಿತ ಕೋಪ ಬರುತ್ತದೆ. ಅವನು ತನ್ನನ್ನು ನಿಗ್ರಹಿಸಲು ರಾಕ್ಷಸಸೇನೆಯನ್ನು ಕಳುಹಿಸುತ್ತಾನೆ. ತಾನು ಆ ರಾಕ್ಷಸರನ್ನೆಲ್ಲಕೊಂದು, ನಿಶ್ಚಿಂತೆಯಿಂದ ಕಿಷ್ಕಿಂಧೆಗೆ ಹೋಗಿ ಹೆಚ್ಚಿನ ವಿವರವನ್ನು ಕೂಡಾ ರಾಮ ಸುಗ್ರೀವರಿಗೆ ಹೇಳಬಹುದು.

ಹೀಗೆ ಆಲೋಚನೆ ಮಾಡಿ ಹನುಮಂತನು ಅಶೋಕವನದಲ್ಲಿರುವ ಮರಗಳನ್ನು ಆಚೆಗೂ ಈಚೆಗೂ ಉರುಳಿಸತೊಡಗಿದನು. ಅಕಸ್ಮಾತ್ ಬಿರುಗಾಳಿ ತೊಡಗಿದಂತಾಯಿತು. ಅಂದವಾದ ಕೊಳಕಟ್ಟೆಗಳನ್ನು ಒಡೆದನು. ಕ್ರೀಡಾಪರ್ವತಗಳ ಶಿಖರಗಳನ್ನು ಒದ್ದು ಆಕಾಶಕ್ಕೆ ಹಾರಿಸಿದನು. ಸ್ವಲ್ಪ ಹೊತ್ತಿನೊಳಗೆ ಅಶೋಕವನವು ಬೀಭತ್ಸ ರೂಪವನ್ನು ತಳೆಯಿತು.

ಮರಗಳ ಮೇಲಿದ್ದ ಪಕ್ಷಿಗಳು ಆರ್ತನಾದ ಮಾಡತೊಡಗಿದವು. ಎಲ್ಲಿ ನೋಡಿದರೂ ಮುರಿದುಬಿದ್ದ ಮರಗಳು; ಹರಿದು ಬಿದ್ದ ಲತೆಗಳು, ಚೆಲ್ಲಾಪಿಲ್ಲಿಯಾದ ಹೂಗಳು, ಜರಿದುಹೋದ ಗೋಡೆಗಳು, ಉರುಳಿಹೋದ ಶಿಖರಗಳು. ಹೀಗೆ ಅಶೋಕವನವು ಪಾಳುಬಿದ್ದಿತು. ವನದೇವತೆಯೇ ಅಳುತ್ತಿರುವಂತೆ ತೋರಿತು. ಸ್ವಲ್ಪಹೊತ್ತಿನೊಳಗಾಗಿಯೇ ಇಷ್ಟೆಲ್ಲ ಮಾಡಿದ ಮೇಲೆ ಹನುಮಂತನು ಹೊರಗಿನ ದ್ವಾರದ ಹತ್ತಿರ ನಿಂತುಕೊಂಡು, ರಾಕ್ಷಸರ ಬರುವಿಕೆಯನ್ನು ಕಾಯತೊಡಗಿದನು.

ಮರಗಳು ಮುರಿದು ಬೀಳುವ ಸಪ್ಪಳ, ಪಕ್ಷಿಗಳ ಆರ್ತನಾದ ರಾಕ್ಷಸರ ಕಿವಿಗೂ ಬಿದ್ದಿತ್ತು. ಬಹು



ದೂರದಲ್ಲಿರುವ ರಾಕ್ಷಸರಿಗೂ ಕೇಳಿಸಿತು. ಅದುವರೆಗೆ ನಿದ್ದೆ ಮಾಡಿಕೊಂಡಿದ್ದ ಕಾವಲಿನ ರಾಕ್ಷಸ ಸ್ತ್ರೀಯರು, ಆ ಧ್ವನಿಗೆ ಎಚ್ಚರಗೊಂಡು, ಪರ್ವತದಂತೆ ಬೆಳೆದ ದೇಹದಿಂದ ವನವನ್ನು ಧ್ವಂಸ ಮಾಡುತ್ತಿರುವ ಹನುಮಂತನನ್ನು ನೋಡಿದರು. ಅವರು ತನ್ನನ್ನು ನೋಡುವುದನ್ನು ಕಂಡು, ಹನುಮಂತನು ಅವರು ಇನ್ನಿಷ್ಟು ಹೆದರುವಂತೆ ತನ್ನ ದೇಹವನ್ನು ಇನ್ನಿಷ್ಟು ಬೆಳೆಸಿದನು.


ಅದನ್ನು ನೋಡಿ ರಾಕ್ಷಸ ಸ್ತ್ರೀಯರು ಸೀತೆಯ ಬಳಿಗೆ ಹೋಗಿ, "ಇವನು ಯಾರು ? ಈ ಅಶೋಕವನಕ್ಕೆ ಏಕೆ ಬಂದ ? ಯಾರು ಕಳುಹಿಸಿದರು ? ನಿನ್ನೊಡನೆ ಏನು ಮಾತನಾಡಿದ ? ನೀನೇನೂ ಹೆದರದೆ ನಮ್ಮೊಡನೆ ನಿಜ ಹೇಳು" ಎಂದರು.

"ನಾನೇನು ಬಲ್ಲೆ ? ರಾಕ್ಷಸರು ಬಗೆಬಗೆಯ ರೂಪಗಳನ್ನು ಧರಿಸುತ್ತಾರೆ. ನನಗೆ ಅವರ ಸಂಗತಿ ಹೇಗೆ ತಿಳಿಯುತ್ತದೆ ? ಹಾವಿನ ಕಾಲು ಹಾವಿಗೇ ಗೊತ್ತು. ನೀವೂ ರಾಕ್ಷಸರೇ ಆದುದರಿಂದ ರಾಕ್ಷಸರ ಮಾಯೆಗಳೆಲ್ಲ ನಿಮಗೇ ತಿಳಿಯಬೇಕು. ಈ ವಾನರನು ಯಾವನೋ, ಏನು ಮಾಡುತ್ತಾನೋ ನೀವೇ ತಿಳಿದುಕೊಳ್ಳಿರಿ. ಇವನನ್ನು ನೋಡುವಾಗ ನನಗೂ ಭಯವಾಗುತ್ತದೆ. ಹೇಳಿರಿ, ಇವನು ಯಾರು ?" ಎಂದಳು ಸೀತೆ.

ಸೀತೆ ಹೀಗೆ ಹೇಳಿದ ಕೂಡಲೇ ರಾಕ್ಷಸರೆಲ್ಲ ಹೆದರಿದರು. ಕೆಲವರು ಸೀತೆಗೆ ರಕ್ಷಣೆಯಾಗಿ ಅಲ್ಲಿ ಕುಳಿತರು. ಕೆಲವರು ಭಯದಿಂದ ಓಡಿಹೋದರು. ಮತ್ತೆ ಕೆಲವರು ಈ ಸಂಗತಿಯನ್ನು ರಾವಣನಿಗೆ ಹೇಳಲು ಧಾವಿಸಿದರು.

ಉಸಿರು ಬಿಗಿಹಿಡಿದು ಧಾವಿಸಿ ಬಂದ ರಾಕ್ಷಸ ಸ್ತ್ರೀಯರು ರಾವಣನ ಮುಂದೆ ಹೋಗಿ, "ಮಹಾಪ್ರಭುವೇ, ರಾಕ್ಷಸೇಶ್ವರಾ ! ಯಾವನೋ ಭಯಂಕರಾಕಾರದ ಮಹಾಬಲವಂತನೊಬ್ಬ ಬಂದು ಸೀತೆಯೊಂದಿಗೆ ಮಾತನಾಡಿದನೆಂದು ಕಾಣುತ್ತದೆ. ಅಶೋಕವನದಲ್ಲಿದ್ದಾನೆ. ಎಷ್ಟು ಕೇಳಿದರೂ ಸೀತೆ ಅವನ ಸಂಗತಿ ಹೇಳುವುದಿಲ್ಲ. ನೋಡಿದರೆ ವಾನರನಾಗಿ ಕಾಣುವ ಆ ಬಲಿಷ್ಠನು ದೇವೇಂದ್ರನ ದೂತನೋ ಕುಬೇರನ ದೂತನೋ ರಾಮನ ದೂತನೋ ಗೊತ್ತಾಗುವುದಿಲ್ಲ. ಅವನು ಮಾತ್ರ ಅಶೋಕವನವನ್ನು ಧ್ವಂಸ ಮಾಡುತ್ತಿದ್ದಾನೆ. ಸೀತೆ ಕುಳಿತಿದ್ದ ಒಂದು ಮರದ ಹೊರತು ಉಳಿದೆಲ್ಲಾ ಮರಗಳನ್ನು ಉರುಳಿಸಿ ಹಾಕಿದ್ದಾನೆ. ಆದುದರಿಂದ ಸೀತೆಗೂ ಅವನಿಗೂ ಏನೋ ಸಂಬಂಧ ವಿರಲೇಬೇಕು. ಆ ದುಷ್ಟ ವಾನರನನ್ನು ನೀನು ಕಠಿನವಾಗಿ ಶಿಕ್ಷಿಸಬೇಕು. ಸೀತೆಯೊಡನೆ ಮಾತಾಡಿದ್ದಕ್ಕೇ ನಾವು ಅವನನ್ನು ಕೊಲ್ಲಬಹುದು. ಬೇಗನೆ ಆಜ್ಞೆ ಮಾಡಬೇಕು" ಎಂದರು.





ವೀರಹನುಮಾನ್


Jan 1976

ರಾಕ್ಷಸ ಸ್ತ್ರೀಯರು ಅಂಜಿ ಗಾಬರಿಯಾಗಿ ಓಡಿ ಬಂದು ಹೇಳಿದ ಮಾತುಗಳನ್ನು ಕೇಳಿ ರಾವಣನಿಗೆ ಕೋಪ ಬಂದುಬಿಟ್ಟಿತು. ಕೂಡಲೇ ಅವನು ಬಲವಂತರಾಗಿ, ಯುದ್ಧದ ಕೆಚ್ಚಿನಿಂದ ಯಾವುದಕ್ಕೂ ತಯಾರಾದವರಾಗಿ ನಿಂತಿರುವ ರಾಕ್ಷಸರನ್ನು ನೋಡಿ, ಹೋಗಿ ಆ ತಂಟೆಗಾರ ವಾನರನನ್ನು ಹಿಡಿದುಕೊಂಡು ಬರುವಂತೆ ಆಜ್ಞೆ ಮಾಡಿದನು.

ಕೂಡಲೇ ಆ ರಾಕ್ಷಸರು ಬಗೆಬಗೆಯ ಆಯುಧಗಳನ್ನು ತೆಗೆದುಕೊಂಡು ರಭಸದಿಂದ ಹೊರಟರು. ಅಷ್ಟರೊಳಗೆ ಹನುಮಂತನು ಅಶೋಕವನದ ದ್ವಾರದ ಹತ್ತಿರವೇ ಗೋಚರಿಸಿದನು. ರಾಕ್ಷಸರ ಗುಂಪು ತನ್ನನ್ನು ಸುತ್ತಲೂ ಮುತ್ತಿದ ಕೂಡಲೇ ಮಹಾಕಾಯನಾದ ಹನುಮಂತನು, ತನ್ನ ಬಾಲದಿಂದ ನೆಲವನ್ನು ಹೊಡೆದು ಧೂಳೆಬ್ಬಿಸಿ, ಕರ್ಕಶವಾಗಿ ಕೂಗಿ, ಭುಜಗಳನ್ನು ತಟ್ಟಿಕೊಂಡನು. ಆ ಧ್ವನಿ ಸಿಡಿಲಿನ ಧ್ವನಿಯಂತೆ ಲಂಕೆಯೊಳಗೆಲ್ಲಾ ಕೇಳಿಸಿತು. ಆಮೇಲೆ ಹನುಮಂತನು ಸುತ್ತಲೂ ಇರುವ ರಾಕ್ಷಸರನ್ನು ನೋಡಿ ಈ ರೀತಿಯಾಗಿ ಕೂಗಿ ಹೇಳಿದನು:

"ರಾಮಲಕ್ಷ್ಮಣರಿಗೆ ಜಯವಾಗಲಿ! ಕೋಸಲದ ರಾಜನಾದ ರಾಮನ ದಾಸನು ನಾನು. ಶತ್ರುಗಳಿಗೆ ನಾಶಕಾರಕನು ನಾನು! ವಾಯುಪುತ್ರನಾದ ಹನುಮಂತನು ನಾನು! ಬರಿಗೈಯಿಂದಲೂ, ಬೇಕಾದರೆ ಮರಗಳಿಂದ, ಕಲ್ಲುಗಳಿಂದ ಯುದ್ಧ ಮಾಡಿದೆನೆಂದರೆ, ಸಾವಿರ ಮಂದಿ ರಾವಣರನ್ನು ಮಣ್ಣು ಮುಕ್ಕಿಸಬಲ್ಲೆ. ರಾಕ್ಷಸರೆಲ್ಲ ನೋಡುತ್ತಿದ್ದ ಹಾಗೆಯೇ ಲಂಕಾಪಟ್ಟಣವನ್ನೆಲ್ಲಾ ಧ್ವಂಸಮಾಡಿ, ಸೀತೆಗೆ ನಮಸ್ಕಾರ ಮಾಡಿ, ರಾಮನ ಬಳಿಗೆ ಹೋಗುತ್ತೇನೆ. ಇನ್ನು ಧೈರ್ಯವಿದ್ದವರು ಬನ್ನಿ!"

ಅವನ ಮಾತನ್ನು ಕೇಳಿ ರಾಕ್ಷಸ ಸೈನಿಕರಿಗೆ ದಿಗಿಲಾದರೂ, ರಾಜಾಜ್ಞೆಯಂತೆ ಯುದ್ಧ ಮಾಡಲಿಕ್ಕೆ ನಿರ್ಣಯಿಸಿ ಹನುಮಂತನ ಮೇಲೆ ಅನೇಕ ಆಯುಧಗಳನ್ನು ಪ್ರಯೋಗಿಸತೊಡಗಿದರು. ಹನುಮಂತನು ಆ ದ್ವಾರದ ಪಕ್ಕದಲ್ಲಿದ್ದ ಭಾರಿಯಾದೊಂದು ಕಬ್ಬಿಣದ ಪರಿಘವನ್ನು ಎತ್ತಿಕೊಂಡು ಮುಂಗಿಬಿದ್ದ



ರಾಕ್ಷಸರನ್ನೆಲ್ಲಾ ಸದೆಬಡಿದು ಕೊಂದು, ಮತ್ತೆ ಯಾರೂ ಇಲ್ಲದಿರಲು, ಅದೇ ದ್ವಾರದ ಬಳಿಯಲ್ಲಿ ಸುಮ್ಮನೆ ನಿಂತನು.

ಬದುಕಿ ಓಡಿಹೋದ ಕೆಲಮಂದಿ ರಾಕ್ಷಸರು ರಾವಣನೊಂದಿಗೆ, ಸೈನಿಕರೆಲ್ಲಾ ಹನುಮಂತನ ಕೈಯಲ್ಲಿ ಸತ್ತುಹೋದ ಸಮಾಚಾರ ಹೇಳಿದರು. ಅದನ್ನು ಕೇಳಿ ರಾವಣನು ಇನ್ನಿಷ್ಟು ಕೋಪದಿಂದ ಹನುಮಂತನ ಮೇಲೆ ಏರಿಹೋಗಲು ಮಹಾವೀರನಾದ ಪ್ರಹಸ್ತನ ಮಗನನ್ನು ಕಳುಹಿಸಿದನು.

ಇಷ್ಟರಲ್ಲಿ ಹನುಮಂತನ ದೃಷ್ಟಿ ಚೈತ್ಯಪ್ರಾಸಾದದ ಮೇಲೆ ಬಿದ್ದಿತು. ಅದನ್ನು ಏಕೆ ಧ್ವಂಸಮಾಡಬಾರದೆಂದುಕೊಂಡು, ಅದರ ಮೇಲಕ್ಕೆ ಹಾರಿ ಅದನ್ನೆಲ್ಲ ಒಡೆದು ಕಿತ್ತು, ಆಚೀಚೆ ಬಿಸುಟು ನಾಶಮಾಡಿ ಸಿಂಹನಾದ ಮಾಡಿದನು. ಆಗ ಅದನ್ನು ರಕ್ಷಿಸಲು ರಕ್ಷಕಭಟರು ಆಯುಧಗಳೊಂದಿಗೆ ಬಂದರು. ಹನುಮಂತನು ಒಂದು ಸ್ತಂಭವನ್ನು ಕಿತ್ತು, ಅದನ್ನು ಗಿರಗಿರನೆ ತಿರುಗಿಸಿ ನಿಮಿಷಮಾತ್ರದಲ್ಲಿ ನೂರು ಮಂದಿ ರಾಕ್ಷಸರನ್ನು ಭಿನ್ನಭಿನ್ನ ಮಾಡಿ ಕೊಂದನು.

ಅದೇ ಸಮಯದಲ್ಲಿ ಪ್ರಹಸ್ತನ ಮಗನಾದ ಜಂಬುಮಾಲಿ ಬಿಲ್ಲುಬಾಣಗಳನ್ನೆತ್ತಿಕೊಂಡು, ಕತ್ತೆಗಳಿಂದ ಎಳೆಯಲ್ಪಡುವ ರಥದ ಮೇಲೆ ಸಿಡಿಲಿನಂತಹ ಶಬ್ದದಿಂದ ಹನುಮಂತನ ಇದಿರಿಗೆ ಬಂದನು. ಅವನನ್ನು ನೋಡಿದ ಕೂಡಲೇ ಹನುಮಂತನು ಯುದ್ಧೋತ್ಸಾಹದಿಂದ ಸಿಂಹನಾದ ಮಾಡಿ ಭುಜಗಳನ್ನು ಅಪ್ಪಳಿಸಿಕೊಂಡನು.

ದ್ವಾರದ ಮೇಲಿನ ಭಾರಿ ತೊಲೆಯ ಮೇಲೆ ಕುಳಿತಿದ್ದ ಹನುಮಂತನ ಮೇಲೆ ಜಂಬುಮಾಲಿ ಬಾಣಗಳ ಮಳೆಯನ್ನೇ ಕರೆದನು. ಅವುಗಳು ಹನುಮಂತನ ಮುಖ, ಹಣೆ, ಕೈಗಳಿಗೆಲ್ಲ ತಗಲಿ ಪುಟಿದ ರಕ್ತದಿಂದಾಗಿ ಹನುಮಂತನು ಇನ್ನಿಷ್ಟು ಕೆಂಪಗೆ ಕಾಣಿಸತೊಡಗಿದನು. ಅವನು ತನ್ನ ಕೈಗೆ ಸಿಕ್ಕಿದ ದೊಡ್ಡದೊಂದು ಕಲ್ಲನ್ನೆತ್ತಿ ಜಂಬುಮಾಲಿಯ ಮೇಲೆ ಜೋರಾಗಿ ಬಿಸುಟನು. ಆದರೆ ಜಂಬುಮಾಲಿ ಆ ಕಲ್ಲನ್ನು ಬಾಣಗಳಿಂದ ಹೊಡೆದುರುಳಿಸಿ, ಅದರ ಬೆನ್ನಿಗೆ ಹನುಮಂತನು ಬೀಸಿದ ಸಾಲವೃಕ್ಷವನ್ನು ಕೂಡಾ ಬಾಣಗಳಿಂದ ಖಂಡಿಸಿ ಹಾಕಿ, ಮತ್ತೆ ಕೆಲವು ಬಾಣಗಳಿಂದ ಹನುಮಂತನನ್ನೂ ಹೊಡೆದನು. ಹನುಮಂತನು ಅದನ್ನು ಲಕ್ಷ್ಯಮಾಡದೆ, ಕೋಪದಿಂದ ಅರಚಿ, ಪರಿಘವನ್ನೆತ್ತಿ ಗಿರಗಿರನೆ ತಿರುಗಿಸಿ ಜಂಬುಮಾಲಿಯ ಮೇಲೆ ಬೀಸಿದನು. ಅದು ವಿಷ್ಣುಚಕ್ರದಂತೆ ಜಂಬುಮಾಲಿಯನ್ನು ಅಪ್ಪಳಿಸಿತು. ಅದರ ರಭಸದೇಟಿಗೆ ಜಂಬುಮಾಲಿಯೂ, ರಥವೂ ಕುದುರೆಗಳೂ ಗುರುತು ತಿಳಿಯದಂತೆ ನುಚ್ಚು ನೂರಾಗಿಬಿಟ್ಟವು.

ಜಂಬುಮಾಲಿ ಸತ್ತನೆಂಬ ಸಮಾಚಾರ ಕೇಳುತ್ತಲೇ ರಾವಣನಿಗೆ ಇನ್ನಿಷ್ಟು ಕೋಪವುಕ್ಕಿ ಖಂಡಗಳೆಲ್ಲ ಅದುರಿದವು. ಅವನು ತನ್ನ ಮಂತ್ರಿ ಪುತ್ರರಾದ

೯ ಗಮಾ

ಏಳುಮಂದಿ ಅಗ್ನಿಹೊತ್ರರಂತಿರುವವರನ್ನು ಸೈನ್ಯದೊಂದಿಗೆ ಹನುಮಂತನನ್ನು ರೂಪಳಿಸಿ ಬರುವಂತೆ ಆಜ್ಞೆಮಾಡಿ ಕಳುಹಿಸಿದನು. ಅವರು ಹನುಮಂತನನ್ನು ನಾನು ಕೊಲ್ಲುವೆ, ತಾನು ಕೊಲ್ಲುವೆನೆಂಬ ಸ್ಪರ್ಧೆಯಿಂದ ಕುದುರೆಗಳು ಹೂಡಿದ ರಥದ ಮೇಲೆ ಹೊರಟರು.

ಅವರು ಅಶೋಕವನದ ದ್ವಾರದ ಮೇಲಿರುವ ಹನುಮಂತನನ್ನು ದೂರದಿಂದ ನೋಡಿದ ಕೂಡಲೇ ಬಾಣ ವರ್ಷಣಕ್ಕೆ ಪ್ರಾರಂಭಿಸಿದರು. ಹನುಮಂತನು ತನಗೆ ತಾಗದಂತೆ ಆಕಾಶಕ್ಕೆ ಕುಪ್ಪಳಿಸಿ, ಅತ್ತಿತ್ತ ಹಾರಾಡುತ್ತಾ, ತಪ್ಪಿಸಿಕೊಳ್ಳುತ್ತ ಆಟವಾಡುತ್ತಿರುವಂತೆ ತೋರಿದನು. ಆಗ ಅವನು ಹಾಕಿದ ಕೇಕೇ ಧ್ವನಿಗಳು ರಾಕ್ಷಸ ಸೈನ್ಯವನ್ನು ಹೆದರಿಸಿದವು. ಹನುಮಂತನು ಅವರನ್ನೆಲ್ಲಾ ಅಂಗೈಯಿಂದ ಅಪ್ಪಳಿಸಿಯೂ, ಕಾಲುಗಳಿಂದ ಮೆಟ್ಟಿಯೂ, ಮುಷ್ಟಿಗಳಿಂದ ತಿವಿದೂ ಉಗುರುಗಳಿಂದ ಪರಚಿಯೂ ಕೊಂದು ಕೊಂದು ಹಾಕಿದನು. ಬಹಳ ಮಂದಿ ರಾಕ್ಷಸರು ಹಾಗೆ ಸತ್ತ ಮೇಲೆ ಉಳಿದವರು ಓಡಿಹೋದರು. ಈ ಯುದ್ಧದಲ್ಲಿ ಪ್ರಚಂಡರೆನಿಸಿದ ಆ ಏಳು ಮಂದಿ ಮಂತ್ರಿಕುಮಾರರಲ್ಲಿ ಒಬ್ಬನೂ ಹಿಂದಿರುಗಲಿಲ್ಲ.

ಹನುಮಂತನು ಮತ್ತೆ ದ್ವಾರದ ಬಳಿಯನ್ನು ಸೇರಿ, ಇನ್ನು ಬರುವವರೊಂದಿಗೆ ಕಾದಾಡಲು ಸಿದ್ಧನಾಗಿ ನೋಡುತ್ತಾ ನಿಂತನು.

ಮಂತ್ರಿಪುತ್ರರೆಲ್ಲ ಹನುಮಂತನ ಕೈಯಲ್ಲಿ ಲೀಲಾಜಾಲವಾಗಿ ಸತ್ತರೆಂದು ತಿಳಿದ ಕೂಡಲೇ ರಾವಣನಿಗೆ ಸ್ವಲ್ಪ ಭಯವೆನಿಸಿತು. ಆದರೆ ಅದನ್ನು ಸ್ವಲ್ಪವೂ ಹೊರಗೆ ತೋರಗೊಡದೆ ತನ್ನ ಸೇನಾನಾಯಕರಾದ ಐದುಮಂದಿಗಳನ್ನು ನೋಡಿದನು. ವಿರೂಪಾಕ್ಷ, ಯೂಪಾಕ್ಷ, ದುರ್ಧರ, ಪ್ರಘಸ, ಭಾವಕರ್ಣ ಎಂಬವರನ್ನು ನೋಡಿ ರಾವಣನು, "ನೀವೀಗ ಹೊರಡಬೇಕು. ಸಾಮಾನ್ಯ ಕೋತಿಯೆಂದು ಅಲಕ್ಷ್ಯ ಮಾಡಬಾರದು. ರಥಗಳೊಂದಿಗೆ ಆನೆಗಳ ಸೇನೆ ತೆಗೆದುಕೊಂಡು ಹೋಗಿ. ಈ ಶತ್ರುವಿನಂತಹವನು ಈವರೆಗೆ ನಾನು ಕೇಳಿದ್ದಿಲ್ಲ. ಅದು





ಕೋತಿಯಲ್ಲ, ಮಹಾಬಲಶಾಲಿಯಾದ ಯಾವುದೋ ಭೂತವಿರಬೇಕು. ಸಾಮಾನ್ಯ ವಾನರನಂತೂ ಅಲ್ಲ. ಯಾವ ಇಂದ್ರನೋ ತಪಸ್ಸು ಮಾಡಿ ನಮ್ಮನ್ನೆಲ್ಲ ನಾಶಮಾಡಲು ಈ ಭೂತವನ್ನು ಸೃಷ್ಟಿಸಿರಬೇಕು. ನಾನು ಈ ಮೊದಲು ವಾಲಿ, ಸುಗ್ರೀವ, ಜಾಂಬವಂತ, ನೀಲ, ದ್ವಿವಿಧ ಮೊದಲಾದ ವಾನರವೀರರ ಬಲವನ್ನು ತಿಳಿದಿದ್ದೇನೆ. ಅವರಾರಿಗೂ ಇಷ್ಟೊಂದು ಶಕ್ತಿಪ್ರತಾಪಗಳಿರಲಿಲ್ಲ. ನೀವು ನಿಮ್ಮ ಶಕ್ತಿಯನ್ನೆಲ್ಲಾ ಧಾರೆಯೆರೆದಾದರೂ ಈ ವಾನರನನ್ನು ಹಿಡಿದು ಬಂಧಿಸಲೇಬೇಕು. ಆದಾಗದಿದ್ದರೆ ಕೊಂದುಬಿಡಿ. ನಿಮ್ಮ ಆತ್ಮರಕ್ಷಣೆಯ ವಿಷಯದಲ್ಲಿ ಸ್ವಲ್ಪ ಕೂಡ ಅಜಾಗ್ರತೆ ತೋರಬೇಡಿ, ಜಾಗ್ರತೆ!" ಎಂದು ಎಚ್ಚರಿಕೆ ಹೇಳಿ ಕಳುಹಿಸಿದನು.

ರಾಜನ ಆಜ್ಞೆಯನ್ನು ಶಿರಸಾವಹಿಸಿಕೊಂಡು ಐದುಮಂದಿ ಸೇನಾನಾಯಕರು, ರಥಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ ಬಗೆಬಗೆಯ ಆಯುಧಗಳನ್ನೂ ತೆಗೆದುಕೊಂಡು ಹನುಮಂತನಿರುವ ಸ್ಥಳಕ್ಕೆ ಕೋಲಾಹಲ ಮಾಡುತ್ತ ಬಂದರು. ಹನುಮಂತನನ್ನು ಸುತ್ತುಹಾಕಿ, ನಾನಾ ಕ್ರೂರಾಯುಧಗಳನ್ನು ಅವನ ಮೇಲೆ ಪ್ರಯೋಗಿಸಿದರು. ಅವರ ಬಾಣಗಳು ಕೆಲವು ಹನುಮಂತನ ತಲೆಗೆ ಚುಚ್ಚಿಕೊಂಡವು. ಕೂಡಲೇ ಹನುಮಂತನು ತಲೆಯನ್ನು ಕೊಡವಿಕೊಂಡು ಸಿಂಹನಾದ ಮಾಡುತ್ತ ಆಕಾಶಕ್ಕೆ ಹಾರಿದನು. ಆಗ ದುರ್ಧರನು ಆಕಾಶದಲ್ಲಿರುವ ಹನುಮಂತನ ಮೇಲೆ ನೂರಾರು ಬಾಣಗಳನ್ನು ಪ್ರಯೋಗಿಸಿದನು. ಹನುಮಂತನು ಅವುಗಳಿಂದ ತಪ್ಪಿಸಿಕೊಂಡು, ತನ್ನ ಶರೀರವನ್ನು ಬೆಳೆಯಿಸಿ ಸಿಡಿಲುಬಿದ್ದಂತೆ ದುರ್ಧರನ ರಥದ ಮೇಲೆ ಹಾರಿದನು. ಆ ಪೆಟ್ಟಿಗೆ ದುರ್ಧರನು ರಥದೊಂದಿಗೆ, ರಥಕ್ಕೆ ಹೂಡಲ್ಪಟ್ಟ ಎಂಟು ಕುದುರೆಗಳೊಂದಿಗೆ ತಾನು ಕೂಡಾ ನೆಲಸಮನಾಗಿ ಹೋದನು.


ತರುವಾಯ ಹನುಮಂತನು ಒಂದು ದಪ್ಪನೆಯ ಮರವನ್ನು ಕಿತ್ತು ಅದರಿಂದ ವಿರೂಪಾಕ್ಷನನ್ನೂ, ಯೂಪಾಕ್ಷನನ್ನೂ ಕೊಂದನು. ಆಮೇಲೆ ಪ್ರಘಸನೂ, ಭಾವಕರ್ಣನೂ ಸ್ವಲ್ಪ ಹೊತ್ತು ಹನುಮಂತನೊಂದಿಗೆ ಹೋರಾಡಿದರು. ಹನುಮಂತನು ಒಂದು ಪರ್ವತ ಶಿಖರವನ್ನು ಮುರಿದು ಎತ್ತಿ ಅದನ್ನು ಹೊತ್ತು ಹಾಕಿ ಅವರಿಬ್ಬರನ್ನೂ ಕೊಂದನು. ಸೇನೆಗಳೂ ನಿರ್ನಾಮವಾದವು. ಪಾಳುಬಿದ್ದ ಅಶೋಕವನದ ಸುತ್ತು ಮುತ್ತು ರಾಕ್ಷಸರ ಹೆಣಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿರಲು, ಮತ್ತೆ ಯುದ್ಧ ಮಾಡಲು ಯಾರನ್ನೂ ಕಾಣದೆ ಹನುಮಂತನು ಮತ್ತೆ ಅದೇ ದ್ವಾರದ ಹತ್ತಿರ ನಿಂತನು.

ವೀರಾಧಿವೀರರೆಂದು ಹೆಸರು ಪಡೆದ ಸೇನಾನಾಯಕರೂ ಸತ್ತುಹೋದ ವಾರ್ತೆ ಬಂದ ಕೂಡಲೆ ರಾವಣನು ತನ್ನ ಮಗನಾದ ಅಕ್ಷಕುಮಾರನ ಕಡೆ ದೃಷ್ಟಿಯನ್ನು ಬೀರಿದನು.

ಯುದ್ಧವೆಂದರೆ ಆಸಕ್ತಿಯಿರುವ ಅಕ್ಷನು ತಂದೆಯ ನೋಟವನ್ನೇ ಆಜ್ಞೆಯೆಂದು ತಿಳಿದು ಚಟಕ್ಕನೆದ್ದನು. ಅವನು ತಂದೆಗೆ ಮಣಿದು ಒಂದು ಬಂಗಾರದ ರಥದ ಮೇಲೆ ಹನುಮಂತನ ಕಡೆಗೆ ಹೊರಟನು. ಎಂಟು ಕುದುರೆಗಳಿರುವ ಅವನ ರಥವು ನೆಲವನ್ನು ಮುಟ್ಟದೆಯೇ ಸಾಗಬಲ್ಲಂತಹುದು. ರಥದ ತುಂಬಾ ಅನೇಕ ಬಗೆಯ ಆಯುಧಗಳಿದ್ದವು.



ಅಕ್ಷಕುಮಾರನು ಹನುಮಂತನನ್ನು ನೋಡಿದ ಕೂಡಲೇ, ಈ ವಾನರನು ಅಸಾಮಾನ್ಯ ವೀರನೆಂಬುದನ್ನು ಗ್ರಹಿಸಿ, ಭಾರಿ ಯುದ್ಧವನ್ನು ಮಾಡಲು ಸಿದ್ಧನಾದನು. ಅಕ್ಷಕುಮಾರನಿಗೂ ಹನುಮಂತನಿಗೂ ಬಹು ತೀವ್ರವಾದ ಯುದ್ಧ ಪ್ರಾರಂಭವಾಯಿತು. ಅಕ್ಷನು ಪ್ರಯೋಗಿಸಿದ ಬಗೆಬಗೆಯ ಬಾಣಗಳು ಹನುಮಂತನಿಗೆ ತಾಗಿ, ಬೆನ್ನು ತಟ್ಟುವಂತೆ ಅವನ ಯುದ್ಧೋತ್ಸಾಹವನ್ನು ಹೆಚ್ಚಿಸುತ್ತಾ ಹೋದುವು. ಅವನು ಆಕಾಶಕ್ಕೆ ಹಾರಿದ ಕೂಡಲೇ ಅಕ್ಷನೂ ರಥದೊಂದಿಗೇ ಆಕಾಶದಲ್ಲಿ ಎದ್ದನು. ಆಕಾಶದಲ್ಲಿಯೂ ಅಕ್ಷನು ಹನುಮಂತನ ಮೇಲೆ ಬಾಣಗಳ ಮಳೆಗರೆದನು. ಹನುಮಂತನು ಅವನ ಬಾಣಗಳಿಂದ ತಪ್ಪಿಸಿಕೊಳ್ಳುತ್ತಾ, ಆಕಾಶದಲ್ಲಿ ತಿರುಗುತ್ತಾ, ಅಕ್ಷಕುಮಾರನನ್ನು ಕೊಲ್ಲುವ ಮಾರ್ಗವನ್ನು ಕುರಿತು ಆಲೋಚಿಸತೊಡಗಿದನು. ಚಿಕ್ಕ ಪ್ರಾಯದಲ್ಲಿಯೇ ಇಷ್ಟೊಂದು ಪರಾಕ್ರಮಶಾಲಿಯಾದ ಅಕ್ಷನನ್ನು ಕೊಲ್ಲದೆ ಬಿಟ್ಟರೆ ಮುಂದೆ ಇವನು ತುಂಬ ಲೋಕಕಂಟಕನಾಗಬಹುದು. ಆದುದರಿಂದ ಇವನ ಮೇಲೆ ದಯೆತೋರಿಸಬಾರದೆಂದುಕೊಂಡು ಹನುಮಂತನು ಉಪಾಯವಾಗಿ ಇದ್ದಕ್ಕಿದ್ದಹಾಗೆ ಅಕ್ಷನ ಮೇಲೆರಗಿ ಅವನ ಕಾಲುಗಳನ್ನು ಹಿಡಿದು ಗಿರಗಿರನೆ ತಿರುಗಿಸಿ ನೆಲಕ್ಕೆ ಬೀಸಿ ಒಗೆದನು. ಆ ಪೆಟ್ಟಿಗೆ ಅಕ್ಷನು ತಲೆಯೊಡೆದು ಬಿದ್ದು, ಏಳಲಾರದೆ ಸತ್ತು ಹೋದನು. ಪ್ರಿಯ ಕುಮಾರನಾದ ಅಕ್ಷನು ಸತ್ತ ಸಮಾಚಾರ ಕೇಳಿದ ಕೂಡಲೇ ರಾವಣನು ದುಃಖ ಕೋಪಗಳಿಂದ ಕುದಿದನು. ದುಃಖವನ್ನು ಅಡಗಿಸಿಕೊಂಡು ತನ್ನ ಮಗನಾದ ಇಂದ್ರಜಿತ್ತನ್ನು ನೋಡಿ. "ಪುತ್ರ ಪ್ರವರನೇ, ಈ ದುಷ್ಟ ವಾನರನು ಇಷ್ಟರೊಳಗೆ ಮಹಾ ವೀರರಾದ ಜಂಬುಮಾಲಿಯನ್ನೂ, ಮಂತ್ರಿಕುಮಾರರನ್ನೂ, ಐದುಮಂದಿ ಸೇನಾಪತಿಗಳನ್ನೂ ಕೊಂದು ಬಿಟ್ಟನು. ಆದುದರಿಂದ ನೀನು ಹೋಗಿ ಅವನ ಬಲವನ್ನು ಸರಿಯಾಗಿ ತೂಕಮಾಡಿ ಯುದ್ಧಮಾಡಬೇಕು. ನೀನು ಯುದ್ಧದಲ್ಲಿ ನನಗೆ ಸಮಾನನಾಗಿರುವವನು. ದೇವತೆಗಳನ್ನು ಕೂಡಾ ಜಯಿಸಬಲ್ಲವನು. ನಿನ್ನ ಅಸ್ತ್ರಗಳನ್ನು ಮಾತ್ರವೇ ನಂಬಿ ಅವನೊಂದಿಗೆ ಸೆಣಸಬೇಕಾದೀತು. ಮುಖ್ಯವಾಗಿ ನಿನ್ನನ್ನು ನೀನು ರಕ್ಷಿಸಿಕೊಳ್ಳುವುದರಲ್ಲಿ ಲಕ್ಷ್ಯವಿಟ್ಟುಕೊಂಡು ಅವನನ್ನು ಹೇಗೆ ನಿಗ್ರಹಿಬೇಕೋ ಹಾಗೆ ನಿಗ್ರಹಿಸು. ನಿನ್ನ ಮೇಲೆ ನಂಬಿಕೆ ಇಟ್ಟಿದ್ದೇನೆ. ಎಲ್ಲವೂ ಗೊತ್ತಿರುವ ನಿನಗೆ ಹೆಚ್ಚಿಗೆ ಹೇಳಬೇಕಾಗಿಲ್ಲ." ಎಂದನು.



ಇಂದ್ರಜಿತ್ತು ತಂದೆಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಯುದ್ಧಕ್ಕೆ ಹೊರಟನು. ಅವನು ರಥದ ಮೇಲೆ ಹೋಗಿ ಬೇಗದಲ್ಲೇ ಹನುಮಂತನ ಮುಂದೆ ನಿಂತನು. ಭಾರಿ ವೀರನಾದ ಇಂದ್ರಜಿತ್ತು ತನ್ನ ಮುಂದೆ ಸೈನ್ಯದೊಂದಿಗೆ ಬಂದುದನ್ನು ನೋಡಿ ಹನುಮಂತನು ಉತ್ಸಾಹದಿಂದ ಗಟ್ಟಿಯಾಗಿ ಸಿಂಹನಾದ ಮಾಡಿದನು.

ಇಂದ್ರಜಿತ್ತು ಬಾಣಗಳನ್ನು ಪ್ರಯೋಗಿಸಲು ತೊಡಗುತ್ತಲೇ ಹನುಮಂತನು ಆಕಾಶಕ್ಕೆ ಹಾರಿ ಆ ಬಾಣಗಳನ್ನು ತಪ್ಪಿಸಿಕೊಳ್ಳುತ್ತ ತಿರುಗತೊಡಗಿದನು. ತಾನು ಪ್ರಯೋಗಿಸಿದ ಒಂದು ಬಾಣಗಳೂ ಹನುಮಂತನ ಶರೀರಕ್ಕೆ ತಗಲದಿರುವುದನ್ನು ಕಂಡು ಇಂದ್ರಜಿತ್ತುವಿಗೆ ರೋಷವೆದ್ದಿತು. ಹನುಮಂತನನ್ನು ಕೊಲ್ಲಲು ಸಾಧ್ಯವಿಲ್ಲವೆಂದು ಅವನಿಗೆ ತಿಳಿದು ಹೋಯಿತು. ಹನುಮಂತನ ಮೇಲೆ ತಗಲಿದ ಮಹಾ ಶಕ್ತಿಯುಳ್ಳ ಬಾಣಗಳು ಕೂಡ ಅವನಿಗೆ ಇರುವೆ ಕಡಿದಂತೆಯೂ ಅನಿಸದಿರುವುದನ್ನು ಮನಗಂಡು ಇಂದ್ರಜಿತ್ತು, ಅವನನ್ನು ಹಿಡಿದುಕೊಳ್ಳುವ ಉದ್ದೇಶದಿಂದ ಬ್ರಹ್ಮಾಸ್ತ್ರವನ್ನು ಸಂಧಿಸಿದನು. ಬ್ರಹ್ಮಾಸ್ತ್ರವು ತಾಗಿದ ಕೂಡಲೇ ಹನುಮಂತನು ಅದಕ್ಕೆ ಕಟ್ಟುಬಿದ್ದು ಕೆಳಗೆ ಬಿದ್ದು ಏನೂ ಮಾಡಲಾಗದವನಂತೆ ಸ್ತಬ್ಧನಾದನು. ಬ್ರಹಾಸ್ತ್ರದಿಂದ ತಾನು ಬಿದ್ದಿರುವುದು ಅವನಿಗೆ ತಿಳಿಯಿತು. ಯಾವ ಅಸ್ತ್ರಗಳಿಗೂ ತನ್ನನ್ನು ಬಂಧಿಸಲು ಸಾಧ್ಯವಿಲ್ಲದಂತೆ ಸಾಕ್ಷಾತ್ ಬ್ರಹ್ಮದೇವನು ತನಗೆ ವರವಿತ್ತಿದ್ದಾನೆಂದು ಅವನಿಗೆ ಗೊತ್ತು. ಅದುದರಿಂದ ಬ್ರಹ್ಮನಿಗೆ ಗೌರವ ಕೊಟ್ಟು, ಅದಕ್ಕೆ ಕಟ್ಟುಬಿದ್ದು ಸ್ವಲ್ಪ ಹೊತ್ತು ಸುಮ್ಮನಿರಬೇಕೆಂದು ಅವನು ನಿಶ್ಚಯಿಸಿಕೊಂಡು ಹಾಗೆ ಬಿದ್ದಿದ್ದನು. ತನ್ನನ್ನು ಯಾವಾಗಲೂ ಬ್ರಹ್ಮನೂ, ದೇವೇಂದ್ರನೂ, ವಾಯುವೂ ರಕ್ಷಿಸದೆ ಬಿಡಲಾರರೆಂಬ ನಂಬುಗೆ ಅವನಿಗಿತ್ತು. ಹೀಗಿರುವುದರಿಂದ ತನಗೆ ರಾವಣನೊಂದಿಗೆ ಮಾತಾಡುವ ಅವಕಾಶ ಕೂಡಾ ಸಿಗುವುದೆಂದು ತೋರಿತು. ಅಂತೆಯೇ ಅಲುಗಾಡದೆ ಸುಮ್ಮನೆ ಬಿದ್ದಿದ್ದನು.

ಸೋತವನಂತೆ ಬಿದ್ದಿರುವ ಹನುಮಂತನ ಬಳಿಗೆ ರಾಕ್ಷಸರೆಲ್ಲ ಆತುರದಿಂದ ಬಂದು ಬೇಗಬೇಗನೇ ಅವನನ್ನು ಹಗ್ಗಗಳಿಂದ ಕಟ್ಟಿಹಾಕಿದರು. ಹೀಗೆ ಹಗ್ಗಗಳ ಕಟ್ಟುಬಿದ್ದ ಕೂಡಲೇ ಬ್ರಹ್ಮಾಸ್ತ್ರವು ಅವನನ್ನು ಬಿಟ್ಟುಬಿಟ್ಟಿತು. ಇತರ ಬಂಧನಗಳಿರುವ ಸ್ಥಳದಲ್ಲಿ ಬ್ರಹ್ಮಾಸ್ತ್ರವು ನಿಲ್ಲುವುದಿಲ್ಲವೆಂದು ರಾಕ್ಷಸರಿಗೆ ತಿಳಿಯದು. ಈ ರಹಸ್ಯ ಇಂದ್ರಜಿತ್ತುವಿಗೆ ಗೊತ್ತಿದ್ದುದರಿಂದ, ಅಜ್ಞಾನಿಗಳಾದ ರಾಕ್ಷಸರು ಹನುಮಂತನನ್ನು ಹಗ್ಗಗಳಿಂದ ಬಿಗಿದುದನ್ನು ನೋಡಿ ಚಿಂತಿಸಿದನು. ಆ ರಾಕ್ಷಸರು ಹನುಮಂತನನ್ನು ಎತ್ತಿನಿಲ್ಲಿಸಿ ಎಳೆದುಕೊಂಡು ಹೋಗುವಾಗ ಕೂಡಾ ಹನುಮಂತನು ಸುಮ್ಮನಿರುವುದನ್ನು ನೋಡಿ ಇಂದ್ರಜಿತ್ತು ಮತ್ತೇನೂ ಮಾಡಲಿಲ್ಲ. ರಾಕ್ಷಸರು ಹನುಮಂತನ




ಕೋಲುಗಳಿಂದ ಹೊಡೆಯುತ್ತ, ಮುಷ್ಟಿಗಳಿಂದ ತಿವಿಯುತ್ತ ಅವನನ್ನು ರಾವಣನ ಬಳಿಗೆ ಎಳೆದು ಕೊಂಡುಹೋದರು. ಹನುಮಂತನು ಎಳೆಯಲ್ಪಡುವಂತೆಯೇ ನಡೆದನು.


ಇಂದ್ರಜಿತ್ತು ಹನುಮಂತನನ್ನು ರಾವಣನ ಸಭೆಗೆ ಒಯ್ದು ನಿಲ್ಲಿಸಿ, "ಇವನೇ ಅಶೋಕವನವನ್ನು ನಾಶ ಮಾಡಿದ ವಾನರ" ಎಂದು ಪರಿಚಯ ಮಾಡಿದನು. ಮದ್ದಾನೆಯ ಹಾಗಿದ್ದ ಹನುಮಂತನನ್ನು ನೋಡಿ, ರಾವಣಾಸುರನ ಸಭೆಯಲ್ಲಿದ್ದವರು ತಮ್ಮೊಳಗೆ ತಾವು, "ಯಾರು ಈ ಮಹಾಕಾಯನಾದ ವಾನರ? ಯಾರ ಕಡೆಯಿಂದ ಬಂದಿದ್ದಾನೆ? ಏತಕ್ಕಾಗಿ ಬಂದಿದ್ದಾನೆ? ಇಷ್ಟು ದೂರ ಬಂದು ಹೀಗೆ ನಾಶಕಾರ್ಯ ಮಾಡುವುದರಲ್ಲಿ ಇವನಿಗಿರುವ ಉದ್ದೇಶವೆಂತಹುದು? ಯಾರ ಹತ್ತಿರ ಏನು ಕೆಲಸಕ್ಕಾಗಿ ನಮ್ಮ ಲಂಕೆಗೆ ಬಂದಿದ್ದಾನೆ? ಹೀಗೆಲ್ಲಾ ಮಾಡಬೇಕಾದರೆ ಇವನ ಧೈರ್ಯವೆಷ್ಟಿರಬಹುದು? ಪರಾಕ್ರಮವೆಷ್ಟಿರಬಹುದು? ಹೇಗೆ ಇಂದ್ರಜಿತ್ತುವಿನ ಕೈಗೆ ಸಿಕ್ಕಿಬಿದ್ದನೋ?..." ಎಂದು ಮುಂತಾಗಿ ಭಯ ಸಂಶಯಗಳಿಂದ ಒಬ್ಬರನ್ನೊಬ್ಬರು ಪ್ರಶ್ನಿಸಿಕೊಂಡು ಆಶ್ಚರ್ಯಪಡತೊಡಗಿದರು.

ರಾವಣನ ಮಹಾ ಸಭಾಭವನದೊಳಗೆ, ರಾಕ್ಷಸರಿಂದ ತುಂಬಿದ ಆ ಸ್ಥಳಕ್ಕೆ ಬಂದು ನಿಂತ ಹನುಮಂತನು ಒಂದು ಸಾರಿ ಸಭೆಯ ಶಿರೋಮಣಿಯಂತಹ ರಾಕ್ಷಸರ ರಾಜ ರಾವಣನ ಕಡೆಗೂ, ಅವನ ಸುತ್ತಲೂ ಇರುವ ರಾಕ್ಷಸವೀರರ ಕಡೆಗೂ ನೋಡಿದನು. ರಾವಣನ ಕಣ್ಣುಗಳು ಕೋಪಾತಿಶಯದಿಂದ ರಕ್ತವರ್ಣವಾಗಿದ್ದಿತು. ಅವನು ಹನುಮಂತನನ್ನು ಆಪಾದಮಸ್ತಕವಾಗಿ ಒಮ್ಮೆ ನೋಡಿ ವಿಚಾರಿಸುವಂತೆ ಅಜ್ಞಾಪಿಸಿದ ಮೇಲೆ ಮಂತ್ರಿಗಳು ಹನುಮಂತನನ್ನು ಕುರಿತು, "ಎಲೆ ವಾನರನೆ, ಯಾರು ನೀನು? ನಿನ್ನನ್ನು ಯಾರಾದರೂ ಕಳುಹಿಸಿದರೋ ನೀನಾಗಿ ಬಂದವನೋ?" ಎಂದು ಕೇಳಿದರು.

"ನಾನು ವಾನರರಾಜನಾದ ಸುಗ್ರೀವನ ದೂತನು. ಸುಗ್ರೀವನೇ ನನ್ನನ್ನು ಇಲ್ಲಿಗೆ ಕಳುಹಿಸಿದವನು" ಎಂದು ಹನುಮಂತನು ಚುಟುಕಾಗಿ ಉತ್ತರಕೊಟ್ಟನು.

ರಾವಣನು ಪ್ರಹಸ್ತನನ್ನು ನೋಡಿ, "ಸುಗ್ರೀವನು ಯಾವ ಕಾರ್ಯಕ್ಕಾಗಿ ಇವನನ್ನು ಕಳುಹಿಸಿದ? ಇಲ್ಲಿಗೆ ಬಂದ ಇವನು ನನ್ನನ್ನು ನೋಡದೆ, ಹೇಳದೆ ಕೇಳದೆ ಅಶೋಕವನವನ್ನು ಏಕೆ ನಾಶ ಮಾಡಿದ? ರಾಕ್ಷಸ ಸ್ತ್ರೀಯರನ್ನು ಏಕೆ ಹೆದರಿಸಿದ? ನಮ್ಮೊಡನೆ ಯುದ್ಧಕ್ಕೆ ಕಾಲು ಕೆದರಿ ಅನೇಕರನ್ನು ಏತಕ್ಕೆ ಕೊಂದ? ಹಾಗೆ ಮಾಡಲು ಸುಗ್ರೀವನು ಹೇಳಿದನೆ? ಕೇಳು ಇವನನ್ನು. ಏನು ಉತ್ತರ ಕೊಡುವನೋ ನೋಡೋಣ" ಎಂದನು.





ವೀರಹನುಮಾನ್

ರಾವಣನ ಅಭಿಪ್ರಾಯದಂತೆ ಪ್ರಹಸ್ತನು ಹನುಮಂತನಿಗೆ ಮಾಡಿದ ಪ್ರಶ್ನೆಗಳನ್ನು ಕೇಳಿ, ಹನುಮಂತನು ಈ ರೀತಿಯಾಗಿ ಪ್ರತ್ಯುತ್ತರ ಕೊಟ್ಟನು.

"ರಾಕ್ಷಸ ರಾಜನಾದ ರಾವಣೇಶ್ವರ ! ನಿನ್ನನ್ನು ನೋಡಬೇಕೆಂಬ ಉದ್ದೇಶದಿಂದ ನಿನಗೆ ಪ್ರಿಯವಾದ ಅಶೋಕವನವನ್ನು ನಾಶಮಾಡಿದೆ. ಅದು ನನಗೇನೂ ಅಂಥ ಕಾರ್ಯವಾಗಿರಲಿಲ್ಲ. ಆಗ ಬಲಶಾಲಿಗಳಾದ ನಿನ್ನ ಕಡೆಯ ರಾಕ್ಷಸರು ನನ್ನ ಮೇಲೆ ಯುದ್ಧಕ್ಕೆ ಬಂದರು. ನಾನು ನನ್ನನ್ನು ರಕ್ಷಿಸಕೊಳ್ಳಲಿಕ್ಕಾಗಿ ಅವರೊಂದಿಗೆ ಯುದ್ಧ ಮಾಡಬೇಕಾಗಿ ಬಂತು. ಅವರಿಂದಲೂ ನನ್ನನ್ನು ಏನು ಮಾಡಲೂ ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣವಿದೆ. ನನ್ನನ್ನು ಯಾವ ಅಸ್ತ್ರವಾಗಲಿ, ಬಾಣವಾಗಲಿ ಪಾಶವಾಗಲಿ ಬಂಧಿಸಬಾರದೆಂದು ಬ್ರಹ್ಮದೇವನ ವರವಿದೆ. ನಿನ್ನನ್ನು ನೋಡಬೇಕೆಂತಲೇ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ಇಲ್ಲಿಗೆ ಬಂದಿದ್ದೇನೆ. ಅಷ್ಟೇ ಹೊರತು ಮತ್ತೇನಿಲ್ಲ. ನಾನು ಮಹಾಪರಾಕ್ರಮಶಾಲಿಯಾದ ರಾಮನ ದೂತನು. ನಿನ್ನ ಹತ್ತಿರ ನನಗೊಂದು ರಾಜಕಾರ್ಯವಿದೆ. ನಿನ್ನ ಒಳಿತಿಗಾಗಿ ನಾನು ಹೇಳುವ ಮಾತುಗಳನ್ನು ಕೇಳು.

"ಸುಗ್ರೀವನು ನಿನಗೆ ತನ್ನ ಕ್ಷೇಮವನ್ನು ತಿಳಿಸಿ ನಿನ್ನ ಕ್ಷೇಮವನ್ನು ಕೇಳುವಂತೆ ಹೇಳಿದ್ದಾನೆ. ಅವನ ಮಾತುಗಳನ್ನು ಕೇಳಿದರೆ ನೀನು ತುಂಬ ಕ್ಷೇಮವಾಗಿ ಮುಂದೆಯೂ ಇರಬಹುದು. ವಾಲಿಯನ್ನು ನೀನು ಬಲ್ಲೆಯಷ್ಟೆ ? ಆ ವಾಲಿಯನ್ನು ರಾಮನು ಒಂದೇ ಒಂದು ಬಾಣದಿಂದ ಕೊಂದು, ಸುಗ್ರೀವನನ್ನು ವಾನರ ರಾಜನನ್ನಾಗಿ ಮಾಡಿದ್ದಾನೆ. ಸುಗ್ರೀವನು ರಾಮನಿಗೆ ಸೀತೆಯನ್ನು ಹುಡುಕಿಸುವೆನೆಂದು ಮಾತುಕೊಟ್ಟು, ಆ ಪ್ರಕಾರ ಎಲ್ಲಾ ದಿಕ್ಕುಗಳಿಗೂ ವಾನರರನ್ನು ಕಳುಹಿಸಿದ್ದಾನೆ. ಅಂಥವರಲ್ಲಿ ನಾನೊಬ್ಬ. ನನ್ನ ಹೆಸರು ಹನುಮಂತ. ನಾನು ನೂರು ಯೋಜನದಷ್ಟು ಸಮುದ್ರವನ್ನು ದಾಟಿ ಸೀತೆಯನ್ನು ನೋಡಲಿಕ್ಕಾಗಿ ಇಲ್ಲಿ ಬಂದೆ. ನಿನ್ನ ಅಧೀನದಲ್ಲಿರುವ ಸೀತೆಯನ್ನು ನೋಡಿದೆ. ಧರ್ಮವನ್ನು ತಿಳಿದಿರುವ ನಿನ್ನಂಥವರು ಬಲಾತ್ಕಾರವಾಗಿ ಪರಸ್ತ್ರೀಯನ್ನು ಹಿಡಿದು ಸೆರೆಯಲ್ಲಿ



ಟ್ಟಿರುವುದು ಧರ್ಮವಲ್ಲ, ನ್ಯಾಯವಲ್ಲ. ರಾಮ ಲಕ್ಷ್ಮಣರ ಕೋಪಕ್ಕೆ ಗುರಿಯಾಗಿ ಸುಖಪಡೆಯಬಲ್ಲೆ ನೆಂಬವನು ಮೂರು ಲೋಕಗಳಲ್ಲಿಯೂ ಯಾರೊ ಬ್ಬನೂ ಇರಲಾರ. ಈ ಮಾತನ್ನು ಸುಗ್ರೀವನು ನಿನಗೆ ಹೇಳಲು ತಿಳಿಸಿದ್ದಾನೆ. ನೀನು ಮಾಯೆ ಮೋಸ ಗಳನ್ನು ಅವಲಂಬಿಸಿ ಸೀತೆಯನ್ನು ಕದ್ದು ಕೊಂಡು ಯಾರಿಗೂ ತಿಳಿಯಲಾರದೆಂದು ಭ್ರಮಿಸಿದ್ದೀಯೇ ! ಅದೀಗ ಭಗ್ನವಾಯಿತು. ನಿನ್ನ ಅಧೀನದಲ್ಲಿರುವ ಸೀತೆಯನ್ನು ನಾನು ನೋಡಿಯಾಯಿತು. ಇನ್ನು ಮುಂದಿನ ಕರ್ತವ್ಯವು ರಾಮನ ಮೇಲಿದೆಯೆಂದು ತಿಳಿ. ರಾಮನ ಅಭಿಪ್ರಾಯದಂತೆ ಸುಗ್ರೀವನೂ ನಾನೂ ನಡೆದುಕೊಳ್ಳುವವರು. ಹಾಗಿಲ್ಲದೆ ಮನಸ್ಸು ಮಾಡಿದ್ದರೆ ನಾನೇ ಈ ಲಂಕೆಯನ್ನು ಧ್ವಂಸ ಮಾಡಿಬಿಡಬಲ್ಲೆ. ಆದರೆ ರಾಮನು ಇದಕ್ಕೆ ಒಪ್ಪಲಾರನು. ಸೀತೆಯನ್ನು ಅಪಹರಿಸಿದ ಕಳ್ಳನನ್ನು ತಾನೇ ಕೊಲ್ಲುವೆನೆಂದು ವಾನರಭಲ್ಲೂಕ ಸೇನೆಗಳ ಮುಂದೆ ಅವನು ಪ್ರತಿಜ್ಞೆ ಮಾಡಿದ್ದಾನೆ. ಇದನ್ನೆಲ್ಲ ಮನಗಂಡು ನಡೆದುಕೋ. ಸೀತೆ ನಿನ್ನ ಪಾಲಿನ ಮೃತ್ಯುದೇವತೆ ಎಂದು ತಿಳಿ. ನಿನ್ನ ಕ್ಷೇಮವನ್ನು ಆಲೋಚಿಸಿಕೋ. ನಾನು ಮನುಷ್ಯನೂ ಅಲ್ಲ, ರಾಕ್ಷಸನೂ ಅಲ್ಲ. ಆದುದರಿಂದ ಪಕ್ಷಪಾತವೇನಿಲ್ಲದೆ ಇರುವ ಸಂಗತಿ ಹೇಳಿದ್ದೇನೆ. ಏನೂ ಮರೆಮಾಡಿಲ್ಲ. ನೆನಪಿಟ್ಟುಕೋ. ರಾಮನ ಕೈಯಿಂದ ನಿನ್ನನ್ನು ರಕ್ಷಿಸು ವವರಾರೂ ಇಲ್ಲವೆಂದು ಗಂಟು ಹೊಡೆದಿಟ್ಟುಕೋ."

ಹನುಮಂತನು ಹೀಗೆ ನಿರ್ಭಯವಾಗಿ ಹೇಳಿದ ಮಾತುಗಳನ್ನು ಕೇಳಿ ರಾವಣನು ಕೋಪೋದ್ರೇಕ ದಿಂದ ಉರಿಯುತ್ತ "ಈ ಹನುಮಂತನ್ನು ಕೊಲ್ಲಿರಿ !" ಎಂದು ಕೂಗಿದನು.

ಆಗ ಬುದ್ಧಿವಂತನಾದ ವಿಭೀಷಣನು ತಟ್ಟನೆದ್ದು ರಾವಣನನ್ನು ಕುರಿತು, "ಅಣ್ಣಾ ರಾವಣೇಶ್ವರಾ ದೂತನಾಗಿ ಬಂದ ಹನುಮಂತನನ್ನು ಕೊಲ್ಲುವುದು ರಾಜಧರ್ಮಕ್ಕೆ ವಿರುದ್ಧವಾಗಿದೆ. ಲೋಕಾಚಾರಕ್ಕೆ ವ್ಯತಿರಿಕ್ತವಾಗಿದೆ. ನಿನ್ನಂತಹ ಪಂಡಿತನು ಇಂಥ ಹೀನ ಕೆಲಸ ಮಾಡಿಸಬಾರದು. ಕೋಪೋದ್ರೇಕದಿಂ ಬಾಯಿತಪ್ಪಿ ಆಡಿದ ಮಾತನ್ನು ಹಿಂತೆಗೆದುಕೊ ಬೇಕು. ಕೋಪವನ್ನು ಬಿಟ್ಟು ದೂತನಿಗೆ ತಕ್ಕ ಬೇರೆನಾದರೂ ಶಿಕ್ಷೆ ವಿಧಿಸಬಹುದಷ್ಟೇ ?" ಎಂದನು

ರಾವಣನ ಕೋಪವು ಸ್ವಲ್ಪ ಕೂಡಾ ತಗ್ಗಲಿ ಅವನು ವಿಭೀಷಣನನ್ನು ನೋಡಿ, "ಈ ವಾನರ ಮಹಾಪಾಪಿ ! ಪಾಪಿಗಳನ್ನು ಕೊಲ್ಲುವುದರಿ ಪಾಪವೇನಿಲ್ಲ" ಎಂದನು.

ಅದಕ್ಕೆ ವಿಭೀಷಣನು, "ದೂತನನ್ನು ಕೊಲ್ಲು ದರಿಂದ ಯಾವ ಪ್ರಯೋಜನವೂ ಇಲ್ಲ. ಎಂ ಪರಿಸ್ಥಿತಿಯಲ್ಲಿಯೂ ದೂತನನ್ನು ಕೊಲ್ಲಬ ದೆಂದು ಹಿರಿಯರು ಹೇಳುತ್ತಾರೆ. ಆದರೂ ದೂ ರಿಗೆ ಅನೇಕ ಬಗೆಯ ಶಿಕ್ಷೆಗಳನ್ನೂ ಹೇಳಲ್ಪ ಅಂಗವೈಕಲ್ಯ ಮಾಡಿಸಬಹುದು. ಕೊರಡೆಯ

ಹೊಡೆಯಿಸಬಹುದು. ತಲೆಯನ್ನು ಬೋಳಿಸಬಹುದು. ಕಾಯಿಸಿ ಮುದ್ರೆಯೊತ್ತಬಹುದು. ಆದರೆ ದೂತನನ್ನು ಕೊಲ್ಲುವುದು ಮಾತ್ರ ಯಾವ ಶಾಸ್ತ್ರದಲ್ಲಿಯೂ ಇಲ್ಲ. ನಿನ್ನಂತಹ ಧೈರ್ಯಶಾಲಿ ಕೋಪಕ್ಕೆ ಆಳಾಗಿ ಹೀನಕಾರ್ಯ ಮಾಡಲೇ ಬಾರದು. ಅದರಿಂದಾಗುವ ಲಾಭ ಕೇವಲ ಅಪಕೀರ್ತಿ ಮಾತ್ರವೇ. ನಿಜವಾಗಿಯೂ ನೀನು ಕೊಲ್ಲಬೇಕಾದುದು ಇವನನ್ನು ಇಲ್ಲಿಗೆ ಕಳುಹಿಸಿದವರನ್ನು. ಇವನು ಹೇಳಿದ ಮಾತುಗಳು ಇವನ ಸ್ವಂತ ಮಾತುಗಳಲ್ಲ. ಸಮುದ್ರವನ್ನು ದಾಟಬಲ್ಲ ಸಮರ್ಥನು ಇವನೊಬ್ಬನೇ ಎಂದು ತೋರುತ್ತದೆ. ಆದುದರಿಂದ ಇವನನ್ನು ಕಳುಹಿಸಿದರೆ ಬೇಗನೇ ರಾಮಲಕ್ಷ್ಮಣರು ಇಲ್ಲಿಗೆ ಬರುವ ಹಾಗಾಗುತ್ತದೆ. ನಿನ್ನೊಂದಿಗೆ ಯುದ್ಧಮಾಡಲು ತಕ್ಕ ವೀರರನ್ನು ಇಲ್ಲಿಗೆ ಬರಿಸಲು ನಾಯಕನಾಗಿರುವಂಥವನು ಈ ಹನುಮಂತನೊಬ್ಬನೇ. ಅಂತಹ ವೀರನನ್ನು ಬರಮಾಡಿಕೊಂಡೆಯಾದರೆ ನಿನ್ನ ಕೀರ್ತಿ ಹೆಚ್ಚುತ್ತದೆ." ಎಂದನು.

ವಿಭೀಷಣನು ಹೇಳಿದ ಮಾತಿಗೆ ರಾವಣನು ತೃಪ್ತನಾಗಿ, ಅವನು ಹೇಳಿದಂತೆ ಮಾಡಲು ನಿಶ್ಚಯಿಸಿ ಹೀಗೆಂದನು: "ನೀನು ಹೇಳಿದ್ದು ಯಥೋಚಿತವಾಗಿದೆ. ಆದುದರಿಂದ ಇವನಿಗೆ ಇನ್ನೊಂದು ಶಿಕ್ಷೆಯನ್ನು ಕೊಡೋಣ. ಕೋತಿಗಳಿಗೆ ಬಾಲದ ಮೇಲೆ ಬಹಳ ಪ್ರೀತಿ. ಇವನ ಬಾಲಕ್ಕೆ ಬೆಂಕಿ ಹಚ್ಚಿ ಸುಟ್ಟುಬಿಟ್ಟುಬಿಡಿ. ಬದುಕಿಕೊಂಡು ಹೋಗಲಿ"

ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ, ನಗರದೊಳಗೆಲ್ಲಾ ತಿರುಗಾಡಿಸಿ ಮುಖ್ಯ ಮುಖ್ಯ ಸ್ಥಳಗಳಲ್ಲಿ ಪ್ರದರ್ಶನಮಾಡಿಸಿ ಅವಮಾನಗೊಳಿಸಿ ಕಳುಹಿಸುವಂತೆ ರಾವಣನ ಆಜ್ಞೆಯಾಯಿತು. ಅದರಂತೆ ರಾಕ್ಷಸ ಸೇವಕರು ಹನುಮಂತನನ್ನು ಆಚೆಗೆ ಕರೆದೊಯ್ದು ಸಾಕಷ್ಟು ವಸ್ತ್ರಗಳನ್ನು ತಂದು ಅವನ ಬಾಲಕ್ಕೆ ಸುತ್ತಿದರು. ಆಮೇಲೆ ಬಾಲದ ಮೇಲಷ್ಟು ಎಣ್ಣೆ ಹೊಯ್ದು ಬೆಂಕಿ ಹೊತ್ತಿಸಲಾಯಿತು.

ತನಗೆ ರಾಕ್ಷಸರು ಮಾಡುವ ಕೆಲಸವನ್ನು ನೋಡುತ್ತಿದ್ದಂತೆ ಹನುಮಂತನಿಗೆ ಕೋಪವು ಉಕ್ಕಿಕೊಂಡೇ





ಬರತೊಡಗಿತು. ಬಾಲಕ್ಕೆ ಚೆನ್ನಾಗಿ ಬೆಂಕಿ ಹೊತ್ತಿಸಿಕೊಂಡ ಕೂಡಲೇ ಅವನು ಉರಿಯುವ ಬಾಲದಿಂದ ಸುತ್ತು ಮುತ್ತಲಿದ್ದವರನ್ನೆಲ್ಲ ಹೊಡೆದನು.

ಇಷ್ಟರೊಳಗೆ ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ ಮೆರವಣಿಗೆ ಮಾಡಿಸುತ್ತಾರೆಂಬ ವಾರ್ತೆಯನ್ನು ಕೇಳಿ ಲಂಕೆಯಲ್ಲಿದ್ದ ಹೆಂಗಸರು ಮಕ್ಕಳು ಮುದುಕರೆಲ್ಲ ಪರಮಾನಂದದಿಂದ ನೋಡಲು ಬಂದರು. ದೊಡ್ಡ ದೊಡ್ಡ ಬಲಶಾಲಿ ರಾಕ್ಷಸರೆಲ್ಲ ಓಡಿಬಂದು ಹನುಮಂತನನ್ನು ಮತ್ತೆ ಹಿಡಿದು ಕಟ್ಟಿಹಾಕಿ ಎಳೆದುಕೊಂಡು ಹೋಗತೊಡಗಿದರು. ಬಾಲ ಸುಡುವುದರ ಪರಿವೆಯೇ ಇಲ್ಲದ ಹನುಮಂತನು ಅವರ ಹಿಂದೆಯೇ ಅತ್ತಿತ್ತ ನೋಡುತ್ತಾ ಹೋದನು. ಆಗ ಅವನು ಸಾಧಾರಣ ಪರಿಮಾಣದಲ್ಲೇ ಇದ್ದನು.

ರಾಕ್ಷಸರು ಶಂಖಗಳನ್ನು ಊದುತ್ತ, ಭೇರಿಗಳನ್ನು ಮೊಳಗಿಸುತ್ತ, ಹನುಮಂತನನ್ನು ಲಂಕೆಯೊಳಗೆಲ್ಲಾ ಒಂದು ಸುತ್ತು ತಿರುಗಾಡಿಸಿದರು. ಹೀಗೆ ತಿರುಗು

ವಾಗ ಹನುಮಂತನು ಲಂಕೆಯಲ್ಲಿ ಆಯುಧಗಳಿರು
ಪ್ರದೇಶಗಳನ್ನೂ, ಇತರ ರಹಸ್ಯವಾದ ಮರ್ಮಸ್ಥಾ
ಗಳನ್ನೂ ಚೆನ್ನಾಗಿ ನೋಡಿ ಗುರುತಿಟ್ಟುಕೊಂಡನು
ರಾಕ್ಷಸರು ಅಲ್ಲಲ್ಲಿ ಹನುಮಂತನನ್ನು ಕುರಿತು "ಗುಪ್ತ
ಚಾರನಿವನು" ಎಂದು ಡಂಗುರ ಸಾರುತ್ತಿದ್ದರು.

ಈ ಸಮಾಚಾರವನ್ನು ರಾಕ್ಷಸ ಸ್ತ್ರೀಯರು ಬಹು
ಬೇಗ ಸೀತೆಗೂ ತಿಳಿಸಿದ್ದರು. ಹನುಮಂತನ ಬಾಲಕ್ಕೆ
ಬೆಂಕಿಹಚ್ಚಿ ಬಾಧಿಸುವರೆಂದು ತಿಳಿದು ಸೀತೆ ತುಂಬ
ದುಃಖಿಸಿ, ಅಗ್ನಿಹೋತ್ರನನ್ನು ಧ್ಯಾನಿಸಿ ಹನು
ಮಂತನಿಗೆ ಬೆಂಕಿಯ ಅಪಾಯವೇನೂ ಬಾರದಂ
ನೋಡಿಕೊಳ್ಳಬೇಕೆಂದು ಪ್ರಾರ್ಥಿಸಿದಳು.

ಆಗ ಸೀತೆ ಪಡುವ ದುಃಖವನ್ನು ನೋ
ಸರಮೆ, "ಅಮ್ಮಾ ಆ ವಾನರನನ್ನು ಕುರಿ
ನೀನೇನೂ ವ್ಯಸನ ಪಡಬೇಡ. ಅವನೊಬ್ಬ ಮ
ನುಭಾವನಾಗಿದ್ದಾನೆ. ತನ್ನನ್ನು ಮುತ್ತಿರುವ ರಾಕ್ಷ
ರೆಲ್ಲರನ್ನೂ ಹೊಡೆದು ಕೊಂದು ಒಂದು ಮನೆ
ಮೇಲಿನಿಂದ ಮತ್ತೊಂದು ಮನೆಯ ಮೇ
ಹಾರುತ್ತ ಲಂಕೆಯನ್ನೆಲ್ಲಾ ಸುಟ್ಟುಹಾಕುತ್ತಿದ್ದಾ
ಅಗೋ ನೋಡು!" ಎಂದಳು.

ಸರಮೆ ಹೇಳಿದದು ನಿಜವೇ. ಹನುಮಂತ
ರಾಕ್ಷಸರಿಗೊಂದು ಪಾಠಕಲಿಸಲೇಬೇಕೆಂದು ನಿಶ್ಚಯ
ತನ್ನ ದೇಹವನ್ನು ಬಹಳ ಚಿಕ್ಕದು ಮಾಡಿಕೊಂ
ಕಟ್ಟುಗಳನ್ನು ಜಾರಿಸಿಕೊಂಡನು. ಮರುಕ್ಷಣದ
ದೇಹವನ್ನು ಬೆಳೆಸಿ ನಗರದ್ವಾರದ ಹತ್ತಿರವಿದ್ದ
ಇದ ಪರಿಘವನ್ನು ತೆಗೆದುಕೊಂಡು ತನ್ನೊಂದಿ
ರಾಕ್ಷಸರನ್ನೆಲ್ಲ ಹೊಡೆದು ಕೊಂದನು. ಆಗಲೇ
ನಿಗೆ ಲಂಕೆಯನ್ನು ಸುಟ್ಟುಹಾಕಬೇಕೆಂಬ ಅಲ
ಚನೆ ಬಂದಿತು. ಅವನು ಉರಿಯುವ ಬ
ದೊಂದಿಗೆ ಸ್ವೇಚ್ಛೆಯಾಗಿ ತಿರುಗಲಾರಂಭಿಸಿದನು.

ಮೊದಲು ಅವನು ಪ್ರಹಸ್ತನ ಮನೆಯ
ಸುಟ್ಟು, ಮಹಾಪಾರ್ಶ್ವನ ಮನೆಗೆ ಓಡಿದನು. ಅ

ಬೆಂಕಿ ಹಚ್ಚಿ ಕ್ರಮವಾಗಿ ಶುಕ, ವಜ್ರದಂಷ್ಟ್ರ, ಸಾರಣ, ಇಂದ್ರಜಿತು, ಜಂಬುಮಾಲಿ, ಸುಮಾಲಿ ಮೊದಲಾದ ರಾಕ್ಷಸ ಪ್ರಮುಖರ ಮನೆಗಳಿಗೆಲ್ಲ ಬೆಂಕಿ ಹಚ್ಚಿಬಿಟ್ಟನು. ಹಾಗೆಯೇ ಮನೆಮನೆಗೂ ಕಿಚ್ಚನ್ನಿಕ್ಕುತ್ತ ವಿಭೀಷಣನ ಮನೆಯನ್ನು ಮಾತ್ರ ಬಿಟ್ಟು ಉಳಿದೆಲ್ಲಾ ಮನೆಗಳಿಗೂ ಬೆಂಕಿ ಹಚ್ಚಿದನು. ರಾಕ್ಷಸರ ಮನೆಗಳು ಮಾತ್ರವಲ್ಲದೆ, ಅವರು ಎಷ್ಟೋ ಕಾಲದಿಂದ ಸೇರಿಸಿದ್ದ ಸಿರಿಸಂಪತ್ತುಗಳೆಲ್ಲಾ ಬೂದಿಯಾದವು. ಕಡೆಗೆ ರಾವಣನ ಅರಮನೆಗೂ ಬೆಂಕಿ ಹಚ್ಚಿದನು.

ಅದುವರೆಗೂ ರಾವಣನಿಗೆ ಭಯಪಡುತ್ತಿದ್ದ ಅಗ್ನಿದೇವನೂ ವಾಯುದೇವನೂ ಈಗ ನಿರ್ಭಯವಾಗಿ ವಿಜೃಂಭಿಸುವಂತೆ ತೋರಿತು. ಮನೆಯೊಳಗಿದ್ದ ಬೆಳ್ಳಿ ಬಂಗಾರಗಳೆಲ್ಲಾ ಕರಗಿಹೋದವು. ಮಹಾ ಮಹಾ ಭವನಗಳೆಲ್ಲಾ ಜರಿದುಬಿದ್ದವು. ಅಕಸ್ಮಾತ್ ಎದ್ದುಕೊಂಡ ಈ ಬೆಂಕಿಯನ್ನು ಹೇಗೆ ಆರಿಸಬೇಕೆಂದು ರಾಕ್ಷಸರಿಗೆ ತಿಳಿಯಲಿಲ್ಲ. ಸಾಕ್ಷಾತ್ ಅಗ್ನಿಹೋತ್ರನೇ ಕೋತಿಯ ರೂಪದಲ್ಲಿ ಬಂದು ಇಂಥಾ ಕೆಲಸ ಮಾಡುತ್ತಿರುವನೆಂದು ಅವರಿಗೆಲ್ಲ ಅನುಮಾನವಾಯಿತು. ಬಹಳ ಮಂದಿ ರಾಕ್ಷಸರು ಬೆಂಕಿಯ ಜ್ವಾಲೆಗೆ ಆಹುತಿಯಾದರು. ಎಷ್ಟೋ ಅಂದವಾದ ಲಂಕಾನಗರವು ಬೀಭತ್ಸ ರೂಪದಿಂದ ಪಾಳು ಬಿದ್ದಿತು. ರಾಕ್ಷಸರ ಆರ್ತನಾದವು ಆಕಾಶವನ್ನು ತುಂಬಿತು.

ಇಷ್ಟಾದ ಮೇಲೆ ಹನುಮಂತನ ಕೋಪವು ತಣೆಯಿತು. ಉರಿಯುವ ಲಂಕೆಯನ್ನು ನೋಡಿ ಅವನಿಗೆ ತೃಪ್ತಿಯಾಯಿತು. ಯಾವ ಕಾರ್ಯಕ್ಕಾಗಿ ಲಂಕೆಗೆ ಬಂದಿದ್ದನೋ ಆ ಕಾರ್ಯವೂ ಜಯಪ್ರದವಾಗಿತ್ತು. ಅಶೋಕವನವು ಮೊದಲೇ ಧ್ವಂಸವಾಗಿತ್ತು. ಲೆಕ್ಕವಿಲ್ಲದಷ್ಟು ರಾಕ್ಷಸರು ಸತ್ತು ಬಿದ್ದಿದ್ದರು. ಲಂಕೆಯಲ್ಲಿ ಬೂದಿಯ ರಾಶಿ ತುಂಬುವಂತಾಗಿದೆ. ಹನುಮಂತನನ್ನು ಕೇಳುವವರಿಲ್ಲ. ಅವನು ಸಮುದ್ರಕ್ಕೆ ಹೋಗಿ ತನ್ನ ಬಾಲವನ್ನು ಸಮುದ್ರದಲ್ಲಿ



ಮುಳುಗಿಸಿ ಬೆಂಕಿಯನ್ನು ಆರಿಸಿಕೊಂಡನು. ಆಗ ಅವನಿಗೆ ತಾನು ಬಹಳ ಕೆಟ್ಟ ಕೆಲಸ ಮಾಡಿದೆನೆಂಬ ಪಶ್ಚಾತ್ತಾಪ ತಲೆಯೆತ್ತಿತು. ಲಂಕೆಯೆಲ್ಲವೂ ಸುಟ್ಟುಹೋದ ಮೇಲೆ ಸೀತೆ ಕ್ಷೇಮವಾಗಿರುವುದುಂಟೇ ಎಂದು ಅವನಿಗೆ ಭಯವಾಯಿತು. ಕೋಪಾವೇಶದಿಂದ ಬುದ್ಧಿಗೆಟ್ಟು ಲಂಕೆಯನ್ನೆಲ್ಲ ಸುಟ್ಟುಹಾಕಿದ ತಾನು ಸೀತೆಯನ್ನು ರಕ್ಷಿಸಬೇಕೆಂಬ ಮಾತನ್ನೇ ಮರೆತಿದ್ದೆನಲ್ಲ! ನಿಜಕ್ಕೂ ಸೀತೆ ಬೆಂಕಿಗೆ ಆಹುತಿಯಾಗಿದ್ದರೆ ತಾನು ಕೂಡ ಇಲ್ಲಿಯೇ ಸತ್ತುಹೋಗಬೇಕೆಂದು ಅವನು ನಿಶ್ಚಯಿಸಿಕೊಂಡನು. ಆಗ ಅವನಿಗೆ ಇನ್ನೊಂದು ಆಲೋಚನೆ ಬಂದು, ಆಶ್ಚರ್ಯವೂ ಧೈರ್ಯವೂ ಉಂಟಾಯಿತು. ಅಷ್ಟು ದೊಡ್ಡ ಬೆಂಕಿ ಉರಿಯುತ್ತಿದ್ದರೂ ತನ್ನ ಬಾಲಕ್ಕೆ ಸ್ವಲ್ಪವೂ ಬೆಂಕಿಯ ಗಾಯಗಳಾಗಿಲ್ಲ. ತನ್ನನ್ನೇ ಸುಡದಿರುವ ಅಗ್ನಿಹೋತ್ರನು ಸೀತಾದೇವಿಯನ್ನು ಮುಟ್ಟಬಲ್ಲನೇ? ಹನುಮಂತನು ಬೇಗ ಬೇಗನೆ ಶಿಂಶುಪಾ ವೃಕ್ಷದ



ಬಳಿಗೆ ಹೋಗಿ ಅದರ ಕೆಳಗೆ ಕುಳಿತಿರುವ ಸೀತೆಯನ್ನು ನೋಡಿದನು. ಅವಳಿಗೆ ನಮಸ್ಕರಿಸುತ್ತ, "ಅಮ್ಮಾ ಅದೃಷ್ಟವು ಚೆನ್ನಾಗಿದ್ದುದರಿಂದ ನೀನು ಕ್ಷೇಮವಾಗಿರುವೆ!" ಎಂದನು.

ಸೀತೆ ಅವನೊಂದಿಗೆ. "ಹನುಮಂತಾ, ನೀನು ಮಾಡಿದ ಕೆಲಸಗಳೆಲ್ಲಾ ನನಗೂ ತಿಳಿಯಿತು. ನಿನ್ನ ಶಕ್ತಿಯನ್ನು ಎಷ್ಟೆಂದು ಹೇಳಲಿ? ನೀನೊಬ್ಬನೇ ಈ ರಾಕ್ಷಸರೆಲ್ಲರನ್ನೂ ಕೊಂದು ನನ್ನನ್ನು ರಾಮನ ಬಳಿಗೆ ಕರೆದೊಯ್ಯಬಲ್ಲೆ. ಇನ್ನು ಬೇಗನೇ ಹೋಗಿ, ರಾಮನೇ ಆ ಕಾರ್ಯವನ್ನು ಮಾಡುವಂತೆ ಪ್ರೇರೇಪಿಸು!" ಎಂದಳು.

"ನೀನು ಸ್ವಲ್ಪವೂ ಸಂದೇಹ ಪಡಬೇಡಮ್ಮ. ರಾಮನು ತಪ್ಪದೆ ಬಂದು ನಿನ್ನ ದುಃಖವನ್ನು ತೀರಿಸುತ್ತಾನೆ." ಎಂದು ಸೀತೆಗೆ ಹೇಳಿ ಹನುಮಂತನು ಅವಳಿಂದ ಅಪ್ಪಣೆ ಪಡೆದು, ಅಲ್ಲಿಂದ ಹೊರಟು ತಿರುಗಿ ಸಮುದ್ರವನ್ನು ದಾಟಲು ಸಿದ್ಧನಾಗಿ ತನ್ನ ದೇಹವನ್ನು ಬೇಕಾದಷ್ಟು ದೊಡ್ಡದಾಗಿ ಬೆ[ಳೆಸಿ]ಕೊಂಡನು. ಆ ಮೇಲೆ ಕೆಲವು ಹೆಜ್ಜೆ ಹಿಂದೆಯಿ[ಟ್ಟು] ವೇಗದಿಂದೋಡುತ್ತ ಪರ್ವತವನ್ನು ಒದ್ದು ಆಕಾ[ಶಕ್ಕೆ] ಹಾರಿದನು. ಪರ್ವತವು ನಡುಗಿ ಅಲ್ಲಲ್ಲಿ ಜರಿಯಿ[ತು].

ಅವನು ಆಕಾಶದಲ್ಲಿ ಮೋಡಗಳ ನಡು[ವೆ] ಹೊಕ್ಕು ಹೊರಬಂದು ಹಾರುತ್ತಾ ಸಮುದ್ರವ[ನ್ನು] ದಾಟುತ್ತಾ, ದೂರದಲ್ಲಿ ಮಹೇಂದ್ರ ಪರ್ವತವ[ನ್ನು] ನೋಡಿದ ಕೂಡಲೇ ಗಟ್ಟಿಯಾಗಿ ಸಿಂಹನಾದ ಮಾ[ಡಿ]ದನು. ಅಲ್ಲಿ ಹನುಮಂತನು ಹಿಂದಿರುಗಿ ಬರು[ವು]ದನ್ನೇ ಆತ್ಮಾತುರದಿಂದ ಇದಿರು ನೋಡುತ್ತಿದ್ದ ಅ[ಂಗ]ದನೇ ಮೊದಲಾದ ವಾನರರು ಆ ಸಿಂಹನಾದವ[ನ್ನು] ಕೇಳಿ ಗುರುತು ಹಿಡಿದರು. ಎಲ್ಲರಿಗೂ ಉತ್ಸಾ[ಹದ] ಚಿಲುಮೆ ಪುಟಿಯತೊಡಗಿತು. ಏಕೆಂದರೆ [ಹನು]ಮಂತನ ಸಿಂಹನಾದಧ್ವನಿ ಕಾರ್ಯ ಜಯವ[ನ್ನು] ಸೂಚಿಸುವುದಾಗಿತ್ತು.

ಅದನ್ನು ಆಲೈಸಿ ತಲೆದೂಗಿದ ಜಾಂಬವ[ಂತನು] ಉಳಿದ ವಾನರರನ್ನು ನೋಡಿ, "ಸಂದೇ[ಹವಿಲ್ಲ] ಹನುಮಂತನು ಹೋದ ಕಾರ್ಯ ಜಯ[ಪ್ರದ]ವಾಗಿದೆ. ಇಲ್ಲದಿದ್ದರೆ ಅವನು ಇಷ್ಟೊಂದು [ಜೋರಾ]ಗಿ ಸಿಂಹನಾದ ಮಾಡಲಾರ. ಯಾವ ಶ[ಬ್ದವೂ] ಇಲ್ಲದೆ ಬರುತ್ತಿದ್ದ" ಎಂದನು. ಈ ಮಾತು [ಕೇಳಿ] ವಾನರರು ಪರಮಾನಂದದಿಂದ ಹನುಮಂ[ತನನ್ನು] ನೋಡಲಿಕ್ಕಾಗಿ ಮರಗಳ ಮೇಲೂ ಶಿಖ[ರಗಳ] ಮೇಲೂ ಹತ್ತಿದರು. ಅವನು ದೂರದಲ್ಲಿ ಕಾ[ಣುತ್ತಲೇ]ವಾಗಲೇ ಮರದ ಕೊಂಬೆಗಳನ್ನು ಅಡಿಸಿದರು.

ಬೇಗದಲ್ಲೇ ಹನುಮಂತನು ಮಹೇಂದ್ರ [ಪರ್ವ]ತದ ಮೇಲೆ ಧೊತ್ತೆಂದು ಇಳಿದನು. ವಾನ[ರರು] ಅವನ ಸುತ್ತಲೂ ಮುತ್ತಿದರು. ಕೆಲವರು [...] ಕಂದಮೂಲ ಫಲಗಳನ್ನು ತಂದುಕೊಟ್ಟರು. [ಹನು]ಮಂತನು ಜಾಂಬವಂತ ಮೊದಲಾದ ಹಿರಿಯ[ರಿಗೂ] ಅಂಗದನಿಗೂ ನಮಸ್ಕಾರ ಮಾಡಿ ಬಾಯಿ[...]



ವನೇ "ನೋಡಿದೆ ಸೀತೆಯನ್ನು" ಎಂದು ಒಂದೇ ಮಾತಿನಲ್ಲಿ ಮುಖ್ಯ ವಿಷಯ ಹೇಳಿದನು. ಇದಲ್ಲವೇ ಎಲ್ಲರಿಗೂ ಜೀವ ಬರಿಸುವ ಮಾತಿನ ಚೂರು! ಈ ಮಾತು ಕೇಳಿದ ಕೂಡಲೇ ಆ ವಾನರರಿಗೆಲ್ಲ ಆದ ಸಂತೋಷಕ್ಕೆ ಪಾರವೇ ಇಲ್ಲ. ಕೆಲವರು ಸಿಂಹನಾದ ಮಾಡಿದರು. ಕೆಲವರು ಗಟ್ಟಿಯಾಗಿ ಕಿರುಚಿದರು. ಕೆಲವರು ಗರ್ಜಿಸಿದರು. ಕೆಲವರು ಸಾಧಾರಣ ಕೋತಿಗಳಂತೆ ಕಿಚಕಿಚಲಾಡಿದರು. ಕೆಲವರು ತಮ್ಮ ಬಾಲಗಳನ್ನು ಹಾರಿಸಿ ಹಾರಿಸಿ ನೆಲಕ್ಕೆ ಅಪ್ಪಳಿಸಿ ಕೊಂಡರು. ಕೆಲವರು ಚೆಂಡುಗಳ ಹಾಗೆ ಕುಣಿದಾಡಿ ದರು. ಕೆಲವರು ಹನುಮಂತನ ಶರೀರವನ್ನು ಗುದ್ದಿ ದರು. ಬಡೆದರು.

ಹನುಮಂತನು ವಾನರರೊಂದಿಗೆ "ಸೀತೆಯನ್ನು ನೋಡಿದೆ" ಎಂದಷ್ಟೇ ಹೇಳಿ ಮತ್ತೇನೂ ಹೇಳದೆ ಸುಮ್ಮನಿದ್ದನು. ಹಾರಿ ಬಂದ ಅವನ ಆಯಾಸವು ತುಸು ಶಮನವಾಗುತ್ತಿರಲು, ಅಂಗದನು ಅವನನ್ನು ಕುರಿತು, "ಹನುಮಂತಾ, ನೀನು ನೂರು ಯೋಜನ ದೂರವಿರುವ ಈ ಸಮುದ್ರವನ್ನು ಈ ಕಡೆಯಿಂದಾ ಕಡೆಗೂ, ಆಕಡೆಯಿಂದೀಕಡೆಗೂ ಹಾರಿದ ಹಾಗೆ ಬೇರೆ ಯಾರಿಗೂ ಇದು ಸಾಧ್ಯವಾಗುವ ಕಾರ್ಯವಲ್ಲ. ನಿನ್ನ ಬಲ ಪರಾಕ್ರಮಗಳೂ, ರಾಜಭಕ್ತಿಯೂ ಅಸಾಧಾರಣವಾದುವು. ನಮ್ಮೆಲ್ಲರ ಅದೃಷ್ಟವನ್ನುಳಿಸುವಂತೆ ನೀನು ರಾಮನ ಪತ್ನಿಯಾದ ಸೀತೆಯನ್ನು ನೋಡಿ ಬಂದಿರುವೆ. ಇನ್ನು ಮೇಲೆ ರಾಮನ ಸೀತಾ... ವಿರಹವು ಬೇಗನೇ ತೀರುತ್ತದೆ. ಹನುಮಾನ್! ನೀನ... ಧನ್ಯನು!" ಎಂದನು.

ನಡುವಿನಲ್ಲಿ ಹನುಮಂತನೂ, ಅಂಗದನೂ ಜಾಂಬವಂತನೂ ಮಹೇಂದ್ರ ಪರ್ವತದ ಮೇ... ಕುಳಿತಿರಲು, ಉಳಿದ ವಾನರರು ಅವರ ಸುತ್ತಲೂ ಶಿಲೆಗಳ ಮೇಲೆ ಕುಳಿತಿದ್ದರು. ಲಂಕೆಯಲ್ಲಿ ನಡೆ... ಸಮಾಚಾರಗಳನ್ನು ಹನುಮಂತನ ಬಾಯಿಂದ ಕೇ... ಬೇಕೆಂದು ಅವರಿಗೆಲ್ಲ ತುಂಬ ಕುತೂಹಲವಾಗಿತ್ತು.

ಆಗ ಜಾಂಬವಂತನು ಹನುಮಂತನೊಂದಿ... "ಅಪ್ಪಾ, ಹನುಮಾನ್, ನೀನು ಸೀತಾದೇವಿಯನ್ನು ಹೇಗೆ ನೋಡಿದೆ? ಆಕೆ ಯಾವ ಪರಿಸ್ಥಿತಿಯ... ದ್ದಾಳೆ? ರಾವಣನು ಅವಳನ್ನು ಯಾವ ರೀತಿಯ... ನೋಡುತ್ತಿದ್ದಾನೆ.? ಎಲ್ಲವನ್ನೂ ಸ್ಪಷ್ಟವಾಗಿ ಇಲ್ಲಿಯ... ಹೇಳಿಬಿಡು. ಏಕೆಂದರೆ, ಅದನ್ನೆಲ್ಲ ಕೇಳಿದ ಮೇ... ನಾವು ಮುಂದಿನ ಕರ್ತವ್ಯವನ್ನು ಆಲೋಚನೆ ಮಾ... ಬೇಕು. ಇದ್ದುದನ್ನು ಇದ್ದ ಹಾಗೆ ಹೇಳಿಬಿ... ಆಮೇಲೆ ರಾಮನೊಂದಿಗೆ ನಾವು ಯಾವುದನ್ನು ಹೇ... ಬಹುದು, ಯಾವುದನ್ನು ಹೇಳಬಾರದು ಎಂಬುದ... ಕುರಿತು ನಿರ್ಧರಿಸಿಕೊಂಡು ಹೊರಡೋಣ. ಅ... ಒಳ್ಳೆಯದು" ಎಂದನು.






ವೀರಹನುಮಾನ್

[illegible]ಮಂತನು ಯಾವತ್ತೂ ವೃತ್ತಾಂತವನ್ನು [illegible]ರರಿಗೆ ಹೇಳಲು ಸಿದ್ಧನಾಗಿ, ಸೀತೆಯಿರುವ [illegible]ಗೆ ತಲೆಬಾಗಿ ನಮಸ್ಕಾರ ಮಾಡಿ, ಆಮೇಲೆ ಹೀಗೆ [illegible]ತೊಡಗಿದನು :

"ನಾನು ಮಹೇಂದ್ರ ಪರ್ವತದ ಮೇಲಿನಿಂದ [illegible] ಕಡೆಗೆ ಹಾರಿದುದನ್ನು ನೀವೆಲ್ಲರೂ ನೋಡಿ [illegible] ? ಹಾಗೆ ನಾನು ಆಕಾಶಮಾರ್ಗದಲ್ಲಿ ವೇಗ [illegible] ಹೋಗುತ್ತಿರುವಾಗ ಬಂಗಾರದ ರಂಗಿನಿಂದ [illegible]ಳಿಸುವ ಪರ್ವತದ ಶಿಖರವೊಂದು ಸಮುದ್ರ [illegible]ಗಿನಿಂದ ನನ್ನ ದಾರಿಗೆ ಅಡ್ಡವಾಗಿ ಮೇಲೆದ್ದಿತು. [illegible] ಅದನ್ನು ಒದ್ದು ಪುಡಿ ಮಾಡೋಣವೆಂದು [illegible]ದೆ. ಆದರೆ ಆ ಪರ್ವತವು ನನ್ನನ್ನು ಬಹಳ [illegible]ದಿಂದ ಮಾತಾಡಿಸಿ, ನನ್ನ ತಂದೆಯಾದ [illegible]ದೇವನು ತನ್ನನ್ನು ಇಂದ್ರನ ವಜ್ರಾಯುಧದ [illegible]ದ ಕಾಪಾಡಿದನೆಂದೂ, ತನ್ನ ಹೆಸರು [illegible]ವೆಂದೂ, ರಾಮಕಾರ್ಯದ ಮೇಲೆ ಹೋಗು[illegible] ನನಗೆ ಸಹಾಯಮಾಡಲು ಎದ್ದಿರುವೆನೆಂದೂ ತುಸು ವಿಶ್ರಾಂತಿ ತೆಗೆದುಕೊಂಡು ಹೋಗಬೇಕೆಂದೂ ಕೇಳಿಕೊಂಡಿತು. ನಾನು ಬಹಳ ಅವಸರವಾಗಿ ಹೊರಟಿರುವೆನೆಂದು ಹೇಳಿ ಮೈನಾಕನನ್ನು ಸುಮ್ಮನೆ ಮುಟ್ಟಿದ ಹಾಗೆ ಮಾಡಿ ಮುಂದೆ ಹೊರಟುಬಿಟ್ಟೆ. ಆ ಮೇಲೆ ಸರ್ಪಗಳ ಮಾತೆಯಾದ ಸುರಸೆ ದೊಡ್ಡದಾಗಿ ಬಾಯಿ ತೆರೆದುಕೊಂಡು ನನ್ನನ್ನು ನುಂಗಲು ಬಂದಳು. ನಾನು ಅತಿ ಪವಿತ್ರವಾದ ಕೆಲಸದ ಮೇಲೆ ಹೊರಟಿರುವೆನೆಂದರೂ ಅವಳು ಕೇಳದೆ, ಯಾರಾದರೂ ತನ್ನ ಬಾಯೊಳಗೆ ಹೋಗಲೇಬೇಕೆಂದು ತನಗೆ ವರವಿರುವುದಾಗಿ ಹಟ ಹಿಡಿದಳು. ನಾನು ಅಂಗುಲ ಪ್ರಮಾಣದಷ್ಟು ಚಿಕ್ಕವನಾಗಿ ಅವಳ ಬಾಯಿಯಲ್ಲಿ ತೂರಿ ಮರುಕ್ಷಣವೇ ಹೊರಗೂ ಬಂದುಬಿಟ್ಟೆ. ಸುರಸೆ ನನ್ನನ್ನು ಮೆಚ್ಚಿ ಹರಸಿ ಕಳುಹಿಸಿಕೊಟ್ಟಳು. ಮತ್ತೆ ಸ್ವಲ್ಪ ದೂರ ಹೋದಾಗ ನನ್ನ ನೆರಳನ್ನು ಯಾವುದೋ ಹಿಡಿದು ಎಳೆಯತೊಡಗಿತು. ಅದು ಸಮುದ್ರದಲ್ಲಿ ಹೊಂಚು ಹಾಕುತಿದ್ದ ಒಂದು ಭಯಂಕರ ರಾಕ್ಷಸಿಯೆಂಬ ಸಂಗತಿ ನನಗೆ ನೆನಪಾ

೧೭. ಮಧುವನ ಭಂಗ



ಯಿತು. ನಾನು ಬೇರೆ ದಾರಿ ಕಾಣದೆ ಬಹಳ ಸಣ್ಣ ರೂಪಕ್ಕೆ ಬಂದು ಅದರ ಬಾಯೊಳಗೆ ಹೊಕ್ಕು ಎದೆಯನ್ನು ಸೀಳಿ ಅದನ್ನು ಕೊಂದು ಹೊರ ಬಿದ್ದೆ. ಅದರ ಹೆಸರು ಸಿಂಹಿಕೆಯೆಂದು ಆಕಾಶಸಂಚಾರಿಗಳ ಮಾತಿನಿಂದ ಆಮೇಲೆ ಗೊತ್ತಾಯಿತು.

"ತರುವಾಯ ನಿರಾತಂಕವಾಗಿ ಲಂಕೆಯನ್ನು ತಲಪಿದೆ. ಯಾರಿಗೂ ಗೊತ್ತಾಗದ ಹಾಗೆ ರಹಸ್ಯವಾಗಿ ಲಂಕೆಯೊಳಗೆ ಹೊಕ್ಕೆ. ಅಲ್ಲಿ ಲಂಕಾದೇವಿ ದೊಡ್ಡ ರಾಕ್ಷಸಿಯ ರೂಪದಲ್ಲಿ ನನ್ನನ್ನು ಕಂಡು ಹಿಡಿದು ಅಡ್ಡಗಟ್ಟಿದಳು. ನಾನು ಅವಳನ್ನು ಜಯಿಸಿ ಲಂಕೆಯೊಳಗೆಲ್ಲಾ ಸೀತೆಯನ್ನು ಹುಡುಕತೊಡಗಿದೆ. ರಾವಣನ ಮನೆಯಲ್ಲಿ ಸೀತೆಯಿರಲಿಲ್ಲ. ಮತ್ತೂ ಅಲ್ಲೆಲ್ಲಾ ಹುಡುಕಿದ ಮೇಲೆ ದೊಡ್ಡದೊಂದು ಉದ್ಯಾನವನದಲ್ಲಿ ಸೀತೆಯಿರುವುದನ್ನು ನೋಡಿದೆ. ಆ ಪ್ರದೇಶವು ಎಷ್ಟೋ ಸುಂದರವಾಗಿದ್ದರೂ, ಸೀತಾದೇವಿಗೆ ಅದರ ಸಂಬಂಧವೇ ಇರಲಿಲ್ಲ. ಅವಳು ಕೃಶಳಾಗಿ ದುಃಖದಿಂದ ಮುದುಡಿ ಕುಳಿತಿದ್ದಳು. ತಲೆಗೂದಲು ಜಡೆಗಟ್ಟಿ ಹೋಗಿತ್ತು. ಶೋಕದೇವತೆಯ ಹಾಗೆ ರಾಕ್ಷಸ ಸ್ತ್ರೀಯರ ಮಧ್ಯೆ ಕುಳಿತಿರುವ ಸೀತಾದೇವಿಯನ್ನು ನೋಡಿದೆ. ಅವಳೇ ಸೀತೆಯೆಂದು ನಿರ್ಧರಿಸಿಕೊಂಡೆ."

ಈ ವಿಧವಾಗಿ ಹನುಮಂತನು ತಾನು ನೋಡಿದುದನ್ನೂ, ಮಾಡಿದುದನ್ನೂ ವಿಸ್ತಾರವಾಗಿ ವಾನರರಿಗೆ ಹೇಳಿದನು. ಕಟ್ಟಕಡೆಗೆ ಹೀಗೆಂದನು: "ಸೀತೆ ಮಹಾ ಪತಿವ್ರತೆ. ಅವಳನ್ನು ನೋಡಿದ ಕೂಡಲೆ ನನಗೆ ಅವಳ ಮೇಲೆ ತುಂಬ ಭಕ್ತಿಯುಂಟಾಯಿತು. ವೀರಪತ್ನಿಯಾದ ಸೀತೆ, ರಾವಣನನ್ನು ತನ್ನ ಗಂಡನ ಕೊಲ್ಲಬೇಕೆಂದು ಹಟ ಹಿಡಿದಿದ್ದಾಳೆ. ನಾನು ಒಂದು ಮಾತು ನಿಮ್ಮೊಡನೆ ಹೇಳಬೇಕೆಂದಿದ್ದೇನೆ. ರಾವಣನನ್ನು ಕೊಂದು ಮುಗಿಸಲು ನಾವುಗಳೇ ಸಾಕು. ನಾವು ಆ ಕಾರ್ಯವನ್ನು ಮುಗಿಸಿ ಸೀತೆಯನ್ನು ಕರೆದುಕೊಂಡೇ ರಾಮಲಕ್ಷ್ಮಣರ ಬಳಿಗೆ ಹೋಗುವುದು ಒಳ್ಳೆಯದೆಂದು ನನಗೆ ತೋರುತ್ತದೆ. ಸತ್ಯ ಹೇ ಬೇಕಾದರೆ ನಾನೊಬ್ಬನೇ ರಾವಣನನ್ನು ಕೊಲ್ಲಬ ಇಂದ್ರಜಿತ್ತು ಪ್ರಯೋಗಿಸುವ ಎಂತೆಂತಹ ಅಸ್ತ್ರಗ ದರೂ ನನಗೇನೂ ಮಾಡಲಾರವು. ಅಂಗದನು ಒ ಬಿಟ್ಟರೆ ಆ ಇಂದ್ರಜಿತ್ತನ್ನು ಕೂಡಾ ನಾನೇ ಕೊಂ ಬಿಡುತ್ತೇನೆ. ಉಳಿದ ರಾಕ್ಷಸರನ್ನೆಲ್ಲ ಕೊಂದು ಸಲು ಜಾಂಬವಂತನೂ ಅಂಗದನೂ ಸಾ ಯಾರಿಂದಲೂ ಸಾವು ಬರದಂತೆ ವರ ಪ ಮೈಂದನೂ ದ್ವಿವಿಧನೂ ಇದ್ದಾರೆ. ನೀವೇನು ಹೇ ವಿರಿ? ಎಲ್ಲರೂ ಆಲೋಚನೆ ಮಾಡಿ ಒಂ ನಿರ್ಧಾರಕ್ಕೆ ಬನ್ನಿರಿ." ಎಂದನು.

ಹನುಮಂತನು ಹೇಳಿದ ಅಭಿಪ್ರಾಯಕ್ಕೆ ಅಂಗ ಕೂಡಲೇ ಒಪ್ಪಿಕೊಂಡು, "ಹೌದು. ಸೀತಾ ಯನ್ನು ನೋಡಿದ ಮೇಲೆ ಅವಳನ್ನು ಕರೆದುಕೊ ರಾಮನ ಬಳಿಗೆ ಹೋಗುವುದು ಬಹಳ

ಸೀತಾದೇವಿಯನ್ನು ನೋಡಿದೆವೇ ಹೊರತು ಕರೆದುಕೊಂಡು ಬರಲಿಲ್ಲವೆಂದು ರಾಮನೊಂದಿಗೆ ಹೇಗೆ ಹೇಳುವುದು ? ಇಷ್ಟರಲ್ಲೇ ರಾಕ್ಷಸ ಮುಖ್ಯರನ್ನೆಲ್ಲ ಹನುಮಂತನು ಕೊಂದಿದ್ದಾನೆ. ಇನ್ನು ಉಳಿದವರು ಸ್ವಲ್ಪ ಮಂದಿ ತಾನೆ ? ನಾವೆಲ್ಲರೂ ಹೋಗಿ ಅಡ್ಡ ಬಂದವರನ್ನು ಸದೆಬಡಿದು, ಸೀತಾದೇವಿಯನ್ನು ಕರೆದುಕೊಂಡೇ ಹೋಗೋಣ" ಎಂದನು.

ಆಗ ಜಾಂಬುವಂತನು ಅಂಗದನನ್ನು ಕುರಿತು "ನೀನು ಹೇಳಿದುದು ಚೆನ್ನಾಗಿದ್ದರೂ, ರಾವಣನನ್ನು ರಾಮನೇ ಕೊಲ್ಲಬೇಕೆಂದಿರುವ ಸೀತೆಯ ಅಭಿಪ್ರಾಯವನ್ನು ಮರೆಯಬಾರದು. ಆ ಮಾತಿನಲ್ಲಿ ಬಹಳ ಅರ್ಥವಿದೆ. ರಾಮನ ಆಜ್ಞೆಯಂತೆಯೇ ನಾವು ನಡೆದುಕೊಳ್ಳುವುದು ಒಳ್ಳೆಯದು. ದುಡುಕಿ ಮೇರೆಮೀರಿ ವರ್ತಿಸಿಬಿಡಬಾರದು" ಎಂದನು.

ಹನುಮಂತನು ಜಾಂಬುವಂತನ ಅಭಿಪ್ರಾಯವನ್ನು ಒಪ್ಪಿದನು. ರಾಮನು ವಾನರರೊಂದಿಗೆ ಸೀತೆಯನ್ನು ನೋಡಿ ಬರಬೇಕೆಂದು ಹೇಳಿದ್ದನೇ ಹೊರತು ಕರೆದುಕೊಂಡು ಬರುವಂತೆ ಹೇಳಲಿಲ್ಲ. ಸೀತೆ ವಾನರರೊಂದಿಗೆ ಹೊರಡಲು ಸಿದ್ಧಳಿಲ್ಲವೆಂಬುದನ್ನೂ ಹನುಮಂತನು ಒಪ್ಪಿದನು. ಆದುದರಿಂದ ಕಡೆಗೆ ಎಲ್ಲರೂ ಅನುಭವವೃದ್ಧನಾದ ಜಾಂಬುವಂತನ ಆಲೋಚನೆಯನ್ನೇ ಅಮೋದಿಸಿದರು.


ಇನ್ನು ಅವರು ಬೇಗನೇ ರಾಮನ ಬಳಿಗೆ ಹಿಂದಿರುಗಿ ಹೋಗಿ ಸೀತೆಯನ್ನು ನೋಡಿದ ಸಮಾಚಾರವನ್ನು ಹೇಳಬೇಕಾಗಿದೆ. ಅಂತೆಯೇ ಎಲ್ಲರೂ ಆಕಾಶಮಾರ್ಗದಲ್ಲೇ ಹೊರಟರು.

ಆಗ ದಾರಿಯಲ್ಲಿ ಭೂಲೋಕದ ನಂದನವನದಂತೆ ಮಧುವನವು ಅವರನ್ನು ಆಕರ್ಷಿಸಿತು. ಆ ಮಧುವನವನ್ನು ಕಾಪಾಡಲು ಸುಗ್ರೀವನು ತನ್ನ ಸೋದರಮಾವನಾದ ದಧಿಮುಖನನ್ನು ನಿಯಮಿಸಿದ್ದನು. ಅವನೊಂದಿಗೆ ತಕ್ಕಷ್ಟು ಸೈನಿಕರೂ ಇದ್ದರು.



ಮಧುವನದಲ್ಲಿ ಇಳಿದ ಕೂಡಲೇ ವಾನರರೆಲ್ಲರೂ ಮಧುವನ್ನು ಕುಡಿಯಲು ಅಂಗದನ ಅನುಮತಿ ಕೇಳಿದರು. ಅಂಗದನು ಕೂಡಲೇ ಅನುಮತಿ ಕೊಟ್ಟನು. ಸೀತೆಯನ್ನು ನೋಡಿದ ಸಂತೋಷದಲ್ಲಿ ವಾನರರು ಬೇಕಾದಷ್ಟು ಮಧುವನ್ನು ಕುಡಿಯ ತೊಡಗಿದರು.

ಅವರ ಆನಂದಾತಿಶಯವನ್ನು ಹೇಳುವುದೇನಿದೆ? ಒಬ್ಬರಿಗೊಬ್ಬರೂ ಇನ್ನೂ ಇನ್ನೂ ಕುಡಿಯುವಂತೆ ಪ್ರೋತ್ಸಾಹಿಸುತ್ತ ನಲಿದಾಡತೊಡಗಿದರು. ಕೆಲವರು ಹುಚ್ಚು ಹುಚ್ಚಾಗಿ ನಕ್ಕರು. ಮತ್ತೆ ಕೆಲವರು ಮೈಮರೆತು ಬಿದ್ದು ಹೊರಳಾಡಿದರು. ಕೆಲವರು ಆಚೆಗೂ ಈಚೆಗೂ ಓಡಿದರು. ಕೆಲವರು ಧಿಗಣ ಹಾಕಿದರು ಕೆಲವರು ಚಿಕ್ಕ ಚಿಕ್ಕ ಗುಂಪುಗಳಾಗಿ ಭುಜ ಹಿಡಿದುಕೊಂಡು ತಿರುಗಾಡಿದರು. ಕೆಲವರು ಏನೇನೋ ಗುಟ್ಟು ಮಾತು ಹೇಳಿಕೊಂಡರು. ಕೆಲವರು ತಾಳ ತಟ್ಟಿದರು. ಒಬ್ಬರ ಮೇಲೊಬ್ಬರು ಬಿದ್ದರು. ಯಾರಿಗೂ ದೇಹದ ಮೇಲೆ ಪರಿವೆಯಿರಲಿಲ್ಲ.



ವಾನರರು ವನದಲ್ಲಿ ಸಂಗ್ರಹಿಸಲ್ಪಟ್ಟ ಮಧುವನ್ನೆಲ್ಲಾ ಕುಡಿದು ತೀರಿಸಿದುದು ಮಾತ್ರವಲ್ಲದೆ ಮರಗಳನ್ನೆಲ್ಲಾ ಮುರಿದು ಹಾಳು ಮಾಡುವುದನ್ನು ನೋಡಿ, ಕಾವಲುಗಾರನಾದ ದಧಿಮುಖನಿಗೆ ಸಿಟ್ಟು ಬಂದಿತು. ಅವನು ವಾನರರನ್ನೆಲ್ಲಾ ವನವನ್ನು ಬಿಟ್ಟು ಹೊರಟುಹೋಗುವಂತೆ ಬಯ್ಯಲು ತೊಡಗಿದನು. ಅವನ ಮಾತನ್ನು ಯಾರೂ ಕೇಳಲಿಲ್ಲ. ಅವನು ನಯದಿಂದಲೂ ಭಯದಿಂದಲೂ ಅವರನ್ನು ಎಚ್ಚರಿಸಲು ನೋಡಿದನು. ಆಗ ವಾನರರು ಅವನ ಮೇಲೆಯೇ ಬಿದ್ದು, ಗುದ್ದಿ ಚಿವುಟಿ ಪರಚಿ ನಾನಾ ವಿಧವಾಗಿ ಹಿಂಸಿಸಿದರು.

ಹನುಮಂತನು ವಾನರರಿಗೆ ಉತ್ಸಾಹ ಬರುವಂತೆ. "ನೀವೇನೂ ಹಿಂಜರಿಯಬೇಡಿ. ಇಷ್ಟ ಬಂದ ಹಾಗೆ ಕುಡೀರಿ. ಯಾರು ಅಡ್ಡಬರುತ್ತಾರೋ ನೋಡುತ್ತೇನೆ." ಎಂದನು. ಎಲ್ಲರೂ ಹರ್ಷದಿಂದ ಕುಣಿಯುತ್ತಿರಲು, "ನಮ್ಮ ಹನುಮಂತ ಕೆಟ್ಟ ಕೆಲಸ ಮಾಡುವಂತೆ ಹೇಳಿದರೂ ಮಾಡುತ್ತೇವೆ" ಎಂದು ಅಂಗದನು ಅರ್ಥ ವೈಪರೀತ ಪರಿಸ್ಥಿತಿಯನ್ನು ಹೇಳಿದನು.

ಅಂಗದನ ಮಾತು ಕೇಳಿ ವಾನರರಿಗೆ ಇನ್ನಷ್ಟು ಹರ್ಷವಾಯಿತು. ಇನ್ನೇನೂ ಭಯವಿದೆ? ಯಾರ ಹಂಗಿದೆ? ಅವರು ತಮ್ಮನ್ನು ತಡೆದ ದಧಿಮುಖನ ಸೇವಕರನ್ನು ಹೊಡೆದು ಮಧುಪಾನ ಮಾಡುತ್ತ ಮರಗಳಲ್ಲಿದ್ದ ಎಲ್ಲಾ ಹಣ್ಣುಗಳನ್ನೂ ತಿಂದುಬಿಟ್ಟರು. ಅವರನ್ನು ತಡೆಯುವವರೇ ಇರಲಿಲ್ಲ. ಇಡೀ ಮಧುವನವೇ ನಾಶವಾಗಿ ಹೋಯಿತು.

ದಧಿಮುಖನು ಈ ದುರಾಗತವನ್ನು ನೋಡುತ್ತಾ ಸುಮ್ಮನಿರಲಾಗದೆ ತನ್ನ ಬಳಗವನ್ನು ಸೇರಿಸಿಕೊಂಡು ವಾನರರ ಮೇಲೆ ಯುದ್ಧಕ್ಕೆ ಬಂದನು. ದಧಿಮುಖನು ತಮ್ಮ ಹಿರಿಯನೆಂಬುದನ್ನು ಕೂಡಾ ಲೆಕ್ಕಕ್ಕೆ ತಾರದೆ ಅಂಗದನು ಅವನನ್ನು ಹೊಡೆದು ಹಣ್ಣುಗಾಯಿ ನೀರುಗಾಯಿ ಮಾಡಿದನು.

ಬೇರೇನೂ ಉಪಾಯಗಾಣದೆ ದಧಿಮುಖನು ಸೋತು ಸುಣ್ಣಾದ ಮುಖದಿಂದ ತನ್ನವರನ್ನು ಹಿಂದಿಟ್ಟುಕೊಂಡು ಸುಗ್ರೀವನ ಬಳಿಗೆ ದೂರು ಹೇಳಲು ಬಹಳ ವೇಗದಿಂದ ಅಲ್ಲಿಂದ ಹೊರಟನು.

ದಧಿಮುಖನು ದುಃಖಾವೇಗದಿಂದ ಬಂದು ತನ್ನ ಕಾಲ ಮೇಲೆ ಬೀಳುತ್ತಲೇ ಸುಗ್ರೀವನು ಏನು ಕಷ್ಟ ಬಂತೋ ಎಂದು ಹೆದರಿ, "ಅಯ್ಯೋ, ನನ್ನ ಕಾಲ ಮೇಲೆ ಬಿದ್ದುಬಿಟ್ಟೆಯಲ್ಲಾ? ಏಳು ಏಳು! ನಿನಗೇನೂ ಭಯವಿಲ್ಲ. ನಡೆದ ಸಂಗತಿ ಏನೆಂಬುದನ್ನು ಹೇಳು. ಮಧುವನದಲ್ಲಿ ಎಲ್ಲಾ ಚೆನ್ನಾಗಿದೆಯಷ್ಟೆ?" ಎಂದು ವಿಚಾರಿಸಿದನು.

"ಅದನ್ನೇ ಹೇಳಲು ಬಂದೆ ರಾಜಾ. ನಿನ್ನ ತಂದೆ ಋಕ್ಷರಾಜನ ಕಾಲದಲ್ಲಾಗಲೀ ನಿನ್ನ ಕಾಲದಲ್ಲಿ ಆಗಲೀ ಯಾರೂ ಮಾಡಲಾಗದ ಸಾಹಸವನ್ನು, ದೊಡ್ಡ ಅನ್ಯಾಯವನ್ನು ಈ ಕಾಲದವರು ಮಾಡಿ ಬಿಟ್ಟರು. ಅಂಗದನೇ ಮೊದಲಾದ ವಾನರರು ಮಧು





ವನದೊಳಗೆ ಪ್ರವೇಶಿಸಿ, ಅಡ್ಡ ಬಂದವರನ್ನು ಹೊಡೆದು ಬಡಿದು ಇಷ್ಟ ಪ್ರಕಾರ ಮಧುಪಾನ ಮಾಡಿ, ಚೆಲ್ಲುವಷ್ಟು ಚೆಲ್ಲಿ ವನ ಪೂರಾ ಹಾಳು ಮಾಡಿದರು. ನಿನ್ನ ಭಯ ಸ್ವಲ್ಪವೂ ಅವರಿಗಿರುವಂತೆ ಕಾಣುವುದಿಲ್ಲ. ನಮ್ಮನ್ನೆಲ್ಲಾ ಒಂದಿಷ್ಟೂ ಮರ್ಯಾದೆಯಿಲ್ಲದೆ ಹೊಡೆದು ಹಾಕಿದರು. ಇದಿಷ್ಟಕ್ಕೂ ಅಂಗದ ಹನುಮದಾದಿಗಳದೇ ಪ್ರೋತ್ಸಾಹ, ಧೈರ್ಯ." ಎಂದ ದಧಿಮುಖ.

ದಧಿಮುಖನು ಸುಗ್ರೀವನ ಬಳಿಗೆ ಬಂದು ಏನೋ ಹೇಳಿ ಗೋಳಿಡುವುದನ್ನು ರಾಮಲಕ್ಷ್ಮಣರು ನೋಡಿದರು. ಅವನು ಏನು ಹೇಳಿ ವೇದನೆ ಪಡುತ್ತಿರುವನೆಂದು ಅರ್ಥವಾಗದೆ ಲಕ್ಷ್ಮಣನು ಸುಗ್ರೀವನ ಬಳಿಗೆ ಬಂದು "ಯಾರಿವನು? ಏನು ಹೇಳುತ್ತಾನೆ?" ಎಂದು ಕೇಳಿದನು.

ಸುಗ್ರೀವನು ಲಕ್ಷ್ಮಣನೊಂದಿಗೆ, "ನಮ್ಮ ಸೀತೆಯನ್ನು ಹುಡುಕಲು ದಕ್ಷಿಣ ದಿಕ್ಕಿಗೆ ಹೊರಟಿದ್ದ ವಾನರರು ಮಧುವನವನ್ನು ಸೇರಿ ಇಷ್ಟ ಬಂದ ಹಾಗೆ ಕುಡಿದು ಕುಪ್ಪಳಿಸಿ ವನವನ್ನು ನಾಶ ಮಾಡುತ್ತಿದ್ದಾರಂತೆ. ಅವರು ಸೀತೆಯನ್ನು ನೋಡಿ ಬಂದಿರಬೇಕು. ಇಲ್ಲದಿದ್ದರೆ ಅವರು ಮಧುವನವನ್ನು ಭಂಗ ಮಾಡುವಷ್ಟು ಸಾಹಸ ಮಾಡಲಾರರು. ಅವರಲ್ಲಿ ಹನುಮಂತನು ನಿಜವಾಗಿ ಸೀತೆಯ ಜಾಡನ್ನು ತಿಳಿದುಕೊಂಡು ಬಂದಿರಬೇಕು. ಈ ಕೆಲಸ ಅವನ ಹೊರತು ಬೇರೊಬ್ಬರಿಂದ ಸಾಧ್ಯವಾಗುವಂತಹುದಲ್ಲ. ಜಾಂಬವಂತನೂ ಹನುಮಂತನೂ ಅಂಗದನೂ ಒಂದಾಗಿ ಬಿಟ್ಟರೆ ಅಪಜಯವೆಂಬುದಿಲ್ಲ. ಲಕ್ಷ್ಮಣಾ, ನೀನು ಕೂಡಾ ಆಲೋಚಿಸು. ಅವರು ಸೀತೆಯನ್ನು ನೋಡಿಲ್ಲದಿದ್ದರೆ, ನಾನಿಟ್ಟ ಗಡುವನ್ನು ಮೀರಿ ಬರುತ್ತಿರುವ ಅವರು ನಮ್ಮ ಮಧುವನವನ್ನು ಹೀಗೆ ಭಂಗ ಮಾಡುತ್ತಿದ್ದರೆ? ಆ ಮಧುವನವನ್ನು ನಮ್ಮ ತಂದೆಗೆ ಬ್ರಹ್ಮದೇವನು ಕೊಟ್ಟಿದ್ದು. ಅವರು ಕಾರ್ಯ ಸಾಧಿಸಿದವರಾದುದರಿಂದಲೇ ಅಷ್ಟೊಂದು ಧೈರ್ಯದಿಂದ ಬರುತ್ತಿದ್ದಾರೆ." ಎಂದನು.


ಈ ಸಮಾಚಾರವನ್ನು ಕೇಳಿದ ಕೂಡಲೇ ರಾಮಲಕ್ಷ್ಮಣರಿಗೆ ಬಹಳ ಸಂತೋಷವಾಯಿತು. ಆಗ ಸುಗ್ರೀವನು ದಧಿಮುಖನೊಂದಿಗೆ, "ನಮ್ಮ ವಾನರರು ಮಧುಪಾನ ಮಾಡಿದರೆ ಮಾಡುತ್ತಾರೆ ಬಿಡು. ಹೇಳಿದ ಕೆಲಸ ಮುಗಿಸಿ ಬಂದವರಾದುದರಿಂದಲೇ ಹಾಗೆ ಮಾಡುತ್ತಾರೆ. ನಾನು ಅವರನ್ನು ಕ್ಷಮಿಸಿದ್ದೇನೆ ಬಿಡು. ಅವರು ಹೋದ ಕೆಲಸ ಹೇಗೆ ಮುಗಿಸಿಕೊಂಡು ಬಂದರೆಂದು ತಿಳಿಯಲು ನಾನೂ ರಾಮಲಕ್ಷ್ಮಣರೂ ಕುತೂಹಲ ಪಡುತ್ತಿದ್ದೇವೆ. ಅವರಿಗೆ ಈ ಸಂಗತಿ ಹೇಳಿ ಸಾಧ್ಯವಾದಷ್ಟು ಬೇಗ ಬರಲು ಹೇಳು" ಎಂದನು.

ದಧಿಮುಖನು ಸುಗ್ರೀವನಿಗೂ ರಾಮಲಕ್ಷ್ಮಣರಿಗೂ ನಮಸ್ಕಾರಮಾಡಿ, ದಿಗಿಲು ಕಳೆದವನಾಗಿ ಬಂದ ಹಾಗೇ ಮಧುವನಕ್ಕೆ ಹಿಂದಿರುಗಿ ಹೋಗಿ

ಅಂಗದನನ್ನು ಕಂಡು, "ಅಪ್ಪಾ, ಅಂಗದಾ, ನಮ್ಮವರು ನಿನ್ನನ್ನು ಅಡ್ಡಗಟ್ಟಿದರೆಂದು ಕೋಪವಿಟ್ಟುಕೊಳ್ಳಬೇಡಪ್ಪ. ಯುವರಾಜನಾದ ನಿನಗೆ ಈ ಮಧುವನದ ಮೇಲೆ ಬೇಕಾದಷ್ಟು ಅಧಿಕಾರವಿದ್ದೇ ಇದೆ. ನಾನೇ ಸ್ವಲ್ಪ ದುಡುಕಿ ತಪ್ಪುಮಾಡಿದೆ. ಕ್ಷಮಿಸಪ್ಪ. ನೀವೆಲ್ಲಾ ಇಲ್ಲಿಗೆ ಬಂದಿರೆಂಬುದನ್ನು ಕೇಳಿ ಸುಗ್ರೀವನು ತುಂಬ ಸಂತೋಷಪಟ್ಟು ನಿಮ್ಮನ್ನು ನೋಡಲು ರಾಮಲಕ್ಷ್ಮಣರೊಂದಿಗೆ ಬಹಳ ಆತುರದಲ್ಲಿದ್ದಾನೆ. ನಿಮ್ಮೆಲ್ಲರನ್ನೂ ಬೇಗನೇ ಕಳುಹಿಸುವಂತೆ ಹೇಳಿದ್ದಾನೆ" ಎಂದನು.

ಅದನ್ನು ಕೇಳಿ ಅಂಗದನು ಇತರ ವಾನರರೊಂದಿಗೆ "ಓಹೋ! ನಾವು ಇಲ್ಲಿಗೆ ಬಂದ ವಾರ್ತೆ ಆಗಲೇ ರಾಮಲಕ್ಷ್ಮಣರಿಗೆ ಗೊತ್ತಾಗಿ ಹೋಗಿದೆ. ಇನ್ನು ಮೇಲೆ ತಡಮಾಡುವುದು ಒಳ್ಳೆಯದಲ್ಲ. ಎಲ್ಲರೂ ಸ್ವಲ್ಪ ಕುಡಿದು ವಿಶ್ರಾಂತಿ ಪಡೆದುದು ಆಯಿತಲ್ಲ? ಇನ್ನು ಎಲ್ಲರೂ ಹೊರಡೋಣ ಏಳಿ! ಏಳಿ! ಏಳಿ!" ಎಂದನು. ವಾನರರೆಲ್ಲ ಕುಡಿದು ಆಡಿ ವಿಶ್ರಾಂತಿ ಪಡೆದು ಹೊರಡಲು ಸಿದ್ಧರಾಗಿಯೆ ಇದ್ದರು. ಅಂಗದನು ಆಜ್ಞೆ ಮಾಡದಿದ್ದರೂ ಅವನ ಸನ್ನೆಗಳೇ ಅವರಿಗೆ ಆಜ್ಞೆಯಾಗಿತ್ತು. ಮೊದಲು ಅಂಗದನು ಆಕಾಶದ ಮೇಲೆ ಹಾರಿದ್ದೇ ತಡ, ಎಲ್ಲಾ ವಾನನರೂ ಆಕಾಶದ ಮೇಲಿದ್ದರು. ಅವರೆಲ್ಲ ಮೇಘಗಳಂತೆ ತೇಲುತ್ತ ಸುಗ್ರೀವನ ಬಳಿಗೆ ಬರುತ್ತಿದ್ದರು.

ಆ ಸಮಯದಲ್ಲಿ ಸುಗ್ರೀವನು ರಾಮನೊಂದಿಗೆ, "ವಾನರರು ಸೀತೆಯನ್ನು ನೋಡಿ ಬಂದರೆನ್ನಲು ಸಂದೇಹವೇ ಇಲ್ಲ. ನಾನು ಇಟ್ಟಿರುವ ಗಡು ದಾಟಿ ಹೋಗಿ ಇಷ್ಟು ಕಾಲವಾದ ಮೇಲೆ ಕಾರ್ಯಸಾಧನೆ ಆಗದಿದ್ದರೆ ಬರುವವರೇ ಅಲ್ಲ. ಅಂಗದನು ಹೇಳಿದ ಕೆಲಸ ಮುಗಿಸದೆ ನನ್ನ ಮುಖ ನೋಡಲು ಬರುವವನಲ್ಲ. ಆದರಲ್ಲೂ ಮಧುವನದಲ್ಲಿ ಹೀಗೆ ಹಾವಳಿ ನಡೆಸಲಾರ. ಆದುದರಿಂದ ಸೀತೆಯ ಸಮಾಚಾರ



ಗೊತ್ತಾದ ಹಾಗೆಯೇ ಸರಿ. ಇನ್ನು ನಿನ್ನ ದುಃಖ ತೀರುತ್ತದೆ" ಎಂದನು.

ಅದೇ ಸಮಯದಲ್ಲಿ ವಾನರರು ಆಕಾಶಮಾರ್ಗದಲ್ಲಿ ಬರುತ್ತಾ ಮಾಡುತ್ತಿರುವ ಸಿಂಹನಾದಗಳು ಕೇಳಬಂದುವು. ಮತ್ತೆ ಕೆಲವು ಕ್ಷಣಗಳಲ್ಲಿ ವಾನರರೆಲ್ಲರೂ ಸುಗ್ರೀವನ ಮುಂದೆ ತುಸು ದೂರದಲ್ಲಿ ಭೂಮಿಗಿಳಿದು ಸಾಲಾಗಿ ನಿಂತರು.

ಹನುಮಂತನು ಮುಂದೆ ಬಂದು ರಾಮನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, "ಸೀತೆಯನ್ನು ನೋಡಿದೆ. ಅವಳು ಕ್ಷೇಮವಾಗಿದ್ದಾಳೆ" ಎಂದನು. ಆಗ ರಾಮನು ಹನುಮಂತನನ್ನು ಆಪ್ಯಾಯತೆ ತುಂಬಿದ ಕಣ್ಣುಗಳಿಂದ ನೋಡಿದನು.

ಆಮೇಲೆ ರಾಮನು ವಾನರರನ್ನು ನೋಡಿ, "ವಾನರರೇ, ಸೀತಾದೇವಿ ಎಲ್ಲಿದ್ದಾಳೆ? ನನ್ನ ಮೇಲೆ ಅವಳ ಭಾವನೆ ಹೇಗಿದೆ? ಎಲ್ಲಾ ಸಂಗತಿಯನ್ನೂ ವಿವರವಾಗಿ ತಿಳಿಸಿರಿ." ಎಂದನು.

ವಾನರರೆಲ್ಲ ಹನುಮಂತನನ್ನು ನೋಡಿ, "ನೀನೇ ನೋಡಿದವನು. ನೀನೇ ಹೇಳು" ಎಂದರು. ಹನುಮಂತನು ಸೀತೆ ಇರುವ ದಿಕ್ಕಿಗೆ ತಿರುಗಿ ನಮಸ್ಕಾರ ಮಾಡಿ, ಅವಳು ತನಗೆ ಕೊಟ್ಟ ಚೂಡಾಮಣಿಯನ್ನು ತೆಗೆದು ರಾಮನ ಕೈಗೆ ಕೊಡುತ್ತ, ತಾನು ಸೀತಾದೇವಿಯನ್ನು ಹೇಗೆ ನೋಡಿದೆನೆಂಬ ವಿವರಗಳನ್ನೂ ಹೇಳಿದನು.

"ಬಹಳ ಕಡೆಗೆ ಹುಡುಕಿ ನೋಡುತ್ತಾ ಕಟ್ಟಕಡೆಗೆ ನೂರು ಯೋಜನ ದೂರವಿರುವ ಸಮುದ್ರವನ್ನು ದಾಟಿ ಲಂಕೆಗೆ ಹೋದೆನು. ರಾವಣನೆಂಬ ರಾಕ್ಷಸ ರಾಜನ ಪಟ್ಟಣವದು. ಆ ಲಂಕೆಯಲ್ಲಿ ಸೀತಾದೇವಿ ರಾಕ್ಷಸ ಸ್ತ್ರೀಯರ ನಡುವೆ ಸೊರಗಿ ಕುಳಿತಿರುವುದನ್ನು ನೋಡಿದೆ. ಅವಳು ಅನುಭವಿಸುವ ಕಷ್ಟಗಳು ಅವಳಿಗೆ ಬರತಕ್ಕಂತಹವಲ್ಲ. ನಾನು ಅವಳನ್ನು ನೋಡುವ ಸಮಯಕ್ಕೆ ಅವಳು ಆತ್ಮಹತ್ಯೆ ಮಾಡಿಕೊಳ್ಳಲು ತಯಾರಾಗುತ್ತಿದ್ದಳು. ನಾನು ಹೇಗೋ ಆಕೆಗೆ ನನ್ನ ಮೇಲೆ ನಂಬುಗೆ ಬರುವ ಹಾಗೆ ಮಾಡಿ, ಆಕೆಯನ್ನು ಮಾತಾಡಿಸಿದೆ. ನೀವಿಬ್ಬರೂ ಚಿತ್ರಕೂಟ ಪರ್ವತದ ಮೇಲಿರುವಾಗ ನಡೆದ ಒಂದು ಕಾಗೆಯ ವೃತ್ತಾಂತವನ್ನು ನಿನಗೆ ಗುರುತಿಗಾಗಿ ಹೇಳಿದಳು. ಅವಳು ನಿನ್ನ ಚೂಡಾಮಣಿಯನ್ನು ಬಹಳ ಶ್ರದ್ಧೆಯಿಂದ ಕಾಪಾಡಿದ್ದಳಂತೆ. ತಾನು ಇನ್ನು ಒಂದು ತಿಂಗಳವರೆಗೆ ಮಾತ್ರ ಬದುಕಿರುವೆನೆಂದು ನಿನಗೂ ಸುಗ್ರೀವನಿಗೂ ಹೇಳಲ ಹೇಳಿದ್ದಾಳೆ. ರಾವಣನನ್ನು ನೀನು ಕೊಂದು ಅವಳನ ಕರೆದುಕೊಂಡು ಬರಬೇಕೆಂಬುದು ಆಕೆಯ ಅಭಿಲಾ ಆದುದರಿಂದ ಇನ್ನು ತಡ ಮಾಡಬಾರದು. ಆದಷ್ ಬೇಗ ಸಮುದ್ರವನ್ನು ದಾಟುವ ಉಪಾಯವನ ಆಲೋಚಿಸಬೇಕು."

ಹನುಮಂತನು ಕೊಟ್ಟ ಚೂಡಾಮಣಿಯನ ಎದೆಯ ಮೇಲಿಟ್ಟುಕೊಂಡು ರಾಮನು ಭೋರ ಅತ್ತನು. ಅವನೊಂದಿಗೆ ಲಕ್ಷ್ಮಣನೂ ಅಳತೊ ಡನು. ರಾಮನು ಕಣ್ಣೀರು ಸುರಿಸುತ್ತಾ ಸುಗ್ರೀ ನೊಂದಿಗೆ, "ಮಿತ್ರಾ, ಸುಗ್ರೀವಾ! ಈ ಚೂಡಾಮ ಯನ್ನು ನೋಡಿದ ಕೂಡಲೇ ನನ್ನ ಗುಂಡಿಗೆ ದ್ರ ಹೋಯಿತಯ್ಯ! ಇದನ್ನು ಮದುವೆಯ ಕಾಲ ಜನಕನು ಸೀತೆಗೆ ಅಲಂಕರಿಸಿದ್ದನು. ಇದನ್ನು ಧ ಕೊಂಡು ಬಹಳ ಉತ್ಸಾಹದಿಂದ ನನ್ನ ಬದಿ ಕುಳಿತ ಸೀತೆ ಈಗಲೂ ಕಣ್ಣಿಗೆ ಕಟ್ಟಿದಂತಿ ಈ ಚೂಡಾಮಣಿಯನ್ನು ನೋಡಿದರೆ ನನಗೆ ದ ನನ್ನೂ ಜನಕನನ್ನೂ ನೋಡಿದಂತಾಗಿದೆ. ಸೀತೆ ಪ್ರತ್ಯಕ್ಷಳಾದ ಹಾಗೆ ಕಾಣುತ್ತದೆ. ನನ್ನೊಂದಿಗೆ ಕಾ ಬಂದವಳಿಗೆ ಎಂತಹ ದುರ್ಗತಿ ಬಂದಿತು! ಬೇ ಬೇಡೆಂದರೂ ಕೇಳದೆ ಒತ್ತಾಯದಿಂದ ನನ್ನೊ ಬಂದಳಲ್ಲಾ!" ಎಂದನು.






ವೀರಹನುಮಾನ್

...ಎಲ್ಲಿರುವಳೆಂಬ ಸಂಗತಿ ಗೊತ್ತಾದ ಮೇಲೆ ...ಲು ಕ್ಷಣವನ್ನೂ ಅಲ್ಲೇ ಇದ್ದು ಕಳೆಯಲು ...ಮನಿಗೆ ಕಷ್ಟವಾಯಿತು. ಆಗಲೇ ಸೀತೆಯ ...ಗೆ ಹೋಗಿ ನಿಲ್ಲಬೇಕೆನಿಸಿತು. ಭೀರುಸ್ವಭಾವ ...ವಾದ ಸೀತೆ ರಾಕ್ಷಸ ಸ್ತ್ರೀಯರ ನಡುವಿನಲ್ಲಿ ...ಕೊಂಡಿದ್ದಾಳೆಂದು ನೆನೆಯುವುದೇ ತಾಳಲಾರ ...ದನು. ಈ ಉದ್ವೇಗದೊಂದಿಗೆ ಸೀತೆ ಹನುಮಂತ ...ಡನೆ ಏನೇನು ಹೇಳಿದಳೆಂಬುದನ್ನು ಕೇಳುತ್ತಾ ...ವಾಗ ರಾಮನಿಗೆ ಸೀತೆ ಬದುಕಿರುವಳಲ್ಲಾ ಎಂಬ ...ದ ರೋಮಾಂಚನವಾಗುತ್ತಿತ್ತು. ಆದುದರಿಂದ ...ನು ಹನುಮಂತನು ಹೇಳಿದಷ್ಟರಲ್ಲಿ ತೃಪ್ತ ...ದೆ, "ಸೀತೆ ಇನ್ನೇನು ಹೇಳಿದಳು?" ಎಂದು ...ದನು. ಆಗ ಹನುಮಂತನು ರಾಮನಿಗೆ ಕಾಗೆಯ ...ನ್ನು ಸೀತೆ ಹೇಳಿದ ಹಾಗೆಯೇ ರಾಮನೊಂದಿಗೆ ...ಯಾದ ಮೇಲೆ,

"...ತಾದೇವಿ ಈ ವೃತ್ತಾಂತವನ್ನು ನಿನಗೆ ನಾನು ...ಕೆಂತಲೇ ಹೇಳಿದ್ದಾಳೆ. ಒಂದು ದರ್ಭೆ ಹುಲ್ಲಿಗೆ ಅಷ್ಟೊಂದು ಶಕ್ತಿ ಬರುವ ಹಾಗೆ ಮಾಡಿದ ರಾಮನು ಇಲ್ಲಿಗೆ ಬಂದು ಈ ರಾಕ್ಷಸರ ಮೇಲೆ ಬಾಣ ಪ್ರಯೋಗಮಾಡದೆ ಏಕೆ ಸುಮ್ಮನಿದ್ದಾನೋ ? ರಾಮನಿಗೆ ನನ್ನ ಮೇಲೆ ಸ್ವಲ್ಪ ಮಾತ್ರ ಅನುರಾಗವಿದ್ದರೂ ತತ್‌ಕ್ಷಣವೇ ಬಂದು ರಾವಣನನ್ನು ಕೊಲ್ಲಬೇಕೆಂದು ಹೇಳು. ಕಡೇಪಕ್ಷ ನನ್ನನ್ನು ಕಾಪಾಡಲಿಕ್ಕಾಗಿ ರಾಮನು ಲಕ್ಷ್ಮಣನನ್ನಾದರೂ ಕಳುಹಿಸಬಾರದೇ ? ದೇವತೆಗಳನ್ನಾದರೂ ಜಯಿಸಬಲ್ಲ ವೀರಾಧಿವೀರರಾದ ಅವರಿಬ್ಬರೂ ನನ್ನನ್ನು ಉಪೇಕ್ಷಿಸಿ ಏಕೆ ಸುಮ್ಮನಿದ್ದಾರೋ ? ನನ್ನಲ್ಲಿ ಏನೋ ಪಾಪದ ದೋಷವಿದ್ದಿರಬೇಕು. ಅದಕ್ಕೇ ರಾಮಲಕ್ಷ್ಮಣರು ಬಂದು ನನ್ನನ್ನು ನೋಡದೆ ಸುಮ್ಮನಿದ್ದಾರೆ—ಎಂದು ಮುಂತಾಗಿ ಹೇಳಿದಳು. ನಾನು ಆಕೆಗೆ ಸಮಾಧಾನ ಹೇಳುತ್ತ, ರಾಮಲಕ್ಷ್ಮಣರಿಬ್ಬರೂ ನಿನ್ನ ವಿಯೋಗದಿಂದ ಅಪಾರ ದುಃಖದಲ್ಲಿದ್ದಾರೆ. ಈಗ ನಾನು ಬಂದು ನೋಡಿದುದರಿಂದ, ಇನ್ನು ಬಹು ಬೇಗನೇ ನಿನ್ನ ಕಷ್ಟಗಳೆಲ್ಲ ತೀರುತ್ತವೆ.

೧೮. ವಾನರಸೇನೆಗಳ ಪ್ರಯಾಣ



ಇನ್ನು ನೀನು ದುಃಖಿಸಿಕೊಂಡಿರಬೇಕಾದ ಅಗತ್ಯವಿಲ್ಲ ಎಂದು ಮುಂತಾಗಿ ಸಮಾಧಾನ ಹೇಳಿದೆ. ಕಡೆಗೆ ಆಕೆ ಬೆದರಿ ಆಚೆಗೆ ಈಚೆಗೆ ನೋಡುತ್ತ ತನ್ನ ಜಡೆಯಲ್ಲಿದ್ದ ಚೂಡಾಮಣಿಯನ್ನು ತೆಗೆದು ನನ್ನ ಕೈಗೆ ಕೊಟ್ಟಳು. ನಿಮ್ಮೆಲ್ಲರ ಕ್ಷೇಮವನ್ನೂ ಕೇಳಿದ್ದಾಳೆ. ಸುಗ್ರೀವನ ವಾನರ ಬಲದೊಂದಿಗೆ ರಾಮಲಕ್ಷ್ಮಣರೂ ಬಂದು ರಾವಣನನ್ನು ಅವನ ಪರಿವಾರದೊಂದಿಗೆ ಕೊಲ್ಲುತ್ತಾರೆಂದು ನಾನು ಆಕೆ ನಂಬುವ ಹಾಗೆ ಧೈರ್ಯ ಹೇಳಿ ಬಂದಿದ್ದೇನೆ" ಎಂದನು ಹನುಮಂತ.

ಹನುಮಂತನು ಹೇಳಿದ ಮಾತುಗಳನ್ನು ಕೇಳಿ ರಾಮನು ತುಂಬಾ ಸಂತೋಷಪಟ್ಟು, "ಈ ಹನುಮಂತನು ಬಹಳ ದೊಡ್ಡ ಕೆಲಸಮಾಡಿದ್ದಾನೆ. ಇಂತಹ ಕೆಲಸ ಇನ್ನೊಬ್ಬರಿಂದ ಸಾಧ್ಯವಾಗುವಂತಹುದಲ್ಲ. ಸಮುದ್ರವನ್ನು ದಾಟಬಲ್ಲವರು ಈ ಹನುಮಂತನ ತರುವಾಯ ಗರುತ್ಮಂತನೂ, ವಾಯುದೇವನೂ ಮಾತ್ರವೇ ಇರುವರೆಂದು ತೋರುತ್ತದೆ. ಲಂಕೆಯೊಳಗೆ ಪ್ರವೇಶಮಾಡಿ ಜೀವದೊಂದಿಗೆ ಹಿಂದಿರುಗುವುದೇನೂ ಸಾಮಾನ್ಯ ವಿಷಯವಲ್ಲ. ಮೊದಲು ಪ್ರವೇಶಿಸಲಿಕ್ಕೇ ಇನ್ನೊಬ್ಬರಿಗೆ ಸಾಧ್ಯವಾಗದು. ಹನುಮಂತನು ಲಂಕೆಯೊಳಗೇ ಹೊಕ್ಕು ಹುಡುಕಿ ಸೀತೆಯನ್ನು ಕಂಡುಹಿಡಿದುದು ಮಾತ್ರವಲ್ಲದೆ. ವನಭಂಗದಿಂದ ರಾಕ್ಷಸರ ಬಲಪರೀಕ್ಷೆ ಮಾಡಿ. ರಾವಣನನ್ನೂ ಅಲುಗಿಸಿ ನೋಡಿ, ಬೆಂಕಿಹಚ್ಚಿ ಬಂದಿದ್ದಾನೆ ಸುಗ್ರೀವನ ಆಜ್ಞೆಯನ್ನು ಪಾಲಿಸಿದ್ದು ಮಾತ್ರವಲ್ಲದೆ ಸ್ವತಂತ್ರಿಸಿ ಇನ್ನೂ ಹೆಚ್ಚು ಕಾರ್ಯಗಳನ್ನು ಸಾಧಿಸಿ ಬಂದಿದ್ದಾನೆ. ಹೀಗೆ ಮಾಡಿದುದರಿಂದ ಸುಗ್ರೀವನಿಗೂ ಬಹಳ ತೃಪ್ತಿಯಾಗಿದೆ ಹನುಮಂತನು ಮಾಡಿದ ಮಹಾಕಾರ್ಯವು ನಮ್ಮ ರಘುವಂಶಕ್ಕೇ ಮೇಲ್ಮೆಯುಳ್ಳದಾಗಿದೆ. ಅ ಹನುಮಂತನಿಗೆ ತಕ್ಕ ರೀತಿಯಲ್ಲಿ ಸತ್ಕಾರ ಮಾ ಲಾಗದ ಸ್ಥಿತಿಯಲ್ಲಿ ಇರುವೆನಲ್ಲಾ ಎಂದು ಚಿ ಯಾಗಿದೆ. ನನ್ನ ಪ್ರಾಣವನ್ನೂ ಸೀತೆಯ ಪ್ರಾ ವನ್ನೂ ಕಾಪಾಡಿದ ಹನುಮಂತನ ಋಣವ ಯಾವ ರೀತಿಯಲ್ಲಿ ತೀರಿಸುವೆನು ? ಯಾವ ಬ ಕೊಟ್ಟು ತೀರಿಸುವೆನು ? ಒಂದುಸಾರಿ ಅವನ ಗಾಢಾಲಿಂಗನ ಮಾಡಿಕೊಳ್ಳುತ್ತೇನೆ" ಎನ್ನು ಹನುಮಂತನನ್ನು ಗಾಢವಾಗಿ ಆಲಿಂಗಿಸಿಕೊಂಡ ಆಗ ಹನುಮಂತನಿಗೂ, ಅದನ್ನು ನೋಡಿದವರಿಗ ರೋಮಾಂಚನವಾಯಿತು.

ಆಮೇಲೆ ರಾಮನು ಸ್ವಲ್ಪ ಆಲೋಚನೆಮಾ "ವಾನರ ಸೇನೆಗಳು ಸಮುದ್ರವನ್ನು ದಾ ಆಚೆಯ ದಡಕ್ಕೆ ಸೇರುವ ಬಗೆ ಹೇಗೆ ? ಅದ ನೆನೆಯುವಾಗಲೇ ಭಯವಾಗುತ್ತದೆ. ಸೀತಾದೇ ಧೈರ್ಯದ ಮಾತು ಹೇಳಿದಂತೆ ಅಲ್ಲ ಈ ಕಾ ಸಮುದ್ರವನ್ನು ದಾಟುವ ಉಪಾಯವೇನು

ಎನ್ನುತ್ತಾ, ಹನುಮಂತನನ್ನು ನೋಡಿದನು. ಅದಕ್ಕೆ ಉತ್ತರವಾಗಿ ಸುಗ್ರೀವನು ಹೀಗೆಂದನು :


“ರಾಮಾ, ಅದಕ್ಕಾಗಿ ಚಿಂತಿಸಬೇಡ. ಸೀತಾದೇವಿ ಇರುವ ಸ್ಥಳವೂ, ಶತ್ರು ಇರುವ ಸ್ಥಳವೂ ತಿಳಿದು ಬಂದ ಮೇಲೆ ಉಳಿದ ಸಮಸ್ಯೆಗಳಾವುದೂ ಶತ್ರು ಸಂಹಾರಕ್ಕೆ ಅಡ್ಡ ಬರುವಂಥವಲ್ಲ. ನಾವು ಸಮುದ್ರಕ್ಕೆ ಸೇತುವೆ ಕಟ್ಟೋಣ. ನಾವು ಹಾಯಾಗಿ ಸಮುದ್ರವನ್ನು ದಾಟಿ, ರಾವಣನನ್ನು ಕೊಂದು ಸೀತಾದೇವಿಯನ್ನು ಕರೆದುಕೊಂಡು ಬರೋಣ. ಸೇತುವೆ ಕಟ್ಟಿ, ಲಂಕಾನಗರವು ನಮ್ಮ ಕಣ್ಣಿಗೆ ಬಿದ್ದ ಕೂಡಲೇ ರಾವಣನು ಸತ್ತ ಹಾಗೇ ಲೆಕ್ಕ ! ಈಗ ನಿನಗೆ ಬೇಕಾದುದು ಚಿಂತೆಯಲ್ಲ, ಕ್ರೋಧ. ಸಮುದ್ರವನ್ನು ಹೇಗೆ ದಾಟಬೇಕೆಂಬುದನ್ನು ಕುರಿತು ನಮ್ಮ ಜೊತೆಯಲ್ಲಿ ನೀನೂ ಆಲೋಚನೆ ಮಾಡು. ಇಲ್ಲಿರುವವರೂ ಆಲೋಚನೆ ಮಾಡಲಿ. ಸೇತುವೆ ಸಾಧ್ಯವಾಗದಿದ್ದರೆ ಬೇರೊಂದು ಮಾರ್ಗದಿಂದ ಹೇಗಾದರೂ ಸಮುದ್ರವನ್ನು ದಾಟಿತೀರುವುದಂತೂ ರಾವಣನು ಸಾಯುವುದೂ ನಿಜ. ನಿನಗೆ ಜಯವಾಗುವುದೂ ನಿಜ, ನಿಜ !”

ರಾಮನು ಹನುಮಂತನ ಕಡೆಗೆ ತಿರುಗಿ, “ಸಮುದ್ರವನ್ನು ಸೇತುವೆ ಕಟ್ಟಿಯೋ, ಹಾರಿಯೋ, ತಪಸ್ಸು ಮಾಡಿಯೋ ಹೇಗಾದರೂ ದಾಟುಹುದೆಂದುಕೊಳ್ಳುವ : ಆಮೇಲಿನ ಸಂಗತಿಗಳನ್ನು ಕೂಡಾ ಲೆಕ್ಕ ಹಾಕಿಕೊಳ್ಳಬೇಕು. ಲಂಕಾದಲ್ಲಿ ಎಷ್ಟು ದುರ್ಗಗಳಿವೆ ? ಎಷ್ಟು ಸೈನ್ಯವಿದೆ ? ದ್ವಾರಗಳ ರಕ್ಷಣೆ ಯಾವ ವಿಧವಾಗಿದೆ ? ಕೋಟೆಯ ಬಾಗಿಲುಗಳೆಲ್ಲ ಎಂಥವು ? ನೀನು ಎಲ್ಲವನ್ನೂ ನೋಡಿ ಬಂದವನಾದುದರಿಂದ ಸ್ವಲ್ಪ ಮಟ್ಟಿಗೆ ವಿವರಿಸಿ ಹೇಳು ಕೇಳೋಣ” ಎಂದನು.

ಹನುಮಂತನು ರಾಮನಿಗೆ ಹೀಗೆ ವಿವರಿಸಿದನು : “ಲಂಕಾನಗರವು ತುಂಬಾ ವಿಶಾಲವಾಗಿದೆ.



ಅಲ್ಲಿ ಅಗಣಿತ ರಾಕ್ಷಸರು ಸುಖಸಂತೋಷಗಳಿಂದಿದ್ದಾರೆ. ಎಲ್ಲಿ ನೋಡಿದರೂ ರಥಗಳೂ, ಆನೆಗಳೂ, ಕುದುರೆಗಳೂ ಕಾಣುತ್ತವೆ. ಲಂಕೆಯೊಳಗೆ ಶತ್ರುಗಳು ಪ್ರವೇಶಿಸುವುದು ಅಸಾಧ್ಯವೇ ನಿಜ. ನಗರಕ್ಕೆ ನಾಲ್ಕು ದ್ವಾರಗಳಿವೆ. ಅವುಗಳಿಗೆ ದೊಡ್ಡದಾಗಿಯೂ ದೃಢವಾಗಿಯೂ ಇರುವ ಬಾಗಿಲುಗಳಿವೆ. ದ್ವಾರಗಳ ಬಳಿಯಲ್ಲಿರುವ ದೊಡ್ಡ ದೊಡ್ಡ ಯಂತ್ರಗಳು ಬಾಣಗಳನ್ನೂ ಶಿಲೆಗಳನ್ನೂ ಪ್ರಯೋಗಿಸಬಲ್ಲಂಥವು. ಶತ್ರುಗಳ ಸೈನ್ಯವು ಆ ದಿಕ್ಕಿನಲ್ಲಿ ಸಮೀಪಿಸುವುದರೊಳಗೇ ಆ ಯಂತ್ರಗಳು ಅದನ್ನು ನಾಶಮಾಡಿ ಬಿಡಬಲ್ಲುವು. ನಗರದ ಸುತ್ತಲೂ ಬಂಗಾರದ ಪ್ರಾಕಾರವಿದೆ. ಆದರ ಮೇಲೆ ಅಲ್ಲಲ್ಲಿ ರತ್ನಗಳನ್ನು ಹುದುಗಿಸಲ್ಪಟ್ಟು ಬಹಳ ಸುಂದರವಾಗಿ ಕಾಣುವ ಹಾಗೆ ಮಾಡಿದ್ದಾರೆ. ಆ ಪ್ರಾಕಾರವನ್ನು ದಾಟುವುದು ಸುಲಭಸಾಧ್ಯವೇನಲ್ಲ. ಪ್ರಾಕಾರದ ಸುತ್ತಲೂ ಆಳವಾದ ಅಗಳ್ತೆಗಳಿವೆ. ಆ ಪ್ರಾಕಾರವನ್ನು



ದಾಟುವುದೂ ಸಾಧ್ಯವಿಲ್ಲ. ಏಕೆಂದರೆ ಅವುಗಳಲ್ಲಿ ಭಯಂಕರವಾದ ಮೊಸಳೆಗಳೂ ಗರಗಸದಂತಹ ಹಲ್ಲುಗಳ ಮೀನುಗಳೂ ಇವೆ. ಪ್ರತಿ ದ್ವಾರದ ಬಳಿಯಲ್ಲಿಯೂ ಅಗಳ್ತೆಗೆ ಸಂಕದ ಯೋಜನೆಯಿದೆ. ಅವುಗಳನ್ನು ಬೇಕಾದ ಹಾಗೆ ಎತ್ತಲೂಬಹುದು, ಇಳಿಸಲೂಬಹುದು. ಇದಕ್ಕಾಗಿ ದೊಡ್ಡ ಯಂತ್ರ ಗಳನ್ನು ಇಟ್ಟಿದ್ದಾರೆ. ಇದನ್ನೆಲ್ಲ ನೋಡಿದರೆ ರಾವಣನು ಎಂಥವನೆಂದು ಗೊತ್ತಾಗುತ್ತದೆ, ಬಹಳ ಜಾಗರೂಕತೆಯುಳ್ಳವನು. ಯುದ್ಧವಿಲ್ಲದಾಗ ಕೂಡಾ ತನ್ನ ಸೇನೆಗಳನ್ನು ಯುದ್ಧಶಿಕ್ಷಣ ಕ್ರಮದಲ್ಲೇ ಇಟ್ಟಿದ್ದಾನೆ. ಅದಲ್ಲದೆ ಇಡಿಯ ಲಂಕಾನಗರವು ತ್ರಿಕೂಟ ಪರ್ವತದ ಮೇಲಿದೆ. ಕೆಳಗಿನಿಂದ ಪರ್ವತದ ಮೇಲೆ ಹೋಗಲು ಮಾರ್ಗಗಳೇನಿಲ್ಲ. ಲಂಕೆಗೆ ಹೋಗಲು ಹಡಗಿನ ದಾರಿಯೂ ಇಲ್ಲ. ಆದುದರಿಂದ ಅಲ್ಲಿಯ ವಾರ್ತೆಗಳು ಹೊರಗಿನ ಪ್ರಪಂಚಕ್ಕೆ ತಲಪುವುದೂ ಇಲ್ಲ. ಲಂಕಾನಗರದ ದ್ವಾರಗಳ ಬದಿಯಲ್ಲಿ ಲಕ್ಷ ಸಂಖ್ಯೆಯಲ್ಲಿ ಆಯುಧ ಧಾರಿಗಳಾದ ರಾಕ್ಷಸರಿದ್ದಾರೆ. ನಗರ ಮಧ್ಯದಲ್ಲಿ ಲೆಕ್ಕಕ್ಕೆ ಮೀರಿದ ರಾಕ್ಷಸ ಸೈನ್ಯವಿದೆ. ಆದರೆ ನಾನು ಅಗಳ್ತೆಯ ಮೇಲಿನ ಸಂಕಗಳನ್ನು ಮುರಿದು ನಾಶಪಡಿಸಿದ್ದೇನೆ. ಲಂಕಾನಗರವನ್ನು ಸುಟ್ಟು ಹಾಕಿದ್ದೇನೆ. ಕೆಲವರು ರಾಕ್ಷಸ ವೀರರನ್ನು ಕೊಂದಿ ದ್ದೇನೆ. ಆದುದರಿಂದ ಲಂಕೆಗೆ ಈಗ ಅಷ್ಟೊಂದು ಬಲವಿಲ್ಲ. ಮೊದಲಿನಂತೆ ಸರಿಮಾಡಿಕೊಳ್ಳಲು ಬಹಳ ಕಾಲಾವಕಾಶಬೇಕು. ರಾವಣನ ಮನಸ್ಸನ್ನು ಚಂಚಲಪಡಿಸಿ ಬಂದಿದ್ದೇನೆ. ನಾವು ಹೇಗಾದರೂ ಸಮುದ್ರವನ್ನು ದಾಟಬಹುದು. ಲಂಕೆಯನ್ನು ಜಯಿಸಲು ನಮ್ಮ ಅಂಗದನೂ, ದ್ವಿವಿಧನೂ, ಮೈಂದನೂ, ಜಾಂಬವಂತನೂ, ಪನಸನೂ, ನಮ್ಮ ಸೇನೆಗಳ ನಾಯಕನಾದ ನೀಲನೂ ಸಾಕು. ಅದಕ್ಕಿಂತ ಹೆಚ್ಚಿನ ಸೇನೆಗಳು ಬೇಕಾಗಲಿಕ್ಕಿಲ್ಲ. ಬೇಗನೇ ಒಳ್ಳೆ ಮುಹೂರ್ತವನ್ನು ನಿಶ್ಚಯಿಸಿ ಹೊರಡಬಹುದು. ಒಟ್ಟಿನ ಮೇಲೆ ಸಮುದ್ರವನ್ನು ದಾಟುವುದು ಮುಖ್ಯವಲ್ಲದೆ, ಆಮೇಲಿನದೆಲ್ಲ ಸುಲಭಸಾಧ್ಯ."

ರಾಮನು ಸಮಾಧಾನಗೊಂಡು ಸುಗ್ರೀ ನೊಂದಿಗೆ, "ನಾವಿನ್ನು ತಡಮಾಡಬಾರದು. ಈಗಲೇ ಪ್ರಯಾಣ. ಹೊರಡೋಣ. ಸೂರ್ಯನು ಈಗ ನಡುನೆತ್ತಿಯಲ್ಲಿದ್ದಾನೆ. ನಮ್ಮ ಕಾರ್ಯವು ಜಯಪ್ರದವಾಗಲು ಈ ಅಭಿಜಿನ್ಮುಹೂರ್ತವು ಬಹಳ ಒಳ್ಳೆಯದು" ಎಂದನು.

ಸೇನೆಗಳು ಯಾವ ಕ್ರಮದಲ್ಲಿ ಪ್ರಯಾಣ ಬೇಕೆಂಬುದನ್ನು ಕುರಿತು ರಾಮನು ವಿವರಿಸಿ ಹೇಳಿದನು. ಅದರಂತೆ ಸುಗ್ರೀವನು ಏರ್ಪಡಿಸಿದ ಸೇನಾನಾಯಕನಾದ ನೀಲನು ತನ್ನ ಬಳಗದೊಡನೆ ಫಲ ಸಮೃದ್ಧವಾದ ಮಾರ್ಗಗಳಿಂದ ನಡೆಯ ತಕ್ಕದ್ದು. ಶತ್ರುಗಳು ಮುಂದಾಗಿ ಸುಳಿವು ಆ ಪ್ರದೇಶಗಳನ್ನು ಧ್ವಂಸಮಾಡದಂತೆ,

ತಗ್ಗು ಪ್ರದೇಶಗಳಲ್ಲಿ ಅಡಗಿದ್ದು ಆಕಸ್ಮಾತ್ತಾಗಿ ಅಂತಹ ಶತ್ರುಗಳ ಮೇಲೆ ಬಿದ್ದು ನಾಶಪಡಿಸ ತಕ್ಕದ್ದು. ಸೇನೆಗಳು ನಡೆಯುವ ಮಾರ್ಗಗಳನ್ನು, ಮುಂದಾಗಿ ಆಕಾಶಮಾರ್ಗದಲ್ಲಿ ಹೋಗಿ ಎಲ್ಲಿ ಯಾದರೂ ಶತ್ರುಗಳು ಸುಳಿವು ತಿಳಿಯಲು ಬರುತ್ತಿರುವರೋ ಇಲ್ಲವೋ ಎಂಬುದನ್ನು ಆಗಾಗ ತಿಳಿದುಕೊಳ್ಳುತ್ತಿರಬೇಕು. ಕಡಮೆ ಪರಾಕ್ರಮ ಉಳ್ಳವರು ಸೇನೆಗಳೊಂದಿಗೆ ಹೊರಡದೆ, ಒಳ್ಳೆಯ ಯೋಧರಾಗಿರುವವರು ಮಾತ್ರವೇ ಹೊರಡಬೇಕು.

ಈ ಕ್ರಮದಲ್ಲಿ ರಾಮಲಕ್ಷ್ಮಣರೊಂದಿಗೆ ವಾನರ ಸೇನೆ ಹೊರಟಿತು. ಮಹಾಕಾಯನಾದ ಗಜನೂ, ಮಹಾಬಲಿಷ್ಠರಾದ ಗವಯ, ಗವಾಕ್ಷರೂ ಸೇನೆಗಳ ಮುಂದಿನಿಂದ ನಡೆಯುತ್ತಿದ್ದರು. ಹಾರುವುದ ರಲ್ಲಿ ಗಟ್ಟಿಗನಾದ ವೃಷಭನು ಸೇನೆಯ ಬಲಭಾಗ ವನ್ನು ರಕ್ಷಿಸುತ್ತಿದ್ದನು. ಗಂಧಮಾದನನು ಸೇನೆಯ ಎಡಭಾಗವನ್ನು ನೋಡಿಕೊಂಡಿದ್ದನು. ಸೈನ್ಯಗಳ ಮಧ್ಯದಲ್ಲಿ ರಾಮನು ಹನುಮಂತನ ಭುಜಗಳ ಮೇಲೆಯೂ, ಲಕ್ಷ್ಮಣನು ಅಂಗದನ ಭುಜಗಳ ಮೇಲೆಯೂ ಏರಿಕೊಂಡಿದ್ದರು.

ಈ ರೀತಿಯಾಗಿ ಭಾರಿ ಸೈನ್ಯವು ದಕ್ಷಿಣ ದಿಕ್ಕಿಗೆ ಸಾಗುತ್ತಿದ್ದಿತು. ವಾನರರು ಹಾರುತ್ತ ಎಗರುತ್ತ ಕಿರುಚುತ್ತ, ಸಿಂಹನಾದ ಮಾಡುತ್ತ, ದಾರಿಯಲ್ಲಿ ಹಣ್ಣು ಫಲಗಳನ್ನು ಕೊಯ್ದು ತಿನ್ನುತ್ತ ಉತ್ಸಾಹ ದಿಂದ ನಡೆಯುತ್ತಿದ್ದರು. ಮಹಾ ಸಮುದ್ರದಂತೆ ಉಕ್ಕುವ ಆ ವಾನರ ಸೇನೆ ಬೆಟ್ಟಗುಡ್ಡ ಸರೋವರ ಗಳನ್ನು ದಾಟುತ್ತ, ಅರಣ್ಯಗಳ ಹಣ್ಣು ಹಂಪಲು ಗಳನ್ನು ತಿನ್ನುತ್ತ ಜೇನು ಕುಡಿಯುತ್ತ ಸಾಗು ತ್ತಿದ್ದು ಯಾರಿಗೂ ಪ್ರಯಾಣದ ಆಯಾಸ ಉಂಟಾಗಲಿಲ್ಲ. ಕಾಲಕ್ರಮದಲ್ಲಿ ಈ ಮಹಾಸೇನೆ ವಿಸ್ತಾರವಾದ ಮಹೇಂದ್ರ ಪರ್ವತವನ್ನು ತಲಪಿತು. ರಾಮನು ಪರ್ವತ ಶಿಖರದ ಮೇಲೆ ಹತ್ತಿ



ಮುಂದೆ ಕಾಣುವ ಸಮುದ್ರವನ್ನು ನೋಡಿದನು. ಅವನ ಜತೆಯಲ್ಲಿ ಲಕ್ಷ್ಮಣ ಸುಗ್ರೀವರೂ ಇದ್ದರು. ಅಲ್ಲಿಂದ ರಾಮನು, ಕೆಳಗಿಳಿದು ಸಮುದ್ರ ತೀರದಲ್ಲಿ ಸೇರಿರುವ ವಾನರರ ಬಳಿಗೆ ಬಂದನು. ಅಲ್ಲಿ ಸುಗ್ರೀವನನ್ನು ಕುರಿತು ರಾಮನು, "ಪ್ರಸ್ತುತ ನಾವಿಲ್ಲಿ ತಂಗಿದ್ದು, ಈ ಸಮುದ್ರವನ್ನು ದಾಟಲು ದಾರಿ ನೋಡಬೇಕು. ಯಾರೂ ಸೇನೆಯನ್ನು ಬಿಟ್ಟು ದೂರಹೋಗದಿರಲಿ. ಶತ್ರುಗಳ ಭಯವಿಲ್ಲದಂತೆ ಎಲ್ಲಾ ಸೇನೆಗಳಿಗೂ ಗಟ್ಟಿಯಾದ ಕಾವಲಿಗೆ ಏರ್ಪಾಡು ಮಾಡಬೇಕು" ಎಂದನು. ಅದರಂತೆ ವಾನರ ಸೇನೆ ಮೂರು ಭಾಗಗಳಾಗಿ ಸೀಳಿ ಸಮುದ್ರ ತೀರದಲ್ಲಿ ಕ್ರಮಗಟ್ಟಿ ತಂಗಿತು.

ಆಚೆಯ ದಡವು ಕಾಣದಿರುವ ಮಹಾಸಮುದ್ರ ವನ್ನೂ, ಅದರಲ್ಲಿ ಏಳುವ ಭಯಂಕರವಾದ ತೆರೆ ಗಳನ್ನೂ ಕ್ರೂರವಾದ ಪ್ರಾಣಿಗಳನ್ನೂ ನೆನೆದು ಕೊಳ್ಳುತ್ತ ವಾನರ ವೀರರು, "ಈ ಜಲರಾಶಿ



ಯನ್ನು ಹೇಗೆ ದಾಟುವುದೋ!" ಎಂದು ತಮ್ಮೊಳಗೆ ದಿಗಿಲು ಪಡುತ್ತಿದ್ದರು.

ಇಲ್ಲಿ ಹೀಗಿರುವಾಗ ಅಲ್ಲಿ ಲಂಕೆಯಲ್ಲಿ ಹನುಮಂತನ ಮೂಲದಿಂದಾಗಿ ರಾವಣನಿಗೆ ಬಹು ದೊಡ್ಡ ಪರಾಭವವಾಗಿತ್ತು. ಶತ್ರುಗಳು ಪ್ರವೇಶಿಸಲು ಅಸಾಧ್ಯವಾದ ಲಂಕೆಯೊಳಗೆ ಒಂದು ಕೋತಿ ನಿರಾಯಾಸವಾಗಿ ಪ್ರವೇಶಿಸಿ ಸೀತೆಯನ್ನು ನೋಡಿತು. ಚೈತ್ಯ ಪ್ರಾಸಾದಗಳನ್ನು ಒಡೆದುಹಾಕಿತು. ಅನೇಕ ರಾಕ್ಷಸ ವೀರರನ್ನು ಕೊಂದಿತು. ಸಾಕ್ಷಾತ್ ರಾವಣನ ಮಗನನ್ನೇ ಬಲಿ ತೆಗೆದುಕೊಂಡಿತು! ಲಂಕೆಯನ್ನು ಸುಟ್ಟು ಬೀಭತ್ಸ ಮಾಡಿಹೋಯಿತು.!

ರಾವಣನು ಸಭೆಯಲ್ಲಿ ಈ ವಿಷಯಗಳನ್ನು ಹೇಳಿ, "ಈಗ ನಾವು ಏನು ಮಾಡಬೇಕು?" ಎಂದು ಪ್ರಶ್ನೆ ಮಾಡಿದನು.

ರಾಮನು ದೊಡ್ಡ ಸೇನೆಯೊಂದಿಗೆ ಲಂಕೆಗೆ ದಂಡೆತ್ತಿಕೊಂಡು ಬರುತ್ತಾನೆಂಬ ವಾರ್ತೆ ಕೂಡಾ ಲಂಕೆಗೆ ಬಂದಿತ್ತು. ರಾಮನ ಸೇನೆಗಳು ಸಮು[illegible] ವನ್ನು ಹೇಗಾದರೂ ದಾಟುತ್ತವೆಂಬುದನ್ನು ಕೂ[illegible] ರಾವಣನು ನಂಬುವಂತಾಗಿತ್ತು. ಸಮುದ್ರವ[illegible] ದಾಟದಂತೆ ರಾಕ್ಷಸರು ಎಷ್ಟು ವಿಘ್ನ ಮಾಡಿದರ[illegible] ಮೀರಿಯೇ ಲಂಕೆಗೆ ಬಂದುಬಿಟ್ಟರೆ, ತನ್ನ ಸೇನೆ[illegible] ವಾನರ ಸೇನೆಗೂ ನಡುವೆ ಯುದ್ಧವು ನಡೆದರೆ, [illegible] ಪಟ್ಟಣಕ್ಕೂ ಸೇನೆಗೂ ಅಪಾಯವಾಗದಂತಿರ[illegible] ಮಾರ್ಗವೇನೆಂಬುದನ್ನೂ ತನ್ನ ಸಭೆಯಲ್ಲಿ ರಾವ[illegible] ಪ್ರಶ್ನೆ ಮಾಡಿದನು.

ಆಲೋಚನೆಮಾಡುವ ತ್ರಾಣವಿಲ್ಲದ ಮ[illegible] ಬುದ್ಧಿಯ ರಾಕ್ಷಸರು ತಲಾ ಒಂದೊಂದುಮ[illegible] ಹೇಳಿದರು. ಅವುಗಳ ಅರ್ಥವಿಷ್ಟೇ: "ರಾಜ[illegible] ನಮಗೆ ಅಪಾರವೆನಿಸುವಷ್ಟು ಸೇನೆಯಿದೆ. ಅದ[illegible] ವಾದ ಆಯುಧಗಳಿವೆ. ಏಕೆ ಸುಮ್ಮನೆ ಚಿಂತೆ[illegible] ಎಂದರು ಕೆಲವರು.

ಅವನು ಈ ಮೊದಲು ಸಾಧಿಸಿದ ಘನ ವಿ[illegible] ಗಳನ್ನು ಕುರಿತು ಮಾತಾಡಿದರು ಕೆಲವರು. [illegible] ಸ್ನೇಹಿತನಾದ ಕುಬೇರನನ್ನೇ ರಾವಣನು [illegible] ಸಿದ್ದಾನೆ; ಪಾತಾಳದಲ್ಲಿ ಮಹಾಸರ್ಪಗಳು [illegible] ಅಬ್ಬರಕ್ಕೆ ಹೆದರಿ ಓಡಿವೆ; ಅವನ ಮುಂದೆ ಸೋ[illegible] ರಾಜನೇ ಇಲ್ಲ. ಈ ಕಾಡಾಡಿ ರಾಮನೊಬ್ಬ [illegible] ಲೆಕ್ಕವೇ? ವಾನರರ ಸಂಗತಿ ಹೇಳುವುದ[illegible] ಇಂದ್ರಜಿತ್ತು ಒಬ್ಬನೇ ವಾನರರೆಲ್ಲರನ್ನೂ [illegible] ಮಾಡಬಲ್ಲನು.

ಹೀಗೆ ರಾಕ್ಷಸರ ಅಟ್ಟಹಾಸದ ಹೊಗ[illegible] ನಡೆಯುವಾಗ, ಪ್ರಹಸ್ತನು ರಾವಣನ[illegible] "ರಾಜಾ, ನಿನಗೆ ದೇವ, ದಾನವ, ಗಂಧರ್ವ[illegible] ಭೂತ ಪಿಶಾಚಗಳೂ ಸಾಟಿಯಾದವರಲ್ಲ. ಅ[illegible] ನಿನ್ನ ಮುಂದೆ ಧೈರ್ಯವಾಗಿ ನಿಲ್ಲಲು ಹೆದರು[illegible] ಕೋತಿಗಳು ಹೇಗೆ ನಿಲ್ಲಬಲ್ಲವು? ಏನೋ [illegible] ಸ್ವಲ್ಪ ಅಜಾಗರೂಕತೆಯಲ್ಲಿದ್ದಾಗ ಹನು[illegible]



ನೊಬ್ಬ ಬಂದು ಇಷ್ಟೆಲ್ಲ ರಂಪ ಮಾಡಿಹೋದನೇ ಹೊರತು, ಇಲ್ಲದಿದ್ದರೆ ಅವನು ಜೀವದೊಂದಿಗೆ ಇಲ್ಲಿಂದ ಹೋಗುತ್ತಿದ್ದನೇ ? ನಾವೇ ಅವನನ್ನು ಬದುಕುವಂತೆ ಬಿಟ್ಟೆವು. ನಿನ್ನ ಅಪ್ಪಣೆಯಾದರೆ ನಾನು ಹೋಗಿ ಭೂಪ್ರಪಂಚದಲ್ಲಿರುವ ಎಲ್ಲಾ ವಾನರರನ್ನೂ ಕೊಂದು, ಸೃಷ್ಟಿಯಲ್ಲಿ ವಾನರ ಜಾತಿಯೇ ಇಲ್ಲದ ಹಾಗೆ ಮಾಡುತ್ತೇನೆ" ಎಂದನು.

ದುರ್ಮುಖನೆಂಬ ರಾಕ್ಷಸನು ಕೂಡಾ ತಾನು ಕೂಡಲೇ ಹೋಗಿ ವಾನರರನ್ನೆಲ್ಲಾ ನಾಶಮಾಡಿ ಬರುವೆನೆಂದೂ, ಹನುಮಂತನು ಮಾಡಿದ ಕೆಲಸ ರಾಕ್ಷಸರಿಗೂ, ಪ್ರತ್ಯೇಕವಾಗಿ ರಾವಣನಿಗೂ ಬಹಳ ಅವಮಾನವಾದುದೆಂದೂ ಹೇಳಿದನು. ವಜ್ರ ದಷ್ಟ್ರನೆಂಬ ರಾಕ್ಷಸನು ಕೂಡಾ ತಾನೊಬ್ಬನೇ ಹೋಗಿ ವಾನರರೊಂದಿಗೆ ರಾಮಲಕ್ಷ್ಮಣ ಸುಗ್ರೀವ ರನ್ನು ಕೂಡಾ ಕೊಂದುಬರುವೆನೆಂದನು. ಕೊಲ್ಲಲಿ ಕ್ಕಾಗಿ ಅವನ ಕೈಯಲ್ಲಿ ಪರಿಘವೊಂದು ಸಿದ್ಧ ವಾಗಿಯೇ ಇದ್ದಿತು.


ಅವನು ಇನ್ನೊಂದು ಉಪಾಯ ಕೂಡಾ ಹೇಳಿದನು. ಅದೇನಂದರೆ, ಕಾಮರೂಪಿಗಳಾದ ರಾಕ್ಷಸರು, ಮನುಷ್ಯ ರೂಪಗಳನ್ನು ಧರಿಸಿ, ಅನೇಕ ಸಾವಿರ ಸಂಖ್ಯೆಯಲ್ಲಿ ರಾಮನ ಬಳಿಗೆ ಹೋಗಿ, ತಮ್ಮನ್ನು ಭರತನು ಕಳುಹಿಸಿದನೆಂದೂ ತಮ್ಮ ಹಿಂದೆ ಭರತನು ಕಳುಹಿಸಿದ ಸೇ ಬರುತ್ತಿದೆಯೆಂದೂ ಹೇಳಬೇಕು. ಆಗ ಲಂಕೆಯಿಂ ರಾಕ್ಷಸ ಸೇನೆಗಳು ಹೋಗಿ ಆಕಾಶದಿಂದ ಒಂದೆ ಸಮನೆ ಕಲ್ಮಳೆ, ಕಸಮಳೆ, ಕೋಲ್ಮಳೆ, ಕತ್ತಿಮ ಗಳನ್ನು ಸುರಿಸಿ ವಾನರ ಸೇನೆಯನ್ನು ಕೊಂದು ಹಾ ಬಿಡಬೇಕು ! ಅಷ್ಟಾಗುವಾಗ ರಾಮಲಕ್ಷ್ಮ ತಾವಾಗಿ ಗುಂಡಿಗೆಯೊಡೆದೇ ಸಾಯುವರು. ಮಾತು ಕೇಳಿ ಎಲ್ಲರೂ ಬಹಳ ಉತ್ಸಾಹದಿಂ "ಭಲೇ ಭಲೇ" ಎಂದು ನೆಗಾಡಿದರು.

"ನೀವೆಲ್ಲರೂ ಮಾತಾಡಿಕೊಂಡೇ ಇಲ್ಲಿ ಕುಳಿತಿ ನಾನು ಹೋಗಿ ರಾಮಲಕ್ಷ್ಮಣ ಸುಗ್ರೀ ಹನುಮಂತರನ್ನು ಕೊಂದು ಬಂದು ನಿಮ್ಮ ಬಾ ಮುಚ್ಚಿಸುತ್ತೇನೆ" ಎಂದ ನಿಕುಂಭ. ಈ ನಿಕುಂಭ ಕುಂಭಕರ್ಣನ ಮಗ.

ಅವನ ಜತೆಗಾರನಾದ ವಜ್ರಹನು ಎಂಬ ತಾನು ಹೋಗಿ ವಾನರರನ್ನೆಲ್ಲಾ ತಿಂದು ಬ ತ್ತೇನೆ ಎಂದನು. ಅದನ್ನು ನೆನೆಯುವಾ ಭೋಜನ ಪ್ರಿಯನಾದ ಅವನ ಬಾಯಲ್ಲಿ ಜೊಲ್ಲು ಇಳಿಯುತ್ತಿದ್ದಿತು.

ಒಟ್ಟಿನ ಮೇಲೆ ರಾಕ್ಷಸ ವೀರರೆಲ್ಲಾ ಬಗೆಬಗೆಯಾದ ಆಯುಧಗಳನ್ನು ಎತ್ತಿ ಹಿ ಕೊಂಡು ಆಗಲೇ ಯುದ್ಧಕ್ಕೆ ಸಿದ್ಧರಾಗಿಬಿಟ್ಟರು.





ವೀರಹನುಮಾನ್

ಮಂತ ಸುಗ್ರೀವ ಮೊದಲಾದ ವಾನರರನ್ನು ಕೊಂದುಬಿಡುವುದಾಗಿ ವಿಜೃಂಭಿಸಿ ಏಳುವ ರನ್ನು ನೋಡಿ ವಿಭೀಷಣನು ಅವರನ್ನೆಲ್ಲಾ ಕೊಳ್ಳುವಂತೆ ಹೇಳಿ, ಆಮೇಲೆ ರಾವಣನಿಗೆ ಗಿದು ಹೀಗೆ ಹೇಳಿದನು :

"ಮುಖ್ಯವಾದ ಒಂದು ವಿಷಯವನ್ನು ರಾಜ ಮರೆಯಬಾರದು. ಸಾಮ ದಾನ ಭೇದ ಉಪಾಯಗಳು ಸಾಧ್ಯವಾಗದೆ ಹೋದ ದಂಡೋಪಾಯವನ್ನು ಅವಲಂಬಿಸ ಹಿರಿಯರು ಹೇಳುತ್ತಾರೆ. ಯಾವಾಗಲೂ ಬಲವನ್ನು ಕಡಮೆ ಮಾಡಿ ನೋಡ ಅದರಲ್ಲಿಯೂ ರಾಮನ ಬಲವನ್ನು ಸಣ್ಣ ಗಣಿಸಲೇಬಾರದು. ಹನುಮಂತನೊಬ್ಬನೇ ವನ್ನು ದಾಟಿಬಂದು ಇಷ್ಟು ದೊಡ್ಡ ಅಲ್ಲ ಮಾಡಿ ಸುರಕ್ಷಿತನಾಗಿ ತಿರುಗಿ ಹೋಗಿದ್ದಾ ದೈವವು ಅವರಿಗೆ ಅನುಕೂಲವಾಗಿರುವು ಸ್ಪಷ್ಟವಾಗುತ್ತದೆ. ರಾಮನೊಬ್ಬನೇ ಖರನೇ ಮೊದಲಾದ ರಾಕ್ಷಸರನ್ನು ಕೊಂದಿರುವುದಕ್ಕೆ ಪ್ರತಿಕ್ರಿಯೆಯಾಗಿ ರಾವಣನು ಸೀತೆಯನ್ನು ತಂದ ನೆಂದು ಹೇಳುವುದು ಕೂಡ ಸರಿಯಲ್ಲ. ತನ್ನನ್ನು ಕೊಲ್ಲಲಿಕ್ಕೆ ಬಂದ ರಾಕ್ಷಸರನ್ನಷ್ಟೇ ರಾಮನು ಕೊಂದಿದ್ದಾನೆ. ಆತ್ಮರಕ್ಷಣೆಮಾಡಿಕೊಳ್ಳುವುದು ತಪ್ಪಲ್ಲವಷ್ಟೆ? ಆದುದರಿಂದ ನಾವು ಸೀತೆಯನ್ನು ಎತ್ತಿಕೊಂಡು ಬಂದುದು ಪ್ರತ್ಯೇಕ ಅಪರಾಧವೇ ಆಗಿ ಅಪಾಯವನ್ನೇ ತಂದುಕೊಂಡಂತಾಯಿತು. ವೈರತ್ವಕ್ಕೆ ಮೂಲವಾದುದು ಎಷ್ಟು ಒಳ್ಳೆಯದಾಗಿದ್ದರೂ ಏನು ಲಾಭ? ಇದನ್ನು ತಿಳಿದು ಈಗಲಾದರೂ ನಾವು ಸೀತೆಯನ್ನು ರಾಮನಿಗೆ ಕೊಟ್ಟುಬಿಡಬೇಕು. ಮಹಾ ಪರಾಕ್ರಮಶಾಲಿಯಾದ ರಾಮನೊಂದಿಗೆ ಸುಮ್ಮ ಸುಮ್ಮನೆ ವೈರವನ್ನು ತಂದುಕೊಳ್ಳುವ ಅಗತ್ಯವೇನಿದೆ? ರಾಮನು ಇಲ್ಲಿಯವರೆಗೆ ಬಂದು ಲಂಕಾ ನಗರವನ್ನು ಮುತ್ತುವುದಕ್ಕೆ ಮೊದಲೇ ಸೀತೆಯನ್ನು ಕೊಟ್ಟುಬಿಡೋಣ. ಇದಕ್ಕೆ ತಪ್ಪಿದರೆ ಲಂಕೆಗೂ ರಾಕ್ಷಸರಿಗೂ ಕೇಡು ತಪ್ಪದು. ನಾನು ಹೇಳುವ ಈ



ಮಾತು ನಿಜವೂ ಯಥಾರ್ಥವೂ ಆಗಿದೆ. ಕೋಪದಿಂದ ಸುಖವೂ ಧರ್ಮವೂ ಕೆಟ್ಟು ಹೋಗುತ್ತವೆ. ನಾನು ಹೇಳಿದಂತೆ ಮಾಡಿದರೆ ಎಲ್ಲರೂ ಸುಖವಾಗಿರಬಹುದು. ಇದೊಂದು ಅವಮಾನವೆಂದು ಯಾರಿಗೂ ತೋರದು. ತಪ್ಪುಮಾಡುವುದು ಸಹಜ, ಅದನ್ನು ಒಪ್ಪಿಕೊಂಡು ಸರಿಗೊಳಿಸುವುದು ದೊಡ್ಡವರ ಗುಣ."

ವಿಭೀಷಣನು ಹೇಳಿದ ಮಾತುಗಳು ರಾವಣನಿಗೆ ರುಚಿಸಲಿಲ್ಲ. ಅವನು ಕೋಪದಿಂದ, "ನಿನ್ನ ಈ ಶಾಂತಿ ಬೋಧೆ ನನಗೆ ಅಗತ್ಯವಿಲ್ಲ. ನಾನು ಯಾರಿಗೂ ಭಯಪಡುವವನೂ ಅಲ್ಲ. ರಾಮನು ಸೀತೆಯನ್ನು ನನ್ನ ಕೈಯಿಂದ ಕಿತ್ತುಕೊಂಡು ಹೋಗಲು ಸಾಧ್ಯವೇ ಇಲ್ಲ. ಅದೆಲ್ಲಾ ಕೆಲಸಕ್ಕೆ ಬಾರದ ಊಹೆಗಳೇ. ದೇವೇಂದ್ರನನ್ನು ಜತೆಗೆ ಕರೆದುಕೊಂಡರೂ ರಾಮನು ಯುದ್ಧದಲ್ಲಿ ನನ್ನ ಮುಂದೆ ನಿಲ್ಲಲಾರ." ಎಂದನು.

ಮಾರುದಿನ ರಾವಣನು ಯುದ್ಧ ತಂತ್ರವನ್ನು ಕುರಿತು ಮಂತ್ರಿಗಳೊಂದಿಗೆ ಆಲೋಚನೆ ಮಾಡಲು ಹೊರಟನು. ಆಲೋಚನೆಯ ಮಂದಿರವು ಪ್ರ... ವಾಗಿ ಅಂತರಂಗ ಪ್ರದೇಶದಲ್ಲಿತ್ತು. ರತ್ನಾಲಂ... ಗಳಿಂದೊಪ್ಪುವ ಬಂಗಾರದ ರಥದ ಮೇಲೆ ... ಣನು ಅಲ್ಲಿಗೆ ಹೊರಟನು.

ಅವನ ಹಿಂದೆ ಆಯುಧಗಳನ್ನು ಧರಿಸಿದ ರಾಕ್ಷ... ನಡೆದರು. ರಾವಣನು ಸಭಾಮಂದಿರವ... ಪ್ರವೇಶಿಸಿದ, ಕೂಡಲೇ ದೂತರನ್ನು ಕಳುಹಿಸಿ ... ವೀರರನ್ನು ಬರಮಾಡಿಕೊಂಡನು. ಬೇರೆ ರಾಕ್ಷಸರು ಬಂದು ಆಸನಗಳ ಮೇಲೆಯೂ, ದರ್ಭೆ... ಗಳ ಮೇಲೆಯೂ ಕುಳಿತರು. ಅವರಲ್ಲಿ ಕು... ಕರ್ಣನೂ, ವಿಭೀಷಣನೂ, ಶುಕನೂ, ಪ್ರಹಸ್ತ... ಇದ್ದರು. ರಾವಣನು ಆ ನಾಲ್ವರಿಗೆ ಪ್ರತ್ಯೇಕ... ಆಸನಗಳನ್ನು ತೋರಿಸಿದನು.

ಸಭೆ ನಿಶ್ಶಬ್ದವಾಗಿದ್ದಿತು. ರಾವಣನು ಏನು... ವನೋ ಎಂದು ಎಲ್ಲರೂ ಆತುರದಿಂದ ಕಿವಿ... ತೀಡಿಕೊಂಡು ಕುಳಿತಿದ್ದರು. ಆಗ ರಾವಣನು ... ಸ್ತನ ಕಡೆಗೆ ತಿರುಗಿ, "ಸೇನಾನಾಯಕನಾದ ಪ್ರ... ಮುಖ್ಯವಾಗಿ ಪಟ್ಟಣವನ್ನು ಕಾಪಾಡಲು ಒ... ಯೋಧರನ್ನು ನಿಯಮಿಸು." ಎಂದನು.

ಪ್ರಹಸ್ತನು ಆ ಕೂಡಲೇ ಹೋಗಿ, ಪ... ರಕ್ಷಣೆಗೆ ಪ್ರತ್ಯೇಕವಾಗಿದ್ದ ರಾಕ್ಷಸಸೈನ್ಯವನ್ನು ... ಗಿಸಿ ಬಂದು, "ಇನ್ನೇನು ಮಾಡಬೇಕು ? ... ಯಾಗಲಿ" ಎಂದನು. ರಾವಣನು ಸಭೆ... ಉದ್ದೇಶಿಸಿ ಹೀಗೆಂದನು :

"ಧರ್ಮ ಅರ್ಥಕಾಮಗಳ ವಿಷಯದಲ್ಲಿ ... ಪರಿಸ್ಥಿತಿಯುಂಟಾದಾಗ, ಒಳಿತು ಕೆಡು... ತಿಳಿಯುವುದರಲ್ಲಿ ನೀವುಗಳು ಸಮರ್ಥರು... ನೀವು ಮಾಡಿದ ನಿರ್ಣಯಗಳು ಯಾ... ಒಳ್ಳೆಯ ಫಲಿತವನ್ನೇ ಕೊಟ್ಟಿವೆ. ನಾನು ... ವಿಷಯ ಇಂದಿನ ಸಭೆಗೆ ಬಂದಿರುವ ಕು... ಹೊರತು ಉಳಿದೆಲ್ಲರಿಗೂ ಗೊತ್ತಿರುವ...



ವನು ಕಳೆದ ಆರು ತಿಂಗಳಿನಿಂದ ನಿದ್ರೆ ಮಾಡುತ್ತಾ ದ್ದು, ಈ ದಿನ ಎದ್ದು ಇಲ್ಲಿಗೆ ಬಂದಿದ್ದಾನೆ. ನಾನು ಂಡಕಾರಣ್ಯದಿಂದ ರಾಮನ ಹೆಂಡತಿಯಾದ ಸೀತೆ ಯನ್ನು ಎತ್ತಿಕೊಂಡು ಬಂದಿದ್ದೇನೆ. ಸೀತೆಯಂತಹ ೌಂದರ್ಯದಖನಿ ಮೂರು ಲೋಕಗಳಲ್ಲಿಯೂ ಇಲ್ಲ. ನಾನು ಅವಳನ್ನು ತುಂಬಾ ಮೋಹಿಸಿದ್ದೇನೆ. ಆದರೆ ಅವಳು ನನಗೆ ವಶಳಾಗದೆ ಒಂದು ವರ್ಷದ ಗಡುವನ್ನು ಕೇಳಿದ್ದಾಳೆ. ಅಷ್ಟರೊಳಗೆ ರಾಮನು ಬಂದು ಕರೆದೊಯ್ಯಬಹುದೆಂದು ಅವಳಿಗೆ ಆಶೆಯೋ ಏನೋ ? ಆದರೆ ಸಮುದ್ರವನ್ನು ದಾಟಿ ರಾಮನು ಇಲ್ಲಿಗೆ ಹೇಗೆ ತಾನೇ ಬರಬಲ್ಲನು ? ಹೇಗೋ ಒಂದು ಳಿ ರಾಮಲಕ್ಷ್ಮಣರು ಸಮುದ್ರವನ್ನು ದಾಟಿ ಬಂದರೆಂದುಕೊಳ್ಳೋಣ. ಆಗ ನಾವೇನು ಮಾಡ ು ? ಒಂದು ಕೋತಿ ಬಂದು ಲಂಕಾನಗರದಲ್ಲಿ ಕಣ್ಣೆದಿರಿನಲ್ಲೇ ಇಷ್ಟೊಂದು ಬೀಭತ್ಸ ಮಾಡಿ ಹೋಯಿತಷ್ಟೆ ? ಆದುದರಿಂದ ಕರ್ತವ್ಯವನ್ನು ಗಿ ಆಲೋಚನೆ ಮಾಡಿರಿ. ಸಮುದ್ರದ ು ಬದಿಯಲ್ಲಿ, ರಾಮಲಕ್ಷ್ಮಣರೂ, ವಾನರ ಯೊಂದಿಗೆ ಸುಗ್ರೀವನೂ ಬಂದು ಸೇರಿದ್ದಾರೆ. ಸೀತೆಯನ್ನು ರಾಮನಿಗೆ ಕೊಡದೆಹೋದರೆ ಗಳು ರಾಮಲಕ್ಷ್ಮಣರನ್ನು ಕೊಂದುಬಿಡಬಲ್ಲಿ ? ವಾನರಸೇನೆಗಳು ಸಮುದ್ರವನ್ನು ದಾಟಿ ವರೆಗೆ ಬರಬಹುದೇ ? ನಿಮಗೇನು ತೋರು ? ನಿಮ್ಮ ಆಲೋಚನೆ ಏನು ? ಮುಚ್ಚುಮರೆ ಸ್ಪಷ್ಟವಾಗಿ ಹೇಳಿರಿ."

ನು ಹೇಳಿದ ಮಾತುಗಳನ್ನು ಕೇಳಿ ಕುಂಭ ಗೆ ಬಹಳ ಕೋಪ ಬಂದಿತು. "ನೀನು ಬಲಾ ದ ರಾಮನ ಹೆಂಡತಿಯನ್ನು ಎತ್ತಿಕೊಂಡು ಗ ಯಾರ ಹತ್ತಿರವೂ ಆಲೋಚನೆ ಮಾಡಿದವ ನಿನಗೆ ಆಲೋಚನೆ ಹೇಳಿದ ಮಾರೀಚನೂ ಲ್ಲ. ಈಗ ನಮ್ಮೊಡನೆ ಆಲೋಚನೆ ಮಾಡುವ ಅಗತ್ಯವೇನಿದೆ ? ಇದು ಕೈಸುಟ್ಟ ಮೇಲೆ ಬಟ್ಟೆ ಹಿಡಿದ ಹಾಗಿದೆ. ಸೀತೆಯನ್ನು ಎತ್ತಿಕೊಂಡು ಬರುವಾಗ ಅದೆಷ್ಟು ಅಪಾಯಕಾರಿ ಎಂಬುದನ್ನು ನೀನು ಆಲೋಚಿಸಲಿಲ್ಲ. ನಿನ್ನ ಅದೃಷ್ಟವಶಾತ್ ರಾಮನು ಈವರೆಗೆ ನಿನ್ನನ್ನು ಕೊಲ್ಲಲಿಲ್ಲ. ಸರಿಬಿಡು ಆಗಿ ಹೋದುದಕ್ಕೆ ಹೇಳಿಕೊಂಡು ಫಲವಿಲ್ಲ. ಈಗ ನಿನಗೆ ಸುಮ್ಮನೆ ಭಯವೇಕೆ ? ನಿನ್ನ ಶತ್ರುಗಳೆಲ್ಲರನ್ನೂ ನಾನು ಒಬ್ಬನೇ ಕೊಲ್ಲುತ್ತೇನೆಂದು ತಿಳಿ. ನಾನು ಕಬ್ಬಿಣದ ಗದೆಯನ್ನೆತ್ತಿಕೊಂಡು ಯುದ್ಧಕ್ಕೆ ಹೋದೆನೆಂದರೆ ವಜ್ರಾಯುಧ ಹಿಡಿದ ಇಂದ್ರನು ಕೂಡಾ ಓಡಿಹೋಗಬೇಕಾದ್ದೇ. ನಾನು ರಾಮಲಕ್ಷ್ಮಣರನ್ನು ಕೊಂದು ವಾನರರನ್ನು ತಿಂದು ಬಿಡುತ್ತೇನೆ. ಆ ವಿಷಯದಲ್ಲಿ ಹೆಚ್ಚೇನೂ ಆಲೋಚನೆ ಮಾಡದೆ, ನೀನು ನಿಶ್ಚಿಂತೆಯಾಗಿರು" ಎಂದನು.

ಈ ಮಾತುಗಳು ರಾವಣನನ್ನು ತೃಪ್ತಿಪಡಿಸಲಿಲ್ಲವೆಂದು ಮಹಾಪಾರ್ಶ್ವನಿಗೆ ತೋರಿತು. ಅವನು



ರಾವಣನ ಚಿಂತೆಯನ್ನು ಹಾರಿಸುವವನಂತೆ, "ರಾಕ್ಷಸೇಶ್ವರಾ, ನೀನು ಸೀತೆಯನ್ನು ಮೋಹಿಸಿ ಶ್ರಮಪಟ್ಟು ಸುರಕ್ಷಿತ ಜಾಗಕ್ಕೆ ತಂದುಕೊಂಡ ಮೇಲೆ ಸುಮ್ಮನಿರುವ ಅಗತ್ಯವೇನಿದೆ? ಬಲಾತ್ಕಾರವಾಗಿಯಾದರೂ ಅವಳನ್ನು ಅಂತಃಪುರದಲ್ಲಿ ಸೇರಿಸಿಬಿಡಬಹುದಲ್ಲ? ನಿನಗೆ ಅಡ್ಡ ಬರುವವರಾರು? ಹಾಗೆ ಮಾಡಿದರೆ ನಿನಗೆ ಅಪಾಯ ಬರುವುದೆಂದು ಭಯಪಡಬೇಕಾದ ಅಗತ್ಯವೇನಿದೆ? ಈ ಕುಂಭಕರ್ಣನೂ, ಇಂದ್ರಜಿತ್ತೂ, ಮತ್ತು ನಾವೆಲ್ಲಾ ಇರುವಾಗ ಯಾರೇ ಯುದ್ಧಕ್ಕೆ ಬಂದರೂ ಭಯವಿಲ್ಲ. ಅಷ್ಟು ಮಾಡಿದ ಮೇಲೆ ರಾಮಲಕ್ಷ್ಮಣರ ಭಯವಂತೂ ಇಲ್ಲ." ಎಂದನು.

ಈ ಮಾತು ಕೇಳಿ ರಾವಣನು ಸಂತೋಷ ಪಡುತ್ತ ಮಹಾಪಾರ್ಶ್ವನನ್ನು ನೋಡಿ, "ಈ ವಿಷಯದಲ್ಲಿ ಒಂದು ರಹಸ್ಯವಿದೆ. ಹಿಂದೆ ದಿಗ್ವಿಜಯಕಾಲದಲ್ಲಿ ನಾನೊಂದು ಕೆಲಸ ಮಾಡಿದ್ದೇನೆ. ಬ್ರಹ್ಮದೇವನ ಬಳಿಗೆ ಹೋಗುತ್ತಿದ್ದ ಪುಂಜಿಕಸ್ಥಲೆ ಎಂಬ ಅಪ್ಸರಸಿಯನ್ನು ನೋಡಿ ಮೋಹಿಸಿ ಅವಳ ಮೇಲೆ ನಾನು ಬಲಾತ್ಕಾರ ಮಾಡಿದ್ದೆ. ಪುಂಜಿಕಸ್ಥಲೆ ಈ ವಿಷಯವನ್ನು ಬ್ರಹ್ಮನ ಹತ್ತಿರ ಹೇಳಿರಬೇಕು. ಬ್ರಹ್ಮನು ನನಗೆ ಎಚ್ಚರಿಕೆ ಹೇಳುತ್ತ, ಇನ್ನು ಮೇಲೆ ಪರಸ್ತ್ರೀಯನ್ನು ಅವಳ ಇಷ್ಟಕ್ಕೆ ವಿರೋಧವಾಗಿ ಬಲಾತ್ಕಾರ ಮಾಡಿದರೆ ನನ್ನ ತಲೆ ನೂರು ಚೂರುಗಳಾಗಿ ಹೋಗುತ್ತದೆಂದು ಶಾಪವಾಕ್ಯ ನುಡಿದಿದ್ದನು. ಆದುದರಿಂದಲೇ ನಾನು ಸೀತೆಯನ್ನು ಬಲಾತ್ಕಾರ ಮಾಡಲು ಹೆದರುತ್ತೇನೆ. ಅದಿರಲಿ. ನನಗಿರುವ ಶಕ್ತಿಯನ್ನೂ, ವೇಗವನ್ನೂ ತಿಳಿಯದೆ ರಾಮನು ನನ್ನ ಮೇಲೆ ಯುದ್ಧಕ್ಕೆ ಬರುತ್ತಿದ್ದಾನೆ. ಅವನೊಬ್ಬ ಅಜ್ಞಾನಿಯಾದುದರಿಂದಲೇ ಮೃತ್ಯುವಿನೊಂದಿಗೆ ಆಟವಾಡಲು ತೊಡಗಿದ್ದಾನೆ." ಎಂದನು.


ಹೀಗೆ ಕುಂಭಕರ್ಣನ ಮಾತನ್ನೂ, ರಾವಣನ ಮಾತುಗಳನ್ನೂ ಕೇಳಿದ ಮೇಲೆ ವಿಭೀಷಣನು ರಾವಣನನ್ನು ಕುರಿತು, "ಅಯ್ಯಾ ರಾಕ್ಷಸರಾಜ, ನೀನು ಸೀತೆಯನ್ನು ಏತಕ್ಕಾಗಿ ಮೋಹಿಸಿದೆಯೋ ತಿಳಿಯದು. ಅವಳು ಮಹಾಸರ್ಪವೆಂದು ಇನ್ನೂ ನಿನಗೆ ತಿಳಿದಿಲ್ಲವೆ? ಅವಳ ಎದೆಯೇ ಮಹಾಸರ್ಪದ ಹೆಡೆಯಾಗಿದೆ. ಚಿಂತೆಯೇ ವಿಷ. ಅವಳ ನಗುವಿನಲ್ಲಿ ಕಾಣುವುದು ಕೋರೆ ಹಲ್ಲುಗಳು. ಅವಳ ಬೆರಳುಗಳು ಹಾವಿನ ತಲೆಗಳು. ರಾಮನ ಕಡೆಯ ವಾನರಯೋಧರು ಲಂಕೆಯಲ್ಲಿ ಕಾಲಿಡುವುದಕ್ಕೆ ಮೊದಲೇ ಸೀತಾದೇವಿಯನ್ನು ರಾಮನಿಗೆ ಒಪ್ಪಿಸಿಬಿಡು. ಈ ಕುಂಭಕರ್ಣ, ಇಂದ್ರಜಿತ್ತು, ಮಹಾಪಾರ್ಶ್ವ ಮೊದಲಾದ ಯಾವ ಮಹಾವೀರರೂ ರಾಮನ ಬಾಣಗಳ ಮುಂದೆ ಯುದ್ಧಕ್ಕೆ ನಿಲ್ಲಲಾರರು. ರಾಮನು ಬಂದ ಮೇಲೆ ನಿನ್ನನ್ನು ಎಂದಿಗೂ ಜೀವದೊಂದಿಗೆ ಬಿಡಲಾರನು. ಇದು ನಿಜ" ಎಂದನು.

ಪ್ರಹಸ್ತನು ವಿಭೀಷಣನ ಮಾತುಗಳನ್ನು ಖಂಡಿಸಿ ರಾವಣನ ಮುಂದೆ ಯಾರೂ ಅಡ್ಡ ನಿಲ್ಲುವವರಲ್ಲ ಎಂದನು. ವಿಭೀಷಣನಿಗೆ ಭೀತಿ ಹಿಡಿಯಿತೆಂದು ಇಂದ್ರಜಿತ್ತು ಆಕ್ಷೇಪಿಸಿದನು. "ಪುಲಸ್ತ್ಯವಂಶದಲ್ಲಿ ನಿನ್ನಂತಹ ಪರಾಕ್ರಮಶೂನ್ಯನಾದವನು ಇನ್ನೊಬ್ಬನಿಲ್ಲ. ರಾಮಲಕ್ಷ್ಮಣರೆಂಬ ನರರನ್ನು ಕೊಲ್ಲಲು ರಾಕ್ಷಸವೀರರಲ್ಲಿ ಯಾವನೊಬ್ಬನಾದರೂ ಸಾಕಲ್ಲ! ನೀನೇಕೆ ಹೆದರಿ ನಡುಗಿ ನಾಚಿಗೆಗೇಡಿನ ಮಾತುಗಳನ್ನಾಡುವಿ? ಇಂದ್ರನನ್ನು ಸೋಲಿಸಿ ದೇವತೆಗಳನ್ನು ಪೀಡಿಸಿದ ನಾನು ಮನುಷ್ಯರನ್ನು ಜಯಿಸಲಾರೆನೇ? ಇದು ನಿನ್ನಂಥವರಾಡುವ ಮಾತೇ?" ಎಂದು ಇಂದ್ರಜಿತ್ತು ವಿಭೀಷಣನನ್ನು ಕೇಳಿದನು.

"ಅಪ್ಪಾ, ಇಂದ್ರಜಿತ್ತೂ, ನೀನಿನ್ನೂ ಚಿಕ್ಕವನು. ಯುದ್ಧವಿಷಯಗಳಲ್ಲಿ ಆಲೋಚನೆ ಹೇಳುವಷ್ಟು ಅನುಭವ ನಿನಗಿನ್ನೂ ಬರಲಿಲ್ಲ. ನೀನು ಹೇಳಿದ ಮಾತುಗಳನ್ನು ಕೇಳಿದರೆ ರಾಕ್ಷಸವಂಶಕ್ಕೆ ಕೇಡು ಬರುವುದು ನಿಜ. ರಾಮಬಾಣಗಳ ಮುಂದೆ ಯಾರೂ ನಿಲ್ಲಲಾರರು. ಅವನಿಗೆ ಸೀತೆಯನ್ನು ಹಿಂದಿರುಗಿಸಿ ಕೊಡುವುದೇ ಒಳ್ಳೆಯದೆಂದು ಒತ್ತಿ ಹೇಳುತ್ತೇನೆ" ಎಂದ ವಿಭೀಷಣ.

ರಾವಣನು ಸಹಿಸಲಾರದೆ, ಕಡುಕೋಪದಿಂದ ವಿಭೀಷಣನನ್ನು ನಾನಾರೀತಿಯಾಗಿ ಬೈದು, "ನೀನು ನನಗೆ ತಮ್ಮನಾಗಿ ಹುಟ್ಟಿದ ಕಾರಣದಿಂದ ಬದುಕಿ ಉಳಿದಿರುವೆ. ಇದೇ ಮಾತುಗಳನ್ನು ಇನ್ನೊಬ್ಬನು ಹೇಳುತ್ತಿದ್ದರೆ ಆ ಕ್ಷಣದಲ್ಲೇ ಕೊಂದುಬಿಡುತ್ತಿದ್ದೆ! ನೀನು ಕುಲಗೇಡಿ!" ಎಂದನು.


ವಿಭೀಷಣನಿಗೂ ಕೋಪ ಬಂದಿತು. ಅವನು ರಾವಣನನ್ನು ನೋಡಿ, "ಹೌದು. ನೀನು ನನಗೆ ಅಣ್ಣ, ತಂದೆಗೆ ಸಮಾನನಾದವನು. ನಿನ್ನ ಕ್ಷೇಮವನ್ನು ಕೋರಿ ನಾನು ಹೇಳಿದ ಮಾತುಗಳು ನಿನಗೆ ರುಚಿಸಲಿಲ್ಲ. ನಿನಗೆ ರುಚಿಯಾಗುವಂತೆ ಮಾತಾ



ಡುವವರು ಅನೇಕ ಮಂದಿ ಇರುತ್ತಾರೆ. ಆಗಲಿ, ನಾನು ನಿನಗೆ ಕೋಪ ಬರುವ ಹಾಗೆ ಮಾತಾಡಿದೆನೆಂಬುದು ನಿಜ, ಕ್ಷಮಿಸು. ನಾನು ಈಗಲೇ ಹೊರಟು ಹೋಗುತ್ತೇನೆ. ನೀನು ಸುಖವಾಗಿರಬೇಕೆಂತಲೇ ಬಯಸುತ್ತೇನೆ. ಹೇಗಾದರೂ ನಿನ್ನನ್ನು ಕಾಪಾಡಿಕೋ. ಈ ರಾಕ್ಷಸರನ್ನೂ, ಲಂಕೆಯನ್ನೂ ಹೇಗಾದರೂ ರಕ್ಷಣೆ ಮಾಡಿಕೋ" ಎಂದನು.

ಆ ಕೂಡಲೇ ವಿಭೀಷಣನು ತನ್ನ ಗದೆಯನ್ನು ತೆಗೆದುಕೊಂಡು, ತನ್ನ ಅನುಚರರಾದ ನಾಲ್ಕುಮಂದಿ ರಾಕ್ಷಸರೊಂದಿಗೆ ಆಕಾಶದ ಮೇಲಕ್ಕೆ ಹಾರಿ ಬಿರ್ರನೆ ಸಾಗುತ್ತ, ಸ್ವಲ್ಪ ಹೊತ್ತಿನಲ್ಲಿ ರಾಮಲಕ್ಷ್ಮಣರಿರುವ ಸ್ಥಳವನ್ನು ತಲಪಿದನು.

ಆಕಾಶದ ಮೇಲೆ ಐದುಮಂದಿ ರಾಕ್ಷಸರು ಬರುವುದನ್ನು ವಾನರರು ನೋಡಿದರು. ಹಾಗೆ ಬರುವವರು ತಮ್ಮ ರಹಸ್ಯಗಳನ್ನು ತಿಳಿದುಕೊಳ್ಳಲಿಕ್ಕೋ ಅಥವಾ ತಮ್ಮನ್ನು ಕೊಲ್ಲಲಿಕ್ಕೋ ಬರುವವರೆಂಬ




ಅನುಮಾನ ಸುಗ್ರೀವನಿಗಾಯಿತು. ಅವನು ತನ್ನ ಅನುಮಾನವನ್ನು ಹನುಮಂತನೇ ಮೊದಲಾದವರೊಂದಿಗೆ ಹೇಳಿದನು. ಕೂಡಲೇ ವಾನರರು ಮರಗಳನ್ನೂ, ಕಲ್ಲುಗಳನ್ನೂ ಎತ್ತಿಕೊಂಡು ಬರುತ್ತಿರುವವರನ್ನು ಕೊಲ್ಲಲು ಸುಗ್ರೀವನ ಅನುಮತಿ ಕೇಳಿದರು.

ಹೀಗೆ ವಾನರರಲ್ಲಿ ಸಂಚಲನೆಯುಂಟಾದಾಗ, ವಿಭೀಷಣ ಮತ್ತು ಅವನ ಜತೆಗಾರರಾದ, ಅನಲ, ಶರಭ, ಸಂಘಾತಿ, ಪ್ರಘಸ ಎಂಬ ರಾಕ್ಷಸರು ಸಮುದ್ರವನ್ನು ದಾಟಿ ಆಕಾಶದಲ್ಲೇ ನಿಂತರು. ವಿಭೀಷಣನು ಸುಗ್ರೀವನೇ ಮೊದಲಾದ ವಾನರರಿಗೆ ಕೇಳಿಸುವಂತೆ ಗಟ್ಟಿಯಾಗಿ ಹೀಗೆಂದನು :

"ನಾವು ದುರುದ್ದೇಶದಿಂದ ಬಂದವರಲ್ಲ. ದುಷ್ಟನೂ, ರಾಕ್ಷಸರಾಜನೂ ಆದ ರಾವಣನಿಗೆ ನಾನು ಖಾಸಾ ತಮ್ಮ. ನನ್ನ ಹೆಸರು ವಿಭೀಷಣ. ರಾವಣನು ಜಟಾಯುವನ್ನು ಕೊಂದು ಜನಸ್ಥಾನದಿಂದ ಸೀತೆಯನ್ನು ಅಪಹರಿಸಿ ತಂದಿದ್ದಾನೆ. ಆ ಸೀತೆ ತುಂಬಾ ದುಃಖದಲ್ಲಿ ರಾಕ್ಷಸಸ್ತ್ರೀಯರ ರಕ್ಷಣೆಯಲ್ಲಿದ್ದಾಳೆ. ಸೀತೆಯನ್ನು ರಾಮನಿಗೆ ಹಿಂದಿರುಗಿಸಿ ಕೊಡಬೇಕೆಂದು ನಾನು ಒಳ್ಳೆಯ ರೀತಿಯಲ್ಲಿ ಎಷ್ಟೋ ಹೇಳಿ ನೋಡಿದೆ. ದುರ್ವಿಧಿ ಬೆಂಬತ್ತುವುದರಿಂದ ಔಷಧದಂತಹ ನನ್ನ ಹಿತಬೋಧನೆಗಳು ರಾವಣನಿಗೆ ರುಚಿಸಲಿಲ್ಲ. ಅದರ ಮೇಲೆ ನನ್ನನ್ನು ನಾನಾ ದುರ್ಭಾಷೆಗಳಿಂದ ನಿಂದಿಸಿ ಸೇವಕನಂತೆ ಅವಮಾನಪಡಿಸಿದನು. ಆದುದರಿಂದ ನಾನು ಹೆಂಡತಿ ಮಕ್ಕಳನ್ನು ಬಿಟ್ಟು ರಾಮನಿಗೆ ಶರಣಾಗಬೇಕೆಂದು ಬಂದಿದ್ದೇನೆ. ರಾಮನೊಂದಿಗೆ ಈ ಸಂಗತಿಯನ್ನು ಹೇಳಿರಿ."

ಈ ಮಾತುಗಳನ್ನು ಕೇಳಿ ಸುಗ್ರೀವನು ರಾಮನೊಂದಿಗೆ, "ರಾವಣನ ತಮ್ಮನಾದ ವಿಭೀಷಣನು ನಾಲ್ಕುಮಂದಿ ರಾಕ್ಷಸಾನುಚರರೊಂದಿಗೆ ನಿನಗೆ ಶರಣಾಗಬೇಕೆಂದು ಬಂದಿದ್ದಾನೆ. ನಾನು ನಂಬಲಾರೆ! ಎಚ್ಚರಿಕೆ! ಈ ರಾಕ್ಷಸರು ಮಾಯಾವಿಗಳು. ಕಾಮರೂಪಿಗಳು. ತಂತ್ರಗಳಲ್ಲಿ ನುರಿತವರು. ಅವರ ಮಾತುಗಳನ್ನು ನಂಬಕೂಡದು. ಈ ವಿಭೀಷಣನು ರಾವಣನೇ ಕಳುಹಿಸಿದ ಚಾರನಾಗಿರಬಹುದು. ಅವನು ನಮ್ಮೊಳಗಿನವನ ಹಾಗೇ ಇದ್ದು ನಮ್ಮೊಳಗೆ ವಿಭೇದ ಹುಟ್ಟಿಸಬಹುದು. ಅಥವಾ ಸಮಯ ನೋಡಿ ನಮ್ಮನ್ನು ಕೊಲ್ಲಲೂಬಹುದು. ಸಾಕ್ಷಾತ್ ರಾವಣನ ತಮ್ಮ! ಶತ್ರುಪಕ್ಷದಿಂದ ಬಂದವನು! ಇವನನ್ನು ನಂಬುವುದುಂಟೇ? ಇವನನ್ನೂ ಇವನ ನಾಲ್ವರು ಅನುಚರರನ್ನೂ ಕೊಂದುಬಿಡುವುದು ಒಳ್ಳೆಯದು" ಎಂದನು.

ಸುಗ್ರೀವನು ಹೇಳಿದ ಮಾತುಗಳನ್ನು ಕೇಳಿ ರಾಮನು ತನ್ನ ಸಮೀಪದಲ್ಲಿದ್ದ ಹನುಮಂತ ಮೊದಲಾದವರೊಂದಿಗೆ, "ಸುಗ್ರೀವನು ಆಲೋಚಿಸಿ ಹೇಳಿದ ಮಾತುಗಳನ್ನು ನೀವು ಕೂಡಾ ಕೇಳಿರಷ್ಟೇ? ನಿಮಗೇನು ತೋರುತ್ತದೆಂದು ನೀವು ಕೂಡಾ ಹೇಳಿರಿ" ಎಂದನು.


Sankar

ಮೊದಲು ಅಂಗದನು ಹೀಗೆಂದನು : " ಏನಾದರೂ ಶತ್ರುಪಕ್ಷದವನನ್ನು ಕುರುಡುತನದಿಂದ ನಂಬುವುದು ಸರಿಯಲ್ಲ. ಆದರಿಂದ ಬಹಳ ನಷ್ಟವೇ ಬರುತ್ತದೆ. ಮೊದಲು ಈ ವಿಭೀಷಣನ ತತ್ತ್ವವನ್ನು ತಿಳಿದುಕೊಳ್ಳಬೇಕು."

"ಮೊದಲು ಅವನನ್ನು ದೂರವೇ ನಿಲ್ಲಿಸಿ ಒಬ್ಬ ಚಾರನನ್ನು ಕಳುಹಿಸೋಣ" ಎಂದ ಶರಭ. "ಹೌದು. ಶತ್ರುವಾದ ರಾವಣನ ಕಡೆಯಿಂದ ಈ ವಿಭೀಷಣನು ಹೀಗೆ ಹೊರಟು ಬರಲು ಯಾವ ಕಾರಣವೂ ಕಾಣದು. ಇವನನ್ನು ಅನುಮಾನಿಸಲೇ ಬೇಕು" ಎಂದನು ಜಾಂಬವಂತ.

"ನಮ್ಮವನೊಬ್ಬ ವಿಭೀಷಣನ ಬಳಿಗೆ ಹೋಗಿ, ರಾವಣಾಸುರನ ಸಂಗತಿ ಏನೆಂಬುದನ್ನು ಕೇಳಿದರೆ ಚೆನ್ನಾಗಿರುತ್ತದೆ. ಆಗ ಇವನು ಎಂಥವನೆಂಬುದು ತಿಳಿದುಬಿಡುತ್ತದೆ" ಎಂದನು ಮೈಂದ. ಆಮೇಲೆ ಹನುಮಂತನು ಹೀಗೆಂದನು :

"ನಾನು ವಿಭೀಷಣನ ವಿಷಯ ಸ್ವಲ್ಪ ಕಂಡಿದ್ದೇನೆ. ಅವನನ್ನು ಪರೀಕ್ಷೆ ಮಾಡಿ ಸೇರಿಸಿಕೊಳ್ಳಬೇಕೆಂದು ಇಷ್ಟುಮಂದಿ ಹೇಳಿದ ಮಾತು ನನಗೆ ಸರಿ ಕಾಣುವುದಿಲ್ಲ. ಮೊದಲು ಅವನನ್ನು ನಮ್ಮೊಂದಿಗೆ ಸೇರಿಸಿಕೊಂಡ ಹೊರತು ಒಳಿತು ಕೆಡುಕು ತಿಳಿಯವು; ಒಳಿತು ಕೆಡುಕು ತಿಳಿಯದೆ ನಾವು ಅವನನ್ನು ಸೇರಿಸಿಕೊಳ್ಳುವಂತೆಯೂ ಇಲ್ಲ. ಇದು ಹೇಗೆ ವಾದೀತು ? ಇದಿರಿಗೇ ಬಂದಿರುವವನ ಬಳಿಗೆ ನನ್ನು ಕಳುಹಿಸುವುದು ಅರ್ಥವಿಲ್ಲದ ಕೆಲಸ. ದಲ್ಲಿರುವವನ ಬಳಿಗಾದರೆ ಚಾರರನ್ನು ಬಹುದು. ಜಾಂಬವಂತನ ಮಾತು ಕೂಡಾ ವಲ್ಲ. ನಿನ್ನನ್ನೂ ರಾವಣನನ್ನೂ ಹೋಲಿಸಿ ರಾವಣನಿಗೆ ಹಿತವನ್ನು ಹೇಳಿ, ಅವನಿಂದ ಮಾನ ಹೊಂದಿ ಅವನನ್ನು ಬಿಟ್ಟು ನಿನ್ನ ಬಂದಿರುವವನೆಂದು ಇವನು ಸ್ಪಷ್ಟಪಡಿಸಿದ್ದಾನೆ. ದೇಶಗಳು ಕೂಡಿ ಬಂದುದರಿಂದಲೇ ಹೀಗೆ ಬಂದಿದ್ದಾನೆ. ಅವನು ಕಾರಣವಿಲ್ಲದೆ ಬಂದ ಮೈಂದನು ಹೇಳಿದಂತೆ ಯಾರಾದರೂ ರಾವಣನ ಸಂಗತಿಯನ್ನು ಕೇಳಿದರೆ ವಿಭೀ ತಟಕ್ಕನೆ ಹೇಳಿಬಿಡುವನೇ ? ವಿಭೀಷಣನು ಏಕೆ ಬಂದೆನೆಂಬುದನ್ನೂ ಹೇಳಿಯೇ ಇದ್ದಾನೆ. ಕಳ್ಳನಂತೆಯೂ ಇಲ್ಲ. ನಿರ್ಭೀತನಾಗಿದ್ದಾನೆ. ವಾಲಿಯನ್ನು ಕೊಂದು ಸುಗ್ರೀವನಿಗೆ ವಾನರ ವನ್ನು ಕೊಟ್ಟ ಹಾಗೆಯೇ ರಾವಣನನ್ನು ತನಗೆ ಲಂಕಾರಾಜ್ಯವನ್ನು ಕೊಡುವವನೆಂದು ಇವನು ನಿನ್ನ ಬಳಿಗೆ ಬಂದಿರಲೂ ಸಾಕು. ನನ್ನು ಸೇರಿಸಿಕೊಳ್ಳಬಹುದೆಂಬುದೇ ನನ್ನ ಇನ್ನು ನಿನ್ನ ಚಿತ್ತ !"





ವೀರಹನುಮಾನ್

June 1976

ವಿಭೀಷಣನು ಹೇಳಿದ ಮಾತುಗಳನ್ನು ಕೇಳಿ ಅಭಿಪ್ರಾಯ ತಿಳಿಸಿದವರೊಳಗೆ, ಹನುಮಂತನು ಹೇಳಿದ ಅಭಿಪ್ರಾಯವು ರಾಮನ ಅಭಿಪ್ರಾಯಕ್ಕೆ ಸರಿಯಾಗಿದ್ದುದರಿಂದ, ರಾಮನು ಹನುಮಂತನನ್ನು ಮೆಚ್ಚುಗೆಯಿಂದ ನೋಡಿ ಹೀಗೆಂದನು: "ಒಳ್ಳೆಯದು. ನಿಮ್ಮಲ್ಲಿ ಹೆಚ್ಚಿನವರು ಹೇಳುವಂತೆ ವಿಭೀಷಣನು ಕೆಟ್ಟವನೇ ಆದರೂ ಶರಣು ಬಂದವನನ್ನು ಬಿಟ್ಟು ಬಿಡುವುದು ಅಧರ್ಮವಾಗಿದೆ."

ರಾಮನ ಮಾತು ಕೇಳಿ ಸುಗ್ರೀವನು, "ಇವನು ಒಳ್ಳೆಯವನೇ ಆಗಿರಲಿ, ಕೆಟ್ಟವನೇ ಆಗಿರಲಿ. ನಮಗೆ ಇವನಿಂದ ಯಾವ ಕೆಲಸವೂ ಆಗಬೇಕಾಗಿಲ್ಲವಷ್ಟೆ?" ಎಂದು ಕೇಳಿದನು. ಕಷ್ಟಕಾಲದಲ್ಲಿರುವ ತನ್ನ ಅಣ್ಣನನ್ನು ಬಿಟ್ಟು ಅವನ ಶತ್ರುಪಕ್ಷಕ್ಕೆ ಬಂದು ಸೇರುವವನು ಬೇರೆಯವರಿಗೆ ಕೂಡಾ ಕೃತಘ್ನತೆಯನ್ನೇ ತೋರಿಸುವನೆಂಬುದು ಸುಗ್ರೀವನ ಅಭಿಪ್ರಾಯ.

ರಾಮನು ಲಕ್ಷ್ಮಣನೊಂದಿಗೆ ಸುಗ್ರೀವನ ಅಭಿಪ್ರಾಯವನ್ನು ಖಂಡಿಸುತ್ತ ಮಾತಾಡಿದನು. ಜ್ಞಾತಿಗಳೊಳಗೆ ಜಗಳಗಳೂ ವೈರಗಳೂ ಬರುವುದು ಸಹಜ. ಅಣ್ಣನಿಗೆ ಹೆದರಿ ವಿಭೀಷಣನು ಬಂದಿದ್ದಾನೆ. ಅಣ್ಣನ ಗತಿ ಹೇಗಾಗುವುದು ಎಂಬುದನ್ನು ನಿರ್ಧರಿಸಿಕೊಂಡವನಾದುದರಿಂದಲೇ ತನ್ನ ಹೆಂಡತಿಯನ್ನು ಸಹ ಬಿಟ್ಟು ಬಂದಿರುವನು. ಆದರಿಂದ ಅವನಿಗಿರುವ ಉದ್ದೇಶವೂ ಸ್ಪಷ್ಟವಾಗುತ್ತದೆ. ಅಣ್ಣನ ರಾಜ್ಯವು ಅವನಿಗೆ ಬೇಕು. ಹೀಗಿರುವುದರಿಂದ ಅವನು ರಾಮನೊಂದಿಗೆ ಹೇಳಿದ ಮಾತಿಗೆ ವಿರೋಧವಾಗಿ ನಡೆಯುವವನಲ್ಲ. ಇದೇ ರಾಮನ ನಿರ್ಧಾರ.

ಇಷ್ಟಾದರೂ ಲಕ್ಷ್ಮಣನಿಗೆ ನಂಬುಗೆಯಾಗದೆ, "ನಮ್ಮನ್ನು ಕೊಲ್ಲಲು ರಾವಣನೇ ಇವನನ್ನು ಕಳುಹಿಸಿರಬಹುದು. ಸನ್ಯಾಸೀ ವೇಷದ ರಾವಣನ ಮೋಸವು ಗೊತ್ತಾಗಿದೆಯಷ್ಟೆ? ಆದುದರಿಂದ ವಿಭೀಷಣನನ್ನು ಸೇರಿಸಿಕೊಳ್ಳಲೇಬಾರದು" ಎಂದನು. ರಾವಣನ ಸ್ವಂತ ತಮ್ಮನಾಗಿರುವ ಈ ವಿಭೀಷಣನನ್ನು ಹೇಗೆ ನಂಬುವುದೆಂದು ಸುಗ್ರೀವನೂ ಹೇಳಿದನು. ಕಡೆಗೆ ರಾಮನು, ಶರಣಾಗತನಿಗೆ ಆಶ್ರಯ ಕೊಡ


೨೦. ಸಮುದ್ರರಾಜನ ಸಮ್ಮತಿ

ಬೇಕಾದುದು ಪರಮಧರ್ಮವೆಂದೂ, ಅವನನ್ನು ನಿರಾಕರಿಸುವುದು ಮಹಾಪಾಪವೆಂದೂ, ಅವನು ವಿಭೀಷಣನ ವೇಷದಲ್ಲಿ ಬಂದ ರಾವಣನೇ ಆದರೂ ತಾನು ಅವನನ್ನು ಸೇರಿಸಿಕೊಳ್ಳುವೆನೆಂದೂ ಒತ್ತಿ ಹೇಳಿ, ಅವನನ್ನು ಕರೆದುಕೊಂಡು ಬರಲು ಸುಗ್ರೀವನನ್ನೇ ಕಳುಹಿಸಿದನು.

ಸುಗ್ರೀವನು ಹೋಗಿ ಕೂಡಲೇ ವಿಭೀಷಣನನ್ನು ಅವನ ಸಂಗಾತಿಗಳೊಂದಿಗೆ ಕರೆದುಕೊಂಡು ಬಂದನು. ಬಂದ ಕೂಡಲೇ ವಿಭೀಷಣನೂ ಅವನ ಸಂಗಾತಿಗಳೂ ರಾಮನ ಪಾದಗಳ ಮೇಲೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಆಗ ವಿಭೀಷಣ, "ನಾನು ರಾವಣನ ತಮ್ಮ. ಅವನು ನನ್ನನ್ನು ಅವಮಾನ ಪಡಿಸಿದನು. ಆದುದರಿಂದ ನಾನು ಲಂಕೆಯಲ್ಲಿರುವ ನನ್ನವರೆಲ್ಲರನ್ನೂ ತೊರೆದು, ನನ್ನ ಎಲ್ಲಾ ಸಂಪತ್ತುಗಳನ್ನೂ ಬಿಟ್ಟು ಬಂದಿದ್ದೇನೆ. ಇನ್ನು ನನ್ನ ರಾಜ್ಯವೂ, ಜೀವಿತವೂ, ಸುಖವೂ ನನ್ನ ಸರ್ವಸ್ವವೂ ನಿನ್ನ ಅಧೀನವಾಗಿದೆ." ಎಂದನು.

ರಾಮನ ಕಿವಿಗಳಿಗೆ ವಿಭೀಷಣನ ಮೊದಲ ಮಾತುಗಳು ಬಹಳ ಮಧುರವಾಗಿ ತೋರಿದು ಅವನು ವಿಭೀಷನಿಗೆ ಲಂಕೆಯಲ್ಲಿರುವ ರಾಕ್ಷಸರ ಬಲ ಬಲಗಳನ್ನು ವಿವರಿಸಿ ಹೇಳಬೇಕೆಂದು ಹೇಳಿದನು ವಿಭೀಷಣನು ಹೀಗೆಂದನು:

ಬ್ರಹ್ಮದೇವನನ್ನು ತಪಸ್ಸಿನಿಂದ ಮೆಚ್ಚಿಸಿ ವ ಪಡೆದಿರುವ ರಾವಣನು ಮೂರು ಲೋಕಗಳನ್ನು ಗೆಲ್ಲಬಲ್ಲವನು. ಗಂಧರ್ವರಿಗಾಗಲಿ, ನಾಗರಿಗಾಗ ರಾಕ್ಷಸರಿಗಾಗಲಿ, ರಾವಣನನ್ನು ಗೆಲ್ಲಲು ಸಾಧ್ಯವಿ ಅವನ ತಮ್ಮನಾಗಿ, ವಿಭೀಷಣನಿಗೆ ಅಣ್ಣನಾಗಿರು ಕುಂಭಕರ್ಣನು ಪರಾಕ್ರಮದಲ್ಲಿ ಇಂದ್ರನಿಗೆ ಸಮ ನೆಂದೇ ಹೇಳಬಹುದು. ರಾವಣನ ಮಗನಾದ ಇಂ ಜಿತ್ತು ತನ್ನ ಬೆರಳುಗಳಿಗೂ ಶರೀರಕ್ಕೂ ಅಭೇ ವಾದ ಕವಚಗಳನ್ನು ಧರಿಸಿಕೊಂಡು ಯು ಮಾಡುತ್ತಿದ್ದ ಹಾಗೆಯೇ ಅದೃಶ್ಯನಾಗಬಲ್ಲ ಅದಕ್ಕಾಗಿಯೇ ಅವನು ಯುದ್ಧದ ಮಧ್ಯದಲ್ಲಿ ಅ ಯನ್ನು ಆರಾಧಿಸುವನು. ಇನ್ನು ರಾವಣನ ಸೇ



ಗಳು ದಿಕ್ಪಾಲಕರಿಗೆ ಸಮಾನವಾದ ಪರಾಕ್ರಮ ವರು. ಇಷ್ಟಬಂದ ರೂಪಗಳನ್ನು ಧರಿಸ ಂತಹ ರಾಕ್ಷಸ ಸೈನಿಕರು ಲಂಕೆಯಲ್ಲಿ ಬೇಕಾದಷ್ಟು ದಿ ಇದ್ದಾರೆ. ಅಂತಹ ರಾಕ್ಷಸರ ಸಹಾಯ ದಲೇ ರಾವಣನು ದಿಕ್ಪಾಲಕರನ್ನು ಜಯಿಸಿದ್ದಾನೆ.

ಇದನ್ನೆಲ್ಲಾ ಕೇಳಿದ ಮೇಲೆ ರಾಮನು, "ಅವನು ತಹ ಬಲಿಷ್ಠನಾಗಿ, ಬಲಶಾಲಿಗಳ ಸಹಾಯ ವನಾಗಿದ್ದರೂ ನಾನು ರಾವಣನನ್ನೂ ಅವನಿಗೆ ಾಯಕರಾದ ರಾಕ್ಷಸ ವೀರರನ್ನೂ ಕೊಂದು ನ್ನು ಲಂಕೆಗೆ ರಾಜನನ್ನಾಗಿ ಮಾಡಿ ಬಿಡುತ್ತೇನೆ. ನಿಜ. ಇದೇ ನನ್ನ ಪ್ರತಿಜ್ಞೆ. ರಾವಣನನ್ನು ಬಂಧು ಬಳಗದವರೊಂದಿಗೆ ಕೊಲ್ಲದೆ ನಾನು ೋಧ್ಯೆಗೆ ತಿರುಗಿ ಹೋಗಲಾರೆನು. ನನ್ನ ಂದಿರ ಮೇಲೆ ಪ್ರಮಾಣಮಾಡಿ ಹೇಳುತ್ತೇನೆ" ವಿಭೀಷಣನೊಂದಿಗೆ ಹೇಳಿದನು.


ಮಾತನ್ನು ಕೇಳಿ ವಿಭೀಷಣನು ರಾಮನಿಗೆ ್ಟಾಂಗ ನಮಸ್ಕಾರ ಮಾಡಿ, "ನಾನು ಕೂಡಾ ನನ್ನ ಶಕ್ತ್ಯಾನುಸಾರವಾಗಿ ರಾಕ್ಷಸರನ್ನು ಕೊಲ್ಲಲಿಕ್ಕೂ ಲಂಕಾ ನಗರವನ್ನು ಜಯಿಸಲಿಕ್ಕೂ ಸಹಾಯಕ ನಾಗಿರುತ್ತೇನೆ. ನಿನ್ನ ಶತ್ರುಗಳನ್ನು ನನ್ನ ಶತ್ರುಗಳೆಂದೇ ತಿಳಿದು ಯುದ್ಧ ಮಾಡುತ್ತೇನೆ." ಎಂದನು.

ರಾಮನು ಸಂತೋಷದಿಂದ ವಿಭೀಷಣನನ್ನು ಆಲಿಂಗಿಸಿಕೊಂಡು, ಲಕ್ಷ್ಮಣನೊಂದಿಗೆ, "ಲಕ್ಷ್ಮಣಾ, ಸಮುದ್ರದ ಜಲವನ್ನು ತಂದು ವಿಭೀಷಣನನ್ನು ಲಂಕಾ ನಗರಕ್ಕೆ ರಾಕ್ಷಸ ರಾಜನನ್ನಾಗಿ ಅಭಿಷೇಕ ಮಾಡು" ಎಂದನು.

ಆಮೇಲೆ ವಾನರರ ಮಧ್ಯದಲ್ಲಿ ವಿಭೀಷಣನಿಗೆ ರಾಕ್ಷಸರ ರಾಜ್ಯಾಭಿಷೇಕವು ನಡೆಯಿತು. ವಾನರರು ಹರ್ಷದಿಂದ ಸಿಂಹನಾದಗಳನ್ನು ಮಾಡಿ, ರಾಮನನ್ನು ಹೊಗಳಿದರು. ಸುಗ್ರೀವನೇ ಮೊದಲಾದವರಿಗಿದ್ದ ಅಲ್ಪ ಸ್ವಲ್ಪ ಸಂದೇಹವೂ ನಿರ್ನಾಮವಾಯಿತು.

ಆಮೇಲೆ ಸುಗ್ರೀವನೂ ಹನುಮಂತನೂ ಏಕಾಂತ ದಲ್ಲಿ ವಿಭೀಷಣನೊಂದಿಗೆ, "ಈಗ ಮೊದಲು ಮುಖ್ಯ ವಾಗಿ ನಾವೆಲ್ಲಾ ಈ ವಾನರರ ಸೈನ್ಯವನ್ನು ಕರೆದು





ಕೊಂಡು ಸಮುದ್ರವನ್ನು ದಾಟುವ ಬಗೆ ಹೇಗೆ? ಏನಾದರೂ ಉಪಾಯವಿದೆಯೇ ?" ಎಂದು ಕೇಳಿದರು. ಅದಕ್ಕೆ ವಿಭೀಷಣನು, "ರಾಮನು ಸಮುದ್ರ ರಾಜನನ್ನು ಶರಣಾಗಬೇಕು. ರಾಮನ ಪೂರ್ವಜನಾದ ಸಗರನು ಸಮುದ್ರರಾಜನಿಗೆ ಎಷ್ಟೋ ಸಹಕಾರ ಮಾಡಿದವನಾದುದರಿಂದ ಸಮುದ್ರರಾಜನು ತನ್ನ ಕರ್ತವ್ಯದಂತೆ ರಾಮನ ಕೆಲಸಕ್ಕೆ ಸಹಾಯ ಮಾಡದಿರಲಾರ" ಎಂದ ವಿಭೀಷಣ.

ಸುಗ್ರೀವನು ರಾಮಲಕ್ಷ್ಮಣರಬಳಿಗೆ ಬಂದು ವಿಭೀಷಣನು ಹೇಳಿದ ಮಾತನ್ನು ಹೇಳಿದನು. ರಾಮನು ವಿಭೀಷಣನ ನ್ಯಾಯವಾದ ಅಭಿಪ್ರಾಯಕ್ಕೆ ತೃಪ್ತನಾಗಿ, ಈ ಬಗ್ಗೆ ಸುಗ್ರೀವ ಲಕ್ಷ್ಮಣರ ಅಭಿಪ್ರಾಯವೇನೆಂದು ಕೇಳಿದನು. ಅವರು ಕೂಡಾ ವಿಭೀಷಣನ ಅಭಿಪ್ರಾಯವನ್ನೇ ಬಲಪಡಿಸಿದರು. ಆಮೇಲೆ ರಾಮನು ಸಮುದ್ರ ತೀರದಲ್ಲಿ ದರ್ಭೆಯನ್ನು ಹರಡಿ, ಸಮುದ್ರನನ್ನು ಧ್ಯಾನಮಾಡುತ್ತ ಮಲಗಿದನು.

ಇಲ್ಲಿ ಹೀಗಿರುವಾಗ, ರಾವಣನು ರಾವ... ವಿಷಯದಲ್ಲಿ ಸುಮ್ಮನಿರಲಿಲ್ಲ. ರಾಮನ ಸೇನೆಯ ಚಲನವಲನಗಳನ್ನರಿಯಲು ಶಾರ್ದೂಲನೆಂಬೊ... ಗೂಢಚಾರನನ್ನು ರಾವಣನು ಕಳುಹಿಸಿಕೊಟ್ಟಿದ್ದನು. ಅವನು ವಾನರ ಸೇನೆಯನ್ನೆಲ್ಲಾ ನೋಡಿ ರಾವಣನೊಂದಿಗೆ ಹೀಗೆ ಹೇಳಿದನು:


"ಸಮುದ್ರದ ಆಚೆಯ ತೀರದಲ್ಲಿ ಬೀ... ಬಿಟ್ಟಿರುವ ವಾನರಭಲ್ಲೂಕಗಳ ಸೇನೆ ಮತ್ತೊಂ... ಮಹಾ ಸಮುದ್ರದಂತೆ ಕಾಣುತ್ತದೆ. ರಾಮ... ಲಕ್ಷ್ಮಣರು ಉತ್ತಮಾಯುಧಗಳನ್ನು ಧರಿಸಿದವರಾಗಿ ಸೀತೆಗಾಗಿ ಹೊರಟುಬರಲು ಸಿದ್ಧರಾಗಿದ್ದಾ... ಸಮುದ್ರವನ್ನು ದಾಟುವ ಉಪಾಯವನ್ನು ಹುಡು... ತ್ತಿದ್ದಾರೆ. ವಿವರ ನೋಡಿ ಬರಲು ಇನ್ನಾರನ್ನಾದ... ಕಳುಹಿಸಬೇಕು. ಅವರು ನನಗಿಂತಲೂ ಹೆಚ್ಚಿನ ಶ... ಯುಳ್ಳವರಾಗಿರಬೇಕು."

ಶಾರ್ದೂಲನ ಮಾತು ಕೇಳಿ ರಾವಣನು ತು... ಯೋಚನೆಮಾಡಿ ತಲೆದೂಗಿ, ಶುಕನೆಂಬ ರಾ... ನೊಂದಿಗೆ ಸುಗ್ರೀವನಿಗೆ ಹೇಳಬೇಕೆಂದು ಈ ಮಾ... ಗಳನ್ನು ಹೇಳಿ ಕಳುಹಿಸಿದನು:

"ಸುಗ್ರೀವನೇ ಕೇಳು. ನಾನು ರಾಮನ ಹೆಂ... ಯಾದ ಸೀತೆಯನ್ನು ತಂದುದಕ್ಕೂ, ವಾನರ... ನಾದ ನಿನಗೂ ಏನಾದರೂ ಸಂಬಂಧವಿದೆಯೇ... ಏನೂ ಇಲ್ಲ. ಬುದ್ಧಿವಂತನಾದ ನೀನು ಚೆ... ಆಲೋಚಿಸಿ ನೋಡಿಕೋ. ನಿನ್ನಪಾಡಿಗೆ ನಿನ್ನ... ಗಳೊಂದಿಗೆ ಕಿಷ್ಕಿಂಧೆಗೆ ಹಿಂದಿರುಗಿ ಹೋಗಿ... ದೇವತೆಗಳೂ ಗಂಧರ್ವರೂ ಪ್ರವೇಶಿಸಲು... ವಿಲ್ಲದ ಲಂಕಾನಗರದೊಳಗೆ ವಾನರರು ಪ್ರವೇ... ಬಹುದೆಂಬುದು ಬರಿಯ ಬಾಯಿ ಮಾತು. ... ಈ ಗೊಡವೆ ನಿನಗೆ ಬೇಡ."

ಶುಕನು ರಾವಣನ ಈ ಸಂದೇಶವನ್ನು ಕಿವಿ... ತುಂಬಿಸಿಕೊಂಡು ಪಕ್ಷಿ ರೂಪ ಧರಿಸಿ ವಾನರರು...





ಕೊಂಡಿದ್ದ ಸಮುದ್ರದ ಉತ್ತರ ತೀರವನ್ನು ಸೇರಿದನು. ಅಲ್ಲಿ ಅವನು ಸುಗ್ರೀವನಿಗೆ ನೇರಾಗಿ ಆಕಾಶದಲ್ಲೇ ನಿಂತು, ರಾವಣನು ಹೇಳಿದ ಮಾತುಗಳನ್ನು ಗಟ್ಟಿಯಾಗಿ ಹೇಳಿದನು.

ಆ ಮಾತುಗಳನ್ನು ಹೇಳುವ ಶುಕನನ್ನು ಕೊಂದು ಬಿಡುವ ರೋಷದಲ್ಲಿ ಕೆಲವು ವಾನರರು ಆಕಾಶಕ್ಕೆ ಹಾರಿ ಶುಕನನ್ನು ಹಿಡಿದು ನೆಲದ ಮೇಲೆ ಕುಕ್ಕಿದರು. ಆಗ ಶುಕನು ರಾಮನ ಕಡೆಗೆ ನೋಡಿ ನೋವಿನಿಂದ, "ರಾಮಾ ! ನೋಡು ! ದೂತನನ್ನು ಕೊಲ್ಲಬಹುದೇ? ಈ ವಾನರರು ನನ್ನನ್ನು ಕೊಲ್ಲುತ್ತಾರೆ. ಬೇಡವೆಂದು ಹೇಳಿ ನನ್ನನ್ನು ಕಾಪಾಡು " ಎಂದು ಕೂಗಿದನು.

ರಾಮನು ವಾನರರಿಗೆ ಹಾಗೆ ಮಾಡಬಾರದೆಂದು ಹೇಳಿ ತಡೆದನು. ವಾನರರೂ ಶುಕನನ್ನು ಬಿಟ್ಟರು. ಅವನು ರೆಕ್ಕೆಗಳನ್ನು ಬಡೆದುಕೊಂಡು ಆಕಾಶದ ಮೇಲೆ ಹಾರಿ ಮತ್ತೆ ಸುಗ್ರೀವನನ್ನು ಕುರಿತು, "ಸುಗ್ರೀವಾ, ರಾವಣನೊಂದಿಗೆ ನಾನು ಏನೆಂದು ಹೇಳಬೇಕು ? ರಾವಣನು ಹೇಳಿದ ಮಾತುಗಳ ಕೇಳಿದೆಯಷ್ಟೆ ? " ಎಂದನು.

ಸುಗ್ರೀವನು ರಾವಣನಿಗೆ ತಾನು ಹೇಳಿದಂತೆ ಮಾತುಗಳನ್ನು ಹೇಳಿದನು : "ಎಲವೋ ರಾವಣ ನೀನು ನನಗೆ ಸ್ನೇಹಿತನೇ ಅಲ್ಲ. ನಿನ್ನಿಂದ ನಾ ಯಾವ ಉಪಕಾರವನ್ನೂ ಪಡೆಯಲಿಲ್ಲ. ಅಂ ನೀನು ನನ್ನ ಪರಮ ಸ್ನೇಹಿತನಾದ ರಾಮನ ಶ ನನ್ನ ಶತ್ರುವಾಗಿದ್ದ ವಾಲಿಗೆ ನೀನೊಬ್ಬ ಮಿತ್ರ. ಎರಡು ವಿಧಗಳಿಂದಲೂ ನೀನು ನನಗೆ ಶತ್ರು ವಾಲಿ ರಾಮಬಾಣದಿಂದ ಹೇಗೆ ಸತ್ತನೋ ಹಾಗೆ ನೀನೂ ಸಾಯುವಿ. ನಾನು ನಿನ್ನನ್ನೂ ನಿನ್ನ ಕು ರನ್ನೂ ನಿನ್ನ ಬಂಧುಬಳಗದವರನ್ನೂ, ದಾ ಗಳನ್ನೂ ಕೊಲ್ಲುತ್ತೇನೆ. ಬೇಗದಲ್ಲಿಯೇ ಸೇನೆಯೊಂದಿಗೆ ಲಂಕೆಗೆ ಬಂದು ಅದನ್ನು ನಿ ಮಾಡುತ್ತೇನೆ. ರಾಮನಿಂದ ನಿನ್ನನ್ನು ದೇವೇಂದ್ರಾದಿಗಳಿಗೂ ಸಾಧ್ಯವಾಗದು. ಲಕ್ಷ್ಮಣರಿಗೆ ಹೆದರಿ ಅವರು ಸಮೀಪದಲ್ಲಿಲ್ಲದ ನೋಡಿ ಹಾಳು ಕೆಲಸ ಮಾಡಿದವನು ಆ ರಾಮಲಕ್ಷ್ಮಣರ ಕೈಯಲ್ಲೇ ನಿನಗೆ ಸಾವು."

ಈ ಸಂದೇಶದೊಂದಿಗೆ ಶುಕನು ಹೋಗುವಾಗ, ಅಂಗದನು ಅವನನ್ನು ಅಡ್ಡ ಸುಗ್ರೀವನನ್ನು ನೋಡಿ, "ಇವನು ದೂ ರಾವಣನ ಗೂಢಚಾರ. ನಮ್ಮ ಸೇನೆಗಳನ್ನು ಸುತ್ತಿದ್ದಾನೆ. ನಮ್ಮ ಬಲಾಬಲಗಳನ್ನು ತ್ತಿದ್ದಾನೆ" ಎಂದನು.

ಕೂಡಲೇ ಸುಗ್ರೀವನು ಶುಕನನ್ನು ಹಿಡಿ ವಂತೆ ವಾನರರಿಗೆ ಆಜ್ಞೆ ಮಾಡಿದನು. ಮತ್ತೆ ವಾನರರ ಕೈಗೆ ಸಿಕ್ಕಿ ಹಣ್ಣು ಹ "ಅಯ್ಯಯ್ಯೋ ! ನನ್ನ ರೆಕ್ಕೆಗಳನ್ನು ಕೀಳು ಕಣ್ಣುಗಳನ್ನು ತಿವಿಯುತ್ತಾರೆ, ರಾಮಾ, ರ ಎಂದು ದೀನ ಸ್ವರದಿಂದ ಕೂಗಿದನು.

...ನಾದವು ಪುನಃ ರಾಮನ ಕಿವಿಯವರೆಗೆ ...ಲು, ಅವನು ವಾನರರ ಹಿಡಿತದಿಂದ ಪಾರಾಗಿ ...ಗುವಂತೆ ಮಾಡಿದನು. ರಾಮನ ಮಾತಿಗೆ ... ಬಿದ್ದು ವಾನರರು ಸುಮ್ಮನಾದರು.

ರಾಮನು ಸಮುದ್ರರಾಜನಿಗೆ ನಮಸ್ಕಾರ ...ದುತ್ತ ದರ್ಭಶಯನನಾಗಿ ರಾತ್ರಿಯಲ್ಲಿ ಕೈಗಳನ್ನು ...ಯ ಕೆಳಗೆ ಇಟ್ಟುಕೊಂಡು, ಸಮುದ್ರದ ಕಡೆಗೆ ... ಮಾಡಿ ಧ್ಯಾನದಲ್ಲಿಯೇ ಮೂರು ರಾತ್ರಿ ...ನ್ನು ಕಳೆದನು.

ರಾಮನಿಗೆ ತಾಳ್ಮೆ ತಪ್ಪಿತು, ಕೋಪವೆದ್ದಿತು. ...ಗಳು ಕೆಂಪಾದುವು. ಅವನು ಸಮೀಪದಲ್ಲಿದ್ದ ...ಣನೊಂದಿಗೆ, "ನಾನು ಮೂರು ದಿನಗಳಿಂದ ...ಸುತ್ತಿದ್ದರೂ ಈ ಸಮುದ್ರನು ಏಕೆ ನನ್ನ ಮುಂದೆ ...ವುದಿಲ್ಲ? ಅಷ್ಟೊಂದು ಗರ್ವವೇ ಅವನಿಗೆ? ... ಬಾಣಗಳಿಂದ ಸಮುದ್ರದೊಳಗಿನ ಪ್ರಾಣಿ ...ಲ್ಲಾ ಅಳಿಸಿ ಜಲರಾಶಿಯನ್ನೇ ಅಲ್ಲಕಲ್ಲೋಲ ...ಸುತ್ತೇನೆ. ಎಲ್ಲಿ, ನನ್ನ ಬಿಲ್ಲು ಬಾಣಗಳನ್ನು ...ಕೊಂಡು ಬಾ" ಎಂದನು.

...ಣನು ರಾಮನಿಗೆ ಬಿಲ್ಲು ಬಾಣಗಳನ್ನು ...ಕೊಟ್ಟನು. ರಾಮನು ಬಿಲ್ಲಿನಲ್ಲಿ ವಜ್ರ ಸಮಾನ ... ಬಾಣಗಳನ್ನು ಸಂಧಿಸಿ ಸಮುದ್ರದ ಮೇಲೆ ...ಯೋಗಿಸ ತೊಡಗಿದನು. ಅವುಗಳ ಪ್ರಭಾವದಿಂದ ...ದ್ರದಲ್ಲಿ ತೆರೆಗಳೂ, ಹೊಗೆಯೂ ಭಯಂಕರ ... ಏಳತೊಡಗಿದುವು. ಸಮುದ್ರವು ಆಕಾಶದವರೆಗೆ ... ತೊಡಗಿತು.

...ಮನು ಇನ್ನೂ ಬಾಣಗಳನ್ನು ಪ್ರಯೋಗಿಸು ...ನ್ನು ನೋಡಿ ಪ್ರಪಂಚವು ನೀರಿನಿಂದ ಮುಳುಗು ...ಯೋ ಎಂದು ಹೆದರಿ "ಬೇಡಬೇಡ, ನಿಲ್ಲಿಸು !" ... ಅನೇಕ ಕಂಠಗಳು ಕೂಗಿದುವು. ಲಕ್ಷ್ಮಣನು ... ಬಿಲ್ಲನ್ನು ಹಿಡಿದನು. ಇಷ್ಟಾದರೂ ಸಮುದ್ರ ... ಕಾಣಿಸದಿರಲು. ರಾಮನು ಸಮುದ್ರನನ್ನು



ಸಂಬೋಧಿಸಿ, "ಎಲವೋ ಸಮುದ್ರನೇ ! ನಿನ್ನನ್ನು ನನ್ನ ಬಾಣಗಳಿಂದ ಒಣಗಿಸಿಬಿಡುತ್ತೇನೆ. ನಿನ್ನ ಪ್ರದೇಶವೆಲ್ಲಾ ಮರುಗಾಡನ್ನಾಗಿ ಮಾಡುತ್ತೇನೆ. ನನ್ನ ಬಲಪರಾಕ್ರಮಗಳೆಷ್ಟೆಂಬುದನ್ನು ನಿನಗೆ ಪೂರ್ಣ ತೋರಿಸಿಬಿಡುತ್ತೇನೆ. ನಿನ್ನಲ್ಲಿ ಸೇರಿರುವ ದಾನವರ ಸ್ನೇಹದಿಂದಲೇ ನೀನು ಈ ರೀತಿಯಾಗಿ ಅಜ್ಞಾನಾಂಧಕಾರದಲ್ಲಿರುವೆ" ಎಂದನು.

ಹೀಗೆಂದು ರಾಮನು ತನ್ನ ಬಿಲ್ಲಿಗೆ ಬ್ರಹ್ಮಾಸ್ತ್ರವನ್ನು ಸಂಧಿಸಿ, ಕಿವಿಯವರೆಗೆ ನಾಣೆಳೆಯುತ್ತಿರಲು, ಭೂಮಿಯೂ ಆಕಾಶವೂ ಗಡಗಡಿಸಿತು. ಬೆಟ್ಟಗುಡ್ಡಗಳು ಕುಸಿದುವು. ಕೆಲವುಗಳ ನಡು ಮುರಿಯಿತು. ಒಮ್ಮೆಗೇ ಕತ್ತಲೆ ಕವಿದಂತೆ ಕಾರ್ಮೋಡಗಳೆದ್ದುವು. ಪ್ರಚಂಡವಾದ ಸುಳಿಗಾಳಿ ಹೊರಟಿತು. ಪ್ರಾಣಿಕೋಟಿಗಳು ಆರ್ತನಾದ ಮಾಡತೊಡಗಿದುವು. ಸಮುದ್ರ ಜಲವು ಒಂದು ಯೋಜನದಷ್ಟು ಹಿಂದಕ್ಕೆ ಹೋಯಿತು.

ಅದನ್ನು ನೋಡಿ ರಾಮನು ಸುಮ್ಮನೆ ನಿಂತನು. ಅಷ್ಟರಲ್ಲಿ ಸಮುದ್ರದ ಮಧ್ಯದಿಂದ ಸಮುದ್ರರಾಜನು ಕಾಣಿಸಿದನು. ಅವನ ಶರೀರವು ವೈಡೂರ್ಯ ಕಾಂತಿಯಿಂದ ಹೊಳೆಯುತ್ತಿದ್ದಿತು. ಅವನು ದಿವ್ಯವಾದ ಪುಷ್ಪ ಮಾಲಿಕೆಗಳನ್ನೂ, ಬಂಗಾರದ ಆಭರಣಗಳನ್ನೂ ಧರಿಸಿಕೊಂಡು ಗಂಗಾ, ಸಿಂಧು ಮೊದಲಾದ ನದೀ ದೇವತೆಗಳೊಂದಿಗೆ ಸಾಕ್ಷಾತ್ಕರಿಸಿದನು.


ಅವನು ರಾಮನ ಬಳಿಗೆ ಬೇಗಬೇಗನೆ ಬಂದು ಕೈಜೋಡಿಸಿ ನಮಸ್ಕರಿಸುತ್ತ, "ರಾಮಾ! ಶಾಂತನಾಗು. ಆಳವೂ ಗಾಂಭೀರ್ಯವೂ ನನ್ನ ಸಹಜ ಗುಣಗಳಾಗಿವೆ. ನನ್ನ ನೀರನ್ನು ತಗ್ಗಿಸಿಕೊಳ್ಳಲು ನಾನು ಶಕ್ತನಲ್ಲ. ಆದುದರಿಂದಲೇ ಹೇಗೆ ಸಹಕರಿಸಲೆಂದು ಯೋಚಿಸಿಕೊಂಡಿದ್ದೆ. ನನ್ನ ಕೈಲಾಗುವ ಸಹಾಯವೇನೆಂದರೆ, ನಿನ್ನ ಸೇನೆಗಳು ನನ್ನನ್ನು ದಾಟುವವರೆಗೂ ಸಮುದ್ರ ಪ್ರಾಣಿಗಳಿಂದ ಅಪಾಯ ಬಾರದಂತೆ ನೋಡಿಕೊಳ್ಳುತ್ತೇನೆ." ಎಂದನು.

"ಹಾಗಾದರೆ ನಾನೀಗ ಸಂಧಿಸಿದ ಈ ಬಾಣವನ್ನು ಯಾವ ಕಡೆಗೆ ಪ್ರಯೋಗಿಸಲಿ?" ಎಂದು ರಾಮನು ಸಮುದ್ರರಾಜನನ್ನು ಕೇಳಿದನು. "ಅದೋ ಉತ್ತರ ದಿಕ್ಕಿನಲ್ಲಿ ಒಂದು ಪ್ರದೇಶವಿದೆ. ಅಲ್ಲಿ ಆಭೀರುಗಳೆಂಬ ಮಹಾ ಮಹಾ ಪಾಪಾತ್ಮರೇ ವಾಸವಾಗಿದ್ದು, ಇನ್ನೂ ಇನ್ನೂ ಪಾಪ ಕರ್ಮಗಳನ್ನೇ ಮಾಡುತ್ತಿರುತ್ತಾರೆ. ನಿನ್ನ ಬಾಣವನ್ನು ಅವರ ಮೇ ಪ್ರಯೋಗಿಸು" ಎಂದ ಸಮುದ್ರರಾಜ.

ರಾಮನು ಆ ದಿಕ್ಕಿಗೆ ಬಾಣ ಪ್ರಯೋ ಮಾಡಿದನು. ಆ ಕ್ಷಣದಲ್ಲೇ ಅಲ್ಲಿ ಸರ್ವನಾಶನವಾ ಹೋಯಿತು. ಬಾಣವು ಚುಚ್ಚಿಕೊಂಡ ಜಾಗದ ಪಾತಾಳ ಜಲವು ಮೇಲಕ್ಕೆ ಸಿಡಿದುಬಂತು. ಅಗಾ ವಾದ ಆ ಬಾವಿಗೆ ವ್ರಣ ಕೂಪವೆಂದು ಹೆಸರು.

ತರುವಾಯ ಸಮುದ್ರರಾಜನು ರಾಮನೊಂದಿ "ನಿನ್ನ ಸೇನೆಯಲ್ಲಿರುವ ನೀಲನೆಂಬ ವಾನರ ವಿಶ್ವಕರ್ಮನ ಮಗ. ಅವನು ಸಮುದ್ರ ಜಲ ಮೇಲೆ ಸೇತುವೆ ಕಟ್ಟಲಿ. ಅದು ನೀರಿನಲ್ಲಿ ಮು ಹೋಗದಂತೆ ನಾನು ನೋಡಿ ಕೊಳ್ಳುತ್ತೇನೆ." ಎಂ ಹೇಳಿ ಅಂತರ್ಧಾನನಾದನು.

ಆಮೇಲೆ ನೀಲನನ್ನು ವಿಚಾರಿಸಿದಾಗ, ತಾ ವಿಶ್ವಕರ್ಮನ ಮಗನೆಂಬುದು ನಿಜವೇ ಎಂದ ಮಾತ್ರವಲ್ಲ, ವಿಶ್ವಕರ್ಮನಿಂದ ತಾನು ವರಗಳ ಪಡೆದಿರುವುದಾಗಿಯೂ ಹೇಳಿದನು. ಅವ ಅತ್ಯುತ್ಸಾಹದಿಂದ ಸೇತುವೆ ಕಟ್ಟಲು ಒಪ್ಪಿಕೊಂಡ ಆ ಕ್ಷಣವೇ ಅವನು ಸೇತುವೆ ಕಟ್ಟುವ ಘನಕಾಯ ಎಲ್ಲಾ ವಾನರರನ್ನೂ ಹುರುಡಿಸಿದನು. ಸಮು ವನ್ನು ದಾಟುವ ಉಪಾಯವು ಗೊತ್ತಾದುದರಿ ವಾನರರಿಗೆಲ್ಲ ಮಹಾ ಸಂತೋಷವಾಯಿತು.






ವೀರಹನುಮಾನ್

July 1976

...ಆಜ್ಞೆಯನ್ನು ಶಿರಸಾವಹಿಸಿಕೊಂಡು ...ರು ಗುಂಪು ಗುಂಪಾಗಿ ಅರಣ್ಯದೊಳಗೆ ನುಗ್ಗಿ ...ಗೆಯ ಮರಗಳನ್ನು ಕಿತ್ತುಕೊಂಡು ತಂದು ...ದ್ರದಲ್ಲಿ ಹಾಕ ತೊಡಗಿದರು. ಇನ್ನೂ ಹೆಚ್ಚಿನ ...ಂತರು ದೊಡ್ಡ ದೊಡ್ಡ ಆನೆಗಳಂತಹ ಕಲ್ಲು...ನ್ನು ಹೊತ್ತು ತಂದು ಧಡೀಲ್ ಭಡೀಲೆಂದು ...ದ್ರದಲ್ಲಿ ಹಾಕುತ್ತಿರಲು ಸಮುದ್ರದ ನೀರು ...ದೆತ್ತರಕ್ಕೆ ಹಾರುತಿತ್ತು. ಜಲಚರಗಳೆಲ್ಲ ...ದೂರ ಓಡಿ ಹೋಗುತ್ತಿದ್ದುವು. ಸಮುದ್ರದ ... ಕಲಕಿ ಬಣ್ಣ ಬದಲಾವಣೆಗೊಂಡಿತು. ...ಕ್ಕೆ ಬಿದ್ದ ಕಲ್ಲುಗಳನ್ನೂ ಮರಗಳನ್ನೂ ನಳನು ...ಅನುಚರರೊಡನೆ ಜೋಡಿಸುತ್ತಾ ಹೋದನು. ಈ ವಿಧವಾಗಿ ನಿರ್ಮಾಣವಾಗುತ್ತಿರುವ ಸೇತುವೆ ...ತಗ್ಗುಗಳಿಲ್ಲದಂತೆ ನೋಡಿಕೊಳ್ಳಲು ಕೆಲವರು ...ಹಿಡಿದು ಸರಿಮಟ್ಟ ಹೊಂದಿಸುತ್ತಿದ್ದರು. ... ಅಳತೆ ಕೋಲುಗಳನ್ನು ಉಪಯೋಗಿಸಿ ...ಡಿಕೊಳ್ಳುತ್ತಿದ್ದರು. ಐದು ದಿನಗಳಲ್ಲಿ ಸೇತುವೆಯ ನಿರ್ಮಾಣ ಪೂರ್ತಿಯಾಯಿತು. ನಳನಿಂದ ತಯಾರಾದ ಆ ಸೇತುವೆ ಹತ್ತು ಯೋಜನ ಅಗಲವಾಗಿ, ನೂರು ಯೋಜನ ಉದ್ದವಾಗಿದ್ದಿತು. ದಿನಕ್ಕೆ ಇಪ್ಪತ್ತು ಯೋಜನಗಳಂತೆ ಈ ಬದಿಯಿಂದ ಆ ಬದಿಯವರೆಗೂ ಸೇತುವೆ ಸಿದ್ಧವಾಯಿತು. ನಳನ ಸಾಮರ್ಥ್ಯವನ್ನು ಎಲ್ಲರೂ ಮೆಚ್ಚಿಕೊಂಡರು. ದೊಡ್ಡದೊಂದು ಸಮಸ್ಯೆ ಬಗೆಹರಿದು ಕಣ್ಣೆದಿರು ಪ್ರತ್ಯಕ್ಷವಾದುದನ್ನು ನೋಡಿ ವಾನರರು ಪರಮಾನಂದದಿಂದ ಆಚೆಗೂ ಈಚೆಗೂ ಹಾರಾಡಿದರು.

ಉತ್ತಮವಾದೊಂದು ರಾಜಮಾರ್ಗದಂತೆ ತಯಾರಾದ ಆ ಸೇತುವೆಯ ಮೇಲೆ ವಾನರ ಸೇನೆಗಳು ಸಮುದ್ರವನ್ನು ದಾಟ ತೊಡಗಿದುವು. ಶತ್ರುಗಳು ಅಡ್ಡಿಮಾಡಲು ಬಂದರೆ ಕೊಂದು ಹಾಕಲಿಕ್ಕಾಗಿ ವಿಭೀಷಣನು ತನ್ನ ಗದೆಯನ್ನೆತ್ತಿಕೊಂಡು ನಾಲ್ವರು ತನ್ನವರೊಂದಿಗೆ ಸೇತುವೆಯ ಆಚೆ ಕೊನೆಯಲ್ಲಿದ್ದನು.

ಸೇತುವೆಯನ್ನು ದಾಟುವಾಗ ಹನುಮಂತನ ಮೇಲೆ ರಾಮನೂ ಅಂಗದನ ಮೇಲೆ ಲಕ್ಷ್ಮಣನೂ



ಏರಿ ಕುಳಿತಿದ್ದರು. ರಾಮಲಕ್ಷ್ಮಣರು ಕಾಲುನಡಿಗೆಯಿಂದ ದಾಟುವೆವೆಂದರೂ ಸುಗ್ರೀವನು ಒಪ್ಪಲಿಲ್ಲ. ರಾಮಲಕ್ಷ್ಮಣರನ್ನು ಹೊತ್ತುಕೊಂಡು ಹನುಮಂತ ಅಂಗದರು ನೆಲಬಿಟ್ಟು ಆಕಾಶ ಮಾರ್ಗದಲ್ಲೇ ಸಾಗಿ ಹೋದರು. ಮತ್ತೆ ಕೆಲಮಂದಿ ವಾನರರು ಕೂಡಾ ಅತ್ಯುತ್ಸಾಹದಿಂದ ನೆಲಬಿಟ್ಟು ಗಾಳಿಯಲ್ಲೇ ತೇಲಿಕೊಂಡುಹೋದರು. ವಾನರರು ಅತ್ಯಧಿಕ ಸಂಖ್ಯೆಯಲ್ಲಿದ್ದುದರಿಂದ ನೂಕು ನುಗ್ಗಲು ಜಾಸ್ತಿಯಾಗಿ ಕೆಲವರು ಸಮುದ್ರದಲ್ಲಿ ಬಿದ್ದು ಮೇಲೆದ್ದು ಬಂದರು. ಸೇತುವೆ ದಾಟುವಾಗ ವಾನರರ ಘೋಷಣದಿಂದ ಸಮುದ್ರ ಘೋಷ ಅಡಗಿಹೋಯಿತು.

ಸಮುದ್ರದ ಆಚೆಯ ತೀರದಲ್ಲಿ ಫಲಸಮೃದ್ಧವಾದ ಅರಣ್ಯಗಳೂ ವಾನರ ಸೇನೆಗಳು ಬೀಡುಬಿಡಲು ತಕ್ಕ ವಿಸ್ತಾರ ಪ್ರದೇಶಗಳೂ ಸಾಕಷ್ಟಿದ್ದುವು. ಆದರೆ ರಾಮನು ಎಲ್ಲಿಯೂ ನಿಲ್ಲದೆ ನೆಟ್ಟಗೆ ಲಂಕಾ ನಗರಕ್ಕೇ ವಾನರ ಸೇನೆಯನ್ನು ನಡೆಯಿಸಲು ನಿರ್ಣಯಿಸಿದನು.

ಅದರಂತೆ ರಾಮನು ಮುಂದೆ ನಡೆಯಲು, ವಾನ[ರರು] ಸಿಂಹನಾದ ಮಾಡುತ್ತ ಲಂಕಾನಗರದ ಕ… ಹೊರಟರು. ಬಾಲ ಕುಣಿಸಿಕೊಂಡು ನಡೆಯು… ವಾನರರ ಉತ್ಸಾಹವನ್ನು ಕಂಡು ರಾಮನಿಗೆ ಬ… ಸಂತೋಷವಾಯಿತು.

ವಾನರಸೇನೆ ಲಂಕಾನಗರದ ಹೊರಭಾಗ… ಸೇರಿ ಹರಡುತ್ತಿರಲು, ಲಂಕಾನಗರದ ಕಡೆಯ… ರಣಭೇರಿಗಳೂ ಮೃದಂಗಗಳೂ ಶಬ್ದಿಸ ತೊ… ದುವು. ಅವುಗಳೊಂದಿಗೆ ರಾಕ್ಷಸರು ಮಾ… ಆರ್ಭಟಗಳೂ ಕೇಳ ತೊಡಗಿದುವು. ಆದನ್ನು … ವಾನರರು ಅದಕ್ಕಿಂತ ಗಟ್ಟಿಯಾಗಿ ಸಿಂಹನಾದ ಮ… ದರು. ಲಂಕೆಯ ಧ್ವಜಸ್ತಂಭಗಳಲ್ಲಿ ಕಾಣುವ … ಗಳನ್ನು ನೋಡಿ ರಾಮನು ಸೀತೆಯನ್ನು ನೆ… ದುಃಖಿಸತೊಡಗಿದನು.


ಅವನು ಲಕ್ಷ್ಮಣನೊಂದಿಗೆ, "ತ್ರಿಕೂಟ ಪರ್ವ… ಮೇಲೆ ಆಕಾಶಕ್ಕೆ ಅಂಟಿಕೊಂಡಿರುವ ಹಾಗೆ … ಕರ್ಮನಿಂದ ನಿರ್ಮಿತವಾದ ಲಂಕಾನಗರ… ನೋಡು. ಅಲ್ಲಿರುವ ಸೀತೆಯ ಸಮೀಪಕ್ಕೆ … ದ್ದೇವೆ" ಎಂದನು.


ತರುವಾಯ ರಾಮನು ವಾನರಸೇನೆ… ವ್ಯೂಹವಾಗಿ ಆಳವಡಿಸ ಬೇಕಾದ ಕ್ರಮವನ್ನು … ಸುಗ್ರೀವನಿಗೆ ಹೇಳಿದನು. ಅದು ಹೇಗೆ… ಅಂಗದನು ನೀಲನೊಂದಿಗೆ ಕೂಡಿ, ತನ್ನ ಸೇನೆ… ವ್ಯೂಹದ ಮಧ್ಯದಲ್ಲಿರಿಸಬೇಕು. ಋಷಭನು … ಸೇನೆಯೊಂದಿಗೆ ಬಲಪಾರ್ಶ್ವದಲ್ಲಿರತಕ್ಕದು. … ಮಾದನನು ತನ್ನ ಸೇನೆಯೊಂದಿಗೆ ಎಡಪಾರ್ಶ್ವ… ಬೇಕು. ರಾಮಲಕ್ಷ್ಮಣರು ವ್ಯೂಹದ ಮ… ಭಾಗದಲ್ಲಿರುವರು. ಈ ರೀತಿಯಲ್ಲಿ ಮೊತ್ತ… ಸೇನೆಗಳು ಗರುಡ ವ್ಯೂಹದಲ್ಲಿ ನಿಂತಿರಬೇಕು.

ಹೀಗೆ ಆಳವಟ್ಟು ಗರುಡ ವ್ಯೂಹದ ಪ್ರತಿ… ಅಂಗದಲ್ಲಿರುವ ವಾನರರಿಗೂ ಲಂಕಾನಗ…

ಹಿಟ್ಟು ಧೂಳಾಗಿ ಮಾಡಬೇಕೆಂದು ಅತ್ಯಂತ ಆತುರ ಆಗಿತ್ತು. ಅದುವರೆಗೂ ತಮ್ಮೊಂದಿಗೇ ಇರಿಸಿಕೊಂಡಿದ್ದ ರಾವಣನ ದೂತನಾದ ಶುಕನ ಕಡೆಗೆ ನೋಡಿ ರಾಮನು ಸುಗ್ರೀವನನ್ನು ಕುರಿತು, "ಆ ಶುಕನನ್ನು ಈಗ ಬಿಡುಗಡೆ ಮಾಡಿ ಬಿಟ್ಟುಬಿಡು" ಎಂದನು.

ವಾನರರಿಂದ ನಾನಾ ಬಗೆಯ ಸಂಕಟಗಳನ್ನು ಅನುಭವಿಸಿ, ರಾಮನಿಂದ ರಕ್ಷಿಸಲ್ಪಟ್ಟ ಆ ಶುಕನು, ಸುಗ್ರೀವನು ಹೋಗಲು ಬಿಟ್ಟುಕೊಡಲೇ ಅತಿ ವೇಗವಾಗಿ ರಾವಣನ ಬಳಿಗೆ ಹೋಗಿ ಸೇರಿದನು. ರಾವಣನು ಅವನನ್ನು ನೋಡಿ ನಗುತ್ತ, "ಏನಪ್ಪಾ ಈ ಅವಸ್ಥೆ? ರೆಕ್ಕೆಗಳಿಗೆ ಊನ ಬಂದ ಹಾಗಿದೆ, ವಾನರರಿಗೆ ಸಿಕ್ಕಿಗಿಕ್ಕಿ ಬೀಳಲಿಲ್ಲವಷ್ಟೇ?" ಎಂದು ಕೇಳಿದನು. ಶುಕನು ರಾವಣನೊಂದಿಗೆ ಹೀಗೆಂದನು: "ನಾನು ಸಮುದ್ರದ ಆಚೆಯ ತೀರಕ್ಕೆ ಹಾರುತ್ತಾ ಹೋಗಿ ಸುಗ್ರೀವನಿಗೆ ನೀನು ಹೇಳಿದ ಮಾತುಗಳನ್ನು ಒಂದಿಷ್ಟೂ ತಪ್ಪಿಲ್ಲದಂತೆ ಹೇಳಿದೆ. ಅದನ್ನು ಕೇಳಿ ವಾನರರಿಗೆ ಬಹಳ ಕೋಪ ಬಂದುದರಿಂದ ಹಕ್ಕಿಗಳ ಹಾಗೆ ಹಾರಿ ಬಂದು ನನ್ನನ್ನು ಮುತ್ತಿಗೆ ಹಾಕಿ ಹಿಡಿದು ಒಂದೇ ಸಮನೆ ಚಿತ್ರ ಹಿಂಸೆಕೊಟ್ಟರು. ವಾನರರು ಮಾತುಕತೆಯಾಡುವವರಲ್ಲ; ಮಾತಾಡಿದರೆ ಕೇಳುವವರೂ ಅಲ್ಲ. ಅವರಿಂದ ಪ್ರತ್ಯುತ್ತರವನ್ನು ಹೇಗೆ ಪಡೆಯಬೇಕೆಂಬುದೇ ಗೊತ್ತಾಗಲಿಲ್ಲ. ಮುಖ್ಯವಾಗಿ ಅವರೆಲ್ಲ ಮುಂಗೋಪಿಗಳು ಮತ್ತು ಕ್ರೂರರು. ಸಮುದ್ರಕ್ಕೆ ಸೇತುವೆಯನ್ನು ಲೀಲಾಜಾಲವಾಗಿ ಕಟ್ಟಿಬಿಟ್ಟರು. ಅದರ ಮೇಲಿನಿಂದ ಎಲ್ಲರೂ ದಾಟಿ ಬಂದರು. ಇನ್ನೂ ಬರುತ್ತಿದ್ದಾರೆ. ರಾಮನು ಕೂಡಾ ಲಕ್ಷ್ಮಣನೊಂದಿಗೆ ಸಮುದ್ರವನ್ನು ದಾಟಿ ಬಂದು ಲಂಕಾ ದ್ವಾರದಲ್ಲಿ ತಯಾರಾಗಿದ್ದಾನೆ. ನೆಲವೇ ಹಡೆದ ಹಾಗೆ ವಾನರರೂ ಕರಡಿಗಳೂ ಭೂಮಿಯನ್ನೆಲ್ಲಾ ಆಕ್ರಮಿಸಿಕೊಂಡಿದ್ದಾರೆ. ಇನ್ನು ಮೇಲೆ ವಾನರರಿಗೂ ರಾಕ್ಷಸರಿಗೂ ಯುದ್ಧವು ತಪ್ಪಲಾರದು. ಕೊಡುವುದಾದರೆ ಸೀತೆಯನ್ನು ರಾಮನಿಗೆ ವಾಪಾಸು ಕೊಡಬೇಕು. ಇಲ್ಲದಿದ್ದರೆ ಯುದ್ಧವನ್ನಾದರೂ ಮಾಡಬೇಕು. ಯಾವುದನ್ನು ಮಾಡುವು





ದಾದರೂ ಸಾಧ್ಯವಾದಷ್ಟು ಬೇಗನೇ ಮಾಡಬೇಕು."

ಈ ಮಾತುಗಳನ್ನು ಕೇಳುತ್ತಿದ್ದಂತೆ ರಾವಣನಿಗೆ ಕೋಪವೇರುತ್ತ ಕಣ್ಣುಗಳು ಕೆಂಡವಾದುವು. "ಲೋಕಗಳೆಲ್ಲಾ ಒಂದಾಗಿ ನನ್ನ ಮೇಲೆ ಯುದ್ಧಕ್ಕೆ ಬಂದರೂ ಸೀತೆಯನ್ನು ಕೊಡಲಾರೆನು. ಬಹಳ ಕಾಲದಿಂದ ಯುದ್ಧವೇನಿಲ್ಲದೆ ನನ್ನ ತೋಳುಗಳು ತುಡಿಸುತ್ತಿವೆ. ನನ್ನ ಸಮಾಚಾರ ತಿಳಿಯದೆ ರಾಮನು ಇಲ್ಲಿಯವರೆಗೆ ಬಂದಿದ್ದಾನೆ. ನನ್ನ ಬಾಣಗಳ ಪ್ರಭಾವವನ್ನೂ ಅವನರಿಯನು." ಎಂದ ರಾವಣ.

ಅವನು ತನ್ನ ಜಂಟಿ ಮಂತ್ರಿಗಳಾದ ಶುಕ ಮತ್ತು ಸಾರಣರನ್ನು ನೋಡಿ, "ಸಮುದ್ರಕ್ಕೆ ಸೇತುವೆ ಕಟ್ಟಿದರೆಂಬ ಮಾತನ್ನು ನಂಬಲು ಸಾಧ್ಯವಿಲ್ಲ. ನಾನೆಲ್ಲಿಯೂ ಕೇಳಲೂ ಇಲ್ಲ. ನೀವಿಬ್ಬರೂ ರಹಸ್ಯವಾಗಿ ಹೋಗಿ ನಿಜವಾಗಿಯೂ ಸೇತುವೆಯ ನಿರ್ಮಾಣವಾಗಿದೆಯೋ ನೋಡಿ ತಿಳಿದು ಬನ್ನಿ. ಹಾಗೆಯೇ ವಾನರರ ಸೇನೆ ಎಷ್ಟರ ಮಟ್ಟಿಗಿದೆ, ರಾಮನು ನಂಬಿಕೊಂಡಿರುವ ಮುಖ್ಯ ಶಕ್ತಿಗಳಾವು[ವು] ಅವನ ಅಸ್ತ್ರಶಸ್ತ್ರಗಳೆಂಥಹವು ಎಂಬುದನ್ನೆಲ್ಲ ತಿಳಿ[ದು]ಕೊಂಡು ಬನ್ನಿ" ಎಂದನು.

ಶುಕಸಾರಣರಿಬ್ಬರೂ ವಾನರರ ರೂಪಗಳ[ನ್ನು] ಧರಿಸಿ ವಾನರ ಸೇನೆಯೊಳಗೆ ಪ್ರವೇಶ ಮಾಡಿದರು. ಅಂತ್ಯವಿಲ್ಲದಂತಿರುವ ವಾನರರ ಸೇನೆಯನ್ನು [...] ಮಾಡಲು ಅವರಿಂದಾಗಲಿಲ್ಲ. ವಾನರರ [...] ಸಮಸ್ತ ಪ್ರದೇಶವನ್ನೂ ಆಕ್ರಮಿಸಿದ್ದು, [...] ಸೇತುವೆಯನ್ನು ದಾಟಿ ಬರುತ್ತಲೇ ಇದ್ದಿತು.


ಇಷ್ಟರಲ್ಲಿ ವಿಭೀಷಣನು ಅವರಿಬ್ಬರ ಗುರು[...] ಹಿಡಿದು, ಇಬ್ಬರನ್ನೂ ರಾಮನಬಳಿಗೆ ಎಳೆದುಕೊ[ಂಡು] ಹೋಗಿ, "ಇವರು ಶುಕಸಾರಣರೆಂಬ ರಾವ[ಣನ] ಜಂಟಿ ಅನುಚರರು. ಮಂತ್ರಿಗಳೂ ಹೌದು. [...] ವಾನರ ರೂಪಗಳಿಂದ ನಮ್ಮ ರಹಸ್ಯಗಳನ್ನು [...] ಕೊಳ್ಳಲು ಲಂಕೆಯಿಂದ ಬಂದಿದ್ದಾರೆ" ಎಂದನು.

ಕೂಡಲೇ ಅವರಿಬ್ಬರೂ ರಾಮನಿಗೆ ನಮ[...] ಮಾಡಿ, ವಿಭೀಷಣನು ಹೇಳಿದುದು ನಿಜವೆಂದು [...] ಕೊಂಡರು. ರಾಮನು ನಕ್ಕು, "ಬಹಳ ಒಳ್ಳೆ[...] ಆದಕ್ಕಾಗಿ ರೂಪಮರೆಸಿ ಬರಬೇಕಿತ್ತೇ ? ನಮ್ಮ[...] ವನ್ನೆಲ್ಲಾ ನೋಡಿರಿ. ನಮ್ಮನ್ನು ಚೆನ್ನಾಗಿ [...] ಮಾಡಿರಿ. ಆಮೇಲೆ ಲಂಕೆಗೆ ಹಿಂದಿರುಗಿ [...] ನೀವು ನೋಡಬೇಕಾದುದು ಇನ್ನೂ ಬಾಕಿ[...] ವಿಭೀಷಣನು ನಿಮಗೆ ಎಲ್ಲಾ ಸೇನೆಯನ್ನೂ [...]ಸುವನು. ನೀವು ನಿರಾಯುಧರಾದುದರಿಂದ ಯಾ[...] ನಿಮ್ಮನ್ನು ಕೊಲ್ಲುವುದಿಲ್ಲ" ಎಂದು ಹೇಳಿ ಅವ[...] ಕಳುಹಿಸಿಬಿಡುವಂತೆ ವಿಭೀಷಣನಿಗೆ ಹೇಳಿ[...] ಹಾಗು ಅವರ ಮೂಲಕವಾಗಿ ರಾಮನು ರಾವ[ಣನಿಗೆ] ಒಂದು ಸಂದೇಶವನ್ನೂ ಹೇಳಿದನು. ಅದೇನೆ[...] "ರಾವಣಾ, ನಾಳೆ ಬೆಳಗಾದ ಕೂಡಲೇ [...] ಕೋಪವು ನಿನ್ನ ಮೇಲೆ ವಜ್ರಾಯುಧದ [...] ಬೀಳುತ್ತದೆಂದು ತಿಳಿ!"

ಶುಕಸಾರಣರು ರಾಮನಿಗೆ ಜಯವನ್ನು ಹೇಳಿ, ರಾವಣನಬಳಿಗೆ ಹೋಗಿ, "ರಾಕ್ಷಸೇಶ್ವರಾ! ನಾವು ವಾನರ ವೇಷದಿಂದ ವಾನರ ಸೇನೆಯೊಳಗೆ ಪ್ರವೇಶಿಸಿದರೂ, ವಿಭೀಷಣನು ಗುರುತಿಸಿ ನಮ್ಮನ್ನು ಹಿಡಿದು ರಾಮನಿಗೆ ಒಪ್ಪಿಸಿದನು. ರಾಮನು ನಮ್ಮ ಮೇಲೆ ದಯೆ ತೋರಿಸಿ ಸುಮ್ಮನೆ ಹೋಗಲುಬಿಟ್ಟ. ನಿನ್ನ ಹೊರತು ಬೇರೆ ಯಾರ ಮೇಲೂ ಅವನಿಗೆ ಕೋಪವಿಲ್ಲ. ಬಲು ದೊಡ್ಡ ಆ ವಾನರರ ಸೇನೆಗೆ ರಾಮಲಕ್ಷ್ಮಣ ಸುಗ್ರೀವ ವಿಭೀಷಣರೇ ಮುಖ್ಯ ಚಾಲಕರಾಗಿದ್ದಾರೆ. ಎಲ್ಲರೂ ರಾಮನ ಆಜ್ಞಾಧೀನರು. ಯಾವ ಕೊರತೆಯೂ ಅವರಾರಲ್ಲಿಯೂ ಕಾಣುವುದಿಲ್ಲ. ರಾಮನ ಬಾಣ ಸಂಪತ್ತನ್ನು ನೋಡಿದರೆ ಅವನಿಗೆ ಯಾರ ಸಹಾಯವೂ ಬೇಡವೆಂದೇ ಅನಿಸುತ್ತದೆ. ಸಮುದ್ರಕ್ಕೆ ಸೇತುವೆ ಕಟ್ಟಿದುದೂ, ಅದರ ಮೇಲಿಂದಲೇ ಅಷ್ಟೊ ಸೇನೆ ದಾಟಿ ಬಂದುದೂ ಆ ಸೇನೆಗಿರುವ ಮೇರೆಯಂತೂ ಕಾಣುವುದೇ ಇಲ್ಲ. ವಾನರರೆಲ್ಲ ಒಳ್ಳೆಯ ಯುದ್ಧೋತ್ಸಾಹದಲ್ಲಿದ್ದಾರೆ. ನೀನು ಯುದ್ಧಕ್ಕೆ ತಲೆಹಾಕದೆ ಸೀತೆಯನ್ನು ರಾಮನಿಗೆ ಕೊಡುವುದೇ ಒಳ್ಳೆಯದು" ಎಂದರು.

"ಎಲ್ಲಾದರೂ ಉಂಟೆ? ಸೀತೆಯನ್ನು ಎಂದಿಗೂ ಕೊಡಲಾರೆ. ನೀವಿಬ್ಬರೂ ಬುದ್ಧಿವಂತರಾದರೂ ಶೂರತನವಿಲ್ಲದ ಸೌಮ್ಯರು. ವಾನರರ ಚೇಷ್ಟೆಗಳಿಗೆ ಹೆದರಿದಿರಿ. ನಾನು ಯುದ್ಧಕ್ಕೆ ನಿಂತರೆ ಎಲ್ಲರೂ ನೆಲ ಸಮವಾಗಿಬಿಡುತ್ತಾರೆ." ಎಂದನು ರಾವಣ.

ರಾವಣನಿಗೆ ವಾನರರ ಸೇನೆಯನ್ನು ನೋಡಬೇಕೆಂದು ತೋರಿತು. ಅವನು ತನ್ನ ಅರಮನೆಯ ಉಪ್ಪರಿಗೆಯ ಮೇಲಿನ ಭಾಗಕ್ಕೆ ಹೋಗಿ ಲಂಕಾ ನಗರದ ಸುತ್ತಲೂ ಇರುವ ಪರ್ವತಗಳೂ ಅರಣ್ಯಗಳೂ, ಸುತ್ತಮುತ್ತಣ ಪ್ರದೇಶಗಳೂ ವಾನರಮಯವಾಗಿರುವುದನ್ನು ಗಮನಿಸಿದನು. ಅವನು ತನ್ನ ಸಮೀಪದಲ್ಲಿರುವ ಸಾರಣನೊಂದಿಗೆ, "ಈ ಸೇನೆಯಲ್ಲಿ ಬಲಿಷ್ಠನಾಗಿ, ಶೂರನಾಗಿ, ಯುದ್ಧದಲ್ಲಿ ಪ್ರಮುಖವಾಗಿ ಭಾಗವಹಿಸುವವರು ಯಾರು? ಮುಖ್ಯ ಸೇನಾ ನಾಯಕ ಎಲ್ಲಿದ್ದಾನೆ? ಯಾರು?






ಸುಗ್ರೀವನಿಗೆ ಆಲೋಚನೆ ಹೇಳುವವನು ಯಾರು ?" ಎಂದು ಕೇಳಿದನು. ಅದಕ್ಕೆ ಸಾರಣನು ಹೀಗೆಂದನು :

"ನೀಲನೆಂಬ ಮಹಾವೀರನು ವಾನರಸೇನೆಗೆ ನಾಯಕನು. ಅಂಗದನು ವಾನರರಾಜ್ಯಕ್ಕೆ ಯುವ ರಾಜನಾಗಿರುವನು. ವಾಲಿಯ ಮಗನಾದ ಅಂಗದನು ವಾಲಿಗೆ ಸರಿಸಮನಾದ ವೀರಧೀರಪ್ರತಾಪಗಳುಳ್ಳವನು. ಹನುಮಂತನು ನಮಗೆಲ್ಲ ಈ ಮೊದಲು ಗೊತ್ತಿದ್ದವನೇ. ನಳನೆಂಬ ವಾನರನೇ ಸೇತುವೆ ಕಟ್ಟಿದನು. ಅವನು ಯುದ್ಧದಲ್ಲಿ ಕೂಡ ಮಹಾಪರಾಕ್ರಮಶಾಲಿ. ಅವನೊಂದಿಗಿರುವ ವಾನರಸೇನೆ ಕೂಡ ಅಜೇಯವಾದುದು. ಅಲ್ಲಿ ಬೆಳ್ಳಗಾಗಿ ಕಾಣುವ ವಾನರನು ಶ್ವೇತನೆಂಬವನು. ಅವನು ಯುದ್ಧದಲ್ಲಿ ಮಹಾ ಭಯಂಕರನಾಗಿರುತ್ತಾನೆ. ಬಾಲದಲ್ಲಿ ಕೆಂಪು ಹಳದಿ ಕೂದಲುಗಳಿಂದ ಕಾಣುವ ವಾನರನು ಕುಮುದನೆಂಬವನು. ಇವನಿಗೆ ಯುದ್ಧದಲ್ಲಿ ದಯಾದಾಕ್ಷಿಣ್ಯಗಳಿಲ್ಲ. ಯಾವಾಗ ಯುದ್ಧ ಬರಲಿದೆ ಎಂದು ತುಡಿಸುತ್ತಿದ್ದಾನೆ......" ಈ ವಿಧವಾಗಿ ಹೇಳು ಸಾರಣನು ರಾವಣನಿಗೆ, ರಂಭ, ಶರಭ, ಪನ ವಿನತ, ಕ್ರೋಧನ, ಗವಯ ಎಂಬ ವಾನರವೀರರ ಕುರಿತೂ, ಇನ್ನೂ ಕೆಲವು ವಾನರ ಸೇನಾಪತಿಗಳ ಕುರಿತೂ ವಿವರಿಸಿ ಹೇಳಿದನು. ಹಾಗೆಯೇ ಭಲ್ಲ ಪ್ರಮುಖರನ್ನು ಕುರಿತೂ ಹೇಳಿದನು. ಭಲ್ಲೂಕ ವ ರಲ್ಲಿ ಮಹಾವೀರನಾಗಿ ಅನುಭವಶಾಲಿಯಾಗಿರು ವನು ಜಾಂಬವಂತನೇ.

ಸಾರಣನು ಹೇಳಿ ಮುಗಿಸಿದ ಮೇಲೆ ಅವ ಹೇಳದೇ ಬಿಟ್ಟ ವಿವರಗಳನ್ನು ಶುಕನು ರಾವಣನಿಗೆ ಹೇ ದನು. ಹನುಮಂತನ ಸಮೀಪದಲ್ಲಿರುವ ತೇ ಗಳಾದ ಮಾನವ ಶ್ರೇಷ್ಠರೇ ರಾಮ ಲಕ್ಷ್ಮಣರೆಂ ತೋರಿಸಿದನು. ರಾಮನ ಸಮೀಪದಲ್ಲಿರುವ ವಿಭೀ ನನ್ನು ಕೂಡಾ ರಾವಣನು ನೋಡಿದನು. ರಾವಣನಲ್ಲಿ ಒಂದು ಕ್ಷಣ ಭಯವೆನಿಸಿ, ದ ಕ್ಷಣವೇ ಅದು ಕೋಪವಾಗಿ ಮಾರ್ಪಟ್ಟಿತು. ಮೇಲೆ ಶುಕ ಸಾರಣರು ಶತ್ರುಗಳ ಶೌರ್ಯ ಕ್ರಮಗಳನ್ನು ಅತಿಶಯವಾಗಿ ಹೇಳಿದುದನ್ನು ಅವನು ಅವರನ್ನು ಮೂದಲಿಸುತ್ತ, "ನಿಮ್ಮ ರನ್ನು ಮಂತ್ರಿಗಳನ್ನಾಗಿ ಇಟ್ಟುಕೊಂಡಿರುವ ಎಂದೋ ಸಾಯಬೇಕಿತ್ತು. ನೀವು ಈ ಮೊ ನನಗೆ ಮಾಡಿದ ಒಳಿತುಗಳನ್ನು ನೆನೆದು ನಿಮ್ಮ ಕೊಲ್ಲದೆ ಸುಮ್ಮನಿದ್ದೇನೆ. ಹೋಗಿರಾಚೆ" ಎಂ ರಾವಣನಿಗೆ ಜಯವಾಗಲೆಂದು ಹೇಳಿ ಅವರಿಬ್ ತಮ್ಮ ಮನೆಗೆ ಹೊರಟು ಹೋದರು.

ಆಮೇಲೆ ರಾವಣನು ಮಹೋದರನೊ ಲಂಕೆಗೆ ಬಂದಿರುವ ವಾನರಸೇನೆಯ ಸಂಗತಿ ಹೇಳಿ ಕೆಲವು ಮಂದಿ ಗೂಢಚಾರರನ್ನು ಕರೆದು, " ಹೋಗಿ ರಾಮನನ್ನು ಕುರಿತು ಎಲ್ಲಾ ಸಂಗತಿ ಕೊಂಡು ಬನ್ನಿ" ಎಂದು ಹೇಳಿ ಕಳುಹಿಸಿದನು ಚಾರರು ವೇಷ ಬದಲಾವಣೆ ಮಾಡಿ



ಸುವೇಲ ಪರ್ವತದ ಹತ್ತಿರವಿದ್ದ ರಾಮಲಕ್ಷ್ಮಣ
ಸುಗ್ರೀವ ವಿಭೀಷಣರಿದ್ದ ಸ್ಥಳಕ್ಕೆ ಪ್ರವೇಶ ಮಾಡಿ
ದರು. ರಾಮಲಕ್ಷ್ಮಣರನ್ನೂ ಅಪಾರವಾದ ವಾನರ
ಸೇನೆಯನ್ನೂ ನೋಡಿ ಅವರಿಗೆ ಭಯವಾಯಿತು.
ಅದರೊಂದಿಗೆ ವಿಭೀಷಣನು ಅವರನ್ನು ಗುರುತಿಸಿ
ಹಿಡಿದುಕೊಂಡನು. ಆ ಚಾರರಲ್ಲಿ ಶಾರ್ದೂಲನೆಂಬು
ವನು ಬಹಳ ದುಷ್ಟ. ಆದುದರಿಂದ ವಿಭೀಷಣನು
ಅವನನ್ನು ಮಾತ್ರ ತುಸು ಹಣ್ಣು ಮಾಡುವಂತೆ
ವಾನರರಿಗೆ ಒಪ್ಪಿಸಿದನು. ವಾನರರು ಅವನನ್ನು
ನಾನಾವಿಧವಾಗಿ ಹಿಂಸಿಸಲು, ಅವನ ಕೂಗನ್ನು ಕೇಳಿ
ರಾಮನು ಅಡ್ಡ ಬಂದು ವಾನರರನ್ನು ತಡೆದನು.
ಆಮೇಲೆ ರಾಮನು ಶಾರ್ದೂಲನನ್ನು, ಉಳಿದ
ಗೂಢಚಾರರನ್ನೂ ಬಿಡುಗಡೆ ಮಾಡಿಸಿ ಹೋಗಲು
ಬಿಟ್ಟನು. ಸ್ವಲ್ಪ ಮಾತ್ರ ಗಾಯಗಳಿಂದ ಅವರೆಲ್ಲ
ಹಿಂದಿರುಗಿ ಲಂಕೆಗೆ ಹೋದರು.

ಶಾರ್ದೂಲನನ್ನು ನೋಡಿದ ಕೂಡಲೇ ಅಲ್ಲಿ
ನಡೆದುದೇನೆಂದು ರಾವಣನಿಗೆ ಗೊತ್ತಾಯಿತು.
ಅವನು ರಾವಣನೊಂದಿಗೆ. "ವಾನರರನ್ನು ಕುರಿತು
ತಿಳಿದುಕೊಳ್ಳುವುದು ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ.
ನಾನು ವಿಭೀಷಣನಿಂದಾಗಿ ಸಿಕ್ಕಿಬಿದ್ದುಬಿಟ್ಟೆ. ರಾಮನೇ
ನನ್ನನ್ನು ವಾನರರ ಹಿಂಸೆಯಿಂದ ಜೀವಂತ ಉಳಿಸಿ
ಕಳುಹಿಸಿದನು. ನನ್ನ ಅದೃಷ್ಟದಿಂದ ಪಕ್ಕದಲ್ಲೇ
ರಾಮನಿದ್ದುದರಿಂದ ಬದುಕಿ ಬಂದೆ. ಹೆಚ್ಚೇನೂ ಹೇ
ಬೇಕಾಗಿಲ್ಲ. ರಾಮನು ಲಂಕೆಯೊಳಗೆ ಪ್ರವೇಶಿಸಲ
ಸಿದ್ಧನಾಗಿದ್ದಾನೆ. ಸೀತೆಯನ್ನು ರಾಮನಿಗೆ ಕೊಟ್ಟು
ಏನಾದರೂ ಸಂಧಿಮಾಡಿಕೊಳ್ಳುವುದೋ ಯುದ್ಧ
ತಯಾರಾಗುವುದೋ ಏನೋ ಒಂದು ನಿರ್ಧರಿ
ವುದು ಒಳ್ಳೆಯದು" ಎಂದನು.

ರಾವಣನು ಸೀತೆಯನ್ನು ಹಿಂದಿರುಗಿಸು
ಪ್ರಮೇಯವಿಲ್ಲವೆಂದು ಖಂಡಿತವಾಗಿ ಹೇಳಿ, ವಾ
ಪ್ರಮುಖರನ್ನು ಕುರಿತು, ಶಾರ್ದೂಲನಿಂದ
ಕೆಲವು ವಿವರಗಳನ್ನು ತಿಳಿದುಕೊಂಡನು.

ಅನಂತರ ರಾವಣನು ಒಂದು ನಿರ್ಧಾರಕ್ಕೆ ಬಂ
ವಿದ್ಯುಜ್ಜಿಹ್ವನೆಂಬ ರಾಕ್ಷಸನನ್ನು ಕರೆದುಕೊ
ಸೀತೆಯಬಳಿಗೆ ಹೊರಟನು. ವಿದ್ಯುಜ್ಜಿಹ್ವ
ಮಾಯಾವಿದ್ಯೆಯಲ್ಲಿ ಪಾರ ಕಂಡವನು. ರಾವ
ಅವನೊಂದಿಗೆ. "ನೀನು ನಿನ್ನ ಮಾಯೆಯ
ತುಂಡಿಸಲ್ಪಟ್ಟ ರಾಮನ ತಲೆಯನ್ನು ಕಲ್ಪಿಸು.
ರೊಂದಿಗೆ ರಾಮನ ಧನುಸ್ಸಿನಂತಹ ಧನುಸ್ಸೂ, ಬ
ಗಳೂ ಇರಲಿ. ಅವುಗಳಿಂದ ನಾವು ಸೀತೆಯ
ಮೋಸ ಪಡಿಸೋಣ." ಎನ್ನುತ್ತಾ, ತನ್ನ ಅಭ
ಒಂದನ್ನು ತೆಗೆದು ಅವನಿಗೆ ಬಹುಮಾ
ಕೊಟ್ಟನು. ಸೀತೆ ಸತ್ತರೆ ರಾಮನೂ ಸಾಯುವ
ರಾವಣನ ಅಭಿಪ್ರಾಯ.





August 1976


ವೀರಹನುಮಾನ್

ರಾವಣನು ಸೀತೆಯನ್ನು ನೋಡಲಿಕ್ಕಾಗಿ ಅಶೋಕ ವನದ ಕಡೆಗೆ ಹೊರಟಾಗ, ಸೀತೆ ಅಶೋಕವನದಲ್ಲಿ ಶೋಕವೇ ಮೂರ್ತಿವಂತಳಾದವಳಂತೆ ಕುಳಿತಿದ್ದಳು. ಅವಳ ಸುತ್ತಲೂ ಕಣ್ಣು ತೆರೆದು ಕಾಯುತ್ತ ಭಯಂಕರಾಕಾರದ ರಾಕ್ಷಸಿಯರು ಕುಳಿತಿದ್ದರು. ಒಬ್ಬೊಬ್ಬಳೂ ಒಂದೊಂದು ಬಗೆಯ ವಿಕಾರ ರಾಕ್ಷಸಿ.

ರಾವಣನು ಅಪರೂಪವಾದೊಂದು ಶುಭವಾರ್ತೆಯನ್ನು ತರುವವನಂತೆ, ಬಹಳ ಉತ್ಸಾಹವನ್ನಭಿನಯಿಸುತ್ತ ಸೀತೆಯೊಂದಿಗೆ, "ನೋಡಿದೆಯಾ ಸೀತೇ, ಮುಗಿದುಹೋಯಿತು, ನಿನ್ನ ರಾಮನ ಕಥೆ ಮುಗಿದುಹೋಯಿತು. ಯುದ್ಧದಲ್ಲಿ ಸತ್ತುಹೋದ. ಇನ್ನು ನೀನು ನನ್ನ ಹೆಂಡತಿಯಾಗಲು ಯಾವ ಅಡ್ಡಿಯೂ ಇಲ್ಲ. ನನ್ನ ಎಲ್ಲಾ ಹೆಂಡತಿಯರಿಗೂ ನಿನ್ನನ್ನು ಪಟ್ಟರಾಣಿಯನ್ನಾಗಿ ಮಾಡುತ್ತೇನೆ. ನೀನೇ ನನ್ನ ಪಟ್ಟದ ರಾಣಿ. ರಾಮನು ಹೇಗೆ ಸತ್ತನೆಂದು ಹೇಳುತ್ತೇನೆ ಕೇಳು. ರಾಮನೇನೋ ಪಾಪ ಬಹಳ ಕಷ್ಟಪಟ್ಟು ವಾನರ ಸೇನೆಯೊಂದಿಗೆ ಸಮುದ್ರವನ್ನು ದಾಟಿ ಬಂದು ಶಿಬಿರ ಹಾಕಿದ. ಪ್ರಯಾಣದ ಆಯಾಸದಿಂದ ಎಲ್ಲರೂ ಗಾಢ ನಿದ್ರೆಯಲ್ಲಿದ್ದರು. ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾದುಕೊಂಡಿದ್ದ ರಾಕ್ಷಸ ಸೇನೆಯೊಂದಿಗೆ ನಮ್ಮ ಪ್ರಹಸ್ತನು ಒಮ್ಮೆಗೇ ಅವರ ಮೇಲೆ ಬಿದ್ದು ವಾನರ ಸೇನೆಯನ್ನೆಲ್ಲಾ ಕೊಂದು ಹಾಕಿದನು. ರಾಮನು ನಿದ್ರೆಯಲ್ಲಿರುವಾಗ ಪ್ರಹಸ್ತನೇ ಅವನ ತಲೆಯನ್ನು ಕತ್ತರಿಸಿದನು. ತಪ್ಪಿಸಿಕೊಂಡು ಓಡಿಹೋಗಲು ಆಕಾಶಕ್ಕೆ ಹಾರಿದ ವಿಭೀಷಣನನ್ನು ರಾಕ್ಷಸರು ಹಿಡಿದುಕೊಂಡರು. ಲಕ್ಷ್ಮಣನೂ, ಕೆಲವು ವಾನರರೂ ಓಡಿ ಹೋದರು. ಸುಗ್ರೀವ, ಹನುಮಂತ, ಜಾಂಬವಂತ ಮೊದಲಾದ ದೊಡ್ಡ ದೊಡ್ಡ ವಾನರರೆಲ್ಲ ತಲೆಯೊಂದು ಕಡೆಯಲ್ಲಿ ಮುಂಡವೊಂದು ಕಡೆಯಲ್ಲಿ ಬಿದ್ದಿದ್ದಾರೆ. ಎಲ್ಲಿ ನೋಡಿದರೂ ಕುಪ್ಪೆ ಕುಪ್ಪೆಯಾಗಿ ವಾನರರ ಶವಗಳೇ ಬಿದ್ದಿವೆ. ಒಬ್ಬ ವಾನರನೂ ಬದುಕಿಲ್ಲ. ಕಣ್ಣು ಮುಚ್ಚಿ ಬಿಡಿಸುವುದರೊಳಗೆ ಯುದ್ಧ ಮುಗಿಯಿತು." ಎಂದನು. ಹೀಗೆ ಹೇಳಿ ಅವನು ಒಬ್ಬಳು ರಾಕ್ಷಸಿಯನ್ನು

೨೨. ಲಂಕಾನಗರದ ಮುತ್ತಿಗೆ

22-1



ನೋಡಿ, ಸೀತೆಯ ಕಿವಿಗೆ ಬೀಳುವ ಹಾಗೆ "ಎಲಗೇ, ರಾಮನ ತಲೆಯನ್ನು ತೆಗೆದುಕೊಂಡು ಬಂದ ವಿದ್ಯುಜ್ಜಿಹ್ವನನ್ನು ಕರೆದುಕೊಂಡು ಬಾ !" ಎಂದನು.

ಅವಳು ಓಡಿಹೋಗಿ ವಿದ್ಯುಜ್ಜಿಹ್ವನನ್ನು ಕರೆದುಕೊಂಡು ಬಂದಳು. ವಿದ್ಯುಜ್ಜಿಹ್ವನು ರಾಮನ ತಲೆಯನ್ನೂ ಬಿಲ್ಲನ್ನೂ ತಂದು ರಾವಣನಿಗೆ ನಮಸ್ಕರಿಸಿ ನಿಂತನು. ರಾವಣನು ಅವನನ್ನು ಕುರಿತು, "ರಾಮನ ತಲೆಯನ್ನು ಸೀತೆಯ ಮುಂದೆ ಇಡು. ಈ ನಿರ್ಭಾಗ್ಯಳು ತನ್ನ ಗಂಡನ ಕೊನೆ ಹೇಗಾಯಿತೆಂದು ನೋಡಲಿ" ಎಂದನು.

ವಿದ್ಯುಜ್ಜಿಹ್ವನು ರಾಮನ ತಲೆಯನ್ನು ಸೀತೆಯ ಮುಂದಿಟ್ಟು ಬದಿಗೆ ಸರಿದನು. ಅವನ ಕೈಯಲ್ಲಿದ್ದ ಬಿಲ್ಲನ್ನು ರಾವಣನು ತೆಗೆದುಕೊಂಡು ಸೀತೆಯೊಂದಿಗೆ, "ಪ್ರಹಸ್ತನು ನಿದ್ದೆಯಲ್ಲಿದ್ದ ರಾಮನ ತಲೆಯನ್ನು ಕತ್ತರಿಸಿದ ಮೇಲೆ ಈ ಬಿಲ್ಲನ್ನೂ ಇಲ್ಲಿಗೆ ತೆಗೆದುಕೊಂಡು ಬಂದ. ಇನ್ನು ಮೇಲೆ ದುಃಖಿಸಿ ಫಲವಿಲ್ಲವಷ್ಟೆ ? ನಿನಗೆ ನನ್ನ ಹೊರತು ಬೇರೆ ಗತಿಯಿಲ್ಲ." ಎಂದನು.

ಸೀತೆ ರಾಮನ ತಲೆಯನ್ನು ಪರೀಕ್ಷಿಸಿ ನೋಡಿ, ಆ ಕಣ್ಣುಗಳನ್ನೂ, ತಲೆಗೂದಲನ್ನೂ, ತಲೆ ಮುಡಿಯಲ್ಲಿದ್ದ ಚೂಡಾಮಣಿಯನ್ನೂ ಗುರುತಿಸಿ ಗಟ್ಟಿಯಾಗಿ ಅಳ ತೊಡಗಿದಳು. ಅವಳ ಕಣ್ಣುಗಳಿಂದ ಧಾರೆ ಧಾರೆಯಾಗಿ ನೀರಿಳಿಯ ತೊಡಗಿತು. ಕೈಕೇಯಿಯನ್ನು ಬೈಯುತ್ತಾ ಮೂರ್ಛೆ ಹೋಗಿ ಬಿದ್ದಳು. ಸ್ವಲ್ಪಹೊತ್ತಿಗೆ ಮೂರ್ಛೆ ತಿಳಿದು ಎಚ್ಚೆತ್ತು ರಾಮನ ತಲೆಯನ್ನು ಎತ್ತಿಕೊಂಡು ಮಡಿಲಲ್ಲಿಟ್ಟುಕೊಂಡು ಅವನ ಗುಣಗಳನ್ನು ಹೇಳಿಕೊಳ್ಳುತ್ತ ಬಹಳ ಹೊತ್ತು ಅತ್ತಳು. ರಾವಣನ ಮರಣವನ್ನು ಕುರಿತು ಲಕ್ಷ್ಮಣ... ಹೋಗಿ ಕೌಸಲ್ಯೆಗೆ ಹೇಳುತ್ತಾನೆ. ಅವಳು ಕೂಡಲೆ ಎದೆಯೊಡೆದು ಸಾಯುತ್ತಾಳೆ. ಅದನ್ನನುಸರಿ... ರಾಮನ ವಂಶವೆಲ್ಲವೂ ನಾಶವಾಗಿ ಹೋಗುತ್ತ... ಇಷ್ಟೆಲ್ಲವೂ ದುರ್ಭಾಗ್ಯದವಳಾದ ತನ್ನಿಂದಲೆ ಆಗುತ್ತದೆ. ಇಂಥವಳನ್ನು ತಿಳಿಯದೆ ರಾಮ... ಮದುವೆಯಾದನಲ್ಲಾ ! ತಾನು ಪೂರ್ವಜನ್ಮ... ಎಂತೆಂತಹ ಘೋರ ಪಾಪಗಳನ್ನು ಮಾಡಿದ್ದೇನೋ !

ಹೀಗೆಲ್ಲಾ ಗೋಳಾಡಿ ಅವಳು ರಾವಣ... ಕುರಿತು, "ನನ್ನನ್ನು ತೆಗೆದುಕೊಂಡು ಹೋಗಿ ರಾಮನ ಶರೀರದ ಮೇಲೆ ಹಾಕಿಬಿಡು. ಗಂಡ... ರನ್ನು ಒಂದು ಮಾಡಿದ ಪುಣ್ಯವನ್ನಾದರೂ ಕಟ್ಟಿ... ನಾನು ರಾಮನೊಂದಿಗೆ ಸಹಗಮನ ಮಾಡುತ್ತೇ... ನನ್ನ ಪಾಪಗಳೂ ಒಟ್ಟಿಗೇ ಸುಟ್ಟು ಬೂದಿ... ಹೋಗಲಿ !" ಎಂದು ಹೇಳಿ ಅತ್ತಳು.

ಸೀತೆ ಹೀಗೆ ಅಳುತ್ತಿರುವಾಗ ಒಬ್ಬ ರಾಕ್ಷಸ... ಬಂದು, ರಾವಣನಿಗೆ ನಮಸ್ಕಾರ ಮಾಡಿ, ಸೇ... ಪ್ರಹಸ್ತನು ಬಂದಿರುವನೆಂದು ಬಿನ್ನವಿಸಿದನು... ನೊಂದಿಗೆ ಮಂತ್ರಿಗಳೂ ಇರುವರಂತೆ. ... ರಾವಣನಿಗಾಗಿ ಕಾದಿದ್ದಾರೆಂಬ ಸಮಾಚಾರ ... ಕೂಡಲೇ ರಾವಣನು ಅಲ್ಲಿಂದ ಹೊರಟು...



ಬೇಗನೆ ಹೋಗಿಬಿಟ್ಟನು. ಅವನು ಅಶೋಕವನವನ್ನು ದಾಟಿದ ಕೂಡಲೇ ರಾಮನ ತಲೆಯೂ ಬಿಲ್ಲೂ ಮಾಯವಾಗಿ ಹೋದುವು.

ಅಷ್ಟರಲ್ಲಿ ವಿಭೀಷಣನ ಹೆಂಡತಿಯಾದ ಸರಮೆ ಸೀತೆಯ ಬಳಿಗೆ ಬಂದಳು. ತುಂಬ ಒಳ್ಳೆಯವಳಾದ ಸರಮೆ ಸೀತೆಯೊಡನೆ ತುಂಬ ಸ್ನೇಹದಿಂದಿದ್ದಳು. ಅವಳು ದುಃಖದಲ್ಲಿರುವ ಸೀತೆಗೆ ಸಮಾಧಾನ ಮಾಡುತ್ತ, "ನಾನು ಈ ರಾವಣನ ಭಯವನ್ನು ಕೂಡ ಲಕ್ಷ್ಯಮಾಡದೆ ಇಲ್ಲೇ ಮರೆಯಾಗಿದ್ದು ನಿನಗೂ ರಾವಣನಿಗೂ ನಡೆದ ಸಂಭಾಷಣೆಯನ್ನೆಲ್ಲಾ ಕೇಳಿದೆ. ರಾವಣನು ಅಷ್ಟು ಅವಸರದಿಂದ ಎಲ್ಲಿಗೆ ಹೋದ ನೆಂದು ಗೊತ್ತೆ? ಅಕೋ, ಭೇರಿಗಳು ಮೊಳಗುತ್ತಿವೆ ಕೇಳುತ್ತಿದೆಯಷ್ಟೆ? ಅದು ಸೈನಿಕರು ಯುದ್ಧಕ್ಕೆ ಸಿದ್ಧ ರಾಗುತ್ತಿರುವ, ಅವಸರದ ಸೂಚನೆ. ರಾಕ್ಷಸರು ಆನೆ ಗಳನ್ನೂ ಕುದುರೆಗಳನ್ನೂ ಅಣಿಗೊಳಿಸುತ್ತಿದ್ದಾರೆ. ರಾವಣನು ರಾಮನೊಂದಿಗೆ ಯುದ್ಧಕ್ಕೆ ತಯಾರಾಗು ತ್ತಾನೆ. ಇನ್ನು ಬೇಗದಲ್ಲೇ ರಾಮಲಕ್ಷ್ಮಣರು ಎಲ್ಲಾ ರಾಕ್ಷಸರನ್ನೂ ಕೊಂದು ಹಾಕಿ ನಿನ್ನ ಕಷ್ಟಗಳನ್ನು ಬಿಡಿಸಿ ಬಿಡುತ್ತಾರೆ. ಹೆದರಬೇಡ. ಧೈರ್ಯದಿಂದ ಶುಭವನ್ನು ನಿರೀಕ್ಷಿಸಿಕೊಂಡಿರು." ಎಂದಳು.

ಈ ಮಾತುಗಳನ್ನು ಕೇಳಿ ಸೀತೆಗೆ ಸ್ವಲ್ಪ ಮಟ್ಟಿಗೆ ಸಮಾಧಾನವೆನಿಸುತ್ತಿರಲು, ಸರಮೆ ಸೀತೆಯೊಂದಿಗೆ [illegible] ಹೀಗೆಂದಳು:

"ನಾನು ಆಕಾಶ ಮಾರ್ಗದಲ್ಲಿ ರಾಮನಬಳಿಗೆ ಹೋಗಿ ನೀನು ಕ್ಷೇಮವಾಗಿರುವ ಒಳ್ಳೆಯ ಸಮಾಚಾರವನ್ನು ಹೇಳಿ ಬರಬೇಕೆಂದಿದ್ದೇನೆ. ನಾನು ಆಕಾಶ ಮಾರ್ಗದಲ್ಲಿ ಗರುತ್ಮಂತನಿಗಿಂತಲೂ ವೇಗವಾಗಿ ಹೋಗಬಲ್ಲೆನು ಗೊತ್ತೇ?"

"ನೀನು ಆಕಾಶದಲ್ಲಿ ಹಾರಿ ಹೋಗುವುದನ್ನೂ, ಪಾತಾಳಕ್ಕೆ ಇಳಿದು ಹೋಗುವುದನ್ನೂ ನಾನು ಬಲ್ಲೆನೆ. ನೀನು ಈಗ ನನ್ನ ಕೋರಿಕೆಯನ್ನು ತೀರಿಸುವವಳಾಗಿದ್ದರೆ ರಾವಣನು ಏನು ಮಾಡುತ್ತಿದ್ದಾನೆಂಬುದನ್ನು ತಿಳಿದು ಬಂದು ಹೇಳು. ನನಗೆ ಈಗ ಎಲ್ಲದಕ್ಕಿಂತಲೂ ರಾವಣನ ಭಯವೇ ಹೆಚ್ಚಾಗಿದೆ. ರಾವಣನು ಇನ್ನೆಂತಹ ಮಾಯ ಮಾಡುತ್ತಾನೆಂದು ತಿಳಿಸಿದರೆ ನಾನು ನಿನಗೆ ಕೃತಜ್ಞಳಾಗಿರುತ್ತೇನೆ. ಈ ರಾವಣನ ಮಾಯದ ಭಯವೇ ಪ್ರತಿ ಕ್ಷಣವೂ ನನ್ನನ್ನು ಕಾಡುತ್ತಿದೆ." ಎಂದು ಸೀತೆ ಸರಮೆ ಯೊಂದಿಗೆ ಹೇಳಿದಳು.

ಸರಮೆ ಸೀತೆಯ ಮುಖದಲ್ಲಿರುವ ಕಣ್ಣೀರನ್ನು ಒರೆಸಿ, ಆ ಕೂಡಲೇ ಸೀತೆಯ ಕೋರಿಕೆಯನ್ನು ಈಡೇರಿಸಲು ಹೊರಟುಹೋದಳು. ರಾವಣನು ತನ್ನ ಮಂತ್ರಿಗಳೊಂದಿಗೆ ಮಾತಾಡುವುದನ್ನೆಲ್ಲಾ ಅವಳು ಹೊಂಚಿ ಕೇಳಿ, ತಿರುಗಿ ಬಂದು ಸೀತೆ ಯೊಂದಿಗೆ ಹೀಗೆಂದಳು:

"ರಾವಣನು ತನ್ನ ಆಪ್ತರೊಂದಿಗೆ ಮಂತ್ರಾಲೋಚನೆ ಮಾಡುತ್ತಿದ್ದಾನೆ. ನಿನ್ನನ್ನು ರಾಮನಿಗೆ



ಒಪ್ಪಿಸಿಬಿಡಬೇಕೆಂದು ಅವನ ತಾಯಿಯೂ, ಅವಿದ್ಧ ನೆಂಬ ಮುದುಕ ಮಂತ್ರಿಯೂ ಬಹಳವಾಗಿ ಹೇಳಿ ನೋಡಿದರು, ಹಾಗೆ ಮಾಡದಿದ್ದರೆ ಬರುವ ಅಪಾಯ ಗಳನ್ನು ಕುರಿತೂ ಎಚ್ಚರಿಕೆ ಕೊಟ್ಟರು. ಆದರೆ ಯಾರೆಷ್ಟು ಹೇಳಿದರೂ ರಾವಣನ ಕಿವಿಗೇರಲಿಲ್ಲ. ಯುದ್ಧದಲ್ಲಿ ಸಾಯುವವರೆಗೂ ರಾವಣನು ನಿನ್ನನ್ನು ಬಿಟ್ಟು ಕೊಡಲಾರ. ಅವನ ಪಲ್ಲವಿಗೆ ತಕ್ಕ ಹಾಗೆ ತಾಳ ಹಾಕುವ ಮಂತ್ರಿಗಳೂ ಅವನನ್ನು ಬಲಪಡಿಸು ತ್ತಿದ್ದಾರೆ. ಅಂತೂ ರಾವಣನು ರಾಮನೊಂದಿಗೆ ಯುದ್ಧ ಮಾಡುವುದರಲ್ಲೇ ಇದ್ದಾನೆ. ಸಾವು ನಿಶ್ಚಯ ವಾದವನನ್ನು ಬದುಕಿಸಲು ಸಾಧ್ಯವೇ ? "

ಸರಮೆ ಮಾತಾಡುತ್ತಿರುವಾಗಲೇ ವಾನರ ಸೈನ್ಯ ಗಳ ಕಡೆಯಿಂದ ಹೊರಡುವ ಭೇರಿಗಳ ಧ್ವನಿಗಳೂ, ಶಂಖನಾದಗಳೂ, ಸಿಂಹನಾದಗಳೂ ಭೂಮಿ ನಡುಗು ವಂತೆ ಕೇಳ ತೊಡಗಿದುವು. ರಾಮನು ಲಂಕಾನಗರದ ಮೇಲೆ ಯುದ್ಧಕ್ಕೆ ಹೊರಟನು.

ಹಾಗೆ ವಾನರ ಸೇನೆಗಳಿಂದ ಹೊರಡುವ ಕೋಲಾ ಹಲ ಧ್ವನಿಗಳನ್ನು ಕೇಳಿ, ರಾವಣನು ಸಭೆಯಲ್ಲಿರುವ ತನ್ನ ಮಂತ್ರಿಗಳನ್ನು ನೋಡಿ, " ಈ ಮೊದಲು ನೀವು ಹನುಮಂತನು ಸಮುದ್ರವನ್ನು ದಾಟಿದುದನ್ನು ಕುರಿತೂ ರಾಮನ ಸೇನೆಯನ್ನು ಕುರಿತೂ ಬಹಳ ದೊಡ್ಡದಾಗಿ ವೀರಪ್ರತಾಪದ ಮಾತುಗಳನ್ನಾಡಿದಿರಿ, ನಾನೂ ಕೇಳಿದೆ. ಈಗ ರಾಮನ ಮತ್ತು ಅವನ ಸೇನೆಯ ಪರಾಕ್ರಮಗಳನ್ನು ನೆನೆದುಕೊಂಡು ವೀರಾಧಿವೀರರಾದ ನೀವುಗಳು ನಿರುತ್ಸಾಹದಿಂದ ಒಬ್ಬರ ಮುಖವನ್ನೊಬ್ಬರು ನೋಡುವುದು ಕೂಡಾ ನನಗೆ ಕಾಣುತ್ತಿದೆ." ಎಂದನು.

ಈ ಮಾತು ಅನೇಕರಿಗೆ ಚಿವುಟಿದಂತಾಯಿತು. ಮಾಲ್ಯವಂತನೆಂಬ ರಾಕ್ಷಸನು ರಾವಣನನ್ನು ಕುರಿತು, "ರಾಕ್ಷಸೇಂದ್ರಾ, ರಾಮನು ನಮಗಿಂತಲೂ ಹೆಚ್ಚ ಬಲಿಷ್ಠನಾಗಿರುವುದರಿಂದ ಅವನೊಂದಿಗೆ ಸಂಧಿಮಾ ಕೊಳ್ಳುವುದು ತಪ್ಪೆನಿಸಲಾರದು. ರಾಮನಿಗೂ ನಮಗೂ ವೈರಕ್ಕೆ ಮೂಲಕಾರಣ ಸೀತೆಯೇ. ಅವ ಳನ್ನು ರಾಮನಿಗೆ ಕೊಟ್ಟುಬಿಟ್ಟರೆ ವೈರವೇ ಅಳಿ ಹೋಗುತ್ತದೆ" ಎಂದನು. ರಾವಣನಿಗೆ ಕೋ ಹಾಗು ಭಲ್ಲೂಕ ಜಾತಿಯ ಮೃಗಗಳಿಂದ ಸಾ ದಂತೆ ವರವೂ ಇಲ್ಲವೆಂಬುದನ್ನೂ ಮಾಲ್ಯವಂ ಜ್ಞಾಪಕ ಪಡಿಸಿದನು. ಈಗ ಯುದ್ಧಕ್ಕೆ ಬಂದಿರು ರೆಲ್ಲ ಅಂಥವರೇ ತಾನೇ ?


ಮಾಲ್ಯವಂತನು ಹೇಳಿದ ಮಾತುಗಳು ರಾವ ಸ್ವಲ್ಪವೂ ರುಚಿಸಲಿಲ್ಲ. ಅವನು ಮಾಲ್ಯವಂ ತೀಕ್ಷ್ಣ ದೃಷ್ಟಿಯಿಂದ ನೋಡಿ, "ಮಾಲ್ಯ ನನಗೆ ಹಿತವಾದುದನ್ನು ಹೇಳುವಂತೆ ನ ಇಂತಹ ಹೇಡಿ ತನದ ಮೋಸದ ಮಾತು ಹೇಳಬಹುದೆ ? ರಾಮನೆಂದರೆ ಯಾರು ? ಯಾಗಿರುವ ಒಬ್ಬ ಸಾಮಾನ್ಯ ಮನುಷ್ಯ, ಯಿಂದ ಕಾಡಿಗೆ ಅಟ್ಟಲ್ಪಟ್ಟವನು. ಕೋ

22-4

ಸಹಾಯವನ್ನು ಯಾಚಿಸಿ ನಿಂತವನು. ಕಾಡು ಕಾಡು ತಿರುಗುವವನು. ಮನೆ ಮಠವಿಲ್ಲದ ಪರದೇಶಿ. ಅಂಥವನು ನನ್ನನ್ನು ಗೆಲ್ಲಬಲ್ಲ ಸಮರ್ಥನೆಂದು ಯಾವ ಧೈರ್ಯದಿಂದ ಹೇಳುವಿ? ನಾನು ಸಮಸ್ತ ರಾಕ್ಷಸರಿಗೂ ಪ್ರಭು. ಸಮಸ್ತ ದೇವತೆಗಳನ್ನೂ ಹೆದರಿಸಿದಂತಹ ಪರಾಕ್ರಮಶಾಲಿ. ನಾನು ರಾಮನಿಗಿಂತ ಕಡಮೆಯವನೆಂದು ಹೇಗೆ ಭಾವಿಸುವಿ? ನಿನ್ನ ಜಾತಿಯಲ್ಲಿಯೇ ಮಹಾವೀರನೊಬ್ಬನಿರುವುದು ನಿನಗೆ ಸಹಿಸದೆಯೋ ಅಥವಾ ಶತ್ರು ಪಕ್ಷಪಾತದಿಂದಲೋ ನೀನು ಹೀಗೆ ಮಾತಾಡಿರುವೆ. ಬೇರೆ ಯಾವ ಕಾರಣವೂ ನನಗೆ ಕಾಣಿಸುವುದಿಲ್ಲ. ನಾನು ಸೀತೆಯನ್ನು ಅರಣ್ಯದಿಂದ ತಂದುದು ಹಿಂದಿರುಗಿ ಕೊಟ್ಟು ಬಿಡಲಿಕ್ಕಲ್ಲ. ರಾಮನೊಂದಿಗೆ ಯುದ್ಧ ಮಾಡಲು ನಾನು ಹೆದರುವೆನೇ? ಒಂದುವೇಳೆ ರಾಮನು ನನಗಿಂತ ಹೆಚ್ಚು ಬಲವಂತನಾದರೆ ನನ್ನ ತಲೆ ಕಡಿಯುವನೇ ಹೊರತು ತಲೆ ಬಗ್ಗಿಸುವುದು ಈ ರಾವಣನ ಜಾಯಮಾನವಲ್ಲಿಲ್ಲ. ಇದನ್ನು ಎಲ್ಲರೂ ನೆನಪಿನಲ್ಲಿಡಿ!" ಎಂದನು.

ರಾವಣನಿಗೆ ಕೋಪ ಬಂದಿರುವುದನ್ನು ತಿಳಿದು ಮಾಲ್ಯವಂತನು ಮೌನವಾಗಿದ್ದುಬಿಟ್ಟನು. ಸ್ವಲ್ಪ ಹೊತ್ತಿನ ಮೇಲೆ ಅವನು, ಜಯವಾಗಲೆಂದು ಹೇಳಿ ತನ್ನ ಮನೆಗೆ ಹೊರಟುಹೋದನು. ರಾವಣನು ತನ್ನ ಮಂತ್ರಿಗಳೊಂದಿಗೆ ರಕ್ಷಣ ಚರ್ಯೆಗಳನ್ನು ಕುರಿತು [illegible]ಗೆ ತೊಡಗಿದನು.


ಲಂಕಾನಗರದ ಪಶ್ಚಿಮ ದ್ವಾರದಲ್ಲಿ ಇಂದ್ರಜಿತ್ತು, ಉತ್ತರ ದ್ವಾರದಲ್ಲಿ ಶುಕಸಾರಣರು, ಮಧ್ಯದಲ್ಲಿ ವಿರೂಪಾಕ್ಷನೂ ರಾಕ್ಷಸ ಸೈನಿಕರೊಂದಿಗೆ ಇರತಕ್ಕುದೆಂದು ನಿರ್ಣಯವಾಯಿತು. ಉಳಿದೆರಡು ದಿಕ್ಕಿನ ದ್ವಾರಗಳಿಗೂ ಹೆಚ್ಚಿನ ಸೈನಿಕರನ್ನು ಕಳುಹಿಸಲಾಯಿತು. ಆಮೇಲೆ ಮಂತ್ರಿಗಳಿಂದ "ಜಯಜಯ" ಎನ್ನಿಸಿಕೊಂಡು ರಾವಣನು ಎದ್ದು ಹೋದನು.



ರಾಮನು ವಾನರ ಪ್ರಮುಖರೊಂದಿಗೆ ಲಂಕಾನಗರವನ್ನು ಸೇರಿದ ಮೇಲೆ, ತನ್ನೊಂದಿಗೆ ಬಂದ ಎಲ್ಲಾ ವಾನರ ಸೇನೆಯನ್ನೂ ನೋಡಿದನು. ಎಲ್ಲರೂ ಪರಸ್ಪರ, "ಲಂಕಾನಗರವೆಂದರೆ ಇದೇ, ಇದೇ. ಇದನ್ನು ದೇವತೆಗಳಿಂದಲೂ ಜಯಿಸಲು ಸಾಧ್ಯವಿಲ್ಲವಂತೆ. ಆದುದರಿಂದ ನಾವು ಈಗ ಏನು ಮಾಡಬೇಕು?" ಎಂದು ಪ್ರಶ್ನಿಸಿಕೊಳ್ಳುತ್ತಿದ್ದರು.

ಆಗ ವಿಭೀಷಣನು ರಾಮನಬಳಿಗೆ ಬಂದು, "ನಾನೂ ನನ್ನ ನಾಲ್ವರು ಮಂತ್ರಿಗಳೂ ಈಗಲೇ ರಾಕ್ಷಸ ಸೈನ್ಯಗಳನ್ನೆಲ್ಲ ನೋಡಿಬಂದೆವು. ನನ್ನ ಮಂತ್ರಿಗಳು ಪಕ್ಷಿರೂಪದಲ್ಲಿ ಅಲ್ಲಿಯ ಚಲನವಲನಗಳನ್ನೆಲ್ಲ ನೋಡಿದ್ದಾರೆ. ಪ್ರಹಸ್ತನು ಪೂರ್ವ ದ್ವಾರವನ್ನೂ, ಮಹೋದರ ಮಹಾ ಪಾರ್ಶ್ವರು ದಕ್ಷಿಣ ದ್ವಾರವನ್ನೂ ರಾಕ್ಷಸ ಸೈನಿಕರೊಂದಿಗೆ ಕಾಪಾಡುತ್ತಿದ್ದಾರೆ. ಇಂದ್ರಜಿತ್ತು ಪಶ್ಚಿಮ ದ್ವಾರದಲ್ಲಿದ್ದಾನೆ. ವಿರೂಪಾಕ್ಷನು ನಗರದ ಮಧ್ಯ ಭಾಗವನ್ನು ರಕ್ಷಿಸುತ್ತಿದ್ದಾನೆ.

22-5




ಉತ್ತರ ದ್ವಾರದಲ್ಲಿ ಈ ಮೊದಲು ಪರಿಚಿತರಾದ ಶುಕಸಾರಣರಿದ್ದಾರೆ." ಎಂದನು. ಅವನ ಮಂತ್ರಿಗಳು ಕೂಡಾ ತಾವು ನೋಡಿ ಬಂದುದನ್ನು ರಾಮನ ಮುಂದೆ ವಿವರವಾಗಿ ಹೇಳಿದರು.

ರಾವಣನೊಂದಿಗೆ ಅವನಿಗೆ ಸಮಾನ ಬಲಪರಾಕ್ರಮಗಳುಳ್ಳವರಾದ ಅರುವತ್ತು ಲಕ್ಷ ಮಂದಿ ರಾಕ್ಷಸರಿರುವುದರಿಂದ, ಆತನ ವಿಷಯದಲ್ಲಿ ರಾಮನು ಎಚ್ಚರಿಕೆಯಿಂದಿರಬೇಕಾದುದು ಅವಶ್ಯವೆಂದು ವಿಭೀಷಣನು ಹೇಳಿದನು. ಆಮೇಲೆ ರಾಮನು ತಮ್ಮ ಸೈನ್ಯದ ಯಾವಯಾವ ವೀರರು ಎಲ್ಲೆಲ್ಲಿ ಯಾರು ಯಾರೊಂದಿಗೆ ಯುದ್ಧ ಮಾಡಬೇಕೆಂಬುದನ್ನು ವಿವರಿಸಿ ತಿಳಿಸಿದನು.

ನಳನು ಪೂರ್ವ ದ್ವಾರದ ಬಳಿಯಿದ್ದ ಪ್ರಹಸ್ತನೊಂದಿಗೆ, ಅಂಗದನು ದಕ್ಷಿಣ ದ್ವಾರದಲ್ಲಿದ್ದ ಮಹಾಪಾರ್ಶ್ವ ಮಹೋದರರೊಂದಿಗೆ, ಹನುಮಂತನು ಪಶ್ಚಿಮ ದ್ವಾರದ ಹತ್ತಿರ, ಉತ್ತರ ದ್ವಾರದಬಳಿಯಲ್ಲಿರುವ ರಾವಣನೊಂದಿಗೆ ಸ್ವತಃ ರಾಮ, ಹೀಗೆ ಯುದ್ಧ ಮಾಡುವುದೆಂದು ನಿರ್ಣಯಿಸಲ್ಪಟ್ಟಿತು. ರಾಮನೊಂದಿಗೇ ಲಕ್ಷ್ಮಣನೂ ಇರುತ್ತಾನೆ. ಜಾಂಬವಂತನೂ ವಿಭೀಷಣನೂ ಮಧ್ಯದಲ್ಲಿರುವ ರಾಕ್ಷಸರೊಂದಿಗೆ ಹೋರಾಡುವರು. ಯುದ್ಧದ ಸಮಯದಲ್ಲಿ ವಾನರರು ಮನುಷ್ಯ ರೂಪವನ್ನು ಧರಿಸಬಾರದು. ವಾನರರೆಲ್ಲ ವಾನರ ರೂಪದಲ್ಲೇ ಇರತಕ್ಕದ್ದು. ಹಾಗಿದ್ದ ಹೊರತು, ಯಾರು "ನಮ್ಮವರು" ಯಾರು ಶತ್ರುಗಳು ಎಂಬುದು ಗೊತ್ತಾಗಲಾರದು. ರಾಮ, ಲಕ್ಷ್ಮಣ, ಹನುಮಂತ, ಸುಗ್ರೀವ, ನೀಲ, ಅಂಗದ, ವಿಭೀಷಣ ಇಷ್ಟುಮಂದಿ ಮಾತ್ರ ಮನುಷ್ಯ ರೂಪದಲ್ಲಿ ಯುದ್ಧ ಮಾಡಬಹುದು.

ಹೀಗೆ ಕಟ್ಟುದಿಟ್ಟಗಳನ್ನು ಏರ್ಪಡಿಸಿದ ಮೇಲೆ ರಾಮನು ಲಕ್ಷ್ಮಣನೊಂದಿಗೆ ಅತ್ಯಂತ ಸುಂದರವಾಗಿ ಕಾಣುವ ಸುವೇಲ ಪರ್ವತವನ್ನು ಏರಿದನು. ಅವರೊಂದಿಗೆ ವಿಭೀಷಣ ಮೊದಲಾದವರೂ ಏರಿಹೋದರು. ಆ ದಿನ ರಾತ್ರಿಯನ್ನು ಅಲ್ಲಿಯೇ ಕಳೆಯಬೇಕೆಂದು ಅವರು ನಿಶ್ಚಯಿಸಿದ್ದರು. ಸುವೇಲ ಪರ್ವತ ಶಿಖರದ ಮೇಲಿನಿಂದ ನೋಡಿದರೆ ತ್ರಿಕೂಟ ಪರ್ವತ ಶಿಖರದ ಮೇಲೆ ನಿರ್ಮಿಸಲ್ಪಟ್ಟ ಲಂಕಾನಗರವು ಚೆನ್ನಾಗಿ ಕಾಣುತಿತ್ತು. ರಾಮನೇ ಮೊದಲಾದವರು ಲಂಕಾನಗರವನ್ನು ಮಾತ್ರವಲ್ಲದೆ ಆದರೊಳಗಿರುವ ರಾಕ್ಷಸರನ್ನು ಕೂಡಾ ನೋಡಿದರು. ರಾಕ್ಷಸರನ್ನು ನೋಡಿ ವಾನರರು ಕೋಪಾವೇಶದಿಂದ ಗಟ್ಟಿಯಾಗಿ ಸಿಂಹನಾದ ಮಾಡಿದರು. ಅದು ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಧ್ವನಿ ಕೊಟ್ಟಿತು.

ಅಷ್ಟರಲ್ಲಿ ಸೂರ್ಯನು ಅಸ್ತಮಿಸಿದನು. ಎಲ್ಲರೂ ಆ ರಾತ್ರಿಯನ್ನು ಸುವೇಲ ಪರ್ವತದ ಮೇಲೆಯೇ ವಿಶ್ರಮಿಸಿ ಬೆಳಗು ಮಾಡಿದರು. ಬೆಳಗಾದ ಮೇಲೆ ತ್ರಿಕೂಟ ಪರ್ವತದ ಮೇಲಿನ ಲಂಕಾನಗರದಲ್ಲಿರುವ ವನಗಳೂ ಉಪವನಗಳೂ ಬಹಳ ಸುಂದರವಾಗಿ



ಕಂಡುಬಂದುವು. ಎಲ್ಲದಕ್ಕಿಂತಲೂ ಎತ್ತರವಾಗಿ ರಾವಣನ ಅರಮನೆ ಕಂಗೊಳಿಸುತ್ತಿತ್ತು. ಅದರ ಸುತ್ತಲೂ ಎತ್ತರವಾದ ಚೈತ್ಯ ಪ್ರಾಸಾದವಿದ್ದಿತು.

ಹಾಗೆ ನೋಡುತ್ತಿರಲು ಸುಗ್ರೀವನ ಕಣ್ಣಿಗೆ ಅಲ್ಲಿ ರಾವಣನೇ ಕಾಣಿಸಿದನು. ಕೂಡಲೇ ಅವನು ಗಟ್ಟಿಯಾಗಿ, 'ಎಲೋ ರಾವಣಾ! ನಾನು ರಾಮನ ಸ್ನೇಹಿತ, ಬಂಟ; ನಿನಗಾಗಿಯೇ ಇಲ್ಲಿಯವರೆಗೂ ಬಂದವನು. ಈಗ ನಿನ್ನನ್ನು ಬಿಡಲಾರೆ" ಎಂದು ಗರ್ಜಿಸಿ ಹೇಳುತ್ತಾ ಆ ಕಡೆಗೆ ಹಾರಿದನು.

"ಸುಗ್ರೀವಾ! ನಿನ್ನ ಹೆಸರು ಒಳ್ಳೆಯ ಕಂಠದವನೆಂದು. ಇನ್ನು ನಿನಗೆ ಕಂಠವೇ ಇಲ್ಲದಂತೆ ಮಾಡಿಬಿಡುತ್ತೇನೆ" ಎನ್ನುತ್ತಾ ರಾವಣನೂ ಸುಗ್ರೀವನ ಮೇಲೆ ಹಾರಿದನು. ಇಬ್ಬರೂ ಭಯಂಕರವಾಗಿ ಹೊಡೆದಾಡಿಕೊಂಡರು.

ಬಹಳ ಹೊತ್ತಿನವರೆಗೆ ಇಬ್ಬರೂ ಸಮಬಲರಾಗಿ ಹೋರಾಡುತ್ತಿರಲು, ಕ್ರಮವಾಗಿ ರಾವಣನಿಗೆ ಆಯಾಸ ಬಂದುದರಿಂದ ಮಾಯಾ ವಿದ್ಯೆಗೆ ಇಳಿದನು. ಅದನ್ನು ತಿಳಿದು ಸುಗ್ರೀವನು ಆಕಾಶಕ್ಕೆ ಹಾರಿದನು. ಅವನು ಹಿಂದಿರುಗಿಬರುವನೆಂದುಕೊಂಡು ರಾವಣನು ಹಾಗೆಯೇ ನಿಂತು ಇದಿರು ನೋಡುತ್ತಿರಲು, ಸುಗ್ರೀವನು ಸೀದಾ ರಾಮನಬಳಿಗೆ ಹೋಗಿ ನಿಂತನು. ರಾಮನು ಸುಗ್ರೀವನ ಕೆಲಸವನ್ನು ಆಕ್ಷೇಪಿಸುತ್ತ,

"ನನ್ನ ಹತ್ತಿರ ಹೇಳದೆ ಹೀಗೇಕೆ ದುಡುಕಿದೆ? ನಿನಗೆ ಏನು ಸಂಭವಿಸುತ್ತದೋ ಎಂದು ನಾವೆಲ್ಲಾ ತುಂಬ ಹೆದರಿದೆವು. ನಿಜವಾಗಿ ನಿನಗೇನಾದರೂ ಆಗಿಬಿಟ್ಟಿ ನಮ್ಮ ಗತಿ ಏನಾಗುತಿತ್ತು? ರಾವಣನನ್ನು ಬಂಧುಗಳೊಂದಿಗೆ ಕೊಂದು, ವಿಭೀಷಣನಿಗೆ ಪಟ್ಟಗ ಅಯೋಧ್ಯೆಗೆ ತಿರುಗಿ ಹೋಗಬೇಕೆಂಬುದು ನ ಸಂಕಲ್ಪ." ಎಂದನು.

"ರಾಮಾ, ಸೀತೆಯನ್ನು ಎತ್ತಿಕೊಂಡುಹೋ ಆ ದುಷ್ಟನು ಕಣ್ಣಿಗೆ ಬಿದ್ದಕೂಡಲೇ ಸಹನೆ ತಪ್ಪಿತು. ಕ್ಷಮಿಸು." ಎಂದ ಸುಗ್ರೀವ.

ಎಲ್ಲರೂ ಪರ್ವತವನ್ನಿಳಿದು ಬಂದರು. ರಾಮ ಲಂಕೆಯ ಮೇಲೆ ಯುದ್ಧಕ್ಕೆ ತವಕಿಸಿಕೊಂಡಿದ್ದ ಅವನಹಿಂದೆ ವಿಭೀಷಣ, ಸುಗ್ರೀವ, ಹನುಮಂ ಜಾಂಬವಂತ, ನಳ, ಸುಷೇಣ, ನೀಲ, ಲಕ್ಷ್ಮ ಮೊದಲಾದವರು ನಡೆದರು. ಅವರಹಿಂದೆ ಮ ಸಮುದ್ರದಂತಹ ವಾನರಸೇನೆ ಕದಲಿತು.

ಈ ರೀತಿಯಾಗಿ ರಾಮಲಕ್ಷ್ಮಣರು ಲಂಕೆ ಉತ್ತರ ದ್ವಾರವನ್ನು ಮುತ್ತಿದರು. ಅದ ರಾವಣನು ಸ್ವಯಂ ರಕ್ಷಣೆ ಮಾಡುತ್ತಿದ್ದನು. ಭಯಂಕರವಾದ ಆಯುಧಗಳೂ ಕವಚಗಳೂ ರಾಶಿಯಾಗಿ ಬಿದ್ದಿದ್ದುವು. ಎಷ್ಟು ತೆಗೆದರೂ ಮುಗಿಯುವಂತಿರಲಿಲ್ಲ.



22-8



ವೀರಹನುಮಾನ್

ರಾಮನ ಆದೇಶದಂತೆಯೇ ಲಂಕಾನಗರದ ಎಲ್ಲಾ ದ್ವಾರಗಳಲ್ಲಿ ಮುತ್ತಿಗೆ ಹಾಕಲ್ಪಟ್ಟಿತು. ಸುಗ್ರೀವನು ಅಗತ್ಯಬಿದ್ದಾಗ ಯಾರಿಗೆ ಬೇಕಾದರೂ ಕೂಡಲೇ ಸಹಾಯ ಮಾಡಲು ಸೌಕರ್ಯವಾಗುವಂತೆ ಉತ್ತರ [illegible]ದು ದ್ವಾರಗಳ ಮಧ್ಯದಲ್ಲಿ ದೊಡ್ಡ ಸೇನೆಯೊಂದಿಗೆ ಎಲ್ಲ ಕಡೆಯೂ ನೋಡುತ್ತ ನಿಂತನು. ವಾನರರು ಯುದ್ಧಮಾಡಲು ಮರಗಳನ್ನು ಕಲ್ಲು [illegible]ನ್ನು ಎತ್ತಿಕೊಂಡರು.


ಈ ಬಗೆಯಾಗಿ ಲಂಕೆಯ ಎಲ್ಲಾ ದಿಕ್ಕುಗಳಲ್ಲಿಯೂ ಹೀಗೇ ವಾನರರ ಸೇನೆ ಮುತ್ತಿಗೆ ಹಾಕಿತು. ಆ [illegible]ಗಳ ಮರೆಯಲ್ಲಿ ತ್ರಿಕೂಟಪರ್ವತವೇ ಅಡಗಿ ಹೋಯಿತು. ಇನ್ನು ವಾನರಸೇನೆಗಳಿಂದ ಹೊರ [illegible] ರಣಕೋಲಾಹಲಧ್ವನಿಗಳಿಂದ ದಿಕ್ಕುಗಳೆಲ್ಲಾ [illegible]ಕೊಂಡವು.

ಹೀಗೆ ಸರ್ವಸಿದ್ಧತೆಯಿಂದಿದ್ದ ರಾಮನು ಇನ್ನೂ [illegible] ಅವಕಾಶವನ್ನು ರಾವಣನಿಗೆ ಕೊಡುವ ತನ್ನ [illegible]ವನ್ನು ವಿಭೀಷಣನೊಂದಿಗೆ ಹೇಳಿ, ಅಂಗದನನ್ನು ರಾಯಭಾರಿಯನ್ನಾಗಿ, ರಾವಣನ ಬಳಿಗೆ ಕಳುಹಿಸಲು ನಿಶ್ಚಯಿಸಿದನು. ರಾಮನ ಅಭಿಪ್ರಾಯಕ್ಕೆ ವಿಭೀಷಣನೂ ತಲೆದೂಗಿದನು. ರಾಮನು ತನ್ನ ಮಾತಿನಂತೆ ರಾವಣನೊಂದಿಗೆ ಹೀಗೆಯೇ ಹೇಳಬೇಕೆಂದು ಅಂಗದನೊಂದಿಗೆ ಹೇಳಿದನು :

"ಎಲೈ ರಾವಣಾ, ಬ್ರಹ್ಮನಿಂದ ವರಗಳನ್ನು ಪಡೆದು ಗರ್ವದಲ್ಲಿ ಕುರುಡನಾದ ನೀನು ಅನೇಕ ಪಾಪಗಳನ್ನು ಮಾಡಿರುವೆ. ಈಗ ನಿನ್ನ ಗರ್ವವು ನಾಶವಾಗುವ ಸಮಯಬಂತು. ನೀನು ನನ್ನ ಹೆಂಡತಿಯನ್ನು ಎತ್ತಿಕೊಂಡು ಹೋದುದರಿಂದ ನಾನು ಕೋಪಗೊಂಡು ಯಮಧರ್ಮರಾಜನಂತೆ ನಿನ್ನ ಮನೆ ಬಾಗಿಲಿನವರೆಗೂ ಬಂದಿದ್ದೇನೆ. ನಿನ್ನನ್ನು ಕೊಲ್ಲುವ ಕ್ಷಣಗಳನ್ನೆಣಿಸುತ್ತ, ಲಂಕೆಯ ಬಾಗಿಲಲ್ಲೇ ನಿಂತಿದ್ದೇನೆ. ನೀನು ನಿನ್ನ ಯಾವ ಬಲವನ್ನು ನಂಬಿಕೊಂಡು ಸೀತೆಯನ್ನು ಎತ್ತಿಕೊಂಡು ಹೋದೆಯೋ ಆ ಬಲವನ್ನು ಈಗ ತೋರಿಸು. ಅಥವಾ ತಪ್ಪು ಒಪ್ಪಿಕೊಂಡು ಸೀತೆಯನ್ನು ತಂದುಕೊಟ್ಟು ನನ್ನ ಹತ್ತಿರ ಶರಣು

೨೩. ವಾನರ ರಾಕ್ಷಸರ ದ್ವಂದ್ವಯುದ್ಧ

23-1



ಬೇಡಿಕೋ. ಇಲ್ಲದಿದ್ದರೆ ನನ್ನ ಕ್ರೂರವಾದ ಬಾಣಗಳು ಈ ಲೋಕದಲ್ಲಿ ರಾಕ್ಷಸರೇ ಇಲ್ಲದಂತೆ ಮಾಡಿಬಿಡುತ್ತವೆ. ಧರ್ಮಾತ್ಮನೂ, ನನ್ನನ್ನು ಶರಣು ಬಂದವನೂ ಆದ ವಿಭೀಷಣನನ್ನು ನಾನು ಲಂಕೆಗೆ ರಾಜನನ್ನಾಗಿ ಮಾಡದೆ ಬಿಡಲಾರೆ. ನೀನು ಧೈರ್ಯವಾಗಿ ಯುದ್ಧ ಮಾಡುವುದಾದರೆ ಈಗ ಹೊರಟು ಬಾ. ಅಷ್ಟೇ ಹೊರತು ನೀನು ಪಕ್ಷಿಯ ರೂಪ ತಾಳಿ ಎಲ್ಲಿಗೆ ಹಾರಿಹೋಗಬೇಕೆಂದರೂ ನಿನ್ನಿಂದಾಗದು. ನಾನು ನಿನ್ನನ್ನು ಬಿಡಲಾರೆ. ನಿನಗೆ ನಾನೀಗ ಒಂದು ಒಳ್ಳೆಯ ಸಲಹೆ ಕೊಡುತ್ತೇನೆ. ಇನ್ನು ಮೇಲೆ ನೀನು ಲಂಕೆಯನ್ನು ನೋಡಲಾರೆ. ಈಗಲೇ ಲಂಕೆಯನ್ನು ಚೆನ್ನಾಗಿ ನೋಡಿಬಿಡು. ಈಗಲೇ ನಿನಗೆ ನೀನೇ ಉತ್ತರಕ್ರಿಯೆಗಳನ್ನೂ ಮಾಡಿಬಿಡು. ಹೆಂಡಿರುಗಳಿಂದ ಕೊನೆಯದಾಗಿ ಬೀಳುಗೊಂಡೇ ಯುದ್ಧಕ್ಕೆ ಹೊರಡು. ಇದನ್ನು ಏಕೆ ಹೇಳುವೆನೆಂದರೆ, ನಿನ್ನ ಪಂಚಪ್ರಾಣಗಳೂ ಈಗ ನನ್ನ ಕೈಯೊಳಗಿವೆ!"

ತಾರೆಯ ಕುಮಾರನಾದ ಅಂಗದನು ರಾಮನು ಹೇಳಿದ ಈ ಸಂದೇಶವನ್ನು ತೆಗೆದುಕೊಂಡು, ಆಕಾಶ ಮಾರ್ಗದಲ್ಲಿ ಅತಿ ಶೀಘ್ರವಾಗಿ ರಾವಣನ ಅರಮನೆಯನ್ನು ತಲಪಿ, ಮಂತ್ರಿಗಳೊಂದಿಗೆ ಕುಳಿತು ಆಲೋಚನೆ ಮಾಡಿಕೊಂಡಿದ್ದ ರಾವಣನನ್ನು ನೋಡಿದನು. ಅವನು ರಾವಣನಿಗೆ ತನ್ನ ಹೆಸರನ್ನು ಹೇಳಿ, ತಾನು ಯಾರ ಕಡೆಯಿಂದ ರಾಯಭಾರಿಯಾಗಿ ಬಂದಿರುವೆನೆಂಬುದನ್ನೂ ತಿಳಿಸಿ, ರಾಮನು ಹೇಳಿದ ಸಂದೇಶ ವಾಚಕಗಳನ್ನು ಏನೂ ವ್ಯತ್ಯಾಸವಿಲ್ಲದೆ ಸ್ಪಷ್ಟಮಾತುಗಳಿಂದ ಒಪ್ಪಿಸಿದನು. ಅವನ ಮಾತುಗಳು ಎಲ್ಲಾ ರಾಕ್ಷಸರ ಕಿವಿಗಳಲ್ಲಿಯೂ ಪ್ರತಿಧ್ವನಿಸುವಂತೆ ಮೊಳಗಿತು. ರಾಕ್ಷಸರು ಅತ್ಯಾಶ್ಚರ್ಯದಿಂದ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

ಬಹಳ ಕ್ರೂರವಾಗಿರುವ ಆ ಸಂದೇಶದ ಮಾತಿನ ಮೊನೆಗಳಿಂದ ರಾವಣನಿಗೆ ವಿಪರೀತ ಕೋಪ ಬಂದಿತು. ಅವನು ಕೋಪವನ್ನು ತಾಳಲಾರದೆ ಕಣ್ಣುಗಳನ್ನು ಕೆಕ್ಕರಿಸಿಕೊಂಡು, "ಈ ದುಷ್ಟ ವಾನರನನ್ನು ಹಿಡಿದು ಕೊಲ್ಲಿರಿ; ನಾಲಗೆ ಕತ್ತರಿಸಿರಿ." ಎಂದು ಪದೇ ಪದೇ ಗರ್ಜಿಸಿದನು.

ನಾಲ್ಕುಮಂದಿ ರಾಕ್ಷಸರು ರಾವಣನ ಆಜ್ಞೆಯನ್ನು ನೆರವೇರಿಸಲು ಮುಂದಕ್ಕೆ ಬಂದು ಅಂಗದನನ್ನು ಹಿಡಿದುಕೊಂಡ ಮೇಲೆ ಅಂಗದನು ಥಟ್ಟನೆ ಅವರನ್ನು ತನ್ನ ಎರಡು ಕಂಕುಳುಗಳಲ್ಲಿಯೂ ಒತ್ತಿ ಇರುಕಿಸಿಕೊಂಡು ಆಕಾಶದ ಮೇಲಕ್ಕೆ ಎದ್ದನು. ಅವನು ಅರಮನೆಯ ಶಿಖರದ ಮೇಲೆ ಎಗರಿ ರಾವಣನೇ ಮೊದಲಾದವರು ನೋಡುತ್ತಿದ್ದಂತೆಯೇ ಆ ನಾಲ್ಕು ಮಂದಿ ರಾಕ್ಷಸರನ್ನೂ ಕೆಳಕ್ಕೆ ಬಿಸುಟು ಹಾಗೆ ದೂಡಿ, ಅರಮನೆಯ ಶಿಖರವನ್ನು ಒದೆದು ಮುರಿದು ಹಾಕಿದನು.

ತರುವಾಯ ಅವನು ತನ್ನ ಹೆಸರು ಹೇಳಿಕೊಂಡು ಸಿಂಹನಾದ ಮಾಡಿ, ನೆಟ್ಟಗೆ ನಿರ್ವಿಘ್ನವಾಗಿ ರಾಮ


ಳಿಗೆ ತಿರುಗಿ ಬಂದನು. ಅಲ್ಲಿ ನಡೆದುದನ್ನೆಲ್ಲಾ ಮನ ಮುಂದೆ ನಿವೇದಿಸಲು ರಾಮನು ತಲೆದೂಗಿ "ನ್ನು ಯುದ್ಧ ನಿಶ್ಚಯವಾಯಿತು" ಎಂದನು.

ಅಂಗದನು ಮಾಡಿದ ಕೆಲಸವು ರಾವಣನಿಗೆ ಅಪ ನವೆಂದು ಅನಿಸಿತು. ಅವನು ಧೈರ್ಯವನ್ನು ದುಕೊಂಡು ದಿಕ್ಕುಗಳನ್ನು ನೋಡುತ್ತಾ ನಿಟ್ಟು ಸು ಬಿಡತೊಡಗಿದನು.

ವಾನರರು ಯುದ್ಧ ಯಾವ ಕ್ಷಣಕ್ಕೆ ಬರವು ದುಕೊಳ್ಳುತ್ತ ಉತ್ಸಾಹದಿಂದ ಕುಣಿಯುತ್ತಿದ್ದರು. ರ್ವತಾಕಾರನಾದ ಸುಷೇಣನು ಸುಗ್ರೀವನ ಆಜ್ಞೆಯ ಮೇರೆಗೆ ಕೆಲವು ವಾನರ ವೀರರನ್ನು ಹಿಂದಿಟ್ಟು ಕೊಂಡು ಲಂಕೆಯ ನಾಲ್ಕು ದ್ವಾರಗಳ ಕಡೆಗೂ ತಿರು ಗಿಕೊಂಡಿದ್ದನು. ನಗರದೊಳಗೆ ರಾಕ್ಷಸರು ಕೂಡಾ ಆಯುಧಗಳನ್ನು ಧರಿಸಿಕೊಂಡು ಕೋಲಾಹಲ ಮಾಡುತ್ತಾ ತಿರುಗಾಡುತ್ತಿದ್ದರು.

ಕೆಲವು ರಾಕ್ಷಸರು ರಾವಣನ ಬಳಿಗೆ ಹೋಗಿ ವಾನರರ ಗುಂಪು ಎಳ್ಳುಹಾಕಲು ಸಾಧ್ಯವಾಗದಷ್ಟು ದಟ್ಟವಾಗಿ ಲಂಕಾನಗರವನ್ನು ಮುತ್ತಿಕೊಂಡಿದೆ ರು ಹೇಳಿದರು.

ಅದನ್ನು ಕೇಳಿ ರಾವಣನು ಯಾರಿಗೂ ಏನೂ ಳದೆ ಕೂಡಲೇ ತನ್ನ ಸಿಂಹಾಸನದಿಂದಿಳಿದು ನೆಯ ಮೇಲು ಭಾಗಕ್ಕೆ ಹೋಗಿ, ಲಂಕೆಯ ಕ್ಕಲೂ ವಾನರ ಸೇನೆ ಹೇಗೆ ಮುತ್ತಿಗೆ ಹಾಕಿರುವು ದುದನ್ನು ನೋಡಿದನು. ತ್ರಿಕೂಟ ಪರ್ವತವೆಲ್ಲವೂ ನ್ನೊಂದು ಸಮುದ್ರದಂತೆ ಮಿಜಿಮಿಜಿ ವಾನರ ಗಳಿಂದ ತುಂಬಿತ್ತು. ಇವರೆಲ್ಲ ನಿಜವಾಗಿ ಸಮುದ್ರ ಟಿ ಬಂದಿರುವುದನ್ನು ಪ್ರತ್ಯಕ್ಷವಾಗಿ ನೋಡಿ ಶ್ಚರ್ಯಪಡ ತೊಡಗಿದನು. ಅಷ್ಟು ಮಂದಿ ವಾನರ ನ್ನು ಹೇಗೆ ಕೊಂದು ಹಾಕುವುದೆಂದು ಅವನು ಯೋಚಿಸತೊಡಗಿದನು. ಅವನಿಗೇನೂ ತೋರಲಿಲ್ಲ. ನು ಕೂಡಾ ಲಂಕಾನಗರದ ಪ್ರಾಕಾರದ



ಬಳಿಗೆ ಹೋಗಿ ನಗರವನ್ನು ರಾಕ್ಷಸರು ಎಷ್ಟು ಚೆನ್ನಾಗಿ ರಕ್ಷಿಸುತ್ತಿದ್ದಾರೆಂಬುದನ್ನು ನೋಡಿದನು. ಆ ಲಂಕೆಯೊಳಗೆ ತಾನೇ ತನ್ನ ಪತ್ನಿ ಸಿಕ್ಕಿಕೊಂಡು ತಪಿಸುತ್ತಿದ್ದಾಳೆ!

ಈ ನೆನಪು ಬಂದ ಕೂಡಲೇ ಅವನಿಗೆ ದುಃಖವೂ ಕೋಪವೂ ಉಕ್ಕುತ್ತಿರಲು, ಅವನು ವಾನರರನ್ನು ನೋಡಿ ಆಜಾನುಬಾಹುವನ್ನು ನೀಡಿ ಲಂಕೆಯನ್ನು ತೋರಿಸುತ್ತ, "ಹುಂ, ಹೊರಡಿರಿ. ಈಗಲೇ ಶತ್ರು ಸಂಹಾರವನ್ನು ತೀವ್ರವಾಗಿ ನಡೆಸಿರಿ" ಎಂದು ಅಪ್ಪಣೆ ಕೊಟ್ಟನು.

ವಾನರರು ಕಲ್ಲು ಮರಗಳೊಂದಿಗೆ ರಾಮನ ಆಜ್ಞೆ ಗಾಗಿ ಕಾದುಕೊಂಡಿದ್ದರು. ರಾಮನು ಆಜ್ಞೆ ಮಾಡಿದ ಮರುಕ್ಷಣದಲ್ಲಿ ವಾನರರು ಅತ್ಯುತ್ಸಾಹದಿಂದ ಅಲ್ಲಲ್ಲಿ ರುವ ಪ್ರಾಕಾರದ ಮೇಲೆ ಹಾರಿದರು. "ರಾಮನಿಗೆ ಜಯವಾಗಲಿ! ಸುಗ್ರೀವನಿಗೆ ಜಯವಾಗಲಿ!" ಎಂಬ ಘೋಷಣದಿಂದ ಆಕಾಶವು ತುಂಬಿತು. ಲಂಕೆಯ

23-3



ನಾಲ್ಕು ದ್ವಾರಗಳ ಕಡೆಯಲ್ಲಿಯೂ ಒಂದೇ ಬಾರಿಗೆ ವಾನರರ ದಾಳಿ ಪ್ರಾರಂಭವಾಯಿತು.

ವಿಭೀಷಣನು ತನ್ನ ಮಂತ್ರಿಗಳೊಂದಿಗೆ ಕವಚವನ್ನು ಧರಿಸಿಕೊಂಡು ರಾಮನ ಸಮೀಪದಲ್ಲೇ ಇದ್ದನು. ಗಜ, ಗವಯ, ಗವಾಕ್ಷ, ಶರಭ, ಗಂಧಮಾದನ ಎಂಬ ಈ ಪ್ರಮುಖ ವಾನರರು ಎಲ್ಲಾ ಕಡೆಗೂ ತಿರುಗುತ್ತಾ, ವಾನರಸೇನೆಯನ್ನು ರಕ್ಷಿಸುತ್ತಲೂ, ನಿರ್ದೇಶನ ನೀಡುತ್ತಲೂ, ಹುರಿದುಂಬಿಸುತ್ತಲೂ ಇದ್ದರು.

ಈ ಸ್ಥಿತಿಯಲ್ಲಿ ರಾವಣನು ಕೂಡ ತನ್ನ ರಾಕ್ಷಸ ಸೇನೆಯನ್ನು ಯುದ್ಧಕ್ಕೆ ಹೋಗಿ ಶತ್ರುಗಳನ್ನು ಸದೆಬಡಿಯುವಂತೆ ಆಜ್ಞೆ ಮಾಡಿದನು. ಕೂಡಲೇ ರಾಕ್ಷಸರು ಕೇಳಿದವರ ಎದೆಯೊಡೆಯುವ ಹಾಗೆ ಸಿಂಹನಾದ ಮಾಡಿದರು. ಭೇರಿಭಾಕಗಳನ್ನು ಕರ್ಕಶವಾಗಿ ಮೊಳಗಿಸಿದರು. ಶಂಖಗಳನ್ನು ಊದಿದರು. ಲಂಕೆಯೊಳಗೆ ಭಯಂಕರವಾಗಿ ಅರಚುವ ರಾಕ್ಷಸರೂ, ಹೊರಗೆ ಭೂಮಿ ಸೀಳುವಂತೆ ಕಿರಿಚುವ ವಾನರರೂ ಮಾಡುವ ಕೋಲಾಹಲ ಧ್ವನಿಯಿಂದ ಆಕಾಶದಲ್ಲಿ ಕೂಡ ಶಬ್ದಗಳು ತಾಕಲಾಡತೊಡಗಿದವು.

ನಾಲ್ಕು ದಿಕ್ಕುಗಳಿಂದಲೂ ವಾನರರು ಲಂಕಾನಗ... ದೊಳಗೆ ಧುಮುಕಿದ ಕೂಡಲೆ ವಾನರರಿಗೂ ರಾಕ್ಷ... ರಿಗೂ ಯುದ್ಧವು ಪ್ರಾರಂಭವಾಯಿತು. ರಾಕ್ಷಸರು ಗದೆಗಳಿಂದ, ಶಕ್ತ್ಯಾಯುಧಗಳಿಂದ, ಶೂಲಗಳಿಂದ, ಕೊಡಲಿಗಳಿಂದ, ಒನಕೆಗಳಿಂದ ವಾನರರನ್ನು ಹೊ... ಯುತ್ತಿದ್ದರು. ವಾನರರು ರಾಕ್ಷಸರ ಮೇಲೆ ಮ... ಗಳನ್ನೂ ಕಲ್ಲುಗಳನ್ನೂ, ದೊಡ್ಡ ದೊಡ್ಡ ಬಂ... ಗಳನ್ನೂ ಎಸೆಯುತ್ತ, ಮುಷ್ಟಿಗಳಿಂದ, ಉಗು... ಗಳಿಂದ, ಕೋರೆಗಳಿಂದ, ಪಾದಗಳಿಂದ, ಕೈಕಾ... ಗಳಿಂದ ಯುದ್ಧ ಮಾಡುತ್ತಿದ್ದರು.


ಈ ಯುದ್ಧಗಳೊಂದಿಗೆ ಅನೇಕ ದ್ವಂ... ಯುದ್ಧಗಳೂ ನಡೆಯತೊಡಗಿದವು. ಇನ್ನು... ಪ್ರಾಕಾರದ ಮೇಲಿನಿಂದ ಹಾರಿಕೊಂಡಿರುವ ವಾನ... ಮೇಲೆ ರಾಕ್ಷಸರು ಭಯಂಕರವಾದ ಆಯುಧಗಳ... ಬಿಸುಡುತ್ತಿದ್ದರು. ಕೆಲವು ರಾಕ್ಷಸರು ಪ್ರಾಕಾ... ಮೇಲಕ್ಕೆ ಹಾರಿ ವಾನರರನ್ನು ಆಚೆಗೆ ದೂ... ತ್ತಿದ್ದರು. ವಾನರರು ಮೇಲೇರಿದ ರಾಕ್ಷಸರ... ಕೆಳಕ್ಕೆ ದೂಡಿ ಅವರೊಂದಿಗೆ ತಾವೂ ಅ... ಧುಮುಕಿ ಚಚ್ಚುತ್ತಿದ್ದರು.

ಒಂದು ಕಡೆ ಇಂದ್ರಜಿತ್ತು ಅಂಗದನೊಂ... ದ್ವಂದ್ವಯುದ್ಧ ಮಾಡುತ್ತಿದ್ದನು. ಇನ್ನೊಂದು ... ವಿಭೀಷಣನ ಮಂತ್ರಿಗಳಲ್ಲೊಬ್ಬನಾದ ಸಂ... ಎಂಬವನು ಪ್ರಜಂಘನೆಂಬ ರಾಕ್ಷಸನೊಂದಿಗೆ ... ಕೊಂಡಿದ್ದನು. ಹನುಮಂತನು ಜಂಬುಮಾಲಿಯೊ... ಯುದ್ಧ ಮಾಡುತ್ತಿದ್ದನು. ಹಾಗೆಯೇ ಗಜನು ... ನೆಂಬ ರಾಕ್ಷಸನೊಂದಿಗೂ, ನೀಲನು ನಿಕುಂ... ರಾಕ್ಷಸವೀರನೊಂದಿಗೂ, ಸುಗ್ರೀವನು ಪ್ರ... ರಾಕ್ಷಸನೊಂದಿಗೂ, ಲಕ್ಷ್ಮಣನು ವಿ...

ೊಂದಿಗೂ ದ್ವಂದ್ವಯುದ್ಧ ಮಾಡುತ್ತಿದ್ದನು. ಹೀಗೆ ನ್ನೂ ಅನೇಕ ಮಂದಿ ವಾನರವೀರರು ರಾಕ್ಷಸ ರರೊಂದಿಗೆ ಅನೇಕ ಕಡೆಗಳಲ್ಲಿ ದ್ವಂದ್ವ ಯುದ್ಧ ಲ್ಲಿ ತಮ್ಮ ತಮ್ಮ ಶಕ್ತಿಯನ್ನು ತೋರಿಸುತ್ತಿದ್ದರು. ಲ್ಲಾ ಕಡೆಯೂ ರಣರಂಗವಾಯಿತು.

ಈ ದ್ವಂದ್ವ ಯುದ್ಧದಲ್ಲಿ ಅಂಗದನು ಇಂದ್ರಜಿತ್ತು ನ ರಥವನ್ನೂ ಸಾರಥಿಯನ್ನೂ ಕುದುರೆಗಳನ್ನೂ ಶಮಾಡಿದನು. ಸಂಪಾತಿ ಪ್ರಜಂಘನನ್ನು ಂದನು. ಹನುಮಂತನು ಜಂಬುಮಾಲಿಯನ್ನು ಡೆದು ನೆಲ ಹಿಡಿಸಿದನು. ನಳನು ಪ್ರಕಂಪನನೆಂಬ ಕ್ಷಸನ ಎರಡು ಕಣ್ಣುಗಳನ್ನೂ ಕಿತ್ತುಬಿಸುಟನು. ಗ್ರೀವನ ಕೈಯಲ್ಲಿ ಪ್ರಘಸನು ಸತ್ತುಹೋದನು. ನ್ನೊಂದು ಕಡೆ ನಾಲ್ಕುಮಂದಿ ರಾಕ್ಷಸರು ರಾಮನ ಲೆ ಬಾಣಗಳನ್ನು ಪ್ರಯೋಗಿಸಿದರು. ರಾಮನು ಬಾಣಗಳಿಂದ ಆ ನಾಲ್ವರು ರಾಕ್ಷಸರ ತಲೆ ನ್ನೂ ಹಾರಿಸಿಬಿಟ್ಟನು. ಮೈಂದನು ವಜ್ರಮುಷ್ಟಿ ಬನನ್ನು ತನ್ನ ಮುಷ್ಟಿಯಿಂದ ತಿವಿದು ಂದನು. ಸುಷೇಣನ ಕೈಯಲ್ಲಿ ವಿದ್ಯುನ್ಮಾಲಿ ಬಿಟ್ಟನು. ಒಟ್ಟಿನ ಮೇಲೆ ಹೀಗೆ ನಡೆದ ದ್ವಂದ್ವ ದ್ಧಗಳಲ್ಲಿ ಅನೇಕ ಮಂದಿ ರಾಕ್ಷಸರು ವಾನರರ ಲ್ಲಿ ಸತ್ತರು. ರಾಕ್ಷಸರ ಹಾಹಾಕಾರವನ್ನು ಮೆಟ್ಟಿ ರರ ವಿಜಯದ ಅಟ್ಟಹಾಸವು ಜೋರಾಯಿತು.

ಷ್ಟರಲ್ಲಿ ಸೂರ್ಯನು ಅಸ್ತಮಿಸಿದನು. ಕತ್ತಲೆ ತು. ಆದರೂ ಯುದ್ಧವು ನಿಲ್ಲಲಿಲ್ಲ. ರಾಕ್ಷ ಯುದ್ಧಭೂಮಿಯಲ್ಲಿ ಒಂದೇ ಸವನೆ ತಿರು ತ್ತ ವಾನರರನ್ನು ಹಿಡಿದು ಭಕ್ಷಿಸಲು ತೊಡಗಿ ವಾನರರು ಚಿನ್ನ ಆಭರಣಗಳನ್ನೂ ಬೆಳ್ಳಗೆ ಳೆಯುವ ದಂತಗಳನ್ನೂ ಗುರುತು ಹಿಡಿದು ನ್ನು ಸೀಳಿ ಸೀಳಿ ಹಾಕುತ್ತಿದ್ದರು. ಆ ಕಗ್ಗತ್ತಲೆ ಕೂಡ ರಾಮಲಕ್ಷ್ಮಣರು ಶಬ್ದದ ಗುರುತು ಮ್ಮ ಬಾಣಗಳಿಂದ ಅನೇಕ ಮಂದಿ ರಾಕ್ಷಸ



ರನ್ನು ಕೊಂದು ಹಾಕಿದರು. ಇದು ಪ್ರಯೋಜನವಿಲ್ಲ ವೆಂದುಕೊಂಡು ಇಂದ್ರಜಿತ್ತು ಹೊಸ ಎತ್ತುಗಡೆಗೆ ತಲೆ ಹಾಕಿದನು.

ಅಂಗದನು ತನ್ನ ರಥವನ್ನೂ ಸಾರಥಿಯನ್ನೂ, ಕುದುರೆಗಳನ್ನೂ ನಾಶ ಮಾಡಿದ ಮೇಲೆ ಇಂದ್ರ ಜಿತ್ತು ತನ್ನ ಮಾಯೆಯಿಂದ ಅದೃಶ್ಯನಾಗಿ ಹೋಗಿ ರಾಮಲಕ್ಷ್ಮಣರನ್ನು ತನ್ನ ಗುರಿಯಾಗಿ ಮಾಡಿ ಕೊಂಡನು. ಅವನು ರಾಮಲಕ್ಷ್ಮಣರ ಮೇಲೆ ನಾಗಾಸ್ತ್ರಗಳನ್ನು ಪ್ರಯೋಗಿಸಿ, ಅದರಿಂದ ಅವರಿಬ್ಬ ರನ್ನೂ ಅಲುಗಾಡಲಾಗದಂತೆ ಬಂಧಿಸಿಬಿಟ್ಟನು.

ಆಮೇಲೆ ಅವನು ದಿಕ್ಕುಗಳು ಹೆದರುವಂತೆ ಗಹ ಗಹಿಸಿ ನಕ್ಕು ಗಟ್ಟಿಯಾಗಿ "ನಾನು ಇಂದ್ರಜಿತ್ತು! ಅದೃಶ್ಯನಾಗಿ ಯುದ್ಧ ಮಾಡುವಾಗ ನನ್ನನ್ನು ಇಂದ್ರ ನಿಂದಾದರೂ ಏನೂ ಮಾಡಲು ಸಾಧ್ಯವಿಲ್ಲ. ಅಂದ ಮೇಲೆ ನೀವೇನು ಮಾಡಬಲ್ಲಿರಿ? ಈಗಲೇ ನಿಮ್ಮ ಪ್ರಾಣಗಳನ್ನು ಹಾರಿಸುತ್ತೇನೆ. ಸಾಯಲು ಸಿದ್ಧ

23-5




ವಾಗಿರಿ!" ಎಂದು ಸಿಂಹನಾದ ಮಾಡಿದನು. ಬಾಣಗಳಿಂದ ಶರೀರಗಳು ಪೂರ್ತಿ ಕಟ್ಟಲ್ಪಟ್ಟು ಹೋಗಿರುವ ರಾಮಲಕ್ಷ್ಮಣರಿಗೆ ಏನೊಂದೂ ಕಾಣಿಸ ಲಿಲ್ಲ. ಇಂದ್ರಜಿತ್ತು ಅದೃಶ್ಯನಾಗಿದ್ದು ಮೇಲೆ ಮೇಲೆ ಬಾಣಪ್ರಯೋಗ ಮಾಡಿಕೊಂಡೇ ಇದ್ದನು. ಅವನ ಬಾಣಗಳು ಕೆಲವು ರಾಮಲಕ್ಷ್ಮಣರ ಮರ್ಮಸ್ಥಾನ ಗಳಿಗೂ ತಗಲಿದುವು. ಇಬ್ಬರೂ ನೆಲದ ಮೇಲೆ ಬಿದ್ದರು. ಅವರ ಶರೀರದಿಂದ ರಕ್ತವು ಕಾಲುವೆಯಂತೆ ಹರಿಯಿತು. ರಾಮನ ಸ್ಥಿತಿಯನ್ನು ನೋಡಿ ಲಕ್ಷ್ಮಣ ನಿಗೆ ಏನು ಮಾಡಬೇಕೆಂದು ತೋರಲಿಲ್ಲ. ಇಷ್ಟು ಬೇಗನೇ ಹೀಗಾದುದರಿಂದ ಇನ್ನೆಲ್ಲಿಯ ಯುದ್ಧ? ಅವನಿಗೆ ಜೀವಿತದ ಮೇಲೆ ಆಶೆ ತೀರಿಹೋಯಿತು.

ಹನುಮಂತನೇ ಮೊದಲಾದ ವಾನರ ಪ್ರಮುಖ ರೆಲ್ಲಾ ರಾಮಲಕ್ಷ್ಮಣರ ಸುತ್ತಲೂ ಸೇರಿ ದುಃಖಿಸ ತೊಡಗಿದರು. ಅನೇಕ ವಾನರರು ಇಂದ್ರಜಿತ್ತನ್ನು ಹುಡಕಲಿಕ್ಕೆ ಎಲ್ಲಾ ದಿಕ್ಕುಗಳಿಗೂ ಹೋದರು, ಏನೂ

ಪ್ರಯೋಜನವಾಗಲಿಲ್ಲ. ವಿಭೀಷಣನಿಗೆ ಮಾ
ಇಂದ್ರಜಿತ್ತು ಇರುವ ದಿಕ್ಕು ಗೊತ್ತಾಯಿತು. ಆದ
ಅವನು ತಕ್ಕ ಪ್ರತಿಕ್ರಿಯೆ ಮಾಡುವುದರೊಳಗೆ ಇಂ
ಜಿತ್ತು ಮತ್ತೊಂದು ಕಡೆಗೆ ಹೋಗುತ್ತಿದ್ದನು. ಅ
ಅವನು ವಿಜಯದ ಸಂತೋಷದಿಂದ ರಾಕ್ಷಸರ
ಕುರಿತು, "ನೋಡಿ ನೋಡಿ! ರಾಮಲಕ್ಷ್ಮ
ಪರಾಕ್ರಮವು ನನ್ನ ಮುಂದೆ ಏನೂ ನಿಲ್ಲಲಿ
ಅವರನ್ನು ನನ್ನ ಬಾಣಗಳಿಂದ ಕಟ್ಟಿಹಾಕಿಬಿಟ್ಟೆ.
ಬಂಧನದಿಂದ ಅವರನ್ನು ಬಿಡಿಸಲು ಯಾರಿಗ
ಸಾಧ್ಯವಿಲ್ಲ. ಅವರಿಬ್ಬರೂ ನನ್ನ ಕೈಯಲ್ಲೇ ಸಾ
ವರು. ಬಿದ್ದವರು ಇನ್ನು ಏರಲಾರರು. ಸತ್ತರೆಂ
ತಿಳಿಯಿರಿ"

ಹೀಗೆ ಹೇಳುತ್ತಾ ಇಂದ್ರಜಿತ್ತು ತನ್ನ ಬಾಣಗಳಿ
ವಾನರ ವೀರರನ್ನು ನೋಯಿಸತೊಡಗಿದನು.
ಸರು ಇಂದ್ರಜಿತ್ತುವನ್ನು ಕೊಂಡಾಡತೊಡಗಿದ
ಕದಲದೆ ಬಿದ್ದಿರುವ ರಾಮಲಕ್ಷ್ಮಣರನ್ನು ನೋ
ಅವರು ಸತ್ತುಹೋದರೆಂದುಕೊಂಡು ಇಂದ್ರಜಿ
ಲಂಕಾನಗರದೊಳಗೆ ಹೊರಟುಹೋದನು. ರಾಕ್ಷ
ಸಂತೋಷದಿಂದ ಅವನಿಗೆ ಬಾಯ್ತುಂಬ
ಜಯಕಾರ ಮಾಡುತ್ತಿದ್ದರು.

ಸುಗ್ರೀವನು ಕೂಡಾ ರಾಮಲಕ್ಷ್ಮಣರ ಶ
ಗಳನ್ನು ಪೂರ್ತಿ ಮುಚ್ಚಿಹಾಕಿದ ಕ್ರೂರ ಬಾಣಗ
ನೋಡಿ ತುಂಬಾ ಹೆದರಿದನು. ಅವನು ಸರ್ವ
ವಾಗಿ ಹೋದಂತೆ ಅಳುತ್ತಿರುವುದನ್ನು ನೋ
ವಿಭೀಷಣನು, "ಸುಗ್ರೀವಾ, ಹೆದರಬೇಡ.
ವನ್ನು ನಿಲ್ಲಿಸು. ಯುದ್ಧವೆಂದರೆ ಹೀಗೇ ಇರು
ಯಾವಾಗಲೂ ವಿಜಯವೇ ಸಿಗಲು ಸಾಧ್ಯ
ರಾಮಲಕ್ಷ್ಮಣರು ಮೂರ್ಛೆ ಹೋಗಿದ್ದಾರೆ,
ಸ್ವಲ್ಪ ಹೊತ್ತಿನಲ್ಲಿ ಅವರಿಗೆ ಎಚ್ಚರವಾಗುತ್ತ
ನಂಬು." ಎಂದು ಹೇಳುತ್ತಾ ಸುಗ್ರೀವನ ಕಣ್ಣ
ತನ್ನ ಶಾಲುವೆಯಿಂದ ಒರೆಸಿದನು.


Sankar

ಇಂದ್ರಜಿತ್ತು ಲಂಕೆಯೊಳಗೆ ಹಿಂದಿರುಗಿ ತನ್ನ ತಂದೆಯನ್ನು ನೋಡಿ, "ರಾಮಲಕ್ಷ್ಮರನ್ನು ಕೊಂದು ಬಿಟ್ಟೆ. ಇನ್ನು ಅವರ ಭಯವಿಲ್ಲ. ಉಳಿದವರೆಲ್ಲ ಅಲ್ಪ ಪಿಳ್ಳೆಗಳು !." ಎಂದು ಹೇಳಿದನು.

ಮಗನ ಮಾತನ್ನೂ ಸಂತೋಷವನ್ನು ನೋಡಿ ರಾವಣನು ಪರಮಾನಂದದಿಂದ ಆಸನದಿಂದೆದ್ದು ತನ್ನ ಮಗನನ್ನು ಆಲಿಂಗಿಸಿದನು. ಆಮೇಲೆ ರಾಮಲಕ್ಷ್ಮಣರ ವಧೆ ಹೇಗಾಯಿತೆಂಬುದನ್ನು ಮಗನ ಬಾಯಿಯಿಂದಲೇ ಕೇಳಿ ಇನ್ನಷ್ಟು ಸಂತೋಷಪಟ್ಟನು.

ಆಮೇಲೆ ಇಂದ್ರಜಿತ್ತುವನ್ನು ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳಿಕಳುಹಿಸಿ, ಸೀತೆಗೆ ಕಾವಲಾಗಿರುವ ರಾಕ್ಷಸ ಸ್ತ್ರೀಯರನ್ನು ಕರೆಯಿಸಿದನು. ತ್ರಿಜಟೆಯೇ ಮೊದಲಾದ ಎಲ್ಲಾ ರಾಕ್ಷಸ ಸ್ತ್ರೀಯರೂ ಬಂದರು. ರಾವಣನು ಅವರೊಂದಿಗೆ, "ನಮ್ಮ ಇಂದ್ರಜಿತ್ತು ರಾಮಲಕ್ಷ್ಮಣರನ್ನು ಕೊಂದುಬಿಟ್ಟನೆಂದು ಸೀತೆಯೊಂದಿಗೆ ಹೇಳಿರಿ. ಅವಳನ್ನು ಪುಷ್ಪಕ ವಿಮಾನದಲ್ಲೇರಿಸಿ ಕರೆದುಕೊಂಡು ಹೋಗಿ ಸತ್ತುಬಿದ್ದಿರುವ ರಾಮಲಕ್ಷ್ಮಣರನ್ನು ತೋರಿಸಿರಿ. ಇನ್ನು ಮೇಲೆ ಸೀತೆ ರಾಮಲಕ್ಷ್ಮಣರ ಮೇಲಿನ ಆಶೆಯನ್ನು ಬಿಟ್ಟು ಚೆನ್ನಾಗಿ ಅಲಂಕಾರ ಮಾಡಿಕೊಂಡು ನನ್ನನ್ನು ವರಿಸಿಕೊಳ್ಳಬಹುದು. ಬೇರೆ ಗತಿಯಾದರೂ ಅವಳಿಗೆ ಇನ್ನೇನ್ನಿದೆ ?" ಎಂದನು.

ಅದರಂತೆ ರಾಕ್ಷಸ ಸ್ತ್ರೀಯರು ಪುಷ್ಪಕ ವಿಮಾನವನ್ನು ತೆಗೆದುಕೊಂಡು ಅಶೋಕವನದಲ್ಲಿರುವ ಸೀತೆಯ ಬಳಿಗೆ ಹೋಗಿ ಸೀತೆಯನ್ನು ಅದರಲ್ಲಿ ಕುಳ್ಳಿರಿಸಿ ರಾಮಲಕ್ಷ್ಮಣರನ್ನು ತೋರಿಸಲು ಕರೆದುಕೊಂಡುಹೋದರು. ತ್ರಿಜಟೆಯೂ ಸೀತೆಯೊಂದಿಗೆ ಪುಷ್ಪಕದಲ್ಲಿದ್ದಳು.

ರಾವಣನು ಲಂಕೆಯಲ್ಲಿ ವಿಜಯಪತಾಕೆಯನ್ನು ಹಾರಿಸಿ ಭಾರೀ ಅಲಂಕಾರಗಳನ್ನು ಮಾಡಲು ಅಪ್ಪಣೆ ಮಾಡಿದನು. ಇಂದ್ರಜಿತ್ತು ರಾಮಲಕ್ಷ್ಮಣರನ್ನು ಕೊಂದನೆಂದು ಎಲ್ಲರಿಗೂ ತಿಳಿಯುವಂತೆ ಡಂಗುರ ಹೊಡೆಯಿಸಿದನು.

ಸೀತೆ ರಾಕ್ಷಸರ ಕೋಲಾಹಲವನ್ನು ನೋಡಿದಳು. ಅವರು ಮಹಾ ಸಂತೋಷದಲ್ಲಿ ಕುಣಿಯುತ್ತಿದ್ದಾರೆ. ವಾನರರೆಲ್ಲ ದುಃಖದಲ್ಲಿರುವುದನ್ನು ಕೂಡಾ ನೋಡಿದಳು. ಬಾಣಗಳಿಂದ ಮುಚ್ಚಲ್ಪಟ್ಟು ಬಿದ್ದಿರುವ ರಾಮಲಕ್ಷ್ಮಣರನ್ನೂ ಸೀತೆ ನೋಡಿದಳು. ಅವಳಿಗೆ ದುಃಖವನ್ನು ತಾಳಲಾಗಲಿಲ್ಲ. ಇದೂ ರಾಕ್ಷಸರ ಮಾಯೆಯೇನೋ ಎಂಬಂತೆ ತ್ರಿಜಟೆಯ ಮುಖವನ್ನು ನೋಡಿದಳು. ತ್ರಿಜಟೆ ಸುಮ್ಮನಿರುವುದನ್ನು ನೋಡಿ ಸೀತೆಗೆ ಭಯವೂ ದುಃಖವೂ ಮೇಲೆ ಮೇಲೆ ಉಕ್ಕ ತೊಡಗಿತು. ಮನಸ್ಸಿಗೆ ಏನೇನೋ ತೋರತೊಡಗಿತು.





October 1976

ವೀರಹನುಮಾನ್

ಆಗ ಮೂರ್ಛೆಬಿದ್ದಿರುವ ರಾಮಲಕ್ಷ್ಮಣರನ್ನು ನೋಡಲು ವಿಭೀಷಣನು ಬೇಗಬೇಗನೇ ಅಲ್ಲಿಗೆ ಬಂದನು. ದುಃಖದಿಂದಲೂ ಭೀತಿಯಿಂದಲೂ ಭ್ರಮೆ ಹಿಡಿದವರಂತಿದ್ದ ವಾನರರು ವಿಭೀಷಣನನ್ನು ಇಂದ್ರಜಿತ್ತು ಎಂದುಕೊಂಡು ಹೆದರಿ ಆಚೆಗೂ ಈಚೆಗೂ ಓಡತೊಡಗಿದರು. ಆಗ ಸುಗ್ರೀವನ ಆದೇಶದಂತೆ ಜಾಂಬವಂತನು ವಾನರರೊಂದಿಗೆ, "ನಿಲ್ಲಿ ನಿಲ್ಲಿ, ಬಂದವನು ವಿಭೀಷಣ, ಇಂದ್ರಜಿತ್ತು ಅಲ್ಲ" ಎಂದು ಹೇಳಿದನು. ಆಗ ವಾನರರಲ್ಲಿ ಸಮಾಧಾನ ನೆಲೆಸಿತು.

ರಾಮಲಕ್ಷ್ಮಣರ ಸ್ಥಿತಿಯನ್ನು ನೋಡಿ ವಿಭೀಷಣನಿಗೂ ಕೆಟ್ಟ ಸಂದೇಹವೆದ್ದು ಚಿಂತೆಯುಂಟಾಯಿತು. ಅವನಿಗೆ ತಾನು ಲಂಕೆಗೆ ರಾಜನಾಗುವೆನೆಂಬ ಆಶೆ ಇನ್ನಿಲ್ಲವೆನಿಸಿತು.


"ಸುಗ್ರೀವಾ, ಇನ್ನೂ ಇವರು ಹೀಗೆಯೇ ಇರುವರಲ್ಲಾ!" ಎಂದು ಮರುಗಿದನು ವಿಭೀಷಣ. ಸುಗ್ರೀವನು ವಿಭೀಷಣನನ್ನು ಆಲಿಂಗಿಸಿಕೊಂಡು, "ವಿಭೀಷಣಾ, ಆಗಲೇ ರಾವಣನೂ ಇಂದ್ರಜಿತ್ತೂ ಗೆದ್ದುಬಿಟ್ಟರೆಂದುಕೊಳ್ಳಬೇಡ. ರಾಮಲಕ್ಷ್ಮಣರಿಗೆ ಪ್ರಾಣಾಪಾಯವಾಗಲು ಸಾಧ್ಯವಿಲ್ಲ. ನೀನು ಲಂಕೆಗೆ ರಾಜನಾಗದಿರಲೂ ಸಾಧ್ಯವಿಲ್ಲ. ಇವರ ಮೂರ್ಛೆ ತಿಳಿಯಲು ಸ್ವಲ್ಪ ಹೊತ್ತಾಗಬಹುದು, ಅಷ್ಟೇ. ಆಮೇಲೆ ಇಮ್ಮಡಿಮುಮ್ಮಡಿ ಬಲದಿಂದ ಶತ್ರುಗಳನ್ನು ನಾಶ ಮಾಡಿಬಿಡುತ್ತಾರೆ." ಎಂದನು.

ತರುವಾಯ ಸುಗ್ರೀವನು ತನ್ನ ಮಾವನಾದ ಸುಷೇಣನೊಂದಿಗೆ, "ರಾಮಲಕ್ಷ್ಮಣರು ಮೂರ್ಛೆಯಿಂದೆದ್ದ ಕೂಡಲೇ ಇವರನ್ನೂ ಕೆಲಮಂದಿ ವಾನರ ವೀರರನ್ನೂ ಕರೆದುಕೊಂಡು ಕಿಷ್ಕಿಂಧೆಗೆ ಹೊರಟು ಹೋಗು. ನಾನು ರಾವಣನನ್ನು ಅವನ ಬಂಧುಮಿತ್ರ ಪರಿವಾರಗಳೊಂದಿಗೆ ಕೊಂದು ಸೀತೆಯನ್ನು ಕರೆದುಕೊಂಡು ಬರುತ್ತೇನೆ." ಎಂದನು.

ಸುಷೇಣನು ಸುಗ್ರೀವನೊಂದಿಗೆ, "ಪೂರ್ವಕಾಲದಲ್ಲಿ ದೇವತೆಗಳಿಗೂ ದಾನವರಿಗೂ ಎಷ್ಟೋಬಾರಿ ಯುದ್ಧಗಳು ನಡೆದಿದ್ದುವು. ಆಗ ಕೂಡಾ ರಾಕ್ಷಸರು

೨೪. ಗರುತ್ಮಂತನ ಸಹಾಯ

24-1



ಅಷ್ಟು ದೂರದಲ್ಲಿ ಬರುತ್ತಿರುವಾಗಲೇ ರಾಮ
ಲಕ್ಷ್ಮಣರನ್ನು ಬಾಣಗಳ ರೂಪದಲ್ಲಿ ಬಂಧಿಸಿ
ಸರ್ಪಗಳು ಹೆದರಿ ಚಡಪಡಿಸಿಕೊಂಡು ದಿಕ್ಕುದಿಕ್ಕಿ
ಓಡಿಹೋದುವು.

ಗರುತ್ಮಂತನು ರಾಮಲಕ್ಷ್ಮಣರ ಬಳಿಯ
ಇಳಿದು ಅವರ ಸರ್ವಾಂಗವನ್ನೂ ಮೃದುವಾಗಿ ಪು
ದನು. ಮರುಕ್ಷಣದಲ್ಲಿ ಅವರ ಶರೀರದಲ್ಲಿದ್ದ ಗಾಯ
ಗಳು ಮಾಯವಾದುವು. ಆಮೇಲೆ ಗರುತ್ಮಂತ
ಅವರಿಬ್ಬರನ್ನೂ ಆಲಿಂಗಿಸಿಕೊಂಡನು.

ರಾಮನು ಅವನೊಂದಿಗೆ "ನಿಮ್ಮ ದಯದಿಂ
ನಾವು ಎಂದಿನಂತೆ ಕದಲುವ ಶಕ್ತಿಯುಳ್ಳವರಾದೆ
ನಿಮ್ಮನ್ನು ನೋಡುವಾಗ ನಮಗೆ ನಮ್ಮ ತಂ
ದಶರಥ ಮಹಾರಾಜರನ್ನೂ ನಮ್ಮ ತಾತ ಅ
ಮಹಾರಾಜರನ್ನೂ ನೋಡುವ ಹಾಗೇ ಅನಿಸುತ್ತ
ಅವರನ್ನು ನೋಡಿದಷ್ಟು ಆನಂದವೂ ಆಗುತ್ತ
ನಿಮ್ಮ ದಿವ್ಯವಾದ ವಸ್ತ್ರ ಮತ್ತು ಆಭರಣಗಳ
ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ನೀ
ಯಾರೋ ?" ಎಂದನು.

ಗರುತ್ಮಂತನು ಆನಂದಬಾಷ್ಪ ಸುರಿಸು
"ರಾಮಾ, ನಾನು ನಿನಗೆ ಸ್ನೇಹಿತನು. ಸನ್ನಿ
ನಾದವನು. ನಿನ್ನ ಪ್ರಾಣದಂತಹವನು. ನನ್ನ ಹೆ
ಗರುತ್ಮಂತ. ನಿಮಗಿಬ್ಬರಿಗೂ ಸಹಾಯ ಮಾ
ಲಿಕ್ಕಾಗಿಯೇ ಬಂದೆ. ಈ ಬಾಣಪಾಶಗಳು ನಿಜಕ್ಕ
ಸರ್ಪಗಳೇ. ಇವುಗಳಿಂದ ಬಿಡಿಸಿಕೊಳ್ಳಲು ಯಾರಿ
ಸಾಧ್ಯವಾಗಲಾರದು. ಅಂತೆಯೇ ನಿಮಗೆ
ಸ್ಥಿತಿಯನ್ನು ಕುರಿತು ಕೇಳಿದ ಕೂಡಲೇ ಓಡು
ಬಂದೆ. ನಿಮ್ಮನ್ನು ನಾಗಪಾಶಗಳಿಂದ ಬಿಡಿಸಿದೆ.
ಯುದ್ಧದಲ್ಲಿ ನೀವು ಸ್ವಲ್ಪವೂ ಎಚ್ಚರ ತಪ್ಪಬಾರ
ರಾಕ್ಷಸರನ್ನು ನಂಬಬಾರದೆಂದು ಈಗ ನಿಮ
ಪ್ರತ್ಯಕ್ಷ ಗೊತ್ತಾಯಿತಷ್ಟೆ ? ಅವರ ಮುಂದೆ ನ್ಯಾ
ಯುದ್ಧವನ್ನು ನಂಬಕೂಡದು. ಅವರು ಮಾ

ಮಾಯಾ ಯುದ್ಧಗಳನ್ನು ಮಾಡಿ ಅನೇಕ ದೇವತೆಗಳನ್ನು ಹತ ಮಾಡಿದರು. ಕೆಲವು ದೇವತೆಗಳು ಮೂರ್ಛೆಬಿದ್ದರೆ ಕೆಲವು ದೇವತೆಗಳು ಸತ್ತರು. ಆಗ ದೇವತೆಗಳ ಗುರುವಾದ ಬೃಹಸ್ಪತಿ ಮೃತಸಂಜೀವಿನೀ ವಿದ್ಯೆಯಿಂದಲೂ, ಮೂಲಿಕೆಗಳಿಂದಲೂ ಚಿಕಿತ್ಸೆ ಮಾಡಿ ಬದುಕಿಸಿದನು. ಸಂಜೀವಕರಣಿ, ವಿಶಲ್ಯಕರಣಿ ಎಂಬ ಔಷಧಗಳು ಕ್ಷೀರಸಮುದ್ರದ ಬಳಿಯ ಗುಡ್ಡಗಳಲ್ಲಿವೆ. ಪೂರ್ವಕಾಲದಲ್ಲಿ ಕ್ಷೀರಸಾಗರಮಥನವು ನಡೆದ ಸ್ಥಳದಲ್ಲಿ ಚಂದ್ರಪರ್ವತವೂ ದ್ರೋಣಪರ್ವತವೂ ಇವೆ. ಆ ಪರ್ವತಗಳಲ್ಲಿಯೇ ಈ ಔಷಧದ ಮೂಲಿಕೆಗಳಿವೆ. ಅಲ್ಲಿಗೆ ಹನುಮಂತನನ್ನು ಕಳುಹಿಸಿ ಬಿಡು." ಎಂದನು.


ಅಷ್ಟರಲ್ಲಿ ಪ್ರಳಯಕಾಲದ ಗಾಳಿ ಬೀಸಿದಂತೆ ಮರಗಳು ಮುರಿದು ಬೀಳುತ್ತಿರಲು, ಪ್ರಾಣಿಗಳೆಲ್ಲ ಹೆದರಿ ಆಚೀಚೆ ಓಡುತ್ತಿರಲು, ಆಕಾಶದಲ್ಲಿ ಗರುತ್ಮಂತನು ಬರುವುದು ಕಾಣಿಸಿತು. ಗರುತ್ಮಂತನು

ಯುದ್ಧ ಮಾಡುವವರು" ಎಂದನು. ತರುವಾಯ ಗರುತ್ಮಂತನು ಹೊರಟುಹೋಗಲು ಸಿದ್ಧನಾಗಿ ರಾಮನ ಅಪ್ಪಣೆ ಕೇಳುತ್ತ, "ರಾಮಾ, ನಾನು ನಿನಗೆ ಹೇಗೆ ಸ್ನೇಹಿತನಾಗುವೆನೆಂದು ಈಗ ಕೇಳ ಬೇಡ. ಈ ಯುದ್ಧದಲ್ಲಿ ವಿಜಯವಾದ ಮೇಲೆ ಆ ಸಂಗತಿ ನಿನಗೇ ಗೊತ್ತಾಗುತ್ತದೆ. ಯುದ್ಧವು ಮುಗಿದುಹೋದ ಮೇಲೆ ಲಂಕೆಯಲ್ಲಿ ಚಿಕ್ಕಮಕ್ಕಳೂ ಮುದುಕರೂ ಮಾತ್ರ ಉಳಿದಿರುತ್ತಾರೆ. ರಾವಣನು ಸಾಯುತ್ತಾನೆ. ಸೀತೆ ನಿನಗೆ ದಕ್ಕುತ್ತಾಳೆ. ಎಲ್ಲಾ ಶುಭವಾಗುತ್ತದೆ" ಎಂದು ಹೇಳಿ ರಾಮಲಕ್ಷ್ಮಣರಿಗೆ ಪ್ರದಕ್ಷಿಣೆ ಮಾಡಿ ಅವರನ್ನು ಆಲಿಂಗಿಸಿ ಆಕಾಶ ಮಾರ್ಗದ ಮೇಲೆ ಹಾರಿ ಹೊರಟುಹೋದನು.

ರಾಮಲಕ್ಷ್ಮಣರು ಎಂದಿನಂತೆ ಹೊಸ ಉತ್ಸಾಹ ದಲ್ಲಿರುವುದನ್ನು ನೋಡಿ, ವಾನರರು ಬಾಲ ಹಾರಿ ಸುತ್ತ ಆನಂದದಿಂದ ಸಿಂಹನಾದ ಮಾಡಿದರು. ಭೇರಿ ಗಳೂ ಮೃದಂಗಗಳೂ ಮೊಳಗತೊಡಗಿದುವು. ವಾನ ರರು ಮರಗಳನ್ನು ಕಿತ್ತು ಲಂಕೆಯ ದ್ವಾರಗಳನ್ನು ಮುತ್ತಿಗೆ ಹಾಕಲು ಬಂದರು. ಅಷ್ಟು ಹೊತ್ತಿಗೆ ಅರ್ಧ ರಾತ್ರಿಯಾಯಿತು.

ಅಂತಹ ಹೊತ್ತಿನಲ್ಲಿ ವಾನರರು ಮಾಡುವ ಸಿಂಹ ನಾದಗಳನ್ನೂ ಕೋಲಾಹಲ ಧ್ವನಿಗಳನ್ನೂ ಎಲ್ಲಾ ರಾಕ್ಷಸರೂ ಕೇಳಿ ಬೆಚ್ಚಿಬಿದ್ದರು. ರಾವಣನಿಗೂ ಆ ಧ್ವನಿಗಳು ಕೇಳಿಸಿದುವು.


ಕೂಡಲೇ ರಾವಣನು ತನ್ನ ಮಂತ್ರಿಗಳನ್ನು ಬರ ಮಾಡಿ, "ಇದೇನಿದು ವೀರಾವೇಶದ ಧ್ವನಿಗಳು ? ವಾನರರು ತುಂಬ ಸಂತೋಷದಲ್ಲಿರುವ ಹಾಗಿದೆ ಇಲ್ಲಾ ? ರಾಮಲಕ್ಷ್ಮಣರನ್ನು ನೋಡಿ ಅಳುತ್ತಾ ಇರಬೇಕಾದವರು ಸಂತೋಷದಿಂದ ಕುಣಿಯಲಿಕ್ಕೆ ಏನಾಗಿದ್ದೀತು ?" ಎಂದು ಹೇಳಿ, ಕಾರಣವನ್ನು ತಿಳಿದುಕೊಂಡು ಬೇಗನೆ ಬರಲು ಕೆಲವು ಮಂದಿ ರಾಕ್ಷಸರನ್ನು ಕಳುಹಿಸಿದನು.



ಅವರು ಅತ್ತ ಓಡುತ್ತಾ ಹೋಗಿ ಎತ್ತರವಾದ ಪ್ರಾಕಾರಗಳ ಮೇಲೆ ಹತ್ತಿ, ಯುದ್ಧವನ್ನು ಆಹ್ವಾನಿಸುವ ವಾನರರನ್ನೂ, ಬಾಣಪಾಶಗಳಿಂದ ಬಿಡುಗಡೆಯಾಗಿ ಧನುರ್ಬಾಣಗಳೊಂದಿಗೆ ಸಿದ್ಧರಾಗಿರುವ ರಾಮಲಕ್ಷ್ಮಣರನ್ನೂ ನೋಡಿ, ಬೇಗನೇ ರಾವಣನ ಬಳಿಗೆ ಹಿಂದಿರುಗಿ ಬಂದು ತಾವು ನೋಡಿದುದನ್ನೆಲ್ಲಾ ಹೇಳಿದರು.

ರಾಮಲಕ್ಷ್ಮಣರು ಇಂದ್ರಜಿತ್ತುವಿನ ಬಾಣಪಾಶ ಗಳಿಂದ ಬಂಧಿಸಲ್ಪಟ್ಟು ಹತರಾದರೆಂದು ತಿಳಿದಿದ್ದ ರಾವಣನು ಈ ಸಮಾಚಾರ ಕೇಳಿ ತಬ್ಬಿಬ್ಬಾದನು. ವಾಸುಕಿ ಸರ್ಪಗಳಿಗೆ ಸಮಾನವಾದ ಬಾಣಗಳು ನಿಷ್ಪ್ರಯೋಜನವಾದುವು.

ಆಮೇಲೆ ಅವನು ಧೈರ್ಯವಹಿಸಿ ಧೂಮ್ರಾ ಕ್ಷನೆಂಬ ರಾಕ್ಷಸವೀರನೊಂದಿಗೆ, "ನೀನು ದೊಡ್ಡ ಸೇನೆಯೊಂದಿಗೆ ಈಗಲೇ ಹೋಗಿ ವಾನರರನ್ನೂ ರಾಮಲಕ್ಷ್ಮಣರನ್ನೂ ಏಳಲಾಗದಂತೆ ಕಡಿದು



ಕೊಂದೇ ಬಂದುಬಿಡು" ಎಂದು ಅಪ್ಪಣೆ ಕೊಟ್ಟನು. ಧೂಮ್ರಾಕ್ಷನು ತತ್‌ಕ್ಷಣವೇ ಹೊರಟು, ಸೇನಾಧ್ಯಕ್ಷನೊಂದಿಗೆ ತಾನು ಯುದ್ಧಕ್ಕೆ ಹೋಗುವೆನೆಂದೂ ತನಗಾಗಿ ಸೇನೆಗಳನ್ನು ಸಿದ್ಧಮಾಡಿ ಕೊಡಬೇಕೆಂದೂ ಹೇಳಿದನು. ಆ ಕೂಡಲೇ ಧೂಮ್ರಾಕ್ಷನ ಮಹಾಸೇನೆ ಸಿದ್ಧವಾಯಿತು. ಕ್ರೂರವಾದ ಬಗೆಬಗೆಯ ಆಯುಧಗಳನ್ನು ಧರಿಸಿದ ರಾಕ್ಷಸರನೇಕರು ಆ ಸೇನೆಯಲ್ಲಿದ್ದರು. ಅವರನ್ನು ತನ್ನೊಂದಿಗೆ ಕರೆದುಕೊಂಡು, ಉತ್ತಮವಾದ ರಥದ ಮೇಲೇರಿ, ಧೂಮ್ರಾಕ್ಷನು ಪಡುವಣದ್ವಾರದ ಬಳಿಗೆ ಹೋದನು.

ಯುದ್ಧದ ಗದ್ದಲದಿಂದ ಬಂದ ಧೂಮ್ರಾಕ್ಷನನ್ನು ನೋಡಿ ವಾನರರು ಸಿಂಹನಾದಮಾಡಿ ವಿಜೃಂಭಿಸಿದರು. ಬಾ ಬಾ ಎಂದು ಕೂಗುತ್ತ ಸಿಡಿಲಿನಂತೆ ತೋಳು ತೊಡೆಗಳನ್ನು ತಟ್ಟಿದರು. ಉಭಯ ಪಕ್ಷಗಳಿಗೂ ಯುದ್ಧವು ಪ್ರಾರಂಭವಾಯಿತು. ರಾಕ್ಷಸರ ಆಯುಧಗಳಿಂದ ಹೊಡೆತ ತಿನ್ನುತ್ತ ನೊಂದ ವಾನರರು ಬಂಡೆಗಲ್ಲುಗಳಿಂದಲೂ ಮರಗಳಿಂದಲೂ ರಾಕ್ಷಸರನ್ನು ಹೊಡೆಯುತ್ತಿದ್ದರು. ಒಟ್ಟಿನ ಮೇಲೆ ಹೆಚ್ಚುಮಂದಿ ರಾಕ್ಷಸರೇ ಸತ್ತರು. ಕಡೆಗೆ ರಾಕ್ಷಸರು ಹಿಂದಿರುಗಿ ಓಡತೊಡಗಿದಾಗ ಧೂಮ್ರಾಕ್ಷನು ಅಟ್ಟಹಾಸಮಾಡುತ್ತ ಅವರಿಗೆ ಹೊಸ ಉತ್ಸಾಹ ಮೂಡಿಸುತ್ತ ಓಡಿಸಿಕೊಂಡು ಬರುವ ವಾನರರನ್ನು ಭಯಂಕರವಾಗಿ ಹೊಡೆಯತೊಡಗಿದನು. ಅದನ್ನು ನೋಡಿ ಹನುಮಂತನಿಗೆ ಸಹಿಸಲಾಗಲಿಲ್ಲ. ಅವನು ಅತ್ಯಂತ ಕೋಪದಿಂದ ದೊಡ್ಡ ಶಿಲೆಯೊಂದಿಗೆ ಧೂಮ್ರಾಕ್ಷನ ಮುಂದೆ ಹಾರಿ, ಅವನ ರಥದ ಮೇಲೆ ಶಿಲೆಯನ್ನು ಬೀಸಿ ಒಗೆದನು. ರಥವು ಪುಡಿಪುಡಿಯಾಗಿ ಹೋಯಿತು. ತನ್ನ ರಥದ ಮೇಲೆ ಬೀಳುವ ಶಿಲೆಯನ್ನು ನೋಡುತ್ತಲೇ ಧೂಮ್ರಾಕ್ಷನು ಗದೆ ತೆಗೆದುಕೊಂಡು ನೆಲಕ್ಕೆ ಹಾರಿ ನಿಂತುಬಿಟ್ಟನು.

ಆಗ ಹನುಮಂತನು ಮರಗಳ ಕಾಂಡಗಳನ್ನೂ ಕೊಂಬೆಗಳನ್ನೂ ತೆಗೆದುಕೊಂಡು ರಾಕ್ಷಸರನ್ನು ಬಿರುಗಾಳಿಯ ವೇಗದಲ್ಲಿ ಸದೆಬಡಿಯತೊಡಗಿದನು. ಬದುಕುಳಿದ ರಾಕ್ಷಸರೆಲ್ಲ ಓಡಿದ ಮೇಲೆ ಹನುಮಂತನು ಧೂಮ್ರಾಕ್ಷನ ಮೇಲೆ ಏರಿ ಬಂದನು.

ಧೂಮ್ರಾಕ್ಷನು ಹನುಮಂತನನ್ನು ಇದಿರಿಸುತ್ತ ಗದೆಯಿಂದ ಹನುಮಂತನ ತಲೆಯ ಮೇಲೆ ಹೊಡೆದನು. ಹನುಮಂತನು ಆ ಏಟನ್ನು ಸ್ವಲ್ಪವೂ ಗಣ್ಯಮಾಡದೆ ಧೂಮ್ರಾಕ್ಷನ ಮೇಲೆ ಒಂದು ದೊಡ್ಡ ಕರೀ ಬಂಡೆಯನ್ನು ಎತ್ತಿ ಹಾಕಿದನು. ಅದರಿಂದ ಧೂಮ್ರಾಕ್ಷನು ನೆಲಕ್ಕೆ ಜಜ್ಜಲ್ಪಟ್ಟು ಸತ್ತುಹೋದನು. ಅದನ್ನು ನೋಡಿ ವಾನರರು ಲಂಗುಲಗಾಮಿಲ್ಲದ ಉತ್ಸಾಹದಿಂದ ರಾಕ್ಷಸರ ಮೇಲೆ ಬಿದ್ದರು. ರಾಕ್ಷಸರು ಹೆದರಿ ಓಡಿ ಲಂಕೆಯೊಳಗೆ ತೂರಿಕೊಂಡರು. ಎಲ್ಲಾ ವಾನರರೂ ಹನುಮಂತನನ್ನು ಬಹಳವಾಗಿ ಮೆಚ್ಚಿ ಕೊಂಡಾಡಿದರು. ಧೂಮ್ರಾಕ್ಷನು ಗುರುತು ಸಿಕ್ಕ ಹಾಗೆ ಸತ್ತ ಸಂಗತಿಯನ್ನು ಕೇಳಿ ರಾವಣ

24-4

ಕೋಪಸಂತಾಪಗಳಿಂದ ಕೆರಳಿ, ವಜ್ರದಂಷ್ಟ್ರನೆಂಬ ಮಹಾವೀರ ರಾಕ್ಷಸನನ್ನು ನೋಡಿ, "ನೀನು ಕೂಡಲೇ ಹೋಗಿ, ಅವರಿಗೆ ವಿಶ್ರಾಂತಿಗೆ ಅವಕಾಶ ಕೊಡದೆ ರಾಮಲಕ್ಷ್ಮಣ ಸುಗ್ರೀವರೆಲ್ಲರನ್ನೂ ಕೊಂದೇ ಬಂದುಬಿಡು !" ಎಂದನು.

ವಜ್ರದಂಷ್ಟ್ರನು ಮಾಯಾಯುದ್ಧಗಳನ್ನು ಕೂಡ ಬಲ್ಲವನು. ಅವನು ಕವಚವನ್ನು ಧರಿಸಿ, ಧನುರ್ಬಾಣಗಳನ್ನು ತೆಗೆದುಕೊಂಡು ರಥವನ್ನೇರಿ ದೊಡ್ಡ ಸೇನೆಯೊಂದಿಗೆ ಯುದ್ಧಕ್ಕೆ ಹೊರಟನು. ಅವನೊಂದಿಗೆ ಅಂಗರಕ್ಷಕರಾಗಿ ಬಳಸಿಕೊಂಡು ಒಳ್ಳೊಳ್ಳೆಯ ಅಸ್ತ್ರಶಸ್ತ್ರಗಳನ್ನು ಧರಿಸಿದ ರಾಕ್ಷಸವೀರರೂ ಹೊರಟಿದ್ದರು.

ವಜ್ರದಂಷ್ಟ್ರನ ರಾಕ್ಷಸಸೇನೆಗಳು ಲಂಕಾನಗರದ ದಕ್ಷಿಣದ್ವಾರದ ಮೂಲಕವಾಗಿ ಹೊರಗೆ ಬಂದುವು. ಅಂಗದನು ಅಲ್ಲಿ ಮುತ್ತಿಗೆ ಹಾಕಿದ್ದನು. ರಾಕ್ಷಸರನ್ನು ನೋಡಿದ ಕೂಡಲೇ ವಾನರರು ಅವರ ಮೇಲೆ ಧುಮುಕಿದರು. ವಾನರರಾಕ್ಷಸರ ಮಧ್ಯೆ ದೊಡ್ಡ ಯುದ್ಧವು ನಡೆಯುತೊಡಗಿತು. ಆ ಯುದ್ಧದಲ್ಲಿ ರಾಕ್ಷಸರು ಅನೇಕಮಂದಿ ವಾನರರನ್ನು ಕೊಲ್ಲುವುದನ್ನು ನೋಡಿ ಅಂಗದನು ಉರಿದುಬಿದ್ದು ದಾರುಣವಾಗಿ ರಾಕ್ಷಸರನ್ನು ವಧಿಸುತ್ತಹೋದನು. ಅವನ ಬಳಿಗೆ ಬಂದ ಪ್ರತಿಯೊಬ್ಬ ರಾಕ್ಷಸನೂ ತಲೆ ಒಡೆದು ಸತ್ತುಬೀಳುತ್ತಿದ್ದನು. ಸತ್ತ ವಾನರರ ಸಂಖ್ಯೆಗಿಂತಲೂ ಸತ್ತ ರಾಕ್ಷಸರ ಸಂಖ್ಯೆಯೇ ಬಹಳ ಹೆಚ್ಚಾಯಿತು.

ಅಂಗದನ ವಿಜೃಂಭಣವನ್ನು ತಾಳಲಾಗದೆ ರಾಕ್ಷಸರ ಬಲ ಛಿದ್ರಛಿದ್ರವಾಗುವುದನ್ನು ನೋಡಿ ವಜ್ರದಂಷ್ಟ್ರನಿಗೆ ಬಹಳ ಕೋಪ ಬಂದಿತು. ಕೇಳಿದವರ ಎಲುಬು ಪುಡಿಯಾಗುವಂತಹ ಕಟಕಟಶಬ್ದದಿಂದ ಹಲ್ಲುಗಳನ್ನು ಕಡಿದುಕೊಂಡನು. ಅವನು ವಾನರಸೇನೆಯ ಮೇಲೆ ಒಂದೇಸವನೆ ಬಾಣವರ್ಷ ಕರೆಯುತೊಡಗಿದನು.



ಕಡೆಗೆ ಅಂಗದನೂ ವಜ್ರದಂಷ್ಟ್ರನೂ ಒಬ್ಬರನ್ನೊಬ್ಬರು ನೇರಾಗಿ ಇದಿರಿಸುವಂತಾಯಿತು. ಅವರೊಳಗೆ ಹೋರಾಹೋರಿಯಾಗಿ ನಡೆದ ದ್ವಂದ್ವ ಯುದ್ಧದಲ್ಲಿ ಅಂಗದನು ವಜ್ರದಂಷ್ಟ್ರನ ರಥವನ್ನು ಒಂದು ಶಿಲೆಯ ಹೊಡೆತದಿಂದ ಧ್ವಂಸ ಮಾಡಿದನು. ವಜ್ರದಂಷ್ಟ್ರನು ಗದೆ ತೆಗೆದುಕೊಂಡು ನೆಲದ ಮೇಲೆ ಹಾರಿ, ಸ್ವಲ್ಪಹೊತ್ತು ಮೂರ್ಛೆಯಿಂದ ಸ್ತಬ್ಧನಾಗಿ ನಿಂತನು. ಅವನು ಕಣ್ಣು ತೆರೆಯುವದನ್ನೇ ಕಾಯುತ್ತ ಅಂಗದನೂ ನಿಂತನು.

ವಜ್ರದಂಷ್ಟ್ರನು ಮೂರ್ಛೆ ತಿಳಿದು, ತನ್ನಿದಿರು ನಿಂತ ಅಂಗದನನ್ನು ನೋಡಿ, ಅವನ ಎದೆಯ ಮೇಲೆ ಗದೆಯಿಂದ ಹೊಡೆದನು. ಅಂಗದನು ಕೈಯಿಂದ ತಟ್ಟಿ ಆ ಗದೆಗೆ ನೆಲ ಕಾಣಿಸಿಬಿಟ್ಟನು. ಗದೆ ಕೈತಪ್ಪಿದ ಕೂಡಲೇ ಅವನು ಮುಷ್ಟಿಯಿಂದ ಗುದ್ದಲು ಬಂದನು. ಕೂಡಲೇ ಇಬ್ಬರೂ ಗುದುಮುರಿಗೆ ಹಾಕಿಕೊಂಡು ಮುಷ್ಟಿಯುದ್ಧಕ್ಕೆ ತೊಡಗಿದರು.



ಇಬ್ಬರೂ ಬಹಳಹೊತ್ತು ಹೋರಾಡಿ ಶ್ರಮಿಸಿ ಮೊಣಕಾಲ ಮೇಲೆ ಕುಳಿತುಕೊಂಡರು. ಆಗ ಅಂಗದನು ಅಕಸ್ಮಾತ್ತಾಗಿ ಕಪ್ಪೆಯಂತೆ ಆಕಾಶಕ್ಕೆ ಹಾರಿ, ವಜ್ರದಂಷ್ಟ್ರನ ತಲೆಯನ್ನು ಕತ್ತಿಯಿಂದ ಖಂಡಿಸಿದನು. ಅವನ ಕಥೆ ಹಾಗೆ ಮುಗಿದುದನ್ನು ನೋಡಿ ವಾನರರು ಸಂತೋಷದಿಂದ ಹಾರಾಡಿದರು.

ವಜ್ರದಂಷ್ಟ್ರನು ಸತ್ತುಹೋದುದನ್ನು ಕೇಳಿದ ಮೇಲೆ ರಾವಣನು ಅಸಮಾನ ರಾಕ್ಷಸವೀರನಾದ ಅಕಂಪನನನ್ನು ಸೇನೆಯೊಂದಿಗೆ ಯುದ್ಧಮಾಡಲು ಕಳುಹಿಸಿದನು. ಅಕಂಪನನು ಬಲವಾದ ರಥದ ಮೇಲೆ ದೊಡ್ಡ ಸೇನೆಯೊಂದಿಗೆ ಅಟ್ಟಹಾಸಮಾಡುತ್ತ ಹೊರಟನು.

ಮತ್ತೆ ರಾಕ್ಷಸರಿಗೂ ವಾನರರಿಗೂ ತೀವ್ರವಾದ ಯುದ್ಧವು ಪ್ರಾರಂಭವಾಯಿತು. ಎರಡು ಪಕ್ಷಗಳಲ್ಲಿಯೂ ಅನೇಕ ಪ್ರಾಣಗಳು ಹೋದುವು. ಕುಮುದ, ನಲ, ಮೈಂದ, ದ್ವಿವಿದ ಎಂಬ ವಾನರ ವೀರರು ಮಹಾವಿಜೃಂಭಣೆಯಿಂದ ರಾಕ್ಷಸರನ್ನು ಕೊಲ್ಲುತ್ತಿದ್ದರು.


ಅಕಂಪನನು ಆ ವಾನರವೀರರನ್ನು ನೋಡಿ, ತನ್ನ ರಥವನ್ನು ಅವರ ಕಡೆಗೆ ಹೊಡೆಯಿಸಿದನು. ಅವನ ರಭಸದ ಮುಂದೆ ವಾನರರು ನಿಲ್ಲಲಾರದೆ ಚೆದರುವುದನ್ನು ನೋಡಿ ಹನುಮಂತನು ಮುಂದೆ ಬಂದನು. ಆಗ ಅಕಂಪನನು ಹನುಮಂತನ ಮೇಲೆ ಬಾಣದ ಮಳೆಯನ್ನೇ ಸುರಿಸತೊಡಗಿದನು. ಹನುಮಂತನು ಆ ಬಾಣ ವರ್ಷಣವನ್ನು ಲಕ್ಷ್ಯಮಾಡದೆ, ಗಟ್ಟಿಯಾಗಿ ಸಿಂಹನಾದಮಾಡಿ, ಭೂಮಿ ಅದುರುವ ಹಾಗೆ ಕಾಲನ್ನು ಅಪ್ಪಳಿಸುತ್ತ, ಒಂದು ದೊಡ್ಡ ಶಿಲೆಯನ್ನು ಎತ್ತಿ ಗಿರಗಿರತಿರುಗಿಸುತ್ತ ಅಕಂಪನನ ಮೇಲೆ ಧುಮುಕಿದನು.

ಆದರೆ ಅಕಂಪನನು ತನ್ನ ಬಾಣಗಳಿಂದ ಹನುಮಂತನ ಕೈಯಲ್ಲಿದ್ದ ಶಿಲೆಯನ್ನು ಪುಡಿ ಪುಡಿ ಮಾಡಿದನು. ಹನುಮಂತನು ಒಂದು ಧಪ್ಪದ ಮರವನ್ನು ಕಿತ್ತು, ಅದರಿಂದ ಅಕಂಪನನ ನೆತ್ತಿಯ ಮೇಲೆ ಹೊಡೆದನು. ಆ ಪೆಟ್ಟಿಗೆ ಅಕಂಪನನ ತಲೆ ಸೀಳಿ ಹೋಗಿ ಕೆಟ್ಟ ಬೊಬ್ಬೆಯೊಂದಿಗೆ ಸತ್ತು ಬಿದ್ದನು.

ರಾಕ್ಷಸರು ಇದನ್ನು ನೋಡಿ ಹೆದರಿ ತಮ್ಮ ಕೈಗಳಲ್ಲಿದ್ದ ಆಯುಧಗಳನ್ನು ಅಲ್ಲಲ್ಲೇ ಬಿಸುಟು ಲಂಕೆಯೊಳಗೆ ಓಡಿ ಹೋದರು.

ಭಯಂಕರ ಪರಾಕ್ರಮಿಯಾದ ಅಕಂಪನನನ್ನು ಕೊಂದುದಕ್ಕಾಗಿ ವಾನರವೀರರು ಹನುಮಂತನನ್ನು ಬಗೆಬಗೆಯಾಗಿ ಸ್ತುತಿಸಿದರು. ಹನುಮಂತನು ಅವರನ್ನೆಲ್ಲಾ ಅಭಿನಂದಿಸುತ್ತಿರಲು ವಾನರರು ರಾಕ್ಷಸರ ಎದೆಗಳು ನಡುಗುವಂತೆ ಸಿಂಹನಾದ ಮಾಡಿದರು.

ಅಕಂಪನನು ಸತ್ತ ಸಮಾಚಾರ ಕೇಳಿ ರಾವಣನು ಸ್ವಲ್ಪಹೊತ್ತು ಮೌನವಾಗಿ ಯೋಚನೆ ಮಾಡಿದನು. ಆಮೇಲೆ ಮಂತ್ರಿಗಳೊಂದಿಗೆ ಮಾತಾಡಿ, ತನ್ನ ಸೇನೆಗಳ ವ್ಯೂಹಗಳನ್ನು ಪರೀಕ್ಷಿಸಿ ನೋಡಲು ಲಂಕೆ



ನಗರದೊಳಗೆಲ್ಲಾ ತಿರುಗಾಡಿದನು. ಲಂಕೆಯೊಳಗೆ ಎಲ್ಲಿ ನೋಡಿದರೂ ರಾಕ್ಷಸರ ಪತಾಕೆಗಳು ಕುಣಿದಾಡುತ್ತಿದ್ದುವು. ನಗರದ ಸುತ್ತಲೂ ವಾನರರ ಸೇನೆ ಮುತ್ತಿಗೆ ಹಾಕಿಕೊಂಡಿದ್ದಿತು. ಆದರಲ್ಲಿ ಎಲ್ಲಿಯೂ ಸ್ವಲ್ಪ ಕೂಡ ಛಿದ್ರತೆಯುಂಟಾದುದು ಕಂಡು ಬರಲಿಲ್ಲ.

ರಾವಣನು ಸಭಾ ಭವನಕ್ಕೆ ಹಿಂದಿರುಗಿ ಬಂದು ಪ್ರಹಸ್ತನನ್ನು ನೋಡಿ. "ಶತ್ರುಗಳ ಸೈನ್ಯವು ಬಂದು ನಮ್ಮ ನಗರವನ್ನು ಮುತ್ತಿದರೆ ಅದನ್ನು ನಿವಾರಿಸಲು ಇತರರು ಮಾಡುವ ಪ್ರಯತ್ನ ನಿರರ್ಥಕವೆಂದೇ ತೋರುತ್ತದೆ. ಅದಕ್ಕೆ ತಕ್ಕ ಸಾಮರ್ಥ್ಯ ಉಳ್ಳವರೆಂದರೆ ನಾನು, ಕುಂಭಕರ್ಣ, ನೀನು, ಇಂದ್ರಜಿತ್ತು, ನಿಕುಂಭ ಮಾತ್ರವೇ. ಆದುದರಿಂದ ನೀನು ಬೇಕಾದಷ್ಟು ಸೇನೆಯನ್ನು ತೆಗೆದುಕೊಂಡು ಹೋಗಿ ವಾನರ ಸೇನೆಯನ್ನು ಜಯಿಸಿ ಬಂದುಬಿಡು. ನಿನಗೆ ಹೆಚ್ಚು ಹೇಳಬೇಕಾಗಿಲ್ಲ" ಎಂದನು.

ಅದಕ್ಕೆ ಪ್ರಹಸ್ತನು ಹೀಗೆಂದ: "ಇದು ಮೊದಲು ಚರ್ಚೆಮಾಡಿ ತಿಳಿದಿರುವ ಸಂಗತಿಯೇ ಹೊರತು ಹೊಸದೇನಿಲ್ಲ. ಇದನ್ನು ಕುರಿತು ನಮ್ಮೊಳಗೆ ಅಭಿಪ್ರಾಯ ಭೇದವೂ ಬಂದು ಮನಸ್ಪರ್ಧೆಯುಂಟಾಗಿತ್ತು. ಸೀತೆಯನ್ನು ರಾಮನಿಗೆ ಕೊಟ್ಟುಬಿಡುವುದೇ ಕ್ಷೇಮವೆಂದು ನನಗೆ ಗೊತ್ತೇ ಇದೆ. ಇಲ್ಲದಿದ್ದರೆ ಯುದ್ಧವು ಕೊನೆಯವರೆಗೂ ತಪ್ಪಲಾರದೆಂದು ನಾನು ಬಲ್ಲೆ. ಆದರೆ ನಿನಗೆ ಇಷ್ಟವಾದಂತೆ ನಡೆಯಲು ನಾನು ಯಾವಾಗಲೂ ಸಿದ್ಧನಿರುವೆನು. ನಿನಗಾಗಿ ಈ ಯುದ್ಧದಲ್ಲಿ ಸಂತೋಷದಿಂದ, ನಿರ್ವಂಚನೆಯಿಂದ ಪ್ರಾಣ ಬಿಡುತ್ತೇನೆ."

ಹೀಗೆ ಹೇಳಿ ಸೇನಾ ನಾಯಕನಾದ ಪ್ರಹಸ್ತನು ದೊಡ್ಡ ಸೇನೆಯನ್ನು ಹೊರಡಿಸಲು ಸೇನಾಧ್ಯಕ್ಷರಿಗೆ ಅಪ್ಪಣೆ ಮಾಡಿದನು. ರಾಕ್ಷಸವೀರರು ವಿಜಯವನ್ನು ಕೋರಿಕೊಂಡು ಹೋಮಗಳನ್ನು ಮಾಡಿ, ಬ್ರಾಹ್ಮಣರ ಆಶೀರ್ವಾದ ಪಡೆದು ಯುದ್ಧಕ್ಕೆ ಹೊರಟರು. ಪ್ರಹಸ್ತನ ಹಿಂದೆ ಅವನ ನಾಲ್ವರು ಖಾಸಾ ಮಂತ್ರಿಗಳಾದ ನರಾಂತಕ, ಕುಂಭಹನು, ಮಹಾನಾದ, ಸಮುನ್ನತ ಎಂಬವರೂ ಹೊರಟರು.

ಪ್ರಹಸ್ತನು ಬರುವ ವೈಭವವನ್ನು ನೋಡಿ ರಾಮನು ವಿಭೀಷಣನೊಂದಿಗೆ, "ಅಲ್ಲಿ ಬರುವ ರಾಕ್ಷಸನು ದೊಡ್ಡ ಪರಾಕ್ರಮಿಯ ಹಾಗೆ ಕಾಣುವನಲ್ಲಾ, ಯಾರವನು?" ಎಂದು ಕೇಳಿದನು.

"ಅವನು ರಾವಣನ ಸೇನಾ ನಾಯಕನಾದ ಪ್ರಹಸ್ತ. ರಾವಣನ ಸೇನೆಯ ಮೂರನೇ ಒಂದು ಭಾಗ ಇವನ ವಶದಲ್ಲಿದೆ. ಇವನು ಅತ್ಯುತ್ತಮವಾದ ಅಸ್ತ್ರ-ಶಸ್ತ್ರಗಳನ್ನು ತಿಳಿದವನು. ಪರಾಕ್ರಮವಂತನೆಂದು ತುಂಬ ಪ್ರಸಿದ್ಧನಾದವನು" ಎಂದು ವಿಭೀಷಣನು ರಾಮನಿಗೆ ಹೇಳಿದನು.





Nov 1976

ವೀರಹನುಮಾನ್


ಪ್ರಹಸ್ತನು ಮಹಾಸೇನೆಯೊಂದಿಗೆ ಬರುತ್ತಲೇ ವಾನರರ ಗುಂಪು ಅವನನ್ನು ಇದಿರಿಸಿ ಹೋರಾಡಲು ತೊಡಗಿತು. ಮತ್ತೊಂದು ಸಾರಿ ದೊಡ್ಡ ಸಂಖ್ಯೆಯಲ್ಲಿ ವಾನರರೂ ರಾಕ್ಷಸರೂ ಹತರಾಗತೊಡಗಿದರು. ಪ್ರಹಸ್ತನ ನಾಲ್ಕು ಮಂದಿ ಮಂತ್ರಿಗಳು ನಾಲ್ಕು ಕಡೆಗಳಲ್ಲಿ ವಿಜೃಂಭಿಸಿ ವಾನರರನ್ನು ಕೊಂದು ಕೊಂದು ಕೆಡವತೊಡಗಿದರು.

ಅದನ್ನು ನೋಡಿ ದ್ವಿವಿದನೆಂಬ ವಾನರವೀರನು ದೊಡ್ಡದೊಂದು ಬಂಡೆಗಲ್ಲನ್ನು ನರಾಂತಕನ ತಲೆಗೆ ಗುರಿಯಿಟ್ಟು ಬೀಸಿದನು. ಅದು ನರಾಂತಕನ ತಲೆಯನ್ನು ಒಡೆದು ಕೊಂದುಹಾಕಿತು.

ಅದೇ ರೀತಿ ಬಂಡೆಗಲ್ಲಿನ ಚೆಂಡಾಟದಿಂದ ದುರ್ಮುಖನೆಂಬ ವಾನರವೀರನು ಸಮುನ್ನತನನ್ನು, ಜಾಂಬವಂತನು ಮಹಾನಾದನನ್ನು, ತಾರನು ಕುಂಭಹನುವನ್ನು ಕೊಂದು ಕೆಡವಿದರು. ಹೀಗೆ ಪರಾಕ್ರಮಶಾಲಿಗಳಾದ ಪ್ರಹಸ್ತನ ನಾಲ್ವರು ಅನುಚರರೂ ಸತ್ತುಹೋದರು. ಅದನ್ನು ನೋಡಿ ಪ್ರಹಸ್ತನು ಏನೂ ತೋರದೆ ದೀರ್ಘಶ್ವಾಸ ಬಿಟ್ಟನು. ತನ್ನ ಅನುಚರರು ನಾಲ್ವರೂ ಸತ್ತ ರೀತಿಯನ್ನು ಕಣ್ಣಾರೆ ನೋಡಿದ ಪ್ರಹಸ್ತನು ನಿರಾಶೆಯಿಂದಲೂ ಕೋಪದಿಂದಲೂ ಪ್ರಳಯರುದ್ರನಂತೆ ವಾನರಸೇನೆಯನ್ನು ಭಯಂಕರವಾಗಿ ಚೆಂಡಾಡತೊಡಗಿದನು. ಆಗ ಪ್ರಹಸ್ತನನ್ನು ನೀಲನು ಇದಿರಿಸಿ ಹೋರಾಡತೊಡಗಿದನು. ಪ್ರಹಸ್ತನು ಬಾಣಗಳಿಂದ ಯುದ್ಧ ಮಾಡಿದರೆ ನೀಲನು ಬಾಣಗಳಷ್ಟೇ ವೇಗದಿಂದ ಮರಗಳನ್ನು ಪ್ರಯೋಗಿಸಿ ಯುದ್ಧಮಾಡಿದನು. ಬಾಣಗಳು ತನ್ನ ಶರೀರವನ್ನು ಎಷ್ಟು ದಾರುಣವಾಗಿ ಹಿಂಸಿಸುತ್ತಿದ್ದರೂ ಲೆಕ್ಕಿಸದೆ ನೀಲನು ಪ್ರಹಸ್ತನ ರಥ ಕುದುರೆಗಳನ್ನು ಕೊಂದು, ಪ್ರಹಸ್ತನ ಕೈಯಲ್ಲಿದ್ದ ಧನುಸ್ಸನ್ನು ಹಿಡಿದೆಳೆದು ಮುರಿದುಹಾಕಿದನು. ಕಡೆಗೆ ಪ್ರಹಸ್ತನೂ ನೀಲನೂ ಮಲ್ಲಯುದ್ಧಕ್ಕೆ ತೊಡಗಿದರು. ಆ ಯುದ್ಧದಲ್ಲಿ ನೀಲನು ಪ್ರಹಸ್ತನ ತಲೆಯನ್ನು ಶಿಲೆಗಳಿಂದ ಒಡೆದು ಹಾಕಿದನು. ಅವನು ಸತ್ತುಬೀಳುವುದನ್ನು ನೋಡಿ ರಾಕ್ಷಸರು ಕೆಟ್ಟಸ್ವರ

೨೫ ಕುಂಭಕರ್ಣನನ್ನು ಎಬ್ಬಿಸುವುದು

25-1



ದಿಂದ ಅಳುತ್ತಾ ಲಂಕೆಯೊಳಗೆ ಹೋದರು. ಅವರೆಲ್ಲ ರಾವಣನ ಬಳಿಗೆ ಹೋಗಿ ಪ್ರಹಸ್ತನು ಸತ್ತುಹೋದ ಸಮಾಚಾರವನ್ನು ಹೇಳಿದ ಕೂಡಲೇ ರಾವಣನು ಸಂತಾಪಾತಿಶಯದಿಂದ ಕುದಿದನು. ಇನ್ನು ತಾನೇ ಸ್ವಯಂ ಯುದ್ಧಕ್ಕೆ ಹೋಗುವುದಾಗಿ ನಿಶ್ಚಯಿಸಿಕೊಂಡನು. ಅವನ ಸನ್ನೆಯಂತೆ ರಾಕ್ಷಸರು ಉತ್ತಮಾಶ್ವಗಳನ್ನು ಹೂಡಿದ ಯುದ್ಧ ರಥವನ್ನು ಸಿದ್ಧಗೊಳಿಸಿ ತಂದರು. ಅದರಲ್ಲಿ ಕುಳಿತು ರಾವಣನು ಯುದ್ಧ ಮಾಡಲು ಹೊರಟನು.

ಅವನು ನಗರವನ್ನು ದಾಟಿ ಹೊರಗೆ ನಡೆಯುತ್ತ ಕಲ್ಲುಗಳನ್ನೂ, ಮರಗಳನ್ನೂ ಹಿಡಿದುಕೊಂಡು ಯುದ್ಧಕ್ಕೆ ಸಿದ್ಧರಾದ ವಾನರರ ಭಾರಿ ಸಮೂಹ ವನ್ನು ನೋಡಿ ಬೆರಗಾದನು. ಸಮುದ್ರ ದಾಟಿ ಬಂದ ವಾನರರಲ್ಲಿ ಮುಕ್ಕಾಲುವಾಸಿ ವಾನರರು ಸತ್ತಿರಬೇಕೆಂದು ಕೊಂಡರೆ, ವಾನರಸೇನೆ ಹಿಂದೆ ಇದ್ದಂತೆಯೇ ಇರುವುದಾಗಿ ಕಾಣಿಸಿತು.

ಹೀಗೆ ರಾವಣನು ಯುದ್ಧಕ್ಕೆ ಬರುವುದನ್ನು ರಾಮನೂ ನೋಡಿ, "ವಿಭೀಷಣಾ! ಮಹಾಸೇನೆ ಯೊಂದಿಗೆ ಅನೇಕ ಬಗೆಯ ಧ್ವಜಗಳೊಂದಿಗೆ ಅಲ್ಲಿ ಬರುವವನು ಯಾರು?" ಎಂದು ಕೇಳಿದನು.

ವಿಭೀಷಣನು ರಾಮನಿಗೆ ಒಬ್ಬೊಬ್ಬರನ್ನೇ ಪ್ರತ್ಯೇಕ ಪ್ರತ್ಯೇಕವಾಗಿ ತೋರಿಸುತ್ತ ಹೇಳಿದನು. ಅವರಲ್ಲಿ ರಾವಣನ ಮಗ ಅಕಂಪನನೆಂದು ಒಬ್ಬನಿದ್ದ. ಇಂದ್ರಜಿತ್ತು, ಅತಿಕಾಯರೆಂಬ ಕುಮಾರರೂ ಇದ್ದರು. ಮಹೋದರನೆಂಬ ರಾವಣನ ಬಂಟನೂ, ಪಿಶಾಚ, ತ್ರಿಶಿರ, ಕುಂಭ, ನಿಕುಂಭ ಮೊದಲಾದ ಮಹಾಮಹಾ ರಾಕ್ಷಸವೀರರೂ ಇದ್ದರು.

ರಾಮನು ವಿಭೀಷಣನಿಂದ ಅದನ್ನೆಲ್ಲ ತಿಳಿದು ರಾವಣನ ತೇಜಸ್ಸನ್ನು ನೋಡಿ ಆಶ್ಚರ್ಯಪಟ್ಟನು. ಅಂತಹ ತೇಜಸ್ಸು ದೇವದಾನವರೊಳಗೆ ಯಾರಿಗೂ ಇರುವಂತೆ ಕಾಣಲಿಲ್ಲ. ಅಂತಹ ರಾವಣನು ತನ್ನ ಇದಿರಿಗೆ ಬಂದಿರುವುದನ್ನು ನೋಡಿ ರಾಮನು ಸಂತೋಷಪಟ್ಟನು.

ಇವನಲ್ಲವೇ ತನ್ನ ಸೀತೆಯನ್ನು ಎತ್ತಿಕೊಂಡು ಹೋದವನು? ಅದಕ್ಕಾಗಿ ಈಗ ತೃಪ್ತಿಯಾಗುವ ಹಗೆ ತೀರಿಸಿಕೊಳ್ಳಬಹುದು. ಅಂತೆಯೇ ರಾಮನು ಅತ್ಯುತ್ಸಾಹದಿಂದ ಲಕ್ಷ್ಮಣನೊಂದಿಗೆ ಯುದ್ಧಕ್ಕೆ ಸಿದ್ಧನಾಗಿ ನಿಂತನು.

ವಾನರಸೇನೆಯನ್ನು ಹೆದರಿಸುತ್ತ ಬರುವ ರಾವಣ ನನ್ನು ಸುಗ್ರೀವನು ಇದಿರಿಸಿದನು. ಯುದ್ಧ ಪ್ರಾರಂಭವಾದ ಕೆಲವು ಕ್ಷಣಗಳಲ್ಲಿ ರಾವಣನು ಒಂದು ಬಾಣದಿಂದ ಸುಗ್ರೀವನನ್ನು ಮೂರ್ಛೆ ಬೀಳಿಸಿದನು. ಆಗ ರಾಕ್ಷಸರು ಸಿಂಹನಾದ ಮಾಡಿ ರಾವಣನಿಗೆ ಜಯಜಯಾಕಾರ ಮಾಡಿದರು.

ಅದನ್ನು ನೋಡಿ, ಗವಾಕ್ಷ, ಗವಯ, ಋಷಭ, ಜ್ಯೋತಿರ್ಮುಖ, ನಭ ಎಂಬ ವಾನರವೀರರು ಶರೀರಗಳನ್ನು ಬೆಳೆಸಿ ಗುಡ್ಡಬೆಟ್ಟಗಳ ದೊಡ್ಡ ದೊಡ್ಡ

ಕಲ್ಲುಬಂಡೆಗಳನ್ನೆತ್ತಿಕೊಂಡು ರಾವಣನ ಮೇಲೆ ಯುದ್ಧಕ್ಕೆ ಬಂದರು. ರಾವಣನೂ ಅವರೆಲ್ಲರನ್ನೂ ಬಾಣಗಳಿಂದ ಹೊಡೆದು ಚದುರಿಸಿದನು. ವಾನರವೀರರು ಹೆದರಿ ರಾಮನಿಗೇ ಶರಣಾಗತರಾದರು.


ರಾವಣನು ಲೀಲಾಜಾಲವಾಗಿ ವಾನರಸೇನೆಯನ್ನು ನಿರ್ಮೂಲ ಮಾಡುವುದನ್ನು ನೋಡಿ, ವಾನರರನ್ನು ಕಾಯಲು ರಾಮನು ಸ್ವತಃ ಯುದ್ಧಕ್ಕೆ ಹೊರಟನು. ಅದನ್ನು ನೋಡಿ ಲಕ್ಷ್ಮಣನು ರಾವಣನನ್ನು ಕೊಲ್ಲುವ ಅವಕಾಶವನ್ನು ತನಗೆ ಕೊಡಬೇಕೆಂದು ಪ್ರಾರ್ಥಿಸಿಕೊಂಡನು. ರಾಮನು ಜಾಗರೂಕತೆಯಿಂದ ಯುದ್ಧ ಮಾಡುವಂತೆ ಅವನಿಗೆ ಎಚ್ಚರಿಕೆ ಹೇಳಿ ಅಪ್ಪಣೆ ಕೊಟ್ಟನು.

ಲಕ್ಷ್ಮಣನು ರಾವಣನನ್ನು ಇದಿರಿಸಲು ಹೋಗುವುದನ್ನು ನೋಡಿ, ಹನುಮಂತನು ಮುಂದಾಗಿ ರಾವಣನ ಮುಂದೆ ಹೋಗಿ ಬಲಗೈಯನ್ನೆತ್ತಿ, "ಎಲೋಯ್, ರಾವಣಾ! ನೀನು ದೇವ ದಾನವ ಗಂಧರ್ವ ಯಕ್ಷ ರಾಕ್ಷಸಾದಿಗಳನ್ನೆಲ್ಲಾ ಜಯಿಸಿದವನು ಆಗಿರಬಹುದು. ಆದರೆ ನಿನಗೆ ವಾನರರೇ ಮೃತ್ಯುರೂಪರೆಂದು ತಿಳಿ. ಈಗ ನನ್ನ ಕೈಯಿಂದಲೇ ನಿನ್ನನ್ನು ಕೊಂದುಬಿಡುತ್ತೇನೆ. ಸಿದ್ಧನಾಗು!" ಎಂದನು.

ಹನುಮಂತನ ಮಾತು ಕೇಳಿ ರಾವಣನು ಮಹಾಕೋಪವನ್ನು ತಾಳಿ, "ಹನುಮಂತಾ! ಏನೂ ಹೆದರದೆ ನನ್ನನ್ನು ಹೊಡೆ. ಒಂದು ಕೋತಿ ರಾವಣನನ್ನು ಹೊಡೆಯಿತೆಂಬ ಶಾಶ್ವತ ಕೀರ್ತಿ ನಿನಗೇ ಸಿಕ್ಕಿ. ಆಮೇಲೆಯೇ ನಾನು ನಿನ್ನನ್ನು ಕೊಂದುಬಿಡುವುದು. ಹುಂ, ಹೊಡಿ!" ಎಂದನು.

"ಪೆಟ್ಟು ತಿನ್ನುವ ಮೊದಲು ನೆನಪಿರಲಿ, ನಿನ್ನ ಮಗ ಅಕ್ಷಕುಮಾರ ನನ್ನ ಪೆಟ್ಟಿಗೇ ಸತ್ತ" ಎಂದ ಹನುಮಂತ.

ಕೋಪವನ್ನು ಸಹಿಸದೆ ರಾವಣನು ಹನುಮಂತನನ್ನು ಜೋರಾಗಿ ಹೊಡೆದನು. ಆ ಹೊಡೆತಕ್ಕೆ



ಹನುಮಂತನ ದೇಹವು ಒಮ್ಮೆ ನಡುಗಿತು. ಆಮೇಲೆ ಹನುಮಂತನು ಕೋಪದಿಂದ ರಾವಣನ ಎದೆಯ ಮೇಲೆ ಅಂಗೈಯಿಂದ ಬಲವಾಗಿ ಹೊಡೆದನು. ಆ ಹೊಡೆತಕ್ಕೆ ರಾವಣನು ಭೂಕಂಪಕ್ಕೆ ಅಲುಗಾಡುವ ಪರ್ವತದಂತೆ ತೊಯ್ದಾಡಿದನು. ಅದನ್ನು ನೋಡಿ ವಾನರರು ಕೋಲಾಹಲದಿಂದ ಹರ್ಷನಾದ ಮಾಡಲು ರಾವಣನು ಅಪ್ರತಿಭನಾಗಿ ಮರುಕ್ಷಣದಲ್ಲಿ ಸಮಾಳಿಸಿಕೊಂಡು, "ಭಲೇ ಭಲೇ" ಎಂದು ಹನುಮಂತನನ್ನು ಮೆಚ್ಚಿದನು.

ರಾವಣನ ಹೊಗಳಿಕೆಯನ್ನು ಕೇಳಿ ಹನುಮಂತನು, "ರಾವಣಾ, ನನ್ನ ಪರಾಕ್ರಮವನ್ನು ಸುಡಬೇಕು. ನನ್ನ ಪೆಟ್ಟು ತಿಂದು ಇನ್ನೂ ಬದುಕಿರುವೆಯಲ್ಲಾ? ಇನ್ನೊಂದು ಸಾರಿ ನೀನು ನನ್ನನ್ನು ಹೊಡೆ. ಆಮೇಲೆ ನಿನ್ನನ್ನು ಮುಷ್ಟಿಮಾತ್ರದಿಂದ ಯಮಲೋಕಕ್ಕೆ ಹಾರಿಸಿಬಿಡುತ್ತೇನೆ" ಎಂದನು. ಅತಿಯಾದ ಕೋಪದಿಂದ ರಾವಣನು ತನ್ನ ಮುಷ್ಟಿಯಿಂದ



ದನು. ತರುವಾಯ ರಾವಣನು ಆಗ್ನೇಯಾಸ್ತ್ರದಿಂದ ನೀಲನನ್ನು ಮೂರ್ಛೆ ಬೀಳಿಸಿ ಲಕ್ಷ್ಮಣನ ಮೇಲೆ ವೇಗದಿಂದ ಸಾಗಿದನು.

"ಎಲೋ ರಾಕ್ಷಸ ರಾಜ! ಈ ವಾನರರೊಂದಿಗೆ ನಿನಗೇನು ಕೆಲಸ? ಅವರೊಂದಿಗೆ ಏಕೆ ಯುದ್ಧ? ನನ್ನೊಂದಿಗೆ ಯುದ್ಧಮಾಡು" ಎಂದ ಲಕ್ಷ್ಮಣ.

"ಲಕ್ಷ್ಮಣಾ, ನಿನಗೆ ಆಯುಷ್ಯ ತೀರಿದುದರಿಂದಲೇ ನನ್ನ ಕಣ್ಣಿಗೆ ಬಿದ್ದಿರುವಿ. ಸರಿಯಾಗಿ ನಿಂತೆಯಾ? ಈಗಲೇ ನಿನ್ನನ್ನು ಯಮಪುರಿಗೆ ಕಳುಹಿಸುತ್ತೇನೆ" ಎಂದು ಗರ್ಜಿಸಿದನು ರಾವಣ.

"ಪಾಪಾತ್ಮ! ಆತ್ಮಸ್ತುತಿ ಮಾಡಿ ಮತ್ತಿಷು ಪಾಪಿಯಾಗಬೇಡ. ನಿನ್ನ ಶಕ್ತಿ ಬಲ ಪರಾಕ್ರಮಗಳು ಎಷ್ಟೆಂಬುದು ನನಗೆ ಚೆನ್ನಾಗಿ ಗೊತ್ತು. ನಾನು ಯುದ್ಧಕ್ಕೆ ಸಿದ್ಧನಾಗೇ ಇದ್ದೇನೆ. ಆದುದರಿಂದ ಬಾಯಿಮಾತು ಬೇಡ, ಕೈಚಳಕ ಮುಖ್ಯ. ಈಗ ತೋರಿಸು" ಎಂದ ಲಕ್ಷ್ಮಣ.

ರಾವಣನು ಕೋಪಾವೇಶದಿಂದ ಲಕ್ಷ್ಮಣನ ಮೇಲೆ ಬಾಣಪ್ರಯೋಗ ಮಾಡತೊಡಗಿದನು. ಲಕ್ಷ್ಮಣನು ರಾವಣನ ಬಾಣಗಳನ್ನು ನಡುದಾ ಯಲ್ಲೇ ಖಂಡಿಸಿಬಿಟ್ಟನು. ಇಬ್ಬರೂ ಒಬ್ಬರನ್ನೊಬ್ಬ ಬಾಣಗಳಿಂದ ಹೊಡೆದುಕೊಂಡರು. ಹೀಗೆ ಯುದ್ಧ ನಡೆಯುತ್ತಿರಲು, ಒಮ್ಮಿಂದೊಮ್ಮೆ ಲಕ್ಷ್ಮ ಮೂರ್ಛೆಬಂದಿತು.

ಅದನ್ನು ನೋಡಿ ರಾವಣನು ಮುಂದೆ ಧಾ ಹೋಗಿ ಲಕ್ಷ್ಮಣನನ್ನು ಹಿಡಿಯಲು ನೋಡಿದ ಆಗ ಹನುಮಂತನು ಹಾರಿಬಂದು ರಾವಣನ ಎದೆ ಮೇಲೆ ಬಲವಾಗಿ ಗುದ್ದಿದನು. ಆ ಪೆಟ್ಟಿಗೆ ರಾವಣ ಕೌಚಿಬಿದ್ದನು.. ಅವನ ಕಣ್ಣು ಮೂಗು ಕಿವಿ ಗಳಲ್ಲಿ ರಕ್ತ ಹರಿಯಿತು.

ಅವನು ಏಳುವುದರೊಳಗೆ ಹನುಮಂ ಮೂರ್ಛೆಯಲ್ಲಿರುವ ಲಕ್ಷ್ಮಣನನ್ನು ಎತ್ತಿಕೊ

ಹನುಮಂತನ ಗುಂಡಿಗೆಯ ಮೇಲೆ ತಿವಿದನು. ಆ ಗುದ್ದಿನ ತಿವಿತಕ್ಕೆ ಹನುಮಂತನು ಥಿಮ್ಮನೆ ಮರ ಗಟ್ಟಿ ನಿಂತನು. ಮತ್ತೆ ಹನುಮಂತನು ಎಚ್ಚರಕ್ಕೆ ಬರುವುದರೊಳಗೆ ರಾವಣನು ನೀಲನ ಮೇಲೆ ಯುದ್ಧಮಾಡಲು ಹೋದನು. ಇನ್ನೊಮ್ಮೆ ಹನುಮಂತನು ಗುದ್ದಿದ್ದರೆ ತಾನು ಯುದ್ಧರಂಗದಿಂದ ವಿಮುಖನಾಗಬೇಕಾದೀತೆಂದು ಅವನಿಗೆ ತೋರಿತು.

ವಾನರಸೇನಾ ನಾಯಕನಾಗಿ ನೀಲನು ರಾವಣನ ಬಾಣಗಳ ಏಟಿಗೆ ತುಂಬ ನೊಂದು, ರಾವಣನ ಮೇಲೊಂದು ಗುಡ್ಡದಶಿಖರವನ್ನು ಬಿಸುಟನು. ಅಷ್ಟರಲ್ಲಿ ಎಚ್ಚೆತ್ತ ಹನುಮಂತನು ಮತ್ತೆ ರಾವಣನ ಬಳಿಗೆ ಹೋಗಿ, "ಇಲ್ಲಿ ಬಂದು ಇನ್ನೊಬ್ಬನ ಹತ್ತಿರ ಯುದ್ಧಕ್ಕೆ ತೊಡಗಿದುದರಿಂದಲೇ ನನ್ನ ಗುದ್ದಿನಿಂದ ಬದುಕುಳಿದೆ!" ಎಂದನು.

ಅಷ್ಟರಲ್ಲಿ ರಾವಣನು ತನ್ನ ಮೇಲೆ ಬರುವ ಗುಡ್ಡದ ಶಿಖರವನ್ನು ಬಾಣಗಳಿಂದ ಪುಡಿಪುಡಿ ಮಾಡಿ ಹಾರಿಸಿ

25-4

ರಾಮನ ಬಳಿಗೆ ತಂದು ಮಲಗಿಸಿದನು. ಸ್ವಲ್ಪ ಹೊತ್ತಿಗೆ ಇಲ್ಲಿ ಲಕ್ಷ್ಮಣನಿಗೂ ಅಲ್ಲಿ ರಾವಣನಿಗೂ ಎಚ್ಚರವಾಯಿತು. ರಾವಣನು ಮತ್ತೆ ಯುದ್ಧಕ್ಕೆ ಸಿದ್ಧನಾದನು. ಲಕ್ಷ್ಮಣನೂ ಮತ್ತೆ ಯುದ್ಧಕ್ಕೆ ಹೊರಡುವೆನೆನ್ನಲು, ರಾಮನು ಅವನನ್ನು ತಡೆದು ತಾನೇ ರಾವಣನೊಂದಿಗೆ ಯುದ್ಧಕ್ಕೆ ಹೋದನು. ಅದನ್ನು ನೋಡಿ ಹನುಮಂತನು ರಾಮನೊಂದಿಗೆ, "ರಾಮಾ, ರಾವಣನೊಂದಿಗೆ ಯುದ್ಧಮಾಡಲು ನೀನು ನನ್ನ ಭುಜದ ಮೇಲೇರಿ ಕುಳಿತುಕೋ" ಎಂದು ಬಾಗಿದನು.

ರಾಮನು ಧನುರ್ಬಾಣಗಳೊಂದಿಗೆ ಹನುಮಂತನ ಹೆಗಲ ಮೇಲೇರಿ ಕುಳಿತುಕೊಂಡನು. ರಥದ ಮೇಲಿರುವ ರಾವಣನು ತನಗೆ ಸರಿಸಮಾನನಾದ ಎತ್ತರದಲ್ಲಿ ಬರುವ ರಾಮನನ್ನು ನೋಡಿ ಆಶ್ಚರ್ಯದಿಂದ ತಲೆದೂಗಿದನು.

ಮೊದಲು ರಾವಣನು ತೀವ್ರವಾದ ಬಾಣಗಳನ್ನು ರಾಮನಿಗೆ ವಾಹನವಾದ ಹನುಮಂತನ ಶರೀರದ ಮೇಲೆ ಪ್ರಯೋಗಿಸಿದನು. ಆ ಬಾಣಗಳ ಮೂಲಕ ಹನುಮಂತನ ತೇಜಸ್ಸು ಇನ್ನಷ್ಟು ಹೆಚ್ಚಾಯಿತು. ಆದರೆ ರಾವಣನ ಈ ಕೃತಿಯನ್ನು ನೋಡಿ ರಾಮನಿಗೆ ಬಹಳ ಕೋಪ ಬಂದಿತು. ಕೂಡಲೇ ರಾಮನು ರಾವಣನ ರಥದ ಚಕ್ರಗಳನ್ನೂ, ಕುದುರೆಗಳನ್ನೂ, ಸಾರಥಿಯನ್ನೂ, ಧ್ವಜವನ್ನೂ, ಕೊಡೆಯನ್ನೂ, ಆಯುಧಗಳನ್ನೂ ತನ್ನ ಬಾಣ ಪರಂಪರೆಗಳಿಂದ ಕೊಚ್ಚಿದು ನಾಶಮಾಡಿದನು. ಒಂದು ರಾಮಬಾಣವು ರಾವಣನ ಎದೆಯಲ್ಲಿ ನಾಟಿ ಅವನನ್ನು ತತ್ತರಿಸಿತು. ನೋವನ್ನು ತಡೆಯಲಾಗದೆ ರಾವಣನು ಕೈಯಲ್ಲಿದ್ದ ಬಿಲ್ಲನ್ನು ಜಾರಬಿಟ್ಟು ಮೂರ್ಛೆಹೋದನು.

ರಾಮನು ಅರ್ಧಚಂದ್ರಾಕೃತಿಯ ಒಂದು ಬಾಣದಿಂದ ರಾವಣನ ಕಿರೀಟವನ್ನು ಖಂಡಿಸಿ, ಮೂರ್ಛೆ ತಿಳಿದು ಎದ್ದು ನಿಂತ ರಾವಣನೊಂದಿಗೆ "ರಾವಣಾ,



ನೀನು ಅನೇಕ ಮಂದಿ ವೀರರನ್ನು ಕೊಂದು ತುಂಬಾ ಬಳಲಿರುವಿ. ಆದುದರಿಂದ ಈಗ ನಿನ್ನನ್ನು ಕೊಲ್ಲಲಾರೆ. ನೀನೀಗ ಹೋಗಿ ವಿಶ್ರಾಂತಿ ತೆಗೆದುಕೊಂಡು ಮತ್ತೆ ಯುದ್ಧಸನ್ನದ್ಧನಾಗಿ ಬರಲು ಅನುಜ್ಞೆ ಕೊಡುತ್ತೇನೆ, ಹೋಗು" ಎಂದನು.

ಇಂತಹ ಮಾತನ್ನು ಕೇಳಬೇಕಾದುದಕ್ಕೆ ರಾವಣನು ನಾಚಿಕೊಂಡು ಮತ್ತೇನೂ ಮಾಡಲಾರದವನಾಗಿ ಲಂಕೆಗೆ ಹೊರಟುಹೋದನು. ಆ ಮೇಲೆ ರಾಮ ಲಕ್ಷ್ಮಣರು ಯುದ್ಧದಲ್ಲಿ ಗಾಯಗೊಂಡ ವಾನರರಿಗೆ ಸೇವಾಶುಶ್ರೂಷೆ ಮಾಡಲು ತೊಡಗಿದರು.

ಲಂಕೆಗೆ ಹಿಂದಿರುಗಿದ ರಾವಣನು ರಾಮನ ಬಾಣಗಳ ಉಗ್ರತೆಯನ್ನು ನೆನೆಯುತ್ತ, ಹೆದರಿ ತನ್ನ ಅನುಚರರನ್ನು ನೋಡಿ, "ಇಂದ್ರನಿಗೆ ಸರಿಸಮಾನನಾದ ನಾನು ಒಬ್ಬ ಮನುಷ್ಯನ ಕೈಯಲ್ಲಿ ಸೋತುಹೋದೆ! ನಾನು ಮಾಡಿದ ದೊಡ್ಡ ತಪಸ್ಸುಗಳೆಲ್ಲಾ ಬೂದಿಗೆ ಸುರಿದ ಪನ್ನೀರಾಯಿತು. ನನಗೆ ಮಾನವರಿಂದ




ಅಪಾಯವಿದೆಯೆಂದು ಬ್ರಹ್ಮನು ಒಮ್ಮೆ ಹೇಳಿದ ಮಾತು ಈಗ ನಿಜವಾಯಿತು. ಮಾನವರಿಂದ ಮರಣ ಬಾರದಂತೆ ನಾನು ಬ್ರಹ್ಮನಿಂದ ವರ ಪಡೆಯಲಿಲ್ಲ. ಎಲೈ ರಾಕ್ಷಸರೆ ! ಕಾರಣಗಳೇನೇ ಇರಲಿ. ಮುಂದಿನ ಯುದ್ಧದಲ್ಲಿ ಈಗ ಬಂದ ಅವಮಾನವನ್ನು ತೊಡೆಯಲೇಬೇಕು. ನೀವೆಲ್ಲಾ ಇನ್ನಷ್ಟು ಶ್ರದ್ಧೆಯಿಂದ ಶತ್ರು ಸಂಹಾರ ಮಾಡಬೇಕು. ನಗರವನ್ನು ಇನ್ನಷ್ಟು ಭದ್ರತೆಯಿಂದ ಕಾಪಾಡಬೇಕು. ಈಗ ಹೋಗಿ ಕುಂಭಕರ್ಣನನ್ನು ಎಬ್ಬಿಸಿ ಕರೆದುಕೊಂಡು ಬನ್ನಿ. ಅವನೇ ತಕ್ಕವನು" ಎಂದನು.

ಕುಂಭಕರ್ಣನು ಯುದ್ಧವು ಪ್ರಾರಂಭವಾಗಲು ಒಂಬತ್ತು ದಿನಗಳ ಮೊದಲು ನಿದ್ರೆಮಾಡಲು ಪ್ರಾರಂಭಿಸಿದ್ದನು. ಅವನು ನಿದ್ದೆಯಿಂದೆದ್ದು ಯುದ್ಧಕ್ಕೆ ಹೋಗಿ ರಾಮಲಕ್ಷ್ಮಣರನ್ನು ಕೊಲ್ಲದೆ ಬಿಡಲಾರನೆಂದು ರಾವಣನ ನಂಬುಗೆ. ಏಕೆಂದರೆ ಕುಂಭಕರ್ಣನಿಗೆ ಯಾರೂ ಶಾಪಗಳನ್ನು ಕೊಟ್ಟಿರಲಿಲ್ಲ. ಏನೋ ಬಾಯಿತಪ್ಪಿ ನಿದ್ದೆಯ ವರವನ್ನು ಪಡೆದಿದ್ದ. ಅಷ್ಟೆ. ಈಗ ರಾವಣನ ಆಜ್ಞೆಯ ಮೇಲೆ ರಾಕ್ಷಸರು ಗಂಧ, ಹೂಮಾಲೆ, ಆಹಾರ ಪದಾರ್ಥಗಳು, ಪಾನೀಯ ಮೊದಲಾದುವನ್ನು ತೆಗೆದುಕೊಂಡು ಕುಂಭಕರ್ಣನ ಮನೆಗೆ ಹೋದರು. ಆ ಮನೆ ಬಹಳ ದೊಡ್ಡದು. ರಾಕ್ಷಸರು ಒಳಗೆ ಹೋಗಲು ಬಹಳ ಕಷ್ಟ ಪಡಬೇಕಾಯಿತು. ಕಾರಣವೇನೆಂದರೆ ಕುಂಭಕರ್ಣನು ಶ್ವಾಸವನ್ನು ಹೊರಕ್ಕೆ ಬಿಡುವಾಗ ಆ ಗಾಳಿ ರಾಕ್ಷಸರನ್ನು ಹಿಂದಕ್ಕೆ ದೂಡುತ್ತಿತ್ತು. ಆದುದರಿಂದ ರಾಕ್ಷಸರು ತಮ್ಮನ್ನು ಹತೋಟಿಯಲ್ಲಿಟ್ಟುಕೊಂಡು ಬಹು ಕಷ್ಟದಿಂದ ಒಳಗೆ ಹೋದರು.

ಅಡ್ಡಕ್ಕೆ ಬಿದ್ದ ಪರ್ವತದ ಹಾಗೆ ಕುಂಭಕರ್ಣನು ಬಿದ್ದುಕೊಂಡು ಗಾಢವಾದ ನಿದ್ದೆಯಲ್ಲಿದ್ದನು. ಅವನನ್ನು ಎಬ್ಬಿಸಲು ಸಾಧ್ಯವಿರಲಿಲ್ಲ. ಅಂತಹ ಅಸಾಧ್ಯವಾದ ಕೆಲಸಕ್ಕೇ ರಾಕ್ಷಸರು ರಾವಣನ ಆಜ್ಞೆಯಿಂದ ಬಂದಿದ್ದರು. ಮೊದಲು ಕುಂಭಕರ್ಣನ ಮುಂದೆ ಮಾಂಸವನ್ನು ತಂದು ತಂದು ಗುಡ್ಡೆಮಾಡಿ ಹಾಕಿದರು. ಮದ್ಯದ ಹಂಡೆಗಳನ್ನು ಸಾಲಾಗಿಟ್ಟರು. ಅವನ ಶರೀರವನ್ನು ಹೂವಿನಮಾಲೆಗಳಿಂದ ಮುಚ್ಚಿದರು. ಆಮೇಲೆ ಶಂಖಗಳನ್ನು ಊದಿದರು. ಕಿವಿಯ ಹತ್ತಿರ ಡೋಲು ಬಡೆದರು. ಗುಂಪಾಗಿ ಕೂಗಿ ಆರ್ಭಟಿಸಿದರು. ದೊಣ್ಣೆಗಳಿಂದ ಹೊಡೆದರು. ಅತ್ತಿತ್ತ ಕದಲಿಸಿದರು. ಭೇರಿಯನ್ನು ಬಾರಿಸಿದರು. ಕೊಂಬುಕಹಳೆ ಮೊಳಗಿಸಿದರು.

ಕುಂಭಕರ್ಣನು ಎಷ್ಟಕ್ಕೂ ಏಳದಿರಲು ಗದೆ ಒನಕೆ, ಕಬ್ಬಿಣದ ಗಳು ಮೊದಲಾದುವುಗಳಿಂದ ತಮ್ಮ ಶರೀರಗಳು ನೋಯುವ ಹಾಗೆ ಹೊಡೆದರು. ಅದೂ ನಿಷ್ಪ್ರಯೋಜನವಾಗಲು, ಕುಂಭಕರ್ಣನ ಶರೀರದ ಮೇಲೆ ಕುದುರೆಗಳನ್ನೂ ಒಂಟೆಗಳನ್ನೂ ಕತ್ತೆಗಳನ್ನೂ ಗೂಳಿಗಳನ್ನೂ ಆನೆಗಳನ್ನೂ ಓಡಾಡಿಸಿದರು. ಕಟ್ಟಕಡೆಗೆ ಹೇಗೋ ಒಂದು ರೀತಿಯಲ್ಲಿ ಕುಂಭ



ಕರ್ಣನಿಗೆ ಎಚ್ಚರವಾಯಿತು. ಎದ್ದಕೂಡಲೇ ದೊಡ್ಡದಾಗಿ ಆಕಳಿಸಿ, ಹಸಿವೆಯಿಂದ ಇದಿರಿನಲ್ಲಿದ್ದ ಆಹಾರದ ರಾಶಿಯನ್ನು ಬಾಚಿಬಾಚಿ ತಿನ್ನತೊಡಗಿದ. ಹಂಡೆಗಳ ಮೇಲೆ ಹಂಡೆಯನ್ನು ಕುಡಿದ. ಆಮೇಲೆ ಸುತ್ತಲೂ ನಿಂತಿದ್ದ ರಾಕ್ಷಸರ ಕಡೆಗೆ ನೋಡಿ, "ನೀವು ನನ್ನನ್ನು ಎಬ್ಬಿಸಿದಿರಾ ? ತುಂಬ ಕಷ್ಟ ಪಟ್ಟಿರಾ ? ಏಕೆ ? ಏನಾಯಿತು ? ರಾವಣನಿಗೆ ಕ್ಷೇಮತಾನೇ ?" ಎಂದು ಪ್ರಶ್ನೆಮಾಡಿದ. ಏನೋ ಮುಳುಗಿಹೋಗುವಂತಹ ಅಪಾಯ ಬಂದುದರಿಂದಲೇ ತನ್ನನ್ನು ನಿದ್ದೆಯಿಂದ ಎಬ್ಬಿಸಿದ್ದಾರೆಂದು ಅವನಿಗೆ ತೋರುತ್ತಿತ್ತು.

ರಾವಣನ ಮಂತ್ರಿ ಯೂಪಾಕ್ಷನು ಕುಂಭಕರ್ಣನ ಪ್ರಶ್ನೆಗಳಿಗೆ ಹೀಗೆ ಪ್ರತ್ಯುತ್ತರಕೊಟ್ಟ: "ಕುಂಭಕರ್ಣ, ಮೊದಲು ನಮಗೆ ಯಾವ ದೇವತೆಗಳಿಂದಲೂ ದೈತ್ಯರಿಂದಲೂ, ದಾನವರಿಂದಲೂ ಬಾರದಿರುವಂತಹ ಭಯವು ಈಗ ಕೇವಲ ಮಾನವರಿಂದ ಬರಲಾರಂಭವಾಗಿದೆ. ಅವರೊಂದಿಗೆ ವಾನರರೂ ಸೇರಿದ್ದಾರೆ. ಗುಡ್ಡದಂತಹ ವಾನರರ ಟೋಳಿ ಲಂಕೆಯನ್ನು ಮುತ್ತಿಕೊಂಡಿವೆ. ಸೀತೆಯನ್ನು ಎತ್ತಿಕೊಂಡು ಬಂದುದಕ್ಕಾಗಿ ರಾಮನು ತುಂಬ ಕೋಪದಿಂದ ಲಂಕೆಗೇ ದೊಡ್ಡ ಭಯವನ್ನುಂಟು ಮಾಡಿದ್ದಾನೆ. ಮೊದಲು ಒಬ್ಬನೇ ಒಬ್ಬ ವಾನರನು ಬಂದು ಅಕ್ಷಕುಮಾರನನ್ನು ಕೊಂದು ಲಂಕೆಯನ್ನು ಸುಟ್ಟುಹಾಕಿದ. ಈಗ ರಾಮನು ರಾವಣನನ್ನು ಯುದ್ಧದಲ್ಲಿ ಹೊಡೆದು ಸತ್ತನೆಂದುಕೊಂಡುಬಿಟ್ಟಿದ್ದಾನೆ. ರಾವಣನಿಗೆ ದೇವದಾನವರಾರಿಂದಲೂ ಮಾಡಲಾಗದ ಅವಮಾನವನ್ನು ಈ ರಾಮನು ಮಾಡಿದ"


ತನ್ನ ಅಣ್ಣ ಯುದ್ಧದಲ್ಲಿ ಸೋತುಹೋದನೆಂಬ ಮಾತು ಕೇಳಿದ ಕೂಡಲೇ ಕುಂಭಕರ್ಣನು ಮೆಟ್ಟಿಬಿದ್ದು ಕೋಪದಿಂದ ಯೂಪಾಕ್ಷನೊಂದಿಗೆ ಹೀಗೆ ಹೇಳಿದನು :

"ಏನೇನು ? ನಾನು ಈಗಲೇ ಹೋಗಿ ವಾನರಸೇನೆಯನ್ನೂ ರಾಮಲಕ್ಷ್ಮಣರನ್ನೂ ಕೊಂದು ಆಮೇಲೆ ರಾವಣನನ್ನು ನೋಡುತ್ತೇನೆ. ಅವರೆಲ್ಲಿದ್ದಾರೆ ತೋರಿಸು. ವಾನರರ ರಕ್ತಮಾಂಸಗಳನ್ನು ರಾಕ್ಷಸರಿಗೆ ತಿನ್ನಿಸಿ, ರಾಮಲಕ್ಷ್ಮಣರ ರಕ್ತವನ್ನು ನಾನೇ ಕುಡಿದುಬಿಡುತ್ತೇನೆ."

ಕೋಪದಿಂದ ಮೈಮರೆತು ಗರ್ವದಿಂದಾಡಿದ ಕುಂಭಕರ್ಣನ ಮಾತುಗಳನ್ನು ಕೇಳಿ, ಮಹೋದರನು ಕೈಮುಗಿದು ಕುಂಭಕರ್ಣನನ್ನು ನೋಡಿ, "ನೀನು ಮೊದಲು ರಾವಣನ ಬಳಿಗೆ ಬಂದು ಅವನು ಹೇಳುವುದನ್ನು ಕೇಳಿ ಒಳಿತು ಕೆಡಕುಗಳನ್ನು ಆಲೋಚಿಸಿ, ಆಮೇಲೆ ಯುದ್ಧದಲ್ಲಿ ಶತ್ರುಗಳನ್ನು ಜಯಿಸಬೇಕು. ದುಡುಕುವುದರಿಂದ ರಾವಣನಿಗೆ ಇನ್ನಿಷ್ಟು ಬೇಸರವಾಗುವ ಸಂಭವವಿದೆ." ಎಂದು ಅರಿಕೆ ಮಾಡಿದನು.



25-8



December 1976

ವೀರಹನುಮಾನ್

ಮಹೋದರನು ಹೇಳಿದ ಮಾತು ಕಾಲೋಚಿತವಾಗಿರುವುದನ್ನು ಮನಗಂಡು ಕುಂಭಕರ್ಣನು ರಾಕ್ಷಸರೊಂದಿಗೆ ಕೂಡಿ, ರಾವಣನ ಮನೆಯ ಕಡೆಗೆ ಹೊರಟನು.

ಕೆಲಮಂದಿ ರಾಕ್ಷಸರು ಮುಂದಾಗಿ ರಾವಣನ ಬಳಿಗೆ ಓಡಿ ಹೋಗಿ "ಮಹಾಪ್ರಭು, ಕುಂಭಕರ್ಣನು ನಿದ್ದೆಯಿಂದ ಎದ್ದಾಯಿತು. ಈ ಕಡೆಗೇ ಬರುತ್ತಿದ್ದಾನೆ, ನಿಮಗೆ ಏನಾದರೂ ಅವಸರ ಆಜ್ಞೆಯೆ? ಹಾಗಿಂದ ಹಾಗೇ ಯುದ್ಧರಂಗಕ್ಕೆ ಹೋಗಬೇಕೋ? ಇಲ್ಲಿಗೆ ಬಂದು ನಿನ್ನನ್ನು ನೋಡಿ ಹೋದರೆ ಆಗಬಹುದೋ?" ಎಂದು ಪ್ರಶ್ನೆ ಮಾಡಿದರು.

"ಇಲ್ಲಿಗೇ ಬರಲಿ. ನಾನು ಕುಂಭಕರ್ಣನನ್ನು ನೋಡಬೇಕು. ಅವನನ್ನು ಮರ್ಯಾದೆಯಿಂದ ಇಲ್ಲಿಗೇ ಕರೆದುಕೊಂಡು ಬನ್ನಿ" ಎಂದ ರಾವಣ.

ರಾಕ್ಷಸರು, ಹಿಂದಿರುಗಿ ಹೋಗಿ ಈ ಮಾತನ್ನು ಕುಂಭಕರ್ಣನಿಗೆ ಹೇಳಿದರು. ಕುಂಭಕರ್ಣನು ಅನುಮಾನವೆಲ್ಲ ತೀರಿ ರಾವಣನ ಮನೆಗೆ ಹೊರಟನು.

ಹಾಗೆ ಕುಂಭಕರ್ಣನು ರಾವಣನ ಮನೆಗೆ ಬರುವಾಗ ಅವನ ದೇಹಗಾತ್ರವು ಪ್ರಾಕಾರಗಳನ್ನು ಮೀರಿ ಸುತ್ತಮುತ್ತಲೂ ಕಾಣಿಸುತ್ತಿದ್ದಿತು. ಹೊರಗಿದ್ದ ವಾನರರು ಆ ಮಹಾ ಗಾತ್ರವನ್ನು ನೋಡಿ ಹೆದರಿ ಕಿರಿಚುತ್ತ ಆಚೆಗೂ ಈಚೆಗೂ ಓಡತೊಡಗಿದರು. ರಾಮನೂ ಆ ಕುಂಭಕರ್ಣನನ್ನು ನೋಡಿದನು. ವಾನರ ಸೇನೆ ಹೆದರಿ ಚೆಲ್ಲಾಚೆದರಾಗಿ ಓಡುವುದನ್ನೂ ನೋಡಿದನು. ಆ ವಿಶೇಷ ರೂಪದ ರಾಕ್ಷಸಾಕಾರವನ್ನು ನೋಡಿ ರಾಮನು ವಿಭೀಷಣನೊಂದಿಗೆ, "ದೊಡ್ಡದಾದ ಕಾರ್ಮೋಡದ ತುಂಡಿನ ಹಾಗೆ ಹೋಗುತ್ತಿರುವ ಆ ರಾಕ್ಷಸನು ಯಾರು?" ಎಂದು ಕೇಳಿದನು. ವಿಭೀಷಣನು ರಾಮನಿಗೆ ಹೀಗೆ ಹೇಳಿದನು:

"ಇವನು ಕುಂಭಕರ್ಣನೆಂಬ ರಾವಣನಿಗೆ ತಮ್ಮ; ನನಗೆ ಅಣ್ಣ; ವಿಶ್ರವಸುವಿನ ಮಗ. ಇವನು ಇಂದ್ರನನ್ನು ಕೂಡಾ ಜಯಿಸಿದವನು. ಇವನಿಗಿರುವಷ್ಟು ದೊಡ್ಡದಾದ ಗಟ್ಟಿದೇಹ ಬೇರೆ ಯಾವ ರಾಕ್ಷಸರಿಗೂ ಇಲ್ಲ. ಇತರ ರಾಕ್ಷಸರು ತಪಸ್ಸಿನಿಂದ ವರಗಳನ್ನು

26-1



ಪಡೆದು ಬಲವಂತರಾದವರಾದರೆ, ಕುಂಭಕರ್ಣನು ಹುಟ್ಟುವಾಗಲೇ ಮಹಾಬಲಶಾಲಿ. ಅದರಂತೆ ಇವನ ಹಸಿವೆಯೂ ದೊಡ್ಡದು. ಹುಟ್ಟಿದ ಕೂಡಲೇ ಹಸಿವೆಯಿಂದ ಪೀಡಿತನಾಗಿ ಅನೇಕ ಸಾವಿರ ಪ್ರಾಣಿಗಳನ್ನು ತಿಂದುಬಿಟ್ಟ. ಈ ಅವಾಂತರವನ್ನು ನೋಡಿ ಪ್ರಜೆಗಳು ಹೆದರಿ ಇಂದ್ರನ ಬಳಿಗೆ ಓಡಿ ಹೋಗಿ ಶರಣಾಗಿ ಮೊರೆಯಿಟ್ಟರು. ಇಂದ್ರನು ಮಹಾಕೋಪದಿಂದ ಕುಂಭಕರ್ಣನನ್ನು ವಜ್ರಾಯುಧದಿಂದ ಹೊಡೆದನು. ಆಗ ಕುಂಭಕರ್ಣನು ಮಾಡಿದ ಸಿಂಹನಾದದಿಂದ ಪ್ರಜೆಗಳು ಕಿವುಡರಂತಾಗಿ ದಿಕ್ಕು ದಿಕ್ಕಿಗೆ ಓಡತೊಡಗಿದರು. ಕುಂಭಕರ್ಣನು ಇಂದ್ರನ ಐರಾವತದ ಒಂದು ದಂತವನ್ನು ಕಿತ್ತು ಅದರಿಂದ ಇಂದ್ರನ ಎದೆಯನ್ನು ತಿವಿದನು. ಇಂದ್ರನು ನೊಂದು, ತನ್ನಿಂದೇನೂ ಮಾಡಲಿಕ್ಕಾಗದೆ, ಪ್ರಜೆಗಳನ್ನು ತನ್ನೊಂದಿಗೆ ಕರೆದುಕೊಂಡು ಬ್ರಹ್ಮಲೋಕಕ್ಕೆ ಹೋಗಿ, ಬ್ರಹ್ಮನ ಹತ್ತಿರ ಸಂಗತಿಯನ್ನು ಹೇಳಿ ಕಾಪಾಡುವಂತೆ ಕೇಳಿಕೊಂಡನು. ಬ್ರಹ್ಮದೇವನು ಎಲ್ಲಾ ರಾಕ್ಷಸರನ್ನೂ ತನ್ನ ಬಳಿಗೆ ಕರೆಯಿಸಿ, ಅವರೊಂದಿಗೆ ಬಂದ ಕುಂಭಕರ್ಣನನ್ನೂ ನೋಡಿದನು. ಅವನನ್ನು ನೋಡಿದ ಕೂಡಲೇ ಬ್ರಹ್ಮನಿಗೆ ಭಯವೆನಿಸಿತು. ಅಂತೆಯೇ ಬ್ರಹ್ಮನು ಕುಂಭಕರ್ಣನೊಂದಿಗೆ, "ಲೋಕವನ್ನು ನಾಶಮಾಡಲಿಕ್ಕೇ ವಿಶ್ರವಸುವಿಗೆ ಮಗನಾಗಿ ಹುಟ್ಟಿದೆಯಾ? ನೀನು ಸರ್ವಕಾಲ ಸರ್ವಾವಸ್ಥೆಯಲ್ಲಿಯೂ ಮೈ ತಿಳಿಯದೆ ನಿದ್ದೆಯಲ್ಲಿ ಬಿದ್ದಿರು" ಎಂದು ಹೇಳಿಬಿಟ್ಟನು. ಆ ಶಾಪ ತಾಗಿದ ಕೂಡಲೇ ಕುಂಭಕರ್ಣನು ಬ್ರಹ್ಮನ ಇದಿರಿನಲ್ಲೇ ಬಿದ್ದು ನಿದ್ದೆಯಲ್ಲಿ ಮುಳುಗಿದನು. ಅದನ್ನು ನೋಡಿ ರಾವಣನು ಬ್ರಹ್ಮನೊಂದಿಗೆ, "ತಾತಾ, ನಿನ್ನ ಮರಿಮೊಮ್ಮಗನಾದ ಕುಂಭಕರ್ಣನನ್ನು ಹೀಗೆ ಶಪಿಸುವುದುಂಟೆ? ನಿನ್ನ ಬಾಯಿಯಿಂದ ಹೊರಟು ಬಂದ ಮಾತು ಎಂದಿಗೂ ಸುಳ್ಳಾಗುವುದಿಲ್ಲ. ಕುಂಭಕರ್ಣನು ನಿದ್ದೆ ಮಾಡಿಕೊಂಡಿದ್ದರೆ ಮಾಡಲಿ. ಆದರೆ ಅವನು ನಿದ್ದೆ ಮಾಡಲಿಕ್ಕೂ, ಎಚ್ಚರದಲ್ಲಿರಲಿಕ್ಕೂ ಒಂದು ಕಾಲನಿಯಮವನ್ನಿಡು" ಎಂದು ಕೇಳಿಕೊಂಡನು. ಆಗ ಬ್ರಹ್ಮನು ಕುಂಭಕರ್ಣನು ಆರು ತಿಂಗಳು ನಿದ್ರೆಯಲ್ಲಿದ್ದು, ಒಂದು ದಿನ ಎಚ್ಚರದಲ್ಲಿರುವಂತೆಯೂ, ಎಚ್ಚರದಲ್ಲಿದ್ದಾಗ ಹಸಿವೆಯಿಂದ ಅಗ್ನಿಹೋತ್ರನಂತೆ ಬೇಕಾದಷ್ಟು ಸ್ವಾಹಾ ಮಾಡುವಂತೆಯೂ ನಿಯಮವಿಟ್ಟನು.

"ರಾಮಾ, ನಿನ್ನ ಪರಾಕ್ರಮವನ್ನು ಕಂಡು ಹೆದರಿದ ರಾವಣನು, ಈಗ ಕುಂಭಕರ್ಣನನ್ನು ನಿದ್ದೆಯಿಂದ ಎಬ್ಬಿಸಿದ್ದಾನೆ. ಮಹಾ ಭಯಂಕರ ಪರಾಕ್ರಮಿಯಾದ ಕುಂಭಕರ್ಣನು ವಾನರರನ್ನು ಆತ್ಯಾಶೆಯಿಂದ ತಿನ್ನಲಿಕ್ಕೆ ಬರಬಹುದು. ಅಂತೆಯೇ ವಾನರರು ಅವನನ್ನು ನೋಡಿ ಹೆದರಿ ಓಡುತ್ತಿದ್ದಾರೆ. ಹೀಗೆ ಭಯದಿಂದ ಓಡುತ್ತಿರುವ ವಾನರರು ಕುಂಭಕರ್ಣನನ್ನು ಹೇಗೆ ಇದಿರಿಸಿ ಹೋರಾಡಬಲ್ಲರು? ಅದು ಕದಲುವ ಒಂದು ಯಂತ್ರವೇ ಹೊರತು ನಿಜವಾದ





ರಾಕ್ಷಸನಲ್ಲ, ಎಂದು ಅವರಿಗೆ ಹೇಳಬೇಕು. ಹಾಗೆ ಹೇಳಿದರೆ ಅವರ ಭಯವು ಹೋಗಿ, ಯಂತ್ರವನ್ನು ಕೆಡಿಸಿಹಾಕುವ ರೀತಿಯಲ್ಲಿ ಯುದ್ಧ ಮಾಡುವರು."

ರಾಮನು ವಿಭೀಷಣನು ಹೇಳಿದ ಮಾತಿನಿಂದ ತೃಪ್ತನಾಗಿ, ನೀಲನನ್ನು ಕರೆದು ಲಂಕೆಯ ಎಲ್ಲಾ ದ್ವಾರಗಳಲ್ಲಿಯೂ ದಾಳಿ ಮಾಡುವಂತೆ ಅಪ್ಪಣೆ ಕೊಟ್ಟನು. ವಿಭೀಷಣನು ಹೆದರುವ ವಾನರರಿಗೆ ಧೈರ್ಯ ಹೇಳಿ ಹಿಂದಿರುಗುವಂತೆ ಮಾಡಿದನು.

ಗವಾಕ್ಷ, ಶರಭ, ಹನುಮಂತ, ಅಂಗದ ಈ ನಾಲ್ವರೂ ಪರ್ವತ ಶಿಖರಗಳನ್ನು ಎತ್ತಿಕೊಂಡು ಯುದ್ಧಕ್ಕೆ ಬಂದರು.

ಅತ್ತಕಡೆ ಸಾಗಿದ ಕುಂಭಕರ್ಣನು, ಇನ್ನೂ ಪೂರ್ತಿಯಾಗಿ ಬಿಡದ ನಿದ್ದೆ ಮತ್ತಿನೊಂದಿಗೆ ರಾವಣನ ಬಳಿಗೆ ಬಂದನು. ರಾವಣನು ಚಿಂತೆಯಲ್ಲಿರುವುದನ್ನು ನೋಡಿ ತಲೆಯಾಡಿಸಿದನು. ರಾವಣನು ಕುಂಭಕರ್ಣನನ್ನು ನೋಡಿ, ಅತ್ಯಂತ ಸಂತೋಷದಿಂದ ಮುಂದೆ ಬಂದು ಆಲಿಂಗಿಸಿ ಆಸನದಲ್ಲಿ ಕೂಡಿಸಿ, ತಾನೂ ಕುಳಿತುಕೊಂಡನು. ಆಗ ಕುಂಭಕರ್ಣನು ಅಣ್ಣನನ್ನು ಕುರಿತು, "ನಿನಗೇನು ಕಷ್ಟ ಬಂದಿದೆ ಅಣ್ಣಯ್ಯಾ? ನಿದ್ದೆಯಲ್ಲಿದ್ದ ನನ್ನನ್ನು ಏಕೆ ಎಬ್ಬಿಸಿ ಕರೆಸಿರುವೆ? ನಿನಗೆ ಇಷ್ಟು ಭಯವನ್ನುಂಟು ಮಾಡಿದವನು ಯಾರು? ಯಾವನು ಸಾವಿನ ಮನೆ ಬಾಗಿಲು ಮೆಟ್ಟಿದವನು?" ಎಂದು ಕೇಳಿದನು.

ರಾವಣನು ರಾಮನ ಸಮಾಚಾರವನ್ನು ಅವನಿಗೆ ಹೇಳಿ, "ಕುಂಭಕರ್ಣಾ, ನನಗೆ ಈಗ ಆ ರಾಮನಿಂದಲೇ ಭಯವು ಪ್ರಾಪ್ತವಾಗಿದೆ. ಅವನು ಸುಗ್ರೀವನೊಂದಿಗೂ ವಾನರರ ಸೇನೆಯೊಂದಿಗೂ ಸಮುದ್ರ ದಾಟಿ ಬಂದು ನಮ್ಮ ಸರ್ವನಾಶ ಮಾಡಲು ತಯಾರಾಗಿದ್ದಾನೆ. ಲಂಕೆಯಲ್ಲಿ ಎಲ್ಲಿ ನೋಡಿದರೂ ವಾನರರೇ ತುಂಬಿಹೋಗಿದ್ದಾರೆ. ಇದು ವರೆಗೆ ನಡೆ ಯುದ್ಧದಲ್ಲಿ ವಾನರ ವೀರನೊಬ್ಬನೂ ಸಾಯಲಿಲ್ಲ. ಆದರೆ ವಾನರರ ಕೈಯಲ್ಲಿ ರಾಕ್ಷಸ ವೀರರು ಅನೇಕರು ಸತ್ತುಹೋಗಿಬಿಟ್ಟರು. ಆದುದರಿಂದಲೇ ನಿನ್ನನ್ನು ಎಬ್ಬಿಸಬೇಕಾಯಿತು. ನೀನೀಗ ವಾನರರನ್ನೆಲ್ಲ ಕೊಂದು ಲಂಕೆಯನ್ನು ಕಾಪಾಡಬೇಕಾಗಿದೆ. ನೀನು ನಿದ್ದೆಯಿಂದೇಳುವುದೇ ಕಷ್ಟ ಹೊರತು, ಎದ್ದು ಬಂ ಮೇಲೆ ಇನ್ನೇನೂ ಭಯವಿಲ್ಲ." ಎಂದನು.

ಕುಂಭಕರ್ಣನು ನಕ್ಕು, "ಹೌದು ಹೌ ಮೊದಲು ನಾವೊಮ್ಮೆ ಸಮಾಲೋಚನೆ ಮಾ ಕೊಂಡಾಗ ಹೇಗಾಗುವುದೆಂದು ಆಲೋಚನೆ ಮಾ ಕೊಂಡೆವೋ ಹಾಗೆಯೇ ಆಗಿದೆ ಅನ್ನು. ಸೀತೆಯನ್ನು ಅನ್ಯಾಯವಾಗಿ ಅಪಹರಿಸಿ ತಂದ ಪಾಪಕ್ಕೆ ಕೂಡಲೆ ಫಲಿತವು ಕಂಡುಬಂದಿತು ನೋಡಿದೆಯಾ? ವಿಷಯದಲ್ಲಿ ನಮ್ಮ ತಮ್ಮ ವಿಭೀಷಣನು ಹೇಳಿದು ನಮಗೆ ಹಿತವಾದುದಾಗಿತ್ತು. ಈಗ ನಿನಗೆ ತೋರುವುದೋ ಹಾಗೇ ಮಾಡೋಣ." ಎಂದ

ರಾವಣನು ಕೋಪದಿಂದ, "ಕುಂಭಕರ್ಣಾ,

ಗಿಂತ ಚಿಕ್ಕವನಾದ ನೀನು ನನಗೆ ನೀತಿ ಬೋಧೆ ಮಾಡುವಿಯೇನು? ಇದೀಗ ನೀತಿ ನ್ಯಾಯಗಳನ್ನು ಕುರಿತು ಆಲೋಚಿಸುವ ಹೊತ್ತಲ್ಲ, ಪರಾಕ್ರಮ ತೋರಿಸುವ ಹೊತ್ತು!" ಎಂದನು.

ಆ ಮಾತಿಗೆ ಕುಂಭಕರ್ಣನು, "ಹೌದು, ಅಣ್ಣ! ರಾಕ್ಷಸ ರಾಜಾ, ನಾನು ನಿನಗೆ ತಮ್ಮನೂ ಬಂಧುವೂ ನಿಜ. ನಿನಗೆ ಹಿತವಾದುದನ್ನು ಹೇಳಬೇಕಾದುದೂ ನನಗೆ ವಿಧಿಯೇ. ಕಾಲ ಮೀರಿತು ನಿಜ. ಈಗ ನಿನ್ನ ಚಿಂತೆಯ ವಿಷಯಕ್ಕೇ ಬರುತ್ತೇನೆ. ಅಣ್ಣಾ, ಇನ್ನು ನೀನು ಪೂರ್ಣ ನಿಶ್ಚಿಂತನಾಗಿದ್ದುಬಿಡು. ನಿನ್ನ ಶತ್ರುಗಳೆಲ್ಲರನ್ನೂ ಕೊಂದುಹಾಕುತ್ತೇನೆ. ರಾಮಲಕ್ಷ್ಮಣರನ್ನು ಕೊಂದು ವಾನರ ಸೇನೆ ಓಡಿ ಹೋಗಿ ಸಮುದ್ರದಲ್ಲಿ ಬಿದ್ದು ಸಾಯುವ ಹಾಗೆ ಮಾಡುತ್ತೇನೆ. ತಮ್ಮ ಬಂಧು ಜನರನ್ನು ಕಳೆದುಕೊಂಡು ದುಃಖಿಸುತ್ತಿರುವ ರಾಕ್ಷಸರಿಗೆಲ್ಲಾ ಸಂತೋಷವಾಗುವ ಹಾಗೆ ಮಾಡುತ್ತೇನೆ. ನಾನು ಬದುಕಿರುವಾಗ ರಾಮನಿಂದ ನಿನಗೆ ಯಾವ ಭಯವೂ ಇಲ್ಲ" ಎಂದನು.

ಈ ಮಾತು ಕೇಳುತ್ತಿದ್ದ ಮಹೋದರನು ಕುಂಭ-ಕರ್ಣನನ್ನು ನಿಂದಿಸಲು ತೊಡಗಿ, "ರಾವಣನು ಸೀತೆಯನ್ನು ಎತ್ತಿಕೊಂಡು ಬರುವೆನೆಂದಾಗ ನಾವೆಲ್ಲಾ ಅದಕ್ಕೆ ಒಪ್ಪಿದ್ದೇವೆ. ಯಾರ ಹಿತವನ್ನೂ ಕೇಳದೆ ರಾವಣನು ಆ ಕೆಲಸ ಮಾಡಿದವನಲ್ಲ. ನೀನು ಈಗ ನಿನ್ನ ಪರಾಕ್ರಮವನ್ನು ದೊಡ್ಡದಾಗಿ ಹೇಳಿಕೊಂಡು ಒಬ್ಬನೇ ಯುದ್ಧಕ್ಕೆ ಹೋಗುವೆನೆನ್ನುವೆಯಲ್ಲ? ಇದು ಉಚಿತವಾಗಿಲ್ಲ. ಜನಸ್ಥಾನದಲ್ಲಿ ಅನೇಕ ಮಂದಿ ರಾಕ್ಷಸರನ್ನು ಒಬ್ಬಂಟಿಗನಾಗಿ ಕೊಂದ ರಾಮನನ್ನು ನೀನು ಒಬ್ಬನೇ ಹೋಗಿ ಕೊಲ್ಲುವುದು ಸಾಧ್ಯವೇ? ಜನಸ್ಥಾನದಲ್ಲಿ ರಾಮನ ಪರಾಕ್ರಮಕ್ಕೆ ಹೆದರಿ ಓಡಿ ಜೀವವುಳಿಸಿಕೊಂಡ ರಾಕ್ಷಸರು ಈಗಲೂ ರಾಮನ ಹೆಸರು ಹೇಳಿದರೆ ಹೆದರಿ ನಡುಗುತ್ತಾರೆ!" ಎಂದನು.

ಮಹೋದರನು ಹೇಳಿದುದನ್ನು ಕೇಳಿ ಕುಂಭ



ಕರ್ಣನಿಗೆ ಭಾರಿ ಸಿಟ್ಟು ಬಂತು. ಅವನು ಮಹೋದರನನ್ನು ದುರುಗುಟ್ಟಿ ನೋಡುತ್ತ, "ಎಲೈ ಮಹೋದರಾ! ಇಂತಹ ಮಾತುಗಳನ್ನು ಇನ್ನೆಂದೂ ಹೇಳಿಬಿಡಬೇಡ. ಎಚ್ಚರ! ಅಂಜುಗುಳಿಗಳೂ ಬುದ್ಧಿಹೀನರೂ ಬೇಕಾದರೆ ನಿನ್ನ ಮಾತುಗಳನ್ನು ಕೇಳಬಹುದು. ಇಂತಹ ರಣಹೇಡಿಗಳ ಮಾತು ಕೇಳಿಯೇ ರಾವಣನ ಮೇಲೆ ಇಂತಹ ಆಪತ್ತು ಬಂದಿದೆ. ನಿಮಗೆಲ್ಲ ಯುದ್ಧವೆಂದರೆ ಭಯ; ರಾಜನು ಹೇಳಿದ ಮಾತಿಗೆಲ್ಲಾ ತಕ್ಕಹಾಗೆ ತಾಳ ಬಾರಿಸುತ್ತ ಮುಖಕ್ಕೆ ತಕ್ಕ ಮಾತಾಡುತ್ತಿದ್ದುದರಿಂದಲೇ ಇಷ್ಟು ದೂರ ಬಂದಿದೆ. ನಿಮ್ಮ ಮೂಲಕವಾಗಿ ಲಂಕೆ ನಾಶವಾಗುವ ಸ್ಥಿತಿಗೇ ಬಂದಿದೆ. ಬೊಕ್ಕಸ ಖಾಲಿಯಾಗಿದೆ. ಸೈನ್ಯವೆಷ್ಟೋ ಹೋಯಿತು. ನೀವು ರಾಜನನ್ನು ಶತ್ರುವಿನಂತೆ ನೋಡಿದಂತಿದೆ. ಸರಿ, ಇರಲಿ. ನೀವೆಲ್ಲಾ ಸೇರಿ ಮಾಡಿದ ತಪ್ಪಿಗೆ ನಾನೇ ಯುದ್ಧಭೂಮಿಗೆ ಹೋಗುತ್ತೇನೆ" ಎಂದನು.



ಕುಂಭಕರ್ಣನು ಹೇಳಿದ ಮಾತು ಕೇಳಿ ರಾವಣನು ಗಹಗಹಿಸಿ ನಕ್ಕನು. "ಈ ಮಹೋದರನಿಗೆ ರಾಮನೆಂದರೆ ಬಹಳ ಭಯ. ಆದುದರಿಂದಲೇ ಯುದ್ಧ ಮಾಡುವುದು ಬೇಡವೆಂದು ಆಗಾಗ ಹೇಳುತ್ತಿರುತ್ತಾನೆ. ಇಂಥವನನ್ನು ನಂಬಿ ನಾನು ಈ ಕಾರ್ಯಕ್ಕೆ ಕೈಹಾಕಿದ್ದಲ್ಲ. ನೋಡು ಕುಂಭಕರ್ಣಾ, ನನಗೆ ನಿನಗಿಂತ ಸಮೀಪದ ಬಂಧುವೂ, ನಿನ್ನಷ್ಟು ಪರಾಕ್ರಮವಂತನೂ ಇನ್ನೊಬ್ಬನಿಲ್ಲ. ಈಗ ಯುದ್ಧದ ಹೊರತು ಬೇರೆ ಮಾತಿನಿಂದಲೂ ಪ್ರಯೋಜನವಿಲ್ಲ. ನೀನು ಕೂಡಲೇ ಯುದ್ಧಕ್ಕೆ ಹೊರಟುಬಿಡು. ವಾನರರನ್ನು ಭಕ್ಷಿಸು. ಯುದ್ಧದಲ್ಲಿ ರಾಮಲಕ್ಷ್ಮಣರನ್ನು ಕೊಂದು ಜಯಶಾಲಿಯಾಗಿ ಬಾ." ಎಂದ ರಾವಣ.

ಕೂಡಲೇ ಕುಂಭಕರ್ಣನು ಯುದ್ಧಕ್ಕೆ ಹೊರಡಲು ಸಿದ್ಧನಾದನು. ತುಂಬ ಹರಿತವಾದ ಶೂಲವನ್ನು ಕೈಗೆತ್ತಿಕೊಂಡನು. ಅದು ಕಬ್ಬಿಣದಿಂದ ಮಾಡಲ್ಪಟ್ಟಿತ್ತು. ಅದರಲ್ಲಿ ಥಳಥಳಿಸುವ ಬಂಗಾರದ ಅಲಂಕಾರಗಳಿದ್ದುವು. ಕೆಂಪು ಬಣ್ಣದ ಹೂವು ಮಾಲೆಯಿಂದ ಪೂಜಿಸಲ್ಪಟ್ಟ ಶೂಲವದು. ಆ ಮಹಾ ಶೂಲವನ್ನು ಧರಿಸಿಕೊಂಡ ಕುಂಭಕರ್ಣನು ರಾವಣನನ್ನು ನೋಡಿ, "ನಾನೀಗ ಒಬ್ಬಂಟಿಗನಾಗಿಯೇ ಯುದ್ಧರಂಗಕ್ಕೆ ಹೋಗಿಬರುತ್ತೇನೆ. ನನ್ನ ಸೇನೆಗಳು ಇಲ್ಲಿಯೇ ಇರಲಿ. ನೀನು ಹೇಳಿದಂತೆ ನನ್ನನ್ನು ನೋಡಿ ಹೆದರಿದ್ಧ ವಾನರರನ್ನು ಹಿಡಿದು ತಿಂದು ತೀರಿಸಿಬಿಡುತ್ತೇನೆ." ಎಂದನು.

ರಾವಣನು ಕುಂಭಕರ್ಣನನ್ನು ತನ್ನ ಕೈಯಿಂದಲೇ ಅಲಂಕರಿಸಿದನು. ಕುಂಭಕರ್ಣನು ಅಭೇದ್ಯವಾದ ಯುದ್ಧ ಕವಚವನ್ನು ಧರಿಸಿ, ರಾವಣನನ್ನು ಆಲಿಂಗಿಸಿ ಅವನ ಆಶೀರ್ವಾದವನ್ನು ಪಡೆದು ಯುದ್ಧರಂಗದ ಕಡೆಗೆ ಹೊರಟನು. ಅವನ ಹಿಂದೆ ರಥಗಳ ಮೇಲೆ ಅನೇಕ ಮಂದಿ ರಾಕ್ಷಸ ವೀರರು ಸೈನ್ಯದೊಂದಿಗೆ ಹೊರಟಿದ್ದರು. ಶಂಖ, ಭೇರೀ, ಕೊಂಬು ಕಹಳೆಗಳು ಭಯಂಕರವಾಗಿ ಮೊಳಗಿದುವು.

ದಾರಿಯಲ್ಲಿ ಕುಂಭಕರ್ಣನು ರಾಕ್ಷಸರೊಂದಿಗೆ "ಹೌದು. ಈ ವಾನರರು ನಮಗೇನಾದರೂ ಅಪಕಾರ ಮಾಡಿದ್ದಾರೆಯೇ? ಇಲ್ಲ. ಒಂದು ನೋಡಿದರೆ ವಾನರರು ವನಗಳಿಗೆ ಅಲಂಕಾರವಾಗಿರುತ್ತಾರೆ. ಇಲ್ಲಿ ಈಗ ವಾನರರು ಹೀಗೆ ಬಂದು ಲಂಕೆಯನ್ನು ಮುತ್ತಿ ಹಾಕಲು ಕಾರಣ ರಾಮಲಕ್ಷ್ಮಣರೇ. ಆದುದರಿಂದ ಮೊದಲು ಅವರಿಬ್ಬರನ್ನೂ ಕೊಂದುಬಿಡಬೇಕು. ಅವರು ಕಣ್ಣಿಗೆ ಬಿದ್ದರೆ ಕೂಡಲೇ ನನಗೆ ತಿಳಿಸಿರಿ" ಎಂದನು. ರಾಕ್ಷಸರು ಹರ್ಷಧ್ವಾನಗಳಿಂದ ಅವನ ಮಾತಿಗೆ ಸಮ್ಮತಿ ತಿಳಿಸಿದರು.

ಹೀಗೆ ಅಟ್ಟಹಾಸದಿಂದ ಯುದ್ಧಕ್ಕೆ ಬರುವ ಕುಂಭಕರ್ಣನನ್ನು ನೋಡಿದ ಕೂಡಲೇ ವಾನರರ ಸೇನೆ ಚೆಲ್ಲಾಚೆದರಾಗಿ ಓಡ ತೊಡಗಿತು. ಅದನ್ನು ನೋಡಿ ಕುಂಭಕರ್ಣನು ಬಹಳವಾಗಿ ಸಂತೋಷಪಟ್ಟನು. ಅಂಗದನು ವಾನರರ ಭಯವನ್ನು ನೋಡಿ, ನಳ

ನೀಲ, ಗವಾಕ್ಷ, ಕುಮುದರೆಂಬ ಪ್ರಮುಖ ವಾನರರೊಡನೆ, "ಏಕೆ ಹೀಗೆ ಹೆದರುವಿರಿ? ನೀವು ನಿಮ್ಮ ಸ್ವರೂಪವನ್ನೂ, ಪರಾಕ್ರಮವನ್ನೂ, ವಂಶದ ಮಹಿಮೆಯನ್ನೂ ಮರೆತು, ಸಾಧಾರಣ ಕೋತಿಗಳ ಹಾಗೆ ಓಡುವುದೆಂದರೇನು? ಎಲ್ಲಿಯ ವರೆಗೆ ಓಡುವಿರಿ? ಎಲ್ಲಾ ಹಿಂದಿರುಗಿ ಬನ್ನಿ. ನಿಮಗೆ ಈಗ ಪ್ರಾಣದ ಮೇಲೆ ಆಶೆ ಬಂದಿದೆಯೋ? ಭಯಕ್ಕೂ ಆಶೆಗೂ ವ್ಯತ್ಯಾಸವೇನಿಲ್ಲ! ಅಲ್ಲಿ ನೋಡಿ. ಈಗ ಯುದ್ಧಕ್ಕೆ ಬಂದಿರುವುದು ಯಾವ ರಾಕ್ಷಸ ವೀರನೂ ಅಲ್ಲ. ನಿಮ್ಮನ್ನು ಎದುರಿಸಲಿಕ್ಕಾಗಿ ತಯಾರಿಸಿದ ಯಂತ್ರ. ಈ ಯಂತ್ರವನ್ನು ನಾಶ ಮಾಡಿಬಿಡೋಣ! ಬನ್ನಿ ಬನ್ನಿ!" ಎಂದು ಕೂಗಿ ಹೇಳಿದನು.

ಆ ಮಾತು ಕೇಳಿ ವಾನರರಿಗೆ ಧೈರ್ಯ ಬಂದಿತು. ಕೂಡಲೇ ಅವರೆಲ್ಲ ಅತ್ಯುತ್ಸಾಹದಿಂದ ಮರಗಳನ್ನೂ ಕಲ್ಲುಗಳನ್ನೂ ಎತ್ತಿಕೊಂಡು ಯುದ್ಧ ಮಾಡಲು ಹಿಂದಿರುಗಿದರು. ಅವರು ಮದ್ದಾನೆಗಳ ಹಾಗೆ ವಿಜೃಂಭಿಸಿ ಕುಂಭಕರ್ಣನೊಂದಿಗೆ ಯುದ್ಧಕ್ಕೆ ತೊಡಗಿದರು. ಆದರೆ ಅವರು ಬೀಸಿ ಬೀಸಿ ಒಗೆದ ಮರಗಳೂ, ಬಂಡೆಗಳೂ, ಗಿರಿಶಿಖರದ ತುಂಡುಗಳೂ ಕುಂಭಕರ್ಣನ ಮೇಲೆ ಹನಿಮಳೆಯಂತೆ ಬಿದ್ದುವೇ ಹೊರತು ಅವನನ್ನು ನೋಯಿಸಲು ಶಕ್ಯವಾಗಲಿಲ್ಲ. ಕುಂಭಕರ್ಣನು ಮಾತ್ರ ತನ್ನ ಅಳವಿಗೆ ಬಂದವರನ್ನು ಅನಾಯಾಸವಾಗಿ ಕೊಲ್ಲುತ್ತಿದ್ದನು.

ಈ ಸಾರಿ ವಾನರರು ಕುಂಭಕರ್ಣನಿಂದ ತಾಳಲಾಗದಷ್ಟು ಪೆಟ್ಟು ತಿಂದು ಹಿಂದಿರುಗಿ ನೋಡದೆ ಅತಿ ವೇಗವಾಗಿ ಓಡತೊಡಗಿದರು. ಕೆಲವರು ಓಡಿ ಓಡಿ ಸಮುದ್ರದೊಳಗೇ ಹಾರಿದರು. ಕೆಲವರು ಆಕಾಶಕ್ಕೆ ಹಾರಿ ಗಾಳಿಯಲ್ಲಿ ತೇಲಿಹೋದರು. ಮತ್ತೆ ಕೆಲವರು ತಾವು ಬಂದ ಸೇತುವೆಯ ಮೇಲಿನಿಂದಲೇ ಓಡಿಹೋಗ ತೊಡಗಿದರು. ಅಂಗದನು ಹಾರಿಹಾರಿ ಕೂಗಿಕೂಗಿ ಓಡುವವರನ್ನು ತಡೆಯುತ್ತಲೇ



ಇದ್ದನು. ಅವನ ಧೈರ್ಯ ವಚನಗಳಿಗಿಂತಲೂ ಕುಂಭಕರ್ಣನ ಪ್ರತಾಪವೇ ಹೆಚ್ಚಾಯಿತು. ಇಷ್ಟು ಸಾವಿರ ಮಂದಿ ವಾನರರು ಒಬ್ಬ ಕುಂಭಕರ್ಣನಿಗೆ ಹೆದರಿ ಓಡುವುದೆಂದರೇನೆಂದು ಅಂಗದನು ಬಹಳವಾಗಿ ಹೆಣಗಾಡಿದನು. ಆದರೆ ವಾನರರು ತಮಗೆ ಪ್ರಾಣ ಉಳಿದರೆ ಸಾಕೆಂದು ಓಡುವುದರಲ್ಲೇ ನಿರತರಾಗಿದ್ದರು. ಕಡೆಗೆ ಅಂಗದನು ಒಳ್ಳೆಯ ಮಾತುಗಳಿಂದ ಅವರಿಗೆಲ್ಲ ಸಮಾಧಾನ ಹೇಳಿ ಹಿಂದಿರುಗುವಂತೆ ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ಜಯಶಾಲಿಯಾದನು. ಅಂಗದನೊಂದಿಗೆ ಹನುಮಂತನೂ ಸೇರಿದುದರಿಂದ ವಾನರರು ಧೈರ್ಯಗೊಂಡು ಹಿಂದಿರುಗತೊಡಗಿದರು.

ಆಮೇಲೆ ಹನುಮಂತನ ನಾಯಕತ್ವದಲ್ಲಿ ಋಷಭ, ಶರಭ, ಮೈಂದ, ಧೂಮ್ರ, ನೀಲ, ಕುಮುದ, ಸುಷೇಣ, ಗವಾಕ್ಷ, ರಂಭ, ತಾರ, ದ್ವಿವಿಧ, ಪನಸ ಎಂಬ ವಾನರ ಪ್ರಮುಖರು ಸಾಯಲಿಕ್ಕೂ ಸಿದ್ಧರಾಗಿ ಯುದ್ಧಕ್ಕೆ ಹೊರಟರು.

ಇಷ್ಟರಲ್ಲೇ ಕುಂಭಕರ್ಣನು ಒಂದೇಸಮನೆ ವಾನರರನ್ನು ತಿನ್ನುತ್ತಿದ್ದನು. ದ್ವಿವಿಧನು ಒಂದು ಗುಡ್ಡವನ್ನು ಕಿತ್ತು ಕುಂಭಕರ್ಣನ ಮೇಲೆ ಎತ್ತಿ ಹಾಕಿದನು. ಅವನು ಬೀಸುವ ಗುಡ್ಡವು ಗುರಿತಪ್ಪಿ ಕುಂಭಕರ್ಣನೊಂದಿಗಿದ್ದ ರಾಕ್ಷಸ ಸೇನೆಯ ಮೇಲೆ ಬಿದ್ದಿತು. ಅದರ ಕೆಳಗೆ ಸಿಕ್ಕಿಕೊಂಡು ರಥಗಳೂ, ಕುದುರೆಗಳೂ, ರಾಕ್ಷಸರೂ ನಜ್ಜುಗುಜ್ಜಾದರು. ಅಷ್ಟರಲ್ಲಿ ದ್ವಿವಿಧನು ಮತ್ತೊಂದು ಪರ್ವತ ಶಿಖರವನ್ನು ಬಿಸುಟನು. ಅದು ಕೂಡಾ ರಾಕ್ಷಸ ಸೈನ್ಯದಲ್ಲಿ ಅಂತ್ಯವಿಲ್ಲದಷ್ಟು ನಷ್ಟವನ್ನುಂಟುಮಾಡಿತು. ರಾಕ್ಷಸ ರಥಿಕರು ಹಲ್ಲು ಕಟಕಟಿಸಿಕೊಂಡು ವಾನರರನ್ನು ಕೊಂದರು. ವಾನರರು ಮಹಾ ವೃಕ್ಷಗಳೊಂದಿಗೆ ರಾಕ್ಷಸರನ್ನೂ ಕೊಂದರು. ಆದರೆ ಕುಂಭಕರ್ಣನಿಗೆ ಏನೂ ಆಗಲಿಲ್ಲ.

ಹನುಮಂತನು ಆಕಾಶದ ಮೇಲಿನಿಂದ ಕುಂಭಕರ್ಣನ ಮೇಲೆ ಬಗೆಬಗೆಯ ಶಿಲೆಗಳನ್ನೂ ವೃಕ್ಷಗಳನ್ನೂ ವರ್ಷಿಸಿದನು. ಕುಂಭಕರ್ಣನು ತನ್ನ ಶೂಲದಿಂದ ಪರ್ವತಗಳನ್ನು ಒಡೆದು ಪುಡಿ ಮಾಡಿದನು. ಮರಗಳನ್ನು ಆಚೆಗೂ ಈಚೆಗೂ ದೂಡಿಬಿಡುತ್ತಿದ್ದನು. ಅವು ಮತ್ತೆ ವಾನರರ ಮೇಲೆಯೇ ಬೀಳುತ್ತಿದ್ದುವು. ಆಮೇಲೆ ಕುಂಭಕರ್ಣನು ಮಹಾಶೂಲವನ್ನು ತಿರುಗಿಸುತ್ತ, ತಿವಿಯುತ್ತ ವಾನರ ಸೇನೆಯನ್ನು ಅಟ್ಟಿಸಿಕೊಂಡು ಬಂದನು. ಆಗ ಹನುಮಂತನು ಒಂದು ಗುಡ್ಡವನ್ನು ಎಬ್ಬಿಸಿ ಕುಂಭಕರ್ಣನಿಗೆ ಅಡ್ಡ ನಿಂತು, ಆ ಗುಡ್ಡದಿಂದಲೇ ಬಲವಾಗಿ ಹೊಡೆದನು. ಆ ಪೆಟ್ಟುಮಾತ್ರ ಸರಿಯಾಗಿ ತಾಗಿತು.

ಇದರಿಂದ ಕುಂಭಕರ್ಣನ ಶರೀರದಲ್ಲಿ ದೊಡ್ಡ ಗಾಯವಾಗಿ ದರದರನೆ ರಕ್ತವಿಳಿಯತೊಡಗಿತು. ಅವನು ತನ್ನ ಶೂಲವನ್ನು ಎತ್ತಿ ರಭಸದಿಂದ ಹನುಮಂತನ ಎದೆಯನ್ನು ತಿವಿದನು. ಹನುಮಂತನು ಭಯಂಕರವಾಗಿ ಕೂಗಿ, ಬಾಯಿಯಿಂದ ನೆತ್ತರು ಕಾರುತ್ತ ಮೂರ್ಛೆಹೋಗಿ ಬಿದ್ದುಬಿಟ್ಟನು.

ಆಗ ನೀಲನು ಮತ್ತೊಂದು ಪರ್ವತ ಶಿಖರವನ್ನು ಬೀಸಿದನು. ಕುಂಭಕರ್ಣನು ಅದನ್ನು ತನ್ನ ಮುಷ್ಟಿಯಿಂದ ಗುದ್ದಿ ನುಗ್ಗು ಮಾಡಿಬಿಟ್ಟನು. ಋಷಭ, ಶರಭ ನೀಲ, ಗವಾಕ್ಷ, ಗಂಧಮಾದನ ಎಂಬ ಈ ಐವರೂ ಒಂದೇ ಸಾರಿ ಕುಂಭಕರ್ಣನ ಮೇಲೇರಿ ಹೋಗಿ ಅವನನ್ನು ಎಡೆಬಿಡದೆ ಮುತ್ತಿ, ಕಲ್ಲುಗಳಿಂದ, ಮರಗಳಿಂದ, ಮುಷ್ಟಿಗಳಿಂದ, ಕಾಲುಗಳಿಂದ ಹೊಡೆದೇ ಹೊಡೆದರು.

ಆ ಏಟುಗಳು ಕುಂಭಕರ್ಣನಿಗೆ ಬಹಳ ಸುಖವಾಗಿ ತೋರಿದುವು. ಅವನು ಆ ಐದು ವಾನರ ವೀರರನ್ನೂ ಲೀಲಾಜಾಲವಾಗಿ ಒಬ್ಬರ ಮೇಲೊಬ್ಬರಂತೆ ನೆತ್ತರು ಕಕ್ಕುವ ಹಾಗೆ ಮಾಡಿ ನೆಲಕ್ಕೊರಗಿಸಿದನು.



26-8



January 1977

ವೀರಹನುಮಾನ್


ವಾನರರು ಧೈರ್ಯದಿಂದ ಸಾಹಸಕ್ಕಿಳಿದು ಸಾವಿರ ಸಂಖ್ಯೆಯಲ್ಲಿ ಒಗ್ಗಟ್ಟಾಗಿ ಕುಂಭಕರ್ಣನ ಮೇಲೆ ಧುಮುಕಿದರು. ಅವರು ಆ ಪರ್ವತಾಕಾರದ ಕುಂಭಕರ್ಣನ ದೇಹವನ್ನು ಸಿಕ್ಕಿದಲ್ಲಿ ಪರಚಿದರು, ಕಡಿದರು, ಕೊರೆದರು, ಗುದ್ದಿದರು; ಮೊಣಕಾಲು ಮೊಣಕೈಗಳಿಂದ ತಿವಿದರು. ಆದರೆ ಕುಂಭಕರ್ಣನು ರವಷ್ಟೂ ಲಕ್ಷ್ಯಮಾಡದೆ ವಾನರ ಸೇನೆಗಳನ್ನು ಜಾಡಿಸಿ, ಒಗೆಯುತ್ತ ಒದೆಯುತ್ತ ತಿನ್ನುತ್ತ ನಿರ್ಮೂಲಿಸ ತೊಡಗಿದನು. ಈ ಪರಿಸ್ಥಿತಿಯಲ್ಲಿ ಕುಂಭಕರ್ಣನ ವಿಜೃಂಭಣೆಯನ್ನು ತಡೆಯಲು ವಾನರರಿಂದ ಸಾಧ್ಯವಿಲ್ಲವೆಂಬುದು ಸ್ಪಷ್ಟವಾಯಿತು. ಮತ್ತೆ ವಾನರರು ಭೀತಿಯಿಂದ ಕಿರಿಚುತ್ತ ಹಿಂದೆ ಹಿಂದೆ ಓಡ ತೊಡಗಿದರು.

ಆಗ ವಾನರ ಪ್ರಮುಖರು ಮುಂದೆ ಬಂದರು. ಅದನ್ನು ನೋಡಿ, ಓಡುವವರು ಮತ್ತೆ ಮುನ್ನುಗ್ಗಿದರು. ಅಂಗದನೂ ಸುಗ್ರೀವನೂ ಕುಂಭಕರ್ಣನ ಮೇಲೆ ಗುಡ್ಡಗಳನ್ನು ಎತ್ತೆತ್ತಿ ಬಿಸುಟರು. ಅವೆಲ್ಲ ಕುಂಭಕರ್ಣನಿಗೆ ತಾಗಿ ಪುಡಿಪುಡಿಯಾಗಿ ಬಿದ್ದುವೇ ಹೊರತು ಕುಂಭಕರ್ಣನಿಗೆ ಏನೂ ಆಗಲಿಲ್ಲ. ಒಮ್ಮೆಗೇ ಕುಂಭಕರ್ಣನು ಸುಗ್ರೀವನನ್ನು ನೋಡಿ, "ಓ, ವಾನರ ರಾಜನಲ್ಲವೇ ನೀನು?" ಎನ್ನುತ್ತಾ ಅವನ ಮೇಲೆ ಶೂಲವನ್ನು ಬಿಸುಟನು. ಆ ಶೂಲವನ್ನು ಹನುಮಂತನು ದಾರಿಯಲ್ಲೇ ಹಿಡಿದು ಮುರಿದು ಬಿಸುಟು ಕುಂಭಕರ್ಣನನ್ನು ಹಂಗಿಸಿದನು. ಇದನ್ನು ನೋಡಿ ವಾನರರು ಬಹಳ ಸಂತೋಷಪಟ್ಟು ಹಾರಿ ಕುಣಿದು ಸಿಂಹನಾದ ಮಾಡಿದರು.

ಆಗ ಕುಂಭಕರ್ಣನು ನೆಲ ಒಡೆಯುವ ಹಾಗೆ ಗರ್ಜಿಸಿ ಸುಗ್ರೀವನ ಮೇಲೊಂದು ಪರ್ವತ ಶಿಖರವನ್ನು ಎತ್ತಿ ಒಗೆದನು. ಅದರ ಏಟಿನಿಂದ ಸುಗ್ರೀವ ಮೂರ್ಛೆಬಿದ್ದ. ಅದನ್ನು ನೋಡಿ ರಾಕ್ಷಸರು ಅಟ್ಟಹಾಸದಿಂದ ಸಿಂಹನಾದ ಮಾಡಿದರು. ಕುಂಭಕರ್ಣನು ಮೂರ್ಛೆಬಿದ್ದ ಸುಗ್ರೀವನನ್ನು ಎತ್ತಿ ಭುಜದ ಮೇಲೆ ಹಾಕಿಕೊಂಡು ಲಂಕೆಯ ಕಡೆಗೆ ನಡೆಯ ತೊಡಗಿದನು. ಅದನ್ನು ನೋಡಿ ವಾನರರೆಲ್ಲ ಕೈಕೈ ಹಿಸುಕುತ್ತ ಕೂಗಾಡ ತೊಡಗಿದರು. ಸುಗ್ರೀವ

೨೭. ರಾಮಲಕ್ಷ್ಮಣರ ಮೂರ್ಛೆ

27-1



ನನ್ನು ಎತ್ತಿಕೊಂಡು ಹೋಗಿಬಿಟ್ಟರೆ ಎಲ್ಲಾ ವಾನರ ಸೇನೆಯೊಂದಿಗೆ ರಾಮಲಕ್ಷ್ಮಣರು ಹತವೀರ್ಯರಾಗಿ ಬಿಡುವರೆಂದು ಅವನು ಅಂದುಕೊಂಡನು. ಸುಗ್ರೀವನನ್ನು ಲಂಕೆಯ ಸೆರೆಯಲ್ಲಿಟ್ಟರೆ ಯುದ್ಧವೇ ಮುಗಿದಂತಾಗುವುದೆಂದು ಅವನ ನಂಬಿಗೆ. ಅಂತೆಯೇ ಬಹು ಸಂತೋಷದಿಂದ ಸಾಗುತ್ತಿದ್ದ ಕುಂಭಕರ್ಣ.

ಇದನ್ನೆಲ್ಲಾ ನೋಡುತ್ತಿದ್ದ ಹನುಮಂತನು ಕೂಡಾ ಏನೂ ಮಾಡದೆ ಸುಮ್ಮನೆ ಮುಗುಳ್ನಕ್ಕನು. ಮೂರ್ಛೆ ತಿಳಿಯುತ್ತಲೇ ಸುಗ್ರೀವನು ತನ್ನ ತಾನು ರಕ್ಷಿಸಿಕೊಳ್ಳುವನೆಂದು ಅವನಿಗೆ ಗೊತ್ತಿತ್ತು. ಆದುದರಿಂದ ಅವನು ಹೆದರಿ ಕೈಕಾಲುಗೆಟ್ಟ ವಾನರರಿಗೆ ಧೈರ್ಯ ಹೇಳುತ್ತಾ ಯುದ್ಧರಂಗದಲ್ಲೇ ವಿಹರಿಸಿಕೊಂಡಿದ್ದನು.

ಅವನು ಅಂದುಕೊಂಡ ಹಾಗೆಯೇ ಕುಂಭಕರ್ಣನ ಕೈಯಲ್ಲಿರುವ ಸುಗ್ರೀವನಿಗೆ ಮೂರ್ಛೆ ತಿಳಿದು ಎಚ್ಚರವಾಯಿತು. ತಾನು ಕುಂಭಕರ್ಣನ ಭುಜದ ಮೇಲಿರುವೆನೆಂದು ಅವನಿಗೆ ಗೊತ್ತಾಯಿತು. ಅವನಿಗೆ ಲಂಕಾನಗರದ ಬೀದಿಗಳು ಕಾಣಿಸಿದುವು. ಅವನು ಕುಂಭಕರ್ಣನ ಮೂಗನ್ನೂ ಕಿವಿಯನ್ನೂ ಕಚ್ಚಿ ಹರಿದುಬಿಟ್ಟನು. ಕುಂಭಕರ್ಣನು ತನ್ನ ಮುಖದ ಕಡೆಯಿಂದ ನೆತ್ತರು ಸುರಿಯುವುದನ್ನು ನೋಡಿ, ಸಿಟ್ಟಿನಿಂದ ಸುಗ್ರೀವನನ್ನೆತ್ತಿ ನೆಲದ ಮೇಲೆ ಹೊಡೆದು ಕಾಲಿನಿಂದ ಒದೆದನು. ಆದರೆ ಸುಗ್ರೀವನು ಆ ಹಿಡಿತ ಹೊಡೆತಗಳಿಗೆ ಸಿಕ್ಕದೆ ಪುಟ ಚೆಂಡಿನಂತೆ ಆಕಾಶಕ್ಕೆ ಹಾರಿ ರಾಮನ ಬಳಿಗೆ ಹೋಗಿ ಸೇರಿದನು.

ಸುಗ್ರೀವನು ತಪ್ಪಿಸಿಕೊಂಡು ಹೋದ ಕೂಡಲೇ ಕುಂಭಕರ್ಣನು ತಿರುಗಿ ಯುದ್ಧಭೂಮಿಗೆ ಬಂದು ಅತ್ಯಾಕ್ರೋಶದಿಂದ ವಾನರರನ್ನು ಹಿಡಿದು ಹಿಡಿದು ಭಕ್ಷಿಸ ತೊಡಗಿದನು.

ಅದನ್ನು ನೋಡಿ ಲಕ್ಷ್ಮಣನು ಯುದ್ಧಕ್ಕೆ ಬಂದು ಕುಂಭಕರ್ಣನ ಮೇಲೆ ಬಾಣಗಳ ಮಳೆಯನ್ನು ಕರೆಯಲಾರಂಭಿಸಿದನು. ಕುಂಭಕರ್ಣನು ಅವುಗಳನ್ನು ಕೊಡಹಿಕೊಳ್ಳುತ್ತಾ, "ಪುಡಿ ಕೋತಿಗಳೇ! ನೀವೆಲ್ಲಾ ಏ ಸಾಯುವಿರಿ? ಎಲ್ಲಿ ಆ ರಾಮ? ಅವನು ಬೇಗ ಬರಲಿ ನನ್ನ ಮುಂದೆ" ಎಂದು ಹೂಂಕರಿಸುತ್ತಾ ರಾಮನ ಕಡೆಗೆ ತಿರುಗಿಹೋದನು.

ರಾಮನು ಮಹಾ ಧನುಸ್ಸಿನೊಂದಿಗೆ ಅವನ ಮುಂದೆ ನಿಂತು, "ಎಲೋ ಕುಂಭಕರ್ಣಾ, ನೀನು ಇಂದ್ರನನ್ನು ಜಯಿಸಿರಬಹುದು. ನಾನು ಇಂದ್ರನಲ್ಲ, ರಾಮ. ನಿನ್ನನ್ನು ಕ್ಷಣ ಮಾತ್ರದಲ್ಲಿ ಕೊಂದು ಹಾಕುತ್ತೇನೆ; ಇಷ್ಟದೈವವನ್ನು ಸ್ಮರಿಸಿ ಸಾಯಲು ಸಿದ್ಧನಾಗು" ಎಂದನು.

"ರಾಮಾ, ನಾನು ವಿರಾಧನಲ್ಲ ಕುಂಭಕರ್ಣ, ವಾಲಿಯೂ ಮಾರೀಚನೂ ನಾನಲ್ಲ. ಕುಂಭಕರ್ಣನ ಮುಂದೆ ನೀನೀಗ ನಿಂತಿರುವಿ. ಇನ್ನು ಮೇಲೆ ಯಾರ ಮುಂದೂ ನಿನ್ನ ಪರಾಕ್ರಮ ತೋರಿಸಲು ಸಾಧ್ಯವಿಲ್ಲ. ಈಗ ನನ್ನ ಮುಂದೆ ಮೊದಲು ತೋರಿಸಿಬಿಡು ನಿನ

ಪರಾಕ್ರಮ. ಆಮೇಲೆ ನಿನ್ನನ್ನು ಒಂದೇ ಬಾಯಿಗೆ ತಿಂದುತೀರಿಸುತ್ತೇನೆ " ಎಂದ ಕುಂಭಕರ್ಣ.

ರಾಮನು ಧನುಷ್ಟಂಕಾರ ಮಾಡಿ, ಸಾಲ ವೃಕ್ಷಗಳನ್ನು ಭೇದಿಸಲಿಕ್ಕೂ, ವಾಲಿಯನ್ನು ಕೊಲ್ಲಲಿಕ್ಕೂ ಉಪಯೋಗಿಸಿದ ಬಾಣಗಳನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಅವುಗಳಿಂದ ಕುಂಭಕರ್ಣನಿಗೆ ಏನೂ ಘಾಸಿಯಾಗಲಿಲ್ಲ. ಅದನ್ನು ನೋಡಿ ರಾಮನು ಅವನ ಮೇಲೆ ವಾಯುವ್ಯಾಸ್ತ್ರವನ್ನು ಪ್ರಯೋಗಿಸಿದನು, ಅದರಿಂದ ಕುಂಭಕರ್ಣನ ಒಂದು ಕೈ ಗದೆಯೊಂದಿಗೆ ತುಂಡಾಗಿ ಬಿದ್ದುಹೋಯಿತು.

ಕುಂಭಕರ್ಣನು ಕರ್ಕಶವಾಗಿ ಕೂಗಿ ಎರಡನೇ ಕೈಯಿಂದ ದೊಡ್ಡದೊಂದು ಮರವನ್ನು ಕಿತ್ತು ರಾಮನ ಮೇಲೆ ಬೀಸಬೇಕೆಂಬಷ್ಟರಲ್ಲಿ ರಾಮನು ಐಂದ್ರಾಸ್ತ್ರದಿಂದ ಅವನ ಎರಡನೇ ಕೈಯನ್ನು ಕೂಡಾ ಖಂಡಿಸಿದನು. ಆಗ ಕುಂಭಕರ್ಣನು ಬೊಬ್ಬಿರಿಯುತ್ತ ರಾಮನ ಮೇಲೆ ಹಾರಲು ಪ್ರಯತ್ನ ಮಾಡಿದ. ರಾಮನ ಬಾಣಗಳಿಂದ ಅವನ ಕಾಲುಗಳೂ ತುಂಡಾಗಿ ಬಿದ್ದುವು. ಕಡೆಗೆ ರಾಮನು ಒಂದು ಬಾಣದಿಂದ ಕುಂಭಕರ್ಣನ ಶಿರಸ್ಸನ್ನೂ ಕತ್ತರಿಸಿಬಿಟ್ಟನು.

ಕುಂಭಕರ್ಣನು ಸತ್ತು ಬಿದ್ದಕೂಡಲೇ ರಾಕ್ಷಸರು ಸರ್ವನಾಶವಾದವರಂತೆ ದುಃಖದಿಂದ ದೊಡ್ಡ ದನಿ ತೆಗೆದು ಅಳತೊಡಗಿದರು. ರಾಮನು ಅವರಿಗೆ ಘೋರ ಮೃತ್ಯುವಾಗಿ ಕಾಣಿಸಿದುದರಿಂದ ಹಲವರು ಎದೆಯೊಡೆದು ಸತ್ತರು, ಉಳಿದವರು ಓಡಿಹೋದರು. ವಾನರರು ಸಂಪೂರ್ಣ ನಿರ್ಭೀತರಾದರು ಎಲ್ಲರನ್ನೂ ಅಂಜಿಸಿದ ಕುಂಭಕರ್ಣನನ್ನು ಲೀಲಾಜಾಲವಾಗಿ ಕೊಂದ ರಾಮನ ಸುತ್ತಲೂ ವಾನರರು ಕೂಡಿ ಅವನನ್ನು ಪೂಜಿಸಿದರು.

ಕುಂಭಕರ್ಣನು ರಾಮನ ಕೈಯಲ್ಲಿ ಸತ್ತನೆಂಬ ಕೆಟ್ಟವಾರ್ತೆ ರಾಕ್ಷಸರ ಮೂಲಕವಾಗಿ ರಾವಣನಿಗೆ ತಲಪಿತು. ತಾನೆಷ್ಟೋ ನಂಬಿಕೊಂಡಿದ್ದ ಕುಂಭಕರ್ಣನ



ಗತಿ ಹಾಗಾದುದನ್ನು ಕೇಳಿ ರಾವಣನಿಗೆ ಮೂರ್ಛೆ ಬಂದಿತು. ಅವನ ಮಗಂದಿರಾದ ದೇವಾಂತಕ, ನರಾಂತಕ, ತ್ರಿಶಿರ, ಅತಿಕಾಯ ಎಂಬವರು ಗೋಳಾಡತೊಡಗಿದರು. ಅದರಂತೆ ಕುಂಭಕರ್ಣನ ಮರಣದಿಂದ ಸ್ವಂತ ಅಣ್ಣನನ್ನು ಕಳೆದುಕೊಂಡಂತೆ ಮಹೋದರ ಮಹಾ ಪಾರ್ಶ್ವರೂ ಅಳುತ್ತಿದ್ದರು. ಎಲ್ಲಿ ನೋಡಿದರೂ ರಾಕ್ಷಸರಾರೂ ಊಹಿಸಿರಲಾರದ ಘಟನೆಯಂತಿತ್ತು ಕುಂಭಕರ್ಣನ ಮರಣ.

ಮೂರ್ಛೆಯಿಂದ ಎಚ್ಚರಗೊಂಡ ಮೇಲೆ ರಾವಣನು ಇನ್ನು ಲಂಕೆ ವಾನರರ ವಶವಾಗಿ ಹೋಗುವುದೆಂದು ಅಂಜಿದನು, ಅವನಿಗೆ ರಾಜ್ಯದೊಂದಿಗಿರುವ ಋಣವು ತೀರಿದಂತೆ ತೋರತೊಡಗಿತು. ಇನ್ನೀಗ ತಾನು ಮಹಾವೀರನೆನಿಸಿ, ಅಜೇಯನೆನಿಸಿ ಬದುಕಿದುದಕ್ಕೆ ರಾಮನನ್ನು ಕೊಂದು, ತಮ್ಮನ ಸಾವಿನ ಸೇಡನ್ನು ತೀರಿಸಿಕೊಳ್ಳಬೇಕೆಂದೂ, ಅದಾಗದಿದ್ದರೆ ಯುದ್ಧದಲ್ಲಿ ಸಾಯು



ಬೇಕೆಂದೂ ನಿಶ್ಚಯಿಸಿದನು. ವಿಭೀಷಣನ ಮಾತನ್ನು ಕೇಳದೆ ಅವನನ್ನು ದೂರ ಮಾಡಿಕೊಂಡುದಕ್ಕೂ ರಾವಣನಲ್ಲಿ ಪಶ್ಚಾತ್ತಾಪವೆದ್ದಿತ್ತು. ಆದರೆ ಅದರಿಂದ ಇನ್ನು ಯಾವ ಪ್ರಯೋಜನವೂ ಇರಲಿಲ್ಲ. ಕಾಲವು ಎಲ್ಲಾ ಅನುಕೂಲಗಳನ್ನೂ ಮೀರಿ ನಿಂತಿತ್ತು.

ರಾವಣನ ದುಃಖವನ್ನು ನೋಡಿ ತ್ರಿಶಿರನು, "ನಾವೆಲ್ಲಾ ಇರುವಾಗ ನಿರಾಶೆಯಿಂದ ದುಃಖಿಸುವುದೇಕೆ? ಮೂರು ಲೋಕಗಳನ್ನೂ ಜಯಿಸಬಲ್ಲವನಾದ ನೀನು ಇಷ್ಟೊಂದಕ್ಕೆಲ್ಲ ಅಧೈರ್ಯಪಡಬಹುದೆ? ನನ್ನನ್ನು ಯುದ್ಧಕ್ಕೆ ಕಳುಹಿಸಿ ನೋಡು. ನಾನು ರಾಮನನ್ನು ಕೊಲ್ಲದೆ ಹಿಂದಿರುಗಲಾರೆ" ಎಂದನು.

ಅವನ ಮಾತು ಕೇಳಿ, ದೇವಾಂತಕ, ನರಾಂತಕ, ಅತಿಕಾಯರಿಗೂ ಹುರುಪು ಹುರಿಗೊಂಡಿತು. ತಾವೂ ಯುದ್ಧಕ್ಕೆ ಹೋಗುತ್ತೇವೆಂದು ಅಪ್ಪಣೆ ಕೇಳಿದರು. ರಾವಣನು ಅವರ ಉತ್ಸಾಹವನ್ನು ನೋಡಿ ಸಂತೋಷಪಟ್ಟು, ಒಬ್ಬೊಬ್ಬರನ್ನೂ ಆಲಿಂಗಿಸಿ ಯುದ್ಧಕ್ಕೆ ಕಳುಹಿಸಿದನು. ಇಷ್ಟು ಮಂದಿ ಮಹಾವೀರರು ಒಟ್ಟಿಗೆ ಹೋಗುವುದರಿಂದ ತನಗೆ ಜಯವಾಗುವುದೆಂಬ ಆಶೆ ಮತ್ತೆ ರಾವಣನಲ್ಲೆದ್ದಿತ್ತು.

ಮತ್ತೆ ರಾಕ್ಷಸರಿಗೂ ವಾನರರಿಗೂ ದೊಡ್ಡ ಯುದ್ಧ ಹಿಡಿಯಿತು. ರಾಕ್ಷಸ ವೀರನಾದ ನರಾಂತಕನು ವಾನರರೊಂದಿಗೆ ಭಯಂಕರವಾಗಿ ಹೋರಾಡುತ್ತ ಬೀಭತ್ಸ ಮಾಡುವುದನ್ನು ನೋಡಿ ಅವನನ್ನು ಕೊಂದು ಬಿಡುವಂತೆ ಸುಗ್ರೀವನು ಅಂಗದನಿಗೆ ಹೇಳಿದನು. ಅಂಗದನು ನರಾಂತಕನೊಂದಿಗೆ ಸ್ವಲ್ಪ ಹೊತ್ತು ಯುದ್ಧ ಮಾಡಿ, ಕಡೆಗೆ ಅವನನ್ನು ಅಂಗೈಯಿಂದ ಅಪ್ಪಳಿಸಿ, ಮುಷ್ಟಿಯಿಂದ ಗುದ್ದಿ ಕೊಂದುಬಿಟ್ಟನು.

ಅದನ್ನು ನೋಡಿ ತ್ರಿಶಿರ, ಮಹೋದರ ಮತ್ತು ದೇವಾಂತಕರು ಮಹಾರೋಷದಿಂದ ಅಂಗದನ ಮೇಲೆ ಏರಿ ಬಂದರು. ಅಂಗದನು ಬಲು ಸಾಹಸದಿಂದ ಮೂವರು ರಾಕ್ಷಸರನ್ನು ಇದಿರಿಸಿ ಹೋರಾಡುತ್ತಿರುವುದನ್ನು ನೋಡಿ, ಹನುಮಂತನು ಅವನ ಸಹಾಯಕ್ಕೆ ಬಂದನು. ಹನುಮಂತನ ಒಂದು ಗುದ್ದಿನಿಂದ ದೇವಾಂತಕನು ಸತ್ತು ಬಿದ್ದುಬಿಟ್ಟ. ಹಾಗೆಯೇ ಅಂಗದನಿಗೆ ಸಹಾಯವಾಗಿ ಬಂದ ನೀಲನು ಆಕಾಶಕ್ಕೆ ಹಾರಿ ತಲೆಯ ಮೇಲೆ ಒದ್ದು ಗೋಣು ಮುರಿದು ಮಹೋದರನನ್ನು ಕೊಂದುಹಾಕಿದ.

ಮಹಾಪಾರ್ಶ್ವನೊಂದಿಗೆ ಋಷಭನು ಭಯಂಕರವಾಗಿ ಯುದ್ಧ ಮಾಡುತ್ತ ಕಡೆಗೆ ಅವನನ್ನು ಕೊಂದನು. ಹೀಗೆ ರಾಕ್ಷಸ ಮುಖಂಡರು ಸತ್ತ ಕೂಡಲೇ ಉಳಿದ ರಾಕ್ಷಸರು ಏನೂ ತೋರದೆ ಕಂಗೆಟ್ಟು ಆಯುಧಗಳನ್ನು ಬಿಟ್ಟು ಓಡಿಹೋದರು.

ಉತ್ಸಾಹದಿಂದ ಯುದ್ಧಕ್ಕೆ ಹೋದ ರಾಕ್ಷಸ ವೀರರು ಸತ್ತ ಸಂಗತಿ ತಿಳಿದು ಅತಿಕಾಯನು ಯುದ್ಧಕ್ಕೆ ಹೊರಟನು. ಜೀವಬಂದ ಪರ್ವತದಂತೆ ಬರುವ ಅತಿಕಾಯನನ್ನು ನೋಡಿ, ರಾಮನು ಆಶ್ಚರ್ಯದಿಂದ ವಿಭೀಷಣನೊಂದಿಗೆ, "ಈ ರಾಕ್ಷಸ

ವೀರನು ಯಾರು? ಕುಂಭಕರ್ಣನ ಸಂಬಂಧದವನೋ?" ಎಂದು ಕೇಳಿದನು.

"ಇವನು ರಾವಣನಿಗೆ ಧಾನ್ಯಮಾಲಿನಿಯಲ್ಲಿ ಹುಟ್ಟಿದ ಮಗ, ಅತಿಕಾಯನೆಂದು ಹೆಸರು. ಪ್ರತಾಪದಲ್ಲಿ ರಾವಣನಿಗೆ ಸಮಾನನಾದವನು. ಇವನು ಬ್ರಹ್ಮದೇವನ ಅನುಗ್ರಹ ಪಡೆದು ದಿವ್ಯಾಸ್ತ್ರಗಳನ್ನು ಸಂಪಾದಿಸಿದ್ದಾನೆ. ದೇವತೆಗಳಿಂದಲೂ ರಾಕ್ಷಸರಿಂದಲೂ ಸಾವು ಬರದಂತೆ ವರ ಪಡೆದಿದ್ದಾನೆ. ಅವನು ಧರಿಸಿದ ಕವಚವೂ, ಏರಿಕೊಂಡಿರುವ ಆ ರಥವೂ ಬ್ರಹ್ಮದೇವನೇ ಅವನಿಗೆ ಕೊಟ್ಟಂಥವು. ಇವುಗಳ ಸಹಾಯದಿಂದ ಇವನು ಅನೇಕ ಸಾರಿ ದೇವತೆಗಳನ್ನೂ ದಾನವರನ್ನೂ ಜಯಿಸಿ ರಾಕ್ಷಸರನ್ನು ರಕ್ಷಿಸಿದ್ದಾನೆ. ಈಗ ರಾವಣನ ಹೆಚ್ಚು ನಂಬಿಗೆ ಇವನ ಮೇಲೇ ಇದೆ. ಇವನನ್ನು ಸಾಧ್ಯವಾದಷ್ಟು ಬೇಗನೇ ಕೊಲ್ಲದಿದ್ದರೆ ವಾನರರ ಸಮೂಹಕ್ಕೆ ತೀವ್ರವಾದ ನಷ್ಟವನ್ನುಂಟುಮಾಡ ಬಲ್ಲನು." ಎಂದು ವಿಭೀಷಣನು ರಾಮನೊಂದಿಗೆ ಹೇಳಿದನು.

ಇಷ್ಟರೊಳಗೆ ವಾನರ ಸೇನೆಯ ಮೇಲೆ ಬಂದ ಅತಿಕಾಯನನ್ನು ಕುಮುದ, ದ್ವಿವಿದ, ಮೈಂದ, ನೀಲ, ಶರಭರು ಇದಿರಿಸಿ ಹೋರಾಡತೊಡಗಿದರು. ಅವರಿಂದ ಅವನನ್ನು ಏನು ಮಾಡಲೂ ಸಾಧ್ಯವಾಗಲಿಲ್ಲ; ಪ್ರತಿಯಾಗಿ ಅವನ ಬಾಣಗಳಿಂದ ಅವರೇ ತೀವ್ರವಾಗಿ ಬಾಧೆಪಡತೊಡಗಿದರು. ಮತ್ತೆ ವಾನರರು ಭೀತರಾಗಿ ಕಿರಿಚಾಡುವುದನ್ನು ರಾಮನು ನೋಡಿದನು. ವಿಭೀಷಣನ ಮಾತು ನಿಜವೆನಿಸಿತು.

ಅತಿಕಾಯನು ತನ್ನ ಮೇಲೆ ಬಾರದವರ ಗೊಡವೆಗೆ ಹೋಗದೆ, ನೆಟ್ಟಗೆ ರಾಮನ ಮುಂದೆ ಬರುತ್ತ, "ಓಡಿಹೋಗುವವರೊಂದಿಗೆ ಯುದ್ಧ ಮಾಡಲಾರೆ. ನನ್ನ ಮುಂದೆ ನಿಂತು ಧೈರ್ಯದಲ್ಲಿ ಯುದ್ಧ ಮಾಡುವವರು ಯಾರಾದರೂ ಇದ್ದರೆ ಬರಲಿ ಮುಂದೆ." ಎಂದು ಅಬ್ಬರಿಸಿ ಹೇಳಿದನು.



ಈ ಪ್ರಶ್ನೆಗೆ ಲಕ್ಷ್ಮಣನು ಕೆರಳಿ, ಅತಿಕಾಯನ ಮುಂದೆ ಬಂದು ಧನುಷ್ಟಂಕಾರ ಮಾಡಿದನು. ಅವನನ್ನು ನೋಡಿ ಅತಿಕಾಯನು, "ನೀನೇನು ಯುದ್ಧ ಮಾಡುವಿಯೋ ಲಕ್ಷ್ಮಣಾ? ಇನ್ನೂ ಚಿಕ್ಕವನಾದ ನಿನ್ನ ಪರಾಕ್ರಮವೆಂಥದು? ನನ್ನ ಮುಂದೆ ಸರಿಯಾಗಿ ನಿಲ್ಲಲಿಕ್ಕಾದರೂ ಸಾಧ್ಯವೇ? ಏಕೆ ಸುಮ್ಮನೆ ಸಾಯುವಿ? ನಡೆಯಾಚೆ! ನಿನ್ನ ಅಣ್ಣನಾದ ರಾಮನನ್ನೇ ಕಳುಹಿಸು." ಎಂದನು.

"ಶೌರ್ಯ ತೋರಿಸಬೇಕಾದುದು ಮಾತಿನಲ್ಲಲ್ಲ, ಕೈಯಲ್ಲಿ. ನಿನ್ನನ್ನು ನೀನೇ ಹೊಗಳಿಕೊಳ್ಳದೆ ನಿನ್ನಲ್ಲಿ ಪರಾಕ್ರಮವೇನಾದರೂ ಇದ್ದರೆ ನನ್ನ ಮೇಲೆ ತೋರಿಸು" ಎಂದ ಲಕ್ಷ್ಮಣ.

ಇಬ್ಬರೂ ಬಾಣಗಳಿಂದ ಯುದ್ಧವನ್ನು ಪ್ರಾರಂಭಿಸಿದರು. ಲಕ್ಷ್ಮಣನ ಬಾಣಗಳ ಏಟುಗಳನ್ನು ತಿಂದ ಮೇಲೆ ಅತಿಕಾಯನಿಗೆ ಅವನ ಮೇಲೆ ಸ್ವಲ್ಪ ಗೌರವ ವೇರ್ಪಟ್ಟು ಉತ್ಸಾಹದಿಂದ ಯುದ್ಧ ಮಾಡಿದನು.

27-5



ಇಬ್ಬರೂ ಒಬ್ಬರ ಮೇಲೊಬ್ಬರು ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು. ಅತಿಕಾಯನ ಬಾಣಗಳು ಲಕ್ಷ್ಮಣನನ್ನು ನೋಯಿಸಿದುವು. ಲಕ್ಷ್ಮಣನು ಎಷ್ಟೇ ಶಕ್ತಿಯುತವಾದ ಬಾಣಗಳನ್ನು ಪ್ರಯೋಗಿಸಿದರೂ ಅತಿಕಾಯನ ಕವಚವನ್ನು ಕೂಡಾ ಭೇದಿಸಲಾರದೆ ಹೋದನು. ಆದುದರಿಂದ ಲಕ್ಷ್ಮಣನು ಒಂದು ದಿವ್ಯಾಸ್ತ್ರಕ್ಕೆ ಬ್ರಹ್ಮಾಸ್ತ್ರವನ್ನು ಮಂತ್ರಿಸಿ ಬಿಟ್ಟನು. ಅತಿಕಾಯನು ಅದನ್ನು ತಡೆಯಲು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ. ಆ ಬಾಣವು ಅತಿಕಾಯನ ತಲೆಯನ್ನು ಕತ್ತರಿಸಿ ಹಾರಿಸಿಬಿಟ್ಟಿತು.

ಅತಿಕಾಯನು ಸಾಯಲು ರಾಕ್ಷಸರ ಶೋಕಕ್ಕೆ ಮೇರೆಯಿಲ್ಲದೆ ಹೋಯಿತು. ಈ ದುರ್ವಾರ್ತೆಯನ್ನು ರಾವಣನು ಕೇಳಿ ಸ್ತಂಭೀಭೂತನಾದನು. ದೊಡ್ಡ ದೊಡ್ಡ ರಾಕ್ಷಸ ವೀರರೆಲ್ಲ ರಾಮಲಕ್ಷ್ಮಣರ ಕೈಯಲ್ಲಿ ಒಬ್ಬೊಬ್ಬರಾಗಿ ಸತ್ತು ಹೋದರು. ತಾನು ನರವಾನರರನ್ನು ಲಕ್ಷ್ಯಕ್ಕೆ ತಾರದೇಹೋದುದಕ್ಕಾಗಿ, ಕಳೆದುಹೋದುದನ್ನು ನೆನೆದು ತುಂಬಾ ಹಳಹಳಿಸಿದನು. ತನ್ನ ತಂದೆ ಚಿಂತೆಯಲ್ಲಿ ಮುಳುಗಿರುವುದನ್ನು ನೋಡಿ ಇಂದ್ರಜಿತ್ತು, "ನಾನು ಬದುಕಿರುವಾಗ ನೀನು ಚಿಂತಿಸಬಹುದೇ? ಇದನ್ನು ನಾನು ನೋಡುತ್ತಿರುವುದೆಂದರೇನು? ನನ್ನ ಬಾಣಗಳ ಪೆಟ್ಟು ತಿಂದವನು ಬದುಕಿ ಉಳಿಯಲಾರ. ಈ ರಾಮಲಕ್ಷ್ಮಣರ ಪ್ರಾಣಗಳನ್ನು ನಾನು ತೆಗೆದುಬಿಡುತ್ತೇನೆ, ಈಗಲೇ ಯುದ್ಧಕ್ಕೆ ಹೊರಡುತ್ತೇನೆ, ಅಪ್ಪಣೆ ಕೊಡು" ಎಂದನು.

ರಾವಣನು ಇಂದ್ರಜಿತ್ತುವನ್ನು ಆಲಿಂಗಿಸಿ ಅಪ್ಪಣೆ ಕೊಟ್ಟು ಕಳುಹಿಸಿದನು. ತಂದೆಯ ಅನುಮತಿಯನ್ನು ತಲೆಯೊಳಾಂತ ಇಂದ್ರಜಿತ್ತು ಹೇಸರ ಕತ್ತೆಗಳನ್ನು ಕಟ್ಟಿದ ರಥದ ಮೇಲೆ ಏರಿಕೊಂಡನು. ಅವನು ಯುದ್ಧ ಭೂಮಿಗೆ ಹೋಗುವಾಗ ಅನೇಕಮಂದಿ ರಾಕ್ಷಸಯೋಧರು ಬಗೆಬಗೆಯ ಆಯುಧಗಳನ್ನು ಧರಿಸಿಕೊಂಡು ಯುದ್ಧೋತ್ಸಾಹದ ಘೋಷಗಳನ್ನು ಮಾಡುತ್ತ ಅವನ ಹಿಂದೆ ಹೊರಟರು.

ಇಂದ್ರಜಿತ್ತು ಯುದ್ಧ ಭೂಮಿಯನ್ನು ಸಮೀಪಿಸಿದ ಮೇಲೆ ದಿವ್ಯವಾದ ರಥವನ್ನು ಸಂಪಾದಿಸಲಿಕ್ಕಾಗಿ ಒಂದು ಪ್ರತ್ಯೇಕ ಹೋಮ ಮಾಡಲು ನಿಶ್ಚಯಿಸಿದನು. ತನ್ನ ಸುತ್ತಲೂ ರಾಕ್ಷಸರನ್ನು ಕಾವಲು ನಿಲ್ಲಿಸಿದನು. ಆಮೇಲೆ ಮಂತ್ರೋಚ್ಚಾರ ಮಾಡುತ್ತ ಅಗ್ನಿಯನ್ನು ಉರಿಸಿ ಹವಿಸ್ಸುಗಳಿಂದ ಹೋಮ ಮಾಡ ತೊಡಗಿದನು. ಹೊಗೆಯಿಲ್ಲದ ಅಗ್ನಿ ದೊಡ್ಡ ಜ್ವಾಲೆಯನ್ನೆಬ್ಬಿಸಿ ಉರಿಯಿತು. ಹೋಮ ಮಾಡುತ್ತಾ ಅವನು ಬ್ರಹ್ಮಾಸ್ತ್ರವನ್ನು ಜಪಿಸಿ ತನ್ನ ಬಿಲ್ಲನ್ನೂ ರಥವನ್ನೂ ಇತರ ಆಯುಧಗಳನ್ನೂ ಹೋಮಾಗ್ನಿಯೊಂದಿಗೆ ಪೂಜಿಸಿದನು. ಹೋಮವನ್ನು ಮುಗಿಸಿ ತನ್ನ ದಿವ್ಯ ರಥದೊಂದಿಗೂ ಆಯುಧಗಳೊಂದಿಗೂ ರಥ ಸಾರಥಿಯೊಂದಿಗೂ ಆಕಾಶಕ್ಕೆ ಹಾರಿ ಅಂತರ್ಧಾನನಾದನು.



ರಾಕ್ಷಸರ ಸೇನೆ ಕುದುರೆಗಳೊಂದಿಗೆ ರಥಗಳೊಂದಿಗೆ ಯುದ್ಧ ರಂಗಕ್ಕೆ ಧಾವಿಸಿತು. ಆಮೇಲೆ ವಾನರ ರಾಕ್ಷಸರ ನಡುವೆ ನಿಕರ ಯುದ್ಧ ತೊಡಗಿತು. ರಾಕ್ಷಸರು ಬಗೆಬಗೆಯ ಆಯುಧಗಳಿಂದ ವಾನರರನ್ನು ಕೊಚ್ಚ ತೊಡಗಿದರು. ಇಂದ್ರಜಿತ್ತು ಅದೃಶ್ಯನಾಗಿದ್ದೇ ಅವರನ್ನು ಪ್ರೋತ್ಸಾಹಿಸುತ್ತಿದ್ದನು. ಮಾತ್ರವಲ್ಲ ಅವನೂ ಯುದ್ಧದಲ್ಲಿ ಕಾಯಕ ತೋರ ತೊಡಗಿದನು. ಅವನ ಒಂದೊಂದು ಬಾಣದೇಟಿಗೆ ಐದಾರು ಮಂದಿ ವಾನರರು ಸಾಯ ತೊಡಗಿದರು. ಸಾಧಾರಣ ವಾನರ ಸೇನೆಯವರನ್ನು ಮಾತ್ರವಲ್ಲದೆ, ಮುಖ್ಯ ಮುಖ್ಯರಾದ ವಾನರ ವೀರರೆಲ್ಲರನ್ನೂ ಇಂದ್ರಜಿತ್ತು ಕ್ರೂರವಾಗಿ ಹಿಂಸಿಸ ತೊಡಗಿದನು. ಗಂಧಮಾದನ, ನಲ, ಮೈಂದ, ಗಜ, ಸುಗ್ರೀವ, ಋಷಭ, ಅಂಗದ, ದ್ವಿವಿದ ಅಂತಹ ಮಹಾಮಹಾ ವಾನರಯೋಧರು ಇಂದ್ರಜಿತ್ತುವಿನ ಬಾಣಗಳ ಹತಿಯಿಂದ ತೀವ್ರ ವೇದನೆಗೆ ಗುರಿಯಾದರು. ಅದೃಶ್ಯನಾಗಿರುವ ಇಂದ್ರಜಿತ್ತುವನ್ನು ನೋಡಲು ಸಾಧ್ಯವಾಗದೆ ಎಲ್ಲರೂ ಕಂಗಾಣದಾದರು.

ಇಂದ್ರಜಿತ್ತು ಪ್ರಯೋಗಿಸಿದ ಬಾಣಗಳು ರಾಮಲಕ್ಷ್ಮಣರಿಗೆ ಕೂಡಾ ತಾಗಿದುವು. ಆಗ ರಾಮನು ಲಕ್ಷ್ಮಣನೊಂದಿಗೆ " ಈ ಇಂದ್ರಜಿತ್ತು ಅದೃಶ್ಯನಾಗಿದ್ದು ಯುದ್ಧ ಮಾಡುತ್ತಿದ್ದಾನೆ. ಆದುದರಿಂದ ಅವನನ್ನು ಕಂಡು ಹಿಡಿದು ಕೊಲ್ಲಲು ಸಾಧ್ಯವಿಲ್ಲ. ನಾವು ಅವನ ಬಾಣಗಳ ಪೆಟ್ಟಿಗೆ ಬಿದ್ದುಬಿಟ್ಟಂತೆ ನಟಿಸಬೇಕು. ಆಗ ಅವನು ಸಂತೋಷದಿಂದ ಹೊರಟುಹೋಗಿಬಿಡುತ್ತಾನೆ" ಎಂದನು. ಹಾಗೆಯೇ ರಾಮಲಕ್ಷ್ಮಣರು ಬಾಣಗಳ ಪೆಟ್ಟಿಗೆ ನೊಂದು ಹಾಹಾಕಾರ ಮಾಡುತ್ತ ಬಿದ್ದು ಸ್ತಬ್ಧರಾದರು. ಅದನ್ನು ನೋಡಿ ಇಂದ್ರಜಿತ್ತು ಸಂತೋಷದಿಂದ ಸಿಂಹನಾದ ಮಾಡಿ ಲಂಕೆಗೆ ತಿರುಗಿ ಹೋದನು. ಇಂದ್ರಜಿತ್ತು ಪ್ರಯೋಗಿಸಿದ್ದು ಬ್ರಹ್ಮಾಸ್ತ್ರವೆಂದು ಹನುಮಂತನಿಗೆ ತಿಳಿಯಿತು. ಹನುಮಂತನಿಗೆ ಅದರಿಂದೇನೂ ಆಗಿರಲಿಲ್ಲ. ಆದರೆ ಅವನಿಗೆ ಚಿಂತೆಯಾಯಿತು. ಆ ಬಾಣಗಳ ಹತಿಯಿಂದ ಎಷ್ಟು ಮಂದಿ ವಾನರರು ಬದ್ಧರಾದರೋ, ಎಷ್ಟು ಮಂದಿ ಸತ್ತರೋ ನೋಡಬೇಕೆಂದು ಅವನು ವಿಭೀಷಣನೊಂದಿಗೆ ಹೇಳಿದನು.

ಹನುಮಂತನೂ ವಿಭೀಷಣನೂ ತಮ್ಮ ಕೈಯಲ್ಲಿ ಒಂದೊಂದು ಉರಿಯುವ ಕಟ್ಟಿಗೆಯನ್ನು ಹಿಡಿದುಕೊಂಡು ಯುದ್ಧ ಭೂಮಿಯಲ್ಲೆಲ್ಲಾ ಹುಡುಕಾಡ ತೊಡಗಿದರು. ಒಂದುಕಡೆ ಜೀವದಿಂದಿರುವ ಜಾಂಬವಂತನನ್ನು ನೋಡಿದರು. ವಿಭೀಷಣನು ಅವನನ್ನು ಮಾತಾಡಿಸುತ್ತ," ಬದುಕಿರುವೆಯಷ್ಟೆ? " ಎಂದನು.

ಜಾಂಬವಂತನ ಕಣ್ಣುಗಳಿಗೆ ಪೆಟ್ಟಾಗಿತ್ತು. ಅವನು ವಿಭೀಷಣನೊಂದಿಗೆ, "ನಮ್ಮ ಹನುಮಂತ ಬದುಕಿದ್ದಾನೆಯೇ ? " ಎಂದು ಕೇಳಿದ. " ರಾಮಲಕ್ಷ್ಮಣರ ಸಂಗತಿ ಕೇಳದೆ ಹನುಮಂತನನ್ನು ಕುರಿತು ಏಕೆ ಕೇಳುವೆ ? " ಎಂದು ವಿಭೀಷಣ ತಿರುಗಿ ಕೇಳಿದ.

"ಅಯ್ಯಾ, ವಿಭೀಷಣಾ, ಹನುಮಂತನೊಬ್ಬ ಬದುಕಿದ್ದು, ಉಳಿದ ವಾನರರೆಲ್ಲ ಸತ್ತರೂ ಅಷ್ಟೇನೂ ನಷ್ಟವಿಲ್ಲ, ಆದರೆ ಹನುಮಂತನು ಸತ್ತುಹೋದರೆ, ವಾನರ ಸೇನೆ ಪೂರಾ ಬದುಕಿದ್ದರೂ ನಾವೆಲ್ಲಾ ಸತ್ತವರ ಲೆಕ್ಕಕ್ಕೇ ಸೇರುತ್ತೇವೆ!" ಎಂದ ಜಾಂಬವಂತ.

ವೃದ್ಧ ಜಾಂಬವಂತನ ಮಾತು ಕೇಳಿ, ಹನುಮಂತನು ಮುಂದೆ ಬಂದು ಜಾಂಬವಂತನ ಎರಡು ಕಾಲುಗಳನ್ನೂ ಹಿಡಿದು ನಮಸ್ಕಾರ ಮಾಡಿದನು.

ಜಾಂಬವಂತನು ಅವನೊಂದಿಗೆ, "ಅಪ್ಪಾ, ಹನುಮಂತ, ಇಲ್ಲಿ ಬಿದ್ದಿರುವ ವಾನರರನ್ನೆಲ್ಲಾ ನೀನೇ ಕಾಪಾಡಬೇಕು. ಆ ಕೆಲಸಕ್ಕೆ ನಿನ್ನ ಹೊರತು ಬೇರೆ ಯಾರೂ ಶಕ್ತರಲ್ಲ" ಎಂದನು.

ತರುವಾಯ ರಾಮಲಕ್ಷ್ಮಣರ ಹಾಗು ಉಳಿದೆಲ್ಲರ ಮೂರ್ಛೆಯನ್ನು ಹೋಗಲಾಡಿಸಲು ಜಾಂಬವಂತನು ಹನುಮಂತನಿಗೆ ಒಂದು ಕೆಲಸ ಹೇಳಿದನು:

"ನೀನು ಸಮುದ್ರದ ಮೇಲಿನಿಂದಾಗಿ ಹಿಮಾಲಯಕ್ಕೆ ಹೋಗಬೇಕು. ಅಲ್ಲಿ ನಿನಗೆ ಅತ್ಯಂತ ಎತ್ತರವಾದ ಕೈಲಾಸ ಮತ್ತು ಕಾಂಚನಗಳೆಂಬ ಪರ್ವತಗಳು ಕಾಣುತ್ತವೆ. ಆ ಎರಡರ ಮಧ್ಯದ ಪರ್ವತಗಳಲ್ಲಿ ಓಷಧೀ ಪರ್ವತವೊಂದಿದೆ. ಅದರ ಶಿಖರದ ಮೇಲೆ ದಿವ್ಯವಾದ ವಿಶಲ್ಯಕರಣೆ, ಮೃತ ಸಂಜೀವಿನಿ, ಸೌವರ್ಣಕರಣಿ, ಸಂಧಾನಕರಣಿ ಎಂಬ ಔಷಧಗಳಿವೆ. ಈ ನಾಲ್ಕು ಔಷಧಗಳನ್ನೂ ನೀನು ತೆಗೆದುಕೊಂಡು ಬರಬೇಕು. ಅವುಗಳಿಂದ ವಾನರರನ್ನು ಬದುಕಿಸಿ ಆರೋಗ್ಯವಂತರನ್ನಾಗಿ ಮಾಡಬಹುದು."

ಹನುಮಂತನು ಜಾಂಬವಂತನಿಂದ ಆ ಔಷಧಿಗಳ ಗುರುತು ಲಕ್ಷಣಗಳನ್ನು ತಿಳಿದುಕೊಂಡು ಆಕಾಶದಲ್ಲಿ ವಾಯುಮಾರ್ಗದಲ್ಲಿ ಅಲ್ಲಿಗೆ ಹೊರಟನು. ಅವನು ಸಮುದ್ರವನ್ನೂ, ಪರ್ವತಗಳನ್ನೂ, ನದಿಗಳನ್ನೂ ಅರಣ್ಯವನ್ನೂ ದಾಟುತ್ತ ಹಿಮವತ್ಪರ್ವತದ .ಕಡೆಗೆ ಮಿಂಚಿನ ವೇಗದಲ್ಲಿ ಸಾಗಿದನು.

ಹಿಮಾಲಯದಲ್ಲಿ ಒಂದಕ್ಕಿಂತ ಒಂದು ಎತ್ತರವಾದ ಶಿಖರಗಳೂ, ಆಶ್ರಮಗಳೂ ಕಂಡುಬಂದುವು. ಬ್ರಹ್ಮಕೋಶ, ಕೈಲಾಸ ಪರ್ವತ, ಇಂದ್ರನು ತಪಸ್ಸು ಮಾಡಿದ ಸ್ಥಳ, ರುದ್ರಬಾಣ ಮೋಕ್ಷಸ್ಥಾನ, ಹಯಗ್ರೀವ ಕ್ಷೇತ್ರ, ಬ್ರಹ್ಮಕಪಾಲ, ಮೊದಲಾದ ಪ್ರದೇಶಗಳನ್ನೂ ಅವನು ನೋಡಿದನು. ಇಂದ್ರನಿಗೆ ಬ್ರಹ್ಮನು ವಜ್ರವನ್ನು ಕೊಟ್ಟ ಪ್ರದೇಶವನ್ನೂ, ಕುಬೇರನ ಸ್ಥಾನವನ್ನೂ, ಬ್ರಹ್ಮನ ಆಸನವನ್ನೂ, ಶಿವಧನುಕ್ಷೇತ್ರವನ್ನೂ, ಪಾತಾಳ ಬಿಲವನ್ನೂ ಹನುಮಂತನು ನೋಡಿದನು. ಹೀಗೆ ಹುಡುಕುತ್ತಿರಲು ಕಡೆಗೆ ಕೈಲಾಸ ಪರ್ವತಕ್ಕೂ ಋಷಭ ಪರ್ವತಕ್ಕೂ ನಡುವಿನಲ್ಲಿರುವ ಔಷಧಿಯಬೆಟ್ಟ ಅವನ ಕಣ್ಣಿಗೆ ಬಿತ್ತು. ಅದರ ಮೇಲೆ ಔಷಧಿಗಳು ಜಳಜಳನೆ ಬೆಳಗಿಕೊಂಡಿದ್ದವು.





February 1977

ವೀರಹನುಮಾನ್

ಜಾಂಬವಂತನು ಹೇಳಿದ ಗುರುತುಗಳನ್ನು ನೆನಪಿಟ್ಟುಕೊಂಡು ಹನುಮಂತನು ಓಷಧೀ ಪರ್ವತದಲ್ಲಿ ತನಗೆ ಬೇಕಾದ ನಾಲ್ಕು ಔಷಧದ ಗಿಡಗಳನ್ನು ಹುಡುಕ ತೊಡಗಿದನು. ಅಲ್ಲಿರುವ ಎಲ್ಲಾ ಗಿಡಗಳೂ ಒಂದೇ ಬಗೆಯಾಗಿ ಕಂಡುಬಂದುವು. ಹನುಮಂತನು ರೇಗಿ ತಾಳ್ಮೆಗೆಟ್ಟು ಆ ಪರ್ವತ ಶಿಖರವನ್ನೇ ಗುದ್ದಿ ಎಬ್ಬಿಸಿ ಹೊತ್ತುಕೊಂಡು ಹಿಂದಿರುಗಿದನು.

ದೊಡ್ಡ ಬೆಟ್ಟದೊಂದಿಗೆ ಆಕಾಶದಲ್ಲಿ ಬರುತ್ತಿರುವ ಹನುಮಂತನನ್ನು ನೋಡಿ ಎಚ್ಚರದಲ್ಲಿದ್ದ ಕೆಲವೇ ಮಂದಿ ವಾನರರು ಹರ್ಷಾತಿರೇಕದಿಂದ ಗರ್ಜಿಸಿದರು. ಅದನ್ನು ಕೇಳಿ ಹನುಮಂತನು ಕೂಡಾ ಪ್ರತಿಯಾಗಿ ಗರ್ಜನೆ ಮಾಡಿದನು. ಅವನು ಕೆಳಗಿಳಿದು ಬೆಟ್ಟವನ್ನು ಕೆಳಗಿಟ್ಟು, ಜಾಂಬವಂತ ಮೊದಲಾದ ಹಿರಿಯರಿಗೆ ನಮಸ್ಕಾರ ಮಾಡಿದನು.

ಔಷಧ ಮೂಲಿಕೆಗಳ ಮೇಲಿನಿಂದ ಹೊರಟು ಬಂದ ಗಾಳಿಯಿಂದಲೇ ರಾಮಲಕ್ಷ್ಮಣರು ಮೂರ್ಛೆಯಿಂದ ಎಚ್ಚರಕ್ಕೆ ಬಂದರು. ಅದರಂತೆ ಉಳಿದೆಲ್ಲರಿಗೂ ಎಚ್ಚರವಾಯಿತು. ಅಷ್ಟುಮಾತ್ರವಲ್ಲದೆ ಸತ್ತು ಬಿದ್ದಿದ್ದ ಇನ್ನೆಷ್ಟೋ ವಾನರರು ಕೂಡಾ ದಿವ್ಯೌಷಧಗಳ ಗಾಳಿ ತಾಗಿದ ಕೂಡಲೇ ಬದುಕಿ ಎದ್ದರು. ಅವರ ಶರೀರದ ಗಾಯಗಳೂ ಮಾಯವಾಗಿದ್ದುವು.

ಅದರಂತೆ ಔಷಧದ ಗಾಳಿಯಿಂದ ಸತ್ತುಬಿದ್ದ ರಾಕ್ಷಸರು ಕೂಡಾ ಬದುಕಿ ಬಿಡುತ್ತಿದ್ದರು. ಆದರೆ ರಾವಣನು ಎಲ್ಲಿಯೂ ರಾಕ್ಷಸರ ಶರೀರವನ್ನು ಹಾಗೆಯೇ ಬಿಟ್ಟಿರಲಿಲ್ಲ. ಯುದ್ಧದಲ್ಲಿ ಸತ್ತುಹೋದ ರಾಕ್ಷಸರೆಲ್ಲರನ್ನೂ ರಾವಣನು, ತನ್ನ ಪರಾಭವವು ರಹಸ್ಯವಾಗಿರಿಸಲಿಕ್ಕಾಗಿ, ಸಮುದ್ರದಲ್ಲಿ ಎತ್ತಿ ಹಾಕಿಸಿ ಬಿಟ್ಟಿದ್ದನು.

ಔಷಧಿಗಳಿಂದಾಗಬೇಕಾದ ಕೆಲಸವು ತೀರಿದ ಕೂಡಲೇ ಜಾಂಬವಂತನ ಅಪ್ಪಣೆಯಂತೆ ಹನುಮಂತನು ಆ ಬೆಟ್ಟದ ಶಿಖರವನ್ನು ಹೊತ್ತುಕೊಂಡು ಹೋಗಿ ಯಥಾ ಸ್ಥಾನದಲ್ಲಿಟ್ಟು, ಮತ್ತೆ ವಾಯುವೇಗದಿಂದ ರಾಮಲಕ್ಷ್ಮಣರ ಬಳಿಗೆ ತಿರುಗಿಬಂದನು. ಆಮೇಲೆ ಸುಗ್ರೀವನು ಹನುಮಂತನೊಂದಿಗೆ,

೨೮. ಇಂದ್ರಜಿತುವಿನ ಹೋಮ

28-1



"ಈಗ ನಾವು ಇಮ್ಮಡಿ ಉತ್ಸಾಹದವರಾಗಿದ್ದೇವೆ. ಈ ಸ್ಥಿತಿಯಲ್ಲಿ ಸುಮ್ಮನಿರಬಾರದು. ಕುಂಭಕರ್ಣನೂ, ರಾವಣನ ಮಗಂದಿರೂ ಸತ್ತುಹೋದರು. ಆದುದರಿಂದ ರಾವಣನು ಈಗ ಯುದ್ಧಮಾಡುವ ಎತ್ತುಗಡೆಯಲ್ಲಿರಲಿಕ್ಕಿಲ್ಲ. ನಮ್ಮಲ್ಲಿ ಬಲಿಷ್ಠರಾದ ವಾನರರು ದೀವಿಟೀ ಹಚ್ಚಿಕೊಂಡು ಈ ರಾತ್ರಿಯಲ್ಲಿಯೇ ಲಂಕೆಯೊಳಗೆ ನುಗ್ಗಬೇಕು" ಎಂದನು.

ಆದರಂತೆ ಸೂರ್ಯನು ಮುಳುಗಿದ ಮೇಲೆ ಕತ್ತಲೆ ಚೆನ್ನಾಗಿ ಮುಸುಗಿದಾಗ ವಾನರವೀರರು ದೀವಿಟಿಗಳನ್ನು ಎತ್ತಿಕೊಂಡು ಧಿಮಿಧಿಮಿ ಹೊರಟರು. ಅವರ ಉತ್ಸಾಹವನ್ನೂ ವೇಗದ ಧಾವತಿಯನ್ನೂ ನೋಡಿ ಅಲ್ಲಲ್ಲಿ ದ್ವಾರಗಳಲ್ಲಿದ್ದ ಕಾವಲಿಗ ರಾಕ್ಷಸರು ಹೆದರಿ ಓಡಿಹೋದರು. ವಾನರರು ತಮ್ಮನ್ನು ಅಡ್ಡಿಪಡಿಸುವವರಾರೂ ಇಲ್ಲದೆ ನಗರದ ದ್ವಾರಗಳಿಗೂ ಬುರುಜುಗಳಿಗೂ ಬೀದಿಗಳಲ್ಲಿ ಕಂಡ ಕಂಡ ಮನೆಗಳಿಗೂ ಬೆಂಕಿ ಹಚ್ಚುತ್ತಾಹೋದರು. ಮನೆಗಳೂ ಮಂದಿರಗಳೂ ಅಸಂಖ್ಯಾತವಾಗಿ ಹೊತ್ತಿಕೊಂಡು ಅಗ್ನಿ ಮಾಲೆಗಳಾದುವು. ಮನೆಗಳೊಂದಿಗೆ ಮನೆಯೊಳಗಿನ ಅಮೂಲ್ಯ ವಸ್ತುಗಳೂ ಉರಿದುಹೋಗುವುದನ್ನು ನೋಡುತ್ತಾ, ರಾಕ್ಷಸ ಕುಟುಂಬದವರು ಆರ್ತನಾದ ಮಾಡ ತೊಡಗಿದರು. ಈ ಬೆಂಕಿಯಿಂದ ಅನೇಕಮಂದಿ ರಾಕ್ಷಸರೂ ಸತ್ತರು.

ಸತ್ತುಹೋದ ವಾನರರೆಲ್ಲ ಮತ್ತೆ ಹೇಗೆ ಬದುಕಿಬಂದರೆಂದು ತಿಳಿಯದೆ, ನಿರ್ವಾಹತೋರದೆ, ರಾಕ್ಷಸರು ಮತ್ತೆ ಯುದ್ಧಕ್ಕೆ ಸಿದ್ಧರಾದರು. ಬೇಗ ಬೇಗನೆ ಇದ್ದಬದ್ದ ಸೈನ್ಯವನ್ನೆಲ್ಲ ಒಟ್ಟುಗೂಡಿಸಿದರು. ಈಗ ಅವರು ಲಂಕಾನಗರದೊಳಗೇ ವಾನರರನ್ನು ಇದಿರಿಸಬೇಕಾಗಿ ಬಂದಿತು.

ಸುಗ್ರೀವನು ಒಂದು ವಾನರರ ತಂಡವನ್ನು ನೋಡಿ, "ನೀವು ರಾವಣನ ಮನೆಯ ಸುತ್ತಲೂ ಮುತ್ತಿ ಯುದ್ಧಮಾಡಿರಿ" ಎಂದನು. ಅವನ ಆಜ್ಞೆಯ ಪ್ರಕಾರ ವಾನರರು ದೀವಿಟಿಗೆಗಳೊಂದಿಗೆ ತನ್ನ ಮಂದಿರದ ಬಾಗಿಲುಗಳಲ್ಲೆಲ್ಲ ನಿಂತಿರುವುದನ್ನು ನೋಡಿ, ರಾವಣನು ಕೋಪದಿಂದ ಕೆಂಡದಂತಾದನು. ಅವನು ಕುಂಭಕರ್ಣನ ಮಗಂದಿರಾದ ಕುಂಭ, ನಿಕುಂಭರನ್ನು ವಾನರರ ಮೇಲೆ ಯುದ್ಧಕ್ಕೆ ಕಳುಹಿಸಿದನು. ಕುಂಭ ನಿಕುಂಭರಿಗೆ ಸಹಾಯಕರಾಗಿ ಯೂಪಾಕ್ಷ, ಶೋಣಿತಾಕ್ಷ, ಪ್ರಜಂಘ, ಕಂಪನ ಎಂಬ ಮಹಾ ಮಹಾ ರಾಕ್ಷಸನಾಯಕರೂ ಹೊರಟರು.

ಉಭಯ ಪಕ್ಷಗಳಿಗೂ ಭಾರಿ ಹೋರಾಟ ಪ್ರಾರಂಭವಾಯಿತು. ಆ ಯುದ್ಧದಲ್ಲಿ ಅಂಗದನು ಕಂಪನನನ್ನು ಕೊಂದನು. ಅದೇ ವೇಗದಲ್ಲಿ ಅಂಗದನು ಶೋಣಿತಾಕ್ಷನ ಖಡ್ಗವನ್ನು ಕಿತ್ತುಕೊಂಡು, ಅದರಿಂದಲೇ ಅವನ ತಲೆಯನ್ನೂ ತುಂಡರಿಸಿ, ಬೇರೆ ರಾಕ್ಷಸರ ಮೇಲೆ ಧುಮುಕಿದನು. ಆಮೇಲೆ ಅಂಗದನ ಕೈಯಲ್ಲೇ ಪ್ರಜಂಘನ ಅವಸಾನವೂ ಆಯಿತು. ಮೈಂದನ ಕೈಯಲ್ಲಿ ಯೂಪಾಕ್ಷನೂ ಸತ್ತು ಬೀಳ



ಉಳಿದ ರಾಕ್ಷಸರು ಹಾಹಾಕಾರ ಮಾಡಿದರು. ಆಮೇಲೆ ಅಂಗದನು ಕುಂಭನೊಂದಿಗೆ ಸೆಣಸಾಡುತ್ತಾ ಅವನ ಪೆಟ್ಟಿಗೆ ತಾಳದೆ ಮೂರ್ಛೆ ಹೋಗಿ ಬಿದ್ದನು. ಅದನ್ನು ತಿಳಿದು ರಾಮನು ಅಂಗದನಿಗೆ ಸಹಾಯಕರಾಗಿ ಜಾಂಬವಂತ ಮೊದಲಾದವರನ್ನು ಕಳುಹಿಸಿಕೊಟ್ಟನು. ಆದರೆ ಅವರಿಗೆ ಕುಂಭನು ಪ್ರಯೋಗಿಸುವ ಬಾಣಗಳೆಡೆಯಲ್ಲಿ ಮುಂದುವರಿಯಲಾಗಲಿಲ್ಲ. ಅದನ್ನು ನೋಡಿ ಸುಗ್ರೀವನು, ಕುಂಭನ ಬಾಣಗಳನ್ನು ಸಹಿಸುತ್ತ ರಭಸದಿಂದ ತೀರಾ ಸಮೀಪಕ್ಕೆ ಹೋಗಿ ಹಾರಿ ಕುಂಭನ ಕೈಯಲ್ಲಿದ್ದ ಧನುಸ್ಸನ್ನು ಎಳೆದುಕೊಂಡು ಮುರಿದು ಕೆಡವಿದನು. ಆಮೇಲೆ ಅವನೊಂದಿಗೆ ಮುಷ್ಟಿಯುದ್ಧಕ್ಕೆ ತೊಡಗಿದನು. ಆ ಮಲ್ಲಯುದ್ಧದಲ್ಲಿ ಕಡೆಗೆ ಸುಗ್ರೀವನ ಕೈಯಲ್ಲಿ ಕುಂಭನು ಸತ್ತುಬಿದ್ದು ತಣ್ಣಗಾದನು.

ತನ್ನ ಅಣ್ಣ ಸತ್ತುದನ್ನು ನೋಡಿ, ನಿಕುಂಭನಿಗೆ ಮಹಾ ಆಕ್ರೋಶವೆದ್ದಿತು. ಅವನು ತನ್ನ ಕೈಯಲ್ಲಿದ್ದ ಪರಿಘವನ್ನು ಗಿರಿಗಿರಿ ತಿರುಗಿಸುತ್ತ, ಇದಿರಿನಲ್ಲಿ ಹನುಮಂತನ ಎದೆಗೆ ಗುರಿಯಿಟ್ಟು ಬಿಸುಟನು. ಅದು ಹನುಮಂತನ ಎದೆಗೆ ತಾಗಿ ತುಂಡು ತುಂಡಾಗಿ ಕೆಳಗೆ ಬಿದ್ದಿತು. ಹನುಮಂತನಿಗೂ ಭಾರಿ ಪೆಟ್ಟಾಗಿತ್ತು. ಆ ಕೋಪದಿಂದ ಹನುಮಂತನು ಮುಷ್ಟಿ ಬಿಗಿದು ನಿಕುಂಭನ ಎದೆಯ ಮೇಲೆ ಬಲವಾಗಿ ತಿವಿದನು.

ಆ ಪೆಟ್ಟಿಗೆ ನಿಕುಂಭನು ಮೂಗು ಬಾಯಿಗಳಿಂದ ವಿಪರೀತ ನೆತ್ತರು ಕಾರುತ್ತ ಮೂರ್ಛೆ ಹೋಗಿ ಬಿದ್ದನು. ಬಿದ್ದ ಸ್ವಲ್ಪ ಹೊತ್ತಿನೊಳಗೆ ತಿರುಗಿ ಎದ್ದು ಅತ್ಯಾಕ್ರೋಶದಿಂದ ನೆಲಬಿರಿಯುವಂತೆ ಗರ್ಜಿಸಿ ಹನುಮಂತನ ಮೇಲೆ ಎರಗಿದನು. ಹನುಮಂತನೂ ಅವನ ಪಟ್ಟಿಗೆ ಸಿಕ್ಕದೆ ತಾನೂ ಹಾರಿ ಅವನ ಕೊರಳನ್ನು ಅಮುಕಿ ಹಿಡಿದು ತಿರುಗಿಸಿ ತಲೆಯನ್ನು ಕಿತ್ತು ಒಗೆದು ನೆಲಕ್ಕೆ ಅಪ್ಪಳಿಸಿಬಿಟ್ಟನು. ಈ ರೀತಿಯಾಗಿ ಮಹಾ ಪ್ರತಾಪಶಾಲಿಗಳಾದ ಕುಂಭನಿಕುಂಭರು ಸತ್ತರೆಂದು ಕೇಳಿ ರಾವಣನೂ ತುಂಬ ದುಃಖಿಸಿದನು. ಆಗ ಖರನ ಮಗನಾದ ಮಕರಾಕ್ಷನು ತಾನು ಯುದ್ಧಕ್ಕೆ ಹೋಗುವೆನೆಂದು ಹೇಳಿ ಅಪ್ಪಣೆ ಪಡೆದು, ನೇರಾಗಿ ರಾಮನ ಮುಂದೆಯೇ ಹೋಗಿ, ಒಂದೇ ಒಂದು ರಾಮಬಾಣದಿಂದ ರಣರಂಗಕ್ಕೆ ಬಲಿಯಾದನು.

ಈ ವಾರ್ತೆ ಕೇಳಿದ ಕೂಡಲೇ ರಾವಣನು ಕೋಪದಿಂದ ಹಲ್ಲು ಕಡಿಯುತ್ತ ಇಂದ್ರಜಿತ್ತುವನ್ನು ನೋಡಿದನು. ಅದರ ಅರ್ಥ ಇನ್ನು ನಿನ್ನ ಹೊರತು ಬೇರೊಬ್ಬರಿಲ್ಲ ಎಂಬಂತಿತ್ತು. ತಂದೆಯ ಭಾವವನ್ನರಿತ ಇಂದ್ರಜಿತ್ತು, ತಂದೆಯ ಅಪ್ಪಣೆ ಪಡೆದು ಯುದ್ಧಕ್ಕೆ ಹೊರಟನು. ಯುದ್ಧಕ್ಕೆ ಮೊದಲು ಪದ್ಧತಿಯಂತೆ ರಣರಂಗದ ಹತ್ತಿರ ಹೋಮಕ್ಕೆ ಅಣಿಯಾದನು. ಅವನ ಸಂಗತಿಯನ್ನು ತಿಳಿದಿದ್ದ ರಾಕ್ಷಸ ಸ್ತ್ರೀಯರು ಋತ್ವಿಜರು ಧರಿಸುವಂತಹ ಕೆಂಪುಬಣ್ಣದ ತಲೆಗೆ ಕಟ್ಟುವ ಬಟ್ಟೆಗಳನ್ನು ಸಿದ್ಧಪಡಿಸಿದರು. ಅಲ್ಲಿ ಇಂದ್ರಜಿತ್ತು ಮಾಡಿದ ಹೋಮವು ಅತಿ



ವಿಚಿತ್ರವಾಗಿತ್ತು. ಅವನು ದರ್ಭೆಗಳಿಗೆ ಬದಲಾಗಿ ಆಯುಧಗಳನ್ನೂ, ಸ್ರುಕ್‌ಸ್ರುವಗಳಿಗೆ ಕಬ್ಬಿಣದ ಪಾತ್ರಗಳನ್ನೂ ಉಪಯೋಗಿಸಿದನು. ಹೋಮಕ್ಕೆ ಕೂಡಿದ ಋತ್ವಿಜರು ಕೆಂಪು ಬಟ್ಟೆಗಳನ್ನು ಧರಿಸಿಕೊಂಡಿದ್ದರು. ಇಂದ್ರಜಿತ್ತು ಕಪ್ಪು ಮೇಕೆಯ ಕಂಠವನ್ನು ಕಡಿದು ರಕ್ತಧಾರೆ ಸುರಿದು ಹೋಮ ಮಾಡಿದನು. ವಿಜಯ ಸೂಚಕವಾಗಿ ಅಗ್ನಿ ಹೊಗೆಯಿಲ್ಲದೆಯೇ ಧಗಧಗಿಸಿತು. ಹೀಗೆ ವಿಚಿತ್ರ ರೀತಿಯಲ್ಲಿ ಹೋಮವನ್ನು ಮುಗಿಸಿ, ದೇವದಾನವ ರಾಕ್ಷಸರಿಗೆ ತರ್ಪಣಗಳನ್ನು ಕೊಟ್ಟು, ಮಾಯವಾಗುವ ಶಕ್ತಿ ಹೊಂದಿರುವ ತನ್ನ ಅದ್ಭುತವಾದ ರಥದ ಮೇಲೇರಿದನು.

ಅಲ್ಲಿಂದ ಇಂದ್ರಜಿತ್ತು ಅಂತರ್ಧಾನನಾಗಿ ಯುದ್ಧ ರಂಗಕ್ಕೆ ಬಂದನು. ಅವನು ವಾನರಸೇನೆಯ ನಡುವೆ ರಾಮಲಕ್ಷ್ಮಣರನ್ನು ಗುರುತಿಸಿ ಅವರ ಮೇಲೆ ಒಮ್ಮೆಗೇ ಬಾಣ ವರ್ಷಣ ಮಾಡಲು ತೊಡಗಿದನು. ಜಾಗರೂಕರಾಗಿದ್ದ ರಾಮಲಕ್ಷ್ಮಣರು, ತಮ್ಮ ಎಡೆಬಿಡದ ಬಾಣಗಳಿಂದ ಆಕಾಶವನ್ನೆಲ್ಲಾ ಮುಚ್ಚಿದರೂ ಒಂದು ಬಾಣ ಕೂಡಾ ಇಂದ್ರಜಿತ್ತುವಿಗೆ ತಾಗಲಿಲ್ಲ. ಅವನ ಬಾಣಗಳು ರಾಮನ ಶರೀರದ ಎಲ್ಲಾ ಭಾಗಗಳನ್ನೂ ತಾಗಿ ನೋಯಿಸುತ್ತಿದ್ದುವು. ರಾಮಲಕ್ಷ್ಮಣರು ತಮ್ಮ ಬಾಣಗಳಿಂದ ಇಂದ್ರಜಿತ್ತುವಿನ ಬಾಣಗಳನ್ನು ಬಹಳ ಮಟ್ಟಿಗೆ ಖಂಡಿಸುತ್ತಲೇ ಇದ್ದರು. ಆದರೂ ಇಂದ್ರಜಿತ್ತು ಮೇಲಿಂದ ಮೇಲೆ ಪ್ರಯೋಗಿಸುವ ಬಾಣಗಳು ವಾನರಸೇನೆಯನ್ನು ತತ್ತರಗೊಳಿಸುತ್ತಿದ್ದುವು.

ಲಕ್ಷ್ಮಣನಿಗೆ ಬಹಳ ಕೋಪಬಂದು, "ಅಣ್ಣಾ, ನಾನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ರಾಕ್ಷಸರೆಲ್ಲರನ್ನೂ ಕೊಂದುಬಿಡುತ್ತೇನೆ." ಎಂದನು. ರಾಮನು ಅದಕ್ಕೆ ಒಪ್ಪದೆ, "ತಮ್ಮಾ, ಒಬ್ಬನಿಗೋಸ್ಕರ ಭೂಮಿಯ ಮೇಲಿರುವ ರಾಕ್ಷಸರೆಲ್ಲರನ್ನೂ ಕೊಲ್ಲುವೆನೆನ್ನುವುದು ಭಾವ್ಯವಲ್ಲ. ಸಂಕಲ್ಪಸಿದ್ಧಿಯಂತಹ ಬ್ರಹ್ಮಾಸ್ತ್ರವನ್ನು ದುರುಪಯೋಗ ಪಡಿಸಬಾರದು. ಆಮೇಲೆ ಅದನ್ನು ಉಪಯೋಗಿಸುವ ಅರ್ಹತೆಯೂ ತಪ್ಪಿಹೋಗುತ್ತದೆಂಬುದನ್ನು ನೆನಪಿಡು. ನಾವೀಗ ಬೇರೆ ದಿವ್ಯಾಸ್ತ್ರಗಳಿಂದಲೇ ಯುದ್ಧವನ್ನು ನೆರವೇರಿಸೋಣ" ಎಂದನು.

ಅಷ್ಟರಲ್ಲಿ ಇಂದ್ರಜಿತ್ತುವಿಗೆ ಒಂದು ಹೊಸ ಆಲೋಚನೆ ಬಂದಿತು. ಕೂಡಲೇ ಅವನು ಯುದ್ಧ ಭೂಮಿಯಿಂದ ಲಂಕಾ ನಗರದೊಳಗೆ ಹೋಗಿ, ಮಾಯಾ ಸೀತೆಯನ್ನು ನಿರ್ಮಿಸಿ ಅವಳನ್ನು ತನ್ನ ರಥದ ಮೇಲಿಟ್ಟುಕೊಂಡು, ಮತ್ತೆ ಯುದ್ಧಭೂಮಿಗೆ ಬಂದನು. ಆ ಮಾಯಾ ಸೀತೆಯನ್ನು ರಾಮಲಕ್ಷ್ಮಣರ ಕಣ್ಣೆದಿರಿಗೇ ಕೊಂದು, ಅವರಿಗೆ ಮಾನಸಿಕ ದೌರ್ಬಲ್ಯವನ್ನುಂಟುಮಾಡಬೇಕೆಂದು ಆಲೋಚಿಸಿದ್ದನು.

ಹೋದ ಇಂದ್ರಜಿತ್ತು ಮತ್ತೆ ಯುದ್ಧಭೂಮಿಗೆ ಮರಳುವುದನ್ನು ನೋಡಿ ಹನುಮಂತನು ದೊಡ್ಡ

ದೊಂದು ಬಂಡೆಯನ್ನೆತ್ತಿಕೊಂಡು ಅವನ ಮುಂದೆ ಬಂದನು. ಅವನ ಹಿಂದೆಯೂ ಅನೇಕ ವಾನರ ವೀರರು ಬಂಡೆಗಲ್ಲುಗಳನ್ನು ಬೀಸಲು ಸಿದ್ಧರಾಗಿ ಹಿಡಿದುಕೊಂಡು ಬಂದರು. ಆದರೆ ಅವರ ಕಣ್ಣಿಗೆ ಬಿದ್ದ ದೃಶ್ಯ ಅವರೆಲ್ಲರನ್ನೂ ನಡುಗಿಸುವಂತಿತ್ತು. ಇಂದ್ರಜಿತ್ತುವಿನ ರಥದ ಮೇಲೆ ಕೃಶಳಾಗಿಹೋದ ಸೀತೆ ಅಳುತ್ತಾ ದಿಕ್ಕು ದಿಕ್ಕು ನೋಡುತ್ತಿದ್ದಾಳೆ. ಅದನ್ನು ನೋಡಿ ಹನುಮಂತನಿಗೆ ಕಂಬನಿ ತುಂಬಿ ಸೂಸಿತು. ಅವನು ಉಳಿದ ವಾನರರನ್ನು ನೋಡಿ, "ಇಂದ್ರಜಿತ್ತು ತನ್ನ ರಥದ ಮೇಲೆ ಸೀತಾದೇವಿಯನ್ನು ಏತಕ್ಕಾಗಿ ತಂದಿದ್ದಾನೆ ?" ಎಂದು ಕೇಳಿದನು. ವಾನರರು ಏನು ಉತ್ತರಕೊಡಬಲ್ಲರು ?

ಮರು ನಿಮಿಷದಲ್ಲಿ ಹನುಮಂತನು ದುಃಖವನ್ನು ನುಂಗಿ ಕೋಪದಿಂದ ಹಲ್ಲು ಕಡಿಯುತ್ತ ಇಂದ್ರಜಿತ್ತುವಿನ ಮೇಲೆ ಏರಿ ಹೋಗತೊಡಗಿದನು. ವಾನರಸೇನೆ ತನ್ನ ಕಡೆಗೆ ಬರುವುದನ್ನು ನೋಡಿ ಇಂದ್ರಜಿತ್ತು ತನ್ನ ಕತ್ತಿಯಿಂದ ಮಾಯಾ ಸೀತೆಯ ಕೊರಳನ್ನು ಗೀರತೊಡಗಿದನು. ಅವಳ ಜುಟ್ಟು ಹಿಡಿದು ಹೊಡೆಯತೊಡಗಿದನು. ಇದೇನು ಚಿತ್ರಹಿಂಸೆ ಮಾಡುತ್ತಿದ್ದಾನೆಯೇ ?

ಅದನ್ನು ನೋಡಿ ಹನುಮಂತನು ದುಃಖ ತಡೆಯಲಾಗದೆ, "ಎಲೋ, ಕ್ರೂರ ಕರ್ಮಿಯೇ ? ಮಹಾಪಾಪೀ ! ಇದೇನು ಕೆಲಸ ನಿನ್ನದು ? ಹೀಗೆ ಮಾಡಲು ನಿನಗೆ ನಾಚಿಕೆಯಾಗುವುದಿಲ್ಲವೇ ? ನೀನು ಸೀತೆಯನ್ನು ಕೊಂದುಗಿಂದುಬಿಟ್ಟರೆ ಮರುಕ್ಷಣದಲ್ಲಿ ನೀನೂ ಸಾಯುವಿ ! ಲಂಕಾ ನಗರವೂ ಮುಳುಗುವುದು !" ಎಂದನು.

ಇಂದ್ರಜಿತ್ತುವಿನ ಮೇಲೆ ಬಂದ ವಾನರಸೇನೆಯನ್ನು ರಾಕ್ಷಸರ ಸೇನೆ ಇದಿರಿಸಿತು. ಇಂದ್ರಜಿತ್ತು ಹನುಮಂತನೊಂದಿಗೆ, "ಈ ಸೀತೆಗಾಗಿಯೇ ಅಲ್ಲವೇ ನೀನೂ ಸುಗ್ರೀವನೂ ರಾಮನೂ ಎಲ್ಲರೂ ಲಂಕೆಗೆ



ಬಂದಿದ್ದೀರಿ ? ಅವಳನ್ನೀಗ ನಿಮ್ಮೆಲ್ಲರ ಕಣ್ಣೆದಿರೇ ಕೊಂದು ಹಾಕಿಬಿಡುತ್ತೇನೆ. ಆಮೇಲೆ ಜೀವಚ್ಛವರಾದ ರಾಮಲಕ್ಷ್ಮಣ ನೀನು ಸುಗ್ರೀವ ದ್ರೋಹಿಯಾದ ಆ ವಿಭೀಷಣ ಎಲ್ಲರನ್ನೂ ಕೊಂದುಬಿಡುತ್ತೇನೆ. ಸ್ತ್ರೀಯರನ್ನು ಕೊಲ್ಲಬಾರದೆಂದು ಹೇಳುವೆಯಾದರೂ, ಶತ್ರುಗಳಿಗೆ ಸಂಕಟವನ್ನುಂಟುಮಾಡುವ ಯಾವ ಕಾರ್ಯವನ್ನಾದರೂ ಮಾಡಬಹುದು." ಎಂದನು.

ಹೀಗೆ ಹೇಳಿ ಮುಗಿಸಿದವನೇ ಇಂದ್ರಜಿತ್ತು ಮಾಯಾ ಸೀತೆಯನ್ನು ತನ್ನ ಖಡ್ಗದಿಂದ ಕಡಿದು ತುಂಡು ತುಂಡು ಮಾಡುತ್ತ ಸಿಂಹನಾದ ಮಾಡಿದನು. ಕಣ್ಣೆದಿರು ಕಂಡ ಭಯಂಕರ ದೃಶ್ಯವನ್ನೂ, ಅವನ ಸಿಂಹನಾದವನ್ನೂ ಕೇಳಿ ವಾನರರು ಹೆದರಿ ಓಡಿ ಹೋಗತೊಡಗಿದರು.

ಹನುಮಂತನು ಅವರನ್ನು ತಡೆಯುತ್ತ, "ಓಡಿ ಹೋಗುವುದರಿಂದೇನು ಪ್ರಯೋಜನ ? ನಿಮ್ಮ




ಪ್ರತಾಪಗಳೂ ಕಾರ್ಯ ಶೂರತ್ವವೂ ಏನಾಯಿತು? ಶೂರರಾದವರು ಯುದ್ಧರಂಗಕ್ಕೆ ಬೆನ್ನು ಹಾಕುತ್ತಾರೆಯೇ? ಬನ್ನಿ ಬನ್ನಿ!" ಎಂದು ಅವರನ್ನು ಹಿಂದಕ್ಕೆ ಕರೆದು, ರೌದ್ರಾವೇಶಗೊಂಡು ಬಂದ ವಾನರವೀರರೊಂದಿಗೆ ಯುದ್ಧಕ್ಕೆ ತೊಡಗಿದನು.

ಅವನು ಇಂದ್ರಜಿತ್ತುವಿನ ರಥದ ಮೇಲೆ ಬ್ರಹ್ಮಾಂಡದಂಥ ಶಿಲಾಖಂಡವನ್ನು ಬಿಸುಟನು. ಇಂದ್ರಜಿತ್ತುವಿನ ಸಾರಥಿ ಯುಕ್ತಿಯಿಂದ ರಥವನ್ನು ತಪ್ಪಿಸಿರದಿದ್ದರೆ ರಥವು ಪುಡಿಯಾಗುತಿತ್ತು. ಈಗ ಹನುಮಂತನು ಬಿಸುಟ ಕಲ್ಲಿನ ಅಡಿಯಲ್ಲಿ ಸಿಕ್ಕು ಅನೇಕ ಮಂದಿ ರಾಕ್ಷಸರು ಜಜ್ಜಿ ಸತ್ತರು. ವಾನರರು ತುಂಬ ವಿಜೃಂಭಿಸಿ ರಾಕ್ಷಸರನ್ನು ಕೊಲ್ಲತೊಡಗಿದರು. ಇಂದ್ರಜಿತ್ತುವಿನ ರಥದ ಮೇಲೆ ಶಿಲಾವರ್ಷಣವೇ ಸುರಿಯಿತು. ಇಂದ್ರಜಿತ್ತುವಿನ ರಥವು ಚಕ್ರಾಕಾರವಾಗಿ ಸುತ್ತುತ್ತ ತಪ್ಪಿಸಿಕೊಳ್ಳುತ್ತಿರಲು, ಇಂದ್ರಜಿತ್ತು ಬಹು ಕೋಪದಿಂದ ಎಡೆಬಿಡದ ಬಾಣಗಳಿಂದ ವಾನರರನ್ನು ಕೊಲ್ಲತೊಡಗಿದ್ದನು. ಅದನ್ನು ಲಕ್ಷಿಸದ ಹನುಮಂತನು ರಾಕ್ಷಸರ ಸೇನೆಯನ್ನು ಹಿಂದ ಹಿಂದಕ್ಕೆ ಅಟ್ಟುತ್ತ, ತನ್ನವರನ್ನು ನೋಡಿ, "ಈ ರಾಕ್ಷಸಸೇನೆಯೊಂದಿಗೆ ನಮಗೇನು ಕೆಲಸ? ನಾವು ಸೀತೆಗಾಗಿ ಬಂದವರು. ಆ ಸೀತೆ ಸತ್ತುಹೋದಳು. ಈ ವಾರ್ತೆಯನ್ನು ರಾಮನಿಗೂ ಸುಗ್ರೀವನಿಗೂ ಹೇಳಿ, ಅವರು ಏನು ಹೇಳುವರೋ ಹಾಗೆ ಮಾಡೋಣ. ನಡೆಯಿರಿ" ಎಂದನು.

ಹೀಗೆಂದು ಹನುಮಂತನು ಉಳಿದ ವಾನರರೊಂದಿಗೆ ಹಿಂದಿರುಗಿ ಹೊರಟನು. ಹನುಮಂತನು ಹಿಂದಿರುಗಿ ಹೋಗುವುದನ್ನು ನೋಡಿ, ಇಂದ್ರಜಿತ್ತು, ಇನ್ನೊಂದು ಹೋಮಮಾಡಿ, ಇನ್ನಷ್ಟು ಶಕ್ತಿ ಸಂಪಾದಿಸಲಿಕ್ಕಾಗಿ ನಿಕುಂಭಿಳೆ ಎಂಬ ಚೈತ್ಯವನದ ಕಡೆಗೆ ಹೋದನು. ಅಲ್ಲಿ ಅವನು ಅಗ್ನಿಯಲ್ಲಿ ರಕ್ತಮಾಂಸ, ಮಜ್ಜೆ ಮೇಧಸ್ಸುಗಳಿಂದ ಮಂತ್ರವತ್ತಾಗಿ ಹೋಮಮಾಡಲು ಪ್ರಾರಂಭ ಮಾಡಿದನು.

ಇಷ್ಟರಲ್ಲಿ ರಾಮನು ವಾನರರಿಗೂ ರಾಕ್ಷಸರಿಗೂ ಭಾರಿ ಯುದ್ಧವು ನಡೆಯುವುದನ್ನು ತಿಳಿದು, ಅದು ಹನುಮಂತನು ಮಾಡುವ ಯುದ್ಧವಾಗಿರಬೇಕೆಂದು ಜಾಂಬವಂತನೊಂದಿಗೆ ಹೇಳುತ್ತಿದ್ದನು. ರಾಮನ ಅಭಿಪ್ರಾಯದಂತೆ ಜಾಂಬವಂತನು ಹನುಮಂತನಿಗೆ ಸಹಾಯವಾಗಿ ಅತ್ತಕಡೆಗೆ ಹೋದನು.


ಜಾಂಬವಂತನೊಂದಿಗೆ ತನಗಾಗಿ ಬರುವ ಭಲ್ಲೂಕಸೇನೆಯನ್ನು ನೋಡಿ ಹನುಮಂತನು ಅವರನ್ನು ತನ್ನೊಂದಿಗೇ ಹಿಂದಿರುಗಿಸಿಕೊಂಡು ರಾಮನ ಬಳಿಗೆ ಬಂದನು. ಹನುಮಂತನು ದುಃಖದಿಂದ ಕಣ್ಣೀರು ಸುರಿಸುತ್ತ ಇಂದ್ರಜಿತ್ತು ಸೀತೆಯನ್ನು ಭಯಂಕರ ರೀತಿಯಲ್ಲಿ ಕೊಂದುಹಾಕಿದ ಸಂಗತಿಯನ್ನು ಹೇಳಿದನು. ಆ ವಾರ್ತೆಯನ್ನು ಕೇಳಿದ ಕೂಡಲೆ ರಾಮನು ಕಂದಿಕುಂದಿ ಕುಸಿದುಬಿಟ್ಟನು. ಅದನ್ನು ನೋಡಿ ಲಕ್ಷ್ಮಣನೂ, ಉಳಿದ ವಾನರಪ್ರಮುಖರೂ



ದುಃಖಿಸತೊಡಗಿದರು. ದೂರದೂರದಲ್ಲಿದ್ದ ವಾನರರೆಲ್ಲಾ ರಾಮಲಕ್ಷ್ಮಣರ ಬಳಿಗೆ ಬಂದು ಸೇರಿದರು. ಮೂರ್ಛೆಹೋದ ರಾಮನ ಮುಖದ ಮೇಲೆ ಸುಗಂಧಜಲವನ್ನು ಚೆಲ್ಲಿದರು.

ಲಕ್ಷ್ಮಣನು ರಾಮನನ್ನು ಆಲಿಂಗಿಸಿಕೊಂಡು, ದುಃಖಗದ್ಗದಿತ ಕಂಠದಿಂದ ಹೀಗೆಂದನು : "ಅಣ್ಣಾ, ರಾಮಾ, ನೀನು ಧರ್ಮಮಾರ್ಗವನ್ನೇ ಅವಲಂಬಿಸಿ, ಪಿತೃವಾಕ್ಯಪರಿಪಾಲಕನೆಂದು ಖ್ಯಾತನಾದೆ. ರಾಜ್ಯವನ್ನು ತ್ಯಾಗಮಾಡಿ ವನವಾಸಕ್ಕೆ ಬಂದೆ. ಕೈಕೇಯಿಯೂ ದಶರಥರ ಮೇಲೆ ಯಾವ ಬಗೆಯ ಹಗೆಯನ್ನೂ ಇಟ್ಟುಕೊಳ್ಳಲಿಲ್ಲ. ಹೀಗಿರುವ ನಿನಗೇ ಎಲ್ಲಾ ಬಗೆಯ ಕಷ್ಟಗಳೂ ಬಂದಿವೆ, ಬರುತ್ತಿವೆ. ನಿನ್ನ ಧರ್ಮವು ನಿನ್ನನ್ನು ಸ್ವಲ್ಪ ಕೂಡಾ ಕಾಪಾಡಲಿಲ್ಲ. ಆದುದರಿಂದ ಈ ಧರ್ಮಗಿರ್ಮಗಳೆಲ್ಲ ನಿಷ್ಪ್ರಯೋಜನವೇ ಸರಿ. ಧರ್ಮವು ರಕ್ಷಿಸುತ್ತದೆನ್ನುವುದು ಸುಳ್ಳು..." ಎಂದು ಹೇಳುತ್ತಿರುವಾಗ, ಅವರ ಬಳಿಗೆ ವಿಭೀಷಣನು ಬಂದನು.

ಅವನು ರಾಮಲಕ್ಷ್ಮಣರ ಪರಿಸ್ಥಿತಿಯನ್ನು ನೋಡಿ, ಸೀತೆಯನ್ನು ಇಂದ್ರಜಿತ್ತು ವಧಿಸಿದನೆಂಬ ಸಂಗತಿಯನ್ನು ಕೇಳಿ, ಹೀಗೆಂದನು : "ರಾಮಾ, ಈ ವಾರ್ತೆ ನಂಬುವಂತಹುದಲ್ಲ. ಸೀತೆಯನ್ನು ನಿನಗೆ ಒಪ್ಪಿಸಲಿಕ್ಕೇ ಒಪ್ಪದಿದ್ದ ರಾವಣನು ಸೀತೆಯನ್ನು ವಧಿಸಲು ಒಪ್ಪುವುದುಂಟೇ ? ಅವನು ಯಾವ ಪರಿಸ್ಥಿತಿಯಲ್ಲಾದರೂ ಸೀತೆಯನ್ನು ಬಿಡಲು ಒಪ್ಪಲಾರ. ಅವಳಿಗೆ ಕೇಡು ಬರುವಂತೆಯೂ ಮಾಡಲಾರ. ಇಂದ್ರಜಿತ್ತುವಿನ ಸ್ವಂತಬುದ್ಧಿಯ ಮಾಯಾಕಾರ್ಯವೇ ಇದು. ಅವನು ಮುಖ್ಯವಾದೊಂದು ಹೋಮಕ್ಕೆ ನಿಕುಂಭಿಳೆಯ ಚೈತ್ಯವನಕ್ಕೆ ಹೋಗಿದ್ದಾನೆ. ಆ ಸಮಯದಲ್ಲಿ ವಾನರರು ತನ್ನ ಹೋಮಕ್ಕೆ ವಿಘ್ನಮಾಡುವರೆಂದುಕೊಂಡು, ಅವರನ್ನೆಲ್ಲ ದುಃಖದಲ್ಲಿ ಮುಳುಗಿಸಿ ಸುಮ್ಮನಿರಿಸಲು ಮಾಯಾಸೀತೆಯನ್ನು ನಿರ್ಮಿಸಿ ವಧಿಸಿ ಹೋಗಿದ್ದಾನೆ. ಅವನು ಈಗ ತಲೆ ಹಾಕಿದ ಹೋಮವನ್ನು ನಿರ್ವಿಘ್ನವಾಗಿ ಮಾಡಿ ಮುಗಿಸಿದ ಮೇಲೆ ದೇವತೆಗಳೆಲ್ಲ ಒಂದಾಗಿ ಬಂದರೂ ಅವನನ್ನು ಜಯಿಸಲು ಸಾಧ್ಯವಿಲ್ಲ. ಆದುದರಿಂದ ನಾವೀಗ ತ್ವರೆಮಾಡುವ ಅಗತ್ಯವಿದೆ. ಅವನ ಹೋಮ ಪೂರ್ತಿಯಾಗುವುದಕ್ಕೆ ಮೊದಲೇ ನಾವು ಸೈನ್ಯದೊಂದಿಗೆ ನಿಕುಂಭಿಳೆಗೆ ಹೋಗಬೇಕು. ನೀನು ನಿಶ್ಚಿಂತೆಯಾಗಿ ಇಲ್ಲಿಯೇ ಇರು. ಲಕ್ಷ್ಮಣನುಮಾತ್ರ ನಮ್ಮೊಂದಿಗೆ ಬರಲಿ. ಲಕ್ಷ್ಮಣನು ಇಂದ್ರಜಿತ್ತುವಿನ ಹೋಮಕ್ಕೆ ವಿಘ್ನವನ್ನುಂಟುಮಾಡಿ, ಮುಖಾಮುಖೀ ಯುದ್ಧಕ್ಕೆ ಅವನು ನಿಲ್ಲುವಂತೆ ಮಾಡಿದರೆ, ಬ್ರಹ್ಮನ ವರವು ನಿಜವಾಗುವಂತಾಗಿ ಲಕ್ಷ್ಮಣನ ಕೈಯಲ್ಲಿ ಅವನು ಸಾಯುತ್ತಾನೆ."



28-8



March 1977

ವೀರಹನುಮಾನ್

ದುಃಖದಲ್ಲಿ ಮುಳುಗಿಹೋದ ರಾಮನಿಗೆ ವಿಭೀಷಣನು ಹೇಳಿದ ಮಾತುಗಳೊಂದೂ ಕಿವಿಯೊಳಗೆ ಬೀಳಲೇ ಇಲ್ಲ. ಆದುದರಿಂದ ಅವನು ಸ್ವಲ್ಪ ಹೊತ್ತಿನ ಮೇಲೆ ತನ್ನನ್ನು ತಾನು ನಿಗ್ರಹಿಸಿಕೊಂಡು, ವಿಭೀಷಣನನ್ನು ನೋಡಿ, "ವಿಭೀಷಣಾ, ನೀನೇನೋ ಹೇಳಿದೆಯಲ್ಲ? ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಇನ್ನೊಮ್ಮೆ ಹೇಳಯ್ಯ" ಎಂದನು. ವಿಭೀಷಣನು ಹೀಗೆಂದನು:

"ರಾಮಾ, ನೀನು ಕಾರಣವೇನಿಲ್ಲದೆ ದುಃಖಿಸುತ್ತ ಕಾಲಹರಣ ಮಾಡುವುದನ್ನು ನೋಡಿದರೆ ನಮಗೂ ದುಃಖವಾಗುತ್ತದೆ. ಹೀಗಾಗುವುದರಿಂದ ಸಂತೋಷಪಡುವವರು ನಿನ್ನ ಶತ್ರುಗಳೇ. ರಾಕ್ಷಸರನ್ನು ಕೊಲ್ಲುವುದೂ, ಸೀತೆಯನ್ನು ಮತ್ತೆ ತಂದು ಕೊಳ್ಳುವುದೂ ನಿನ್ನ ಉದ್ದೇಶವೆಂಬುದು ನಿಜವಾಗಿರುವ ಪಕ್ಷದಲ್ಲಿ ಬೇಗನೇ ಯುದ್ಧಕ್ಕೆ ಆಜ್ಞೆಮಾಡು. ಲಕ್ಷ್ಮಣನನ್ನು ವಾನರಸೇನೆಯೊಂದಿಗೆ ನಿಕುಂಭಿಳೆಗೆ ಕಳುಹಿಸು. ಇಂದ್ರಜಿತ್ತುವಿನೊಡನೆ ಯುದ್ಧ ಮಾಡಿ ಅವನನ್ನು ಕೊಲ್ಲಲಿಕ್ಕೆ ಲಕ್ಷ್ಮಣನಿಗೆ ಹೇಳು. ಇಂದ್ರಜಿತ್ತು ಮುಖ್ಯವಾದೊಂದು ಹೋಮವನ್ನು ಮಾಡಲು ನಿಕುಂಭಿಳೆಗೆ ಹೋಗಿದ್ದಾನೆ. ಅವನು ಆ ಹೋಮವನ್ನು ಪೂರ್ತಿ ಮಾಡಿಬಿಟ್ಟನೆಂದರೆ ನಮಗೆಲ್ಲರಿಗೂ ಸಾವು ತಪ್ಪದು. ಅದು ಬ್ರಹ್ಮದೇವನು ಇಂದ್ರಜಿತ್ತುವಿಗೆ ಕೊಟ್ಟ ವರ. ಅವನ ನಿಕುಂಭಿಳಾಯಾಗವು ಪೂರ್ತಿಯಾಗದಂತೆ ಅಡ್ಡ ತಗಲುವವನ ಕೈಯಲ್ಲಿಯೇ ಅವನ ಮರಣವೆಂದು ಬ್ರಹ್ಮಶಾಸನ. ಇಂದ್ರಜಿತ್ತು ಸತ್ತುಬಿಟ್ಟನೆಂದರೆ ರಾವಣನೂ ಉಳಿದವರೂ ಸತ್ತ ಹಾಗೇ ಆಗುತ್ತದೆ. ಈಗ ತ್ವರೆ ಮಾಡಬೇಕು."

ಕೂಡಲೇ ರಾಮನು ಲಕ್ಷ್ಮಣನೊಂದಿಗೆ ಇಂದ್ರಜಿತ್ತುವನ್ನು ಕೊಂದುಬರುವಂತೆ ಹೇಳಿದನು. ಲಕ್ಷ್ಮಣನು ಬಲವಾದ ವಾನರ ಸೈನ್ಯವನ್ನೂ ಭಲ್ಲೂಕರ ಗುಂಪನ್ನೂ ಕರೆದುಕೊಂಡು ಸಿದ್ಧನಾದನು. ನಿಕುಂಭಿಳೆಗೆ ದಾರಿ ತೋರಿಸಲು ವಿಭೀಷಣನೂ ಹೊರಟನು. ಲಕ್ಷ್ಮಣನ ಜತೆಯಲ್ಲಿ ಹನುಮಂತನೂ ತಾನಾಗಿ ಹೊರಟನು.

೨೯. ಇಂದ್ರಜಿತ್ತುವಿನ ಮರಣ

29-1



ಈ ಯುದ್ಧಕ್ಕೆ ಲಕ್ಷ್ಮಣನು ಬಂಗಾರದಿಂದ ಅಲಂಕರಿಸ್ಪಟ್ಟ ಧನುರ್ಬಾಣಗಳನ್ನು ಹಿಡಿದಿದ್ದನು. ಅಭೇದ್ಯವೆನಿಸುವಂತಹ ಕವಚವನ್ನು ತೊಟ್ಟಿದ್ದನು. ವಿಭೀಷಣನು ಕೂಡಾ ಒಳ್ಳೆಯ ಬಿಲ್ಲನ್ನೂ, ಬಾಣಗಳನ್ನೂ ತೆಗೆದುಕೊಂಡಿದ್ದನು. ಹೀಗೆ ಅವರೆಲ್ಲ ಬೇಗ ಬೇಗನೆ ಹೋಗಿ ನಿಕುಂಭಿಳೆಯನ್ನು ತಲಪಿದರು. ದೂರದಲ್ಲಿ ವ್ಯೂಹವಾಗಿ ನಿಂತಿರುವ ರಾಕ್ಷಸ ಸೇನೆ ಅವರಿಗೆ ಕಾಣಿಸಿತು.

ವಿಭೀಷಣನು ಲಕ್ಷ್ಮಣನಿಗೆ ಆ ರಾಕ್ಷಸ ಸೇನೆಯನ್ನು ತೋರಿಸುತ್ತ, "ಇಂದ್ರಜಿತ್ತು ಆ ರಾಕ್ಷಸರ ಕೋಟೆಯ ನಡುವಿನಲ್ಲಿ ಹೋಮ ಮಾಡುತ್ತಿದ್ದಾನೆ. ಅದು ಪೂರ್ತಿಯಾಗುವುದಕ್ಕೆ ಮೊದಲೇ ನಮ್ಮ ವಾನರ ಸೇನೆ ಈ ರಾಕ್ಷಸ ಸೇನೆಯನ್ನು ಚೆದರಿಸಿ ನಾಶ ಮಾಡಲಿ. ನೀನು ಈ ಭಾಗದ ಸೇನೆಯನ್ನೂ ಭೇದಿಸು. ಆಗ ಹೋಮ ಕಾರ್ಯದಲ್ಲಿರುವ ಇಂದ್ರಜಿತ್ತು ನಿನ್ನ ಕಣ್ಣಿಗೆ ಬೀಳುವನು. ನೀನು ಪೂರ್ಣ ಸಾಮರ್ಥ್ಯವನ್ನು ಪ್ರದರ್ಶಿಸಿ ಯುದ್ಧ ಮಾಡಿದೆಯಾದರೆ ಇಂದ್ರಜಿತ್ತು ಸಾಯುವನು. ನಿನ್ನ ಕೈಯಲ್ಲೇ ಅವನಿಗೆ ಮರಣ." ಎಂದನು.

ಕೂಡಲೇ ವಾನರರೂ, ಭಲ್ಲೂಕಗಳೂ, ಲಕ್ಷ್ಮಣನೂ ರಾಕ್ಷಸರ ಸೇನೆಯ ಮೇಲೆ ಒಳ್ಳೆಯ ರಭಸದಿಂದ ದಾರುಣವಾದ ಯುದ್ಧವನ್ನು ಪ್ರಾರಂಭಿಸದರು. ಹೀಗೆ ಎದ್ದ ದೊಡ್ಡ ಕೋಲಾಹಲವು ಇಂದ್ರಜಿತ್ತುವಿನ ಹೋಮ ದೀಕ್ಷೆಯನ್ನು ಭಗ್ನಮಾಡಿಸಿತು. ತನ್ನ ಸೇನೆಯಲ್ಲಿ ಎದ್ದ ಹಾಹಾಕಾರಗಳನ್ನು ಕೇಳಿ ಇಂದ್ರಜಿತ್ತು ಹೋಮವನ್ನು ಅರ್ಧದಲ್ಲೇ ಬಿಟ್ಟು ಎದ್ದು ನಿಲ್ಲಲೇ ಬೇಕಾಯಿತು. ಮತ್ತೆ ಅವನು ಹೋಮವನ್ನು ಮುಗಿಸಲಾರದೆ, ತುಂಬ ರೌದ್ರಾಕಾರನಾಗಿ ಎದ್ದು, ತನ್ನ ರಥವನ್ನೇರಿ ಯುದ್ಧಕ್ಕೆ ಸಿದ್ಧನಾಗಿ ಬಂದನು.

ವಿಭೀಷಣನು ಮುಂದೆ ಹೋಗಲು, ಒಂದು ಮಹಾವನವು ಕಾಣಿಸಿತು. ಇಂದ್ರಜಿತ್ತು ಹೋಮ ಮಾಡುವ ಸ್ಥಳವು ಆ ವನದಲ್ಲಿದ್ದಿತು. ಅಲ್ಲಿರುವ ಪ್ರತ್ಯೇಕವಾದೊಂದು ಕಪ್ಪು ಬಣ್ಣದ ಭಯಂಕರಾಕಾರವಾಗಿರುವ ಮರದ ಬುಡದಲ್ಲಿ ಆ ಹೋಮವು ನಡೆಯುತ್ತಿತ್ತು. ಇಂದ್ರಜಿತ್ತು ಅಲ್ಲಿ ಭೂತಗಳಿಗೆ ಬಲಿಕೊಟ್ಟು, ಹೋಮವನ್ನು ಮುಗಿಸಿ, ಯುದ್ಧಕ್ಕೆ ಸಿದ್ಧನಾಗಿ ಎದ್ದು, ಯಾರಿಗೂ ಕಾಣದಂತೆ ತಾನು ಮಾತ್ರ ಎಲ್ಲರನ್ನೂ ನೋಡುತ್ತ ಯುದ್ಧ ಮಾಡುವನು. ಆ ಸ್ಥಿತಿಯಲ್ಲಿ ಅವನನ್ನು ಕೊಲ್ಲಲು ಯಾವನಿಗೂ ಸಾಧ್ಯವಾಗದು.

ಈ ಸಂಗತಿಯನ್ನೆಲ್ಲ ವಿಭೀಷಣನಿಂದ ಚೆನ್ನಾಗಿ ತಿಳಿದ ಲಕ್ಷ್ಮಣನು ಯುದ್ಧಸನ್ನದ್ಧನಾಗಿ ಆ ಮಹಾವೃಕ್ಷದ ಬಳಿಗೆ ಹೋಗಿ ನಿಂತನು. ಅಷ್ಟರಲ್ಲೇ ಅರ್ಧಹೋಮದಿಂದೆದ್ದ ಇಂದ್ರಜಿತ್ತು ರಥವನ್ನೇರಿ ಅವನ ಇದಿರಾಗಿಯೇ ಬಂದನು.

"ರಾಮನ ತಮ್ಮ ಲಕ್ಷ್ಮಣನೆಂಬ ನಾನು ನಿನ್ನನ್ನು ಯುದ್ಧಕ್ಕೆ ಕರೆಯುತ್ತಿದ್ದೇನೆ. ನನ್ನ ಮುಂದೆ ಸರಿ


21-2

ಯಾಗಿ ನಿಂತು ಯುದ್ಧ ಮಾಡು. ಓಡಬೇಡ" ಎಂದು ಲಕ್ಷ್ಮಣನು ಉಚ್ಚಕಂಠದಿಂದ ಇಂದ್ರಜಿತ್ತುವಿಗೆ ಆಜ್ಞಾಪಿಸಿದನು.

ಇಂದ್ರಜಿತ್ತು ಲಕ್ಷ್ಮಣನ ಮಾತನ್ನು ಕೇಳಿ, ಅವನ ಹಿಂದೆ ನಿಂತಿರುವ ವಿಭೀಷಣನನ್ನು ನೋಡಿ ಕೋಪದಿಂದ ಹಲ್ಲು ಕಡಿಯುತ್ತ ಹೀಗೆಂದನು :

"ವಿಭೀಷಣ ! ನೀನು ರಾಕ್ಷಸ ಕುಲದಲ್ಲಿ ಹುಟ್ಟಿ ಕೂಡಾ ಕುಲಾಭಿಮಾನ ಬಿಟ್ಟು ನನ್ನ ಮುಂದೆ ಹೇಗೆ, ಯಾವ ಮುಖದಿಂದ ಬಂದೆ ? ಇದೇ ನಿನ್ನ ಸಾಕ್ಷತ್ ಜನ್ಮಸ್ಥಳವಾಗಿದ್ದು, ನನ್ನ ತಂದೆಯ ಬೆನ್ನಿಗೆ ಬಿದ್ದ ತಮ್ಮನಾಗಿದ್ದು, ನನ್ನ ಚಿಕ್ಕಪ್ಪನಾಗಿದ್ದು ನನಗೇ ಕೇಡು ಬಗೆಯಲು ನಿನಗೆ ಹೇಗೆ ಮನಸ್ಸು ಬಂತು ? ಧರ್ಮವನ್ನೇ ಕಾಣಲಾಗದ ಕುರುಡನಾದೆ. ಎಲೋ ದುಷ್ಟನೇ ! ನಿನಗೆ ಬಂಧುಗಳು ಬೇಡ, ಕುಲಬೇಡ ಸ್ನೇಹಿತರು ಬೇಡ. ರಕ್ತಸ್ಪರ್ಶ ಸಹಾ ನಿನಗಿಲ್ಲ. ನಿನ್ನವರನ್ನೆಲ್ಲಾ ಬಿಟ್ಟು ಶತ್ರುವಿಗೆ ದಾಸನಾದೆ ! ನಾಚಿಕೆಯೂ ನಿನಗಿಲ್ಲ. ಬಂಧುಗಳು ನಿನ್ನ ಕತೆ ಕೇಳಿ ಅಳುತ್ತಾರೆ. ಒಳ್ಳೆಯವರು ನಿನ್ನನ್ನು ಬಯ್ಯುತ್ತಾ ಇರುತ್ತಾರೆ. ಬೇಕಾದವರ ನಡುವೆ ದೊಡ್ಡತನದಿಂದಿರಲಿಕ್ಕೂ, ಶತ್ರುಗಳ ಮಧ್ಯೆ ಹೀನನಾಗಿರಲಿಕ್ಕೂ ಏನು ವ್ಯತ್ಯಾಸವಿದೆ ಎಂಬುದು ಕೂಡಾ ನಿನಗೆ ಗೊತ್ತಿಲ್ಲ. ನೀನು ನಮ್ಮವನಾಗಿದ್ದು, ನಿನಗೆ ಮಗನಂಥವನ ನನ್ನ ಹೋಮವನ್ನು ಭಗ್ನಮಾಡಿ ನನಗೆ ಅಪಕಾರ ಮಾಡಲು ಬಂದೆಯಲ್ಲವೆ ? ಇಂತಹ ನೀಚವಾದ ಕೆಲಸವನ್ನು ಎಂಥವರೂ ಮಾಡಲಾರರು. ಕುಲಕ್ಕೆ ಕೇಡು ಕೊಡಲಿಯ ಕಾವು ಎಂಬ ಮಾತನ್ನು ನಿಜ ಮಾಡಿದೆ."

ಅವನ ಮಾತಿಗೆ ವಿಭೀಷಣನು ಹೀಗೆ ಉತ್ತರ ಕೊಟ್ಟ : "ಇಂದ್ರಜಿತ್ತು, ನನ್ನ ಸ್ವಭಾವವು ಹೇಗೆಂದು ನಿನಗೆ ಗೊತ್ತೇ ಇದೆ. ನನ್ನದು ಸಾತ್ವಿಕ ಸ್ವಭಾವ. ಅಧರ್ಮವನ್ನು ನಾನು ಸಹಿಸಲಾರೆ. ಇಲ್ಲದಿದ್ದರೆ ನನ್ನ ಅಣ್ಣ ರಾವಣನನ್ನು ನಾನು ಬಿಡುತ್ತಿದ್ದನೆ ? ನಿನ್ನ ತಂದೆಗೆ ನಾಶವಾಗುವವನಿಗಿರುವ ಎಲ್ಲಾ ಅವಲಕ್ಷಣಗಳೂ ಇದೆ. ಬೇಗದಲ್ಲೇ ಈ ಲಂಕೆಯಲ್ಲಿರುವ



11-3



ರಾಕ್ಷಸರೆಲ್ಲಾ, ನಿನ್ನ ತಂದೆಯೊಂದಿಗೆ ನಾಶವಾಗುತ್ತಾರೆ. ನಿನಗೂ ಸಾಯುವ ವೇಳೆ ಸಮೀಪಿಸಿತು. ಸಾಯಲು ನಿಂತಿರುವ ನಿನ್ನನ್ನು ಹೆಚ್ಚು ಬೈದು ಏನು ಪ್ರಯೋಜನ? ಕುಲನಾಶಕ್ಕೆ ಮೂಲನಾಗಿರುವವನೂ ನೀನೇ. ನೀನು ಮಾಯಾ ಸೀತೆಯನ್ನು ಕೊಂದು, ರಾಮಲಕ್ಷ್ಮಣರಿಗೆ ಮಹಾ ಅವಮಾನ ಮಾಡಿರುವೆ. ಇದು ವೀರನು ಮಾಡುವ ಕೆಲಸವೆ? ಇನ್ನು ನೀನು ಬದುಕಿರಲು ಸಾಧ್ಯವಿಲ್ಲ. ಲಕ್ಷ್ಮಣನೊಂದಿಗೆ ಯುದ್ಧಮಾಡಿ, ಸತ್ತುಹೋಗಿ ಯಮದೂತರಿಗೆ ವಿಧೇಯನಾಗಿ ಸೇವೆ ಮಾಡಿಕೊಂಡಿರು."

ಇಂದ್ರಜಿತ್ತು ವಿಭೀಷಣನ ಮೇಲೆ ಜಿಗುಪ್ಸೆಗೊಂಡು, ಸರ್ರನೆ ಲಕ್ಷ್ಮಣನ ಕಡೆಗೆ ತಿರುಗಿ, "ಯುದ್ಧ ಬೇಕೆ ನಿನಗೆ? ಆ ರಾತ್ರಿ ಯುದ್ಧದಲ್ಲಿ ನನ್ನ ಬಾಣಗಳ ರುಚಿ ತಿಳಿದುಕೊಂಡೂ ಕೂಡಾ, ಮತ್ತೆ ನನ್ನ ಮುಂದೆ ಯುದ್ಧಕ್ಕೆ ಬಂದು ನಿಂತಿದ್ದಿಯಾ? ನಿನ್ನ ಆಯುಷ್ಯ ತೀರಿದುದರಿಂದಲೇ ಅದನ್ನು ಮರೆತು ಈಗ ಸಾಯಲಿಕ್ಕೆ ಬಂದಿದ್ದೀಯೋ!" ಎಂದನು. "ಕಳ್ಳನ ಹಾಗೆ ಕಾಣದಂತೆ ಯುದ್ಧಮಾಡಿ ದೊಡ್ಡ ವೀರನ ಹಾಗೆ ಜಂಬ ಬೊಗಳುವುದು ಬೇಡ. ಈಗ ಇದಿರಿದಿರಾಗಿ ತೋರಿಸು ನಿನ್ನ ಪ್ರತಾಪ! ಮಾಯವಾಗಲು ಇನ್ನು ನಿನಗೆ ಸಾಧ್ಯವಿಲ್ಲ" ಎಂದ ಲಕ್ಷ್ಮಣ.


ತತ್‌ಕ್ಷಣವೇ ಇಂದ್ರಜಿತ್ತುವಿನ ಬಾಣಗಳು ಲಕ್ಷ್ಮಣನ ಮೇಲೆ ಹಾರತೊಡಗಿದವು. ನಿಮಿಷ ಮಾತ್ರದಲ್ಲಿ ಲಕ್ಷ್ಮಣನ ಶರೀರವೆಲ್ಲವೂ ರಕ್ತಮಯವಾಯಿತು. ಅದನ್ನೊಂದಿನಿತೂ ಲಕ್ಷ್ಯಮಾಡದೆ ಲಕ್ಷ್ಮಣನೂ ಮಿಂಚಿನ ವೇಗದಿಂದ ಇಂದ್ರಜಿತ್ತುವಿನ ಮೇಲೆ ಬಾಣಗಳನ್ನು ಹಾರಿಸುತ್ತಿದ್ದನು. ಇಬ್ಬರೂ ಸರಿಸಮಾನವೆಂಬಂತೆ ಯುದ್ಧ ಮಾಡುತ್ತಿದ್ದರು.


ಹೀಗೆ ಸ್ವಲ್ಪ ಹೊತ್ತು ಯುದ್ಧ ನಡೆಯುತ್ತಿರಲು, ಪರೀಕ್ಷಿಸಿ ನೋಡುತ್ತಿದ್ದ ವಿಭೀಷಣನಿಗೆ ಇಂದ್ರಜಿತ್ತುವಿನ ಮುಖದಲ್ಲಿ ಭಯದ ಛಾಯೆ ಕವಿಯುವಂತೆ ಕಂಡಿತು. ಆಗ ಅವನು ಲಕ್ಷ್ಮಣನೊಂದಿಗೆ, "ಇಂದ್ರಜಿತ್ತು ನಿನ್ನ ಏಟನ್ನು ತಾಳಲಾಗದ ಸ್ಥಿತಿಯಲ್ಲಿದ್ದಾನೆ. ಅವನನ್ನು ಕೊಲ್ಲಲು ಇದೇ ತಕ್ಕ ಸಮಯ. ಸರಿಯಾದ ಬಾಣಹೂಡು." ಎಂದನು.

ಲಕ್ಷ್ಮಣನು ಕಡು ತೀಕ್ಷ್ಣವಾದ ಬಾಣಗಳನ್ನು ಇಂದ್ರಜಿತ್ತುವಿನ ಮೇಲೆ ಪ್ರಯೋಗಿಸತೊಡಗಿದನು. ಅವುಗಳ ಪ್ರಭಾವಕ್ಕೆ ಇಂದ್ರಜಿತ್ತು ನಿಂತಲ್ಲೇ ಒರಗಿ ಮೂರ್ಛೆಹೋದನು.

ಮರು ನಿಮಿಷದಲ್ಲೇ ಅವನು ಮೂರ್ಛೆಯಿಂದ ಎಚ್ಚೆತ್ತು, ತನ್ನಿದಿರಿನಲ್ಲಿ ನಿಂತಿರುವ ಲಕ್ಷ್ಮಣನನ್ನು ನೋಡಿ, ಅವನೊಡನೆ ತಾನು ಹೇಳಿಕೊಂಡ ಪರಾಕ್ರಮಗಳನ್ನು ನೆನೆದು, ಕಡುರೊಚ್ಚಿನಿಂದ ತುಟಿಕಚ್ಚಿ ಕಣ್ಣುಗಳಿಂದ ಕಿಡಿ ಹಾರಿಸುತ್ತ, ಲಕ್ಷ್ಮಣನ ಮೇಲೆಯೂ, ವಿಭೀಷಣನ ಮೇಲೆಯೂ ಅತಿ ತೀಕ್ಷ್ಣವಾದ ಬಾಣಗಳನ್ನು ಹಾರಿಸಿದನು. ಆ ಬಾಣಗಳು ಲಕ್ಷಣನನ್ನು ಹೆಚ್ಚೇನೂ ಬಾಧಿಸಲಿಲ್ಲ.

29-4





"ಯುದ್ಧದಲ್ಲಿ ಗೆಲ್ಲಬೇಕೆಂದಿರುವವನು ಇಂಥ ಕ್ಷುದ್ರ ಬಾಣಗಳನ್ನು ಪ್ರಯೋಗಿಸುವುದೋ ?" ಎಂದು ಲಕ್ಷ್ಮಣನು ತಿರಸ್ಕಾರದ ಮಾತುಗಳನ್ನಾಡುತ್ತ ಒಂದರಮೇಲೊಂದಾಗಿ ಹರಿತವಾದ ಕಣೆಗಳನ್ನು ಇಂದ್ರಜಿತ್ತುವಿನ ಮೇಲೆ ಹಾರಿಸಿದನು.

ಲಕ್ಷ್ಮಣನ ಬಾಣಗಳಿಂದ ಇಂದ್ರಜಿತ್ತುವಿನ ಕವಚವು ಚೂರು ಚೂರಾಗಿ ಹಾರಿಹೋಯಿತು. ಅವನ ಶರೀರವು ಪೂರ್ಣ ರಕ್ತಮಯವಾಯಿತು. ಕೋಪಾವಮಾನಗಳಿಂದ ರುದ್ರನಾಗಿ ಹೋದ ಇಂದ್ರಜಿತ್ತು ಶಕ್ತಿಯುತವಾದ ಬಾಣಗಳನ್ನು ಪ್ರಯೋಗಿಸಿ ಲಕ್ಷ್ಮಣನ ಕವಚವನ್ನೂ ಛಿದ್ರಛಿದ್ರ ಮಾಡಿದನು. ಈ ವಿಧವಾಗಿ ಅವರಿಬ್ಬರೂ ಒಬ್ಬರಿಗೊಬ್ಬರು ಕಡಿಮೆಯಿಲ್ಲದೆ ಬಹಳ ಹೊತ್ತು ಹೋರಾಡಿದರು. ಇಬ್ಬರೂ ವಿಜಯವನ್ನೇ ಆಶಿಸಿ ಹಠ ಹಿಡಿದೇ ಹೋರಾಡುತ್ತಿದ್ದರು. ಹಟವೂ ರೊಚ್ಚುಕೆಚ್ಚುಗಳೂ ಕೂಡಿದ ಈ ಬಗೆಯ ಯುದ್ಧವು ಯಾರೋ ಒಬ್ಬರು ಸತ್ತರೆ ಹೊರತು ನಿಲ್ಲುವಂತಹುದಲ್ಲ. ಇರ್ಕಡೆಯ ವರೂ ಯುದ್ಧನಿಲ್ಲುವ ಕ್ಷಣಗಳನ್ನೇ ಇದಿರು ನೋಡುತ್ತಿದ್ದರು.

ಲಕ್ಷ್ಮಣ ಇಂದ್ರಜಿತ್ತರ ಯುದ್ಧವನ್ನು ನೋಡುತ್ತಿರುವ ವಿಭೀಷಣನು, ಇನ್ನು ತಾನು ಸುಮ್ಮನಿರಬಾರದೆಂದುಕೊಂಡು, ತನ್ನ ನಾಲ್ವರು ಮಂತ್ರಿಗಳೊಂದಿಗೆ ಯುದ್ಧಕ್ಕೆ ತಲೆ ಹಾಕಿ ವಾನರಸೇನೆಯೊಂದಿಗೆ ಹೀಗೆಂದನು:

"ವಾನರವೀರರೇ, ಇನ್ನು ರಾವಣನಿಗೆ ಇಂದ್ರಜಿತ್ತುವಿನ ಹೊರತು ಬೇರೆ ಗತಿ ಇಲ್ಲ. ಆದುದರಿಂದ ಇವನು ಬದುಕಿಹೋಗಲು ಬಿಡಬಾರದು. ಉಪೇಕ್ಷಿಸಬೇಡಿ. ಈಗಾಗಲೇ ನೀವು ರಾಕ್ಷಸ ವೀರರನ್ನೆಲ್ಲಾ ಕೊಂದಿದ್ದೀರಿ. ಈ ಒಬ್ಬ ಇಂದ್ರಜಿತ್ತು ನಿಮಗೊಂದು ಲೆಕ್ಕವೇ ? ಇವನನ್ನು ಕೂಡಾ ಕೊಂದುಬಿಟ್ಟರೆಂದರೆ, ರಾವಣನು ದಿಕ್ಕಿಲ್ಲದ ಪಕ್ಷಿಯಾಗುತ್ತಾನೆ. ಇವನನ್ನು ನಾನೇ ಕೊಲ್ಲುತ್ತಿದ್ದೆನಾದರೂ ನನಗೆ ಮಗನಂಥವನು. ನಾನು ಇವನನ್ನು ಕೊಲ್ಲುವುದು ಸರಿಯಾಗದು. ನೀವೆಲ್ಲಾ ಇಂದ್ರಜಿತ್ತುವಿಗೆ ಸಹಾಯವಾಗಿರುವ ಸೇನೆಯನ್ನು ಕೊಂದುಬಿಡಿ."

ಈ ಮಾತುಗಳನ್ನು ಕೇಳಿ ವಾನರರು ಬಾಲ ಕುಣಿಸಿ, ಸಿಂಹನಾದ ಮಾಡುತ್ತ ರಾಕ್ಷಸ ಸೇನೆಯ ಮೇಲೆ ವಿಜೃಂಭಿಸಿದರು. ವಿಭೀಷಣನೂ ಅವನ ಮಂತ್ರಿಗಳೂ ಸಹ ರಾಕ್ಷಸರ ಸೇನೆಯೊಂದಿಗೆ ಯುದ್ಧ ನಡೆಸತೊಡಗಿದರು.

ಇಷ್ಟರಲ್ಲಿ ಲಕ್ಷ್ಮಣನು ಇಂದ್ರಜಿತ್ತುವಿನ ರಥದ ಸಾರಥಿಯ ತಲೆಯನ್ನು ಒಂದು ಬಾಣದಿಂದ ಹಾರಿಸಿಬಿಟ್ಟನು. ಆಗ ಇಂದ್ರಜಿತ್ತು ತಾನೇ ರಥವನ್ನು ನಡೆಸುತ್ತ ಆಶ್ಚರ್ಯಕರವಾಗಿ ಯುದ್ಧ ಮಾಡತೊಡಗಿದನು. ಅವನ ವೀರಪ್ರತಾಪ ಸಾಮರ್ಥ್ಯಗಳು ವಿಶೇಷವೆನಿಸಿದರೂ ಅವನನ್ನು ಪೀಡಿಸಲು ಲಕ್ಷ್ಮಣನಿಗೆ ಇನ್ನೂ ಸೌಕರ್ಯವಾಯಿತು. ಈ ಪರಿ

ಸ್ಥಿತಿಯಲ್ಲಿ ಇಂದ್ರಜಿತ್ತುವಿನಲ್ಲಿದ್ದ, ತನಗಾರೂ ಇದಿರಿಲ್ಲವೆಂಬ ಮಹಾಗರ್ವ ಅಡಗಿಹೋಯಿತು. ಅವನ ಮುಖದಲ್ಲಿ ಕಾಣುವ ಬದಲಾವಣೆಯನ್ನು ಗಮನಿಸಿ ವಾನರರು ಸಂತೋಷದಿಂದ ಇನ್ನಿಷ್ಟು ಜೋರಾಗಿ ಯುದ್ಧ ಮಾಡತೊಡಗಿದರು.


ಪ್ರಮಾಥಿ, ಶರಭ, ರಭಸ, ಗಂಧಮಾದನ ಎಂಬ ನಾಲ್ವರು ವಾನರವೀರರು ಇಂದ್ರಜಿತ್ತುವಿನ ರಥಕ್ಕೆ ಹೂಡಲ್ಪಟ್ಟ ನಾಲ್ಕು ಕುದುರೆಗಳ ಮೇಲೂ ಒಂದೇ ಸಾರಿ ಮುಗಿಬಿದ್ದರು. ಮರುಕ್ಷಣ ಆ ನಾಲ್ಕು ಕುದುರೆಗಳು ನೆತ್ತರು ಕಾರುತ್ತ ಸತ್ತುಬಿದ್ದುವು.

ಆ ಸಮಯದಲ್ಲಿ ಇಂದ್ರಜಿತ್ತು ರಥದಿಂದ ನೆಲದ ಮೇಲೆ ಹಾರಿ ಲಕ್ಷ್ಮಣನ ಮೇಲೆ ಬಾಣವರ್ಷಣ ಮಾಡುತ್ತ ವಿಜೃಂಭಿಸಿಕೊಂಡೇ ಇದ್ದನು. ಅವನ ಸುತ್ತಲೂ ರಾಕ್ಷಸರು ನಿಂತಿದ್ದರು.

ಇಂದ್ರಜಿತ್ತು ಅವರೊಂದಿಗೆ ''ನೀವು ಯುದ್ಧ ಮಾಡಿಕೊಂಡಿರಿ. ನಿಮ್ಮ ಮರೆಯಲ್ಲಿ ನಾನು ನಗರಕ್ಕೆ ಹೋಗಿ ಇನ್ನೊಂದು ರಥದ ಮೇಲೆ ಏರಿ ಬರುತ್ತೇನೆ'' ಎಂದನು.

ಅವನು ಆ ಪ್ರಕಾರವೇ ಗುಟ್ಟಾಗಿ ಲಂಕೆಯೊಳಗೆ ಓಡಿ, ಒಳ್ಳೆಯದೊಂದು ರಥವನ್ನು ಸಿದ್ಧಮಾಡಿಸಿ ಅದರ ಮೇಲೇರಿಕೊಂಡು ಮತ್ತೆ ಯುದ್ಧಕ್ಕೆ ಬಂದನು. ಅವನು ಇದ್ದಕ್ಕಿದ್ದಹಾಗೆ ಹೊಸ ರಥದಲ್ಲಿ ಪ್ರತ್ಯಕ್ಷವಾದುದನ್ನು ನೋಡಿ, ಲಕ್ಷ್ಮಣನಿಗೆ ಮಾತ್ರವಲ್ಲ, ವಿಭೀಷಣನಿಗೇ ಆಶ್ಚರ್ಯವಾಯಿತು. ವಾನರರ ಆಶ್ಚರ್ಯಕ್ಕೆ ಪಾರವೇ ಇಲ್ಲ.

ಈ ಸಾರಿ ಇಂದ್ರಜಿತ್ತು ತನ್ನ ಹೊಸ ಹೊಸ ಬಾಣಗಳಿಂದ ವಾನರರ ಸೇನೆಗೆ ಅಪರಿಮಿತ ನಷ್ಟವನ್ನುಂಟುಮಾಡಿದನು. ಅದನ್ನು ನೋಡಿ ಲಕ್ಷ್ಮಣನು ಇಂದ್ರಜಿತ್ತುವಿನ ಬಿಲ್ಲನ್ನು ಮುರಿದನು. ಅದರ ಬೆನ್ನಿಗೇ ಅವನ ಸಾರಥಿಯ ತಲೆಯನ್ನೂ ಹಾರಿಸಿದನು. ಆದರೂ ಇಂದ್ರಜಿತ್ತು ಒಂದೇ ಸಮನೆ



ಯುದ್ಧ ಮಾಡುತ್ತ ವಿಭೀಷಣನನ್ನು ಕೂಡಾ ತನ್ನ ಬಾಣಗಳಿಂದ ಗಾಯಪಡಿಸಿದನು. ವಿಭೀಷಣನು ಉರಿದುಬಿದ್ದು ತನ್ನ ಗದೆಯಿಂದ ಬಡಿದು ಇಂದ್ರಜಿತ್ತುವಿನ ರಥಾಶ್ವಗಳನ್ನು ಕೊಂದನು.

ತರುವಾಯ ಇಂದ್ರಜಿತ್ತೂ ಲಕ್ಷ್ಮಣನೂ ಒಬ್ಬರ ಮೇಲೊಬ್ಬರು ಅನೇಕ ಅಸ್ತ್ರಪ್ರತ್ಯಸ್ತ್ರಗಳನ್ನು ಪ್ರಯೋಗಿಸತೊಡಗಿದರು. ಕಟ್ಟಕಡೆಗೆ ಲಕ್ಷ್ಮಣನು ಪ್ರಯೋಗಿಸಿದ ಐಂದ್ರಾಸ್ತ್ರದಿಂದ ಇಂದ್ರಜಿತ್ತುವಿನ ತಲೆ ಮುಂಡದಿಂದ ಬೇರಾಗಿ ನೆಲಕ್ಕೆ ಬಿತ್ತು.

ವಿಭೀಷಣನೂ ವಾನರರೂ ಸಿಂಹನಾದ ಮಾಡಿದರು. ವಾನರರು ವಿಜಯಗರ್ವದಿಂದ ವಧೆಮಾಡುವುದನ್ನು ನೋಡಿ, ರಾಕ್ಷಸರು ಇಮ್ಮಡಿ ಮುಮ್ಮಡಿ ಶೋಕದಿಂದ ಪ್ರಲಾಪಿಸುತ್ತಾ ದಿಕ್ಕೆಟ್ಟು ಲಂಕೆಯೊಳಗೆ ಓಡಿಹೋದರು.

ಇಂದ್ರಜಿತ್ತು ಸತ್ತುಬಿದ್ದ ಕೂಡಲೇ ವಾನರರು ಅಪರಿಮಿತ ಸಂತೋಷದಿಂದ ಲಕ್ಷ್ಮಣನನ್ನು

ಕೊಂಡಾಡ ತೊಡಗಿದರು. ಲಕ್ಷ್ಮಣನು ರಾಮನ ಬಳಿಗೆ ಹಿಂದಿರುಗಿ ನಮಸ್ಕಾರ ಮಾಡಿ ವಿನಯದಿಂದ ನಿಂತನು. ರಾಮನು ಅವನನ್ನು ಆಲಿಂಗಿಸಿಕೊಂಡು "ಇಂದ್ರಜಿತ್ತುವಿನ ಮರಣವೆಂದರೆ ರಾವಣನ ಬಲಗೈ ಮುರಿದುಬಿದ್ದಂತಾಯಿತು. ಇನ್ನು ರಾವಣನೊಬ್ಬ ಕ್ಷುದ್ರನೇ. ಅತಿ ಸುಲಭವಾಗಿ ಕೊಲ್ಲಬಲ್ಲೆ" ಎಂದು ಹೇಳುತ್ತ, ಲಕ್ಷ್ಮಣನ ಗಾಯಗಳಿಗೆ ಚಿಕಿತ್ಸೆಮಾಡಲು ಸುಷೇಣನಿಗೆ ಹೇಳಿದನು.

ಇಂದ್ರಜಿತ್ತುವಿನೊಂದಿಗೆ ಯುದ್ಧಭೂಮಿಗೆ ಬಂದು ಅಲ್ಲಲ್ಲಿ ವಾನರವೀರರೊಂದಿಗೆ ಯುದ್ಧ ಮಾಡುತ್ತಿದ್ದ ರಾಕ್ಷಸರು, ಇಂದ್ರಜಿತ್ತು ಸತ್ತುಹೋದುದನ್ನು ಕೇಳಿ ಕೈಕಾಲೇ ಬಿದ್ದವರಾಗಿ ದುಃಖಿಸುತ್ತಾ ರಾವಣನ ಬಳಿಗೆ ಹೋಗಿ ವಿಭೀಷಣನ ಸಹಾಯದಿಂದ ಲಕ್ಷ್ಮಣನು ಇಂದ್ರಜಿತ್ತುವನ್ನು ಕೊಂದನೆಂದು ಮೊರೆಯಿಟ್ಟರು. ಆ ವಾರ್ತೆ ಕಿವಿಗೆ ಬಿದ್ದ ಕೂಡಲೇ ರಾವಣನು ಹಾಯೆಂದು ಕೂಗಿ ಮೂರ್ಛೆಬಿದ್ದನು.

ಮೂರ್ಛೆಯಿಂದ ಎಚ್ಚೆತ್ತ ಮೇಲೆ ರಾವಣನು ಇಂದ್ರಜಿತ್ತುವನ್ನು ನೆನೆನೆನೆದು ಬಹಳ ಹೊತ್ತು ಅತ್ತನು. ಅವನ ಪುತ್ರ ಶೋಕವು ವೈರಾಗ್ಯಕ್ಕೆ ತಿರುಗಿ ಕ್ರಮಕ್ರಮವಾಗಿ ಕ್ರೋಧವಾಗಿ ಬದಲಾಯಿಸಿತು. ಇಷ್ಟಕ್ಕೂ ಮೂಲಳಾದ ಸೀತೆಯನ್ನೇ ಕೊಂದುಬಿಡಬೇಕೆಂದು ತೋರಿತು ಅವನಿಗೆ

ಅವನು ತನ್ನ ಸಮೀಪವಿರುವ ರಾಕ್ಷಸರೊಂದಿಗೆ "ನನ್ನ ಮಗನಾದ ಇಂದ್ರಜಿತ್ತು ಮಾಯಾ ಸೀತೆಯನ್ನು ವಾನರರ ಎದುರಿನಲ್ಲಿ ಕೊಂದು ತೋರಿಸಿದ. ನಾನು ನಿಜವಾದ ಸೀತೆಯನ್ನೇ ಕೊಂದು ತೋರಿಸುತ್ತೇನೆ. ಯಾವಾಗಲೂ ಆ ಹಾಳು ರಾಮನನ್ನೇ ನೆನೆದುಕೊಂಡಿರುವ ಸೀತೆ ಇನ್ನೇಕೆ ಬದುಕಿರಬೇಕು? ಕೊಂದುಬಿಡುತ್ತೇನೆ." ಎಂದು ಹೇಳಿ ಕತ್ತಿ ಹಿಡಿದುಕೊಂಡು ಎದ್ದುನಿಂತನು.

ಈ ಸಂಗತಿಯನ್ನು ತಿಳಿದು ಮಂಡೋದರಿಯೂ, ರಾವಣನ 'ಮಂತ್ರಿಗಳೂ ಅವನನ್ನು ಅಂತಹ ನೀಚ ಕಾರ್ಯದಿಂದ ತಡೆದು ನಿಲ್ಲಿಸಿದರು.

"ಅದಕ್ಕಿಂತ ಈಗಲಾದರೂ ಸೀತೆಯನ್ನು ರಾಮನಿಗೆ ಒಪ್ಪಿಸಿ ಕ್ಷಮೆ ಕೇಳಿಕೊಂಡರೆ ಸರ್ವನಾಶವನ್ನಾದರೂ ತಪ್ಪಿಸಬಹುದು. ಅದೇ ಒಳ್ಳೆಯದು" ಎಂದು ರಾವಣನಿಗೆ ಹಿತವಚನ ಹೇಳಿದಳು ಮಂಡೋದರಿ.

"ಈ ಕೋಪವನ್ನು ರಾಮನ ಮೇಲೆ ತೋರಿಸಬೇಕಲ್ಲದೆ, ಸೀತೆಯನ್ನು ಕೊಲ್ಲುವುದರಿಂದ ಯಾವುದನ್ನೂ ಸಾಧಿಸಿದಂತಾಗುವುದಿಲ್ಲ" ಎಂದರು ಮಂತ್ರಿಗಳು. ತನ್ನ ಕರ್ತವ್ಯವು ರಾಮನನ್ನು ಕೊಲ್ಲುವುದೇ ಹೊರತು ಸೀತೆಯನ್ನು ಕೊಲ್ಲುವುದಲ್ಲವೆಂದು ತಿಳಿದುಕೊಂಡು ರಾವಣನು ಶಾಂತನಾಗಿ, ಅತ್ಯುಗ್ರವಾದ ಲಂಕಾಯಾಗವನ್ನು ಪ್ರಾರಂಭಮಾಡಿದನು.





April 1977

ವೀರಹನುಮಾನ್

ರಾವಣನು ಅದ್ಭುತವಾದ ಲಂಕಾಯಾಗಕ್ಕೆ ಪ್ರಾರಂಭ ಮಾಡಿದ ಸಮಾಚಾರವು ಗೂಢಚಾರರ ಮೂಲಕ ವಿಭೀಷಣನಿಗೆ ಗೊತ್ತಾಯಿತು. ಅದು ರಾಮಲಕ್ಷ್ಮಣರಿಗೆ ತುಂಬಾ ಅಪಾಯಕಾರಿಯಾಗಿತ್ತು. ಅವನು ಕಳವಳ ಪಡುತ್ತ ರಾಮಲಕ್ಷ್ಮಣರನ್ನು ಕುರಿತು, "ರಾವಣನು ತಲೆಹಾಕಿರುವ ಈ ಲಂಕಾಯಾಗವು ಪೂರ್ತಿಯಾದ ಪಕ್ಷದಲ್ಲಿ ಆ ಯಾಗವೇದಿಕೆಯೊಳಗಿನಿಂದ ಉಕ್ಕಿನ ಶರೀರದವರಾದ ಯೋಧರೂ, ಚತುರಂಗಬಲಗಳೂ ಉದ್ಭವಿಸಿಬಿಡುತ್ತವೆ. ಹಾಗಾಗಿಬಿಟ್ಟರೆ ರಾವಣನನ್ನು ಜಯಿಸುವ ಕಾರ್ಯವು ಸಾಧ್ಯವಾಗದು. ಆದುದರಿಂದ ರಾವಣನು ಮಾಡುವ ಯಾಗವನ್ನು ಭಗ್ನಮಾಡಬೇಕು. ಅದು ಸುಲಭವಾದ ಕಾರ್ಯವಂತೂ ಅಲ್ಲ." ಎಂದನು.

ಆದರೆ ಅದನ್ನು ಹೇಗೆ ಮಾಡಬೇಕೆನ್ನುವುದು ದೊಡ್ಡ ಸಮಸ್ಯೆಯಾಗಿತ್ತು. ಆ ಸ್ಥಳಕ್ಕೆ ಪರಿಚಿತರಿಗೆ ಕೂಡಾ ಹೋಗಲು ಸಾಧ್ಯವಾಗದು. ಇರುವೆಗೆ ಸಹಾ ನುಸುಳುವುದು ಅಸಾಧ್ಯ. ಅಂದಮೇಲೆ ಅಪರಿಚಿತರಿಗೆ ಹೇಗೆ ಸಾಧ್ಯವಾದೀತು? ಮಾಯಾ ಶರೀರಿಗಳಾಗಿ ಹೋಗುವವರಾಗಬೇಕು. ಅಂಥವರಾರು?

"ನಮ್ಮ ಅಂಗದನಿಗೆ ಅದೃಶ್ಯಕರಣಿ ಎಂಬ ವಿದ್ಯೆ ಗೊತ್ತಿದೆ. ಸಾಹಸದಲ್ಲಿಯೂ ಅವನೇನೂ ರಾಕ್ಷಸರಿಗೆ ಕಡಿಮೆಯವನಲ್ಲ. ಅವನ ಸಹಾಯದಿಂದ ಅವನು ರಾವಣನ ಹೋಮವು ಸಾಗದಂತೆ ತಡೆಯಬಹುದು" ಎಂದು ಜಾಂಬವಂತನು ಸೂಚನೆ ಮಾಡಿದನು.

ಅದರಂತೆ ಅಂಗದನು ಅದೃಶ್ಯಕರಣಿ ವಿದ್ಯೆಯ ಪ್ರಭಾವದಿಂದ ಯಾರ ಕಣ್ಣಿಗೂ ಕಾಣದಂತೆ ರಾವಣನ ಅಂತಃಪುರದೊಳಗೆ ಪ್ರವೇಶಮಾಡಿ, ಮಂಡೋದರಿಯ ತಲೆಮುಡಿಯ ಕೊಪ್ಪು ಹಿಡಿದು ಎಳೆಯುತ್ತಾ ರಾವಣನು ಯಾಗಮಾಡುವಲ್ಲಿಗೆ ಬಂದನು. ಅದನ್ನು ನೋಡಿಯೂ ನೋಡದವನಂತೆಯೇ ರಾವಣನು ತನ್ನ ಯಾಗದೀಕ್ಷೆಯಲ್ಲೇ ಆಹುತಿಗಳನ್ನು ಕೊಡುತ್ತ ಕುಳಿತಿದ್ದನು. ಅಂಗದನು ಮಂಡೋದರಿಯನ್ನು ಮತ್ತೆಲ್ಲಿಗೋ ಎಳೆದುಕೊಂಡು ಹೋಗತೊಡಗಿದನು. ಅವಳ ಆರ್ತನಾದಕ್ಕೂ ರಾವಣನು

೩೦. ರಾಮಲಕ್ಷ್ಮಣರ ಅಪಹರಣ

30-1



ಕಿವಿಗೊಡಲಿಲ್ಲ. ಅವನು ಗಟ್ಟಿಯಾಗಿ ಮಂತ್ರೋಚ್ಚಾರ ಮಾಡುತ್ತ ಮೇಲೆ ಮೇಲೆ ಹೋಮಕ್ಕೆ ಆಹುತಿಗಳನ್ನು ಸುರಿಯುತ್ತಿದ್ದನು.

"ಅಯ್ಯೋ! ನನ್ನನ್ನು ಕೇಳುವವರಿಲ್ಲದಾಯಿತಲ್ಲಾ! ಮೂರು ಲೋಕಗಳನ್ನೂ ಜಯಿಸಿದವನ ಹೆಂಡತಿಯನ್ನು ಕಾಪಾಡುವವರು ಈಗ ಯಾರೂ ಇಲ್ಲವೇ? ನನ್ನನ್ನೇ ಮೊದಲು ಯಾಗಕ್ಕೆ ಆಹುತಿ ಕೊಟ್ಟುಬಿಡಬಾರದೇ?" ಎಂದು ಮಂಡೋದರಿ ಗಟ್ಟಿಯಾಗಿ ಕೂಗಿದಳು.

ರಾವಣನು ಇನ್ನು ತಾಳಲಾರದೆ ಯಾಗಕಾರ್ಯವನ್ನು ನಿಲ್ಲಿಸಿ ಥಿಗ್ಗನೆದ್ದನು. ಅಲ್ಲಿಗೆ ಆ ಯಾಗವು ಭಗ್ನವಾಗಿ ಹೋಯಿತು. ಆ ಕ್ಷಣವೇ ಅದೃಶ್ಯನಾಗಿದ್ದ ಅಂಗದನು ಮಂಡೋದರಿಯನ್ನು ಬಿಟ್ಟು ಮೆತ್ತಗೆ ಜಾರಿಕೊಂಡನು. ಅವನ ಕೆಲಸವಾಯಿತು.

ರಾವಣನು ತಲೆಯ ಮೇಲೆ ಕೈಹೊತ್ತು ಕುಸಿ ಕುಳಿತನು. "ಈಗಲಾದರೂ ರಾಮನೊಂದಿಗೆ ಸಂಧಿ ಮಾಡುವುದು ಒಳ್ಳೇದು." ಎಂದು ಮಂಡೋದರಿ ದೀನಳಾಗಿ ರಾವಣನಿಗೆ ಸಲಹೆ ಕೊಟ್ಟಳು.

ಇಷ್ಟರವರೆಗೆ ತನ್ನ ಬಲವನ್ನೂ, ತನಗಿರುವ ಶರೀರ ಶಕ್ತಿಯನ್ನೂ ನೋಡಿಕೊಂಡು ರಾಮನೊಂದಿಗೆ ಯುದ್ಧ ಮಾಡಲು ಸಿದ್ಧನಾಗಿದ್ದ [sic: ಸಿಶ್ಚಯಮಾಡಿಕೊಂಡಿದ್ದ] ರಾವಣನು ಮಂಡೋದರಿಯ ಮಾತಿಗೆ ಕಿವಿಗೊಡದೆ, "ನನ್ನ ಬಂಧುಮಿತ್ರರನ್ನು, ತಮ್ಮನನ್ನು ಮಕ್ಕಳನ್ನು ಕಳೆದುಕೊಂಡು ಈಗ ಕ್ಷುದ್ರನ ಹಾಗೆ ಆ ರಾಮನೊಂದಿಗೆ ಸಂಧಿಮಾಡಿಕೊಳ್ಳಲು ಹೇಳುವೆಯಾ? ರಾಮನು ನನ್ನನ್ನು ಕೊಂದನೆಂಬ ಕೀರ್ತಿ ಅವನಿಗೆ ಬಾರದಂತೆ ನಾನೇ ಪ್ರಾಯೋಪವೇಶ ಮಾಡಿ, ಯೋಗಮಾರ್ಗದಿಂದ ಕಪಾಲವನ್ನು ಭೇದಿಸಿ ಪ್ರಾಣತ್ಯಾಗ ಮಾಡುತ್ತೇನೆ. ನನ್ನನ್ನು ಕೊಂದು ವಿಭೀಷಣನಿಗೆ ಪಟ್ಟಗಟ್ಟುವೆನೆಂದು ಪ್ರತಿಜ್ಞೆ ಮಾಡಿದ ರಾಮನು ನನ್ನನ್ನು ಕೊಲ್ಲದೆ ಪ್ರತಿಜ್ಞಾಭಂಗ ಮಾಡಿದವನಾಗಬೇಕು. ರಾಮನು ಕಳ್ಳನ ಹಾಗೆ ಬಂದು ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗುವವನಲ್ಲ. ನಾನು ಹೋದಮೇಲೆ ನೀವೆಲ್ಲಾ ಸಹಗಮನ ಮಾಡುವಾಗ ಸೀತೆಯನ್ನು ಕೂಡಾ ಚಿತಿಯೊಳಗೆ ದೂಡಿಸಿ ಬಿಡಿರಿ. ಆಗ ಅವಳು ನನ್ನವಳೇ ಆದಂತಾಗಿ, ರಾಮನು ಸೀತಾವಿಯೋಗದಿಂದಾದ ಅಪಮಾನದಲ್ಲಿ ತನ್ನಂತೆ ಸಾಯುತ್ತಾನೆ, ಬದುಕಿದ್ದು ಯಾರಿಗೆ ಹೇಗೆ ಮುಖ ತೋರಿಸುತ್ತಾನೆ?" ಎಂದು ಹೇಳಿ ರಾವಣನು ಮತಿಭ್ರಮಣವಾದವನಂತೆ ಪಶ್ಚಿಮದಿಕ್ಕಿಗೆ ಅಭಿಮುಖವಾಗಿ ಹೋದನು. ಮಂಡೋದರಿ ದಿಗ್ಭ್ರಮೆಯಿಂದ ಅವನನ್ನೇ ನೋಡುತ್ತಾ ನಿಂತಳು.


ಲಂಕೆಯಲ್ಲಿ ಹೀಗೆ ನಡೆಯುತ್ತಿರುವ ಅದೇ ಸಮಯದಲ್ಲಿ ಲಂಕೆಗೆ ಸಾವಿರ ಯೋಜನ ಕೆಳಗಡೆಯಲ್ಲಿರುವ ಪಾತಾಳಲಂಕೆಯಲ್ಲಿ ಇನ್ನೊಂದು ಭಯಂಕರವಾದ ಕಥೆ ನಡೆಯುತ್ತಿದ್ದಿತು. ಅದೇನೆಂದರೆ, ಮೈರಾವಣನೆಂಬವನು ಪಾತಾಳಲಂಕೆಯನ್ನು

ಆಳುತ್ತಿದ್ದನು. ಅವನಿಗೆ ದೊಡ್ಡ ದೊಡ್ಡ ಮಂತ್ರ ಶಕ್ತಿಗಳಿದ್ದುವು. ಬಗೆಬಗೆಯ ಮಾಯೆಗಳನ್ನು ಬಲ್ಲವನು. ಅವನಿಗೆ ಅಹಿರಾವಣನೆಂಬ ಒಬ್ಬ ಅಣ್ಣನೂ ಇರುವನು. ಅನೇಕ ರಾಕ್ಷಸರೂ, ಸರ್ಪದೇಹಿಗಳೂ ಅದ್ಭುತ ಮಾಯಾ ಶಕ್ತಿಗಳುಳ್ಳ ಅನೇಕರು ಅವನ ಸೈನ್ಯದಲ್ಲಿದ್ದರು.

ಮೈರಾವಣನು ನಾಗಲೋಕದಿಂದ ವಾಸುಕಿಯ ಕುಮಾರಿಯಾದ ಚಂದ್ರಸೇನೆಯನ್ನು ಎತ್ತಿಕೊಂಡು ಬಂದು ನಿರ್ಬಂಧದಲ್ಲಿಟ್ಟು, ತನ್ನನ್ನು ಮದುವೆಯಾಗುವಂತೆ ಅವಳಿಗೆ ಒತ್ತಾಯ ಮಾಡುತ್ತಿದ್ದನು. ಅಸಾಮಾನ್ಯ ಸೌಂದರ್ಯವತಿಯಾದ ಅವಳು ಮನಸಾರೆ ರಾಮನನ್ನು ವರಿಸಿ, ಅವನೇ ತನ್ನಗಂಡನೆಂದೂ ಅವನಹೊರತು ಅನ್ಯರನ್ನು ನೆನೆಯಲಾರೆನೆಂದೂ ಖಂಡಿತವಾಗಿ ಹೇಳಿಬಿಟ್ಟಿದ್ದಳು. ಸೀತೆಯ ಸ್ವಯಂವರಕ್ಕೆ ಅವಳು ನಾಗಪರಿವಾರದೊಂದಿಗೆ ಹೋಗಿ ರಾಮನನ್ನು ನೋಡಿದ್ದಳು. ಅಂದಿನಿಂದ ಅವಳು ರಾಮನ ವಿಗ್ರಹವನ್ನೇ ಆರಾಧಿಸಿಕೊಂಡಿದ್ದಳು. ಅವಳ ಸೌಂದರ್ಯವನ್ನು ಕೇಳಿದ ಮೈರಾವಣನು, ಮಾಯೆಯಿಂದ ಅವಳನ್ನು ಅಪಹರಿಸಿ ತಂದು ಬಂಧನದಲ್ಲಿಟ್ಟಿದ್ದನು.


ಲಂಕೆಯಲ್ಲಿ ರಾವಣನು ಪಶ್ಚಿಮ ಸಮುದ್ರತೀರವನ್ನು ತಲಪಿ ಅಲ್ಲಿ ದರ್ಭೆಗಳನ್ನು ಹರಡಿ ಅದರ ಮೇಲೆ ಮಲಗಿ ಪ್ರಾಯೋಪವೇಶ ದೀಕ್ಷೆ ಕೈಗೊಂಡನು. ಅದನ್ನು ನೋಡಿ ಅವನ ರಾಕ್ಷಸ ಪರಿವಾರದವರು ದಿಕ್ಕು ತೋಚದೆ ಸ್ತಬ್ಧರಾಗಿ ಕುಳಿತುಬಿಟ್ಟಿದ್ದರು.

ಆಗ ಎಲ್ಲಿಗೋ ಹೊರಟಿದ್ದ ನಾರದನು ರಾವಣನನ್ನು ನೋಡಿ ಅವನ ಬಳಿಗೆ ಬಂದು, "ಇದೇನು ಕೆಲಸ ರಾವಣಾ? ನೀನು ಜತೆಗಾರರಿಲ್ಲದವನಾಗಿ ಹೋದೆಯೇನು? ಒಂಟಿಯಾದೆನೆಂದು ಈ ಕೆಲಸವೇ? ನಿನ್ನ ಮಿತ್ರನೂ ನಿನಗೆ ಸೋದರನಂಥವನೂ ಆದ ಮೈರಾವಣನನ್ನು ಮರೆತೆಯಾ?



ಈ ಕಷ್ಟಕಾಲದಲ್ಲಿ ಅವನು ನಿನ್ನನ್ನು ಕೈ ಬಿಡುವನೆಂದು ಅನುಮಾನಿಸುವಿಯಾ?" ಎಂದು ಹೇಳಿ, ರಾವಣನೇನೂ ಮಾತಾಡದಿರಲು, "ನಿನ್ನಿಷ್ಟ" ಎಂದು ಹೊರಟು ಹೋದನು.

ನಾರದನ ಮಾತಿನಿಂದ ರಾವಣನನ್ನು ಹೊಸ ಉತ್ಸಾಹವೊಂದು ಆಕ್ರಮಿಸಿತು. ಕಣ್ಣು ಮುಚ್ಚಿಕೊಂಡೇ ಮೈರಾವಣನನ್ನು ಧ್ಯಾನಿಸಿದನು. ಆ ಹೊತ್ತಿಗೇ ಮೈರಾವಣನು ಚಂದ್ರಸೇನೆಯ ಬಳಿಗೆ ಹೋಗಿ, "ಎಲೈ, ಚಂದ್ರಸೇನೇ! ರಾಮನ ಜಪವನ್ನು ನೀನು ಬಿಡಲಾರೆಯಷ್ಟೆ? ಆ ನಿನ್ನ ರಾಮನನ್ನು ತಂದು ಕಾಳೀಮಾತೆಗೆ ಬಲಿ ಕೊಡುತ್ತೇನೆ" ಎಂದನು. "ಕಾಳೀದೇವಿ ನಿಜವಾದ ಲೋಕಮಾತೆಯಾದರೆ ಆ ರಾಮನಿಂದಲೇ ನಿನ್ನನ್ನು ಕೊಲ್ಲಿಸುತ್ತಾಳೆ. ಬೇಗನೇ ಆ ಕಾರ್ಯ ನೆರವೇರಿಸು" ಎಂದಳು ಚಂದ್ರಸೇನೆ. "ಹುಚ್ಚೀ, ನಾನು ಯಾರೆಂದು ತಿಳಿದೆ? ನನ್ನನ್ನು ಕೊಲ್ಲುವುದು ಸುಲಭ




ವೆಂದು ಭಾವಿಸಿದೆಯಾ? ಈ ಪಾತಾಳ ಲಂಕೆಗೆ ಸಾವಿರ ಯೋಜನ ದೂರ ಕೆಳಗೆ ಭಯಂಕರವಾದ ಒಂದು ಗುಹೆಯಲ್ಲಿ, ರತ್ನದ ಪೆಟ್ಟಿಗೆಯೊಳಗೆ ಐದು ತುಂಬಿಗಳ ರೂಪದಲ್ಲಿ ನನ್ನ ಜೀವವಿದೆ. ಪೆಟ್ಟಿಗೆ ತೆರೆದ ಕೂಡಲೇ ಝುಂಮನೆ ಮೇಲೆ ಬರುವ ಐದು ತುಂಬಿಗಳನ್ನೂ ಒಂದೇಬಾರಿಗೆ ಕೊಂದರೇನೇ ನಾನು ಸಾಯುವುದು. ಆ ಭಯಂಕರ ಗುಹೆಯನ್ನು ಮಹಾ ಶಕ್ತಿಯ ಪಿಶಾಚಗಳು ಕಾಪಾಡಿಕೊಂಡಿವೆ. ಇಂಥಾ ಶಕ್ತಿ ನನಗೆ ಕೊಟ್ಟವಳೇ ಕಾಳೀದೇವಿ ಗೊತ್ತೇ? ಹೀಗಿರುವ ನನ್ನ ಪ್ರಾಣ ತೆಗೆಯುವವನು ಮೂರು ಲೋಕಗಳಲ್ಲಿಯೂ ಯಾರಿಲ್ಲ. ಕೇವಲ ಮನುಷ್ಯನಾದ ನಿನ್ನ ರಾಮನೊಂದು ಲೆಕ್ಕದವನೇ?" ಎಂದು ಹೇಳಿ ಮೈರಾವಣನು ಅವಳ ಹತ್ತಿರವಿದ್ದ ರಾಮನ ವಿಗ್ರಹವನ್ನು ನೆಲಕ್ಕೆ ಬಡಿದು ಚೂರು ಚೂರು ಮಾಡಿದನು. ಅದೇ ಕ್ಷಣದಲ್ಲಿ ರಾವಣನು ತನ್ನನ್ನು ನೆನೆಸುತ್ತಿರುವನೆಂದು ಅವನಿಗೆ ಗೊತ್ತಾಯಿತು.

ಕೂಡಲೇ ಅವನು ರಾವಣನ ಬಳಿಗೆ ಬಂದು "ರಾವಣಾ, ನನಗೆಲ್ಲವೂ ಗೊತ್ತಾಯಿತು, ನನಗೆ ಬೇಕಾದುದನ್ನೇ ನೀನು ಬಯಸುವಿ. ನಾಳೆಯೇ ಆ ರಾಮಲಕ್ಷ್ಮಣರನ್ನು ಕಾಳಿಗೆ ಬಲಿಕೊಟ್ಟು ಬಿಡುತ್ತೇನೆ. ಚಿಂತೆ ಬಿಡು, ಲಂಕೆಗೆ ಇನ್ನೇನೂ ಅಪಾಯವಿಲ್ಲ" ಎಂದ ಮೈರಾವಣ. ರಾವಣನು ಸಂತೋಷಪಟ್ಟು ಮೈರಾವಣನನ್ನು ತನ್ನ ಮಂದಿರಕ್ಕೆ ಕರೆದುಕೊಂಡು ಹೋಗಿ ಬಹಳವಾಗಿ ಉಪಚರಿಸಿದನು.

ಗೂಢಚಾರರ ಮೂಲಕವಾಗಿ ಈ ಸಂಗತಿಕೂಡಾ ವಿಭೀಷಣನಿಗೆ ತಿಳಿಯಿತು. ಆಗ ರಾತ್ರಿಯಾದುದರಿಂದ ರಾಮಲಕ್ಷ್ಮಣರು ನಿದ್ದೆಮಾಡಲು ತಯಾರಾಗುತ್ತಿದ್ದರು. ವಿಭೀಷಣನು ವಾನರರ ಬಳಿಗೆ ಬಂದು ಮೈರಾವಣನ ಸಮಾಚಾರವನ್ನು ಹೇಳಿ, "ಈ ರಾತ್ರಿಯಲ್ಲಿ ಮೈರಾವಣನು ರಾಮಲಕ್ಷ್ಮಣರನ್ನು ಅಪಹರಿಸದಂತೆ ತುಂಬಾ ಎಚ್ಚರದಿಂದ ನಾವು ಕಾಪಾಡಬೇಕಾಗಿದೆ. ಮೈರಾವಣ ಸಾಮಾನ್ಯ ಮಾಯಾವಿಯಲ್ಲ" ಎಂದು ಹೇಳಿ ಆಚೆಗೆ ಹೋದನು.

ಹನುಮಂತನು ಕೂಡಲೇ ತನ್ನ ಬಾಲವನ್ನು ಬೆಳಯಿಸಿ ರಾಮಲಕ್ಷ್ಮಣರು ಮಲಗಿರುವಲ್ಲಿ ಸುತ್ತಲೂ ಒಂದು ಕೋಟೆಯಂತೆ ಸುತ್ತಿದನು. ಆಮೇಲೆ ಅವನು ತನ ಬಾಲದ ಸುತ್ತಿನಮೇಲೆ ಕುಳಿತುಕೊಂಡು ಒಂದು ಇರುವೆ ಸಹಾ ಒಳಗೆ ನುಗ್ಗದಂತೆ ಜಾಗರೂಕತೆಯಿಂದ ನಾಲ್ಕು ಸುತ್ತಲೂ ಕಣ್ಣು ತಿರುಗಿಸಿ ನೋಡುತ್ತಿದ್ದನು.

ಸ್ವಲ್ಪ ಹೊತ್ತಿಗೆ ವಿಭೀಷಣನು ಮತ್ತೆ ಬಂದು ಹನುಮಂತನ ಶ್ರದ್ಧೆಯನ್ನೂ ಕೆಲಸವನ್ನೂ ಮೆಚ್ಚಿಕೊಂಡು, ಒಂದುಸಾರಿ ತಾನು ಒಳಗೆ ಹೋಗಿ ರಾಮಲಕ್ಷ್ಮಣರ ಕೈಗಳಿಗೆ ರಕ್ಷಾಬಂಧನ ಕಟ್ಟಿಬಿಡುತ್ತೇನೆಂದನು. ಹನುಮಂತನು ತನ್ನ ಬಾಲವನ್ನು ಸಡಲಿಸಿ ವಿಭೀಷಣನು ಮಾತ್ರ ಒಳಗೆ ಹೋಗಲು ತಕ್ಕಷ್ಟೇ ದಾರಿ ಮಾಡಿದನು.



ವಿಭೀಷಣನು ತನ್ನ ಕೆಲಸವನ್ನು ಮುಗಿಸಿ ಹೊರಗೆ ಬಂದು, "ಆದರೂ ಹನುಮಂತಾ, ನಾನು ರಕ್ಷಾ ಬಂಧನ ಕಟ್ಟಿದೆನೆಂದು ನೀನು ಅಪ್ರಮತ್ತನಾಗಿರ ಬೇಡ. ಆ ಮಹಾ ಮಾಯಾವಿ ಮೈರಾವಣನು ನನ್ನ ಅಥವಾ ನನ್ನವರ ರೂಪದಲ್ಲಿ ಬಂದು ಮೋಸಗೀಸ ಮಾಡಿಯಾನು. ಜಾಗರೂಕನಾಗಿರು! ನಾನೂ ಸುತ್ತಾಡಿಕೊಂಡು ಇರುತ್ತೇನೆ" ಎಂದು ಎಚ್ಚರಿಕೆ ಹೇಳಿ ಹೊರಟು ಹೋದನು.

ಅವನು ಅಂದ ಹಾಗೆಯೇ ಸ್ವಲ್ಪಹೊತ್ತಿಗೆ ಪುನಃ ವಿಭೀಷಣನು ಬಂದನು. ಹನುಮಂತನು ಅವನ ಕುತ್ತಿಗೆ ಹಿಡಿದು, ಗದೆಯಿಂದ ಹೊಡೆಯಲು ನೋಡುತ್ತ, "ಎಲೋ! ಮೈರಾವಣಾ? ನಿನ್ನ ಮಾಯೆ ನನ್ನ ಹತ್ತಿರ ತೋರಿಸುವಿಯಾ?" ಎಂದು ಹಲ್ಲು ಕಡಿದನು.

"ಅಯ್ಯೋ! ಹುಚ್ಚನೇ! ಮೋಸಹೋದೆ ಹೋಯಿತೆಂದು ಕಾಣುತ್ತದೆ. ಈ ಮೊದಲು ಬಂದ ವಿಭೀಷಣ ಏನಂದ? ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋಗಲಿಲ್ಲವಷ್ಟೆ?" ಎಂದ ವಿಭೀಷಣ. ಹನುಮಂತನು ತನ್ನ ಬಾಲದ ಕೋಟೆಯೊಳಗೆ ಬಗ್ಗಿ ನೋಡಲು, ಅಲ್ಲಿ ರಾಮಲಕ್ಷ್ಮಣರು ಇರಲಿಲ್ಲ!

ಹನುಮಂತನು "ಹಾ" ಎಂದು ಕಣ್ಣು ಕತ್ತಲೆಗೊಂಡು ಕುಸಿಕುಳಿತನು. ಅವನಿಗೆ ಸರ್ವಾಂಧಕಾರವಾಯಿತು. ಏನು ಮಾಡಬೇಕೆಂಬುದೇ ತೋರಲಿಲ್ಲ. ಆಗ ಜಾಂಬವಂತನು ಅವನನ್ನು ಸಮಜಾಯಿಸುತ್ತ, "ಏಳೇಳು! ಚಿಂತಿಸುತ್ತಾ ಕುಳಿತರೆ ಏನೂ ಪ್ರಯೋಜನವಿಲ್ಲ. ಈಗ ರಾಮಲಕ್ಷ್ಮಣರನ್ನು ಕಾಪಾಡಬೇಕಾದವನು ನೀನೊಬ್ಬನೇ." ಎಂದನು.

ವಿಭೀಷಣನು ಅವನು ಮಾಡಬೇಕಾದ ಕಾರ್ಯವನ್ನು ಕುರಿತು ಹೇಳಿದನು. ಈಗ ಹನುಮಂತನಿಗೆ ಉತ್ಸಾಹವೆದ್ದಿತು. ಅವನು ವಿಭೀಷಣನ ಮೂಲಕವಾಗಿ ಪಾತಾಳಲಂಕೆಗೆ ಹೋಗುವ ದಾರಿಯನ್ನು ತಿಳಿದು ದೇಹವನ್ನು ಬೆಳೆಸಿಕೊಂಡು ಆಕಾಶದ ಮೇಲೆ ಉಡ್ಡಾಣ ಮಾಡಿದನು.

ಇಷ್ಟರ ಮಧ್ಯದಲ್ಲಿ ವಿಭೀಷಣನ ರೂಪದಿಂದ, ರಾಮಲಕ್ಷ್ಮಣರಬಳಿ ಸೇರಿದ ಮೈರಾವಣನು ಅವರಿಬ್ಬರನ್ನೂ ತನ್ನ ಮಾಯೆಯಿಂದ ಚಿಕ್ಕ ಪ್ರತಿಮೆಗಳನ್ನಾಗಿ ಮಾಡಿ, ತನ್ನ ಬಟ್ಟೆಗಳಲ್ಲಿ ಅಡಗಿಸಿಕೊಂಡು ಪಾತಾಳಲಂಕೆಗೆ ಸೇರಿಬಿಟ್ಟಿದ್ದನು. ಅದೇ ವೇಗದಲ್ಲಿ ಅವನು ರಾಮಲಕ್ಷ್ಮಣರ ಪ್ರತಿಮೆಗಳನ್ನು ಚಂದ್ರಸೇನೆಗೆ ತೋರಿಸಿ, "ಇಕೋ ನಿನ್ನ ರಾಮ. ಇವನು ಅವನ ತಮ್ಮ ಲಕ್ಷ್ಮಣ. ಇವರಿಬ್ಬರನ್ನೂ ನಾಳೆ ಕಾಳಿಗೆ ಬಲಿಕೊಟ್ಟು ನಿನ್ನನ್ನು ಮದುವೆ ಮಾಡಿಕೊಂಡುಬಿಡುತ್ತೇನೆ. ಬಲಿಯ ವೇಳೆಯವರೆಗೂ ಇವರು ಪ್ರತಿಮೆಗಳ ರೂಪದಲ್ಲೇ ಇರುತ್ತಾರೆ. ಅಷ್ಟರವರೆಗೆ ಆಟವಾಡಿಕೊಂಡಿರು." ಎಂದು ವಿಕಟಾಟ್ಟಹಾಸ ಮಾಡಿ ನಗುತ್ತಾ ರಾಮಲಕ್ಷ್ಮಣರನ್ನು ಬಂಧನದಲ್ಲಿಟ್ಟನು.

30-5



ಹನುಮಂತನು ಪಶ್ಚಿಮ ಸಮುದ್ರದೊಳಗೆ ಪ್ರವೇಶಿಸಿ ಬಹುವೇಗದಿಂದ ಹೋಗುತ್ತಿರಲು, ತಾವುರೆಯ ಮೊಗ್ಗಿನ ಆಕಾರದಲ್ಲಿ ಬೆಂಕಿಯ ಕೆಂಡದಂತೆ ಹೊಳೆಯುವ ಒಂದು ಪರ್ವತವನ್ನು ನೋಡಿದನು. ಹನುಮಂತನು ಆ ಪರ್ವತ ಶಿಖರವನ್ನು ಸೇರಿ ಅಲ್ಲಿದ್ದ ಚಿಕ್ಕದೊಂದು ಬಿಲವನ್ನು ನೋಡಿ, ಸೂಕ್ಷ್ಮರೂಪದಿಂದ ಆ ಬಿಲದೊಳಗಿಳಿದು ಹೋದನು. ಆ ಬಿಲವು ಅವನನ್ನು ಪಾತಾಳ ಲಂಕೆಯ ಸಿಂಹ ದ್ವಾರದಬಳಿಗೊಯ್ದು ನಿಲ್ಲಿಸಿತು.

ಆ ದ್ವಾರದಲ್ಲಿ ಮಹಾಬಲಶಾಲಿಯಾದ ಯುವಕನೊಬ್ಬ ಕಾವಲು ಕಾಯುತ್ತಿದ್ದನು. ಧಷ್ಟಪುಷ್ಟನಾಗಿ ಕಬ್ಬಿಣದ ಶರೀರದಂತಹ ಆ ಯುವಕನು ಹನುಮಂತನನ್ನು ನೋಡಿ, ಕೈಗಳನ್ನು ಚಾಚಿ ತಡೆಯುತ್ತ ಅಡ್ಡ ನಿಂತು, "ಯಾರೋ ನೀನು ? ನನ್ನ ಕಣ್ಣು ತಪ್ಪಿಸಿ ಸಿಂಹ ದ್ವಾರದೊಳಗೆ ಹೊಕ್ಕು ಬಿಡಬೇಕೆಂದು ಹೊಂಚು ಹಾಕುವಿಯಾ ? ಇಕೋ ಇಲ್ಲಿವರೆಗೆ ಬಂದ ತಪ್ಪಿಗೆ ನಿನ್ನ ಆಯುಸ್ಸು ತೀರಿತು. ನಿನಗೆ ಸಾವು ಬಂದಿತು" ಎನ್ನುತ್ತಾ ಮುಷ್ಟಿಬಿಗಿದು ಹನುಮಂತನ ಮೇಲೆ ಬಿದ್ದನು.

ದ್ವಾರಪಾಲಕನ ಬಲಪರಾಕ್ರಮವನ್ನು ನೋಡಿ ಹನುಮಂತನು ಆಶ್ಚರ್ಯ ಪಡುತ್ತ, "ಇವನೊಬ್ಬ ಹುಡುಗನಾದರೂ, ಇವನ ಬಲ ಪರಾಕ್ರಮಗಳು ನನಗೆ ಸಮಾನವಾಗಿರುವಂತಿದೆ. ಇವನನ್ನು ಸ್ವಲ್ಪ ಭ್ರಮೆಗೀಡುಮಾಡಿ ಆಮೇಲೆ ಹತ ಮಾಡಬೇಕು" ಎಂದುಕೊಂಡು ತುಂಬಾ ಆಯಾಸಗೊಂಡವನಂತೆ ಕುಸಿದು ಕುಳಿತು ತೇಕತೊಡಗಿದನು.

ತನ್ನನ್ನು ಕಂಡೇ ಹೆದರಿಬಿದ್ದನೆಂದು ಅಂದುಕೊಂಡು ದ್ವಾರಪಾಲಕನಾದ ಆ ಯುವಕನು, ಉತ್ಸಾಹದಿಂದ ದೊಡ್ಡದಾಗಿ ನಗುತ್ತ, "ಎಲೋ ಮಾಯಗಾರನೇ, ನನ್ನನ್ನು ಯಾರೆಂದುಕೊಂಡು ನನ್ನಮುಂದೆ ನುಗ್ಗುವ ಹಾಗೆ ಬಂದೆ ? ಈಗಾದರೂ ತಿಳಿದು ಹಿಂದಿರುಗಿ ಓಡು. ನನ್ನ ಹೆಸರು ಮತ್ಸ್ಯವಲ್ಲಭ. ನನ್ನ ತಂದೆ ವೀರಾಗ್ರೇಸರನಾದ ಹನುಮಂತ. ಗೊತ್ತಾಯಿತೇ ? ತೊಲಗಿನ್ನು" ಎಂದನು.

ಯುವಕನ ಮಾತು ಕೇಳಿ ಹನುಮಂತನಿಗೆ ಆಶ್ಚರ್ಯದೊಂದಿಗೆ ಕೋಪವೂ ಬಂದಿತು. ಅವನು ಹಲ್ಲು ಕಡಿಯುತ್ತ ಎದ್ದುನಿಂತು, "ಎಲೋ ಮಾಯಗಾರನೇ ! ಲೋಕವೆಲ್ಲಾ ಬಲ್ಲ ಬ್ರಹ್ಮಚಾರಿ ಹನುಮಂತನು ನಿನ್ನ ತಂದೆಯೆ ? ಇಂತಹ ಸುಳ್ಳು ಮಾತು ಹೇಳುವ ನೀನು ಈಗಲೇ ಸಾಯುವಿ !" ಎನ್ನುತ್ತಾ, ಮತ್ಸ್ಯವಲ್ಲಭನ ಮೇಲೆ ಹಾರಿದನು.

ಹನುಮಂತನು ಬಲವಾದ ಮುಷ್ಟಿಘಾತದಿಂದ ದ್ವಾರಪಾಲಕ ಯುವಕನನ್ನು ಕೊಲ್ಲಲು ನೋಡುವಾಗ, "ಸ್ವಾಮೀ, ಅವಸರಪಡಬೇಡಿ ! ತಡೆಯಿರಿ ! ತಡೆಯಿರಿ !" ಎಂಬ ಹೆಂಗುಸಿನ ಕೂಗು ಕೇಳಿಸಿತು.

ತಟ್ಟನೆ ಹನುಮಂತನು ತಲೆ ತಿರುಗಿಸಿ ನೋಡಿದನು. ಮಿಂಚಿನಂತೆ ಸೌಂದರ್ಯವತಿಯೊಬ್ಬಳು ಅವನ



ಕಡೆಗೆ ಓಡಿಬರುತ್ತಿರುವುದನ್ನು ನೋಡಿ ಇನ್ನಷ್ಟು ಆಶ್ಚರ್ಯದಿಂದ ನಿಂತನು. ಬಂದವಳೇ ಆ ಸುಂದರಿ ಹನುಮಂತನ ಪಾದಗಳಿಗೆ ನಮಸ್ಕಾರ ಮಾಡಿ "ಅವನು ಹೇಳಿದುದು ನಿಜವೇ. ನನ್ನ ಹೆಸರು ಸುವರ್ಚಲಾದೇವಿ. ದಕ್ಷಿಣ ಸಾಗರನು ನನ್ನ ತಂದೆ. ಅಸಂಖ್ಯವಾದ ಜಲಚರಗಳಿಗೆ ನಾನು ರಾಣಿ. ನಿನ್ನನ್ನು ನಾನು ಚೆನ್ನಾಗಿಬಲ್ಲೆ. ಹಿಂದೆ ನೀನು ಸಮುದ್ರವನ್ನು ಹಾರುತ್ತಿದ್ದಾಗ ಸಿಂಹಿಕೆ ನಿನ್ನ ನೆರಳನ್ನು ಹಿಡಿದೆಳೆದಳಷ್ಟೇ ? ಆಗ ನೀನು ಅವಳೊಡನೆ ಹೋರಾಡುತ್ತಿರುವುದನ್ನು ಮತ್ಸ್ಯ ಶರೀರದಲ್ಲಿದ್ದ ನಾನೂ ನೋಡಿದೆ. ನೀನು ಸಿಂಹಿಕೆಯನ್ನು ಕೊಂದು ನಿನ್ನ ಹಣೆಯಲ್ಲಿದ್ದ ಬೆವರನ್ನು ಬೆರಳಿನಿಂದ ತೆಗೆದು ಕೆಳಕ್ಕೆ ಕೊಡವಿದೆ. ಮೀನಿನ ರೂಪದಲ್ಲಿ ತೇಲುತ್ತಿದ್ದ ನನ್ನ ಬಾಯಿಯೊಳಗೆ ಆ ಬೆವರಿನ ಬಿಂದುಗಳು ಬಿದ್ದುವು, ನಾನೂ ನುಂಗಿದೆ. ಆ ಕಾರಣದಿಂದ ನಾನು ಗರ್ಭಿಣಿಯಾಗಿ ಈ ಮತ್ಸ್ಯವಲ್ಲಭನನ್ನು ಹಡೆದೆನು. ಆದುದರಿಂದ ಇವನು ನಿನ್ನ ಮಗನೇ." ಎಂದಳು.

ಆಗ "ಹನುಮಾ! ಸುವರ್ಚಲಾದೇವಿ ಹೇಳಿದ್ದೆಲ್ಲವೂ ನಿಜ ! ಮತ್ಸ್ಯವಲ್ಲಭನು ನಿನ್ನ ಕುಮಾರನೇ ನಿಜ !" ಎಂದು ದಿವ್ಯವಾಣಿಯೊಂದು ಮೊಳಗಿತು.

ಇನ್ನಷ್ಟು ಆಶ್ಚರ್ಯ ಸಂಭ್ರಮಗಳಿಂದ ಚೇತರಿಸದಿರುವ ಹನುಮಂತನೊಂದಿಗೆ ಸುವರ್ಚಲಾದೇವಿ ಮತ್ತೆ ಹೀಗೆಂದಳು; "ಮತ್ಸ್ಯವಲ್ಲಭನು ಹುಟ್ಟಿದಂದಿನಿಂದಲೇ ಧೈರ್ಯಸಾಹಸಗಳುಳ್ಳವನು. ಮಹಾಪರಾಕ್ರಮಶಾಲಿಯಾಗುತ್ತಾ, ಬೇಗಬೇಗನೇ ಬೆಳೆದು ದೊಡ್ಡವನಾಗುತ್ತಿದ್ದ ಅವನನ್ನು ಮೈರಾವಣನು ಎತ್ತಿಕೊಂಡು ಬಂದು ತನ್ನ ಕೆಲಸದಾಳನ್ನಾಗಿ ಮಾಡಿದ್ದಾನೆ. ನಿನ್ನ ದರ್ಶನವಾದ ಹೊರತು ಇವನಿಗೆ ದಾಸ್ಯ ವಿಮುಕ್ತಿ ಇಲ್ಲವೆಂದು ದಿವ್ಯವಾಣಿ ಹೇಳಿದೆ. ಈಗ ನಿನ್ನ ದರ್ಶನವಾಯಿತು. ಮತ್ಸ್ಯವಲ್ಲಭನಿಗೆ ಇಂದಿನಿಂದ ದಾಸ್ಯವೂ ತೊಲಗಿತು."

"ಹೌದು. ಸುವರ್ಚಲ ಹೇಳಿದ್ದೆಲ್ಲಾ ನಿಜ ! ಮತ್ಸ್ಯವಲ್ಲಭನು ಹನುಮಂತನ ಕುಮಾರನೇ !" ಎಂದು ದಿವ್ಯವಾಣಿ ಇನ್ನೊಮ್ಮೆ ಮೊಳಗಿತು.

ಮತ್ಸ್ಯವಲ್ಲಭನೂ ಆತ್ಮಾನಂದದಿಂದ ಹನುಮಂತನಿಗೆ ನಮಸ್ಕಾರ ಮಾಡಿದನು. ಹನುಮಂತನು ಅವನನ್ನೆಬ್ಬಿಸಿ ವಾತ್ಸಲ್ಯದಿಂದ ಗಾಢಾಲಿಂಗನ ಮಾಡಿಕೊಂಡನು. ಸುವರ್ಚಲಾದೇವಿ ಸಂತೋಷದಿಂದ ಪುಳಕಿತಳಾಗಿ ಹನುಮಂತನೊಂದಿಗೆ, "ನೀನು ಚಂದ್ರಸೇನೆಯ ಬಳಿಗೆ ಹೋಗು. ಮೈರಾವಣನ ಪ್ರಾಣದ ರಹಸ್ಯವು ಅವಳಿಗೆ ಗೊತ್ತಿದೆ. ನಿನಗೆ ಅವಳಿಂದ ತುಂಬಾ ಸಹಾಯವಾಗುತ್ತದೆ, ಹೋಗು" ಎಂದು ಹನುಮಂತನಿಗೆ ನಮಸ್ಕಾರಮಾಡಿ ಮತ್ಸ್ಯವಲ್ಲಭನನ್ನು ಕರೆದುಕೊಂಡು ಹೊರಟುಹೋದಳು.





ವೀರಹನುಮಾನ್

ಹನುಮಂತನು ಸೂಕ್ಷ್ಮರೂಪದಲ್ಲಿ ಯಾವ ಆತಂಕವೂ ಇಲ್ಲದೆ, ಬಲವಾದ ಕಾವಲಿನವರಾರಿಗೂ ಗೊತ್ತಾಗದಂತೆ ಪಾತಾಳಲಂಕೆಯ ಸಿಂಹದ್ವಾರವನ್ನು ದಾಟಿ ನಗರದೊಳಗೆ ಪ್ರವೇಶಿಸಿದನು. ನಾಲ್ಕು ದಿಕ್ಕುಗಳನ್ನೂ ಪರೀಕ್ಷಿಸುತ್ತ ಅವನು ಸಾಗುತ್ತಿರಲು, ಒಂದು ದಿಕ್ಕಿನಿಂದ ದೊಡ್ಡ ಕೋಲಾಹಲ ಶಬ್ದ ಕೇಳಿ ಬರುತ್ತಿದ್ದಿತು. ಹನುಮಂತನು ಆ ದಿಕ್ಕಿಗೇ ಬೇಗಬೇಗನೆ ಹೋದನು.

ಅಲ್ಲೊಂದು ಕಡೆ ಮಹಾಪರ್ವತದ ಗುಹೆಯನ್ನು ಅದ್ಭುತವಾದ ಶಿಲ್ಪಗಳಿಂದ ಕೊರೆದು ಪ್ರವೇಶ ದ್ವಾರಮಂಟಪವನ್ನಾಗಿ ಮಾಡಿದ್ದರು. ಆ ಗುಹೆಯನ್ನೇ ಸುಂದರವಾಧ ಕಾಳಿಕಾಲಯವನ್ನಾಗಿ ಮಾಡಲಾಗಿತ್ತು. ಆಲಯದ ಪ್ರಾಂಗಣವೆಲ್ಲಾ ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಸಾಲು ಸಾಲಾಗಿ ಮಣಿದೀಪಗಳೂ ಸರದೀಪಗಳೂ ಬೆಳಗುತ್ತ ಸುತ್ತಲೂ ದಿವ್ಯಕಾಂತಿಯನ್ನು ಪಸರಿಸುತ್ತಿದ್ದುವು. ಕೇಳಿದವರ ಮೈಮನಗಳನ್ನು ಅಲುಗಾಡಿಸುವ ವಾದ್ಯಮೇಳ ಧ್ವನಿಗಳು. ಮೈರಾವಣನ ಸೇವಕರು ಮದ್ಯ ತುಂಬಿದ ಕೊಡಗಳನ್ನು ಸಾಲಾಗಿ ಒಂದರಮೇಲೊಂದಾಗಿ ಪೇರಿಸಿಟ್ಟಿದ್ದರು. ಅನೇಕ ಸೇವಕರು ಮದ್ಯಪಾನದಿಂದ ಮೈಮರೆತು ಆವೇಶದಿಂದ ಹಾಡುತ್ತ ಧುಮುಕಿ ಧುಮುಕಿ ಕುಣಿಯುತ್ತ ದೊಡ್ಡ ಕೋಲಾಹಲ ಮಾಡುತ್ತಿದ್ದರು.

ಆಲಯದ ಇದಿರಿನಲ್ಲಿ ಢಕ್ಕೆ ಡಮರು ಡಿಂಡಿಮ ಕೊಂಬು ಕಹಳೆ ಮೊದಲಾದುವು ಜೋರಾಗಿ ಶಬ್ದಿಸತೊಡಗಿದುವು. ಅಲ್ಲಿನವರ ಮಾತುಕತೆಗಳಿಂದ ರಾಮಲಕ್ಷ್ಮಣರನ್ನು ಬೆಳಗಾದ ಕೂಡಲೇ ಕಾಳಿಗೆ ಬಲಿ ಕೊಡುತ್ತಾರೆಂದು ಹನುಮಂತನಿಗೆ ಗೊತ್ತಾಯಿತು. ಅವನು ಹಲ್ಲಿಯ ಮರಿಯಂತಹ ಸೂಕ್ಷ್ಮರೂಪದಲ್ಲಿ ಕಾಳಿಕಾಲಯದ ಗರ್ಭಗುಡಿಯ ಮೇಲು ಭಾಗಕ್ಕೆ ಹೋದನು. ಅಲ್ಲಿಂದಲೇ ಕಾಳೀವಿಗ್ರಹದ ತಲೆಯ ಮೇಲೆ ಅಭಿಷೇಕಗಳನ್ನು ಸುರಿಯುವ ಬಿಂದಿಗೆಗಳನ್ನು ಸಿದ್ಧಪಡಿಸಿ ಸಾಲಾಗಿಟ್ಟಿದ್ದರು. ವಿಗ್ರಹದ ತಲೆಗೆ ಸರಿಯಾಗಿ ಗುಂಡಗಿನ ರಂಧ್ರವಿದ್ದಿತು. ಹನು

೩೧. ರಾಮಲಕ್ಷ್ಮಣರ ಸಂರಕ್ಷಣೆ



ಮಂತನು ಆ ರಂಧ್ರದೊಳಗಿನಿಂದಾಗಿ ಗರ್ಭಗೃಹದೊಳಗೆ ಧುಮುಕಿದನು.

ಅದರೊಳಗೆ ಯಾರೂ ಇರಲಿಲ್ಲ. ನಂದಾದೀಪದ ಬೆಳಕಿನಲ್ಲಿ ಕಾಳೀವಿಗ್ರಹವು ಬಹಳ ಎತ್ತರವಾಗಿ ಉಗ್ರಸ್ವರೂಪದಲ್ಲಿರುವುದನ್ನು ನೋಡಿದನು. ವಿಗ್ರಹದ ಮುಂದೆ ಹೊಸ ಹೊಸ ಬಿಲ್ಲುಗಳೂ ಬಾಣಗಳೂ ಇದ್ದುವು. ಹನುಮಂತನು ವಿಗ್ರಹದ ಮುಂದೆ ನಿಂತು, "ಓ! ಮಹಾಕಾಳೀ! ನೀನು ರಾಮಲಕ್ಷ್ಮಣರನ್ನು ಬಲಿಯಾಗಿ ಸ್ವೀಕರಿಸುವಿಯಾ?" ಎಂದು ಕೋಪದಿಂದ ಗರ್ಜಿಸಿ ಕೇಳಿದನು.

ಆಗ ಕಾಳೀದೇವಿ ಸೌಮ್ಯರೂಪದಿಂದ ಅವನಿಗೆ ಪ್ರತ್ಯಕ್ಷಳಾಗಿ, "ಹನುಮಂತಾ! ಮೈರಾವಣನ ಆಯುಷ್ಯತೀರುವ ಹೊತ್ತು ಸಮೀಪಿಸಿತು. ನಿನಗೆ ಜಯವಾಗುತ್ತದೆ ಸಂದೇಹ ಪಡಬೇಡ" ಎಂದು ಆಶೀರ್ವಾದ ಮಾಡಿ ಅಂತರ್ಧಾನಳಾದಳು. ಕಾಳೀದೇವಿಯ ಅಭಯವಾಣಿಯನ್ನು ಕೇಳಿ ಹನುಮಂತನಿಗೆ ಬಹಳ ಸಂತೋಷವಾಯಿತು. ಅವನು ಗರ್ಭಗುಡಿಯ ಬಾಗಿಲನ್ನು ಹಾಕಿ ಕಾಳೀವಿಗ್ರಹದ ಹಿಂಭಾಗದ ಕತ್ತಲೆಯಲ್ಲಿ ಅಡಗಿಕೊಂಡು ಮುಂದೆ ನಡೆಯಲಿರುವುದನ್ನು ನಿರೀಕ್ಷಿಸತೊಡಗಿದನು.

ಅದೇ ವೇಳೆಯಲ್ಲಿ ಮೈರಾವಣನ ಅಂತಃಪುರದ ರಾಣೀವಾಸದಲ್ಲಿ ತುಂಬಾ ಗದ್ದಲದ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಅಲ್ಲಿ ರಾಮಲಕ್ಷ್ಮಣರ ಬಲಿ ನೆರವೇರಿದ ಕೂಡಲೇ ಮೈರಾವಣನಿಗೆ ಚಂದ್ರಸೇನೆಯೊಂದಿಗೆ ನಡೆಯ ಬೇಕಾದ ವಿವಾಹಕ್ಕಾಗಿ ಭಾರೀ ಭಾರೀ ಸನ್ನಾಹಗಳು ನಡೆಯುತ್ತಿದ್ದುವು. ಎಲ್ಲದಕ್ಕೂ ಅಲ್ಲಿಯ ನಾಯಕಿಯಾದ ಕಂಟಕಿ ಎಂಬ ರಾಕ್ಷಸಿಯದೇ ಅಧಿಕಾರ. ಅವಳ ಆಜ್ಞೆಯಂತೆ ಸೇವಕಿಯರು ಚಂದ್ರಸೇನೆಗೆ ಅಲಂಕಾರ ಮಾಡುತ್ತಲಿದ್ದರು. ಮಧ್ಯೆ ಮಧ್ಯೆ ಕಂಟಕಿ ಅವಳನ್ನು ತಿವಿದು ಕುಟ್ಟಿ ಬುದ್ಧಿಹೇಳುತ್ತ, ಮೈರಾವಣನ ದೊಡ್ಡಸ್ತಿಕೆಯನ್ನು ಕೊಚ್ಚುತ್ತ ಅಧಿಕಾರ ನಡೆಸುತ್ತಿದ್ದಳು.


ಭವನದ ಮುಂದೆ ದೊಡ್ಡ ಕೋಲಾಹಲ ಕಿವಿಗಳನ್ನು ಗಡಚಿಕ್ಕಿಸತೊಡಗಿತು. ರಾಮಲಕ್ಷ್ಮಣರು ಪ್ರತಿಮೆಗಳ ಆಕಾರದಿಂದ ನಿಜಸ್ವರೂಪಕ್ಕೆ ಬದಲಾಯಿಸಲ್ಪಟ್ಟರು. ಆಮೇಲೆ ಅವರಿಬ್ಬರನ್ನೂ ಒಂದು ಬಂಡಿಯಲ್ಲಿ ಏರಿಸಿದರು. ಉದ್ದವಾದ ದಪ್ಪದ ಮರದ ತುಂಡುಗಳಿಗೆ ಅವರನ್ನು ಹಗ್ಗಗಳಿಂದ ಬಿಗಿದು ಕಟ್ಟಿದರು. ಅವರ ಶರೀರಗಳನ್ನು ಕೆಂಬಣ್ಣದ ದಾಸವಾಳ ಹೂಗಳಿಂದ ಅಲಂಕರಿಸಲ್ಪಟ್ಟಿತ್ತು. ಮಾನವರಂತೆ ಕೈಕಾಲುಗಳಿರುವ ಭೂತಸರ್ಪಗಳು ಬಂಡಿಯನ್ನು ಎಳೆಯುತ್ತಿದ್ದುವು. ಈ ಚೆಂದದಲ್ಲಿ ರಾಕ್ಷಸರು ಅಟ್ಟಹಾಸ ಮಾಡುತ್ತ ರಾಮಲಕ್ಷ್ಮಣರನ್ನು ಮೆರವಣಿಗೆ ಮಾಡಿಸಿಕೊಂಡು ಕಾಳಿಕಾಲಯಕ್ಕೆ ಒಯ್ಯುತ್ತಿದ್ದರು. ಆ ಸಮಯದಲ್ಲಿ ರಾಕ್ಷಸರಿಂದ ಒಮ್ಮೆಲೇ ಹೊರಟ ದೊಡ್ಡ ಶಬ್ದ

ವನ್ನು ಕೇಳಿ, ಅದರ ಕಾರಣವನ್ನು ಊಹಿಸಿದ ಚಂದ್ರಸೇನೆ ಅತ್ಯಾವೇಶದಿಂದ ಚೀರಿ ಹಾರಿ ಕಂಟಕಿ ಅಡಗಟ್ಟುವುದರೊಳಗೇ ಮಿಂಚಿನವೇಗದಿಂದ ಬೀದಿಗೆ ಓಡಿದಳು. ಅಲ್ಲಿ ಅರಸಿನ ಬಟ್ಟೆಗಳನ್ನುಟ್ಟು, ಮುಖ ಕೈಲ್ಲಾ ಸಿಂಧೂರಲೇಪಿಸಲ್ಪಟ್ಟ ರಾಮಲಕ್ಷ್ಮಣರು ಅವಳ ಕಣ್ಣಿಗೆ ಬಿದ್ದರು. "ಹಾ ರಾಮಾ!" ಎಂದು ಚೀರಿ ತಲೆ ತಿರುಗಿ ದಡಾಲ್ಲನೆ ಬಿದ್ದು ಮೂರ್ಛಿತೆಯಾದಳು ಚಂದ್ರಸೇನೆ.

ಚಂದ್ರಸೇನೆಯ ಹಿಂದೆಯೇ ಬಂದ ಕಂಟಕಿ, ಅವಳು ಚೀರಿಬಿದ್ದುದನ್ನು ನೋಡಿ, ಅತ್ಯಂತ ಸಿಟ್ಟಿನಿಂದ ಹಲ್ಲುಕಡಿದು ಕಣ್ಣು ಹೊರಳಿಸುತ್ತ, ಬಾಯಿಗೆ ಬಂದ ಬೈಗುಳನ್ನುಪಯೋಗಿಸಿ ಕೊರಡೆಯಿಂದ ಕೈದಣಿಯೆ ಚಂದ್ರಸೇನೆಯನ್ನು ಹೊಡೆಯತೊಡಗಿದಳು. ಆದರೆ ಚಂದ್ರಸೇನೆಯಲ್ಲಿ ಚಲನೆಯೇ ಬಾರದಿರಲು ಬೇಸತ್ತು ಅವಳನ್ನು ಹೊತ್ತುಕೊಂಡು ಹೋಗಿ ಭವನದೊಳಗಿನ ಒಂದು ಕೋಣೆಯೊಳಗೆ ಹಾಕಿ ಬಂಧಿಸಿಟ್ಟಳು.


ಕಂಟಕಿಯ ಅಧಿಕಾರ ಎಲ್ಲಿಯವರೆಗಿತ್ತೆಂದರೆ, ಅವಳು ಕಾಳಿಕಾದೇವಿಯ ಪಾದತೀರ್ಥ ಪ್ರಧಾನ ಪೂಜಾರಿಣಿಯಾಗಿದ್ದಳು. ಅಂತೆಯೇ ಅವಳು ಆಲಯದ ಕೆಲಸಕ್ಕಾಗಿ ಅಲ್ಲಿಗೆ ಓಡಿದಳು. ಮೈರಾವಣನಿಗಾದರೂ ಸರಿಯೆ ಅವನ ಅಣ್ಣ ಅಹಿರಾವಣನಿಗಾದರೂ ಸರಿಯೆ, ದೇವಿಯ ಪಾದತೀರ್ಥವೆಂದು ಕರೆಯಲ್ಪಡುವ ಮದ್ಯವನ್ನು ಕಂಟಕಿಯ ಕೈಯಿಂದಲೇ ಎರೆಸಿಕೊಂಡು ಸೇವಿಸಬೇಕಾಗಿತ್ತು.

ಅವಳ ಆಜ್ಞೆಯಂತೆ ಉಪಪೂಜಾರಿಗಳಾದ ರಾಕ್ಷಸರು ಗರ್ಭಾಲಯದ ಮೇಲುಭಾಗಕ್ಕೆ ಹೋಗಿ ಕಾಳೀವಿಗ್ರಹದ ಮೇಲೆ ಮದ್ಯವನ್ನು ಅಭಿಷೇಕಿಸಲು ಪ್ರಾರಂಭಿಸಿದರು. ಗುಂಡಗಿನ ರಂಧ್ರದ ಮೂಲಕ ಧಾರೆಯಾಗಿ ಬೀಳುವ ಮದ್ಯವನ್ನು ನೋಡಿ ಹನುಮಂತನು ಅಸಹ್ಯಪಟ್ಟನು.



ಆಗ ಅವನು ಗರ್ಭಗೃಹದೊಳಗಿನ ಎತ್ತರದಷ್ಟೇ ತನ್ನ ದೇಹವನ್ನು ಬೆಳೆಸಿ, "ಇನ್ನು ಮದ್ಯವನ್ನು ನಿಲ್ಲಿಸಿ ಹಾಲಿನ ಅಭಿಷೇಕ ಮಾಡಿರಿ!" ಎಂದು ಕಾಳೀದೇವಿ ಮಾತಾಡಿದಂತೆಯೇ ಸೌಮ್ಯಗಂಭೀರ ಸ್ವರದಿಂದ ಕೂಗಿದನು. ಅದು ಪ್ರತಿಧ್ವನಿಯೊಂದಿಗೆ ವಿಚಿತ್ರವಾಗಿ ಕೇಳಿಸಿತು.

ಆ ಶಬ್ದ ಕೇಳಿದ ಕೂಡಲೇ ದೇವಾಲಯದ ಹೊರಗೆ ಅಬ್ಬರಿಸಿಕೊಂಡಿದ್ದ ಕೋಲಾಹಲ ಧ್ವನಿ ಒಮ್ಮೆಗೇ ನಿಂತುಹೋಯಿತು. ಕಾಳಿ ಮದ್ಯಾಭಿಷೇಕ ಸಾಕೆಂದು ಹೇಳಿದುದು ಎಲ್ಲರಿಗೂ ಆಶ್ಚರ್ಯಕರವಾಗಿತ್ತು. ವಿಗ್ರಹದ ಪಾದದ ಹತ್ತಿರವಿರುವ ಸೋಮಸೂತ್ರದ ಮೂಲಕ ತೀರ್ಥಕುಂಡದಲ್ಲಿ ಬೀಳುವ ಮದ್ಯವನ್ನು ಕುಡಿಯಲು, ಪಾನಪಾತ್ರಗಳೊಂದಿಗೆ ರಾಕ್ಷಸಪರಿವಾರವು ಸಿದ್ಧವಾಗಿದ್ದಿತು. ಅವರೆಲ್ಲರಿಗೂ ಅದು ದೊಡ್ಡ ಆಶಾಭಂಗವಾಗಿತ್ತು. ಹನುಮಂತನ ಆ ಶಬ್ದ ರಾಮಲಕ್ಷ್ಮಣರ ಕಿವಿಗೂ



ಬಿದ್ದಿತ್ತು. ಬಂಡಿಯಲ್ಲಿ ಬಂಧಿಸಲ್ಪಟ್ಟ ರಾಮನು ಲಕ್ಷ್ಮಣನ ಮುಖವನ್ನು ನೋಡಿ ಸಣ್ಣಗೆ ಮಂದಹಾಸ ಬೀರಿದನು.

ಕಾಳೀದೇವಿಯಿಂದ ಹೊರಟ ಆ ಶಬ್ದವನ್ನು ಕೇಳಿ ಕಂಟಕಿ ದಿಗಿಲಿನಿಂದ ಮೈರಾವಣನ ಮುಖವನ್ನು ನೋಡಿದಳು. ಮೈರಾವಣನು ಅತಾಶ್ಚರ್ಯದಿಂದ ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿ ಪಕ್ಕದಲ್ಲಿದ್ದ ಅಹಿರಾವಣನನ್ನು ನೋಡಿದನು.

ಅಹಿರಾವಣನು ತಲೆದೂಗುತ್ತ, ''ತಮ್ಮಾ, ಮೈರಾವಣಾ, ಇದರಲ್ಲಿ ಆಶ್ಚರ್ಯಪಡುವಂಥಾದ್ದು ಏನೂ ಇಲ್ಲ. ರಾಮಲಕ್ಷ್ಮಣರು ಸಾತ್ವಿಕಮೂರ್ತಿಗಳಲ್ಲವೇ ? ಅಂಥವರನ್ನು ಬಲಿಗೊಳ್ಳುವಾಗ ಮಹಾಮಾತೆ ಸಾತ್ವಿಕಾಭಿಷೇಕವನ್ನೇ ಬಯಸುತ್ತಾಳೆ. ಆಗ ತಾನೇ ಒಂದಕ್ಕೊಂದು ಸರಿಯಾಗಿ ಹೊಂದುತ್ತದೆ. ಅವಳ ಚಿತ್ತದಂತೇ ಮಾಡಿಸು.'' ಎಂದನು. ''ಹೌದಣ್ಣ ! ಬಹಳ ಚೆನ್ನಾಗಿ ಹೇಳಿದೆ. ನಿತ್ಯವೂ ದೇವೀಪಾದತೀರ್ಥವನ್ನು ಸೇವಿಸುತ್ತ ಅವಳ ಧ್ಯಾನದಲ್ಲೇ ಇರುವ ನಿನ್ನ ಹಾಗೆ ಬೇರೆಯವರಿಗೆ ಅವಳ ಅಂತರ್ಯವು ತಿಳಿದೀತೇ ?'' ಎಂದು ಮೈರಾವಣನು ಅಹಿರಾವಣನನ್ನು ಮೆಚ್ಚಿಕೊಂಡು ದೇವಿಗೆ ಹಾಲಿನ ಅಭಿಷೇಕ ಮಾಡುವಂತೆ ರಾಕ್ಷಸರಿಗೆ ಅಪ್ಪಣೆ ಕೊಟ್ಟನು.


ರಾಕ್ಷಸರು ದೊಡ್ಡದೊಡ್ಡ ಪಾತ್ರಗಳಲ್ಲಿ ಹಾಲು ತಂದು ಕಾಳೀದೇವಿಗೆ ಅಭಿಷೇಕ ಮಾಡಲು ತೊಡಗಿದರು. ಬೃಹದಾಕಾರನಾದ ಹನುಮಂತನು ಮೇಲಿನಿಂದ ಬೀಳುವ ಕ್ಷೀರಧಾರೆಗೆ ಸರಿಯಾಗಿ ತನ್ನ ಬಾಯಿಯನ್ನು ತೆರೆದುಕೊಂಡು ಗಟಗಟನೆ ಕುಡಿಯ ತೊಡಗಿದನು. ಅವನಿಗೆ ಉತ್ಸಾಹವೂ ಬಲವೂ ಅಭಿವೃದ್ಧಿಯಾಯಿತು.

ಸ್ವಲ್ಪಹೊತ್ತಿಗೆ ಅಭಿಷೇಕ ಮುಗಿಯಿತು. ಮೈರಾವಣನು ಉತ್ಸಾಹದಿಂದ ಗರ್ಭಗುಡಿಯ ಮುಂದೆ ಹೋಗಿ ಮುಂಡುಗಾಲೂರಿ ಕುಳಿತು ಕೈಜೋಡಿಸಿ, ''ಕಾಳೀಮಾತೆಯೇ ! ಇನ್ನು ನಿನ್ನ ದರ್ಶನಕ್ಕೆ ಅನುಜ್ಞೆ ಕೊಡು. ಎಲ್ಲರೂ ಕಾದಿದ್ದೇವೆ !'' ಎಂದು ಪ್ರಾರ್ಥಿಸಿದನು.

ಅದಕ್ಕೆ ಉತ್ತರವಾಗಿ ಒಳಗಿನಿಂದ ಗಂಭೀರಸ್ವರ ಹೊರಟಿತು : ''ಮೈರಾವಣನೇ ! ಮೊದಲು ನಿನ್ನ ಅಣ್ಣ ಅಹಿರಾವಣನು ಫಲಪುಷ್ಪನೈವೇದ್ಯಗಳೊಂದಿಗೆ ಅರ್ಚನೆಗೆ ಬರಲಿ !''

ಮೈರಾವಣನು ತನ್ನ ಅಣ್ಣನ ಬಳಿಗೆ ಬಂದು, ''ಅಣ್ಣಾ, ಮಾತೆಗೆ ನಿನ್ನ ಮೇಲೆ ಬಹಳ ಪ್ರೀತಿ. ಅವಳು ಮೊದಲು ನಿನ್ನನ್ನೇ ಅರ್ಚನೆಗೆ ಕರೆಯುತ್ತಾಳೆ. ಹೋಗಣ್ಣ !'' ಎಂದನು.

ಅಹಿರಾವಣನು ಪರ್ವತದಂತಹ ತನ್ನ ದೇಹವನ್ನು ಅತ್ತಿತ್ತ ಓಲಾಡಿಸುತ್ತ ಫಲಪುಷ್ಪ, ಭಕ್ಷ್ಯಗಳು, ಬಂಗಾರದ ಪಾತ್ರದಲ್ಲಿ ಮಧು ಮುಂತಾದುವನ್ನು ತೆಗೆದುಕೊಂಡು ಗರ್ಭಗುಡಿಯ ಬಾಗಿಲ



ಒಳಗೆ ಹೋದನು. ಹನುಮಂತನು ಮುಚ್ಚಿರುವ ಬಾಗಿಲಿನ ಹತ್ತಿರವೇ ನಿಂತಿದ್ದನು. ಅಹಿರಾವಣನು ಬಾಗಿಲನ್ನು ಮೊಣಕೈಯಿಂದ ದೂಡಿ, ಒಳಗೆ ಪ್ರವೇಶಿಸಿದ ಕೂಡಲೇ ಹನುಮಂತನು ಬದಿಗೆ ಸರಿದು ತಟಕ್ಕನೆ ಬಾಗಿಲು ಮುಚ್ಚಿ ತಾಳಜಡಿದನು.

ಅಹಿರಾವಣನು ಉಸಿರುಬಿಡುವುದರೊಳಗೆ ಹನುಮಂತನ ಕೈಗಳು ಅವನ ಕುತ್ತಿಗೆಯನ್ನು ಇಕ್ಕುಳದಂತೆ ಹಿಡಿದಾಗಿತ್ತು. ನೈವೇದ್ಯಪದಾರ್ಥಗಳನ್ನು ಕೆಳಗಿಡಲು ಬಾಗಿದ್ದಂತೆಯೇ ಉಸಿರು ನಿಂತು ಶಬ್ದವಿಲ್ಲದೆಯೇ ಅಹಿರಾವಣನ ಕಥೆ ಮುಗಿಯಿತು.

ತರುವಾಯ ಹನುಮಂತನು ಸುತ್ತಲೂ ಒಮ್ಮೆ ನೋಡಿ, ಅಹಿರಾವಣನ ಕಳೇಬರವನ್ನು ಗರ್ಭಗುಡಿಯ ಕತ್ತಲೆಯ ಮೂಲೆಗೆ ಒದ್ದು ಝಾಡಿಸಿ ಅದೇ ಸೌಮ್ಯಗಂಭೀರ ಧ್ವನಿಯಿಂದ, "ಮೈರಾವಣಾ, ಈಗ ರಾಮಲಕ್ಷ್ಮಣರನ್ನು ಒಳಗೆ ಕಳುಹಿಸು. ನನ್ನ ಪ್ರಿಯಭಕ್ತನಾದ ಅಹಿರಾವಣನು ಮಂತ್ರವನ್ನು ಹೇಳಿ ಅವರ ಕೈಯಿಂದಲೇ ನನ್ನನ್ನು ಅರ್ಚನೆ ಮಾಡಿಸಬೇಕು" ಎಂದು ಕೂಗಿ ಹೇಳಿ, ಬಾಗಿಲಿನ ತಾಳವನ್ನು ತೆಗೆದಿಟ್ಟನು.

ಅದರಂತೆ ಮೈರಾವಣನು "ನಿನ್ನ ಚಿತ್ತದೇವಿ!" ಎನ್ನುತ್ತ ರಾಮಲಕ್ಷ್ಮಣರನ್ನು ಗರ್ಭಗುಡಿಯೊಳಗೆ ದೂಡಿದನು. ಕಾಳೀವಿಗ್ರಹದ ಹಿಂದೆ ಅಡಗಿದ್ದ ಹನುಮಂತನು ಸಣ್ಣ ಸ್ವರದಿಂದ "ರಘುವೀರರೇ, ಮೊದಲು ಬಾಗಿಲು ಮುಚ್ಚಿ ತಾಳಹಾಕಿ ತಯಾರಾಗಿರಿ" ಎಂದನು ಕಾಳಿಯೇ ಹೇಳಿದಂತೆ.

ಆ ಮಾತನ್ನು ಕೇಳಿ ಲಕ್ಷ್ಮಣನು ಆಶ್ಚರ್ಯದಿಂದ ರಾಮನನ್ನು ನೋಡಿದನು. ರಾಮನು ಮಂದಹಾಸ ಮಾಡಿ "ಇನ್ನೂ ನಿನಗೆ ಅರ್ಥವಾಗಲಿಲ್ಲವೇ? ಮೊದಲು ಬಾಗಿಲು ಭದ್ರಪಡಿಸು" ಎಂದನು.

ಲಕ್ಷ್ಮಣನು ಬಾಗಿಲು ಮುಚ್ಚಿ ತಾಳಜಡಿದ ಕೂಡಲೇ, "ಇನ್ನು ವಿಗ್ರಹದ ಹಿಂದೆ ಬನ್ನಿ" ಎಂಬ ಮಾತು ಹೊರಟಿತು. ರಾಮಲಕ್ಷ್ಮಣರು ಕಾಳೀವಿಗ್ರಹದ ಹಿಂದೆ ಹೋಗಿ ಹನುಮಂತನನ್ನು ನೋಡಿ ಆತ್ಮಾನಂದಗೊಂಡರು. ಲಕ್ಷ್ಮಣನು ಇನ್ನೂ ಸಂದೇಹದಿಂದಿರುವುದನ್ನು ನೋಡಿ ರಾಮನು, "ಲಕ್ಷ್ಮಣಾ ಕಾಳೀದೇವಿ ತನಗೆ ಮದ್ಯದ ಅಭಿಷೇಕ ಬೇಡವೆಂದಾಗಲೇ ಗರ್ಭಗುಡಿಯಲ್ಲಿ ನಮ್ಮ ಹನುಮಂತನಿರುವನೆಂದು ನನಗೆ ಗೊತ್ತಾಯಿತು" ಎಂದನು.

ಅಷ್ಟರಲ್ಲಿ ರಾಮನಿಗೆ ನಮಸ್ಕಾರ ಮಾಡಿ ಎದ್ದ ಹನುಮಂತನು ರಾಮಲಕ್ಷ್ಮಣರಿಗೆ ಕಾಳೀವಿಗ್ರಹದ ಮುಂದೆ ಪೂಜಿಸಲಿಕ್ಕಾಗಿ ಇಟ್ಟಿದ್ದ ಹೊಸ ಬಿಲ್ಲುಗಳನ್ನೂ, ಬಾಣಗಳು ತುಂಬಿದ ತೂಣೀರಗಳನ್ನೂ ತೋರಿಸಿದನು. ರಾಮಲಕ್ಷ್ಮಣರು ಉತ್ಸಾಹದಿಂದ ಬಿಲ್ಲುಬಾಣಗಳನ್ನು ತೆಗೆದುಕೊಂಡರು. ಹನುಮಂತನು ತನ್ನ ಶರೀರವನ್ನು ಬೆಳೆಸಿ ರಾಮಲಕ್ಷ್ಮಣರನ್ನು ಭುಜಗಳ ಮೇಲೆ ಏರಿಸಿಕೊಂಡು, ವಿಗ್ರಹದ ಮುಂದೆ ರಾಕ್ಷಸರಿಗಾಗಿ ಒಟ್ಟಿದ್ದ ಅಷ್ಟೂ ಬಾಣ



ಗಳನ್ನೂ ಕಟ್ಟಿಕಟ್ಟಿ ಎತ್ತಿಕೊಂಡನು. ಆ ವೇಳೆಯಲ್ಲಿ ಗರ್ಭಾಲಯದ ಹೊರಗೆ ರಾಕ್ಷಸರು ಭಾರಿ ಕೋಲಾಹಲ ಮಾಡಿಕೊಂಡಿದ್ದರು. ಅವರಿಗೆ ರಾಮಲಕ್ಷ್ಮಣರ ಬಲಿಯನ್ನು ನೋಡಬೇಕೆಂದು ತುಂಬಾ ಆತುರವಾಗಿತ್ತು. ಬಲಿಗೆ ಗೊತ್ತು ಮಾಡಲ್ಪಟ್ಟ ಮುಹೂರ್ತ ದಾಟಿ ಹೋಗುತ್ತಿರಲು, "ಅಹಿರಾವಣಾ, ಅರ್ಚನೆ ಮುಗಿಸಿ ಬೇಗ ಬಾಗಿಲು ತೆರೆಯಿರಿ!" ಎಂದು ಕೆಲವರು ಕೂಗಿದರು. ಆದರೂ ಗರ್ಭಗುಡಿಯೊಳಗೆ ಯಾವ ಸದ್ದೂ ಕೇಳಿ ಬರಲಿಲ್ಲ. ಅಹಿರಾವಣನು ಏಕೆ ಬಾಗಿಲು ತೆರೆಯಲಿಲ್ಲ?


ಗರ್ಭಗುಡಿಯಲ್ಲಿ ಏನೋ ಮೋಸ ನಡೆದಿದೆ ಎಂಬ ಅನುಮಾನವು ಮೊದಲು ಕಂಟಕಿಗೆ ಮಿಂಚಿತು. ಆ ರಾಕ್ಷಸಿ ಬಾಗಿಲ ಸಂದಿನಿಂದ ಒಳಕ್ಕೆ ನೋಡಿದಳು. ಅವಳಿಗೆ ಅಭಿಷೇಕವಾದ ಸೂಚನೆಯೋ, ಅಹಿರಾವಣನು ರಾಮಲಕ್ಷ್ಮಣರಿಂದ ಅರ್ಚನೆ ಮಾಡಿಸುವ ಚಲನೆಯೋ ಕಂಡು ಬರಲಿಲ್ಲ. ಹಾಗಾದರೆ ಗರ್ಭಗುಡಿಯೊಳಗೆ ಯಾವನೋ ಅಪಾಯಕಾರಿಯಾದ ಶತ್ರುವು ಸೇರಿರಬೇಕು!

ಈ ಆಲೋಚನೆ ಬಂದ ಕೂಡಲೇ ಕಂಟಕಿ ಕೆಟ್ಟ ದನಿಯಿಂದ "ಹೋ!" ಎಂದು ಅರಚಿದಳು. ರಾಕ್ಷಸರು ಅವಳ ಸುತ್ತಲೂ ಕೂಡಿ, "ಏಕೆ ಹಾಗೆ ಕೂಗುವಿ? ನಿನಗೇನಾಯಿತು? ಒಳಗೆ ಏನನ್ನು ನೋಡಿದಿ? ಕಾಳೀಮಾತೆ ನಿನ್ನನ್ನೇ ಬಲಿ ಕೋರಿದಳೇ?" ಎಂದು ಮುಂತಾಗಿ ಕೇಳಿದರು.

ಕಂಟಕಿ ಕಂಪಿಸುತ್ತ ಇನ್ನಷ್ಟು ಕೆಟ್ಟ ಸ್ವರದಿಂದ, "ಅಯ್ಯೋ! ಮಂದಮತಿಗಳೇ! ನಮ್ಮ ಕಣ್ಣೆದಿರೇ ದೊಡ್ಡ ಮೋಸವಾಗಿದೆ. ನಮ್ಮ ರಹಸ್ಯಗಳನ್ನು ಶತ್ರುಗಳಿಗೆ ತಿಳಿಸುವುದಕ್ಕೆ ಅವಳೊಬ್ಬಳ ಹೊರತು ಬೇರೆ ಯಾರೂ ಇಲ್ಲ. ಆ ಚಂದ್ರಸೇನೆಯ ಶರೀರವನ್ನು ಹಣ್ಣು ಮಾಡಿದ ಹೊರತು ಗುಟ್ಟು ಹೊರಗೆ ಬಾರದು" ಎಂದು ಹೇಳಿ ಚಂದ್ರಸೇನೆ ಬಂಧಿಸಲ್ಪಟ್ಟ ಮಂದಿರದ ಕಡೆಗೆ ಓಡಿದಳು.

ಕಂಟಕಿಯ ಮಾತುಗಳನ್ನು ಕೇಳಿ ರಾಕ್ಷಸರೆಲ್ಲ ಭೀತರಾಗಿ ಒಬ್ಬರ ಮುಖವನ್ನೊಬ್ಬರು ನೋಡತೊಡಗಿದರು. ಏನಿರಬಹುದು ಒಳಗೆ? ಶತ್ರುವೆಂದರೆ ಯಾರಾಗಿರಬಹುದು? ಹೇಗೆ ಬಂದಿರಬಹುದು? ಆ ಕಂಟಕಿ ಕೂಗಿದ ಹಾಗೆ ಗರ್ಭಗುಡಿಯೊಳಗೆ, ಶತ್ರುವೆಂದರೇನು? ಮೈರಾವಣನು ಪಾಲಿಸುವ ಈ ಪಾತಾಳ ಲಂಕೆಯೊಳಗೆ ಪ್ರವೇಶಿಸಬಲ್ಲ ಶತ್ರು ಯಾರವನು?

ಮೈರಾವಣನು ಸೇವಕರಾಕ್ಷಸರನ್ನು ನೋಡಿ ಗರ್ಭಾಲಯದ ಬಾಗಿಲನ್ನು ತೆರೆಯುವಂತೆ ಆಜ್ಞಾಪಿಸಿದನು. ಕೆಲಮಂದಿ ಧೈರ್ಯಶಾಲಿಗಳಾದ ರಾಕ್ಷಸರು ಗರ್ಭಗೃಹದ ಬಾಗಿಲ ಬಳಿಗೆ ನಡೆದರು. ಅವರು ಬಾಗಿಲಿನ ಮೇಲೆ ಕೈಹಾಕುವುದರೊಳಗೆ, ಒಳಗಿದ್ದ ಹನುಮಂತನು, ಬೆಟ್ಟಗಳು ನಡುಗುವ ಹಾಗೆ ಸಿಂಹನಾದ ಮಾಡಿ, ಬಾಗಿಲು ಮುರಿದು



ಹಾರುವ ಹಾಗೆ ಕಾಲಿನಿಂದ ಒದ್ದು ಹೊರಗೆ ಬಂದನು. ಈ ಆಘಾತಗಳಿಂದ ಅನೇಕ ರಾಕ್ಷಸರು ಮಗುಚಿ ಬಿದ್ದರು.


ಉಗ್ರಹನುಮಂತನನ್ನು ನೋಡಿದ ಕೂಡಲೇ ರಾಕ್ಷಸರ ಸಮೂಹದಿಂದ "ಮೋಸ! ಮೋಸ! ಘಾತ! ಘಾತ!" ಎಂಬ ಕೂಗುಗಳೆದ್ದುವು. ಹೊರಗೆ ಬಂದ ಕ್ಷಣದಿಂದಲೂ ಹನುಮಂತನ ಭುಜದ ಮೇಲಿದ್ದ ರಾಮಲಕ್ಷ್ಮಣರು ಎಡೆಬಿಡದೆ ಬಾಣದ ಮಳೆಯನ್ನೇ ಸುರಿಸತೊಡಗಿದರು. ರಾಕ್ಷಸರು ಹಾಹಾಕಾರ ಮಾಡುತ್ತ ಚೆಲ್ಲಾಚೆದರಾಗಿ ಓಡಿ ಹೋಗುತ್ತಿದ್ದರು; ಸಾಯುತ್ತಿದ್ದರು.

ಕಾಳಿಕಾಲಯದ ಮುಂದೆ ನಿಂತಿದ್ದ ಮೈರಾವಣನು ಅಲ್ಲಿಂದ ಹೊರಬಿದ್ದ ಕೋಪೋಗ್ರ ಹನುಮಂತನನ್ನೂ, ಅವನ ಭುಜದ ಮೇಲೆ ಧನುರ್ಧಾರಿಗಳಾಗಿ ವಿಜೃಂಭಿಸುವ ರಾಮಲಕ್ಷ್ಮಣರನ್ನೂ ನೋಡಿ, ಬೇರೆ ಉಪಾಯವಿಲ್ಲದೆ ಹೂಂಕಾರ ಮಾಡಿ, ತಾನೂ ಯುದ್ಧಸನ್ನದ್ಧನಾದನು. ಅವನ ಕೈಯಲ್ಲಿಯೂ ಭಾರೀಬಿಲ್ಲು ಎದ್ದಿತು. ತೀವ್ರವಾದ ಕಣೆಗಳನ್ನು ಪ್ರಯೋಗಿಸತೊಡಗಿದನು.

ರಾಮಲಕ್ಷ್ಮಣರು ಇಮ್ಮಡಿ ಉತ್ಸಾಹದಿಂದ ಮೈರಾವಣನ ಮೇಲೆ ಬಾಣಗಳನ್ನು ಪ್ರಯೋಗಿಸಿದರು. ಆ ಬಾಣಗಳ ಪೆಟ್ಟಿನಿಂದಾದ ಗಾಯಗಳಿಂದ ನೆಲಕ್ಕೆ ಬಿದ್ದ ಒಂದೊಂದು ರಕ್ತದ ಬಿಂದುವಿನಿಂದಲೂ ಒಬ್ಬೊಬ್ಬ ಮೈರಾವಣನಂತೆ ಎದ್ದು ಯುದ್ಧಮಾಡಲಾರಂಭಿಸಿದರು. ಅವರು ಕೂಡಾ ಮೈರಾವಣನಂತೆಯೇ ಹುಂಕಾರಮಾಡಿ ರಾಮಲಕ್ಷ್ಮಣರ ಮೇಲೆ ಬಾಣ ಪ್ರಯೋಗ ಮಾಡುತ್ತಿದ್ದರು. ಹೀಗೆ ಅನೇಕ ಮಂದಿ ಮೈರಾವಣರೆದ್ದರು.

ಇದನ್ನು ನೋಡಿ ಆಶ್ಚರ್ಯಚಕಿತರಾದ ರಾಮಲಕ್ಷ್ಮಣರು ಹನುಮಂತನೊಂದಿಗೆ, "ಹನುಮಂತಾ, ಇದೇನು ವಿಚಿತ್ರ! ಇಷ್ಟುಮಂದಿ ಮೈರಾವಣರನ್ನು ರಕ್ತದ ಬಿಂದು ನೆಲಕ್ಕೆ ಬೀಳದಂತೆ ವಧಿಸುವುದು ಹೇಗೆ?" ಎಂದರು.

ಆಗ ಹನುಮಂತನಿಗೆ ಸುವರ್ಚಲಾದೇವಿ ಹೇಳಿದಂತೆ ಚಂದ್ರಸೇನೆಯ ನೆನಪು ಬಂದಿತು. ಹನುಮಂತನು ಒಂದೆರಡು ಮಾತಿನಲ್ಲಿ, ಆ ಸಂಗತಿಯನ್ನು ರಾಮಲಕ್ಷ್ಮಣರಿಗೆ ಹೇಳಿ, ರಿವ್ವನೆ ಆಕಾಶಕ್ಕೆ ಹಾರಿ ರಾಮಲಕ್ಷ್ಮಣರನ್ನು ಎತ್ತರವಾದೊಂದು ಬೆಟ್ಟದ ಮೇಲೆ ಇಳಿಸಿದನು. ಅಲ್ಲಿಂದ ಹನುಮಂತನು ಚಂದ್ರಸೇನೆಯ ಮಂದಿರದ ಕಡೆಗೆ ವೇಗವಾಗಿ ಓಡಿದನು. ರಾಮಲಕ್ಷ್ಮಣರು ಆ ಪರ್ವತದ ಮೇಲೆ ನಿಂತು, ಲಕ್ಷಸಂಖ್ಯೆಯಲ್ಲಿ ಹುಟ್ಟಿ ಬಂದಿದ್ದ ಮೈರಾವಣರ ಗುಂಪಿನ ಮೇಲೆ ಒಂದೇಸಮನೆ ಬಾಣ ಪ್ರಯೋಗ ಮಾಡಿಕೊಂಡಿದ್ದರು.





June 1977


ವೀರಹನುಮಾನ್

ರಾಮಬಾಣದಷ್ಟು ವೇಗವಾಗಿಯೇ ರಾಮನ ಬಂಟನಾದ ಹನುಮಂತನು ಚಂದ್ರಸೇನೆ ಬಂದಿಯಾಗಿರುವ ಮಹಾಭವನವನ್ನು ಸಮೀಪಿಸಿದನು. ಅದು ಪಚ್ಚೆಕಲ್ಲುಗಳಿಂದ ಅಲ್ಲಲ್ಲಿ ಮಣಿ ಮಾಣಿಕ್ಯಗಳನ್ನು ಹೊದುಗಿಸಿದ ಅದ್ಭುತ ಶಿಲ್ಪಗಳಿಂದ ರಾರಾಜಿಸುವ ಮಹಾಭವನ. ಅಷ್ಟೊಂದು ಕತ್ತಲೆಯಲ್ಲಿ ಕೂಡಾ ಆ ಭವನದಿಂದ ಹೊರಚೆಲ್ಲುವ ಹಸಿರುಕಾಂತಿಯಿಂದ ಎಲ್ಲೆಲ್ಲಾ ವಿಚಿತ್ರ ಸೌಂದರ್ಯವು ತುಂಬಿತ್ತು. ಮಧ್ಯೆ ಮಧ್ಯೆ ಅಲ್ಲಲ್ಲಿ ಕೂಡಿಸಿದ ಕೆಂಪುಕಲ್ಲುಗಳು ಕೆಂಪಗಿನ ಕಿರಣಗಳನ್ನು ಹೊರಡಿಸಿ ಚಿತ್ರವಿಚಿತ್ರ ಮಿಶ್ರ ಬಣ್ಣಗಳನ್ನು ಕುಣಿಸುತಿದ್ದುವು.

ಭವನದ ದ್ವಾರದ ಬಳಿಯಲ್ಲಿ ರಾಕ್ಷಸರಾರೂ ಕಾವಲಿರಲಿಲ್ಲ. ಎಲ್ಲರೂ ಕಾಳಿಕಾಲಯದ ಹತ್ತಿರ ನಡೆಯುವ ಮಹೋತ್ಸವದಲ್ಲಿ ಪಾಲುಗೊಳ್ಳಲು ಹೋಗಿದ್ದರು. ಹನುಮಂತನು ನಿರಾತಂಕವಾಗಿ ಭವನದ ಮಹಾದ್ವಾರದ ಬಳಿಗೆ ಹೋದನು. ಆ ದ್ವಾರದ ಮುಂದೆ ಕೆಂಪಗೆ ಹೊಳೆಯುವ ಕಣ್ಣುಗಳನ್ನು ತಿರುಗಿಸುತ್ತ, ಕಾಲುಗಳಿರುವ ಒಂದು ಭಯಂಕರ ರಕ್ಕಸಸರ್ಪವು ಅಲೆದಾಡಿಕೊಂಡಿತ್ತು. ಅದರ ಕಣ್ಣುತಪ್ಪಿಸಿ ಒಳಗೆ ಹೋಗುವಂತಿಲ್ಲ.

ಹನುಮಂತನು ಆ ಮಹಾ ಸರ್ಪವನ್ನು ನೋಡುವುದಕ್ಕೂ ಅದರ ಕಣ್ಣು ಅವನ ಮೇಲೆ ಬೀಳುವುದಕ್ಕೂ ಸರಿಹೋಯಿತು. ಕೂಡಲೇ ಸರ್ಪವು ಭುಸುಗುಡುತ್ತಾ ಆಷ್ಟೆತ್ತರಕ್ಕೆ ಎದ್ದುನಿಂತಿತು. ಅದರ ಮೂಗಿನ ಹೊರಳೆಗಳಿಂದ ಹೊಗೆಯೂ ಜ್ವಾಲೆಗಳೂ ಹೊರಡತೊಡಗಿದುವು. ಹನುಮಂತನು ಆ ರಕ್ಕಸ ಸರ್ಪವನ್ನು ಕೊಂದುಬಿಡುವ ಉದ್ದೇಶದಿಂದ ಲಂಘಿಸಲಿಕ್ಕಿರಲು, ಅದು ಅವನನ್ನು ನುಂಗಿಬಿಡಲು ಬಾಯಿತೆರೆದು ಮುಂದಕ್ಕೆ ಬರತೊಡಗಿತು. ಅದೇ ಹೊತ್ತಿಗೆ ಭವನದ ಮೇಲು ಭಾಗದಿಂದ ಕೋಮಲವಾದ ಸ್ತ್ರೀಕಂಠದಿಂದ ಹೊರಟ ಒಂದು ಆರ್ತನಾದವು ಕೇಳಿಬಂದಿತು.

ಇನ್ನು ಗುದ್ದಾಟದಿಂದ ಹೊತ್ತು ಕಳೆಯಬಾರದೆಂದುಕೊಂಡು ಹನುಮಂತನು ಮರುಕ್ಷಣವೇ



ಸೂಕ್ಷ್ಮ ರೂಪಧರಿಸಿ ಅದರ ಬಾಯಿಯೊಳಗೆ ಪ್ರವೇಶಿಸಿ ಗಂಟಲಲ್ಲಿಳಿದು ಅದರ ಹೊಟ್ಟೆಯನ್ನು ಸೀಳಿ ಕೊಂದು ಹಾಕಿ, ಭವನದೊಳಗೆ ಹೊಕ್ಕು ಮುಂದೆ ಓಡಿದನು. ಭವನದೊಳಗೆಲ್ಲಾ ಕತ್ತಲೆ, ಅಲ್ಲಲ್ಲಿ ಗೋಡೆಯ ಕೆಂಪು ವಜ್ರಗಳಿಂದ ಹೊರಡುವ ಕೆಂಪಗಿನ ಕಾಂತಿಗಳು ತೇಲಿಕೊಂಡಿದ್ದುವು. ಹನುಮಂತನು ಸ್ತ್ರೀ ಕಂಠದ ಆರ್ತನಾದ ಹೊರಡುವ ದಿಕ್ಕು ಯಾವುದೆಂದು ನೋಡುತ್ತಿರಲು, ಮೇಲಿನ ಅಂತಸ್ತಿನಿಂದ ಕೊರಡೆಯ ಛಡಿಗಳಿಂದ ಹೊರಡುವ ಛಳ್‌ಛಳ್ ಶಬ್ದವೂ, ಮತ್ತೊಮ್ಮೆ ಸ್ತ್ರೀಯ ಆರ್ತನಾದವೂ ಕೇಳಿಸಿತು.

ಹನುಮಂತನು ಸರಸರನೆ ಅಲ್ಲಿಗೆ ಹೋದನು. ಚಂದ್ರಸೇನೆಯನ್ನು ಬಂಧಿಸಿದ ಕೋಣೆಯನ್ನು ನೋಡಿದನು. ಕೋಣೆಯ ಬಾಗಿಲು ಒಳಗಿನಿಂದ ಭದ್ರಪಡಿಸಲಾಗಿತ್ತು. ಹನುಮಂತನು ಎತ್ತರವಾಗಿದ್ದ ಕಿಟಕಿಯ ಮೂಲಕ ಒಳಕ್ಕೆ ದೃಷ್ಟಿ ಹಾಯಿಸಿದನು.

ಆಗಲೇ ಮೂರ್ಛೆಯಿಂದ ಏಳುತ್ತಿದ್ದ ಚಂದ್ರಸೇನೆಯನ್ನು ಕ್ರೂರಳಾದ ಕಂಟಕಿ ರಾಕ್ಷಸಿ ಕೊರಡೆಯಿಂದ ಹೊಡೆಯುತ್ತ, "ಓಡೆ ಹಿಡಿದವಳೇ! ಪಾತಾಳ ಲಂಕೆಯ ಮಾರಿಯೇ! ಮೈರಾವಣನು ಬುದ್ಧಿಗೆಟ್ಟು ನಿನ್ನನ್ನು ಈ ಪಾತಾಳ ಲಂಕೆಗೆ ತಂದಿಟ್ಟಿದ್ದಾನೆ. ಬಾಯಿಬಿಡೇ! ಪಾತಾಳ ಲಂಕೆಗೆ ಯಾವನನ್ನು ತಂದಿಟ್ಟಿದ್ದೀಯೇ? ಹೇಳೇ! ಈಗಲೇ ಕೊಡಲಿಯಿಂದ ನಿನ್ನ ತಲೆ ಕಡಿದು ಹಾಕುತ್ತೇನೆ. ಅಷ್ಟೇಕೆ? ನಿನ್ನ ಕುತ್ತಿಗೆಗೆ ನನ್ನ ಕೈಯೇ ಸಾಕು. ಕುತ್ತಿಗೆ ಹಿಚುಕಿ ಕೊಲ್ಲುವುದೇ ನಿನಗೆ ತಕ್ಕ ಶಿಕ್ಷೆ!" ಎನ್ನುತ್ತಾ ಚಂದ್ರಸೇನೆಯ ಕುತ್ತಿಗೆಗೆ ಕೈಹಾಕಿದಳು.

ಹನುಮಂತನು ಕೂಡಲೇ ತನ್ನ ಬಾಲವನ್ನು ಬೆಳೆಯಿಸಿ ಕಿಟಕಿಯ ಮೂಲಕವಾಗಿ ಒಳಕ್ಕೆ ಕಳುಹಿಸಿದನು. ಕಂಟಕಿ ಚಂದ್ರಸೇನೆಯ ಕುತ್ತಿಗೆ ಹಿಚುಕುವುದರೊಳಗೆ ಹನುಮಂತನ ಬಾಲ ಆ ರಾಕ್ಷಸಿಯ ಕುತ್ತಿಗೆಯನ್ನು ಸುತ್ತಿ ಗಟ್ಟಿಯಾಗಿ ಒತ್ತಿ ಹಿಂದಕ್ಕೆಳೆಯಿತು. ಕಂಟಕಿ ಕಿಂ ಕಂ ಎನ್ನಲಾಗದೆ, ನಾಲಗೆಯನ್ನೂ ಕಣ್ಣುಗುಡ್ಡುಗಳನ್ನೂ ಹೊರಗೆ ಚಾಚಿ ಬಿದ್ದು ಹಾಗೆಯೇ ಪ್ರಾಣಬಿಟ್ಟಳು.

ಆಮೇಲೆ ಹನುಮಂತನು ಆ ಕೋಣೆಯ ಬಾಗಿಲನ್ನು ಒದ್ದು ಮುರಿದು ಒಳಗೆ ಪ್ರವೇಶಿಸಿದನು. ಅತ್ಯಾಶ್ಚರ್ಯದಿಂದ ನೋಡುತ್ತಿರುವ ಚಂದ್ರಸೇನೆಯ ಮುಂದೆ ಮೊಣಕಾಲೂರಿ ವಂದಿಸಿದನು ಹನುಮಂತ. ಅನಂತರ ಕೆಲವು ಮಾತುಗಳಿಂದ ನಡೆದ ಸಂಗತಿಯನ್ನು ಅವಳಿಗೆ ತಿಳಿಸಿ, "ಹೀಗಾಗಿದೆ. ಈಗ ಮೈರಾವಣನನ್ನು ಕೊಲ್ಲುವ ಉಪಾಯವನ್ನು ನೀನೇ ಹೇಳಬೇಕು." ಎಂದನು.

ರಾಮನ ಹೆಸರು ಕೇಳಿದ ಕೂಡಲೇ, ಕಂಟಕಿಯಿಂದುಂಟಾದ ಎಲ್ಲಾ ನೋವುಗಳೂ ಚಂದ್ರಸೇನೆಯನ್ನು ಬಿಟ್ಟು ಹೊರಟುಹೋದುವು. ಅವಳು ಆಯಾಸ ಪರಿಹಾರಮಾಡಿಕೊಂಡವಳಾಗಿ, "ಹನು

ಮಂತಾ! ನಿನಗೆ ಮೈರಾವಣನ ಪ್ರಾಣದ ರಹಸ್ಯವನ್ನು ಹೇಳುತ್ತೇನೆ. ಆದರೆ ಮೊದಲು ನೀನು ನನಗೊಂದು ವಾಗ್ದಾನ ಮಾಡಬೇಕು. ಮೈರಾವಣನ ಸಂಹಾರವಾದ ಮೇಲೆ ನಿನ್ನ ಯಜಮಾನನನ್ನು ನನ್ನ ಹತ್ತಿರ ಕರೆದುಕೊಂಡು ಬರಬೇಕು" ಎಂದಳು.

ಹಾಗೆಯೇ ರಾಮನನ್ನು ಕರೆದುಕೊಂಡು ಬರುತ್ತೇನೆಂದು ಹನುಮಂತನು ಚಂದ್ರಸೇನೆಗೆ ವಾಗ್ದಾನ ಮಾಡಿದನು. ಆ ಮೇಲೆ ಚಂದ್ರಸೇನೆ ಹನುಮಂತನಿಗೆ ಮೈರಾವಣನ ಪಂಚಪ್ರಾಣಗಳು ಭದ್ರವಾಗಿರುವ ಸ್ಥಳವನ್ನು ಕುರಿತು ಹೇಳಿದಳು. ಅಷ್ಟು ತಿಳಿದ ಮೇಲೆ ಹನುಮಂತನು ಆ ಕೋಣೆಯಿಂದ ಹೊರಗೆ ಬಂದು, ಆಕಾಶಕ್ಕೆ ಉಡ್ಡಾಣ ಮಾಡಿದನು. ಈಗ ಅವನು ಆಕಾಶಮಾರ್ಗದಲ್ಲಿ ಹೋಗುವುತ್ತಿರುವುದು ಸಪ್ತಮ ಸಮುದ್ರ ಮಧ್ಯದಲ್ಲಿರುವ ದ್ವೀಪಕ್ಕೆ. ಅಲ್ಲಿ ಅವನು ಜ್ವಾಲಾಮುಖಿ ಎಂಬ ಪದ್ಮವನ್ನು ತಲಪಿದನು. ಧಗಧಗನೆ ಉರಿಯುವ ಜ್ವಾಲೆಗಳೇ ಆ ಪದ್ಮಕ್ಕೆ ದಳಗಳಾಗಿದ್ದುವು. ಹನುಮಂತನು ಅಗ್ನಿದೇವನನ್ನು ಸ್ಮರಿಸುತ್ತ ಆ ಜ್ವಾಲಾ ಪದ್ಮದ ಮಧ್ಯಕ್ಕೆ ಹಾರಿ, ಅದರ ದಂಟಿನ ಮೂಲಕವಾಗಿ ಜಾರುತ್ತಾ ಮಕರಬಿಲವನ್ನು ಸೇರಿದನು.


ದಪ್ಪಗಿನ ನೀಲಬಣ್ಣದ ಕತ್ತಲೆ ತುಂಬಿದ ಆ ಪ್ರದೇಶದಲ್ಲಿ ಹೊಳೆಯುವ ಭಾರೀ ಭಾರೀ ಸರ್ಪಗಳು ಭುಸುಗುಟ್ಟಿಕೊಂಡಿದ್ದುವು. ಅನೇಕ ಪಿಶಾಚಗಣಗಳೂ ಹುಂಕರಿಸಿಕೊಂಡು ಎದ್ದುಬಂದುವು. ಹನುಮಂತನು ನೆಲ ಒಡೆಯುವ ಹಾಗೆ ದೊಡ್ಡದೊಂದು ಸಿಂಹನಾದ ಮಾಡಿ ತನ್ನ ದಾರಿಗೆ ಅಡ್ಡವಾಗಿದ್ದ ಆ ದುಷ್ಟ ಶಕ್ತಿಗಳನ್ನೆಲ್ಲಾ ತನ್ನ ಮುಷ್ಟಿಘಾತಗಳಿಂದ ಕುಟ್ಟಿ ಹೊಡೆದು ಗುದ್ದಿಬೀಳಿಸಿ, ಒಂದು ಕರಾಳ ಗುಹೆಯೊಳಗೆ ನುಗ್ಗಿದನು. ಅವನ ಶಕ್ತಿಯನ್ನು ರುಚಿನೋಡಿದ ಭೂತಗಳೆಲ್ಲಾ ದೂರದೂರ ಕಾಲಿಗೆ ಬುದ್ಧಿ ಹೇಳಿದುವು. ಆದರೆ ಗುಹೆಯಷ್ಟು ಎತ್ತರಕ್ಕಿದ್ದ



ಒಂದು ಕರಿಯ ಭಯಂಕರಾಕಾರವು, ಬೆಳ್ಳಗೆ ಹೊಳೆಯುವ ಕೋರೆಹಲ್ಲುಗಳನ್ನು ತೋರಿಸುತ್ತ, ಕೆಂಗಣ್ಣುಗಳನ್ನು ತಿರುಗಿಸುತ್ತ ದಾರಿಗೆ ಅಡ್ಡವಾಗಿ ಗುಡ್ಡದಂತೆ ನಿಂತಿತ್ತು. ಅದು ಹನುಮಂತನನ್ನು ನೋಡಿ ಹುಬ್ಬು ಕುಣಿಸುತ್ತ ವಿಕಟಾಟ್ಟಹಾಸ ಮಾಡುವುದನ್ನು ನೋಡಿ ಹನುಮಂತನು "ಯಾರು ನೀನು? ಬದುಕಬೇಕಾಗಿದ್ದರೆ ದಾರಿ ಬಿಡು!" ಎಂದನು.

ಆ ಭಯಂಕರಾಕಾರವು ಸಿಡಿಲು ಅಪ್ಪಳಿಸುವ ಹಾಗೆ ಭಡಭಡನೆ ನಕ್ಕು "ನಾನು ಬೇತಾಳನು! ಭೂತಪ್ರೇತ ಪಿಶಾಚಿಗಳಿಗೆ ನಾಯಕನು! ನೀನಾರು? ಇಲ್ಲಿಯವರೆಗೆ ಬರಬಲ್ಲವರು ಇಬ್ಬರೇ ಇದ್ದಾರೆ. ಒಬ್ಬನು ಮೈರಾವಣ. ನೀನು ಆ ಎರಡನೇ ಮಹಾ ಶಕ್ತಿವಂತನೇ ಆಗಿರಬೇಕು!" ಎಂದು ಪುನಃ ನಕ್ಕಿತು.

ಹನುಮಂತನೂ ನಕ್ಕು, "ಬೇತಾಳನೆಂದರೆ ನೀನೇನಾ? ಸ್ಮಶಾನಗಳಲ್ಲಿ ಸ್ವೇಚ್ಛೆಯಾಗಿ ತಿರುಗಾಡಿಕೊಂಡಿರುವ ನಿನಗೆ ಈ ಕತ್ತಲೆಯ ಗುಹೆಯೊಳಗೆ



ಬಿದ್ದಿರಬೇಕಾದ ದುರವಸ್ಥೆ ಏಕೆ ಬಂತು ? ಛೀ, ನಿನ್ನ ಹತ್ತಿರ ಮಾತಾಡುವ ಅಗತ್ಯ ನನಗೇನಿದೆ ? ದಾರಿ ಬಿಡು. ಇಲ್ಲದಿದ್ದರೆ ನನ್ನ ಶಕ್ತಿ ಎಂತಹುದೆಂದು ತೋರಿಸಬೇಕಾದೀತು '' ಎಂದನು.

ಬೇತಾಳವು ಹೇಳನೆ ಮಾಡುವಂತೆ ನೆಗಾಡಿ, '' ಎಲ್ಲಿ ? ಆ ಶಕ್ತಿ ಎಂತಹುದೆಂದು ನೋಡಿಬಿಡುತ್ತೇನೆ.'' ಎಂದಿತು.

ಆ ಮರುಕ್ಷಣವೇ ಹನುಮಂತನು ತನ್ನ ಮುಷ್ಟಿಯಿಂದ ಬೇತಾಳವನ್ನು ತಿವಿದನು. ಆ ಪೆಟ್ಟಿಗೆ ಅಷ್ಟು ದೊಡ್ಡ ಬೇತಾಳವು ನೆಲಕ್ಕೆ ಬಿದ್ದು, ಹನುಮಂತನಿಗೆ ನಮಸ್ಕಾರ ಮಾಡುತ್ತ, '' ಸ್ವಾಮೀ ! ವೀರಹನುಮಾನ್ ! ಧನ್ಯನಾದೆ. ಸಣ್ಣದೊಂದು ಅಪಚಾರದಿಂದ ಈ ಗುಹೆಯಲ್ಲಿ ಬಿದ್ದಿರುವಂತೆ ಶಾಪ ಪಡೆದೆ. ನಿನ್ನ ಸ್ಪರ್ಶದಿಂದ ಶಾಪವಿಮುಕ್ತಿಯಾಗುವುದೆಂದು ಶಿವನು ಹೇಳಿದ್ದಾನೆ. ಹಾಗೇ ಆಯಿತು ! ಜೈ ವೀರ ಹನುಮಾನ್ !'' ಎಂದು ಹೇಳಿ ಮಾಯವಾಯಿತು.


ಅಲ್ಲಿಂದ ಹನುಮಂತನು ಗುಹೆಯ ಮಧ್ಯಕ್ಕೆ ಹೋದನು. ಅಲ್ಲಿ ಉನ್ನತವಾದೊಂದು ಶಿಲಾವೇದಿಕೆಯ ಮೇಲೆ ಗುಂಡಗಿನ ರತ್ನಪೇಟಿಕೆ ಕಂಡು ಬಂತು. ಅದರ ಮುಚ್ಚಳದ ಮೇಲೆ ಅಗ್ನಿ ಶಿಖೆ ಪ್ರಜ್ವಲಿಸಿಕೊಂಡಿತ್ತು.

ಹನುಮಂತನು ಅದರ ಸಮೀಪಕ್ಕೆ ಹೋಗುತ್ತಲೇ, ಸಣ್ಣದಾಗಿದ್ದ ಅಗ್ನಿ ಜ್ವಾಲೆಗಳು ಪ್ರಚಂಡವಾಗಿ ಏಳತೊಡಗಿದವು. ಆ ಜ್ವಾಲೆಯ ನಾಲಿಗೆಗಳು ನೀಳನೀಳವಾಗಿ ಹನುಮಂತನನ್ನು ಸುತ್ತಿ ಸುಡುವಂತೆ ಬರತೊಡಗಿದುವು: ಕೂಡಲೇ ಹನುಮಂತನು ಬಲವಾಗಿ ಗಾಳಿಯನ್ನು ಹೀರಿಕೊಂಡು ಆ ಬೆಂಕಿ ಉರಿಯ ಕಡೆಗೆ ಪ್ರಳಯ ಮಾರುತದಂತೆ ಊದಿದನು. ಆ ರಭಸದ ಗಾಳಿಗೆ ಬೆಂಕಿಯ ಉರಿಗಳು ತಗ್ಗುವುದಕ್ಕೆ ಬದಲಾಗಿ ಇನ್ನಿಷ್ಟು ತೀವ್ರಗೊಂಡು ಅವನನ್ನು ಮುತ್ತಿದುವು.

ಹನುಮಂತನು ಕೈಗಳನ್ನೆತ್ತಿ ನಮಸ್ಕಾರ ಮಾಡುತ್ತ, '' ಹೇ ! ಅಗ್ನಿದೇವಾ ! ನಾನು ನಿನ್ನ ಮಿತ್ರನಾದ ವಾಯುವಿನ ಮಗ. ನನ್ನನ್ನು ಅನುಗ್ರಹಿಸು. ರಾಮಕಾರ್ಯವನ್ನು ಸಾಧಿಸು !'' ಎಂದು ಅಗ್ನಿಯನ್ನು ಧ್ಯಾನಿಸಿದನು. ಕೂಡಲೇ ಅಗ್ನಿಯ ಜ್ವಾಲೆಗಳು ಗಪ್ಪನೆ ಆರಿಹೋದುವು.

ಆಗ ರತ್ನಪೇಟಿಕೆಯ ಮೇಲಿರುವ ಜ್ಯೋತಿಯಿಂದ ಈ ಕೆಳಗಿನ ಮಾತುಗಳು ಹೊರಟುವು: '' ಅಪ್ಪಾ ಮಾರುತೀ ! ನಿನಗೊಂದು ಮುಖ್ಯವಿಷಯ ಹೇಳಬೇಕೆಂತಲೇ ನಾನು ಹೀಗೆ ವಿಜೃಂಭಿಸಿದೆ. ನೀನು ಈ ಪೇಟಿಕೆಯೊಳಗಿರುವ ಐದು ತುಂಬಿಗಳನ್ನು ಒಂದೇ ಸಾರಿ ಸಂಹರಿಸ ಬೇಕಾದರೆ ಐದು ಮುಖಗಳನ್ನು ತಂದುಕೊಂಡು ಅವುಗಳನ್ನು ನಿನ್ನ ಐದು ಬಾಯಿಗಳೊಳಗೆ ಸೆಳೆದು ಅಗಿದು ಉಗುಳಬೇಕು. ನೆನಪಿರಲಿ ! ನೆನೆದ ತಕ್ಷಣವೇ ನಿನಗೆ ಐದು ಮುಖಗಳೂ ಬರುತ್ತವೆ !'' ಹನುಮಂತನು ಅಗ್ನಿಗೆ ನಮಸ್ಕಾರ ಮಾಡಿ ತುಂಬಿ





ಗಳಿರುವ ರತ್ನಪೇಟಿಕೆಯನ್ನು ತೆಗೆದುಕೊಂಡು ವಾಯು ವೇಗದಿಂದ ರಾಮಲಕ್ಷ್ಮಣರಿರುವ ಸ್ಥಳಕ್ಕೆ ಬಂದನು.

ಅವರಿಬ್ಬರೂ ಇನ್ನೂ ಅಗಣಿತ ಮೈರಾವಣರೊಂದಿಗೆ ಹೋರಾಡಿಕೊಂಡೇ ಇದ್ದರು. ಅವರಿಬ್ಬರ ಕೈಗಳಿಂದ ಎಡೆಬಿಡದೆ ಬಾಣಗಳ ಮಳೆಯೇ ಸುರಿಯುತ್ತಿದ್ದಿತು. ಹನುಮಂತನು ಗಟ್ಟಿಯಾಗಿ ಸಿಂಹನಾದ ಮಾಡುತ್ತ, ಮೈರಾವಣನ ಇದಿರಿನಲ್ಲಿ ನಿಂತು, ರತ್ನ ಪೇಟಿಕೆಯನ್ನು ಎತ್ತಿ ಹಿಡಿದು, "ಎಲೋ ! ಪಾತಾಳ ಲಂಕೇಶ್ವರಾ ! ನಿನ್ನ ಪಂಚಪ್ರಾಣಗಳಿರುವ ಪೇಟಿಕೆ ಇದೋ ನನ್ನ ಕೈಯಲ್ಲಿ ! ಈಗಲಾದರೂ ಬುದ್ಧಿ ತಂದುಕೊಂಡು, ರಾಮಲಕ್ಷ್ಮಣರ ಮುಂದೆ ಶರಣಾಗಿ ಜೀವದಾನ ಬೇಡು !" ಎಂದನು.

ತನ್ನ ಪಂಚಪ್ರಾಣಗಳಿರುವ ರತ್ನಪೇಟಿಕೆಯನ್ನು ಹನುಮಂತನ ಕೈಯಲ್ಲಿ ನೋಡಿ ಮೈರಾವಣನು ಕಳವಳಪಟ್ಟನು. ತನ್ನ ಶರೀರವು ಬಂಡೆಕಲ್ಲುಗಳ ಮಧ್ಯೆ ಜಿಬ್ಬಿಯಾಗುವಂತೆ ನೋಯುತ್ತಿರಲು, "ಏನು ಕೆಲಸ ಮಾಡಿಬಿಟ್ಟೆಯೋ ಪಾಮರಾ ! ವಾನರಾ ! ಪೇಟಿಕೆಯೊಳಗೆ ಪ್ರಾಣಗಳು ನನ್ನವಾದರೂ ಅವು ರಾಮಲಕ್ಷ್ಮಣರಿಗೂ, ನಿನಗೂ ಮೃತ್ಯುವೆಂದುಕೋ. ಆ ಪೇಟಿಕೆಯನ್ನು ತೆರೆದರೆ ಸಾಕು. ಆ ಪ್ರಾಣಗಳು ಎಗರಿಬಂದು ನಿನ್ನನ್ನು ಚುಚ್ಚಿ ನಿನ್ನ ಶರೀರವನ್ನು ಕಾಲಕೂಟ ವಿಷದಿಂದ ತುಂಬಿಸಿ ನಿನ್ನ ಸರ್ವಾಂಗವನ್ನೂ ದಗ್ಧಮಾಡುತ್ತವೆ. ನೀನು ಮೂವರ ಮೃತ್ಯುವನ್ನೂ ಇಲ್ಲಿಗೆ ಹೊತ್ತುಕೊಂಡು ಬಂದಿರುವಿ ! ಬದುಕಬೇಕೆಂಬ ಆಶೆಯಿದ್ದರೆ ಆ ಪೆಟ್ಟಿಗೆಯನ್ನು ಕೆಳಗಿಡು" ಎಂದನು.

ಹನುಮಂತನು ಆ ಮಾತುಗಳನ್ನು ಹೇಳಿ ಅಟ್ಟಹಾಸದಿಂದ ನಕ್ಕು, "ಮೂರ್ಖ ಮೈರಾವಣಾ ! ನಿದ್ದೆಯಲ್ಲಿರುವ ರಾಮಲಕ್ಷ್ಮಣರನ್ನು ಮಾಯೆಯಿಂದ ಇಲ್ಲಿಗೆ ತಂದುದಕ್ಕೆ ಮರಣವೇ ಪ್ರತಿಫಲವಾಯಿತು ! ನಿನಗೆ ಸಾವು ಖಂಡಿತ. ಅದೂ ಈಗಲೇ. ಸಾಯುವ ಮೊದಲು ಇನ್ನೇನಾದರೂ ಮಾಯಮಂತ್ರಗಳಿದ್ದರೆ ಪ್ರದರ್ಶಿಸಿಬಿಡು" ಎಂದನು.

ಹನುಮಂತನ ನಿರ್ಭಯತೆಯನ್ನು ನೋಡಿ ಮೈರಾವಣನು ಹೆದರಿ ಕೈಕಾಲುಗೆಟ್ಟು "ಕಂಟಕೀ ! ಕಂಟಕೀ ! ನೀನೆಲ್ಲಿ ? ಕೂಡಲೇ ಚಂದ್ರಸೇನೆಯನ್ನು ಕೊಲ್ಲು !" ಎಂದು ನೆಲಬಿರಿಯುವಷ್ಟು ಕರ್ಕಶವಾಗಿ ಕೂಗಿದನು.

ಆಗ ಹನುಮಂತನು ಮಂದಹಾಸ ಬೀರುತ್ತ, "ಎಲವೋ ಮಾಯಾವಿಯೇ ! ಆ ಕಂಟಕಿ ನಿನಗಿಂತಲೂ ಮೊದಲೇ ಮೃತ್ಯುಲೋಕಕ್ಕೆ ಹೋಗಿಬಿಟ್ಟಳು. ಅವಳಿಗೆ ನಿನಗಿಂತಲೂ ಹೆಚ್ಚು ಮುನ್ನೋಟವಿದೆ. ಅಲ್ಲಿ ನಿನ್ನನ್ನೇ ಕಾದುಕೊಂಡಿದ್ದಾಳೆ. ನೀನು ಹೇಳುವ ಮೊದಲೇ ಅವಳು ಚಂದ್ರಸೇನೆಯನ್ನು ಕೊಲ್ಲಲು ನೋಡಿದಳು. ಆಗಲೇ ಆ ದುಷ್ಟಳ ಆಯುಷ್ಯ ಮುಗಿದುಹೋಯಿತು !" ಎಂದನು. ಈಗ ಮೈರಾವಣನಿಗೆ ನಡೆದುದೆಲ್ಲಾ ಅರ್ಥವಾಗಿ

ಹೋಯಿತು. ಅವನು ಹುಚ್ಚನಹಾಗೆ ಒಂದು ಕೂಗು ಹಾಕಿ ಕೈಗೆಸಿಕ್ಕಿದ ಪ್ರತಿ ಆಯುಧವನ್ನೂ ತೆಗೆದು ಕೊಂಡು ಬಾಣದ ಹಾಗೆ ಪ್ರಯೋಗಿಸುತ್ತ ರಾಮ ಲಕ್ಷ್ಮಣರ ಕಡೆಗೆ ಧಾವಿಸಿದನು. ನಡುನಡುವೆ ಅವನು ತನ್ನ ಶರೀರವನ್ನು ತಾನೇ ಗಾಯಪಡಿಸಿ ರಕ್ತ ಸುರಿಸುತ್ತ, ಮೈರಾವಣರನ್ನು ತಂಡೋಪತಂಡವಾಗಿ ಸೃಷ್ಟಿಸಿದನು. ಅಂತಹ ಮೈರಾವಣ ಸಮೂಹ ರಾಮಲಕ್ಷ್ಮಣರನ್ನು ಮುತ್ತಿತು. ಅದನ್ನು ನೋಡಿ ಹನುಮಂತನು ಶಿವನನ್ನು ಸ್ಮರಿಸಿ ಐದು ಮುಖ ಗಳನ್ನು ಪಡೆದು ಪಂಚಮುಖಾಂಜನೇಯನಾಗಿ ಅವತರಿಸಿದನು.

ಹನುಮಂತನು ಐದು ಮುಖಗಳಿಂದಲೂ ಒಂದೇ ಸಾರಿ ಪ್ರಳಯಹುಂಕಾರ ಮಾಡಿ ರತ್ನಪೇಟಿಕೆಯ ಮುಚ್ಚಳವನ್ನು ಕಿತ್ತುಬಿಟ್ಟನು. ಮರುಕ್ಷಣ ಗುಡುಗು ಸಿಡಿಲುಗಳು ಬಿದ್ದಹಾಗೆ ಝೇಂಕರಿಸುತ್ತ ಕೆಂಪಗೆ ಕಣ್ ಚುಚ್ಚುವ ಐದು ತುಂಬಿಗಳು ಮೇಲೆ ಹಾರಿ ಅವನನ್ನು ಚುಚ್ಚಲು ಬಂದುವು. ಹನುಮಂತನು ಒಂದೊಂದು ಮುಖದಿಂದಲೂ ಗಟ್ಟಿಯಾಗಿ ಗಾಳಿಯನ್ನು ಒಳಕ್ಕೆ ಶ್ವಾಸಿಸಲು ಐದು ತುಂಬಿಗಳೂ ಒಂದೇ ಹೊತ್ತಿಗೆ ಅವನ ಬಾಯಿಯೊಳಗೆ ಸೆಳೆಯಲ್ಪಟ್ಟುವು. ಹನು ಮಂತನು ಐದು ಮುಖಗಳಿಂದಲೂ ಅವುಗಳನ್ನು ಬಲವಾಗಿ ಜಗಿದು ಕೊಂದು ನೆಲದ ಮೇಲೆ ಉಗುಳಿ ಬಿಟ್ಟನು. ಮರುಕ್ಷಣದಲ್ಲಿ ನೋಡಿದರೆ ಮಾಯಾ ಮೈರಾವಣರ ಸಮೂಹವೆಲ್ಲಾ ನೆಲದಲ್ಲಿ ಹೆಣ ವಾಗಿ ಬಿದ್ದುವು. ಅಸಲು ಮೈರಾವಣನೊಬ್ಬನೇ ಅಲ್ಲಿ ಉಳಿದಿದ್ದ.

ಹೀಗೆ ತನ್ನ ಬಳಗವೆಲ್ಲಾ ನಾಶವಾದರೂ ಮೈರಾವಣನು ಓಡಿಹೋಗಲು ಪ್ರಯತ್ನ ಮಾಡ ಲಿಲ್ಲ. ಅವನು ರಾಮಲಕ್ಷ್ಮಣರ ಮೇಲೆ ವಿವಿಧವಾದ ಆಯುಧಗಳನ್ನೂ, ಬಾಣಗಳನ್ನೂ ಪ್ರಯೋಗಿಸಿ ಕೊಂಡೇ ಇದ್ದನು. ಆಗ ರಾಮನು ಒಂದು ಮಹಾ



ಅಸ್ತ್ರದಿಂದ ಮೈರಾವಣನ ತಲೆಕಡಿದು ನೆಲಕ್ಕೆ ಬೀಳಿಸಿ ಅವನನ್ನು ಕೊಂದುಹಾಕಿದನು.

ನಾಲ್ಕು ದಿಕ್ಕುಗಳಿಂದಲೂ "ಜಯಜಯರಾಮ" ಎಂಬ ಧ್ವನಿ ಹೊರಟಿತು. ಪಂಚಮುಖಾಂಜ ನೇಯನ ಮೇಲೆಯೂ, ರಾಮಲಕ್ಷ್ಮಣರ ಮೇಲೆಯೂ ಪುಷ್ಪವೃಷ್ಟಿಯಾಯಿತು. ಬ್ರಹ್ಮಾದಿ ದೇವತೆಗಳೂ ಶಿವನೂ ಅಲ್ಲಿಗೆ ಬಂದರು.

ಬ್ರಹ್ಮನು ರಾಮನೊಂದಿಗೆ, "ಈ ಮೈರಾವಣನು ಕಾಲನೇಮಿಯ ಅಂಶದಿಂದ ಹುಟ್ಟಿದವನು. ಹನು ಮಂತನ ಸಹಾಯದಿಂದ ನಿನ್ನ ಕೈಯಲ್ಲಿ ಅವನು ಸತ್ತ. ಹನುಮಂತನು ಶಿವನ ಅಂಶದಿಂದ ಹುಟ್ಟಿದವನಾದುದ ರಿಂದಲೇ ಮಹಾ ಮಾಯಾವಿಯಾದ ಮೈರಾವಣನ ಸಂಹಾರಕ್ಕೆ ಅಗತ್ಯವಾದ ಆ ರತ್ನ ಪೇಟಿಕೆಯನ್ನು ಸಪ್ತಮ ಸಮುದ್ರದ ಮಧ್ಯದಿಂದ ತೆಗೆದು ಕೊಂಡು ಬರಲು ಶಕ್ತನಾದನು" ಎಂದು ಹೇಳಿದನು. ಶಿವನು ಹನುಮಂತನಿಗೆ ಆಶೀರ್ವಾದ ಮಾಡುತ್ತ,

"ಹನುಮಂತ, ನಿನ್ನ ಶಕ್ತಿ ಯುಕ್ತಿ ಬಲ ಪರಾಕ್ರಮಗಳು ಅಪಾರವಾದವು. ಮೈರಾವಣ ಸಂಹಾರವೆಂದರೆ ಸಾಮಾನ್ಯ ವಿಷಯವಲ್ಲ. ಯಾರಿಂದಲೂ ಸಾಧ್ಯವಾಗದ ಕಾರ್ಯಗಳನ್ನು ಬಹಳ ಸಾಮರ್ಥ್ಯದಿಂದ ನೇರವೇರಿಸಿರುವಿ. ನಿನ್ನ ಈ ಪಂಚಮುಖಾಂಜನೇಯ ಸ್ವರೂಪವನ್ನು ಸ್ಮರಿಸಿದವರಿಗೆ ಭೂತ ಪಿಶಾಚಾದಿಗಳಿಂದ ಯಾವ ಹಾನಿಯೂ ಬರುವುದಿಲ್ಲ" ಎಂದನು.


ಹನುಮಂತನು ತನ್ನ ಪಂಚಮುಖದ ರೂಪವನ್ನು ಉಪಸಂಹರಿಸಿಕೊಂಡು ಬ್ರಹ್ಮನಿಗೂ ಶಿವನಿಗೂ ಪ್ರಣಾಮ ಮಾಡಿದನು. ಬ್ರಹ್ಮನೂ ಶಿವನೂ ಇತರ ದೇವತೆಗಳೂ ರಾಮಲಕ್ಷ್ಮಣರಿಗೆ ಶುಭಾಶೀರ್ವಾದಗಳನ್ನು ಮಾಡಿ ಹೊರಟುಹೋದರು.

ಬ್ರಹ್ಮನು ಹೊರಟುಹೋಗುವ ಮೊದಲು, ರಾಮನನ್ನು ಕುರಿತು, ಪಾತಾಳ ಲಂಕಾರಾಜ್ಯಕ್ಕೆ ಮತ್ಸ್ಯವಲ್ಲಭನನ್ನು ಅಧಿಪತಿಯನ್ನಾಗಿ ಮಾಡಬೇಕೆಂದು ಆದೇಶವಿತ್ತಿದ್ದನು. ಅದರಂತೆ ರಾಮನು ಮತ್ಸ್ಯವಲ್ಲಭನನ್ನು ಕರೆಯಿಸಿ, ಅವನನ್ನು ಪಾತಾಳ ಲಂಕೆಗೆ ರಾಜನನ್ನಾಗಿ ಅಭಿಷೇಕಿಸಿದನು.

ಅಂತಹ ಕೆಲಸಗಳೆಲ್ಲಾ ಮುಗಿದ ಮೇಲೆ ಹನುಮಂತನು ತುಂಬ ವಿನಯದಿಂದ ತಾನು ಚಂದ್ರಸೇನೆಗೆ ಮಾಡಿದ ವಾಗ್ದಾನವನ್ನು ಹೇಳಿ, "ರಾಮಾ, ಆ ಚಂದ್ರಸೇನೆಯ ಸಹಾಯವಿಲ್ಲದಿರುತ್ತಿದ್ದರೆ ನಾನು ಮೈರಾವಣನ ಪ್ರಾಣಗಳಿರುವ ಸ್ಥಳವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಮೈರಾವಣ ಸಂಹಾರವಾದ ಮೇಲೆ ನಿನ್ನನ್ನು ಅವಳ ಬಳಿಗೆ ಕರೆದುಕೊಂಡು ಬರುವುದಾಗಿ ವಾಗ್ದಾನ ಮಾಡಿದ್ದೇನೆ. ಈಗ ನನ್ನ ವಾಗ್ದಾನವನ್ನು ನೆರವೇರಿಸುವುದು ನಿನ್ನ ಭಾರವಾಗಿದೆ. ದಯಮಾಡಬೇಕು" ಎಂದು ಕೈ ಜೋಡಿಸಿದನು.

ರಾಮನು ಸ್ವಲ್ಪ ಹೊತ್ತು ಮೌನವಾಗಿ ಆಲೋಚನೆ ಮಾಡಿದನು. ಅವನ ಆಲೋಚನೆಯ ರಹಸ್ಯವು ಹನುಮಂತನಿಗೆ ಗೊತ್ತಾಯಿತು. ಅವಳು ರಾಮನನ್ನೇ ಪತಿಯಾಗಿ ವರಿಸಿಕೊಂಡವಳು. ಅದು ಈ ಜನ್ಮದಲ್ಲಿ ಸಾಧ್ಯವಿಲ್ಲದ ಮಾತು. ಇದನ್ನು ಗ್ರಹಿಸಿದ ಹನುಮಂತನು "ರಾಮಾ, ನಿನ್ನ ವ್ರತ ಭಂಗವಾಗದಂತೆ ನಾನು ನೋಡಿ ಕೊಳ್ಳುತ್ತೇನೆ" ಎಂದು ಮೆಲ್ಲನೆ ಹೇಳಿದನು. "ಹಾಗಾದರೆ ಹೋಗೋಣ ನಡೆ" ಎಂದನು ರಾಮ ಮುಗುಳುನಗುಸೂಸುತ್ತ.

ಹನುಮಂತನು ಅತ್ಯಂತ ಸಂತೋಷದಿಂದ ಚಂದ್ರಸೇನೆಯಿರುವ ಮಂದಿರಕ್ಕೆ ನಡೆಯಲು, ರಾಮಲಕ್ಷ್ಮಣರು ಕಿರುನಗುವಿನೊಂದಿಗೆ ಅವನನ್ನು ಅನುಸರಿಸಿದರು.





July 1977

ವೀರಹನುಮಾನ್


ಅಂತೂ ಕಡೆಗೆ ರಾಮಲಕ್ಷ್ಮಣರು ಯುದ್ಧದಲ್ಲಿ ಮೈರಾವಣನನ್ನು ಕೊಂದುಬಿಟ್ಟರೆಂಬ ಸಮಾಚಾರವು ಸುವರ್ಚಲಾದೇವಿಯ ಮೂಲಕವಾಗಿ ಚಂದ್ರಸೇನೆಗೆ ಗೊತ್ತಾಯಿತು. ಅದನ್ನನುಸರಿಸಿ ಪಾತಾಳಲಂಕೆಗೆ ರಾಜನಾಗಿ ಮತ್ಸ್ಯವಲ್ಲಭನು ಪಟ್ಟಾಭಿಷಿಕ್ತನಾದ ನೆಂದೂ ಸುವರ್ಚಲಾದೇವಿ ಚಂದ್ರಸೇನೆಗೆ ತಿಳಿಸಿದಳು.

ಮೈರಾವಣನ ಬಂಧನದಿಂದ ತನಗೆ ಪೂರ್ಣ ಬಿಡುಗಡೆಯಾಯಿತೆಂದು ಸಂತೋಷದಲ್ಲಿದ್ದ ಚಂದ್ರ ಸೇನೆಯೊಂದಿಗೆ ಸುವರ್ಚಲೆ, "ಅಮ್ಮಾ, ನೀನು ಅದೃಷ್ಟವಂತಳು. ಮೈರಾವಣ ಸಂಹಾರದಿಂದ ವಿಜಯಶಾಲಿಯಾದ ರಾಮಚಂದ್ರನು ನೇರಾಗಿ ನಿನ್ನ ಭವನದ ಕಡೆಗೇ ಬರುತ್ತಿದ್ದಾನೆ" ಎಂದಳು.

ಈ ಶುಭವಾರ್ತೆಗಳನ್ನು ಹೇಳಿ ಸುವರ್ಚಲಾದೇವಿ ತನ್ನ ನಿವಾಸಕ್ಕೆ ಹೊರಟುಹೋದಳು. ಚಂದ್ರಸೇನೆ ತನ್ನ ಹೃದಯದಲ್ಲಿ ತುಂಬಿಬರುವ ಆನಂದದ ಭರ ವನ್ನು ತಾಳಲಾಗದೆ ತುಂಬ ಸಂಭ್ರಮಿಸಿದಳು. ರಾಮ ನಿಗೆ ತಕ್ಕ ವಿಧವಾಗಿ ಸ್ವಾಗತಮಾಡಲು ತನಗೆ ತೋರಿ ದಂತ ಸನ್ನಾಹಗಳಿಗೆ ತೊಡಗಿದಳು. ಮೊದಲು ತಾನಿರುವ ಮಂದಿರಕ್ಕೆ ತಳಿರು ತೋರಣಗಳನ್ನು ಕಟ್ಟಿದಳು. ಚಂದನ, ತಾಂಬೂಲ, ಅಭಿಷೇಕಜಲ ನೈವೇದ್ಯ ಪದಾರ್ಥಗಳು ಮೊದಲಾದುವನ್ನು ಸಿದ್ಧ ಪಡಿಸಿದಳು. ಶಯನಾಗಾರದ ಹಂಸತೂಲಿಕಾತಲ್ಪದ ಮೇಲೆ ಪುಷ್ಪಗಳನ್ನು ಚೆಲ್ಲಿದಳು. ಪನ್ನೀರು ಸುಗಂಧ ದ್ರವ್ಯಗಳನ್ನು ಅಣಿಗೊಳಿಸಿದಳು.

ಎಲ್ಲಾ ಮುಗಿದಮೇಲೆ ಅವಳು ಬಂಗಾರದ ಹರಿವಾಣದಲ್ಲಿ ಬಿಡಿಹೂಗಳು, ಹೂಮಾಲೆ, ಪನ್ನೀರು ಕಲಶಗಳನ್ನಿಟ್ಟುಕೊಂಡು, ರಾಮನ ಆಗಮನವನ್ನು ನೋಡುತ್ತ ಬಾಗಿಲಬಳಿಯಲ್ಲಿ ನಿಂತಳು. ಕೆಲವು ನಿಮಿಷಗಳ ಮೇಲೆ, ಮುಂದಿನಿಂದ ಹನುಮಂತನೂ, ಅವನಹಿಂದೆ ರಾಮನೂ ಬರುವ ಮಂಗಳದೃಶ್ಯ ಅವಳ ಕಣ್ಣಿಗೆ ಬಿತ್ತು. ರಾಮನನ್ನು ನೋಡಿದ ಕೂಡಲೇ ಚಂದ್ರಸೇನೆ ನಾಚಿಕೆಯಿಂದ ಕೆಂಪಗಾಗಿ, ಆನಂದ ತನ್ಮಯತೆಯಲ್ಲಿ ನಿಲ್ಲಲಾಗದೆ ಕುಳಿತು ತಲೆ ತಗ್ಗಿಸಿ ಕೈಜೋಡಿಸಿಕೊಂಡಳು.

೩೩. ರಾಮಲಕ್ಷ್ಮಣರ ಆಗಮನ



ಮೊದಲು ಹನುಮಂತನು ಅವಳ ಕೋಣೆಯೊಳಗೆ ಕಾಲಿಟ್ಟು "ಅಮ್ಮಾ ಚಂದ್ರಸೇನೆ, ನಿನಗೆ ಮಾಡಿದ ವಾಗ್ದಾನದ ಪ್ರಕಾರ ರಾಮಚಂದ್ರನನ್ನು ನಿನ್ನ ಬಳಿಗೆ ಕರೆದುಕೊಂಡು ಬಂದಿದ್ದೇನೆ. ನೋಡು" ಎಂದನು.

ಆ ಮಾತು ಕೇಳುತ್ತಲೇ ಚಂದ್ರಸೇನೆ ಆನಂದ ಪುಳಕಿತೆಯಾಗಿ ಅರ್ಧ ತಲೆಯೆತ್ತಿ ಕಣ್ಣುತೆರೆದು ನೋಡಿದಳು. ಇದಿರಿನಲ್ಲಿ ರಾಮನು ಶಾಂತ ಗಂಭೀರ ವದನದೊಂದಿಗೆ ಸಾಕ್ಷಾತ್ಕಾರವಾದಂತೆ ಮಂದಹಾಸ ದಿಂದ ನಿಂತಿದ್ದನು. ಕೂಡಲೇ ಅವಳು ಕೈಮೈಗಳು ಆನಂದ ಕಂಪನಗೊಳ್ಳುತ್ತಿರಲು, ರಾಮನ ಪಾದ ಗಳನ್ನು ಬಂಗಾರದ ಹರಿವಾಣದಲ್ಲಿರಿಸಿ ಪನ್ನೀರಿನಿಂದ ತೊಳೆದು, ಆ ನೀರನ್ನು ತನ್ನ ತಲೆಗೆ ಪ್ರೋಕ್ಷಿಸಿ ಕೊಂಡು, ಹೂಗಳಿಂದ ಅರ್ಚಿಸಿ ಕರ್ಪೂರಾರತಿಯನ್ನು ಬೆಳಗಿದಳು.

ಚಂದ್ರಸೇನೆ ಮಾತಾಡಲು ಪ್ರಯತ್ನಿಸಿ ಅಪರಿ ಮಿತ ಸಂತೋಷದಲ್ಲಿ ಮಾತುಗಳು ಹೊರಡದೆ, ಮೂಕಭಾವದಲ್ಲಿಯೇ ಅವನನ್ನು ಹಂಸತೂಲಿಕಾ ತಲ್ಪದ ಬಳಿಗೆ ಕರೆದುಕೊಂಡು ಹೋದಳು. ಅಲ್ಲಿ ಶಯ್ಯೆಯ ಮೇಲಿದ್ದ ಪುಷ್ಪಹಾರವನ್ನೆತ್ತಿ ರಾಮನ ಕೊರಳಿನಲ್ಲಿ ಹಾಕಲು ಎತ್ತಿಕೊಂಡಳು. ಅಷ್ಟರಲ್ಲಿ ರಾಮನು ಹಂಸತೂಲಿಕಾ ತಲ್ಪದಲ್ಲಿ ಕುಳಿತುಕೊಳ್ಳಲು ತಿರುಗಿದನು. ಅದೇ ಕ್ಷಣದಲ್ಲಿ ಹಂಸತೂಲಿಕಾತಲ್ಪವು ಚಟಚಟನೆ ನಡುಭಾಗದಲ್ಲಿ ಮುರಿದುಹೋಯಿತು.

ಏನು ನಡೆಯಿತೆಂಬುದು ಕೂಡ ಪಾರವಶ್ಯತೆ ಯಲ್ಲಿರುವ ಚಂದ್ರಸೇನೆಗೆ ತಿಳಿಯಲಿಲ್ಲ. ಅವಳು ಮಾಲೆಯನ್ನು ರಾಮನ ಕೊರಳಿಗೆ ಹಾಕಲು ಎತ್ತಿ ದಾಗ, ರಾಮನು ತಡೆದು "ಚಂದ್ರಸೇನಾ ! ನೋಡಿದೆ ಯಷ್ಟೇ ? ಶಕುನವೇನೂ ಚೆನ್ನಾಗಿಲ್ಲ" ಎಂದು ಮುರಿದ ಮಂಚವನ್ನು ತೋರಿಸಿದನು. ಅದನ್ನು ನೋಡಿದ ಕ್ಷಣದಲ್ಲಿ ಚಂದ್ರಸೇನೆಯ ಕೈಯಲ್ಲಿದ್ದ ಮಾಲೆ ಅವಳಿಗೆ ತಿಳಿಯದಂತೆಯೇ ಜಾರಿಹೋಗಿ ರಾಮನ ಪಾದಗಳ ಮೇಲೆ ಗುಪ್ಪೆಯಾಗಿ ಬಿದ್ದಿತು.

ಚಂದ್ರಸೇನೆ ಮುರಿದುಹೋದ ಮಂಚವನ್ನು ಸುಟ್ಟುಹಾಕುವವಳಹಾಗೆ ನೋಡಿದಳು. ಆ ತಲ್ಪ ವನ್ನು ಮುರಿದುಹಾಕಿದ ಹನುಮಂತನು ಅಲ್ಲಿಯೇ ಸೂಕ್ಷ್ಮರೂಪದಲ್ಲಿ ಅಡಗಿದ್ದನು. ಅವನು ಚಂದ್ರ ಸೇನೆಯ ತೀಕ್ಷ್ಣದೃಷ್ಟಿಯನ್ನು ಭರಿಸಲಾರದೆ ತೊಳಲಿ ದನು. ತನ್ನ ಶರೀರವು ದಹಿಸುವಂತೆ ಅವನಿಗೆ ತೋರಿತು.


ಹನುಮಂತನು ಕೂಡಲೇ ತನ ಸೂಕ್ಷ್ಮರೂಪ ವನ್ನು ವಿಸರ್ಜಿಸಿ ಮಾಮೂಲು ರೂಪದಲ್ಲಿ ಚಂದ್ರ ಸೇನೆಯ ಮುಂದೆ ಕುಳಿತು ನಮಸ್ಕರಿಸುತ್ತ, "ತಾಯೇ, ನನ್ನನ್ನು ಕ್ಷಮಿಸು. ಕಾರ್ಯಾವಸರದ ಅಗತ್ಯದಲ್ಲಿ ನಿನಗೆ ವಾಗ್ದಾನಮಾಡಿಬಿಟ್ಟೆ. ಆ ಪ್ರಕಾರ ರಾಮನನ್ನು ನಿನ್ನ ಬಳಿಗೆ ಕರೆತಂದು ಮಾತು ಉಳಿಸಿ ಕೊಂಡೆ. ಆದರೆ ರಾಮನು ಏಕಪತ್ನೀ ವ್ರತದವ ನಮ್ಮಾ. ಆದುದರಿಂದ ಫಲಾಪೇಕ್ಷೆಯಿಲ್ಲದೆಯೇ

ಅವನನ್ನು ಸೇವಿಸುವುದರಿಂದ ಯಾರಿಗೂ ಹಾನಿಯಿಲ್ಲ. ದಯಮಾಡಮ್ಮ" ಎಂದು ಪ್ರಾರ್ಥಿಸಿದನು.

ಚಂದ್ರಸೇನೆ ಏನೋ ಉತ್ತರ ಹೇಳಬೇಕೆಂದು ಪ್ರಯತ್ನಿಸಿದಳು. ಕಂಠದಿಂದ ಸ್ವರವು ಹೊರಟರೂ ಶಬ್ದಗಳು ತಡಬಡಿಸಿ ಅಸ್ಪಷ್ಟವಾಗಿದ್ದುವು. ಸುಮ್ಮನೆ ಮೂಕಳಂತೆ ರಾಮನ ಮುಖಮಂಡಲವನ್ನೇ ನೋಡುತ್ತಿದ್ದಳು.

ರಾಮನ ತೇಜೋಮುಖದ ಶಾಂತ ನೇತ್ರಗಳು ಪರತತ್ವಜ್ಞಾನವನ್ನು ಬೋಧಿಸುವಂತಿದ್ದುವು. ಅವನು ಮಹಾವಿಷ್ಣುವಿನಂತೆಯೇ ಅವಳಿಗೆ ಕಾಣಿಸಿದನು. ಆ ವಿಷ್ಣು ಚಂದ್ರಸೇನೆಯೊಂದಿಗೆ, "ಚಂದ್ರಸೇನಾ, ಈಗ ರಾಮನಾಗಿರುವ ನಾನು ಏಕಪತ್ನೀ ವ್ರತದಿಂದಿರುವವನು. ನಿನ್ನಿಂದ ಅದು ಭಂಗವಾಗಬಾರದು. ಮುಂದೆ ಬರುವ ಕೃಷ್ಣಾವತಾರದಲ್ಲಿ ನನ್ನ ಎಂಟು ಮಂದಿ ಪತ್ನಿಯರಲ್ಲಿ ನೀನು ಸತ್ಯಭಾಮೆಯಾಗಿ ನನಗೆ ತುಂಬಾ ಪ್ರಿಯಳಾಗಿರುವಿ. ಅದುವರೆಗೆ ಸಹನೆಯಿಂದಿರು" ಎಂದನು.

ಆ ಸಮಯದಲ್ಲಿ ಚಂದ್ರಸೇನೆಗೆ ಒಂದು ಅಪೂರ್ವ ಅನುಭವವಾಯಿತು. ತನ್ನೊಳಗೆ ವಿಷ್ಣುವೇ ತುಂಬಿ ಹೋದಂತೆ, ತಾನೊಂದು ಜ್ಯೋತಿಯಂತೆ, ವಿಷ್ಣು ತೇಜದೊಂದಿಗೆ ಲೀನವಾಗುತ್ತಿರುವಂತೆ ಅನಿಸಿ ಆತ್ಮಾನಂದವೆನಿಸಿತು. ಅವಳು ಜ್ಯೋತಿಯಂತೆ ಪ್ರಕಾಶಿಸುತ್ತಾ, ರಾಮನಲ್ಲಿ ಲೀನಳಾಗುವ ಅದ್ಭುತ ದೃಶ್ಯವನ್ನು ನೋಡುತ್ತಿರುವ ಹನುಮಂತನು ಹೃದಯ ತುಂಬಿದವನಾಗಿ ಕೈಗಳನ್ನು ಜೋಡಿಸಿ ಕಣ್ಣು ಮುಚ್ಚಿಕೊಂಡನು. ಕೆಲವುಕ್ಷಣಗಳ ಮೇಲೆ ಅವನು ಕಣ್ಣುಗಳನ್ನು ತೆರೆದು ನೋಡಲು, ರಾಮನು ಅವನ ಮುಂದೆ ಕಿರುನಗುವಿನೊಂದಿಗೆ ನಿಂತಿದ್ದನು. ಈ ಮೊದಲು ನಡೆದುದೆಲ್ಲವೂ ಮಾಯವಾಗಿತ್ತು, ಮೈರಾವಣ ಸಂಹಾರದ ಸಂಗತಿಯೊಂದೇ ಹನುಮಂತನ ಮನಸ್ಸಿನಲ್ಲಿ ನಿಂತಿತ್ತು. ಚಂದ್ರಸೇನೆಯೂ




ಅಲ್ಲಿರಲಿಲ್ಲ. ಎಲ್ಲಿಯೋ ಕೇಳಿಸುತ್ತಿದ್ದ ಮಂಗಳವಾದ್ಯಗಳ ಧ್ವನಿಯೂ ಜಯಧ್ವಾನಗಳೂ ಸಮೀಪವಾಗಿ ಬರುತ್ತಿದ್ದವು.

ಹಾಗೆ ಅಲ್ಲಿಗೆ ಬಂದವನು ಪಾತಾಳ ಲಂಕಾರಾಜ್ಯಕ್ಕೆ ರಾಜನಾದ ಮತ್ಸ್ಯವಲ್ಲಭನಾಗಿದ್ದನು. ಅವನು ರಾಮನನ್ನೂ ಹನುಮಂತನನ್ನೂ ಹೂಗಳಿಂದ ಅರ್ಚನೆ ಮಾಡಿ ನಮಸ್ಕಾರ ಮಾಡಿದನು. ಅವರಿಂದ ಆಶೀರ್ವಾದಗಳನ್ನು ಪಡೆದಮೇಲೆ ಅವನು ಪಾತಾಳ ಲಂಕಾವಾಸಿಗಳೊಂದಿಗೆ ರಾಮನನ್ನು ಘನಸನ್ಮಾನಪೂರ್ವಕವಾಗಿ ಕಳುಹಿಸಿಕೊಟ್ಟನು. ಹನುಮಂತನು ರಾಮಲಕ್ಷ್ಮಣರನ್ನು ಭುಜಗಳಮೇಲೆ ಕೂಡಿಸಿಕೊಂಡು ಹೊರಟನು.

ಪಾತಾಳ ಲಂಕೆಯನ್ನು ದಾಟಿದಮೇಲೆ ಹನುಮಂತನು ರಿವ್ವನೆ ಆಕಾಶದಮೇಲಕ್ಕೆ ಹಾರಿ ರಾವಣನ ಲಂಕೆಯ ಕಡೆಗೆ ಹೊರಟಾಗ, ಮತ್ಸ್ಯವಲ್ಲಭನು ಕೈಗಳನ್ನಾಡಿಸುತ್ತ ಜಯಜಯವೆಂದು ಉಲಿದನು.

33-3



ಹೀಗೆ ಹನುಮಂತನು ರಾಮಲಕ್ಷ್ಮಣರನ್ನು ಕರೆದುಕೊಂಡು ಲಂಕಾನಗರಕ್ಕೆ ಹಾರುತ್ತಿರಲು, ಲಂಕಾನಗರದಲ್ಲಿ ವಾನರಸೇನೆಯೊಂದಿಗೆ ವಾನರ ಪ್ರಮುಖರೆಲ್ಲರೂ ದಡಕಾಣದ ಚಿಂತೆಯಿಂದ ಆಕಾಶದ ಶೂನ್ಯವನ್ನೇ ನೋಡಿಕೊಂಡಿದ್ದರು.

ಅವರು ಆಗಾಗ ತಲೆ ತಿರುಗಿಸಿ ತಮ್ಮವರ ಮುಖಗಳನ್ನು ನೋಡುವರು; ಮತ್ತೆ ತಲೆಯೆತ್ತಿ ಆಶೆಯಿಂದ ನೋಡುವರು; ನಿರಾಶೆಯ ನಿಟ್ಟುಸಿರು ಬಿಡುವರು. ಆದರೆ ಜಾಂಬವಂತನೊಬ್ಬ ಮಾತ್ರ ಮಂದಹಾಸದೊಂದಿಗೆ ಉತ್ಸಾಹದ ಮಾತುಗಳನ್ನಾಡುತ್ತ ವಾನರರಿಗೆ ಧೈರ್ಯ ಹೇಳುತ್ತಿದ್ದನು.

ಲಂಕಾನಗರದೊಳಗೆ ರಾಕ್ಷಸರು ವಿಜಯದುಂದುಭಿಯನ್ನು ಮೊಳಗಿಸುತ್ತ, ಬಾಕಾ, ಕೊಂಬು, ಕಹಳೆಗಳನ್ನು ಊದುತ್ತಾ ದಿಕ್ಕುಗಳು ಗಡಚಿಕ್ಕುವ ಹಾಗೆ ಕೋಲಾಹಲ ಮಾಡಿಕೊಂಡಿದ್ದರು. ತಮಗೆ ವಿಜಯವೇ ಕೈಗೂಡಿತೆಂಬ ಆನಂದದಲ್ಲಿ ಕೆಲವರು ಸಿಕ್ಕಾಬಟ್ಟೆ ಮದ್ಯ ಕುಡಿದು ಮದೋನ್ಮತ್ತತೆಯ ಆಟಪಾಟಗಳಲ್ಲಿ ಮೈಮರೆತಿದ್ದರು.

ಅವರ ಉತ್ಸಾಹಕ್ಕೆ ಕಾರಣನಾದ ರಾವಣನು ಪರಮ ಸಂತೋಷದಲ್ಲಿ ಉಬ್ಬಿಹೋಗಿದ್ದನು. ಕಾಳಿಗೆ ಬಲಿಯಾಗಿ ಕಡಿಯಲ್ಪಟ್ಟ ರಾಮಲಕ್ಷ್ಮಣರ ತಲೆಗಳನ್ನು ತೆಗೆದುಕೊಂಡು ಮೈರಾವಣನು ಯಾವ ಕ್ಷಣದಲ್ಲಿಯೂ ಬರಬಹುದೆಂದು ಇದಿರು ನೋಡುತ್ತಿದ್ದನು. ಹಾಗೆ ಬಂದ ರಾಮಲಕ್ಷ್ಮಣರ ತಲೆಗಳನ್ನು ಬಂಗಾರದ ಹರಿವಾಣದಲ್ಲಿಟ್ಟು ಅದನ್ನು ಸೀತೆಯ ಬಳಿಗೆ ತೆಗೆದುಕೊಂಡು ಹೋಗಲು ಬೇಕಾದ ಎಲ್ಲಾ ಸಿದ್ಧತೆಗಳನ್ನೂ ಆಗಲೇ ಮುಗಿಸಿದ್ದನು.

ಕಾಲ ಕಳೆಯುತ್ತಿರಲು, ರಾವಣನು ತನ್ನ ಮಂದಿರದಿಂದ ಹೊರಗೆ ಬಂದು, ಕೋಟೆಯ ಗೋಡೆಯ ಅಂಚಿನಲ್ಲಿ ನಿಂತುಕೊಂಡು, ದೂರದಲ್ಲಿ ಕಾಣುವ ವಾನರ ಸೇನೆಯ ಅವಸ್ಥೆಯನ್ನು ನೋಡಿದನು. ಸದ್ದಿಲ್ಲದಿರುವ ಆ ವಾನರ ಸೇನೆಯನ್ನು ನೋಡಿ ತೃಪ್ತಿಯಿಂದ ನಸುನಕ್ಕನು. ಆ ವಾನರ ಸೇನೆಯ ಒಂದು ಬದಿಯಲ್ಲಿ ತಲೆಬಗ್ಗಿಸಿಕೊಂಡು ನಿಂತಿರುವ ವಿಭೀಷಣನನ್ನು ರಾವಣನು ಗುರುತಿಸಿದನು.


"ಏನೋ, ತಮ್ಮಾ, ವಿಭೀಷಣಾ ! ನೀನು ಎಷ್ಟೊಂದು ಮುಗ್ಧನಪ್ಪಾ ! ಇನ್ನೂ ಅವರನ್ನು ಕಾದುಕೊಂಡು ಏತಕ್ಕೆ ನಿಂತಿರುವಿಯೋ ? ಪಾತಾಳ ಕಾಳೀದೇವಿಯ ಪ್ರಸಾದವಾಗಿ ರಾಮಲಕ್ಷ್ಮಣರ ತಲೆಗಳು ನನ್ನ ಬಳಿಗೆ ಬರಲಿವೆ. ತಲೆಯ ಮಾಂಸ ಅತ್ಯಂತ ರುಚಿಕರವಾದುದೆಂಬ ಸಂಗತಿ ನಿನಗೆ ತಿಳಿಯದ್ದೇನೂ ಅಲ್ಲ. ಆ ತಲೆಗಳ ಮಾಂಸದ ರುಚಿ ನೋಡಲಿಕ್ಕಾದರೂ ನೀನು ಬೇಗ ಇತ್ತ ಬರಬಾರದೇ ? ನೀನೇನು ಹೆದರಬೇಡ. ಎಷ್ಟಾದರೂ ನೀನು ನನ್ನ ತಮ್ಮನೇ. ನಿನಗೆ ಅಭಯದಾನ ಮಾಡಿದ್ದೇನೆ. ಇಂದಿನಿಂದಾದರೂ ಯುವರಾಜನಿಗಿರಬೇಕಾದ ವಿನಯ ವಿಧೇಯತೆಗಳಿಂದ ವರ್ತಿಸಿದರೆ ಸರಿ. ಹೆಣ ಕಾಯುವ ಹಾಗೆ ಅಲ್ಲೇಕೆ ನಿಂತಿರುವೆ?

ಬಂದುಬಿಡು ಇತ್ತ" ಎಂದು ನಾಲ್ಕು ಯೋಜನಗಳಷ್ಟು ದೂರ ಕೇಳಿಸುವಂತೆ ಕೂಗಿ ಹೇಳಿದನು.

ರಾವಣನ ಮಾತುಗಳು ಕಿವಿಗೆ ಬಿದ್ದೊಡನೆಯೇ ವಿಭೀಷಣನು ಕಿವಿಗಳನ್ನು ಮುಚ್ಚಿಕೊಂಡನು. ಅವನ ಕಣ್ಣುಗಳಿಂದ ನೀರಿಳಿಯತೊಡಗಿತು. ಗಂಟಲಿನಿಂದ ಸ್ವರವೇಳದೆ, ಸುಮ್ಮನೆ ಸುಗ್ರೀವನ ಕಡೆಗೆ ದೀನನಂತೆ ನೋಡಿದನು. ರಾವಣನ ಮಾತುಗಳು ಅವರೆಲ್ಲರಿಗೂ ಕೇಳಿಸಿತ್ತು. ಅಂತೆಯೇ ವಿಭೀಷಣನ ದೈನ್ಯವನ್ನು ನೋಡಿ ಸುಗ್ರೀವನ ಎದೆಯೂ ಜಾರಿಹೋಯಿತು. ಅವರಿಬ್ಬರ ದುಃಖವನ್ನು ನೋಡಿ ಉಳಿದ ವಾನರರೂ ಹಾಹಾಕಾರ ಮಾಡುತ್ತ, ಒಬ್ಬರನ್ನೊಬ್ಬರು ನೋಡಿ ರೋದಿಸಲು ತೊಡಗಿ ಗೋಳಾಟವೆಬ್ಬಿಸಿದರು.


ವಾನರ ಸೇನೆಯಲ್ಲಿದ್ದ ದೀನಾಲಾಪಗಳನ್ನು ನೋಡಿ ರಾವಣನು ಮತ್ತೊಮ್ಮೆ ತೃಪ್ತಿಯಾಗುವಷ್ಟು ನಕ್ಕನು. ಈ ಹೊಸ ಸಂತೋಷದಲ್ಲಿ, ಕೋಟೆಯ ಗೋಡೆಯ ಬದಿಯಿಂದಾಗಿ ಹೋಗುತ್ತಿದ್ದ ರಾಕ್ಷಸ ಸ್ತ್ರೀಯರನ್ನು ಕೂಗಿ ಕರೆದು, "ನೀವು ಈಗಲೇ ಸೀತೆಯ ಬಳಿಗೆ ಹೋಗಿ ಈ ಸಮಾಚಾರ ಹೇಳಿಬಿಡಿ. ರಾಮನ ತಲೆಯೊಂದಿಗೆ ಲಕ್ಷ್ಮಣನ ತಲೆಯನ್ನು ಕೂಡಾ ಅವಳಿಗೆ ಕಾಣಿಕೆಯಾಗಿ ಕಳುಹಿಸುತ್ತೇನೆ. ಅವರ ಶರೀರಗಳನ್ನು ಪಾತಾಳ ಲಂಕೆಯ ರಾಕ್ಷಸರು ಔತಣದೂಟ ಮಾಡಿ ಮುಗಿಸಿರುತ್ತಾರೆ. ಸೀತೆಗೆ ಈ ಸಮಾಚಾರ ಹೇಳಿಬಿಡಿ. ಅವಳು ರಾಮ ಲಕ್ಷ್ಮಣರ ತಲೆಗಳನ್ನು ಸ್ವೀಕರಿಸಲಿಕ್ಕೆ ಸಿದ್ಧಳಾಗಿರಲಿ. ಮೊದಲೇ ತಿಳಿಸಿಡುವುದು ಒಳ್ಳೆಯದು" ಎಂದನು ಅತ್ಯುತ್ಸಾಹದಿಂದ.

ರಾಕ್ಷಸ ಸ್ತ್ರೀಯರಿಗೆ ಆ ಕ್ಷಣದಲ್ಲಿ ರಾವಣನ ಆನಂದದ ಹಿಂದೆ ಸ್ವಲ್ಪ ಮಟ್ಟಿಗೆ ಮತಿಚಾಂಚಲ್ಯವೂ ಸೇರಿರುವಂತೆ ಭಾಸವಾಯಿತು. ಅವರು ಬಗ್ಗಿ ಬಗ್ಗಿ ರಾವಣನಿಗೆ ನಮಸ್ಕಾರ ಮಾಡಿ ಅಲ್ಲಿಂದ ಬೇಗ ಬೇಗನೇ ಹೊರಟು ಹೋಗಿಬಿಟ್ಟರು.



ಅನಂತರ ರಾವಣನು ಕೋಟೆಯ ಮೇಲಿನಿಂದ ಇಳಿದು ತನ್ನ ಮಂದಿರದ ಮಾಳಿಗೆಯ ಮೇಲೇರಿ ಗವಾಕ್ಷದ ಹತ್ತಿರ ಸಮುದ್ರಕ್ಕೆ ತಾಗಿಕೊಂಡಿರುವ ಆಕಾಶದ ಅಂಚನ್ನು ದಿಟ್ಟಿಸುತ್ತ ಮೈರಾವಣನ ಬರುವಿಕೆಯನ್ನು ಕಾದು ಕುಳಿತನು. ಅವನು ಆಶೆಯಿಂದ ನೋಡುತ್ತಿರಲು, ದೂರದ ಆಕಾಶದಲ್ಲಿ ಸಣ್ಣ ಕಸದಂತಹ ಆಕಾರವೊಂದು ಚಲಿಸುತ್ತಾ ಮುಂದೆ ಬರುತ್ತಿರುವುದು ಕಂಡಿತು.

ರಾವಣನು ಧಿಗ್ಗನೆದ್ದು ಚಪ್ಪಾಳೆ ತಟ್ಟಿ, "ಅದೋ ಅದೋ! ಬರುತ್ತಿದ್ದಾನೆ. ಮೈರಾವಣನು ಕಾಳಿಗೆ ಬಲಿಕೊಟ್ಟು ರಾಮಲಕ್ಷ್ಮಣರ ತಲೆಗಳನ್ನು ತರುತ್ತಿದ್ದಾನೆ. ಯಾರಲ್ಲಿ? ಬಂಗಾರದ ತಾಂಬಾಣವನ್ನು ತನ್ನಿರೋ! ತಲೆಗಳನ್ನು ಅದರಲ್ಲೇ ಇಡಬೇಕು! ದಿವ್ಯ ಪ್ರಸಾದ! ಕೆಳಗಿಡಬಾರದು!" ಎಂದು ಕೂಗಿ ಹೇಳಿ, ಮತ್ತೆ ಆಕಾಶದ ಕಡೆಗೆ ನೋಡಿ, ಮರುಕ್ಷಣದಲ್ಲಿ ಎದೆ ನಿಂತು ಬಿದ್ದವನಂತೆ ನೆಲಕ್ಕೆ ಬಿದ್ದನು.



ಅವನಂತೆಯೇ ಸಮುದ್ರದ ಕಡೆಗೆ ಆಕಾಶವನ್ನು ನೋಡುತ್ತಿದ್ದ ಜಾಂಬವಂತನು, ದೂರದಲ್ಲೊಂದು ಆಕಾರವು ಹಾರುತ್ತಾ ಬರುವುದು ಕಾಣಿಸಿದ ಕೂಡಲೇ ಅದು ಯಾರ ರೂಪವೆಂಬುದರ ಗುರುತು ಹಿಡಿದು ಪಕ್ಕದಲ್ಲಿರುವವರನ್ನು ಗೆಲುವಿನಿಂದ ನೋಡಿದನು. ಅವನ ಬದಿಯಲ್ಲೇ ನಿಂತು ಸಮುದ್ರದ ಕಡೆಗೆ ನೋಡುತ್ತಿದ್ದ ಅಂಗದನು ಆಶ್ಚರ್ಯದಿಂದ ಜಾಂಬವಂತನನ್ನು ನೋಡಿದನು.

ಜಾಂಬವಂತನು ಕೈಗಳನ್ನೆತ್ತಿ ವಾನರರೊಂದಿಗೆ, "ಅಗೋ ನೋಡಿರಿ. ನಮ್ಮ ಹನುಮಂತ ಬರುತ್ತಿದ್ದಾನೆ. ಇನ್ನು ನಿಮ್ಮ ಚಿಂತೆಗೆ ಅವಕಾಶವಿಲ್ಲ. ಏಳಿರಿ!" ಎಂದನು.


ಅಂಗದನು ಅತ್ಯುತ್ಸಾಹದಿಂದ ಜಯ ಜಯಧ್ವಾನ ಮಾಡಿ, "ಹೌದು ಹೌದು! ನಮ್ಮ ವೀರ ಹನುಮಾನ್ ರಾಮಲಕ್ಷ್ಮಣರೊಂದಿಗೆ ಬರುತ್ತಿದ್ದಾನೆ. ಸ್ವಾಗತಕ್ಕೆ ತಯಾರಾಗಿರಿ!" ಎಂದು ಕೂಗಿದನು.

ರಾಮಲಕ್ಷ್ಮಣರನ್ನು ಭುಜಗಳ ಮೇಲೇರಿಸಿಕೊಂಡು ಬರುತ್ತಿರುವ ಹನುಮಂತನನ್ನು ನೋಡಿ ವಾನರ ಸೈನ್ಯವು ಆನಂದದಿಂದ ಕುಣಿದು ಕೋಲಾಹಲ ಮಾಡತೊಡಗಿತು. ಅವರ ಜಯ ಜಯಧ್ವಾನಗಳು ಆಕಾಶವನ್ನು ಸೀಳುತ್ತಿದ್ದುವು. ಅಲ್ಲಿ ಲಂಕಾನಗರದಲ್ಲಿ ಕೇಳುತ್ತಿದ್ದ ಅಟ್ಟಹಾಸ ಶಬ್ದಗಳೆಲ್ಲ ತಟ್ಟನೆ ನಿಂತು ಹೋದುವು.

ವಾನರ ಸೇನೆಯ ಕೋಲಾಹಲ ಧ್ವನಿಗಳು ರಾವಣನ ಕಿವಿಯವರೆಗೂ ಕೇಳಿಸಲು, ರಾವಣನು ಮೆಲ್ಲನೆದ್ದು ನಡುಗುತ್ತ ತನ್ನ ಮಂದಿರದ ಗವಾಕ್ಷವನ್ನು ಹಿಡಿದುಕೊಂಡು ಬೊಂಬೆಯಂತೆ ನಿಂತು ಬಿಟ್ಟನು. ಅವನಿಗೆ ರಾಮಲಕ್ಷ್ಮಣರು ಸಜೀವಿಗಳಾಗಿ ಬಂದಿರುವುದಷ್ಟೇ ಗೊತ್ತಾಗಿತ್ತು. ಇದು ಹೇಗಾಯಿತು? ಮೈರಾವಣನೂ ಅವನ ಅಣ್ಣನೂ ಏನಾದರು? ಅವರ ಸುದ್ದಿ ಏಕಿಲ್ಲ? ಅವರನ್ನು ಹನುಮಂತನೋ ರಾಮಲಕ್ಷ್ಮಣರೋ ಕೊಂದುಗಿಂದು ಹಾಕಿರಬಹುದೇ?...

ರಾವಣನು ಹೀಗೆ ಆಲೋಚಿಸುತ್ತಿರುವಾಗ, ರಾಕ್ಷಸ ಸೈನಿಕನೊಬ್ಬ ಅವನ ಹತ್ತಿರ ಬಂದು, ತಾನು ವಾನರ ಸೈನಿಕರು ಆಡುವ ಮಾತುಗಳಿಂದ ತಿಳಿದುಕೊಂಡಿರುವುದನ್ನು ಅರಿಕೆ ಮಾಡಿದನು. ಆ ವಿಧವಾಗಿ ಪಾತಾಳದಲ್ಲಿ ನಡೆದ ಸಂಗತಿಗಳೆಲ್ಲಾ ರಾವಣನಿಗೆ ತಿಳಿಯಿತು. ಕೂಡಲೇ ರಾವಣನು ಆಕಸ್ಮಿಕವಾದ ಯಾವುದೋ ಭೀತಿಯಿಂದ ನಡುನಡುಗಿ, ಸಣ್ಣ ದನಿಯಿಂದ ಒರಗಿದಂತೆ ತನ್ನೊಳಗೇ ಕೂಗಿಕೊಂಡು ಮೂರ್ಛೆ ಹೋಗಿಬಿದ್ದನು.

ರಾಕ್ಷಸ ಸೇವಕರ ಶೈತ್ಯೋಪಚಾರಗಳಿಂದ ಸ್ವಲ್ಪ ಹೊತ್ತಿನ ಮೇಲೆ ರಾವಣನು ಮೂರ್ಛೆಯಿಂದ ಎದ್ದನು. ಈಗ ಅವನಲ್ಲಿ ಭಯದ ಲವಲೇಶವೂ ಕಾಣಿಸಲಿಲ್ಲ. ಕೋಪವೂ, ರೋಷವೂ ಮೂರ್ತಿಮಂತನಾದವನಂತಿದ್ದನು.



ಅವನನ್ನು ನೋಡಿ ಅವನ ಕಡೆಯುವರೇ ಹೆದರಿ ಹಿಂಜರಿದು ಹೋದರು. ಅವನು ಮುಷ್ಟಿಗಳನ್ನು ಬಿಗಿದು ಹಲ್ಲು ಕಡಿದು ಕಣ್ಣುಗಳನ್ನು ತಿರುಗಿಸುತ್ತ, "ಎಲ್ಲಿ ಆ ಪುಡಿಯಾಳು ಲಕ್ಷ್ಮಣ? ನನ್ನ ಪ್ರೀತಿಯ ಮಗ ಇಂದ್ರಜಿತ್ತುವನ್ನು ಕೊಂದ ಆ ಲಕ್ಷ್ಮಣನೆಲ್ಲೀ! ಎಲ್ಲಿಯೇ ಅಡಗಿದ್ದರೂ ಅವನನ್ನು ಬಿಡಲಾರೆ! ಹಾಳು ಮಂಗಗಳ ಗುಂಪಿನ ನಡುವೆ ಹೇಡಿಯ ಹಾಗೆ ಅಡಗಿಕೊಂಡಿದ್ದಾನೇನು? ಯಾರಲ್ಲಿ? ಎಳೆದು ತನ್ನಿ ಆ ಲಕ್ಷ್ಮಣನ್ನ! ಅವನ ಆಯುಷ್ಯ ಇಂದಿಗೆ ತೀರಿತು!" ಎಂದು ಉನ್ಮಾದಿಯಂತೆ ಕೂಗಾಡತೊಡಗಿದನು.

ರಾವಣನ ಈ ಬಗೆಯ ದುಸ್ಥಿತಿಯನ್ನು ನೋಡಿ ಮಂಡೋದರಿ ಏನೂ ತೋರದೆ ಧಾರೆಧಾರೆಯಾಗಿ ಕಣ್ಣೀರಿಳಿಸತೊಡಗಿದಳು. ರಾವಣನು ಅವಳನ್ನು ನೋಡಿಯೂ ನೋಡದವನಂತೆ ಭೂಮಿಯನ್ನು ಒದೆಯುತ್ತ, "ಆ ಹುಲು ಲಕ್ಷ್ಮಣನನ್ನು ಕೊಲ್ಲಲಿಕ್ಕೆ ನನಗೆ ಯಾರ ಸಹಾಯವೂ ಅಗತ್ಯವಿಲ್ಲ. ನಾನೊಬ್ಬನೇ ಆ ರಾಮಲಕ್ಷ್ಮಣರನ್ನು ಯುದ್ಧದಲ್ಲಿ ಕೊಂದು ಬಿಡುತ್ತೇನೆ. ಅವರ ತಲೆಗಳನ್ನು ಸೀತೆಗೆ ಕಳುಹಿಸಲೇ ಬೇಕು. ಬಿಡಲಾರೆ. ಮಧ್ಯದಲ್ಲಿ ಬಂದ ಈ ಮೈರಾವಣನೊಬ್ಬ! ಏನೋ ಜಂಭದ ಮಾತುಗಳನ್ನು ಹೇಳಿ ಆಸೆ ಹುಟ್ಟಿಸಿ ನನ್ನ ಅಮೂಲ್ಯವಾದ ಕಾಲವನ್ನೆಲ್ಲಾ ವ್ಯರ್ಥಮಾಡಿಬಿಟ್ಟ. ಅವನೂ ಅಷ್ಟೆ, ಅವನ ಅಣ್ಣನೂ ಅಷ್ಟೇ. ಕೈಲಾಗದ ಅಸಮರ್ಥರು. ಆದ್ದರಿಂದಲೇ ರಾಮಲಕ್ಷ್ಮಣರು ಅಷ್ಟು ಬೇಗದಲ್ಲಿ ಅವನನ್ನು ಕೊಂದಿದ್ದು ಸರಿ. ಆ ಭ್ರಷ್ಟ ಮೈರಾವಣ ಹಾಳಾಗಲಿ. ನನ್ನ ವೀರಪುತ್ರ ಇಂದ್ರಜಿತ್ತುವನ್ನು ಕೊಂದ ಆ ಲಕ್ಷ್ಮಣನನ್ನೇ ಮೊದಲು ನನ್ನ ಆಯುಧಕ್ಕೆ ಬಲಿಕೊಡಬೇಕು". ಎಂದು ಹುಚ್ಚು ಹುಚ್ಚಾಗಿ ಕೂಗಾಡತೊಡಗಿದನು.

ವಾನರಸೇನೆ ನವೋತ್ಸಾಹದಿಂದ ಹೋರಾಟಕ್ಕೆ ಸರ್ವಸಿದ್ಧವಾಗಿ ದೊಡ್ಡ ಕೋಲಾಹಲದಿಂದ ರಾಕ್ಷಸರನ್ನು ಆಹ್ವಾನಿಸುವ ಶಬ್ದಗಳು ರಾವಣನ ಕಿವಿಗೆ ಬಿದ್ದುವು. ಅದನ್ನು ಕೇಳಕೇಳುತ್ತಾ ಅವನ ಕಣ್ಣುಗಳು ಬೆಂಕಿಯ ಕೆಂಡಗಳಂತಾದುವು. ರೌದ್ರಾವೇಶದಿಂದ ಅವನ ಶರೀರವು ಬೆಂಕಿಯ ಜ್ವಾಲೆಯಂತೆ ಕೆಂಪಗಾಯಿತು. ಕಣ್ಣುಗಳಲ್ಲಿದ್ದ ಅಶ್ರು ಜಲವು ಬತ್ತಿ ಪೌರುಷವು ಕರಡುಗಟ್ಟಿತು.

ರಾವಣನು ಕೂಡಲೇ ಯುದ್ಧ ಕವಚವನ್ನು ಧರಿಸಿ, ಬಿಲ್ಲುಬಾಣ ಮೊದಲಾದ ಆಯುಧಗಳನ್ನು ಹಿಡಿದುಕೊಂಡು "ಎಲ್ಲಿ ಆ ಲಕ್ಷ್ಮಣ! ಬಾರೋ ಮುಂದೆ!" ಎಂದು ಗರ್ಜಿಸುತ್ತಾ, ವಾನರ ಸೇನೆಯ ಕಡೆಗೆ ಹೋಗತೊಡಗಿದ. ಅವನ ಹಿಂದೆ ರಾಕ್ಷಸ ವೀರರು ರಥಗಳನ್ನೂ ಆಯುಧಗಳನ್ನೂ ಗಡಿಬಿಡಿಯಿಂದ ಸಿದ್ಧಪಡಿಸುತ್ತ ಹೊರಟರು.



33-8



August 1977

ವೀರಹನುಮಾನ್

ರಾತ್ರಿ ಕಳೆಯುತ್ತಾ, ಸೂರ್ಯೋದಯವಾಗುವ ವೇಳೆಯಲ್ಲಿ ವಾನರಸೇನೆಗೂ, ರಾವಣನ ರಾಕ್ಷಸ ಸೇನೆಗೂ ಯುದ್ಧವು ಪ್ರಾರಂಭವಾಯಿತು. ಈ ಹಿಂದೆ ನಡೆದ ಯುದ್ಧದಂತೆಯೇ ರಾಕ್ಷಸರು ವಾನರರ ಮೇಲೆ ಬಾಣಗಳನ್ನೂ, ಪರಿಘಗಳನ್ನೂ, ಖಡ್ಗ ಗಳನ್ನೂ, ಪರಶುಗಳನ್ನೂ, ಶೂಲಗಳನ್ನೂ ಪ್ರಯೋ ಗಿಸ ತೊಡಗಿದರು. ವಾನರರು ಕೂಡಾ ರಾಕ್ಷಸರ ಮೇಲೆ ಮರಗಳನ್ನೂ, ಗಂಡ ಶಿಲೆಗಳನ್ನೂ, ಸತ್ತು ಬೀಳುತ್ತಿರುವ ರಾಕ್ಷಸರನ್ನೂ, ಮುರಿದುಬಿದ್ದ ರಥ ಗಳ ತುಂಡುಗಳನ್ನೂ ಎತ್ತೆತ್ತಿ ಹಾಕುತ್ತಿದ್ದರು. ಪ್ರಾರಂಭದ ಆವೇಶವು ದೊಂಬಿ ಯುದ್ಧವಾಗಿ ಎರಡು ಪಕ್ಷಗಳಲ್ಲಿಯೂ ರಕ್ತವು ಕಾಲುವೆಗಟ್ಟಿತು. ಆಕಾಶದ ಮೇಲೆ ಎದ್ದುಕೊಂಡ ಧೂಳನೆಲ್ಲಾ ರಕ್ತವು ಹೀರಿಕೊಂಡು ಕೆಸರಾಯಿತು.


ರಾಕ್ಷಸರ ದಾಳಿಗೆ ತಾಳಲಾಗದ ವಾನರಸೇನೆಗೆ ಆಧಾರವಾಗಿ ರಾಮನು ಕೋದಂಡವನ್ನು ಎತ್ತಿ ಕೊಂಡು ನೋಡಿದವರೆಲ್ಲ ಬೆರಗಾಗುವಂತೆ, ರಾಕ್ಷಸ ಸೇನೆಯೊಳಗೆ ಪ್ರವೇಶಿಸಿ ಅಗ್ನಿಕಣಗಳಂತಹ ಬಾಣ ಗಳನ್ನು ಮಳೆಯಂತೆ ಸುರಿಸ ತೊಡಗಿದನು.

ರಾಮನ ಬಿಲ್ಲಿನಿಂದ ಅವಿರತವಾಗಿ ಹೊರಡುವ ಬಾಣ ವರ್ಷಣದ ಹಾವಳಿಯನ್ನು ರಾಕ್ಷಸರು ತಡೆಯಲಾರದೆಹೋದರು. ರಾಮನು ಯಾವಾಗ ಯಾವ ದಿಕ್ಕಿಗೆ ಎಷ್ಟು ಬಾಣಗಳನ್ನು ಪ್ರಯೋಗಿ ಸುತ್ತಾನೆಂಬುದೇ ಅವರಿಗೆ ಗೊತ್ತಾಗಲಿಲ್ಲ. ಗಿರ್ರನೆ ತಿರುಗುವ ಚಕ್ರಗಳ ನಡುವಿನಿಂದ ಬಾಣ ಪರಂ ಪರೆಗಳು ಹಾರುವಂತೆ ಭಾಸವಾಗುತಿತ್ತು. ಆ ಬಾಣಗಳ ಫಲಿತವೇ ಕಾಣುತಿತ್ತಲ್ಲದೆ ಬಾಣ ಹೊರಡುವ ಸ್ಥಳವು ಗೋಚರಿಸಲಿಲ್ಲ. ಬಿರುಗಾಳಿಗೆ ಮರಗಳೆಲ್ಲಾ ಉರುಳುವುದೇ ಕಾಣುತ್ತದೆ ಹೊರತು ಝಂಝಾ ಮಾರುತವು ಕಾಣುವುದಿಲ್ಲವಷ್ಟೆ? ರಾಮ ಬಾಣಗಳಿಂದ ಕ್ಷಣಕ್ಷಣಕ್ಕೂ ಗುಂಪುಗುಂಪಾಗಿ ರಾಕ್ಷಸರ ಸಂಹಾರ ನಡೆಯುತ್ತಿತ್ತು.

ರಾಮನು ತನ್ನ ಸಮೀಪದಲ್ಲಿದ್ದ ಸುಗ್ರೀವ, ಜಾಂಬ ವಂತ, ಹನುಮಂತ ಮೊದಲಾದವರೊಂದಿಗೆ,

೩೪. ರಾಮನಿಗೆ ದೇವೇಂದ್ರನ ಸಹಾಯ

34-1




"ಆಶ್ಚರ್ಯ ಪಡಬೇಡಿ. ನನ್ನ ಹಾಗೆ ಬಾಣ
ಪ್ರಯೋಗಮಾಡಲು ಶಿವನೊಬ್ಬನೇ ಸಮರ್ಥನು."
ಎಂದು ಮುಗುಳುನಕ್ಕು ಅವರ ಆಶ್ಚರ್ಯವನ್ನು
ತಣಿಸಿದನು.

ಈ ರೀತಿಯಾಗಿ ಯುದ್ಧರಂಗದಲ್ಲಿ ನಡೆಯುತ್ತಿದ್ದ
ರಾಕ್ಷಸರ ದಾರುಣ ಹತ್ಯಾಕಾಂಡದ ಸಂಗತಿ ಲಂಕೆ
ಯಲ್ಲಿರುವ ರಾಕ್ಷಸ ಸ್ತ್ರೀಯರಿಗೆ ಗೊತ್ತಾಯಿತು.
ಸತ್ತ ರಾಕ್ಷಸರಲ್ಲಿ ಅನೇಕ ರಾಕ್ಷಸ ಸ್ತ್ರೀಯರ ಗಂಡಂದಿ
ರಿದ್ದರು, ಮಗಂದಿರಿದ್ದರು, ಅಳಿಯಂದಿರಿದ್ದರು.
ಮಾವಂದಿರಿದ್ದರು. ಅಂತೆಯೇ ಸ್ತ್ರೀಯರು ಸತ್ತವ
ರನ್ನು ಕರೆಯುತ್ತಾ, ದೊಡ್ಡ ದನಿಯಿಂದ ರೋದಿ
ಸುತ್ತಾ, ಈ ಪೀಡೆಗೆಲ್ಲಾ ಮೂಲಕಾರಣಳಾದ
ಶೂರ್ಪನಖಿಯನ್ನು ಬೈಯತೊಡಗಿದರು. "ಆ
ಪಾಪಿಷ್ಠಳು ರಾಮನನ್ನು ಮೋಹಿಸುವುದೆಂದರೇನು ?
ಅವಳ ಮಾತು ಕೇಳಿ ರಾವಣನು ಸೀತೆಯನ್ನು ಎತ್ತಿ
ಕೊಂಡು ಬರುವುದೆಂದರೇನು ? ಹುಚ್ಚು. ಹಟಕಟ್ಟಿ
ರಾಮನೊಂದಿಗೆ ಯುದ್ಧ ಮಾಡುವುದೆಂದರೇನು!
ಆ ಹಾಳಾದ ಸೀತೆ ರಾವಣನ ಆಶೆಗೆ ಒಪ್ಪಿಯಾದರೂ
ಸಾಯಬಾರದಿತ್ತೇ ? ಅದೂ ಇಲ್ಲ! ಸೀತೆಯನ್ನು
ಎತ್ತಿಕೊಂಡುಹೋಗಲು ನೋಡಿದ ವಿರಾಧ ರಾಮ
ಕೈಯಲ್ಲೇ ಸತ್ತಿದ್ದಾನೆ. ಅದನ್ನು ತಿಳಿದಾದರೂ ರಾವ
ನಿಗೆ ಬುದ್ಧಿ ಬರಬೇಡವೆ? ಬಿಟ್ಟಾನೇ ರಾಮ ? ನಿಶ್ಚ
ವಾಗಿಯೂ ರಾಮನೇ ಗೆಲ್ಲುತ್ತಾನೆ. ರಾಮನ ಶಕ್ತಿ
ಎಲ್ಲರಿಗೂ ಗೊತ್ತಾದರೂ ರಾವಣನಿಗೆ ಮಾತ್ರ
ಇನ್ನೂ ಗೊತ್ತಾಗಲಿಲ್ಲ..." ಹೀಗೆ ಹೇಳಿಕೊಳ್ಳುತ್ತಾ
ರಾಕ್ಷಸ ಸ್ತ್ರೀಯರು ತಮ್ಮ ಗಂಡಂದಿರು ಅಳಿಯಂದಿರು
ಮಗಂದಿರು ಸೋದರರು ಸತ್ತುದನ್ನು ನೆನೆ ನೆನೆದು
ಗೋಳಾಡುತ್ತಿದ್ದರು.

ಒಂದು ಬದಿಯಲ್ಲಿ ರಾಮನು ತನ್ನ ಸೇನೆಯನ್ನು
ಕಾಡುಗಿಚ್ಚಿನ ಹಾಗೆ ದಹಿಸುತ್ತಿದ್ದರೆ, ರಾವಣನು ತನ್ನ
ಸಮೀಪದಲ್ಲಿರುವ ಮಹೋದರ, ಮಹಾಪಾರ್ಶ್ವ
ವಿರೂಪಾಕ್ಷರೊಂದಿಗೆ. "ನಾನಿನ್ನು ಈ ರಾಮನನ್ನು
ಬಿಡುವಂತಿಲ್ಲ. ನಮ್ಮ ಖರನನ್ನು, ಕುಂಭಕರ್ಣನನ್ನು
ಪ್ರಹಸ್ತನನ್ನು. ಇಂದ್ರಜಿತ್ತುವನ್ನು ಕೊಂದ ಈ ಶತ್ರು
ವನ್ನು ನಿರ್ಮೂಲಮಾಡದೆ ಬಿಡಲಾರೆ. ನನ್ನ ಬಾಣ
ಗಳು ಭೂಮ್ಯಾಕಾಶಗಳನ್ನು ಅಂಧಕಾರದಲ್ಲಿ
ಮುಳುಗಿಸುವುದನ್ನು ನೋಡುವಿರಂತೆ. ವಾನರ
ಸೇನೆಯನ್ನು ಗುಂಪು ಗುಂಪಾಗಿ ವಧಿಸಿಬಿಡುತ್ತೇನೆ"
ಎಂದು ತನ್ನ ವೀರಪ್ರತಾಪಗಳನ್ನು ಹೇಳಿಕೊಂಡನು.

ರಾವಣನು ಏರಿದ್ದ ರಥಕ್ಕೆ ಎಂಟು ಕುದುರೆಗಳನ್ನು
ಹೂಡಲ್ಪಟ್ಟಿತ್ತು. ರಥದ ಕೇಂದ್ರದಲ್ಲಿ ರಾವಣನು
ಭಯಂಕರವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು.
ಅವನ ಹಿಂದೆ ಅಕ್ಕ ಪಕ್ಕಗಳಲ್ಲಿ ರಥಗಳ ಮೇಲೆ,
ಮಹಾಪಾರ್ಶ್ವ, ಮಹೋದರ, ವಿರೂಪಾಕ್ಷರಿದ್ದರು.
ಈ ಕ್ರಮದಲ್ಲಿ ರಾವಣನ ರಥವು ತೀವ್ರವಾಗಿ
ವಾನರಸೇನೆಯೊಳಗೆ ನುಗ್ಗಿತು. ಕೂಡಲೇ ಹೋರಾಟ
ದೊಂದು ಭಯಂಕರ ಯುದ್ಧ ಪ್ರಾರಂಭವಾಯಿತು.

34-2



ರಾಮನು ರಾಕ್ಷಸಸೇನೆಯೊಳಗೆ ನುಗ್ಗಿ ಎಂತಹ ವಿಧ್ವಂಸ ಮಾಡಿದನೋ, ಅಂತಹ ವಿಧ್ವಂಸವನ್ನೇ ರಾವಣನು ವಾನರಸೇನೆಯಲ್ಲಿ ಮಾಡತೊಡಗಿದನು. ಅದನ್ನು ನೋಡಿ ಸುಗ್ರೀವನು ವಾನರಸೇನೆಯನ್ನು ಕಾಪಾಡುವ ಭಾರವನ್ನು ಸುಷೇಣನಿಗೆ ಒಪ್ಪಿಸಿ, ತಾನು ತನ್ನ ಪೂರ್ಣಶಕ್ತಿಯನ್ನು ಪ್ರಯೋಗಿಸಿ ಯುದ್ಧ ಮಾಡಲು ತೊಡಗಿ, ಭೀಕರವಾಗಿ ಗರ್ಜಿಸಿ, ಅನೇಕಮಂದಿ ರಾಕ್ಷಸರನ್ನು ಗುದ್ದಿ ಕೊಂದು, ದೊಡ್ಡ ದೊಡ್ಡ ರಾಕ್ಷಸವೀರರನ್ನು ಕೊಲ್ಲಲು ವರ್ಧಿಸಿಕೊಂಡು ಸಿದ್ಧನಾದನು.

ಸುಗ್ರೀವನ ವಿಜೃಂಭಣೆಯನ್ನು ನೋಡಿ ವಿರೂಪಾಕ್ಷನು ತನ್ನ ರಥದಿಂದ, ಬದಿಯಲ್ಲಿದ್ದೊಂದು ಆನೆಯ ಮೇಲೆ ಹಾರಿ ಕುಳಿತು ವಾನರಸೇನೆಯೊಳಗೆ ತೂರಿಕೊಂಡುಬಂದನು. ವಾನರಸೇನೆಯ ಮುಖದಲ್ಲಿಯೇ ಅವನು ಸುಗ್ರೀವನಿಗೆ ಢೀ ಕೊಡಬೇಕಾಯಿತು.

ಸುಗ್ರೀವನ ಬಾಹುಗಳಿಂದ ಹಿಂದಕ್ಕೆ ದೂಡಲ್ಪಟ್ಟ ವಿರೂಪಾಕ್ಷನು ಬಾಣಗಳಿಂದ ಸುಗ್ರೀವನನ್ನು ನೋಯಿಸಿದನು. ಸುಗ್ರೀವನು ವಿರೂಪಾಕ್ಷನನ್ನು ಕೊಲ್ಲುವ ನಿರ್ಧಾರಕ್ಕೆ ಬಂದು, ಒಂದು ದೊಡ್ಡ ಮರದ ಬೊಡ್ಡೆಯನ್ನು ಎತ್ತಿ ವಿರೂಪಾಕ್ಷನು ಕುಳಿತಿರುವ ಆನೆಯ ಮುಖದ ಮೇಲೆ ಹೊಡೆದನು. ಆ ಪೆಟ್ಟಿಗೆ ಆನೆ ಹಿಮ್ಮುಗುಚಿ ಬಿದ್ದು ಪ್ರಾಣಬಿಟ್ಟಿತು. ಆಗ ವಿರೂಪಾಕ್ಷನು ಥಕ್ಕನೆ ನೆಲಕ್ಕೆ ಧುಮುಕಿ ಕತ್ತೀಡಾಲು ಹಿಡಿದುಕೊಂಡು ಸುಗ್ರೀವನನ್ನು ಕತ್ತಿಯಿಂದ ಹೊಡೆದನು.. ಸ್ವಲ್ಪ ಹೊತ್ತು ಸುಗ್ರೀವ ವಿರೂಪಾಕ್ಷರಿಗೆ ನಿಕರ ಯುದ್ಧ ಸಾಗಿತು. ಕಡೆಗೆ ಸುಗ್ರೀವನು ಪೂರ್ತಿ ವಿಜೃಂಭಿಸಿ ಮುಷ್ಟಿಯಿಂದ ವಿರೂಪಾಕ್ಷನ ಮುಖವನ್ನು ಗುದ್ದಿದನು. ಆ ಏಟಿಗೆ ಅವನ ಮುಖ ಗುರುತು ತಿಳಿಯದಂತೆ ಜಜ್ಜಿ, ಕುತ್ತಿಗೆ ಹಿಂದಕ್ಕೆ ಮುರಿದು ಮೂಗು ಬಾಯಿಗಳಿಂದ ರಕ್ತ ಸುರಿಯುತ್ತಿರಲು ನೆಲಕ್ಕೊರಗಿ ಸತ್ತುಹೋದನು. ಹಾಗೆ ವಿರೂಪಾಕ್ಷನು ಸತ್ತು ಬಿದ್ದುದನ್ನು ನೋಡಿ ರಾವಣನು ಸ್ವಲ್ಪವೂ ದುಃಖಿಸಲಿಲ್ಲ. ಕೂಡಲೇ ಅವನ ಸ್ಥಾನದಲ್ಲಿ ವಾನರಸೇನೆಯನ್ನು ನಿರ್ಮೂಲಿಸಲು ಮಹೋದರನನ್ನು ನಿಯಮಿಸಿದನು. ಮಹೋದರನು ಮಹಾಶಕ್ತಿಯಿಂದ ವಾನರಸೇನೆಯೊಳಗೆ ನುಗ್ಗಿ ಕೊಲ್ಲುತ್ತಾ ಬರುವುದನ್ನು ನೋಡಿ, ಸುಗ್ರೀವನು ಯುದ್ಧ ರಂಗದಲ್ಲಿದ್ದೊಂದು ಪರಿಘವನ್ನೆತ್ತಿಕೊಂಡು ಅವನಿಗೆ ಅಡ್ಡವಾಗಿ ನಿಂತು ಅವನ ರಥದ ಕುದುರೆಗಳನ್ನು ಪರಿಘದಿಂದ ಹೊಡೆದು ಕೊಂದನು. ಮಹೋದರನು ರಥದಿಂದ ಇಳಿದು ಗದೆಯನ್ನೆತ್ತಿಕೊಂಡು ಸುಗ್ರೀವನೊಡನೆ ಕಲೆಬಿದ್ದನು. ಇಬ್ಬರೂ ಹೊಡೆದಾಡಿಕೊಂಡಿರಲು, ಸುಗ್ರೀವನ ಪರಿಘವೂ ಮಹೋದರನ ಗದೆಯೂ ಒಮ್ಮೆಗೇ ಮುರಿದು ಬಿದ್ದುವು. ಕೂಡಲೇ ಇಬ್ಬರೂ ಮುಷ್ಟಿ ಯುದ್ಧಕ್ಕೆ ಪ್ರಾರಂಭಿಸಿದರು.

34-3



ಅವರಿಬ್ಬರೂ ಒಬ್ಬರಮೇಲೊಬ್ಬರು ಸಿಡಿಲುಗಳಂತೆ ಗುದ್ದಿಕೊಂಡರು. ಅದು ಪ್ರಯೋಜನವಿಲ್ಲವೆಂದುಕೊಂಡು ಇಬ್ಬರೂ ಯುದ್ಧ ರಂಗದಲ್ಲಿ ಕೈಗೆ ಸಿಕ್ಕಿದ ಆಯುಧಗಳನ್ನೆತ್ತಿಕೊಂಡು ಹೋರಾಟ ನಡೆಸಿದರು. ಸ್ವಲ್ಪ ಹೊತ್ತಿಗೆ ಮಹೋದರನ ಕತ್ತಿ ಸುಗ್ರೀವನ ಡಾಲಿನಲ್ಲಿ ಚುಚ್ಚಿಕೊಂಡಿತು. ಅವನು ಕತ್ತಿಯನ್ನು ಎಳೆಯುತ್ತಿದ್ದಾಗ ಸುಗ್ರೀವನು ಅವನ ತಲೆಯನ್ನು ಕೊಯ್ದು ಚೆಂಡಾಡಿದನು.

ಈ ಸಮಯದಲ್ಲಿ ಮಹಾಪಾರ್ಶ್ವನು ಅಂಗದನ ಸೇನೆಯ ಮೇಲೆ ಧುಮುಕುತ್ತ ಭಾರೀ ವಿಧ್ವಂಸ ಕಾರ್ಯ ನಡೆಸಿಕೊಂಡಿದ್ದನು. ಅಂಗದನು ಮಹಾ ರೋಷದಿಂದ ಬಂಗಾರದ ಕಟ್ಟುಗಳಿರುವ ಕಬ್ಬಿಣದ ಒನಕೆಯನ್ನು ಛಡಮಡವೆಂದು ಬೀಸುತ್ತಿರಲು, ಆ ಪೆಟ್ಟಿಗೆ ವಿರೂಪಾಕ್ಷನೂ ಅವನ ಸಾರಥಿಯೂ ಸುತ್ತು ಮುತ್ತಲಿದ್ದ ರಾಕ್ಷಸರೂ ತಲೆ ತಿರುಗಿ ಮೂರ್ಛೆ ಬಿದ್ದರು. ಅದೇ ಸಮಯದಲ್ಲಿ ಗವಾಕ್ಷನೂ ಜಾಂಬವಂತನೂ ಅಲ್ಲಿಗೆ ಬಂದು ದೊಡ್ಡ ದೊಡ್ಡ ಬಂಡೆಗಳಿಂದ ಮಹಾಪಾರ್ಶ್ವನ ರಥವನ್ನು ನುಗ್ಗು ನೂರು ಮಾಡಿ, ಕುದುರೆಗಳನ್ನು ಕೊಂದರು.

ಅಷ್ಟುಹೊತ್ತಿಗೆ ಮಹಾಪಾರ್ಶ್ವನು ಮೂರ್ಛೆಯಿಂದೆದ್ದು ಗವಾಕ್ಷನನ್ನೂ, ಜಾಂಬವಂತನನ್ನೂ ಬಾಣಗಳಿಂದ ಹೊಡೆಯ ತೊಡಗಿದನು. ಅದನ್ನು ನೋಡಿ ಅಂಗದನು ಅತ್ಯುಗ್ರನಾಗಿ ದೂರದಿಂದ ಒಂದು ಪರಿಘವನ್ನು ಹಾರಿಸಿ, ಅದರೊಂದಿಗೆ ತಾನೂ ಸಮೀಪ ಬಂದು ಮಹಾಪಾರ್ಶ್ವನ ಕಿರೀಟವನ್ನು ಹಾರಿಸಿ ಜುಟ್ಟು ಹಿಡಿದು ಹಿಂದೆ ಮುಂದೆ ಎಳೆದು ಅವನ ಎದೆಯ ಮೇಲೆ ಮುಷ್ಟಿಯಿಂದ ತಿವಿದು ಕೊಂದು ಹಾಕಿದನು.

ತನ್ನ ಮುಖ್ಯಬಂಟರು ತನ್ನ ಕಣ್ಣೆದಿರೇ ಸತ್ತು ಬೀಳುವುದನ್ನು ನೋಡಿ ರಾವಣನು ಸ್ವಲ್ಪವೂ ಅಳುಕದೆ "ಹೂಂ" ಎಂದು ದಿಕ್ಕುಗಳು ನಡುಗುವಂತೆ ಹೂಂಕಾರ ಮಾಡಿದನು. ತಾನೇ ಯುದ್ಧದ ಭಾರವನ್ನು ನಿರ್ವಹಿಸಲು ಸಿದ್ಧನಾದನು. ಈಗ ಅವನು ಇತರ ವಾನರರೊಂದಿಗೆ ಯುದ್ಧ ಮಾಡುವುದರಿಂದ ಪ್ರಯೋಜನವಿಲ್ಲವೆಂದು ಭಾವಿಸಿದನು. ಎಲ್ಲರಿಗೂ ಮೂಲಬಲ ಸ್ವರೂಪನಾದ ರಾಮನೊಂದಿಗೆ ಯುದ್ಧ ಮಾಡಲು ನಿಶ್ಚಯಿಸಿದನು.

ಆ ಕೂಡಲೇ ಅವನು ರಾಮನಕಡೆಗೆ ಹೋಗುತ್ತ, ವಾನರಸೇನೆಯ ಮೇಲೆ ತಾಮಸಾಸ್ತ್ರವನ್ನು ಪ್ರಯೋಗಿಸಿದನು. ಅದೊಂದು ಪ್ರಚಂಡ ಪ್ರಭಾವವುಳ್ಳ ಮಂತ್ರಾಸ್ತ್ರ. ಅದರ ಘಾಸಿಯಿಂದ ವಾನರರಿಗೆ ಕಣ್ಣು ಕತ್ತಲೆ ಬಂದಂತಾಗಿ ಹೆದರಿ ದೂರ ದೂರ ಓಡಿದರು. ಹೀಗೆ ವಾನರರು ಭಯದಿಂದ ಕಿರುಚುತ್ತಾ ಓಡುವುದನ್ನು ನೋಡಿ ರಾಮನು ಯುದ್ಧ ಸನ್ನದ್ಧನಾಗಿ ಮುಂದಕ್ಕೆ ಬಂದನು.

ಅವನೊಂದಿಗೆ ನೆರಳಿನಂತೆ ಲಕ್ಷ್ಮಣನೂ ಇದ್ದನು. ರಾವಣನನ್ನು ನೋಡಿದ ಕೂಡಲೇ ಅವನ ಮೇಲೆ





ಮೊದಲು ಬಾಣ ಪ್ರಯೋಗ ಮಾಡಿದವನು ಲಕ್ಷ್ಮಣನೇ. ಆದರೆ ರಾವಣನು ಅವನ ಬಾಣಗಳನ್ನೆಲ್ಲಾ ಅರ್ಧದಲ್ಲೇ ಪ್ರತಿ ಬಾಣಗಳಿಂದ ಖಂಡಿಸಿ, ರಾಮನಕಡೆಗೆ ತಿರುಗಿ ಅವನ ಮೇಲೆ ಬಾಣದ ಮಳೆಯನ್ನೇ ಕರೆಯ ತೊಡಗಿದನು. ರಾಮನು ಅವುಗಳನ್ನು ತನ್ನ ಬಾಣಗಳಿಂದ ಖಂಡಿಸುತ್ತಾ ಬಂದನು. ಹೀಗೆ ಇಬ್ಬರಿಗೂ ಎಡೆತೆರಪಿಲ್ಲದ ಘೋರ ಯುದ್ಧ ನಡೆಯಿತು. ಒಬ್ಬರ ಬಾಣಗಳನ್ನ ಇನ್ನೊಬ್ಬರು ಖಂಡಿಸುತ್ತಲೇ ಇದ್ದರು. ರಾವಣನು ಮಂತ್ರಾಸ್ತ್ರಗಳನ್ನೂ ಪ್ರಯೋಗಿಸ ತೊಡಗಿದನು. ರಾಮನಿಗೂ ಅವೆಲ್ಲಾ ಕರತಲಾಮಲಕವಾದಂಥವುಗಳೇ.

ರಾವಣನು ರಾಮನ ಮೇಲೆ ಅಸುರಾಸ್ತ್ರವೆಂಬ ಮಹಾ ಭಯಂಕರವಾದ ಅಸ್ತ್ರವನ್ನು ಪ್ರಯೋಗಿಸಿದನು. ರಾಮನು ಆಗ್ನೇಯಾಸ್ತ್ರದಿಂದ ಅದನ್ನು ಧ್ವಂಸಮಾಡಿದನು. ಅದನ್ನು ನೋಡಿ ಸುಗ್ರೀವನೇ ಮೊದಲಾದ ವಾನರ ವೀರರು ಸಂತೋಷಾತಿಶಯದಿಂದ ಕುಣಿದಾಡಿದರು. ತನ್ನ ಅಪ್ರತಿಹತವಾದ ಅಸುರಾಸ್ತ್ರವು ನಾಶವಾದುದನ್ನು ನೋಡಿ ರಾವಣನು ರೌದ್ರಾಸ್ತ್ರವನ್ನು ಪ್ರಯೋಗಿಸಿದನು. ರಾಮನು ಗಂಧರ್ವಾಸ್ತ್ರದಿಂದ ಅದನ್ನು ನಾಶಮಾಡಿದನು. ರಾವಣನು ಸೌರಾಸ್ತ್ರವನ್ನು ಪ್ರಯೋಗಿಸಲು ರಾಮನು ವರುಣಾಸ್ತ್ರ ವಾಯುವ್ಯಾಸ್ತ್ರಗಳಿಂದ ಅದನ್ನು ಖಂಡಿಸಿದನು. ಆಮೇಲೆ ಇಬ್ಬರೂ ಒಬ್ಬರ ಮೇಲೊಬ್ಬರು ಬಾಣಗಳನ್ನು ಬಿಡುತ್ತಿರಲು, ರಾಮನ ಬಾಣಗಳಿಂದ ರಾವಣನ ದೇಹದಲ್ಲಿ ಅನೇಕ ಗಾಯಗಳಾದುವು. ಅಷ್ಟು ಮಾಡಿ ರಾಮನು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವಾಗ, ಲಕ್ಷ್ಮಣನು ರಾವಣನ ಕಡೆಗೆ ಬಾಣ ಪ್ರಯೋಗ ಮಾಡುತ್ತ, ಅವನ ಧ್ವಜಸ್ತಂಭವನ್ನು ಮುರಿದು, ಸಾರಥಿಯ ತಲೆಯನ್ನು ತರಿದು ರಾವಣನ ಕೈಯಲ್ಲಿದ್ದ ಧನುಸ್ಸನ್ನೂ ಮುರಿದು ಹಾಕಿದನು.


ಲಕ್ಷ್ಮಣನು ಸ್ವಲ್ಪ ವಿಶ್ರಾಂತಿಗೆ ನಿಂತಕೂಡಲೇ ವಿಭೀಷಣನು ರಾವಣನ ರಥಾಶ್ವಗಳನ್ನೂ ತನ್ನ ಗದೆಯಿಂದ ಹೊಡೆದು ಕೊಂದನು. ರಾವಣನು ವಿಭೀಷಣನ ಮೇಲೆ ಉರಿದು ಬೀಳುತ್ತ ರಥದಿಂದ ಕೆಳಗೆ ಹಾರಿ, ವಿಭೀಷಣನ ಮೇಲೆ ಒಂದು ಶಕ್ತ್ಯಾಯುಧವನ್ನು ಬಿಸುಟನು. ಆ ಶಕ್ತ್ಯಾಯುಧವನ್ನು ಲಕ್ಷ್ಮಣನು ನಡುದಾರಿಯಲ್ಲೇ ತನ್ನ ಬಾಣಗಳಿಂದ ಮೂರು ತುಂಡಗಳಾಗಿ ಬೀಳುವಂತೆ ಕತ್ತರಿಸಿ ಹಾಕಿದನು.

ಅದನ್ನು ನೋಡಿ ರಾವಣನು ಇಮ್ಮಡಿ ಕೋಪದಿಂದ ಅತಿ ದಾರುಣವಾದ ಇನ್ನೊಂದು ಶಕ್ತ್ಯಾಯುಧವನ್ನು ಕೈಯಲ್ಲೆತ್ತಿಕೊಂಡನು. ಅದನ್ನು ನೋಡಿ ಲಕ್ಷ್ಮಣನು ವಿಭೀಷಣನಿಗೆ ಅಡ್ಡವಾಗಿ ನಿಂತನು. ರಾವಣನು ಆ ಎರಡನೇ ಶಕ್ತ್ಯಾಯುಧವನ್ನು ವಿಭೀಷಣನ ಕಡೆಗೆ ಬೀಸುವುದರೊಳಗೆ ಲಕ್ಷ್ಮಣನು ಬಾಣಪರಂಪರೆಗಳಿಂದ ರಾವಣನನ್ನು ಪೂರ್ಣವಾಗಿ ಮುಳುಗಿಸಿ ಬಿಟ್ಟನು.

ರಾವಣನು ಹಲ್ಲು ಕಡಿಯುತ್ತ ಲಕ್ಷ್ಮಣನನ್ನು ನೋಡಿ, "ವಿಭೀಷಣನಿಗೆ ಅಡ್ಡ ನಿಂತಿರುವ ನಿನ್ನ ಮೇಲೆಯೇ ಈ ಶಕ್ತ್ಯಾಯುಧವನ್ನು ಬೀಸುತ್ತೇನೆ. ಇದರಿಂದ ನೀನು ಸಾಯುವುದು ನಿಜ." ಎಂದು ಹೇಳಿ ಅದನ್ನು ಲಕ್ಷ್ಮಣನ ಮೇಲೆಯೇ ಒಗೆದನು.

ಅದು ವ್ಯರ್ಥವಾಗಿ ಹೋಗಲೆಂದು ರಾಮನು ಆಶಿಸಿದರೂ, ಆ ಶಕ್ತ್ಯಾಯುಧವು ಲಕ್ಷ್ಮಣನ ಎದೆಯನ್ನು ಹೊಡೆಯಿತು. ಕೂಡಲೇ ಲಕ್ಷ್ಮಣನು ಬೀಳುತ್ತಿರಲು, ಶಕ್ತ್ಯಾಯುಧವು ಅವನ ಎದೆಯೊಳಗೆ ತೂರಿ ಕೆಳಕ್ಕೆ ಬಿತ್ತು. ರಾಮನು ಕೋಪದಿಂದಲೂ ದುಃಖದಿಂದಲೂ ಆ ಶಕ್ತಿಯನ್ನು ತನ್ನ ಕೈಗಳಿಂದೆತ್ತಿ ಮುರಿದು ಹಾಕಿದನು. ಶಕ್ತ್ಯಾಯುಧವನ್ನು ಪ್ರಯೋಗಿಸಿ ಸುಮ್ಮನಿರದ ರಾವಣನು ರಾಮನ ಮೇಲೆ ಬಾಣವರ್ಷಣ ಕರೆಯುತ್ತಲೇ ಇದ್ದನು. ರಾಮನು ಅವುಗಳನ್ನು ಲಕ್ಷ್ಯಮಾಡದೆ ಲಕ್ಷ್ಮಣನನ್ನು ಆಲಿಂಗಿಸಿಕೊಂಡು ಹನುಮಂತ ಸುಗ್ರೀವ ಮೊದಲಾದ ವಾನರರನ್ನು ನೋಡಿ, "ನೀವು ಲಕ್ಷ್ಮಣನನ್ನು ಜಾಗರೂಕತೆಯಿಂದ ನೋಡಿಕೊಂಡಿರಿ. ಇನ್ನು ರಾವಣನನ್ನು ವಧಿಸದಿದ್ದರೆ ಪ್ರಯೋಜನವಿಲ್ಲ" ಎಂದನು.

ಆದರೆ ಲಕ್ಷ್ಮಣನ ಮೂರ್ಛಾವಸ್ಥೆಯನ್ನು ನೋಡಿ ರಾಮನಿಗೆ ಯುದ್ಧ ಮಾಡುವ ಆಸಕ್ತಿಕೂಡಾ ತಗ್ಗಿಹೋಯಿತು. ಇದನ್ನು ನೋಡಿ ವಾನರರ ವೈದ್ಯನಾದ ಸುಷೇಣನು ರಾಮನೊಂದಿಗೆ, "ಲಕ್ಷ್ಮಣನಿಗೆ ಪ್ರಾಣಾಪಾಯವೇನೂ ಆಗಿಲ್ಲ. ಇವನಿಗಾಗಿ ಚಿಂತಿಸಬೇಕಾಗಿಲ್ಲ" ಎಂದು ಸಮಾಧಾನ ಹೇಳಿ, ಹನುಮಂತನನ್ನು ನೋಡಿ, "ಹನುಮಾನ್, ನೀನು ಮೊದಲೊಮ್ಮೆ ಔಷಧಿಯ ಪರ್ವತದ ದಕ್ಷಿಣ ಶಿಖರದಲ್ಲಿರುವ ಔಷಧಿಯನ್ನು ತಂದೆಯಷ್ಟೆ? ಅದೇ ಮೂಲಿಕೆಗಳನ್ನು ತೆಗೆದುಕೊಂಡು ಬಾ. ನಾವು ಲಕ್ಷ್ಮಣನನ್ನು ಕಾಪಾಡಲೇ ಬೇಕು" ಎಂದನು.



ಆ ಕ್ಷಣವೇ ಹನುಮಂತನು ಮಿಂಚಿನ ವೇಗದಲ್ಲಿ ಔಷಧಿಯ ಪರ್ವತಕ್ಕೆ ಹೋದನು. ಆದರೆ ಅವನಿಗೆ ಮೂಲಿಕೆಗಳ ಗುರುತು ತಿಳಿಯದುದರಿಂದ ಪರ್ವತದ ದಕ್ಷಿಣ ಶಿಖರವನ್ನೇ ಕಿತ್ತು ಎತ್ತಿಕೊಂಡು ಬಂದು ಬಿಟ್ಟನು. "ಸುಷೇಣಾ, ನೀನು ಹೇಳಿದ ಮೂಲಿಕೆಯ ಗುರುತು ಗೊತ್ತಾಗಲಿಲ್ಲ. ಆ ಶಿಖರವನ್ನೇ ತಂದಿದ್ದೇನೆ. ನಿನಗೆ ಬೇಕಾದ ಔಷಧಿ ನೀನೇ ತೆಗೆದುಕೊ" ಎಂದ ಹನುಮಂತ.

ಸುಷೇಣನು ಹನುಮಂತನ ಪಟುತ್ವವನ್ನು ಮೆಚ್ಚಿಕೊಳ್ಳುತ್ತ ತನಗೆ ಬೇಕಾದ ಔಷಧದ ಮೂಲಿಕೆಗಳನ್ನು ಕಿತ್ತುಕೊಂಡನು. ತರುವಾಯ ಅದರ ರಸವನ್ನು ಲಕ್ಷ್ಮಣನ ಮೂಗಿಗೆ ಹಿಂಡಿದನು. ಕೂಡಲೇ ಲಕ್ಷ್ಮಣನು ಎಲ್ಲಾ ನೋವುಗಳಿಂದಲೂ ಮುಕ್ತನಾಗಿ, ಚುರುಕಿನಿಂದೆದ್ದು ನಿಂತನು.

ರಾಮನು ಆನಂದಬಾಷ್ಪ ಸುರಿಸುತ್ತ ಲಕ್ಷಣನನ್ನು ಆಲಿಂಗಿಸಿಕೊಂಡು, "ಲಕ್ಷ್ಮಣಾ, ನೀನು ನಿಜಕ್ಕೂ

ಸತ್ತು ಬಿಟ್ಟಿದ್ದರೆ ಸೀತೆಯಿಂದ ನನಗೆ ಆಗಬೇಕಾದುದೇನಿದೆ? ಈ ಯುದ್ಧಮಾಡಿ ಏನು ಪ್ರಯೋಜನ? ಇನ್ನೂ ನನಗೆ ಅದೃಷ್ಟವಿರುವುದರಿಂದಲೇ ನೀನು ಬದುಕಿರುವೆಯಪ್ಪಾ" ಎಂದನು.

"ಅಣ್ಣಾ, ನೀನು ಹೀಗೆ ಬಲವಿಲ್ಲದವನಂತೆ ಮಾತಾಡಲೇ ಬಾರದು. ರಾವಣನನ್ನು ಕೊಂದು ವಿಭೀಷಣನನ್ನು ಲಂಕೆಗೆ ರಾಜನನ್ನಾಗಿ ಮಾಡುವೆನೆಂದು ನೀನು ಪ್ರಮಾಣ ಮಾಡಿರುವೆ. ನನಗೋಸ್ಕರವಾಗಿ ನಿನ್ನ ನಿರಾಶೆಗಳನ್ನು ಬಿಡು. ರಾವಣನನ್ನು ಕೊಲ್ಲು. ವಿಭೀಷಣನಿಗೆ ಕೊಟ್ಟ ವಾಗ್ದಾನವನ್ನು ಈಡೇರಿಸು. ಸೂರ್ಯನು ಮುಳುಗುವುದರೊಳಗೆ ರಾವಣನು ಸಾಯಬೇಕೆಂದು ನಾನು ಬಯಸುತ್ತೇನೆ" ಎಂದು ಲಕ್ಷ್ಮಣನು ರಾಮನಿಗೆ ಉತ್ಸಾಹ ಬರುವಂತೆ ಹೇಳಿದನು.

ಲಕ್ಷ್ಮಣನು ಹೀಗೆ ಹೇಳಿದ ಕೂಡಲೇ ರಾಮನು ತನ್ನ ಮಹಾ ಕೋದಂಡವನ್ನು ಎತ್ತಿ ನಾಣೆಳೆದು ಠಂಕಾರಮಾಡಿ, ರಾವಣನ ಮೇಲೆ ಬಾಣಗಳನ್ನು ಪ್ರಯೋಗಿಸಲು ತೊಡಗಿದನು.

ರಾಮ ರಾವಣರ ಯುದ್ಧವು ಘನಘೋರಾಗಿ ನಡೆಯುತ್ತಿರಲು, ನೋಡುವವರಿಗೆ ಅದರಲ್ಲೊಂದು ಕೊರತೆ ಕಂಡುಬರುತ್ತಿದ್ದಿತು. ರಾವಣನು ರಥದ ಮೇಲೆ ನಿಂತು ಯುದ್ಧಮಾಡುತ್ತಿರಲು, ರಾಮನು ನೆಲದ ಮೇಲೆ ನಿಂತು ಯುದ್ಧಮಾಡುತ್ತಾನೆ. ದೇವತೆಗಳಿಗೆ ಇದನ್ನು ನೋಡಿ ಸಹಿಸಲಾಗಲಿಲ್ಲ.

ಈ ಕೊರತೆಯನ್ನು ಹೋಗಲಾಡಿಸಲು ಇಂದ್ರನು ತನ್ನ ಸಾರಥಿಯಾದ ಮಾತಲಿಯೊಂದಿಗೆ ಒಂದು ರಥವನ್ನು ಭೂಮಿಗೆ ಕಳುಹಿಸಿದನು. ಆ ರಥವು ಚಿತ್ರಕೆಲಸಗಳಿಂದಾದ ಬಂಗಾರದ ಹೊದಿಕೆಯಿಂದ, ಅನೇಕ ಗಂಟೆಗಳಿಂದ, ವೈಡೂರ್ಯದಿಂದ ಅಲಂಕೃತವಾದ ನೊಗದಿಂದ ಉದಯ ಸೂರ್ಯನಂತೆ ಬೆಳಗುತ್ತಿದ್ದಿತು. ಮಾತಲಿ ಆ ದಿವ್ಯರಥದೊಂದಿಗೆ ರಾಮನ ಬಳಿಗೆ ಬಂದು ಕೈಮುಗಿದು ಹೀಗೆಂದನು:

"ನಿನಗೆ ವಿಜಯವಾಗಲೆಂದು ಹಾರೈಸಿ ದೇವೇಂದ್ರನು ಈ ರಥವನ್ನು ನಿನಗಾಗಿ ಕಳುಹಿಸಿದ್ದಾನೆ. ಇದರೊಂದಿಗೆ ಈ ಇಂದ್ರಧನುಸ್ಸನ್ನೂ, ಕವಚವನ್ನೂ, ಬಾಣಗಳನ್ನೂ, ಶಕ್ತ್ಯಾಯುಧವನ್ನೂ ಇಂದ್ರನು ನಿನಗಾಗಿ ಕೊಟ್ಟು ಕಳುಹಿಸಿದ್ದಾನೆ. ಪೂರ್ವದಲ್ಲಿ ಇಂದ್ರನು ಇದೇ ರಥದ ಮೇಲೆಯೇ, ನನ್ನ ಸಾರಥ್ಯದಲ್ಲಿ ದಾನವರನ್ನು ಕೊಂದಿದ್ದಾನೆ. ಹಾಗೆಯೇ ಈಗ ನೀನು ಇದರ ಮೇಲೇರಿ ರಾವಣನಿಗೆ ಸರಿಸಮಾನನಾಗಿ ಯುದ್ಧಮಾಡಿ ಅವನನ್ನು ಕೊಲ್ಲಬೇಕು."

ಮಾತಲಿಯ ಮಾತನ್ನು ರಾಮನು ಮನ್ನಿಸಿ, ಆ ರಥಕ್ಕೆ ಪ್ರದಕ್ಷಿಣೆ ನಮಸ್ಕಾರ ಮಾಡಿ ಅದರ ಮೇಲೇರಿಕೊಂಡನು. ಯುದ್ಧ ಶುರುವಾಯಿತು.






Sept 1977

ವೀರಹನುಮಾನ್

ಮಾತಲಿಯ ಸಾರಥ್ಯದಲ್ಲಿ ದೇವೇಂದ್ರನು ಕಳುಹಿಸಿದ ರಥದ ಮೇಲೆ ರಾಮನು ರಾವಣನ ಮೇಲೆ ಬಾಣಗಳನ್ನು ಪ್ರಯೋಗಿಸುವ ವೈಭವವನ್ನು ನೋಡಿ, ರಾವಣನು ಕೋಪದಿಂದ ಅತ್ಯುಗ್ರನಾದನು. ಒಮ್ಮೆಗೇ ಗಾಂಧರ್ವಾಸ್ತ್ರವನ್ನೆತ್ತಿ ರಾಮನ ಮೇಲೆ ಪ್ರಯೋಗಿಸಿಬಿಟ್ಟನು. ಹೀಗೇನೋ ವಿಪರೀತವಾದುದನ್ನೇ ಮಾಡುವನೆಂದು ರಾಮನಿಗೆ ಗೊತ್ತಿದ್ದಿತು. ಅಲ್ಲದೆ ದಿವ್ಯಾಸ್ತ್ರಗಳ ಪ್ರಭಾವಗಳೂ, ಅದು ಇದಿರಾಳಿಯ ಬತ್ತಳಿಕೆಯಿಂದ ಎತ್ತಲ್ಪಟ್ಟ ಕೂಡಲೇ ರಾಮನಿಗೆ ಗೊತ್ತಾಗುತಿತ್ತು. ಅಂತೆಯೇ ರಾಮನು ರಾವಣನ ಗಾಂಧರ್ವಾಸ್ತ್ರವನ್ನು ಪ್ರತಿ ಗಾಂಧರ್ವಾಸ್ತ್ರದಿಂದಲೂ, ಆಮೇಲೆ ರಾವಣನು ಪ್ರಯೋಗಿಸಿದ ದೈವಾಸ್ತ್ರವನ್ನು ಅದೇ ಅಸ್ತ್ರದಿಂದಲೇ ನಿಷ್ಪ್ರಯೋಜನವನ್ನಾಗಿ ಮಾಡಿದನು.

ಇದನ್ನು ನೋಡಿ ರಾವಣನು ರಾಮನ ಮೇಲೆ ಬೀಭತ್ಸವನ್ನುಂಟು ಮಾಡಬಲ್ಲಂತಹ ರಾಕ್ಷಸಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರದಿಂದ ಹೊರಟ ಅನೇಕ ವಿಷಸರ್ಪಗಳು ಬಾಯಿಗಳಿಂದ ಉರಿಯನ್ನು ಕಕ್ಕುತ್ತ ರಾಮನಕಡೆಗೆ ಬರ ತೊಡಗಿದುವು. ರಾಮನ ಧನುಸ್ಸಿನಿಂದ ಗರುಡಾಸ್ತ್ರವು ಹೊರಟದ್ದೇ ತಡ, ಅನೇಕಾನೇಕ ಗರುಡಪಕ್ಷಿಗಳು ಹೊರಟು ವಿಷಸರ್ಪಗಳನ್ನು ತಮ್ಮ ಬಾಯಿಯಿಂದ ಕಚ್ಚಿ ಕಚ್ಚಿ ಸಂಹಾರ ಮಾಡಿದುವು.

ರಾವಣನು ಇನ್ನಷ್ಟು ಕೆರಳಿ ಭೂಮಿ ನಡುಗುವಂತೆ ಹೂಂಕರಿಸಿ ರಾಮನ ಮೇಲೆ ಮಾತ್ರವಲ್ಲದೆ ಸಾರಥಿಯಾದ ಮಾತಲಿಯ ಮೇಲೆಯೂ ಬಾಣಗಳನ್ನು ಪ್ರಯೋಗಿಸಿದನು. ಒಂದು ಬಲವಾದ ಬಾಣದಿಂದ ರಾಮನ ರಥದಲ್ಲಿರುವ ಧ್ವಜ ಸ್ತಂಭವನ್ನು ಮುರಿದು ಹಾಕಿದನು. ಮತ್ತೆ ಕೆಲವು ಬಾಣಗಳಿಂದ ರಥಾಶ್ವಗಳನ್ನು ನೋಯಿಸಿದನು, ಈ ಬಗೆಯ ರಾಮರಾವಣರ ಕಾಳೆಗವನ್ನು ಆಕಾಶದಲ್ಲಿ ನೋಡುತ್ತಿರುವ ದೇವತೆಗಳೂ, ಗಂಧರ್ವರೂ ಚಾರಣರೂ ಪರಮ ದುಷ್ಟನಾದ ರಾವಣನು ರಾಮನನ್ನು ತನ್ನ ಬಾಣಗಳಿಂದ ನೋಯಿಸುವುದು ಮಾತ್ರ



ವಲ್ಲದೆ, ದೇವೇಂದ್ರನ ರಥದ ಧ್ವಜವನ್ನು ಮುರಿದು ದನ್ನು ನೋಡಿ ಬಹಳಘಾಗಿ ಚಿಂತಿಸತೊಡಗಿದರು. ವಿಭೀಷಣನೂ ವಾನರರೂ ರಾಮರಾವಣರ ಯುದ್ಧ ವನ್ನು ನೋಡುತ್ತಾ ರಾವಣನ ಕೈ ಮೇಲಾದಂತಿರುವು ದನ್ನು ನೋಡಿ ಭಯಪಡತೊಡಗಿದರು.

ರಾಮನನ್ನು ಸಂಹಾರ ಮಾಡಲು ಇದೇ ತಕ್ಕ ಸಮಯವೆಂದುಕೊಂಡು ರಾವಣನು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಒಂದು ಭಯಂಕರ ಶಕ್ತಿಯ ಶೂಲವನ್ನು ಎತ್ತಿಕೊಂಡನು. ಅದು ಉರಿ ಯನ್ನು ಕಾರುತ್ತ ಹೊಗೆಯುಗುಳುತ್ತ ರಾಮನನ್ನು ತಾಗಿ ಸುಟ್ಟು ಹಾಕುವಂತಿರುವುದನ್ನು ನೋಡಿ, ರಾಕ್ಷಸರು ಸಂತೋಷ ಪಡುತ್ತ ತಮಗೆ ವಿಜಯದ ಕ್ಷಣವು ಸಮೀಪಿಸಿತೆಂದು ವಿಜಯಧ್ವಾನಗಳೆಬ್ಬಿಸಿ ರಾವಣನನ್ನು ಹುರುಪುಗೊಳಿಸಿ ಕುಣಿಯ ತೊಡಗಿದರು. ರಾವಣನು ಆ ಜ್ವಲಿಸುವ ಶೂಲ ವನ್ನು ಎತ್ತಿ ಹಿಡಿದು ರಾಮನನ್ನು ನೋಡಿ,

"ಎಲೋ ರಾಮಾ, ಇದು ನಿನ್ನ ಪಾಲಿನ ಮೃತ್ಯು! ಈ ಕ್ಷಣದಲ್ಲೇ ನಿನ್ನ ಆಯುಷ್ಯತೀರುತ್ತದೆ. ನಿನ್ನನ್ನೂ ನಿನ್ನ ತಮ್ಮನನ್ನೂ ಕೊಂದು, ಮಹಾಶೂರರಾದ ರಾಕ್ಷಸರನ್ನು ವಧಿಸಿದುದಕ್ಕೆ ತಕ್ಕ ಶಾಸ್ತಿ ಮಾಡು ತ್ತೇನೆ." ಎಂದು ಗರ್ಜಿಸಿ ಹೇಳಿ ರಾಮನ ಕಡೆಗೆ ಅದನ್ನು ಬೀಸಿದನು.

ರಾವಣನು ಬೀಸಿದ ಆ ಜ್ವಾಲಾ ಶೂಲವು ಮಿಂಚಿ ನೊಂದಿಗೆ ಕೂಡಿದ ಸಿಡಿಲಿನಂತೆ ಶಬ್ದಿಸುತ್ತ ರಾಮನ ಕಡೆಗೆ ಬರುತ್ತಿರಲು, ರಾಮನು ಅದರ ಮೇಲೆ ಪ್ರಯೋಗಿಸಿದ ಬಾಣಗಳೆಲ್ಲವೂ ಅದರ ಜ್ವಾಲೆಗೆ ಬೂದಿಯಾಗಿ, ಆ ಬೂದಿ ಗಾಳಿಯಲ್ಲೆದ್ದು ಆಕಾಶ ವನ್ನು ಮುಚ್ಚಿತು. ಆ ಮಹಾ ಶೂಲಾಸ್ತ್ರವು ಎಷ್ಟು ಶಕ್ತಿವಂತವಾದುದೆಂಬುದನ್ನು ರಾಮನು ಗ್ರಹಿಸಿ ಇಂದ್ರನು ತನ್ನ ರಥದೊಂದಿಗೆ ಕಳುಹಿಸಿದ ಮಹಾ ಶಕ್ತಿಯೊಂದನ್ನೆತ್ತಿ ಅದರ ಮೇಲೆ ಪ್ರಯೋಗಿಸಿದನು. ಆ ಶಕ್ತ್ಯಾಯುಧದ ಹೊಡೆತದಿಂದ ಜ್ವಾಲಾಶೂಲವು ಎರಡು ತುಂಡಾಗಿ ನೆಲದ ಮೇಲೆ ಬಿದ್ದು, ನೆಲದಲ್ಲಿ ಹಳ್ಳವನ್ನುಂಟು ಮಾಡಿ ಶಾಂತವಾಯಿತು.

ಅದರ ಬೆನ್ನಿಗೇ ರಾಮನು ವಿಜೃಂಭಿಸಿ ರಾವಣನ ಮೇಲೆ ಒಂದರ ಹಿಂದೊಂದಾಗಿ ಅನೇಕ ಬಾಣಗಳನ್ನು ಪ್ರಯೋಗಿಸತೊಡಗಿದನು. ತಾನು ಪ್ರಯೋಗಿಸಿದ ಮಹಾಶಕ್ತಿಯ ಶೂಲಾಯುಧವು ಹಾಗೆ ವ್ಯರ್ಥ ವಾದುದನ್ನು ನೋಡಿ ರಾವಣನು ದಿಗಿಲುಬಿದ್ದನು. ಅವನ ಮುಖದಲ್ಲಿ ಕರಿಛಾಯೆ ಆವರಿಸಿತು. ರಾಮ ಬಾಣಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೂ ಕೈಲಾಗದವನಂತಾಗಿ ಹೋದನು.

ಅವನು ಮಿಡುಕಾಡುವುದನ್ನರಿತು ರಾವಣನ ಸಾರಥಿ ರಥವನ್ನು ತಟ್ಟನೆ ಯುದ್ಧರಂಗದಿಂದ ದೂರಕ್ಕೆ ಹೊಡೆದು ಕೊಂಡು ಹೋದನು. ಅದು ಕೂಡ ರಾವಣನಿಗೆ ಗೊತ್ತಾಗಲಿಲ್ಲ. ರಾವಣನು ಓಡುವು ದನ್ನು ನೋಡಿ ರಾಕ್ಷಸರು ಭಯಕಂಪಿತರಾಗಿ ಹಾಹಾ

35-2

ಕಾರ ಮಾಡುತ್ತ, ಅವರೂ ಓಡತೊಡಗಿದರು. ರಾಕ್ಷಸರ ದೀನಾಲಾಪದಿಂದ ಎಚ್ಚೆತ್ತ ರಾವಣನಿಗೆ, ತನ್ನ ರಥವು ಯುದ್ಧರಂಗದಿಂದ ಎಲ್ಲೋ ಹೋಗುತ್ತಿರುವುದೆಂದು ತಿಳಿಯಿತು. ಅವನು ಸಾರಥಿಯ ಮೇಲೆ ಉಗ್ರನಾಗಿ, "ಎಲೆಲಾ! ದುಷ್ಟಾ! ಅಂಜುಕುಳಿಯೇ! ನನ್ನ ಅನುಮತಿ ಇಲ್ಲದೆ ರಥವನ್ನು ಯುದ್ಧರಂಗದಿಂದ ಏಕೆ ಹಿಂದಕ್ಕೊಯ್ಯುವೇ? ನನ್ನನ್ನು ಹೇಡಿಯೆಂದೂ ಅಸಮರ್ಥನೆಂದೂ ತಿಳಿದೆಯಾ? ಅಸ್ತ್ರಪ್ರಯೋಗಗಳು ತಿಳಿಯದವನೆಂದುಕೊಂಡೆಯಾ? ಶೌರ್ಯ ಪ್ರತಾಪಗಳಿಲ್ಲದವನೆಂದು ತಿಳಿದೆಯಾ? ಅಗತ್ಯಕ್ಕೆ ತಕ್ಕ ಯುಕ್ತಿಗಳನ್ನು ತೋರಿಸಲು ನನಗೆ ಕೈಲಾಗದೆಂದು ಮಾಡಿದೆಯಾ? ಛೀ! ಇಂಥಾ ಬುದ್ಧಿಗೇಡು ಕೆಲಸ ಏಕೋ ಮಾಡಿದೆ? ಶತ್ರುಗಳು ನಿನಗೇನಾದರೂ ಲಂಚ ಕೊಟ್ಟರೇ? ನನ್ನ ಕೀರ್ತಿ ಪ್ರತಿಷ್ಠೆಗಳಿಗೆ ಕಳಂಕ ಬರುವ ಹಾಗೆ ಮಾಡಿದೆಯಲ್ಲಾ! ಕೂಡಲೇ ರಥವನ್ನು ಯುದ್ಧರಂಗಕ್ಕೆ ತಿರುಗಿಸು!" ಎಂದನು.

ಅವನ ಪರುಷ ವಾಕ್ಯಗಳಿಂದ ಸಾರಥಿ ನೊಂದು ಸಣ್ಣ ಮುಖಮಾಡಿಕೊಂಡು, ವಿನಯದಿಂದ "ಮಹಾಪ್ರಭೂ, ನಾನು ನಿನ್ನ ಕ್ಷೇಮವನ್ನು ಬಯಸುವವನಾದುದರಿಂದಲೇ ರಥವನ್ನು ಯುದ್ಧರಂಗದಿಂದ ದೂರ ನಡೆಸಿದೆ. ರಾಮನು ಮಾಡುವ ಅತಿತೀವ್ರವಾದ ಯುದ್ಧಕ್ಕೆ ಸಾಟಿಯಾಗುವಂತೆ ನಿನ್ನ ಯುದ್ಧವು ಕಾಣಲಿಲ್ಲ. ನೀನು ತುಂಬಾ ಬಳಲಿ ಹೋಗಿರುವುದು ಗೊತ್ತಾಯಿತು. ರಥಾಶ್ವಗಳು ಕೂಡಾ ತುಂಬಾ ದಣಿದಿವೆ. ನಿನಗೂ ಕುದುರೆಗಳಿಗೂ ಸ್ವಲ್ಪ ವಿಶ್ರಾಂತಿ ಅಗತ್ಯವೆಂದು ತಿಳಿದು ರಥವನ್ನು ಹೀಗೆ ನಡೆಯಿಸಿ ಕೊಂಡುಬಂದೆ. ಯುದ್ಧರಂಗದಲ್ಲಿ ರಥವನ್ನು ಯಾವಾಗ ಹೇಗೆ ನಡೆಸಬೇಕೆಂಬುದು ಗೊತ್ತಿಲ್ಲದವನು ಒಳ್ಳೆಯ ಸಾರಥಿಯಾಗಬಲ್ಲನೇ? ಈಗ ಏನು ಮಾಡಬೇಕೆಂದು ನಿನ್ನ ಆಜ್ಞೆ?" ಎಂದನು.



ಸಾರಥಿ ಹೇಳಿದ ಸಮಾಧಾನವನ್ನು ಕೇಳಿ ರಾವಣನು ಅವನ ರಾಜಭಕ್ತಿಗೂ, ಸಮಯಸ್ಫೂರ್ತಿಗೂ ಮೆಚ್ಚಿ, ಬೆಲೆಬಾಳುವ ಕಂಕಣಗಳನ್ನು ಅವನಿಗೆ ಬಹುಮಾನವಿತ್ತು, "ಹೂಂ, ಇಷ್ಟರಲ್ಲೇ ಸಾಕಷ್ಟು ವಿಶ್ರಾಂತಿಯಾಯಿತು. ಇನ್ನು ರಾಮನನ್ನು ಈ ಕ್ಷಣದಲ್ಲೇ ನನ್ನ ಬಾಣ ಘಾತಕ್ಕೆ ಬಲಿ ತೆಗೆದುಕೊಳ್ಳುತ್ತೇನೆ. ನಾನು ದಣಿದಿರುವೆನೆಂಬ ಸಂದೇಹವನ್ನು ಬಿಟ್ಟು ಈಗಲೇ ರಥವನ್ನು ಅವನ ಮುಂದೆ ಓಡಿಸು" ಎಂದನು.

ರಾವಣನ ರಥವು ವೇಗವಾಗಿ ಮತ್ತೆ ರಾಮನ ಮುಂದೆ ಬಂದು ನಿಂತಿತು. ಅದಕ್ಕೆ ಮೊದಲು ರಾಮನು ತುಂಬಾ ದಣಿದು ರಾವಣನೊಂದಿಗೆ ಯುದ್ಧ ಮಾಡುವ ಸ್ಥಿತಿಯಲ್ಲಿರಲಿಲ್ಲ. ರಾಮರಾವಣರ ಯುದ್ಧವನ್ನು ನೋಡುತ್ತಿದ್ದ ದೇವತೆಗಳೊಂದಿಗೆ, ಆಗಸ್ತ್ಯಮುನಿಯೂ ಇದ್ದನು. ತ್ರಿಕಾಲಜ್ಞಾನಿಯಾದ ಅಗಸ್ತ್ಯನು ರಾಮನ ಪರಿಸ್ಥಿತಿಯನ್ನು




ಗಮನಿಸಿ, ರಾಮನಬಳಿಗೆ ಬಂದು, "ರಾಮಾ, ನಿನ್ನ ಬಳಲಿಕೆ ಮುಂತಾದ್ದು ಹೋಗುವಂತೆ, ತೊಟ್ಟ ಕಾರ್ಯವು ಈಡೇರುವವರೆಗೂ ಉತ್ಸಾಹಬರುವಂತೆ ನಿನಗೆ ಆದಿತ್ಯ ಹೃದಯವೆಂಬ ದಿವ್ಯಮಂತ್ರ ಸ್ತೋತ್ರವನ್ನು ಉಪದೇಶಿಸುತ್ತೇನೆ. ಅದು ಸಕಲ ಸ್ತೋತ್ರಗಳಲ್ಲಿ ಉತ್ತಮವಾದುದು. ಅದನ್ನು ಜಪಿಸಿ ನವಶಕ್ತಿಯನ್ನು ತಂದುಕೊಂಡು ರಾವಣನೊಂದಿಗೆ ಯುದ್ಧ ಮಾಡುವಿಯಂತೆ" ಎಂದು ರಾಮನಿಗೆ ಆದಿತ್ಯ ಹೃದಯವನ್ನು ಉಪದೇಶ ಮಾಡಿ ಅಲ್ಲಿಂದ ಹೊರಟುಹೋದನು.

ರಾಮನು ಆ ಸ್ತೋತ್ರವನ್ನು ಮೂರುಸಾರಿ ಜಪಿಸಿ ಇಮ್ಮಡಿ ಬಲೋತ್ಸಾಹಗಳನ್ನು ಪಡೆದು. ಬಿಲ್ಲಂಬುಗಳನ್ನು ಎತ್ತಿಕೊಂಡು ಯುದ್ಧಕ್ಕೆ ಸಿದ್ಧನಾಗುವುದಕ್ಕೂ, ರಾವಣನ ರಥವು ಮತ್ತೆ ಅವನ ಮುಂದೆ ಬಂದು ನಿಲ್ಲುವುದಕ್ಕೂ ಸರಿಹೋಯಿತು. ರಾಮನು ರಥ ಸಾರಥಿಯಾದ ಮಾತಲಿಯೊಂದಿಗೆ, "ಮಾತಲೀ, ಈಗ ನಾನು ರಾವಣನನ್ನು ನಿಶ್ಚಯವಾಗಿಯೂ ಕೊಲ್ಲುತ್ತೇನೆ. ಅದಕ್ಕೆ ತಕ್ಕಂತೆ ನಿನ್ನ ಸಾರಥ್ಯವೂ ಸಹಕಾರವಾಗುವಂತೆ ಚೆನ್ನಾಗಿರಲಿ. ದೇವೇಂದ್ರನ ಸಾರಥಿಯಾದ ನಿನಗೆ ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲವೆಂದು ನನಗೆ ಗೊತ್ತು. ಆದರೂ ಇದು ಭೂಮಿಯೆಂಬುದನ್ನು ಮರೆಯಬಾರದೆಂಬುದಕ್ಕೇ ತುಸು ಒತ್ತಿ ಹೇಳುತ್ತೇನೆ, ಅಷ್ಟೇ" ಎಂದನು.

ಮಾತಲಿ ಸಂತೋಷದಿಂದ, ರಥಾಶ್ವಗಳನ್ನು ಜೋರಾಗಿ ತಟ್ಟಿ ಹುರುಡಿಸಲು, ರಥವು ಚಕ್ರಾಕಾರವಾಗಿ ತಿರುಗಿ ರಾವಣನ ಸುತ್ತಲೂ ಸೇರಿದ ರಾಕ್ಷಸರನ್ನು ದೂರ ದೂರ ಓಡಿಸಿ, ಧೂಳೆಬ್ಬಿಸಿ ರಾವಣನ ಸುತ್ತಲೂ ಧೂಳು ಮುಸುಗುವಂತೆ ಮಾಡಿತು. ಇದನ್ನು ನೋಡಿ ರಾವಣನು ಕೋಪೋದ್ರಿಕ್ತನಾಗಿ ರಾಮನ ಮೇಲೆ ಬಾಣ ವರ್ಷಣ ಮಾಡತೊಡಗಿದನು. ರಾಮನು ಇಂದ್ರನು ಕಳುಹಿಸಿದ ಬಿಲ್ಲು ಬಾಣಗಳನ್ನೆತ್ತಿಕೊಂಡು ರಾವಣನೊಂದಿಗೆ ಯುದ್ಧಕ್ಕೆ ಉಪಕ್ರಮಿಸಿದನು.

ಈಸಾರಿ ಪ್ರಾರಂಭವಾದ ರಾಮ ರಾವಣರ ಯುದ್ಧವು ಅತಿ ಭಯಂಕರವಾಗಿ ಸಾಗಿತು. ಈ ಯುದ್ಧದ ವಿಜೃಂಭಣೆಯಲ್ಲಿ ಎರಡು ಶತ್ರು ಪಕ್ಷದ ವೀರರೂ ಅಪ್ರತಿಭರಾಗಿ, ಯುದ್ಧ ಬಿಟ್ಟು ತಟಸ್ಥರಾಗಿ ಅವರ ದ್ವಂದ್ವ ಯುದ್ಧವನ್ನು ಭಯಾಶ್ಚರ್ಯದಿಂದ ನೋಡತೊಡಗಿದರು. ರಾಮನೂ ರಾವಣನೂ ಕೂಡಾ ಇದೇ ತಮ್ಮ ಅಂತಿಮ ಹೋರಾಟವೆಂಬಂತೆ ಯುದ್ಧ ಮಾಡುತ್ತಿದ್ದರು.

ಹೀಗೆ ಸ್ವಲ್ಪ ಹೊತ್ತು ಯುದ್ಧ ನಡೆಯುತ್ತಿರಲು, ರಾಮಬಾಣದಿಂದ ಹೊರಟ ತೀಕ್ಷ್ಣವಾದೊಂದು ಬಾಣದಿಂದ ರಾವಣನ ತಲೆ ಹಾರಿ ನೆಲದ ಮೇಲೆ ಬಿತ್ತು. ಆದರೆ ಅದೇ ಕ್ಷಣದಲ್ಲಿ ರಾವಣನಿಗೆ ಮತ್ತೊಂದು ತಲೆ ಹುಟ್ಟಿಕೊಂಡಿತ್ತು. ರಾಮನು ಮತ್ತೊಂದು ಬಾಣದಿಂದ ಆ ತಲೆಯನ್ನು ಕೂಡಾ ಖಂಡಿಸಿದನು.





ಅದು ನೆಲಕ್ಕೆ ಬೀಳುವುದರೊಳಗೆ ರಾವಣನಿಗೆ ತಲೆ ಚಿಗುರಿತು. ಅದನ್ನು ಖಂಡಿತ್ತಲೇ ಪುನಃ ಹೊಸ ತಲೆ! ಈ ವಿಧವಾಗಿ ರಾಮನು ನೂರೊಂದು ಸಾರಿ ರಾವಣನ ಶಿರಸ್ಸನ್ನು ಖಂಡಿಸಿದನು. ಪ್ರತಿಸಾರಿಯೂ ರಾವಣನಿಗೆ ಇನ್ನೊಂದು ತಲೆ ಮೊಳೆತುಕೊಂಡೇ ಇದ್ದುದರಿಂದ, ಯುದ್ಧ ಮಾಡುತ್ತಲೇ ಇದ್ದನು. ಇದನ್ನು ನೋಡಿ ರಾಮನಿಗೆ ಬಹಳ ಆಶ್ಚರ್ಯವೆನಿಸಿತು. ಈ ಮೊದಲು ತಾನು ದಂಡಕಾರಣ್ಯದಲ್ಲಿ ವಿರಾಧನನ್ನೂ, ಕ್ರೌಂಚಾರಣ್ಯದಲ್ಲಿ ಕಬಂಧನನ್ನೂ ವಧಿಸಲು ಉಪಯೋಗಿಸಿದ ಹದನಾದ ಬಾಣಗಳು ಕೂಡಾ ರಾವಣನ ಮೇಲೆ ಉಪಯೋಗವಿಲ್ಲದೆ ಹೋಗಲು ಕಾರಣವೇನೆಂದು ಅವನಿಗೆ ತಿಳಿಯಲಿಲ್ಲ.

ರಾಮರಾವಣರು ಒಂದು ಕ್ಷಣವೂ ಎಡೆತೆರವಿಲ್ಲದಂತೆ ಏಳು ಹಗಲೂ ಏಳು ರಾತ್ರಿಯೂ ಯುದ್ಧ ಮಾಡಿದರು. ಮಾತಲಿ ಸ್ವಲ್ಪವೂ ಆಶ್ಚರ್ಯ ಪಡದೆ ರಥವನ್ನು ಚಲಿಸುತ್ತಿದ್ದನು. ರಾಮಬಾಣಗಳು ರಾವಣನ ಮೇಲೆ ಏಕೆ ವ್ಯರ್ಥವಾಗುವುವೆಂದು ಅವನಿಗೆ ಗೊತ್ತಿದ್ದಿತು. ಅದೇನೆಂದರೆ ರಾವಣನ ಮರಣಕಾಲವು ಇನ್ನೂ ಸಮೀಪಿಸಿರಲಿಲ್ಲ.

ಎಂಟನೇ ದಿನ ರಾವಣನ ಮರಣಕಾಲವು ಸಮೀಪಿಸಿತೆಂದು ತಿಳಿದ ಮಾತಲಿ ರಾಮನೊಂದಿಗೆ, "ರಾಮಾ, ಇದೇ ಕಡೆಯದಿನ. ಒಳ್ಳೆಯ ಸಮಯ ಬಂದಿದೆ. ಇನ್ನು ತಾತ್ಸಾರಮಾಡದೆ ಈ ದುಷ್ಟ ರಾವಣನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ವಧಿಸು." ಎಂದನು.

ಮಾತಲಿಯ ಮುಖದಿಂದ ಹೊರಟ್ಟ ಮಾತನ್ನು ಕೇಳಿ ರಾಮನು ಒಂದು ಬಗೆಯ ನಂಬುಗೆಯಿಂದ ಭಯಂಕರ ಸರ್ಪ ಸಮಾನವಾದ ಬಾಣವನ್ನು ಕೈಗೆತ್ತಿಕೊಂಡನು. ದೇದೀಪ್ಯಮಾನವಾದ ಆ ಬಾಣವನ್ನು ಒಂದು ಕಾಲದಲ್ಲಿ ಬ್ರಹ್ಮನೇ ಇಂದ್ರನಿಗಾಗಿ ಸೃಷ್ಟಿಸಿದ್ದನು. ದೊಡ್ಡ ದೊಡ್ಡ ರೆಕ್ಕೆಗಳಿರುವ ಆ ಬಾಣವು ವಜ್ರದಂತೆ ಕಠಿನವಾದ ಆಯುಧಗಳನ್ನು ಕೂಡಾ ಭೇದಿಸಬಲ್ಲಂತಹದು.

ರಾಮನು ಆ ಸರ್ವಶಕ್ತವಾದ ಬಾಣವನ್ನು ಮಹಾಸ್ತ್ರದಿಂದ ಅಭಿಮಂತ್ರಿಸಿ ರಾವಣನ ಮೇಲೆ ಪ್ರಯೋಗಿಸಿದನು. ಅದು ರಾವಣನ ಎದೆಯನ್ನು ಭೇದಿಸಿ ಬೆನ್ನಿನಿಂದ ಹೊರಗೆ ಹೋಯಿತು. ರಾವಣನು ತನ್ನ ಕೈಯಲ್ಲಿದ್ದ ಧನುರ್ಬಾಣಗಳನ್ನು ಜಾರಬಿಟ್ಟು, ಪ್ರಾಣಬಿಡುತ್ತಾ ರಥದ ಮೇಲಿನಿಂದ ಕೆಳಗೆ ಬಿದ್ದನು.

ತಮಗೆಲ್ಲಾ ಆಧಾರ ರೂಪನಾಗಿದ್ದ ರಾವಣನು ಸಾಯುವುದನ್ನು ನೋಡುತ್ತಲೇ ರಾಕ್ಷಸರು ಎದೆಯೊಡೆದು ಕೆಟ್ಟದನಿಯಿಂದ ಹಾಹಾಕಾರ ಮಾಡುತ್ತ ಲಂಕಾನಗರದಕಡೆಗೆ ಓಡಿ ಹೋಗತೊಡಗಿದರು. ವಾನರರು ವಿಜಯ ಘೋಷಣ ಮಾಡುತ್ತ ಅಲ್ಲಲ್ಲಿ ಬಿದ್ದಿದ್ದ ಮರ ಮುಂತಾದ ಆಯುಧಗಳನ್ನು ಹಿಡಿದುಕೊಂಡು ಅವರ ಬೆನ್ನಟ್ಟಿ ಓಡಿಸಿಕೊಂಡುಹೋದರು.



ರಾವಣನು ಸತ್ತುಬಿದ್ದ ಕೂಡಲೇ ದೇವದುಂದುಭಿಗಳು ಮೊಳಗಿದುವು. ಆಕಾಶದಿಂದ ರಾಮಲಕ್ಷ್ಮಣ ಸುಗ್ರೀವಾದಿಗಳ ಮೇಲೆ ಸಳಸಳನೆ ಪುಷ್ಪವೃಷ್ಟಿ ಗರೆಯಿತು. ವಾನರರೊಂದಿಗೆ ಆಕಾಶದಲ್ಲಿರುವ ದೇವತೆಗಳು ಗಂಧರ್ವರು ಚಾರಣರು ಕೂಡಾ ರಾಮನನ್ನು ಕೊಂಡಾಡತೊಡಗಿದರು. ಸುಗ್ರೀವನೂ ಅಂಗದನೂ ತಮ್ಮೆಲ್ಲಾ ಪ್ರಯತ್ನಗಳೂ ಫಲಿಸಿದಂತೆ ಸಂತೋಷಿಸಿದರು. ವಿಭೀಷಣನು ವಾನರ ಮುಖ್ಯರೊಂದಿಗೆ ರಾಮಲಕ್ಷ್ಮಣರ ಸುತ್ತಲೂ ಸೇರಿ ಅವರನ್ನು ಪ್ರಶಂಸಿಸಿದರು.

ಹೀಗೆ ಮುಗಿದ ಯುದ್ಧದ ಮೊದಲನೇ ಘಟ್ಟ ಮುಗಿಯುತ್ತಿರಲು, ತನ್ನ ಅಣ್ಣನ ಮರಣವನ್ನು ನೆನೆದು ವಿಭೀಷಣನಿಗೆ ಬಹಳ ದುಃಖ ಉಂಟಾಯಿತು. ಎಷ್ಟೋ ಸದ್ಗುಣಗಳಿಂದ ಕೂಡಿದ ತನ್ನ ರಾವಣಣ್ಣ ಸೀತೆಯನ್ನು ಅಪಹರಿಸಿ ತಂದು ಈ ಬಗೆಯ ಮರಣಕ್ಕೆ ಪಾಲಾಗಿದ್ದಾನೆ. ಅವನು ನಿಜವಾಗಿ ಮಹಾ ಪುರುಷನೆನ್ನಲು ಸಂದೇಹವೇನಿಲ್ಲ. ದೊಡ್ಡ ತಪಸ್ಸು ಮಾಡಿದವನು, ವರ ಪಡೆದವನು, ಪಂಡಿತನು, ನಿಷ್ಠಾವಂತನು, ಅಸಮಾನ ಶೌರ್ಯ ಪರಾಕ್ರಮಗಳುಳ್ಳವನು.

ಇದನ್ನೆಲ್ಲಾ ನೆನೆದು ವಿಭೀಷಣನು ಕಣ್ಣೀರಿಳಿಸುವುದನ್ನು ನೋಡಿ ರಾಮನು ಅವನಿಗೆ ಸಮಾಧಾನ ಹೇಳುತ್ತ, "ರಾವಣನು ಹೇಡಿಯಂತೆ ಸಾಯಲಿಲ್ಲ. ಮಹಾವೀರನಂತೆ ಹೋರಾಡುತ್ತಾ ಯುದ್ಧರಂಗದಲ್ಲಿ ಸತ್ತಿದ್ದಾನೆ. ಎಂತಹ ವೀರನಾದರೂ ಯುದ್ಧದಲ್ಲಿ ಶತ್ರುವಿನ ಕೈಯಲ್ಲಿ ಸಾಯುವಂತಾದರೆ ದುಃಖಿಸಬಾರದು. ವೀರನಂತೆ ಹೋರಾಡುತ್ತಾ ವೀರ ಸ್ವರ್ಗವನ್ನು ಸೇರಿದವನಿಗಾಗಿ ದುಃಖಿಸ ಬೇಕಾಗಿಲ್ಲ. ಶಾಂತನಾಗು. ಮುಂದಿನ ಕಾರ್ಯಗಳು ನಿನ್ನಿಂದಲೇ ನಡೆಯಬೇಕಾಗಿವೆ. ನೀನೇ ಹೀಗಿದ್ದರೆ ಹೇಗೆ?" ಎಂದನು. ಆಮೇಲೆ ರಾಮನಿಂದ ಅನುಮತಿ ಪಡೆದು ವಿಭೀಷಣನು ತನ್ನ ಅಣ್ಣನಿಗೆ ಶಾಸ್ತ್ರೋಕ್ತವಾಗಿ ದಹನ ಕ್ರಿಯೆ ಮುಂತಾದುವನ್ನು ನಡೆಸಲು ಏರ್ಪಾಡಿಗೆ ತೊಡಗಿದನು.

ಈ ಮಧ್ಯೆ ರಾವಣನ ಮರಣದ ಸುದ್ದಿ ಕೇಳಿದ ಕೂಡಲೇ ಅವನ ಹೆಂಡತಿಯರು ಬೆಂಕಿ ಬಿದ್ದ ಮನೆಯಿಂದ ಹೊರಗೆ ಓಡುವವರಂತೆ ರೋದಿಸುತ್ತಾ ಅಂತಃಪುರದಿಂದ ಹೊರಗೆ ಹೊರಟು ಉತ್ತರ ದಿಕ್ಕಿನ ಕೋಟೆಯ ಬಾಗಿಲಿನ ಮೂಲಕವಾಗಿ ಯುದ್ಧಭೂಮಿಗೆ ಬಂದರು.

ಅಲ್ಲಿ ರಾವಣನ ಶವವನ್ನು ನೋಡಿ ಅದರ ಮೇಲೆ ಬಿದ್ದು ತಮ್ಮ ಹಣೆಯನ್ನೂ ಎದೆಯನ್ನೂ ಹೊಡೆದುಕೊಳ್ಳುತ್ತಾ, ಕೇಳುವವರ ಎದೆಯೊಡೆಯುವ ಹಾಗೆ ರೋದನ ಮಾಡತೊಡಗಿದರು. ವಿಭೀಷಣನು ಹೇಳಿದಂತೆ ಸೀತೆಯನ್ನು ರಾಮನಿಗೆ ಕೊಟ್ಟಿರುತ್ತಿದ್ದರೆ ಇಂಥಾ ದುರ್ಗತಿ ಬರುತ್ತಿದ್ದಿಲ್ಲವಲ್ಲಾ, ಅರ್ಧಾಯುಷ್ಯದಲ್ಲೇ ಸಾಯುವಂತಾಯಿತಲ್ಲಾ, ಎಂದು ರಾವಣನ

35-7

ಗುಣಾವಗುಣಗಳನ್ನು ಹೇಳುತ್ತಾ ಆಕ್ರೋಶಿಸಿದರು. "ಎಷ್ಟೋ ವರಬಲವನ್ನು ಪಡೆದು, ಮೂರು ಲೋಕಗಳನ್ನೂ ಜಯಿಸಿ ದೇವತೆಗಳಿಂದ ಕೂಡಾ ಸೇವೆ ಮಾಡಿಸಿಕೊಳ್ಳುವಂಥವನಾದ ನೀನು ಕಡೆಗೆ ಮಾನವಿಯಿಂದಾಗಿ, ಮಾನವಮಾತ್ರನ ಕೈಯಲ್ಲಿ ಪ್ರಾಣ ಬಿಟ್ಟೆಯಲ್ಲಾ!" ಎಂದು ಮಂಡೋದರಿ ವಿಲಪಿಸಿದಳು.


ಸ್ತ್ರೀಯರ ಗೋಳಾಟವನ್ನು ಕೇಳುತ್ತಾ ಇದ್ದ ರಾಮನು ವಿಭೀಷಣನನ್ನು ತನ್ನ ಬಳಿಗೆ ಕರೆದು, "ವಿಭೀಷಣಾ! ಈ ಸ್ತ್ರೀಯರ ಆಲಾಪನೆಗೆ ಕೊನೆ ಮೊದಲಿರಲಾರದು. ಇವರನ್ನೆಲ್ಲಾ ಅಂತಃಪುರಕ್ಕೆ ಕಳುಹಿಸಿ, ಬೇಗನೇ ನಿನ್ನ ಅಣ್ಣನ ಅಂತಿಮಕ್ರಿಯೆಗಳನ್ನು ಜರುಗಿಸಬೇಕು. ತಡ ಮಾಡುವುದು ಒಳ್ಳೆಯದಲ್ಲ" ಎಂದನು.


ವಿಭೀಷಣನು ಆ ಸ್ತ್ರೀಯರಿಗೆ ತಿಳಿಹೇಳಿ ಅಂತಃಪುರಕ್ಕೆ ಕಳುಹಿಸಿದ ಮೇಲೆ ಅವನಿಗೊಂದು ಧರ್ಮ ಸಂದೇಹ ಉಂಟಾಯಿತು. ತನ್ನ ಅಣ್ಣನು ಎಷ್ಟೇ ಧರ್ಮ ಪರಾಯಣನೂ ಮಹಾಜ್ಞಾನಿಯೂ ತಪಃಸಂಪನ್ನನೂ ನಿಜವಾಗಿದ್ದರೂ, ಅದೆಲ್ಲವನ್ನೂ ಹಾಳುಮಾಡುವಂತಹ ಪರಸ್ತ್ರೀಯನ್ನು ಹಿಡಿದು ತಂದು ,ಸೆರೆ ಹಾಕಿ ಹಿಂಸಿಸಿ ಮಹಾ ನೀಚನೂ ದುಷ್ಟನೂ ಎಂಬ ಅಳಿಯದ ಕಳಂಕಕ್ಕೆ ಬಾಧ್ಯನಾಗಿ ಬಿಟ್ಟನು. ಅಂತಹವನಿಗೆ ತಾನು ಅಗ್ನಿ ಸಂಸ್ಕಾರದಂತಹ ಧರ್ಮ ಕರ್ಮಗಳನ್ನು ಮಾಡಬಹುದೇ? ಅದು ಧರ್ಮ ಸಮ್ಮತವಾದೀತೇ?

ತನಗೆ ಬಂದ ಸಂದೇಹವನ್ನು ವಿಭೀಷಣನು ರಾಮನೊಂದಿಗೆ ಹೇಳಿದನು.. ಅದಕ್ಕೆ ರಾಮನು ರಾವಣನ ಇತರ ಗುಣಗಳನ್ನು ಪ್ರಶಂಸಿಸುತ್ತ, "ಆ ಒಂದು ಪಾಪಕ್ಕೆ ಪ್ರಾಯಶ್ಚಿತ್ತವು ಅವನ ಮರಣದಲ್ಲಿ ಕೊನೆಗೊಂಡಿತು. ಇನ್ನು ಅಣ್ಣನಿಗೆ ನಿನ್ನ ಕೈಯಿಂದ ಉತ್ತರ ಕ್ರಿಯೆಗಳನ್ನು ಮಾಡಬೇಕಾದುದೇ ಧರ್ಮ ಸಮ್ಮತವಾದ ಕಾರ್ಯ. ಇದರಲ್ಲಿ ಸಂದೇಹವೇನಿಲ್ಲ." ಎಂದು ಸ್ಪಷ್ಟಪಡಿಸಿದನು.

ಆಮೇಲೆ ವಿಭೀಷಣನು ಚಿತ್ತಶುದ್ಧಿಯಿಂದ ಮುಂದಿನ ಕಾರ್ಯಗಳಲ್ಲಿ ತೊಡಗಿದನು. ಬ್ರಾಹ್ಮಣರು ಮಂತ್ರೋಚ್ಚಾರ ಮಾಡಿದರು. ಚಂದನ ಕಾಷ್ಠಗಳಿಂದ ಚಿತೆಯು ನಿರ್ಮಾಣವಾಯಿತು. ಅದರ ಮೇಲೆ ರತ್ನ ಕಂಬಳಿ ಹಾಸಿ, ರಾವಣನ ಶವವನ್ನು ಅಲಂಕಾರ ಮಾಡಿ ಮಲಗಿಸಿದರು. ವಿಧ್ಯುಕ್ತವಾಗಿ ವಿಭೀಷಣನು ಚಿತಿಗೆ ಅಗ್ನಿ ಸಂಸ್ಕಾರ ಮಾಡಿದನು.

ಆಮೇಲೆ ವಿಭೀಷಣನು ಸ್ನಾನ ಮಾಡಿ ಅಣ್ಣನಿಗೆ ಜಲತರ್ಪಣ ಕೊಟ್ಟು, ರಾವಣನ ಪತ್ನಿಯರನ್ನು ಅರಮನೆಯೊಳಗೆ ಕಳುಹಿಸಿ, ಮುಂದಿನ ಕಾರ್ಯಗಳಿಗಾಗಿ ಅನುಜ್ಞೆ ಕೇಳಲು ರಾಮನ ಬಳಿಗೆ ಬಂದು ವಿನಯದಿಂದ ನಿಂತನು.






Oct 1977

ವೀರಹನುಮಾನ್

ಅಪೂರ್ವವೆನಿಸುವಂತಹ ರಾಮ ರಾವಣರ ಯುದ್ಧವನ್ನು ನೋಡಲು ಬಂದ ದೇವತೆಗಳೂ ಗಂಧರ್ವರೂ ರಾಮನ ಪರಾಕ್ರಮವನ್ನು ಕುರಿತು, ವಾನರರು ಮಾಡಿದ ಸಾಹಸದಿಂದ ಕೂಡಿದ ಭಯಂಕರ ಯುದ್ಧವನ್ನು ಕುರಿತೂ ಆಶ್ಚರ್ಯದಿಂದ ಮಾತಾಡಿಕೊಳ್ಳುತ್ತ ತಮ್ಮ ತಮ್ಮ ಪ್ರದೇಶಗಳಿಗೆ ಹೋದರು. ಸಂಜೀವನ ಪರ್ವತವನ್ನು ಹೊತ್ತುತಂದ ಹನುಮಂತನ ಸಾಹಸ ಅವರೆಲ್ಲರನ್ನೂ ವಿಶೇಷವಾಗಿ ಬೆರಗುಗೊಳಿಸಿತ್ತು.

ಯುದ್ಧ ಮುಗಿದಮೇಲೆ ರಾಮನು ಮಾತಲಿಯನ್ನು ಗೌರವಿಸಿ ಅವನನ್ನು ಇಂದ್ರನ ರಥದೊಂದಿಗೆ ಸ್ವರ್ಗಕ್ಕೆ ಕಳುಹಿಸಿಕೊಟ್ಟನು. ಆಮೇಲೆ ಸುಗ್ರೀವನನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ತನ್ನ ಶಿಬಿರದ ಕಡೆಗೆ ತೆರಳಿದನು. ಅಲ್ಲಿ ಲಕ್ಷ್ಮಣನನ್ನು ಕುರಿತು ರಾಮನು, "ಲಕ್ಷ್ಮಣಾ, ನಮ್ಮ ಕೆಲಸವು ಪೂರ್ಣ ಮುಗಿಯಲಿಲ್ಲ. ನಾವೀಗ ಲಂಕಾರಾಜ್ಯಕ್ಕೆ ವಿಭೀಷಣನನ್ನು ಅಭಿಷಿಕ್ತಗೊಳಿಸಬೇಕಾದುದು ಮುಖ್ಯಕರ್ತವ್ಯ. ಅದಕ್ಕೆ ಬೇಕಾಗಿರುವ ಏರ್ಪಾಡುಗಳನ್ನು ಬೇಗನೇ ಮಾಡಿ ಮುಗಿಸಿಬಿಡು." ಎಂದು ಹೇಳಿದನು. ಕೂಡಲೇ ಲಕ್ಷ್ಮಣನು ಆ ಕಾರ್ಯಕ್ಕೆ ತೊಡಗಿದನು. ಅವನು ವಾನರರ ಕೈಗೆ ಸುವರ್ಣ ಕಲಶಗಳನ್ನು ಕೊಡಿಸಿ ಅವರಿಂದ ಸಮುದ್ರಜಲವನ್ನು ತರಿಸಿದನು. ಅನಂತರ ವಿಭೀಷಣನನ್ನು ಕೈಹಿಡಿದು ಕರೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕೂಡಿಸಿದನು. ಸಮುದ್ರತೀರ್ಥಗಳಿಂದ ವಿಧ್ಯುಕ್ತವಾಗಿ ಅವನಿಗೆ ಮಕುಟಾಭಿಷೇಕವನ್ನೂ ಲಕ್ಷ್ಮಣನೇ ಮಾಡಿದನು. ಆಗ ವಿಭೀಷಣನ ಮಂತ್ರಿಗಳೂ ಅವನಮೇಲೆ ಭಕ್ತಿ ಗೌರವವಿರುವ ರಾಕ್ಷಸರೂ ಜಯಜಯಧ್ವಾನವೆಬ್ಬಿಸಿದರು. ಆ ಸಮಯದಲ್ಲಿ ವಿಭೀಷಣನು ತಾನು ಪರಿಪಾಲಿಸಲಿರುವ ಲಂಕಾರಾಜ್ಯದ ರಾಕ್ಷಸರಿಗಿರುವ ಭಯವನ್ನು ಹೋಗಲಾಡಿಸಿ, ಇಂದಿನಿಂದ ಲಂಕಾನಗರವು ಸುಖಶಾಂತಿಗಳಿಂದ ಕಳಕಳಿಸುವುದೆಂದು ವಾಗ್ದಾನ ಮಾಡಿದನು. ರಾಕ್ಷಸಪೌರರು ಅವನಿಗೆ ಬೆಲೆಬಾಳುವ ಕಾಣಿಕೆಗಳನ್ನು ಸಮರ್ಪಿಸಿದರು. ಆ ಸಂತೋಷದ ಶುಭಸಮಯದಲ್ಲಿ ವಿಭೀಷಣನು



ಕೃತಜ್ಞತೆಯ ಸೂಚಕವಾಗಿ ರಾಮಲಕ್ಷ್ಮಣರಿಗೆ ದಿವ್ಯವಾದ ಅನೇಕ ವಸ್ತುಗಳನ್ನು ಬಹುಮಾನವಿತ್ತನು. ಎಲ್ಲರಿಗೂ ವಿಭೀಷಣನ ಮೇಲೆ ಒಳ್ಳೆಯ ನಂಬುಗೆಯುಂಟಾಯಿತು.


ವಿಭೀಷಣನು ತನ್ನ ಕೋರಿಕೆ ಈಡೇರಿದುದಕ್ಕೆ ಕೃತಜ್ಞತೆ, ಭಕ್ತಿ, ಗೌರವಗಳಿಂದ ರಾಮನಿಗೂ ಉತ್ತಮವಾದ ಕಾಣಿಕೆಗಳನ್ನು ಸಮರ್ಪಿಸಿದನು. ರಾಮನಿಗೆ ಕಾಣಿಕೆಗಳ ಮೇಲೆ ಒಂದಿಷ್ಟೂ ಇಷ್ಟವಿಲ್ಲದಿದ್ದರೂ ವಿಭೀಷಣನ ತೃಪ್ತಿಗಾಗಿ ಸ್ವೀಕರಿಸಿದನು.

ಇನ್ನೊಂದು ಮುಖ್ಯವಿಷಯವು ರಾಮನ ಹೃದಯವನ್ನು ಪೀಡಿಸುತ್ತಾ ಬಾಕಿ ಉಳಿದಿತ್ತು. ತನ್ನ ಸಮೀಪದಲ್ಲಿ ಕೈಗಳನ್ನು ಜೋಡಿಸಿ ವಿನಯಪರ್ವತದಂತೆ ನಿಂತಿರುವ ಹನುಮಂತನನ್ನು ನೋಡಿ ರಾಮನು, "ಹನುಮಾನ್, ನೀನೀಗ ರಾಕ್ಷಸರ ರಾಜನಾದ ವಿಭೀಷಣನ ಅನುಮತಿ ಪಡೆದು ಲಂಕಾನಗರದೊಳಗೆ ರಾವಣನ ಅರಮನೆಯಲ್ಲಿರುವ ಸೀತೆಯನ್ನು ನೋಡಿ, ವಿಜಯವಾರ್ತೆಯನ್ನು ತಿಳಿಸು. ನನ್ನ ಕೈಯಿಂದ ರಾವಣನು ಸತ್ತನೆಂದು ಹೇಳು. ನಾನು ಲಕ್ಷ್ಮಣ ಸುಗ್ರೀವರೊಂದಿಗೆ ಇರುವುದನ್ನೂ ಹೇಳು. ಈ ಶುಭವಾರ್ತೆಗಳನ್ನು ಅವಳಿಗೆ ಹೇಳಿ, ಅವಳ ಸಂಗತಿ ಸಮಾಚಾರಗಳನ್ನು ತಿಳಿದುಕೊಂಡು ಬಂದು ನನಗೆ ಹೇಳು" ಎಂದನು.

ಹನುಮಂತನು ರಾಮಾಜ್ಞೆಯನ್ನು ಶಿರಸಾವಹಿಸಿಕೊಂಡು ಹೊರಟನು. ದಾರಿಯುದ್ದಕ್ಕೂ ರಾಕ್ಷಸರು ಮಾಡುವ ಗೌರವಮರ್ಯಾದೆಗಳನ್ನು ಸ್ವೀಕರಿಸುತ್ತಾ ಲಂಕಾನಗರದೊಳಗೆ ಪ್ರವೇಶಿಸಿದನು. ಅವನು ರಾವಣನ ಮಂದಿರ ಪ್ರಾಂಗಣದೊಳಗೆ ಹೋಗಿ ವಿಭೀಷಣನ ಅನುಜ್ಞೆ ಪಡೆದು, ಒಂದು ಮರದ ಕೆಳಗೆ ರಾಕ್ಷಸಸ್ತ್ರೀಯರ ನಡುವೆ ಚಿಂತಿಸುತ್ತಾ ಕುಳಿತಿರುವ ಸೀತೆಯನ್ನು ನೋಡಿದನು.

ರಾಕ್ಷಸಸ್ತ್ರೀಯರು ದೂರ ದೂರ ಸರಿದು ಅವನಿಗೆ ದಾರಿಬಿಟ್ಟರು. ಹನುಮಂತನು ಸೀತೆಯ ಹತ್ತಿರ ಹೋಗಿ ತನ್ನ ಹೆಸರು ಹೇಳಿಕೊಂಡು ನಮಸ್ಕಾರ ಮಾಡಿ ಕೈಕಟ್ಟಿಕೊಂಡು ಸೀತೆಯ ಮುಂದೆ ನಿಂತನು. ಸೀತೆ ಮೊದಲು ಅವನ ಗುರುತು ಹಿಡಿಯದಿದ್ದರೂ, ಮರುಕ್ಷಣವೇ ಹನುಮಂತನ ಜ್ಞಾಪಕ ಬಂದು ಆನಂದಪಟ್ಟಳು. ಅವಳ ಮುಖದಲ್ಲಿ ತನ್ನನ್ನು ಗುರುತಿಸಿದ ಸುಳಿವನ್ನು ಗ್ರಹಿಸಿದ ಹನುಮಂತನು ರಾಮನು ಹೇಳಿದ ಮಾತುಗಳನ್ನು ಹೇಳಿದನು:

"ಸೀತಾದೇವೀ, ರಾಮನು ಕ್ಷೇಮವಾಗಿದ್ದಾನೆ. ಅವನೀಗ ವಿಜಯಶಾಲಿಯಾಗಿ ವಿಭೀಷಣ ಸುಗ್ರೀವರೊಂದಿಗೆ ಇದ್ದಾನೆ. ತಾನು ಶತ್ರುಗಳನ್ನು ವಧಿಸಿ ತನ್ನ ಆಶಯವನ್ನು ನೆರವೇರಿಸಿ ಕ್ಷೇಮವಾಗಿರುವ ಸಂಗತಿಯನ್ನು ನಿನಗೆ ಹೇಳಲು ನನ್ನನ್ನು ಕಳುಹಿಸಿದ್ದಾನೆ. ರಾಮನು ರಾವಣನನ್ನು ಕೊಂದು ಬೀಳಿಸಲು ವಿಭೀಷಣನ ಸಹಾಯವೂ ಲಕ್ಷ್ಮಣನ ಬೆಂಬಲವೂ ಉಪಕರಿಸಿದುವು. ರಾಮನು ನಿನ್ನ ಕ್ಷೇಮವನ್ನು ಕೇಳಿ,



ನಿನ್ನೊಂದಿಗೆ ಹೀಗೆ ಹೇಳುವಂತೆ ಹೇಳಿದ್ದಾನೆ. ಆ ರಾಮನ ಮಾತುಗಳೇನಂದರೆ, 'ಸೀತೆಯೇ, ನಿನಗೆ ಶುಭಸಮಾಚಾರವನ್ನು ಹೇಳಿ ಸಂತೋಷವನ್ನುಂಟು ಮಾಡುತ್ತೇನೆ. ಪಾತಿವ್ರತ್ಯ ಧರ್ಮವನ್ನು ತಿಳಿದವಳಾದ ನೀನು ನನ್ನ ಅದೃಷ್ಟವಶದಿಂದ ಜೀವದೊಂದಿಗಿರುತ್ತೀ. ನನ್ನ ಪರಾಕ್ರಮದಿಂದ ವಿಜಯವುಂಟಾಯಿತು. ಇನ್ನು ನೀನು ನಿಶ್ಚಿಂತೆಯಾಗಿರಬಹುದು. ಒಂದಿಷ್ಟೂ ಚಿಂತಿಸಬೇಕಾಗಿಲ್ಲ. ರಾವಣನು ಸತ್ತು ಹೋದನು. ಲಂಕಾನಗರವೀಗ ನಮ್ಮ ವಶವಾಗಿದೆ. ನಾನು ದೃಢ ನಿಶ್ಚಯದಿಂದ ಸಮುದ್ರಕ್ಕೆ ಸೇತುವೆ ಕಟ್ಟಿಸಿ ರಾವಣನನ್ನು ಕೊಲ್ಲದೆ ಬಿಡೆನೆಂಬ ಶಪಥವನ್ನು ಪೂರೈಸಿಕೊಂಡೆನು. ಈಗ ಲಂಕೆಗೆ ವಿಭೀಷಣನು ರಾಜನಾಗಿದ್ದಾನೆ. ಇನ್ನು ನೀನು ರಾವಣನ ಮನೆಯಲ್ಲಿರಲು ಒಂದಿಷ್ಟೂ ಭಯಪಡಬೇಕಾಗಿಲ್ಲ. ಅದೀಗ ನಿನ್ನದೇ ಮನೆಯಾಗಿದೆ. ನಿನ್ನನ್ನು ನೋಡಲು ವಿಭೀಷಣನು ಬರುವನು. ಅವನನ್ನು ನೋಡಿ ನೀನು ಹೆದರಬೇಕಾಗಿಲ್ಲ.''

ಹನುಮಂತನು ಹೀಗೆ ಹೇಳುತ್ತಿರುವಾಗ ಸೀತೆ ಆನಂದಾತಿರೇಕದಿಂದ ಎದ್ದು ನಿಂತುಕೊಂಡಳು. ಆದರೆ ಅವಳ ಬಾಯಿಯಿಂದ ಏನೂ ಹೊರಡಲಿಲ್ಲ. ಮಾತಾಡಲು ಅವಳ ಗಂಟಲು ರುದ್ಧವಾಗಿಬಿಟ್ಟಿತ್ತು.


ಅದನ್ನು ನೋಡಿ ಹನುಮಂತನು, "ಸೀತಾದೇವೀ, ಏನು ಆಲೋಚನೆ ಮಾಡುತ್ತಿರುವೆ? ನಾನು ಹೇಳಿದ ಮಾತುಗಳಿಗೆ ಏನೂ ಪ್ರತ್ಯುತ್ತರ ಹೇಳಲಿಲ್ಲವೇಕೆ? ರಾಮನೊಡನೆ ನಾನೇನು ಹೇಳಬೇಕು?'' ಎಂದು ಕೇಳಿದನು.

ಸೀತೆ ನಡುಗುವ ಕಂಠಸ್ವರದಿಂದ, "ಹನುಮಂತಾ, ನನ್ನ ಪತಿಯ ವಿಜಯವಾರ್ತೆಯನ್ನು ನಿನ್ನ ಬಾಯಿಯಿಂದ ಕೇಳಿ ಆನಂದವನ್ನು ತಾಳಲಾರದೆ ನನ್ನ ಬಾಯಿಯಿಂದ ಮಾತು ಹೊರಡಲಿಲ್ಲ. ಇಂತಹ ಪ್ರಿಯವಾರ್ತೆ ತಂದುದಕ್ಕಾಗಿ ನಿನ್ನನ್ನು ಅಭಿನಂದಿಸಲು ಎಷ್ಟು ಆಲೋಚನೆ ಮಾಡಿದರೂ ತಕ್ಕ ಮಾತುಗಳು ಕಾಣಲೊಲ್ಲದು. ಹೋಗಲಿ. ನಿನಗೇನಾದರೂ ಬಹುಮಾನ ಕೊಡೋಣವೆಂದರೆ ಅದಕ್ಕೆ ತಕ್ಕ ವಸ್ತು ಮೂರು ಲೋಕಗಳಲ್ಲಿಯೂ ಯಾವುದೆಂದು ಗೊತ್ತಾಗುವುದಿಲ್ಲ'' ಎಂದಳು.

ಹನುಮಂತನು ಅವಳಿಗೆ ನಮಸ್ಕಾರಮಾಡಿ, "ಸೀತಾದೇವೀ, ನಿನಗೆ ತಕ್ಕುದಾದ ಮಾತೇ ನಿನ್ನ ಬಾಯಿಯಿಂದ ಹೊರಡುತ್ತದೆ. ಬೇರೆಯಾರಿಂದಲೂ ಇಂತಹ ಅಮೂಲ್ಯ ಮಾತನ್ನು ಹೇಳಲು ಸಾಧ್ಯವಿಲ್ಲ. ನಿನ್ನ ಗಂಡನ ವಿಜಯವನ್ನೇ ಕೋರುವ ನಿನಗೇ ಅದು ದಕ್ಕಿತು. ನಿನ್ನ ಈ ಮಾತುಗಳೇ ನನಗೆ ಉತ್ತಮೋತ್ತಮವಾದ ಬಹುಮಾನವಾಗಿದೆ. ರಾವಣನನ್ನು ಕೊಂದ ರಾಮನನ್ನು ನೋಡಿದಾಗಲೇ ನನಗೆ ಇಂದ್ರಪದವಿ ಲಭಿಸಿದಂತಾಗಿದೆ'' ಎಂದನು.

ಸೀತೆ ಕೂಡಾ ಹನುಮಂತನನ್ನು ಪ್ರಶಂಸಿಸಿದಳು. ಆಗ ಹನುಮಂತನು ಸುತ್ತಲೂ ಇದ್ದ ರಾಕ್ಷಸ ಸ್ತ್ರೀಯ

36-3



ರನ್ನು ನೋಡಿ ಸೀತೆಯೊಂದಿಗೆ, "ಸೀತಾದೇವೀ. ನೀನು ಒಪ್ಪುವುದಾದರೆ ನಿನ್ನನ್ನು ಕ್ರೂರವಾಗಿ ನೋಡಿದ ಈ ರಾಕ್ಷಸ ಸ್ತ್ರೀಯರನ್ನೆಲ್ಲಾ ಕೊಂದುಬಿಡ ಬೇಕೆಂಬ ಕೋರಿಕೆ ನನಗಿದೆ." ಎಂದು ರಾಕ್ಷಸಿಯರನ್ನು ನೋಡನೋಡುತ್ತಿದ್ದಂತೆ ಅವರನ್ನೆಲ್ಲ ಚಿತ್ರವಧೆ ಮಾಡಿ ಬಿಡಬೇಕೆಂದು ಹನುಮಂತನಿಗೆ ತೋರುತಿತ್ತು.

ಸೀತೆ ಹನುಮಂತನ ಮನಸ್ಸಿನ ಹೊಯಿಲನ್ನು ಗ್ರಹಿಸಿ ಹೀಗೆಂದಳು: "ಬೇಡಪ್ಪ. ಈ ರಾಕ್ಷಸ ಸ್ತ್ರೀಯರು ಕೇವಲ ಪರಾಧೀನರಾದ ರಾವಣನ ದಾಸಿಯರು. ರಾಜನ ಸೇವೆಮಾಡಿ ಬದುಕಿಕೊಂಡಿರುವವರು. ಅಂಥವರು ರಾಜನ ಆಜ್ಞೆಯನ್ನು ಮನಸ್ಫೂರ್ತಿಯಾಗಿ ಪಾಲಿಸಲೇ ಬೇಕಾಗುತ್ತದೆ, ಆದುದರಿಂದ ಅವರ ಮೇಲೆ ಕೋಪ ತೋರಿಸುವುದು ಅಕ್ರಮವಾಗಿದೆ. ನನ್ನ ಗ್ರಹಚಾರಕ್ಕೆ ಅವರೇನು ಮಾಡುವರು ? ನಾನು ಪೂರ್ವ ಜನ್ಮಗಳಲ್ಲಿ ಮಾಡಿಕೊಂಡ ಪಾಪಕರ್ಮಗಳಿಗೆ ಫಲಿತವಾಗಿ ಈ ಕಷ್ಟಗಳನ್ನು ಅನುಭವಿಸಿದೆನೆಂದುಕೊಳ್ಳುತ್ತೇನೆ. ಆದುದರಿಂದ ನನಗೆ ಈ ರಾಕ್ಷಸ ಸ್ತ್ರೀಯರ ಮೇಲೆ ಸ್ವಲ್ಪ ಕೂಡಾ ಕೋಪವಿಲ್ಲ, ರಾವಣನು ಸತ್ತುಹೋದುದರಿಂದ ಇನ್ನು ಇವರು ನನ್ನನ್ನೇನೂ ಮಾಡಲಾರರು. ಈಗ ಲಂಕೆಗೆ ಒಳ್ಳೆಯವನೇ ರಾಜನಾದುದರಿಂದ ಇವರೂ ಒಳ್ಳೆಯವರಾಗಿಯೇ ನಡೆದುಕೊಳ್ಳುತ್ತಾರೆ. ಒಂದುವೇಳೆ ರಾಕ್ಷಸಿಯರು ಅವರ ಹುಟ್ಟುಗುಣದಂತಹ ದುರ್ಬುದ್ಧಿಯಿಂದಲೇ ನನ್ನನ್ನು ಪೀಡಿಸಿದ್ದರೂ ಕೂಡ ಅವರನ್ನು ಶಿಕ್ಷಿಸುವುದು ಯುಕ್ತವಲ್ಲ."

ಹನುಮಂತನು ಸೀತೆಯ ಮಾತುಗಳನ್ನು ಕೇಳಿ ತಲೆದೂಗುತ್ತಾ, ಮೆಚ್ಚಿಕೊಂಡು, "ನೀನು ಎಲ್ಲಾ ವಿಧದಲ್ಲಿಯೂ ರಾಮನಿಗೆ ತಕ್ಕ ಪತ್ನಿಯಾಗಿರುವೆ. ನಾನೀಗ ರಾಮನಿಗೆ ಏನು ಹೇಳಬೇಕೆಂಬುದನ್ನು ಹೇಳಿ ನನ್ನನ್ನು ಕಳುಹಿಸು" ಎಂದನು.

"ನನಗಿರುವುದೆಲ್ಲಾ ಈಗ ರಾಮನನ್ನು ನೋಡಬೇಕೆಂಬ ಕೋರಿಕೆ. ಅದನ್ನೇ ರಾಮನಿಗೆ ಹೇಳು" ಎಂದಳು ಸೀತೆ.

ಆ ಸಂದೇಶವನ್ನು ತೆಗೆದುಕೊಂಡು ಹನುಮಂತನು ಬಹು ವೇಗವಾಗಿ ರಾಮನ ಬಳಿಗೆ ಹಿಂದಿರುಗಿ ಬಂದನು. ಅವನು ಕೈಜೋಡಿಸಿ ರಾಮನೊಂದಿಗೆ, "ಯಾರಿಗೋಸ್ಕರ ಸಮುದ್ರಕ್ಕೆ ಸೇತುವೆ ಕಟ್ಟಿ, ನಾವೆಲ್ಲಾ ಇಷ್ಟು ದೊಡ್ಡ ಯುದ್ಧ ಮಾಡಿದೆವೋ ಆ ಸೀತೆಯನ್ನು ನೋಡಿದೆ. ನನ್ನ ಗುರುತು ಹಿಡಿದಳು, ನಮ್ಮ ವಿಜಯವಾರ್ತೆಯನ್ನು ಕೇಳಿ ತುಂಬಾ ಸಂತೋಷಪಟ್ಟಳು. ರಾವಣಾಸುರನನ್ನು ಕೊಂದ ರಾಮನನ್ನೂ ಲಕ್ಷ್ಮಣನನ್ನೂ ನೋಡಬೇಕೆಂದು ತುಂಬಾ ಉತ್ಕಟೇಚ್ಛೆಯಲ್ಲಿರುವುದನ್ನು ಹೇಳಲು ಹೇಳಿದ್ದಾಳೆ." ಎಂದನು.

ಹನುಮಂತನು ಹೇಳಿದ ಮಾತುಗಳನ್ನು ಕೇಳುತ್ತಿದ್ದಂತೆ ರಾಮನ ಕಣ್ಣುಗಳಲ್ಲಿ ನೀರು ತುಂಬಿತು. ಅವನು ತನ್ನೊಳಗೆ, "ಇಷ್ಟು ಕಾಲದವರೆಗೆ ರಾವಣನ ಮನೆ


ಯೊಳಗಿದ್ದ ಸೀತೆಯನ್ನು ಸ್ವೀಕರಿಸಿಕೊಂಡೆನೆಂದರೆ ಲೋಕದ ಬಾಯಿಗೆ ಬೀಳಬೇಕಾಗುತ್ತದೆ. ನಿರ್ದೋಷಿಯಾದ ಸೀತೆಯನ್ನು ತ್ಯಜಿಸಿಬಿಟ್ಟೆನೆಂದರೆ ಮಹಾ ಪಾಪ ಸುತ್ತಿಕೊಳ್ಳುತ್ತದೆ. ಏನು ಮಾಡಲಿ ? ” ಎಂದುಕೊಳ್ಳುತ್ತಿದ್ದನು.

ರಾಮನು ಬಿಸಿಯಾದೊಂದು ಶ್ವಾಸವನ್ನು ಬಿಟ್ಟು ಸಮೀಪದಲ್ಲಿದ್ದ ವಿಭೀಷಣನೊಂದಿಗೆ, “ ವಿಭೀಷಣಾ, ನೀನು ಸೀತೆಯಿಂದ ಅಭ್ಯಂಗನ ಸ್ನಾನಮಾಡಿಸಿ, ಶರೀರಕ್ಕೆ ಸುಗಂಧಗಳನ್ನು ಹಚ್ಚಿಸಿ, ಆಭರಣಗಳಿಂದ ಅಲಂಕಾರಮಾಡಿಸಿ ಅವಳನ್ನು ಕರೆದುಕೊಂಡು ಇಲ್ಲಿಗೆ ಬಾ ” ಎಂದನು.

ವಿಭೀಷಣನು ಕೂಡಲೇ ಲಂಕಾ ನಗರಕ್ಕೆ ಹೋಗಿ ಅಂತಃಪುರದ ಸ್ತ್ರೀಯರನ್ನು ಸೀತೆಯ ಬಗೆಗೆ ನಿಯಮಿಸಿದನು. ಅವರು ಸೀತೆಯ ಬಳಿಗೆ ಹೋಗಿ, ಚೆನ್ನಾಗಿ ಸ್ನಾನಮಾಡಿ ಅಲಂಕರಿಸಿಕೊಂಡು ಕರೆದು ತರುವಂತೆ ರಾಮನು ಹೇಳಿದ್ದಾನೆಂದು ತಿಳಿಯಪಡಿಸಿದರು. ಅದಕ್ಕೆ ಸೀತೆ ಒಪ್ಪಿಗೆ ಕೊಡದೆ, ತಾನು ಈಗಿರುವ ರೀತಿಯಲ್ಲೇ ಗಂಡನನ್ನು ನೋಡಲು ಬಯಸುವುದಾಗಿ ಹೇಳಿದಳು. ಸ್ತ್ರೀಯರು ಆ ವಿಷಯವನ್ನು ವಿಭೀಷಣನಿಗೆ ತಿಳಿಸಿದರು.

ಹಾಗೆ ಸರಿಯಲ್ಲವೆಂದೂ, ರಾಮನು ಇಚ್ಚಿಸಿದಂತೆಯೇ ಮಾಡುವುದು ಒಳ್ಳೆಯದೆಂದೂ ವಿಭೀಷಣನು ಸೀತೆಗೆ ತಿಳಿಯಪಡಿಸಲು ಸೀತೆ ಒಪ್ಪಿಕೊಂಡಳು.

ಆ ಮೇಲೆ ಸೀತೆಗೆ ಸೊಗಸಾಗಿ ಅಭ್ಯಂಗ ಸ್ನಾನವಾಯಿತು. ಶರೀರಕ್ಕೆ ಅಂಗರಾಗಗಳನ್ನು ಪೂಸಿ, ಸಮಸ್ತ ಆಭರಣಗಳಿಂದ ಅಲಂಕಾರ ಮಾಡಿಸಲಾಯಿತು. ದಿವ್ಯವಾದ ಬಟ್ಟೆಗಳಿಂದೊಪ್ಪುವ ಸೀತೆಯನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿ, ಅನೇಕ ಮಂದಿ ರಾಕ್ಷಸರು ಜತೆಯಲ್ಲಿರಲು, ವಿಭೀಷಣನು ಅವಳನ್ನು ಕರೆದುಕೊಂಡು ರಾಮನ ಬಳಿಗೆ ಹೊರಟನು. ವಿಭೀಷಣನು ಮುಂದಾಗಿ ರಾಮನ ಬಳಿಗೆಹೋಗಿ



“ ಸೀತೆಯನ್ನು ಕರೆದು ತಂದಿದ್ದೇನೆ ” ಎಂದು ಬಿನ್ನವಿಸಿದನು. ರಾಮನು ಆ ಸಂಗತಿಯನ್ನು ಕೇಳಿದರೂ ಥಕ್ಕನೆ ಏನೂ ಹೇಳದೆ ಏನೋ ವಿಚಾರದಲ್ಲಿದ್ದನು. ಈಗ ಅವನ ಮನಸ್ಸಿನಲ್ಲಿ ಒಂದೇ ಬಾರಿಗೆ ಮೂರು ಭಾವನೆಗಳೆದ್ದಿದ್ದುವು. ಇಷ್ಟು ಕಾಲದ ಮೇಲೆ ಸೀತೆ ಮತ್ತೆ ಸಮೀಪಿಸುವಳೆಂಬ ಸಂಕೋಚ, ಅವಳನ್ನು ಹೇಗೆ ವಿಸರ್ಜಿಸುವುದೆಂಬ ದುಃಖ ವಿಚಾರ, ಅಷ್ಟು ಕಾಲದವರೆಗೆ ರಾಕ್ಷಸರ ವಶದಲ್ಲಿದ್ದವಳನ್ನು ಹೇಗೆ ಸ್ವೀಕರಿಸುದೆಂಬ ರೋಷ!

ರಾಮನು ಬೇಗನೆ ಒಂದು ನಿಶ್ಚಯಕ್ಕೆ ಬಂದು ವಿಭೀಷಣನೊಂದಿಗೆ, “ ಸೀತೆಯನ್ನು ನನ್ನ ಎದುರಿಗೆ ಕರೆದುಕೊಂಡು ಬಾ ” ಎಂದನು. ಅವನ ಸ್ವರವು ನಿಷ್ಠುರವೂ ಗಂಭೀರವೂ ಆಗಿರುವುದನ್ನು ನೋಡಿ ವಿಭೀಷಣನಿಗೆ ಸ್ವಲ್ಪ ಭಯವೆನಿಸಿತು. ಅದನ್ನು ತೋರಿಸಿಕೊಳ್ಳದೆ ವಿಭೀಷಣನು, ಅಲ್ಲಿ ಗುಂಪಾಗಿರುವ ವಾನರ ಭಲ್ಲೂಕಗಳನ್ನು ದೂರದೂರ ತಳ್ಳುವಂತೆ



ವೇತ್ರಹಸ್ತರಿಗೆ ಸೈಗೆ ತೋರಿಸಿದನು. ಅದನ್ನು ಗಮನಿಸಿದ ರಾಮನು ತಡೆದು, "ಯಾರೂ ದೂರಹೋಗಬೇಕಾಗಿಲ್ಲ. ಇವರಾರೂ ಪರಕೀಯರಲ್ಲ, ನನ್ನವರೇ. ಏಕೆ ಅವರನ್ನೆಲ್ಲ ಕುರಿಮಂದೆಯನ್ನು ಓಡಿಸುವಂತೆ ಓಡಿಸುವಿರಿ? ಸೀತೆಯನ್ನು ಇವರೆಲ್ಲರೂ ನೋಡಿದರೆ ತಪ್ಪೇನಿದೆ?" ಎಂದನು.

ವಿಭೀಷಣನು ಆ ಪ್ರಯತ್ನವನ್ನು ಬಿಟ್ಟು ಸೀತೆಯನ್ನು ರಾಮನ ಬಳಿಗೆ ಕರೆದುಕೊಂಡುಬಂದನು. ರಾಮನ ಮಾತನ್ನು ಕೇಳುತ್ತಿದ್ದ ಲಕ್ಷ್ಮಣನಿಗೂ, ಸುಗ್ರೀವನಿಗೂ ಭಯಾಶ್ಚರ್ಯಗಳೆದ್ದುವು. ರಾಮನ ಮಾತಿನಲ್ಲಿ ಸೀತೆಯ ಮೇಲೆ ಅವನಿಗೆ ಸ್ವಲ್ಪವೂ ಪ್ರೇಮವಿರುವಂತೆ ತೋರದಿರುವುದನ್ನು ನೋಡಿ, ರಾಮನ ರೀತಿ ಅವರಿಗೆ ಭಯಂಕರವಾಗಿ ತೋರಿತು! ಸೀತೆಯ ಗತಿ ಏನಾಗುವುದೋ!

ಸೀತೆ ಲಜ್ಜೆಯಿಂದ ಮುದುಡಿದವಳಾಗಿ ನಡೆಯುತ್ತ ವಿಭೀಷಣನ ಹಿಂದೆಯೇ ರಾಮನ ಎದುರಿಗೆ ಬಂದಳು. ಸುತ್ತಲೂ ಅಷ್ಟುಮಂದಿ ಇರುವರೆಂದು ಗೊತ್ತಾದುದರಿಂದ ಸೆರಗನ್ನು ಮುಖಕ್ಕೆ ಅಡ್ಡವಾಗಿ ಹಿಡಿದುಕೊಂಡು ನಿಂತು ರಾಮನ ಪಾದದಲ್ಲಿ ದೃಷ್ಟಿಯಿಟ್ಟು, "ಆರ್ಯಪುತ್ರಾ" ಎಂದು ಗದ್ಗದಿಸಿ ಧಾರೆಧಾರೆಯಾಗಿ ಕಣ್ಣೀರಿಳಿಸಿ ಅಳತೊಡಗಿದಳು. ಅದನ್ನು ನೋಡುತ್ತಿರುವ ಎಲ್ಲರ ಕಣ್ಣುಗಳೂ ತುಂಬಿಕೊಂಡವು. ಅದೇ ಸಮಯದಲ್ಲಿ ಸೀತೆಗೆ ಇಷ್ಟು ಕಾಲದ ಮೇಲೆ ತನ್ನ ಪತಿಯನ್ನು ನೋಡುತ್ತಿದ್ದೇನೆಂಬ ಸಂತೋಷವೂ ಹೃದಯದಲ್ಲಿ ಉಕ್ಕುತ್ತಿತ್ತು. ಅಂತೆಯೇ ಅವಳ ದುಃಖಾವೇಗವು ಕ್ರಮವಾಗಿ ಶಮನವಾಯಿತು.

ರಾಮನಿಗಾದರೋ ಸೀತೆಯನ್ನು ನಟ್ಟಿದಿರಿನಲ್ಲಿ ನೋಡಿದ ಕೂಡಲೇ ಕೋಪವೇ ಎದ್ದುಕೊಂಡಿತು. ಅವನ ಬಾಯಿಯಿಂದ ಸ್ಪಷ್ಟವಾಗಿ ಈ ಮಾತುಗಳು ಹೊರಟವು: "ಸೀತಾ, ಯುದ್ಧದಲ್ಲಿ ಶತ್ರುವನ್ನು ವಧಿಸಿ, ನಿನ್ನನ್ನು ಬಿಡಿಸಿ ನನ್ನ ಪೌರುಷವನ್ನು ನಿರೂಪಿಸಿದ್ದಾಯಿತು. ಶತ್ರುವಿನ ಗರ್ವವನ್ನು ನಾಶಮಾಡಿ, ಅವನು ನನಗೆ ಮಾಡಿದ ಅವಮಾನಕ್ಕೆ ಪ್ರತಿಕ್ರಿಯೆ ಮಾಡಿಬಿಟ್ಟೆನು. ನನ್ನ ಪ್ರಯತ್ನವು ಕೊನೆಗಂಡಿತು. ನಾನು ಮಾಡಿದ ಶಪಥದಿಂದ ನನಗೆ ಬಿಡುಗಡೆಯಾಯಿತು. ರಾವಣನು ನಿನ್ನನ್ನು ಎತ್ತಿಕೊಂಡು ಹೋದ ಕಾರಣದಿಂದ ನನಗೆ ಬಂದ ಅವಮಾನವನ್ನು ತೊಳೆದುಕೊಂಡಿದ್ದೇನೆ. ಹನುಮಂತನು ಸಮುದ್ರವನ್ನು ಹಾರಿ, ಲಂಕಾನಗರವನ್ನು ಸುಟ್ಟು, ಅನೇಕ ಘನಕಾರ್ಯಗಳನ್ನು ಮಾಡಿದುದೆಲ್ಲವೂ ಈಗ ಸಫಲವಾಗಿದೆ. ಸುಗ್ರೀವನೂ ವಾನರರೂ ನನಗೆ ಮಾಡಿದ ಸಹಾಯವೂ ಸಫಲವಾಯಿತು. ನನ್ನನ್ನೇ ನಂಬಿ ನನ್ನೊಂದಿಗೆ ಸೇರಿದ ವಿಭೀಷಣನ ಶ್ರಮವೂ ಸಹ ಸಫಲವಾಯಿತು."

ರಾಮನು ತನ್ನನ್ನು ಕುರಿತು ಒಂದೇ ಒಂದು ಮಾತು ಕೂಡಾ ಹೇಳದಿರುವುದನ್ನು ನೋಡಿ ಸೀತೆಗೆ


36-6



ದುಃಖವನ್ನು ತಡೆಯಲಾಗಲಿಲ್ಲ. ಅವಳು ಬಿಕ್ಕಿ ಬಿಕ್ಕಿ ಅಳುವುದನ್ನು ನೋಡಿದಂತೆ ರಾಮನ ಕೋಪವು ಹೆಚ್ಚೇ ಆಯಿತು. ಅವನು ಹುಬ್ಬುಗಂಟು ಹಾಕಿಕೊಂಡು, "ಸೀತಾ! ಅವಮಾನಕ್ಕೆ ಗುರಿಯಾದವನು ಏನು ಮಾಡಬೇಕೋ ಅದನ್ನೆಲ್ಲಾ ಮಾಡಿ ಮುಗಿಸಿದೆ. ಇದನ್ನೆಲ್ಲಾ ನಾನು ನಿನಗಾಗಿ ಮಾಡಿದುದಲ್ಲವೆಂದು ತಿಳಿದುಕೋ. ಸದಾಚಾರದ ರೀತಿಯಲ್ಲಿ ನೀನು ನನಗೆ ವಿರುದ್ಧಳಾದವಳು! ಆದುದರಿಂದ ನಾನು ನಿನಗೆ ಅನುಮತಿ ಕೊಡುತ್ತಿದ್ದೇನೆ. ಇನ್ನು ಮೇಲೆ ನೀನು ನಿನ್ನ ಇಷ್ಟಬಂದ ಕಡೆಗೆ ಹೋಗಬಹುದು. ನನಗೆ ನಿನ್ನ ಅಗತ್ಯವೇನೂ ಇಲ್ಲ. ನಿನಗೆ ಇದನ್ನು ಹೇಳಲಿಕ್ಕಾಗಿಯೇ ನನ್ನ ಎದುರಿಗೆ ಕರೆಸಿದೆನು. ಬಹಳ ಕಾಲ ಪರಪುರುಷನ ಮನೆಯಲ್ಲಿದ್ದ ಸ್ತ್ರೀಯನ್ನು ಪರಾಕ್ರಮವೂ ಅಭಿಮಾನವೂ ಇರುವಂಥವನು ಹೇಗೆ ಸ್ವೀಕರಿಸಬಲ್ಲನು? ನೀನು ರಾವಣನ ಮಡಿಲಿನಿಂದ ಇಳಿದು ಬಂದವಳು! ರಾವಣನ ಕಣ್ಣುಗಳನ್ನು ನಿನ್ನ ಸೌಂದರ್ಯದಿಂದ ಸಂತೋಷಪಡಿಸಿದವಳು! ದೊಡ್ಡ ವಂಶದಲ್ಲಿ ಹುಟ್ಟಿ ಆ ವಂಶಕ್ಕೆ ಕೀರ್ತಿಕಾರಕನಾಗಿರುವ ನಾನು ನಿನ್ನನ್ನು ಹೇಗೆ ಸ್ವೀಕರಿಸಲಿ? ನನಗೆ ನಿನ್ನ ಮೇಲೆ ಭ್ರಮೆಯೋ ಮೋಹವೋ ಏನೂ ಇಲ್ಲ. ನಿನಗಿಷ್ಟಬಂದ ಕಡೆಗೆ ನೀನು ಹೋಗಬಹುದು. ನಾನು ಈ ಮಾತನ್ನು ಚೆನ್ನಾಗಿ ಆಲೋಚನೆ ಮಾಡಿಯೇ ಹೇಳುತ್ತಿದ್ದೇನೆ. ಬೇಕಾದರೆ ನಿನ್ನ ದಿನಗಳು ಸುಖವಾಗಿ ಕಳೆಯುವಂತೆ ಲಕ್ಷ್ಮಣನೊಂದಿಗೆ ಇರು. ಅಥವಾ ಭರತನ ಬಳಿಯಲ್ಲಿರು. ಅಲ್ಲದಿದ್ದರೆ ಸುಗ್ರೀವನ ಬಳಿಯಲ್ಲಾಗಲೀ, ವಿಭೀಷಣನ ಬಳಿಯಲ್ಲಾಗಲೀ ಇರಬಹುದು. ನೀನು ಅತ್ಯಂತ ಸುಂದರಿಯಾಗಿರುವವಳು. ಮೋಹಕವಾದ ಶರೀರ ಮಾಟವುಳ್ಳವಳು! ನಿನ್ನಂಥವಳು ಅಸಹಾಯಳಾಗಿ ತನ್ನ ಮನೆಯಲ್ಲಿರುವಾಗ ಮಹಾಬಲಶಾಲಿಯಾದ ರಾವಣನು ಮನ್ಮಥ ಬಾಧೆಯನ್ನು ಸಹಿಸಿಕೊಂಡು ನಿನ್ನನ್ನೇನೂ ಮಾಡದೆ ಬಿಟ್ಟಿರುವನೆಂದು ನಂಬಲು ನನಗೆ ಸಾಧ್ಯವಿಲ್ಲ!" ಎಂದು ಪರುಷವಾಗಿ ನುಡಿದನು.

ಎಂದಿಗೂ, ಕನಸಿನಲ್ಲಿ ಕೂಡ ಅಂತಹ ಮಾತುಗಳನ್ನು ಕೇಳದಿದ್ದವಳು ಸೀತೆ. ಯಾರೂ ಕೇಳಲಾಗದಂತಹ ಕ್ರೂರಮಾತುಗಳು ರಾಮನ ಬಾಯಿಯಿಂದ ಬಂದಿದೆ. ತಾನು ಇಷ್ಟು ದಿನಗಳವರೆಗೆ ಯಮಯಾತನೆಯ ಸೆರೆಯನ್ನನುಭವಿಸಿ ಇನ್ನು ಪ್ರಿಯವಾದ ಮಾತುಗಳು ಕಿವಿಗೆ ಬೀಳುವುದೆಂಬ ಆಶೆಯಲ್ಲಿದ್ದ ವೇಳೆಯಲ್ಲಿ ಇಂತಹ ಮಾತುಗಳು ಕಿವಿಯೊಳಗೆ ಬೀಳುವುದನ್ನು ಅರಿತು, ಕತ್ತಿಯಿಂದ ಕಡಿದ ಲತೆಯಂತೆ ಕಂಪಿಸುತ್ತ ಸೀತೆ ಒಂದೇ ಸವನೆ ಧಾರೆ ಧಾರೆಯಾಗಿ ಕಣ್ಣೀರು ಸುರಿಸುತ್ತಿದ್ದಳು.





ವೀರಹನುಮಾನ್

ರಾಮನ ಉಗ್ರವಾದ ಮುಖದಿಂದ ಹೊರಟ ಕೋಪದ ಮಾತುಗಳನ್ನು ಕೇಳಿಕೊಂಡಿದ್ದವರೆಲ್ಲ, ಸರಿಯಾಗಿ ಉಸಿರುಬಿಡಲೂ ಹೆದರಿ ನಡುಗುತ್ತ ರೋಮಾಂಚನಗೊಂಡರು.

ಈ ವರೆಗೂ ಇಂತಹ ಪರುಷ ಮಾತುಗಳನ್ನು ಕೇಳಿ ಅರಿಯದ ಸೀತೆ, ಸಿಡಿಲು ಬಡಿದವಳಂತಾಗಿ, ಬಾಗಿದ ತಲೆಯನ್ನು ಇನ್ನಷ್ಟು ಬಾಗಿಸಿದಳು. ಅಷ್ಟು ಮಂದಿಯ ಇದಿರಿನಲ್ಲಿ ತನಗೆ ನಡೆಯುವ ಘೋರ ಅವಮಾನದಿಂದ ಕಣ್ಣೀರನ್ನು ಧಾರೆಧಾರೆಯಾಗಿ ಇಳಿಸಿಕೊಂಡಿದ್ದಳು.

ರಾಮನು ಹೇಳುವುದನ್ನು ಹೇಳಿ ಮುಗಿಸಿದ ಮೇಲೆ, ಅವಳು ಕಣ್ಣೀರನ್ನು ಒರೆಸಿಕೊಂಡು, ಬಿಕ್ಕಳಿಕೆಯ ಕಂಠದಿಂದ ಹೇಳತೊಡಗಿದಳು: "ವೀರನೇ, ಈ ಬಗೆಯ ಮಾತುಗಳನ್ನು ನನಗೇಕೆ ಹೇಳುತ್ತಿರುವೆ? ಇಂತಹ ಮಾತುಗಳು ಅಜ್ಞಾನಿಯಾದವನು, ತನಗೆ ತಿಳಿಯದ ವಿಷಯಗಳನ್ನು ಊಹಿಸಿಕೊಂಡು ಹೇಳುವ ಮಾತುಗಳು. ನನ್ನಂಥವಳು ಕೇಳಲಿಕ್ಕೆ ಯೋಗ್ಯವಾದ ಮಾತುಗಳಲ್ಲ ಇವು. ನೀನು ಊಹಿಸಿಕೊಳ್ಳುವ ಹಾಗೆ ನಾನು ಕೆಟ್ಟು ಹೋದವಳಲ್ಲ. ಬೇಕಾದರೆ ಏನಾದರೂ ಪರೀಕ್ಷೆ ಇಟ್ಟು ನೋಡು. ಸ್ತ್ರೀಯರಲ್ಲಿ ಕೆಟ್ಟವರೂ ಇದ್ದಾರೆಂದ ಮಾತ್ರಕ್ಕೆ ಎಲ್ಲಾ ಸ್ತ್ರೀಯರನ್ನೂ ಕೆಟ್ಟವರೆಂದು ತಿಳಿಯಬೇಡ. ನನ್ನ ಸ್ವಭಾವ ನಿನಗೆ ಚೆನ್ನಾಗಿ ತಿಳಿದಿರುವುದು ನಿಜವಾದರೆ ನನ್ನ ಮೇಲಿರುವ ಅನುಮಾನವನ್ನು ಬಿಟ್ಟುಬಿಡು. ರಾವಣನು ನನ್ನನ್ನು ಎತ್ತಿಕೊಂಡು ಹೋಗುವಾಗ ಅವನ ಶರೀರವು ನನಗೆ ತಗಲಿದರೆ ಅದು ನನ್ನ ಅಸಹಾಯತೆಯಿಂದ ನಡೆದುದು. ಆದುದರಿಂದ ಆ ತಪ್ಪು ದೈವದ್ದು, ನನ್ನದಲ್ಲ. ನನ್ನ ಅಧೀನದಲ್ಲಿದ್ದ ನನ್ನ ಮನಸ್ಸು ಮಾತ್ರ ನಿನ್ನ ಮೇಲೆಯೇ ನೆಲೆಸಿತ್ತು. ನಿನಗೆ ಅದು ಗೊತ್ತಾಗಲು ಸಾಧ್ಯವಿಲ್ಲ. ಇಷ್ಟು ಕಾಲ ನಿನ್ನೊಂದಿಗೆ ನಾನಿದ್ದರೂ ನನ್ನ ಸ್ವಭಾವ ನಿನಗೆ ತಿಳಿಯಲಿಲ್ಲವೆಂದ ಮೇಲೆ ಇನ್ನು ಯಾವ ವಿಧದಲ್ಲಿಯೂ ಅದು ನಿನಗೆ ತಿಳಿಯಲು ಸಾಧ್ಯವಿಲ್ಲ. ನನ್ನನ್ನು ತ್ಯಜಿಸಿ ಬಿಡುವ ಆಲೋಚನೆ ಮಾಡಿದವ



ನಾಗಿದ್ದರೆ ನನ್ನನ್ನು ಹುಡುಕಲಿಕ್ಕಾಗಿ ಹನುಮಂತನನ್ನು ಏಕೆ ಕಳುಹಿಸಬೇಕಿತ್ತು? ನನ್ನನ್ನು ತ್ಯಾಜ್ಯ ಮಾಡಿದಂತೆ ಹನುಮಂತನ ಹತ್ತಿರ ಹೇಳಿ ಕಳುಹಿಸಿದ್ದರೂ ಹನುಮಂತನ ಇದಿರಿನಲ್ಲಿಯೇ ಪ್ರಾಣವನ್ನು ಬಿಟ್ಟುಬಿಡುತ್ತಿದ್ದೆನಲ್ಲಾ? ನಿನಗೆ ಈ ಯುದ್ಧ ಮಾಡುವ ಅಗತ್ಯ ಕೂಡ ಇಲ್ಲದೆ ಹೋಗುತಿತ್ತು. ನಿನ್ನ ಮಿತ್ರರು ಕಷ್ಟಪಟ್ಟು ಇಷ್ಟು ದೂರ ಬರುವ ಶ್ರಮವೂ ತಪ್ಪುತಿತ್ತು. ಇಷ್ಟು ಜನರ ಇದಿರಿನಲ್ಲಿ ನನ್ನನ್ನು ಕರೆಯಿಸಿ ನಿಲ್ಲಿಸಿ ಇಂತಹ ಪರುಷ ಮಾತುಗಳನ್ನಾಡಿದೆಯಲ್ಲಾ! ನಿನ್ನ ಬಾಯಿಯಿಂದ ನಾನು ಕೇಳುವ ಕೊನೆಯ ಮಾತುಗಳು ಹೀಗಾದುವೆಂಬುದೇ ನನ್ನ ಹಣೆ ಬರೆಹವಾಯಿತು! ಹಣೆ ಬರೆಹವನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ."

ಹೀಗೆ ಹೇಳಿ ಸೀತೆ ಲಕ್ಷ್ಮಣನನ್ನುದ್ದೇಶಿಸಿ, "ಲಕ್ಷ್ಮಣಾ, ನನ್ನ ಸಂಕಟಕ್ಕೆ ಪರಿಹಾರವಾಗಿ ಚಿತೆಯನ್ನು ಪೇರಿಸು. ಅದರಲ್ಲಿ ಬಿದ್ದು ಪ್ರಾಣಬಿಡುವುದೊಂದೇ ನನಗಿರುವ ಮಾರ್ಗ. ಇಂಥಾ ಮಾತುಗಳನ್ನು ಕೇಳಿದ ಮೇಲೆ ಎಷ್ಟು ಮಾತ್ರಕ್ಕೂ ಬದುಕಿರಲಾರೆ. ಇಷ್ಟು ಜನರ ಇದಿರಿನಲ್ಲಿ ನನ್ನ ಗಂಡ ನನ್ನನ್ನು ಬಿಟ್ಟರೆ ಅಗ್ನಿ ಪ್ರವೇಶದ ಹೊರತು ನನಗೆ ಬೇರೆ ಗತಿ ಏನಿದೆ?" ಎಂದಳು.

ಸೀತೆಯ ಮಾತು ಕೇಳಿ ಲಕ್ಷ್ಮಣನು ತುಂಬಾ ನೊಂದುಕೊಳ್ಳುತ್ತ, ರಾಮನ ಮುಖವನ್ನು ನೋಡಿದನು. ರಾಮನ ಮುಖಭಾವವನ್ನು ನೋಡಿದರೆ ಸೀತೆ ಅಗ್ನಿ ಪ್ರವೇಶ ಮಾಡುವುದೇ ಅವನಿಗೂ ಇಷ್ಟವಾಗಿರುವಂತೆ ತೋರಿತು. ಆದುದರಿಂದ ಲಕ್ಷ್ಮಣನು ಸೀತೆಯ ಕೋರಿಕೆಯಂತೆಯೇ ಚಿತಿಯನ್ನು ಪೇರಿಸಿದನು.

ಎಲ್ಲರೂ ಚಿತ್ರ ಪ್ರತಿಮೆಗಳಂತೆ ನೋಡುತ್ತಿರಲು, ಚಿತಿ ಬೆಂಕಿ ಹಿಡಿದು ಉರಿಯತೊಡಗಿತು. ಸೀತೆ ತಲೆವಾಗಿ ನಿಂತಿದ್ದ ರಾಮನನ್ನು ಪ್ರದಕ್ಷಿಣೆ ಮಾಡಿ ಚಿತಿಯನ್ನು ಸಮೀಪಿಸಿದಳು. ಅವಳು ಚಿತಿಯ ಮುಂದೆ ಕೈಜೋಡಿಸಿ ನಿಂತು, "ನನ್ನ ಮನಸ್ಸು ರಾಮನ ಮೇಲೆ ಹೊರತು ಅನ್ಯಪುರುಷನ ಮೇಲೆ ಹೋಗುವುದಿಲ್ಲವೆಂಬ ಮಾತು ನಿಜವಾದರೆ ಈ ಅಗ್ನಿಹೋತ್ರನು ನನ್ನನ್ನು ಕಾಪಾಡಲಿ! ಸೂರ್ಯನೂ, ವಾಯುವೂ, ದಿಕ್ಕುಗಳೂ, ಚಂದ್ರನೂ, ಹಗಲೂ, ರಾತ್ರಿಯೂ, ಉಭಯ ಸಂಧ್ಯೆಗಳೂ, ಭೂಮಿಯೂ, ಇತರ ದೇವತೆಗಳೂ ನಾನು ಪತಿವ್ರತೆಯೆಂಬುದನ್ನು ಒಪ್ಪಿಕೊಂಡ ಪಕ್ಷದಲ್ಲಿ ಅಗ್ನಿಹೋತ್ರನು ನನ್ನನ್ನು ರಕ್ಷಿಸಲಿ!" ಎಂದು ಹೇಳುತ್ತಾ, ಚಿತಿಗೆ ಪ್ರದಕ್ಷಿಣೆ ಮಾಡಿ ಉರಿಯುವ ಚಿತಿಯೊಳಗೆ ಪ್ರವೇಶಿಸಿದಳು.

ಆಗ ಅದುವರೆಗೂ ನಿಸ್ತಬ್ಧವಾಗಿದ್ದ ವಾತಾವರಣ ಚಲಿಸಿ ಆಕ್ರಂದನ ಮಾಡಿತು. ಅಲ್ಲಿ ಸೇರಿದ ವಾನರರೆಲ್ಲಾ ಹಾಹಾಕಾರ ಮಾಡಿದರು. ರಾಮನು ಕಣ್ಣೀರು ಸುರಿಸುತ್ತಾ, ಸುಮ್ಮನೆ ನಿಂತುಬಿಟ್ಟನು.

ಅಪ್ಸರೊಳಗೆ ಚಿತಿ ಚೆಲ್ಲಾ ಚೆದರಾಯಿತು. ಅದರೊಳಗಿನಿಂದ ಸಾಕ್ಷಾತ್ ಅಗ್ನಿಹೋತ್ರನು ಮಾನವ ರೂಪದಲ್ಲಿ ಎದ್ದು ಸೀತೆಯನ್ನು ಎತ್ತಿಕೊಂಡು ಈಚೆಗೆ ಬಂದನು.

ಸೀತೆ ಈ ಮೊದಲು ಇದ್ದಂತೆ, ಸರ್ವಾಭರಣ ಭೂಷಿತೆಯಾಗಿ, ಕೆಂಪು ಸೀರೆಯಿಂದ, ಕರ್ರಗಾದ ತಲೆಗೂದಲ ಅಲಂಕಾರದ ಮುಡಿಯಿಂದ, ಒಂದಿಷ್ಟೂ ಬಾಡದೆ ಪ್ರಕಾಶ ಮಾನಳಾಗಿದ್ದಳು.



ಅಗ್ನಿಹೋತ್ರನು ರಾಮನೊಂದಿಗೆ, "ರಾಮಾ, ಇಗೋ ನಿನ್ನ ಹೆಂಡತಿಯಾದ ಸೀತೆ. ಇವಳು ಯಾವ ಪಾಪವನ್ನೂ ಅರಿಯದವಳು. ಇವಳು ನಿನ್ನ ಹೊರತು ಇನ್ನೊಬ್ಬನನ್ನು ನೆನೆದವಳಲ್ಲ. ರಾವಣನು ಇವಳನ್ನು ತನ್ನ ಅಂತಃಪುರದಲ್ಲಿಟ್ಟು, ಭಯಂಕರ ರೂಪದ ರಾಕ್ಷಸ ಸ್ತ್ರೀಯರನ್ನು ಕಾವಲಿಗಿಟ್ಟು ಎಷ್ಟೋ ಆಶೆಗಳನ್ನು ಇವಳಿಗೆ ತೋರಿಸಿದ್ದಾನೆ. ಎಷ್ಟೋ ವಿಧವಾಗಿ ಹೆದರಿಸಿ ನೋಡಿದ್ದಾನೆ. ಆದರೂ ಇವಳು ರಾವಣನನ್ನು ನೋಡಲೂ ಇಲ್ಲ, ನೆನೆಯಲೂ ಇಲ್ಲ. ಇವಳು ಪುನೀತೆ! ಇವಳನ್ನು ಪರಿಗ್ರಹಿಸು. ಇದು ನನ್ನ ಆಜ್ಞೆ!" ಎಂದನು.

ಅಗ್ನಿ ಹೇಳಿದ ಮಾತುಗಳನ್ನು ಕೇಳಿ ರಾಮನಿಗೆ ತುಂಬಾ ತೃಪ್ತಿಯಾಯಿತು. ಇಂತಹ ಸೀತೆಯನ್ನು ಅನುಮಾನಿಸಿ ಅಗ್ನಿಪ್ರವೇಶ ಮಾಡುವ ಹಾಗೆ ಮಾಡಿದುದಕ್ಕಾಗಿ ತನಗೆತಾನೇ ನೊಂದುಕೊಂಡನು. ಅಂತೆಯೇ ಕಣ್ಣೀರಿಳಿಸುತ್ತ, ಅಗ್ನಿಹೋತ್ರನೊಂದಿಗೆ ಹೀಗೆಂದನು :

"ದಿವ್ಯ ಸಾಕ್ಷಿ ಅಗ್ನಿಹೋತ್ರಾ, ಸೀತೆಯಲ್ಲಿ ಯಾವ ಪಾಪವೂ ಇಲ್ಲವೆಂಬ ಮಾತು ನಿಜವೇ. ಆದರೆ ಅವಳು ರಾವಣನ ಮನೆಯಲ್ಲಿ ಬಹಳ ಕಾಲವಿದ್ದವಳು. ನಾನು ಸೀತೆಯನ್ನು ಪರೀಕ್ಷೆಗೆ ಒಳಪಡಿಸದೆ ಸ್ವೀಕರಿಸಿದ್ದರೆ ಲೋಕದವರು 'ದಶರಥ ಮಹಾರಾಜನ ಪುತ್ರನಾದ ಈ ರಾಮನು ಕೇವಲ ಮೂಢನೂ, ಮೋಹದಲ್ಲಿ ಬಿದ್ದವನೂ ಆದನು. ಧರ್ಮ ಸೂಕ್ಷ್ಮಗಳೊಂದೂ ಇವನಿಗೆ ತಿಳಿಯದು' ಎಂದು ಹೇಳುತ್ತಿದ್ದರು. ಮೂರು ಲೋಕಗಳಿಗೂ ನಿಜ ಸಂಗತಿ ತಿಳಿಯಬೇಕೆಂತಲೇ ಸೀತೆ ಅಗ್ನಿಪ್ರವೇಶ ಮಾಡುವಾಗ ನೋಡುತ್ತಾ ಸುಮ್ಮನಿದ್ದೆ. ಅವಳಿಗೆ ನನ್ನಲ್ಲೇ ಧ್ಯಾನ ಎಂಬ ಸಂಗತಿ ನನಗೆ ಗೊತ್ತಿಲ್ಲದೆ ಈ ಕೆಲಸ ಮಾಡಿಸಿದ್ದಲ್ಲ. ನನಗೆ ಬೇರೆ ದಾರಿ ಇದ್ದಿಲ್ಲ. ಅದು ನಿನಗೂ ಗೊತ್ತಿಲ್ಲದ್ದಲ್ಲ. ಇನ್ನು ಮೇಲೆ ನಿನ್ನ ಆಜ್ಞೆಯನ್ನು ತಪ್ಪದೆ ಶಿರಸಾವಹಿಸುತ್ತೇನೆ."

ಅದೇ ಸಮಯದಲ್ಲಿ ಅಲ್ಲೆಲ್ಲಾ ದಿವ್ಯಪ್ರಕಾಶವು ಹರಡುತ್ತಿರಲು ಸ್ವರ್ಗ ಲೋಕದಿಂದ ದಿವ್ಯವಿಮಾನವೊಂದು ಕೆಳಗಿಳಿಯಿತು. ಅದರಿಂದ ದಶರಥನು ಇಳಿದುಬಂದನು.

ದಶರಥನನ್ನು ನೋಡಿ ರಾಮಲಕ್ಷ್ಮಣರು ನಮಸ್ಕಾರ ಮಾಡಿದರು. ದಶರಥನು ಅವರಿಬ್ಬರನ್ನೂ ಎರಡು ಕೈಗಳಿಂದ ಆಶೀರ್ವದಿಸಿದನು. ಆಮೇಲೆ



ದಶರಥನು ತನ್ನ ಪ್ರಿಯ ಪುತ್ರನಾದ ರಾಮನನ್ನು ಆಲಿಂಗಿಸಿಕೊಂಡು, ಹೀಗೆ ಹೇಳಿದನು :

"ಕಂದಾ, ರಾಮಾ. ನಿನ್ನನ್ನು ಅಗಲಿ ಹೋದ ಮೇಲೆ ನನಗೆ ಸ್ವರ್ಗ ಸುಖಗಳೂ, ದೇವರ್ಷಿಗಳ ಗೌರವ ಸತ್ಕಾರಗಳೂ ಸಂತೋಷವನ್ನುಂಟು ಮಾಡದೆ ಹೋದುವು. ಶತ್ರುಗಳನ್ನು ಕೊಂದು, ವನವಾಸ ವ್ರತವನ್ನು ಪೂರ್ತಿ ಮಾಡಿದ ನಿನ್ನನ್ನು ನೋಡಿ ನನಗೀಗ ಪರಮಾನಂದವಾಗಿದೆ, ನಿನ್ನನ್ನು ಕಾಡಿಗೆ ಕಳುಹಿಸಬೇಕೆಂದು ಕೈಕೇಯಿ ಕೋರಿದ ಮಾತು ಇನ್ನೂ ನನ್ನ ಮನಸ್ಸನ್ನು ಕೊರೆಯುತ್ತಿದೆ. ದುಷ್ಟನಾದ ರಾವಣನನ್ನು ಕೊಲ್ಲಲಿಕ್ಕಾಗಿ ದೇವತೆಗಳೇ ನಿನ್ನ ಪಟ್ಟಾಭಿಷೇಕಕ್ಕೆ ಹಾಗೆಲ್ಲಾ ವಿಘ್ನ ಬರುವ ಹಾಗೆ ಮಾಡಿದರೆಂದು ಈಗ ನನಗೆ ಗೊತ್ತಾಯಿತು. ಇನ್ನು ನೀನು ವನವಾಸವನ್ನು ಬಿಟ್ಟು ಮನೆಗೆ ಹಿಂತಿರುಗಿ ಹೋಗಿ ಕೌಸಲ್ಯೆಯನ್ನು ಸಂತೋಷಪಡಿಸು. ಪಟ್ಟಾಭಿಷೇಕ ಮಾಡಿಕೊಂಡು ಚೆನ್ನಾಗಿ ರಾಜ್ಯಭಾರ ಮಾಡಿ ಹೆಚ್ಚಿನ ಕೀರ್ತಿಯನ್ನು ಪಡೆ. ನಿನ್ನ ತಮ್ಮಂದಿರೊಂದಿಗೆ ಸುಖಿವಾಗಿರು !"

ರಾಮನು ಕೈಗಳನ್ನು ಜೋಡಿಸಿ ದಶರಥನೊಂದಿಗೆ ಹೀಗೆಂದನು :! "ತಂದೆಯೇ, ನಾನೊಂದು ಮಾತು ಕೇಳಿಕೊಳ್ಳುತ್ತೇನೆ. ನನ್ನನ್ನು ವನವಾಸಕ್ಕೆ ಕಳುಹಿಸಬೇಕೆಂದು ಕೇಳಿದ ಕೈಕೇಯಿಯನ್ನೂ, ಅವಳ ಮಗ ಭರತನನ್ನೂ ನೀನು ತ್ಯಜಿಸಿಬಿಡುವುದಾಗಿ ಹೇಳಿದ ಮಾತನ್ನು ಹಿಂದೆಗೆದುಕೊಂಡು ಅವರನ್ನು ಅನುಗ್ರಹಿಸಬೇಕು;"

ದಶರಥನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಲಕ್ಷ್ಮಣನನ್ನು ಆಲಿಂಗಿಸಿ, ಅವನು ರಾಮನಿಗೆ ಮಾಡಿದ ಸೇವೆಗಳನ್ನು ತುಂಬಾ ಶ್ಲಾಘಿಸಿದನು. ತರುವಾಯ ದಶರಥನು ಸೀತೆಯೊಂದಿಗೆ, "ಅಮ್ಮಾ, ಸೀತೇ, ರಾಮನು ನಿನ್ನನ್ನು ಬಿಟ್ಟುಬಿಡುವುದಾಗಿ ಹೇಳಿದ ಮಾತನ್ನು ಮರೆತುಬಿಡು. ಕೋಪವನ್ನಿಟ್ಟುಕೊಳ್ಳಬೇಡ." ಎಂದು ಹೇಳಿ, ವಿಮಾನವನ್ನೇರಿ ಸ್ವರ್ಗಕ್ಕೆ ಹೊರಟುಹೋದನು.

ಅದಾದ ಮೇಲೆ ಈ ಮೊದಲೇ ಅಲ್ಲಿ ಬಂದು ನಿಂತಿದ್ದ ಇಂದ್ರನು ಈಗ ಮುಂದೆ ಬಂದು ರಾಮನನ್ನು ಸುತ್ತಿಸಿ, ಏನಾದರೊಂದು ವರವನ್ನು ಕೇಳುವಂತೆ ಹೇಳಿದನು. ರಾಮನು ತನಗಾಗಿ ಪ್ರಾಣಾರ್ಪಣೆ ಮಾಡಿದ ವಾನರರೆಲ್ಲರೂ ತಿರಿಗಿ ಬದುಕುವಂತೆ ಮಾಡಬೇಕೆಂದು ವರವನ್ನು ಕೇಳಿದನು. ಹಾಗೆಯೇ ಆಗಲೆಂದು ವರಕೊಟ್ಟು ಇಂದ್ರನು ಹೊರಟುಹೋದನು. ಆ ಕೂಡಲೇ ಯುದ್ಧರಂಗದಲ್ಲಿ ಅವಯವಗಳೂ ತಲೆಗಳೂ ತುಂಡಾಗಿ ಸತ್ತು ಬಿದ್ದ ವಾನರರೂ ಭಲ್ಲೂಕರೂ ಮೊದಲಿದ್ದಂತೆಯೇ ಯಾವ ಗಾಯಗಳೂ ಇಲ್ಲದೆ ನಿದ್ದೆಯಿಂದೆದ್ದವರಂತೆ ಎದ್ದು, ಯುದ್ಧಮುಗಿದ ವಿಧಾನವನ್ನು ನೋಡಿ ಉತ್ಸಾಹದಿಂದ ಕುಣಿದಾಡಿದರು. ಆಶ್ಚರ್ಯವೂ ಸಂತೋಷವೂ ಉತ್ಸಾಹವೂ ಎಲ್ಲೆಡೆ ಹರಡಿತು.


37-4

ಎಲ್ಲರೂ ಆ ರಾತ್ರಿಯನ್ನು ಸುಖವಾದ ವಿಶ್ರಾಂತಿಯಲ್ಲಿ ಕಳೆದರು. ಬೆಳಗಾದ ಕೂಡಲೇ ವಿಭೀಷಣನು ರಾಮನಿಗಾಗಿ ಸ್ನಾನಕ್ಕೆ ದಿವ್ಯೋದಕವನ್ನೂ, ಸುಗಂಧ ಲೇಪನಗಳನ್ನೂ, ಉತ್ತಮವಾದ ಬಟ್ಟೆಗಳನ್ನೂ ತರಿಸಿದನು. ರಾಮನಿಗೆ ಸ್ನಾನ ಮಾಡಿಸಲು ಸ್ತ್ರೀಯರನ್ನು ಕೂಡಾ ನಿಯಮಿಸಿದನು.

ಆಗ ರಾಮನು ವಿಭೀಷಣನೊಂದಿಗೆ, "ವಿಭೀಷಣ, ನನಗೀಗ ಸ್ನಾನ ಮುಖ್ಯವಲ್ಲ. ಸುಗ್ರೀವ ಮೊದಲಾದ ವಾನರ ವೀರರನ್ನು ಸ್ನಾನಕ್ಕೆ ಕರೆ, ಅವರು ಸ್ನಾನ ಮಾಡಿಕೊಂಡಿರಲಿ. ನಾನೀಗ ಕೂಡಲೇ ಆಯೋಧ್ಯೆಗೆ ಹೋಗಬೇಕು. ಹದಿನಾಲ್ಕು ವರ್ಷಗಳು ತುಂಬಿದ ಮಾರನೇ ದಿನ ನಾನು ಕಾಣಿಸದೇ ಹೋದರೆ ಅಗ್ನಿ ಪ್ರವೇಶ ಮಾಡುವೆನೆಂದು ಶಪಥ ಹಾಕಿದ ಭರತನನ್ನು ನೋಡುವುದಕ್ಕಿಂತಲೂ, ಈ ಸ್ನಾನ ಮುಂತಾದುವು ಮುಖ್ಯವಲ್ಲ. ಕಳೆದುಹೋದ ಕಾಲ ಹಿಂದೆ ಬರುವುದಿಲ್ಲ." ಎಂದನು.

ಅದಕ್ಕೆ ವಿಭೀಷಣನು, "ರಾಮಾ ನಿನ್ನನ್ನು ಒಂದೇ ದಿನದೊಳಗೆ ಅಯೋಧ್ಯೆಗೆ ಸೇರಿಸಬಲ್ಲೆನು. ಕುಬೇರನಿಂದ ರಾವಣನು ಬಲಾತ್ಕಾರವಾಗಿ ತಂದಿಟ್ಟುಕೊಂಡ ಪುಷ್ಪಕ ವಿಮಾನವಿದೆ. ಅದು ಎಲ್ಲಿಗಾದರೂ ನಿಮಿಷಮಾತ್ರದಲ್ಲಿ ಹೋಗಬಲ್ಲುದು. ನಿನಗೂ ಸೀತೆಗೂ ಲಕ್ಷ್ಮಣನಿಗೂ ನಾನು ಮಾಡುವ ಸತ್ಕಾರಗಳನ್ನು ದಯವಿಟ್ಟು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ" ಎಂದನು.

"ವಿಭೀಷಣಾ, ನೀನು ಯುದ್ಧದಲ್ಲಿ ನನಗೆ ಸಹಾಯ ಮಾಡಿದುದೇ ಬಹು ದೊಡ್ಡ ಸತ್ಕಾರವಾಗಿದೆ. ನನ್ನನ್ನು ಹುಡುಕಿಕೊಂಡು ಚಿತ್ರಕೂಟ ಪರ್ವತದ ವರೆಗೆ ಬಂದ ಭರತನನ್ನು ನೋಡಬೇಕೆಂದು ನನ್ನ ಮನಸ್ಸು ಬಹಳ ಅವಸರ ಪಡಿಸುತ್ತಿದೆ. ಅಷ್ಟೇ ಅಲ್ಲದೆ ನಮ್ಮ ತಾಯಂದಿರಾದ ಕೌಸಲ್ಯೆ, ಸುಮಿತ್ರೆ, ಕೈಕೇಯಿಯರನ್ನೂ, ಗುರುಹಿರಿಯರಾದ ವಸಿಷ್ಠ



ಮೊದಲಾದವರನ್ನೂ, ಸ್ನೇಹಿತರನ್ನೂ, ನಗರವಾಸಿಗಳನ್ನೂ, ನೋಡುವ ಆತುರವೂ ಹೆಚ್ಚಾಗಿದೆ. ನನ್ನ ಮನಸ್ಸು ಆಗಲೇ ಅತ್ತಕಡೆ ಓಡಿಯಾಯಿತಯ್ಯ, ಆದುದರಿಂದ ಈಗಲೇ ಪುಷ್ಪಕವಿಮಾನವನ್ನು ತರಿಸು. ಇನ್ನು ನಾನಿಲ್ಲಿ ಒಂದು ಕ್ಷಣ ಕೂಡಾ ಇರಲಾರೆ. ಬೇಗನೇ ಹೊರಟು ಹೋಗಲು ನನಗೆ ಅನುಜ್ಞೆ ಕೊಟ್ಟುಬಿಡು" ಎಂದನು ರಾಮ.

ರಾಮನ ಮುಂದೆ ಹೆಚ್ಚು ಮಾತಾಡಲು ಧೈರ್ಯವಿಲ್ಲದೆ, ರಾಮಾಜ್ಞೆಗೆ ಶಿರಬಾಗಿ ವಿಭೀಷಣನು ಕೂಡಲೇ ಹೋಗಿ ಪುಷ್ಪಕವಿಮಾನವನ್ನು ರಾಮನ ಬಳಿಗೆ ತಂದನು, ಹೂಗಳ ಮಾಲೆಗಳಿಂದ ಅಲಂಕರಿಸಲ್ಪಟ್ಟ ಆ ವಿಮಾನವನ್ನು ರಾಮನಿಗೆ ತೋರಿಸಿ, "ಇನ್ನೇನು ಆಜ್ಞೆ ?" ಎಂದು ಕೇಳಿದ ವಿಭೀಷಣ.

"ವಿಭೀಷಣಾ, ವಾನರರು ನನಗೆ ಮಾಡಿದ ಸಹಾಯ ಇಷ್ಟು ಅಷ್ಟು ಅಂತ ಹೇಳುವ ಹಾಗಿಲ್ಲ. ಅವರಿಗೆ ಬಟ್ಟೆಗಳನ್ನೂ ಆಭರಣ ಮೊದಲಾದು

37-5




ವನ್ನೂ ಕೊಟ್ಟು ಸತ್ಕಾರಮಾಡು. ದೇವತೆಗಳಿಗೆ ಸಹಾ ಬಾಗದಂತಹ ಈ ಲಂಕಾನಗರವು ವಾನರರ ಪುಣ್ಯದಿಂದ ನಮಗೆ ಬಾಗಿತು. ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಒದಗಿಸಿ ಕೊಡು. ಅವರಿಗೆ ನೀನು ಕೃತಜ್ಞತೆ ತೋರಿಸಿದರೆ ಅವರೆಲ್ಲಾ ಸಂತೋಷಪಡುತ್ತಾರೆ'' ಎಂದು ರಾಮನು ವಿಭೀಷಣನಿಗೆ ಹೇಳಿದನು.

ವಿಭೀಷಣನು ಆ ಪ್ರಕಾರವಾಗಿ ವಾನರ ವೀರರನ್ನೆಲ್ಲಾ ಬೇಕುಬೇಕಾದ ಹಾಗೇ ಸತ್ಕರಿಸಿದನು. ಆಗ ರಾಮನು ಸೀತೆಯೊಂದಿಗೆ ಪುಷ್ಪಕವಿಮಾನವನ್ನೇರಿದನು. ಅವನ ಹಿಂದೆಯೇ ಲಕ್ಷ್ಮಣನೂ ಏರಿದನು. ತರುವಾಯ ರಾಮನು ವಾನರರನ್ನೂ, ಸುಗ್ರೀವ ವಿಭೀಷಣರನ್ನೂ ನೋಡಿ, '' ನೀವೆಲ್ಲರೂ ಸೇರಿ ನನಗೆ ಕಾರ್ಯಸಿದ್ಧಿಯಾಗುವಂತೆ ಮಾಡಿದ್ದೀರಿ. ಇನ್ನು ನೀವೆಲ್ಲಾ ನಿಮ್ಮ ನಿಮ್ಮ ಇಷ್ಟ ಬಂದ ಕಡೆಗೆ ಹೋಗಬಹುದೆಂದು ನಾನು ಅನುಮತಿ ಕೊಡುತ್ತೇನೆ. ಸುಗ್ರೀವಾ, ನೀನು ಬಂಧುವಾಗಿ ಏನೇನು ಮಾಡಬಲ್ಲೆಯೋ ಅದಷ್ಟನ್ನೂ ನನಗಾಗಿ ಮಾಡಿದೆ. ಇನ್ನು ನೀನು ನಿನ್ನ ಸೇನೆಯೊಂದಿಗೆ ಕಿಷ್ಕಿಂಧೆಗೆ ಹೋಗಿ ಸುಖವಾಗಿರಯ್ಯ. ವಿಭೀಷಣಾ, ನಾನು ನಿನಗೆ ಕೊಡಿಸಿದ ಲಂಕಾರಾಜ್ಯವನ್ನು ನ್ಯಾಯದಿಂದ ಪಾಲಿಸುತ್ತ ಸುಖವಾಗಿರು. ನಿನಗಿನ್ನು ಯಾವ ತೊಂದರೆಯೂ ಇಲ್ಲ. ದೇವತೆಗಳು ಕೂಡಾ ನಿನ್ನನ್ನು ಇದಿರಿಸಲಾರರು. ದುಷ್ಟರೆಲ್ಲರೂ ಹತರಾದರು. ನಾನಿನ್ನು ಅಯೋಧ್ಯೆಗೆ ಹೋಗುತ್ತೇನೆ. ನೀವೆಲ್ಲರೂ ನನಗೆ ಅನುಜ್ಞೆ ಕೊಡಿರಿ!'' ಎಂದನು.

ಆಗ ಸುಗ್ರೀವನೇ ಮೊದಲಾದ ವಾನರರೂ, ವಿಭೀಷಣನೂ ರಾಮನೊಂದಿಗೆ, '' ರಾಮಾ, ನಮಗೂ ಸಹಾ ಅಯೋಧ್ಯೆಗೆ ಬರಬೇಕೆಂದಿದೆ. ನಮ್ಮನ್ನೂ ಜತೆಯಲ್ಲಿ ಕರೆದುಕೋ. ನಾವು ಅಲ್ಲಿಯ ಪ್ರಜೆಗಳಿಗೆ ಯಾವ ತೊಂದರೆಯನ್ನೂ ಮಾಡದೆ, ಅರಣ್ಯಗಳಲ್ಲಿಯೂ ನಗರಗಳಲ್ಲಿಯೂ ಸಂಚರಿಸುತ್ತೇವೆ. ನಾವೆಲ್ಲಾ ನಿನ್ನ ಪಟ್ಟಾಭಿಷೇಕವನ್ನು ನೋಡಿ, ಕೌಸಲ್ಯಾದೇವಿಗೆ ನಮಸ್ಕಾರ ಮಾಡಿದ ಮೇಲೆಯೇ ನಮ್ಮ ಮನೆಗಳಿಗೆ ಹೋಗುತ್ತೇವೆ'' ಎಂದರು.

'' ಹಾಗಾದರೆ ಒಳ್ಳೆಯದು. ನೀವೆಲ್ಲಾ ನನ್ನೊಂದಿಗೆ ಬರುತ್ತೇನೆಂದುದನ್ನು ಕೇಳಿ ನನಗೆ ಇಮ್ಮಡಿ ಸಂತೋಷವಾಯಿತು. ಸುಗ್ರೀವಾ, ನೀನೂ ನಿನ್ನ ವಾನರರೂ ಪುಷ್ಪಕದೊಳಗೆ ಬನ್ನಿ. ವಿಭೀಷಣಾ, ನೀನೂ ನಿನ್ನ ಮಂತ್ರಿಗಳೂ ಏರಿಕೊಳ್ಳಿ'' ಎಂದನು ರಾಮ ಉತ್ಸಾಹದಿಂದ.

ಸುಗ್ರೀವನೊಂದಿಗೆ ವಾನರರೂ, ವಿಭೀಷಣನ ಹಿಂದೆ ಅವನ ಮಂತ್ರಿಗಳೂ ಏರಿದ ಕೂಡಲೇ ಪುಷ್ಪಕ ವಿಮಾನವು ಆಕಾಶದ ಮೇಲಕ್ಕೆದ್ದು ಹಾರತೊಡಗಿತು. ಅದು ವಾಯುವೇಗದಿಂದ ಆಕಾಶದಲ್ಲಿ ಹೋಗುತ್ತಿರುವಾಗ, ರಾಮನು ಸೀತೆಗೆ ತ್ರಿಕೂಟ ಪರ್ವತದ ಮೇಲಿರುವ ಲಂಕಾನಗರವನ್ನೂ, ರಕ್ತದಿಂದ ಹೆಪ್ಪುಗಟ್ಟಿ ಕೆಂಪಗೆ ಕಾಣುವ ಯುದ್ಧಭೂಮಿಯನ್ನೂ,



ತಾನು ರಾವಣನನ್ನು ಕೊಂದ ಸ್ಥಳವನ್ನೂ, ಕುಂಭಕರ್ಣನನ್ನು ಕೊಂದ ಜಾಗವನ್ನೂ, ಹನುಮಂತನು ಹಾರಿದ ಸಮುದ್ರವನ್ನೂ, ವಾನರರು ಕಟ್ಟಿದ ಸೇತುವೆಯನ್ನೂ, ವಿಭೀಷಣನು ಮೊತ್ತಮೊದಲು ತನ್ನನ್ನು ಸಂಧಿಸಿದ ಸ್ಥಳವನ್ನೂ, ಕಿಷ್ಕಿಂಧಾನಗರವನ್ನೂ, ತಾನು ವಾಲಿಯನ್ನು ಕೊಂದ ಸ್ಥಳವನ್ನೂ ತೋರಿಸಿದನು.


ಕಿಷ್ಕಿಂಧೆಯನ್ನು ನೋಡಿದ ಸೀತೆ, ರಾಮನೊಂದಿಗೆ, "ನಾನು ಅಯೋಧ್ಯೆಯನ್ನು ಪ್ರವೇಶಿಸುವಾಗ ನನ್ನ ಜತೆಯಲ್ಲಿ ಸುಗ್ರೀವನ ಹೆಂಡತಿಯರಾದ ತಾರೆ ಮೊದಲಾದ ಸ್ತ್ರೀಯರೂ, ಇತರ ವಾನರ ಪ್ರಮುಖರ ಹೆಂಡತಿಯರೂ ಇದ್ದರೆ ಒಳ್ಳೆಯದೆನಿಸುತ್ತದೆ. ಅವರನ್ನೆಲ್ಲಾ ಉಪಚಾರ ಮಾಡಬೇಕೆಂದಿದ್ದೇನೆ. ಅವರೂ ನಮ್ಮೊಂದಿಗೆ ಬರಲಿ." ಎಂದಳು.

ಕೂಡಲೇ ರಾಮನು ಪುಷ್ಪಕವನ್ನು ಕಿಷ್ಕಿಂಧೆಯಲ್ಲಿ ನಿಲ್ಲಿಸಿ, ಸುಗ್ರೀವನೊಂದಿಗೆ. "ನಿನ್ನ ಹೆಂಡತಿಯರನ್ನೂ, ಇನ್ನುಳಿದವರ ಹೆಂಡತಿಯರನ್ನೂ ಅಯೋಧ್ಯೆಗೆ ಕರೆದೊಯ್ಯಲು ಸೀತೆ ಆಶೆಪಡುತ್ತಾಳೆ. ನಿಮ್ಮಲ್ಲಿ ಹೆಂಗುಸರೂ ಹೊರಟು ಬರಲಿ" ಎಂದನು.

ಸುಗ್ರೀವನು ತಾರೆಯ ಬಳಿಗೆ ಹೋಗಿ. "ನಿನ್ನನ್ನೂ ಇತರ ವಾನರ ಸ್ತ್ರೀಯರನ್ನೂ, ಅಯೋಧ್ಯೆಗೆ ಕರೆದುಕೊಂಡು ಬರಬೇಕೆಂದು ರಾಮನ ಆಜ್ಞೆಯಾಗಿದೆ. ಸೀತಾದೇವಿ ನಿಮ್ಮನ್ನೆಲ್ಲಾ ಕರೆದಿದ್ದಾಳಂತೆ. ಕೂಡಲೇ ಹೊರಡಿರಿ" ಎಂದನು. ತಾರೆ ಸಂತೋಷದಿಂದ ಲಗುಬಗೆಯಾಗಿ ಆಪಾದಮಸ್ತಕವೂ ಅಲಂಕೃತಳಾಗಿ ಉಳಿದ ವಾನರ ಸ್ತ್ರೀಯರೊಂದಿಗೆ, "ನಾವೆಲ್ಲರೂ ಅಯೋಧ್ಯೆಗೆ ಹೋಗಿ ಅಲ್ಲಿಯ ವಿಶೇಷಗಳನ್ನು ನೋಡಿ ಬರೋಣ. ಹೊರಡಿರಿ" ಎಂದಳು. ಕೂಡಲೇ ವಾನರ ಸ್ತ್ರೀಯರೆಲ್ಲಾ, ಸಂತೋಷ ಸಂಭ್ರಮಗಳಿಂದ ಅಲಂಕಾರ ಮಾಡಿಕೊಂಡು ಸೀತೆಯನ್ನು ನೋಡುವ ಕುತೂಹಲದಿಂದ ತಾರೆಯೊಂದಿಗೆ ಹೊರಟು ಬಂದು ಪುಷ್ಪಕವಿಮಾನವನ್ನೇರಿದರು.

ಮತ್ತೆ ವಿಮಾನವು ಆಕಾಶದಲ್ಲಿ ಪ್ರಯಾಣ ಸಾಗಿಸಿತು. ರಾಮನು ಸೀತೆಗೆ ಋಷ್ಯಮೂಕ ಪರ್ವತವನ್ನೂ, ತಾನು ಸುಗ್ರೀವನನ್ನು ಮೊತ್ತಮೊದಲು ನೋಡಿದ ಸ್ಥಳವನ್ನೂ, ಪಂಪಾ ಸರೋವರವನ್ನೂ, ಸೀತೆಯನ್ನು ಕಾಣದೆ ತಾನು ಅತ್ತು ಅಲೆದಾಡಿದ ಪ್ರಾಂತವನ್ನೂ, ಕಬಂಧನನ್ನು ಕೊಂದ ಸ್ಥಳವನ್ನೂ ಇತರ ವಿಶೇಷ ಪ್ರದೇಶಗಳನ್ನೂ ತೋರಿಸುತ್ತಾ ಹೋದನು.

ವಿಮಾನವು ಅತ್ರಿ ಮಹರ್ಷಿಯ ಆಶ್ರಮದ ಮೇಲಿಂದಾಗಿ, ಶೃಂಗಿಬೇರಪುರದ ಗುಹನ ನಿವಾಸ ಸ್ಥಳದ ಮೇಲಿಂದಾಗಿ, ಚಿತ್ರಕೂಟದ ಮೇಲಿಂದಾಗಿ ಭಾರದ್ವಾಜಾಶ್ರಮದ ಮೇಲಿಂದಾಗಿ ಹಾರುತ್ತಾ ಕೋಟೆಗೋಪುರಗಳಿಂದ ಸುಂದರವಾದ ಅಯೋಧ್ಯಾ ನಗರವನ್ನು ಸಮೀಪಿಸಿತು.



37-8



ವೀರಹನುಮಾನ್

ರಾಮನು ವನವಾಸಕ್ಕೆ ಸಿದ್ಧನಾಗಿ ಅಯೋಧ್ಯೆಯನ್ನು ಬಿಟ್ಟು ವನವಾಸಕ್ಕೆ ಹೊರಟುದು, ಚೈತ್ರ ಶುದ್ಧ ಪಂಚಮಿಯ ದಿನವೆಂಬುದನ್ನು ಭರತನು ಚೆನ್ನಾಗಿ ನೆನಪಿಟ್ಟುಕೊಂಡಿದ್ದನು. ಆ ಲೆಕ್ಕ ಪ್ರಕಾರ ಚೈತ್ರಶುದ್ಧ ಚತುರ್ಥಿಯ ದಿನಕ್ಕೆ ಹದಿನಾಲ್ಕು ವರ್ಷಗಳು ಪೂರ್ತಿಯಾಗುತ್ತದೆ. ಆ ದಿನಕ್ಕೆ ಸರಿಯಾಗಿ ರಾಮನು ಭರದ್ವಾಜಾಶ್ರಮವನ್ನು ಸೇರಿ, ಭರದ್ವಾಜನಿಗೆ ನಮಸ್ಕಾರ ಮಾಡಿ, "ಸ್ವಾಮಿ, ಅಯೋಧ್ಯಾ ನಗರವು ಸುಭಿಕ್ಷವಾಗಿದೆಯೋ ? ಭರತನು ಚೆನ್ನಾಗಿ ಪರಿಪಾಲನೆ ನಡೆಸುತ್ತಿದ್ದಾನೆಯೋ ? ನಮ್ಮ ತಾಯಂದಿರೆಲ್ಲ ಸೌಖ್ಯವಾಗಿದ್ದಾರೆಯೋ ?" ಎಂದು ಪ್ರಶ್ನೆಗಳನ್ನು ಮಾಡಿದನು.

ಆದಕ್ಕೆ ಭರದ್ವಾಜನು, "ರಾಮಾ, ಭರತನು ದೇಹ ಸಂಸ್ಕಾರವೇನಿಲ್ಲದೆ, ಧೂಳು ತುಂಬಿದ ಶರೀರದವನಾಗಿ ಜಡೆಗಟ್ಟಿದ ತಲೆಗೂದಲುಗಳಿಂದ, ನಿನ್ನ ಪಾದುಕೆಗಳನ್ನು ಮುಂದಿಟ್ಟುಕೊಂಡು ರಾಜ್ಯವನ್ನು ಪಾಲಿಸುತ್ತಾನೆ. ಎಲ್ಲರೂ ಕ್ಷೇಮ." ಎಂದನು.

ಭರದ್ವಾಜನು ರಾಮನಿಗೂ ಅವನೊಂದಿಗಿರುವವರಿಗೂ ಘನವಾದ ಸ್ವಾಗತವನ್ನು ಬಯಸಿ, ಆದಿನ ಅವರೆಲ್ಲರೂ ತನ್ನ ಅತಿಥಿಯಾಗಿದ್ದು, ಮರುದಿನ ಅಯೋಧ್ಯೆಗೆ ಹೋಗುವಂತೆ ಹೇಳಿದನು. ರಾಮನು ಭರದ್ವಾಜನ ಕೋರಿಕೆಯನ್ನು ಒಪ್ಪಿಕೊಂಡನು,

ಹನುಮಂತನನ್ನು ಮುಂದಾಗಿ ಭರತನ ಬಳಿಗೆ ಕಳುಹಿಸಲು ನಿಶ್ಚಯಿಸಿ ರಾಮನು ಅವನನ್ನು ಕರೆದು, "ನೀನು ಮುಂದಾಗಿ ಶೃಂಗಿಬೇರಪುರಕ್ಕೆ ಹೋಗಿ, ಅಲ್ಲಿರುವ ಶಬರರಾಜನಾದ ಗುಹನೊಂದಿಗೆ, ನಾನು ಶತ್ರುಗಳನ್ನು ಜಯಿಸಿ ಕ್ಷೇಮವಾಗಿ ಹಿಂದಿರುಗಿ ಬಂದಿರುವ ಸಂಗತಿ ಹೇಳು. ನನ್ನ ಅತ್ಯಾಪ್ತನಾದ ಗುಹನು ತುಂಬಾ ಸಂತೋಷ ಪಡುತ್ತಾನೆ. ಅವನಿಂದ ನೀನು ಅಯೋಧ್ಯೆಗೆ ಹೋಗುವ ದಾರಿಯನ್ನು ತಿಳಿದುಕೋ. ಗುಹನೇನಾದರೂ ಭರತನ ಸಮಾಚಾರವನ್ನು ಹೇಳಿದರೆ ಆಸ್ಥೆಯಿಂದ ಕೇಳು, ಆಮೇಲೆ ಅಯೋಧ್ಯೆಗೆ ಹೋಗಿ ಭರತನನ್ನು ನೋಡಿ, ನನ್ನ

೩೮. ರಾಮಪಟ್ಟಾಭಿಷೇಕ



ಕ್ಷೇಮವನ್ನೂ, ನಾನು ವನವಾಸವನ್ನು ಮುಗಿಸಿ ಸೀತಾಲಕ್ಷ್ಮಣರ ಸಹಿತವಾಗಿ ಬರುತ್ತಿದ್ದೇನೆಂಬುದನ್ನೂ ಅವನಿಗೆ ಹೇಳು. ನೀನು ಭರತನೊಂದಿಗೆ ಸೀತಾಪಹರಣದಿಂದ ಹಿಡಿದು ರಾವಣನ ಸಂಹಾರದವರೆಗೂ ವಿಪುಲೀಕರಿಸಿಯೇ ಹೇಳು. ಆಗ ಅವನ ಮುಖದಲ್ಲಿ ಯಾವ ಯಾವ ಭಾವಗಳು ಗೋಚರಿಸುತ್ತವೋ ಸೂಕ್ಷ್ಮವಾಗಿ ಗ್ರಹಿಸಿಕೋ. ನಾನು ಶತ್ರುಗಳೆಲ್ಲರನ್ನೂ ಜಯಿಸಿ, ಅಪಾರವೆನಿಸುವಷ್ಟು ಕೀರ್ತಿಯನ್ನು ಸಂಪಾದಿಸಿಕೊಂಡು, ಮಹಾಮಹಾ ಬಲಿಷ್ಠರಾದ ಸ್ನೇಹಿತರೊಂದಿಗೆ ಬರುತ್ತಿದ್ದೇನೆಂದರೆ ಭರತನ ಮನಸ್ಸಿನಲ್ಲಿ ಏನಾದರೂ ವಿಕಾರಗಳೇಳುತ್ತವೋ ಎಂಬುದನ್ನು ನೀನು ತಿಳಿದುಕೊಳ್ಳಬೇಕು. ಹಾಗೇನಾದರೂ ಇದ್ದರೆ ನೀನು ಕೂಡಲೇ ಬಂದು ನನಗೆ ತಿಳಿಸಿಬಿಡು. ತಂದೆ ತಾತಂದಿರ ರಾಜ್ಯವನ್ನು ಅನುಭವಿಸಿಕೊಂಡಿರುವವನಿಗೆ, ಅದನ್ನು ಬಿಟ್ಟುಕೊಡಬೇಕೆಂಬ ಸ್ಥಿತಿಬಂದರೆ ಬಹಳ ಕಷ್ಟವಾಗುವುದೂ ಉಂಟು. ಬಹಳ ಕಾಲದಿಂದ ರಾಜ್ಯಪಾಲನೆ ಮಾಡಿಕೊಂಡಿರುವ ಭರತನಿಗೆ, ರಾಜನಾಗಿಯೇ ಮುಂದುವರಿಯಬೇಕೆಂದಿದ್ದರೆ ಅವನೇ ಪಾಲಿಸಿಕೊಂಡಿರಲು ನಾನು ಅಡ್ಡಿ ಮಾಡಲಾರೆ. ನಾನು ನಾಳೆ ಇಲ್ಲಿಂದ ಹೊರಡುವುದರೊಳಗೇ ನೀನು ಹಿಂದಿರುಗಿಬಂದರೆ, ನಾನು ಅಯೋಧ್ಯೆಗೆ ಹೋಗಬೇಕಾಗಿಲ್ಲವೆಂದೇ ತಿಳಿಯುತ್ತೇನೆ. ನೀನು ನನ್ನ ವಿಶ್ವಾಸದವನೆಂತಲೇ ಈ ಕಾರ್ಯಕ್ಕಾಗಿ ನಿನ್ನನ್ನು ಕಳುಹಿಸುತ್ತೇನೆ" ಎಂದನು.

ರಾಮನ ಆಜ್ಞೆಯನ್ನು ಶಿರದೊಳಾಂತು ಹನುಮಂತನು ಆಕಾಶ ಮಾರ್ಗವಾಗಿ ಹಾರುತ್ತ ವೇಗವಾಗಿ ಅಯೋಧ್ಯೆಗೆ ಹೊರಟನು. ಅವನು ಶೃಂಗಿಬೇರಪುರದಲ್ಲಿ ಇಳಿದು ಗುಹನನ್ನು ನೋಡಿ, "ನಾನು ರಾಮದೂತನಾಗಿ ಬಂದಿರುವ ಹನುಮಂತನು. ರಾಮನು ತನ್ನ ಕ್ಷೇಮವನ್ನು ನಿನಗೆ ತಿಳಿಸಲು ಹೇಳಿದ್ದಾನೆ. ಅವನು ಸೀತಾಲಕ್ಷ್ಮಣರೊಂದಿಗೆ ಈ ರಾತ್ರಿಯನ್ನು ಭರದ್ವಾಜಾಶ್ರಮದಲ್ಲಿ ಕಳೆಯುತ್ತಾನೆ. ನಾಳೆ ಬೆಳಿಗ್ಗೆ ಹೊರಟುಬರುವ ರಾಮನನ್ನು ನೀನೂ ನೋಡಬಹುದು" ಎಂದು ಹೇಳಿ, ಭರತನ ಸಂಗತಿಯನ್ನೂ, ಅವನಿರುವ ಸ್ಥಳವನ್ನೂ ತಿಳಿದು, ಮತ್ತೆ ಆಕಾಶಮಾರ್ಗದಿಂದ ನಂದಿಗ್ರಾಮಕ್ಕೆ ಹೊರಟನು.


ನಂದಿಗ್ರಾಮವು ಅತ್ಯಂತ ಸುಂದರವಾಗಿಯೂ ಇದ್ದಿತು. ಅಲ್ಲಿಯ ವೃಕ್ಷಗಳೆಲ್ಲವೂ ನಂದನೋದ್ಯಾನದೊಂದಿಗೆ ಸ್ಪರ್ಧೆಗೆ ನಿಲ್ಲುವಂತಹವುಗಳು. ಅಲ್ಲಿಗೆ ಅಯೋಧ್ಯೆ ಎರಡು ಗಂಟೆಯಷ್ಟು ದೂರವಿತ್ತು. ಭರತನು ನಂದಿಗ್ರಾಮದಲ್ಲಿ ಆಶ್ರಮ ನಿರ್ಮಿಸಿ, ಜಿಂಕೆಯ ಚರ್ಮವನ್ನು ಕಟ್ಟಿಕೊಂಡು "ಹದಿನಾಲ್ಕು ವರ್ಷ ತುಂಬಿತಲ್ಲ? ರಾಮನೆಲ್ಲಿ?" ಎಂದು ಆಲೋಚಿಸಿಕೊಂಡಿದ್ದನು. "ಇವತ್ತಿನೊಳಗೆ ರಾಮನು ಬರಬೇಕು. ಆಮೇಲೆ ಭರತನು ಭೂಮಿಯಲ್ಲಿರಲಾರ" ಎಂದು ದಾರಿ ನೋಡಿಕೊಂಡಿದ್ದನು. ಅವನು ಸ್ನಾನವಿಲ್ಲದೆ ಸಂಸ್ಕಾರವಿಲ್ಲದೆ, ಜಡೆಗಟ್ಟಿ ತಲೆಗೂದಲಿಂದ

38-2

ತಪಸ್ವಿಯಂತಿದ್ದನು. ಅವನು ಕೇವಲ ಕಂದಮೂಲಗಳನ್ನೇ ತಿನ್ನುತ್ತಿದ್ದುದರಿಂದ ಕೃಶನಾಗಿಯೂ ಇದ್ದನು. ಹೀಗಿದ್ದರೂ ಅವನು ಮಂತ್ರಿಗಳನ್ನೂ, ಸೇನಾಪತಿಗಳನ್ನೂ ತನ್ನೊಂದಿಗಿಟ್ಟುಕೊಂಡು ರಾಜ್ಯಪರಿಪಾಲನೆಯನ್ನು ಚೆನ್ನಾಗಿ ನೋಡಿಕೊಂಡಿದ್ದನು. ಅವನ ಸಭಾಸ್ಥಾನದವರೆಲ್ಲರೂ ಕಾಷಾಯವಸ್ತ್ರಧಾರಿಗಳಾಗಿದ್ದರು. ಭರತ ಸನ್ಯಾಸಿಯ ರಾಜ್ಯಭಾರವು ಒಳ್ಳೆಯ ಅಚ್ಚುಕಟ್ಟಿನಲ್ಲಿ ಸಾಗುತ್ತಿತ್ತು. ಪ್ರತಿ ಲೆಕ್ಕಪತ್ರಗಳನ್ನೂ ಜೋಪಾನವಾಗಿ ನೋಡುತ್ತಿದ್ದನು.

ಅಂತಹ ಭರತನನ್ನು ನೋಡಿ ಹನುಮಂತನು ತಲೆ ದೂಗಿ ನಮಸ್ಕಾರ ಮಾಡಿ, "ರಾಮನು ಮುಂದಾಗಿ ಕಳುಹಿಸಿದ ದೂತ ಹನುಮಂತನು ನಾನು. ರಾಮನು ತನ್ನ ಕ್ಷೇಮವನ್ನು ನಿನಗೆ ಹೇಳಲು ಹೇಳಿದ್ದಾನೆ. ನಿನ್ನ ಚಿಂತೆಯೂ ಭಾರವೂ ತೊಲಗುವ ಶುಭವಾರ್ತೆಗಳನ್ನು ಹೇಳುತ್ತೇನೆ. ನೀನು ಬೇಗದಲ್ಲೇ ರಾಮನನ್ನು ನೋಡುವೆ. ರಾಮನು ರಾವಣನನ್ನು ಕೊಂದು, ಸೀತೆಯನ್ನು ಮತ್ತೆ ಪಡೆದು, ತನ್ನ ಎಲ್ಲಾ ಕೋರಿಕೆಗಳನ್ನೂ ತೀರಿಸಿಕೊಂಡು, ಮಹಾ ಬಲಶಾಲಿಗಳಾದ ಮಿತ್ರರೊಂದಿಗೆ ಬರುತ್ತಿದ್ದಾನೆ. ಅವನೊಂದಿಗೆ ಸೀತಾಲಕ್ಷ್ಮಣರೂ ಬರುತ್ತಿದ್ದಾರೆ" ಎಂದು. ಹೇಳಿದನು.

ಈ ವಾರ್ತೆಯನ್ನು ಕೇಳಿದಕೂಡಲೇ ಭರತನು ಸಂತೋಷವನ್ನು ತಾಳಲಾರದೆ ಹನುಮಂತನನ್ನು ಆಲಿಂಗಿಸಲು ನೋಡಿ ಮೂರ್ಛೆಹೋದನು. ಆಮೇಲೆ ಅವನು ಮೂರ್ಛೆಯಿಂದ ತಾನಾಗಿ ಎದ್ದು, "ಅಯ್ಯಾ, ನನಗೆ ಇಷ್ಟೊಂದು ಪ್ರಿಯವಾದ ವಾರ್ತೆಯನ್ನು ತಂದ ನೀನು ಯಾವ ದೇವತೆಯೋ ನಾನರಿಯೆ. ನಿನಗೆ ಬಹುಮಾನವಾಗಿ ಲಕ್ಷ ಗೋವುಗಳನ್ನೂ, ನೂರು ಗ್ರಾಮಗಳನ್ನೂ, ಸಮಸ್ತ ಆಭರಣಗಳನ್ನೂ ಹದಿನಾಲ್ಕು ಮಂದಿ ಸುಂದರ ಕನ್ಯೆಯರನ್ನೂ ಕೊಡುತ್ತೇನೆ" ಎಂದನು.



ಆಮೇಲೆ ಭರತನ ಕೋರಿಕೆಯಂತೆ ಹನುಮಂತನು ಚಿತ್ರಕೂಟದಿಂದ ಭರತನು ರಾಮನ ಪಾದುಕೆಗಳನ್ನು ತೆಗೆದುಕೊಂಡು, ಹೊರಟ ಮೇಲೆ ನಡೆದ ಎಲ್ಲಾ ವಿಷಯಗಳನ್ನೂ ವಿವರಿಸಿ ಭರತನಿಗೆ ಹೇಳಿದನು.

ಭರತನು ಎಲ್ಲವನ್ನೂ ಕೇಳಿ ಆತ್ಮಾನಂದದಿಂದ ಶತ್ರುಘ್ನನೊಂದಿಗೆ "ಶತ್ರುಘ್ನಾ! ರಾಮನನ್ನು ಸ್ವಾಗತಿಸಲು ಎಲ್ಲರೂ ಸಿದ್ಧರಾಗಬೇಕು. ಪುರುಷರೆಲ್ಲರೂ ಚೆಂದಾಗಿ ಸ್ನಾನಮಾಡಲಿ ಪಟ್ಟಣದಲ್ಲಿರುವ ಚತುಷ್ಪಥ ಮಂಟಪಗಳಲ್ಲಿರುವ ದೇವತೆಗಳನ್ನೆಲ್ಲಾ ವಿಶೇಷವಾಗಿ ಅಲಂಕಾರ ಮಾಡಿಸು. ಸುಗಂಧ ಪುಷ್ಪಗಳಿಂದ, ವಾದ್ಯಗಳಿಂದ ಪೂಜೆಗಳು ನಡೆಯಲಿ. ರಾಮನನ್ನು ನೋಡಲು ವೈತಾಳಿಕರೂ, ವೇಶ್ಯೆಯರೂ ಬಾಜಾ ಬಜಂತ್ರಿಗಳೊಂದಿಗೆ ಗುಂಪು ಗುಂಪಾಗಿ ಹೊರಡಬೇಕು" ಎಂದು ಮುಂತಾಗಿ ಆಜ್ಞೆಗಳನ್ನು ಮಾಡಿದನು. ಶತ್ರುಘ್ನನು ಬಹಳ ಸಂತೋಷದಿಂದಲೂ ಉತ್ಸಾಹದಿಂದಲೂ ಅನೇಕ ಸಾವಿರಮಂದಿ ಸೇವಕರನ್ನು

38-3



ಕರೆಯಿಸಿ, "ನೀವು ನಂದಿಗ್ರಾಮದಿಂದ ಅಯೋಧ್ಯೆಯ ವರೆಗೂ ದಾರಿಯನ್ನು ಏರು ತಗ್ಗುಗಳಿಲ್ಲದಂತೆ ಸರಿ ಮಾಡಬೇಕು. ಅದರ ಮೇಲೆ ಇಬ್ಬನಿಯಂತೆ ನೀರನ್ನು ಚಿಮುಕಿಸಿ. ಹೂಗಳನ್ನು ಹರಡಿ, ಬೆಳಗಾಗುವು ದರೊಳಗೆ ಅಯೋಧ್ಯೆಯ ಬೀದಿಗಳನ್ನೆಲ್ಲಾ ಮನೆ ಗಳನ್ನೆಲ್ಲಾ ತಳಿರು ತೋರಣ ಬಣ್ಣದ ರಂಗವಲ್ಲಿ, ಸುಗಂಧ ಧೂಪಗಳಿಂದ ಅಲಂಕರಿಸಬೇಕು. ವಿಶಾಲ ವಾದ ರಾಜಮಾರ್ಗದುದ್ದಕ್ಕೂ ಹೂಗಳ ತೋರಣ ಗಳನ್ನು ಕಟ್ಟಿ, ಹೂ ಗಂಧಗಳನ್ನು ಚೆಲ್ಲಿ ಪಂಚವರ್ಣ ಚೂರ್ಣಗಳಿಂದ ರಂಗವಲ್ಲಿ ಹಾಕಿಸಬೇಕು." ಎಂದು ಆಜ್ಞೆ ಮಾಡಿದನು.

ರಾಮಾಗಮನದ ವಾರ್ತೆ ಊರೆಲ್ಲಾ ಹರಡಿತು. ರಾಣಿಯರೂ, ಮಂತ್ರಿಯರೂ, ಸೈನಿಕರೂ ಅವರ ಪತ್ನಿಯರೂ ಅತ್ಯಂತ ಸಂಭ್ರಮಗೊಂಡರು. ಬ್ರಾಹ್ಮಣರು, ಕ್ಷತ್ರಿಯರು, ಗಣನಾಯಕರು ಮೊದ ಲಾದ ಪ್ರಜೆಗಳೆಲ್ಲ ಹೊಸಬಗೆಯ ಚುರುಕು ಚೈತನ್ಯ ಗಳಿಂದ ರಾಮನನ್ನು ನೋಡಲು ತಯಾರಾಗಿ ಹೊರಟರು. ಕೆಲವರು ಆನೆಗಳ ಮೇಲೆ ಕೆಲವರು ರಥಗಳ ಮೇಲೆ ಹೊರಟರು. ಸೈನಿಕರು ಬಗೆಬಗೆಯ ಆಯುಧಗಳನ್ನು ಹಿಡಿದುಕೊಂಡು ಸಾಲುಸಾಲಾಗಿ ನಡೆದರು. ಧೃಷ್ಟಿ, ಜಯಂತ, ಸಿದ್ಧಾರ್ಥ, ವಿಜಯ, ಅರ್ಥಸಾಧಕ, ಅಶೋಕ, ಮಂತ್ರಪಾಲ, ಸುಮಂತ್ರ ಎಂಬ ಅಷ್ಟ ಮಂತ್ರಿಗಳು ಮುಂದೆ ಹೊರಟರು. ದಶರಥನ ಹೆಂಡತಿಯರು ರಾಮನನ್ನು ನೋಡುವ ಕುತೂಹಲದಿಂದ, ವಾಹನಗಳಲ್ಲಿ ಹೊರಟು ನಂದಿ ಗ್ರಾಮಕ್ಕೆ ತಲಪಿದರು.

ಬೆಳಬೆಳಗಾಗುವಷ್ಟರಲ್ಲಿ ಭರತನು ರಾಮನ ಪಾದುಕೆಗಳನ್ನು ತಲೆಯ ಮೇಲಿಟ್ಟುಕೊಂಡು ರಾಮ ನನ್ನು ಎದುರುಗೊಳ್ಳಲಿಕ್ಕಾಗಿ ಹೊರಟನು. ಅವನ ಹಿಂದೆ ಬ್ರಾಹ್ಮಣರೂ, ವರ್ತಕರೂ, ಪುರಪ್ರಮುಖರೂ ಬಗೆಬಗೆಯ ಹೂವಿನ ಮಾಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಹೊರಟರು, ಮಂತ್ರಿಗಳೂ ಸ್ತೋತ್ರ ಪಾಠಕರೂ, ಪುರೋಹಿತರೂ ಹೊರಟರು. ಭರತ ನೊಂದಿಗೆ ರಾಜ ಚಿಹ್ನೆಗಳಾದ ಧ್ವಜ, ಪತಾಕೆ, ಛತ್ರ, ಚಾಮರ, ಬಂಗಾರದ ರಾಜದಂಡ ಮೊದಲಾದುವೂ ಹೊರಟವು.

ಎಷ್ಟು ಹೊತ್ತಾದರೂ, ಸೂರ್ಯೋದಯ ವಾಗುತ್ತಿದ್ದರೂ ರಾಮನು ಎದುರು ಬಾರದಿರುವು ದನ್ನು ನೋಡಿ. ಭರತನು ತನ್ನ ಪಕ್ಕದಲ್ಲಿರುವ ಹನು ಮಂತನೊಂದಿಗೆ, "ಏನಪ್ಪಾ ಹನುಮಾನ್, ಕೋತಿ ಬುದ್ಧಿಯ ಕಾರಣದಿಂದಾಗಿ ರಾಮನು ಬರುವನೆಂದು ಸುಮ್ಮನೆ ಹೇಳಲಿಲ್ಲವಷ್ಟೆ? ಎಲ್ಲಿ? ರಾಮನೆಲ್ಲಿ? ಬೆಳಗಾದರೂ ಕಾಣುವುದಿಲ್ಲವಲ್ಲಾ?" ಎಂದು ಆತುರ ಹಾಗೂ ಸಲಿಗೆಯಿಂದ ಕೇಳಿದನು.

ಹನುಮಂತನು ಹೀಗೆಂದನು: "ಭರದ್ವಾಜ ಮಹಾಮುನಿ ವಾನರಸೇನೆಗಳಿಗೆಲ್ಲಾ ಬ್ರಹ್ಮಾಂಡವಾದ ಔತಣ ನೀಡಿದ್ದಾರೆ. ಆತನ ಆಶ್ರಮದ ಫಲವೃಕ್ಷ


ಗಳೆಲ್ಲವೂ ಹಣ್ಣುಗಳಿಂದ ತೂಗಾಡುತ್ತ ವಾನರರಿಗೆ ಉತ್ಸಾಹ ನೀಡಿವೆ. ಅಗೋ, ಅವರ ಕೋಲಾಹಲ ಧ್ವನಿ ಇಲ್ಲಿಗೂ ಕೇಳಿಸುತ್ತಿದೆ. ಅವರೆಲ್ಲಾ ಈಗ ಗೋಮತೀ ನದಿಯನ್ನು ದಾಟುತ್ತಿರುವರೆಂದು ಕಾಣುತ್ತೆ. ಅಗೋಗೋ! ಪುಷ್ಪಕ ವಿಮಾನ! ದೂರದಲ್ಲಿ ಕಾಣುತ್ತಿದೆ. ಒಂದುಸಾರಿ ಕುಬೇರನದಾಗಿದ್ದ ಈ ವಿಮಾನವು ಈಗ ರಾಮನದಾಗಿದೆ. ಅದರಲ್ಲಿ ರಾಮನೊಂದಿಗೆ ಸೀತಾದೇವಿಯೂ ಲಕ್ಷ್ಮಣನೂ ವಾನರ ರಾಜ ಸುಗ್ರೀವನೂ, ರಾಕ್ಷಸರಾಜ ವಿಭೀಷಣನೂ ಇದ್ದಾರೆ. ಉಳಿದವರೆಲ್ಲ ಊರುಕೇರಿ ನೋಡುತ್ತಾ ಬರುತ್ತಿದ್ದಾರೆ."

ಅಷ್ಟರಲ್ಲಿ "ಅಗೋ ರಾಮ! ಬರುತ್ತಿದ್ದಾನೆ! ಬಂದನು!" ಎಂಬ ಶಬ್ದಗಳು ಆಕಾಶದಷ್ಟೆತ್ತರ ಏಳ ತೊಡಗಿದುವು. ರಾಮನನ್ನು ನೋಡಲು ಬಂದವರೆಲ್ಲರೂ ತಮ್ಮ ತಮ್ಮ ವಾಹನಗಳ ಮೇಲಿನಿಂದ ಇಳಿದು ನೆಲದ ಮೇಲೆ ಓರಣವಾಗಿ ನಿಂತರು. ಆಗ ರಾಮನ ಪುಷ್ಪಕವಿಮಾನವು ಭರತನ ಮುಂದೆ ಇಳಿದು ನಿಂತಿತು. ವಿಮಾನದ ಬದಿಯಲ್ಲಿ ನಿಂತಿರುವ ರಾಮನನ್ನು ನೋಡಿ ಭರತನು ನಮಸ್ಕಾರ ಮಾಡಿ, "ಹೇಳಿದ ಮಾತು ತಪ್ಪದಂತೆ ಬಂದು ನಮಗೆಲ್ಲಾ ಶುಭವನ್ನುಂಟು ಮಾಡಿದೆ" ಎಂದನು.


ರಾಮನು ಕೈಚಾಚಿ ಭರತನನ್ನು ವಿಮಾನದಲ್ಲಿ ಏರಿಸಿಕೊಂಡು, ಆತ್ಮಾನಂದದಿಂದ ಆಲಿಂಗಿಸಿದನು.

ಭರತನು ಲಕ್ಷ್ಮಣನನ್ನೂ ಮಾತಾಡಿಸಿ, ಸೀತೆಗೆ ನಮಸ್ಕಾರ ಮಾಡಿದನು. ಆಮೇಲೆ ಕೆಲಮಂದಿ ವಾನರ ವೀರರನ್ನೂ ಆಲಿಂಗಿಸಿಕೊಂಡು, ಹಾಗೆಯೇ ಸುಗ್ರೀವನೊಂದಿಗೆ ಆಲಿಂಗಿಸುವಾಗ, "ನೀನು ನಾವು ನಾಲ್ವರು ಅಣ್ಣತಮ್ಮಂದಿರೊಂದಿಗೆ ಐದನೇಯವನಾದೆ. ಉಪಕಾರಮಾಡಿದವನು ಬಂಧುವಿನ ಮೇಲೆ ಮಿತ್ರನೂ ಆಗುತ್ತಾನೆ." ಎಂದನು.

ಆನಂತರ ವಿಭೀಷಣನೊಂದಿಗೆ, "ನೀನು ನಮಗೆ ಬಲುದೊಡ್ಡ ಸಹಾಯಮಾಡಿದೆ. ನಿನ್ನಂಥವನ ಸ್ನೇಹವಾದುದು ನಮ್ಮ ಮಹಾಭಾಗ್ಯ" ಎಂದನು. ಶತ್ರುಘ್ನನು ರಾಮಲಕ್ಷ್ಮಣರಿಗೆ ನಮಸ್ಕಾರ



38-5



ಮಾಡಿ ಸೀತೆಯ ಪಾದಗಳಿಗೆ ವಂದಿಸಿದನು. ಆಮೇಲೆ ರಾಮನು ಮೊದಲು ತನ್ನ ತಾಯಿಯನ್ನು ನೋಡಲು ಹೋದನು. ಅವಳ ಪಾದಗಳಿಗೆ ನಮಸ್ಕಾರ ಮಾಡಿ, ಸುಮಿತ್ರೆಗೂ, ಕೈಕೇಯಿಗೂ, ವಸಿಷ್ಠನಿಗೂ ನಮಸ್ಕಾರ ಮಾಡಿದನು. ಪೌರರೆಲ್ಲಾ ರಾಮನಿಗೆ ತಮ್ಮ ತಮ್ಮ ಸಂತೋಷವನ್ನು ಸೂಚಿಸುವ ಮಾತುಗಳನ್ನು ಹೇಳುತ್ತಾ ಸ್ವಾಗತ ಬಯಸಿದರು.

ಭರತನು ರಾಮನ ಪಾದುಕೆಗಳನ್ನು ತನ್ನ ಕೈಯಿಂದಲೇ ರಾಮನ ಪಾದಗಳಿಗೆ ತಗಲಿಸಿದನು. ಆಗ ಅವನು ರಾಮನೊಂದಿಗೆ, "ರಾಮಾ, ಇಷ್ಟು ದಿನ ನಿನ್ನ ಆಜ್ಞೆಯಂತೆ ನಾನು ನೋಡಿಕೊಳ್ಳುತ್ತಿದ್ದ ನಿನ್ನ ರಾಜ್ಯವನ್ನು ತಿರುಗಿ ನಿನಗೆ ಕೊಟ್ಟಿದ್ದೇನೆ. ನೀನು ಮತ್ತೆ ಅಯೋಧ್ಯೆಗೆ ಬಂದುದನ್ನು ಕಣ್ಣಾರೆ ಕಂಡೆನಾದುದರಿಂದ ನನ್ನ ಜನ್ಮವು ಸಾರ್ಥಕವಾಯಿತು. ನನ್ನ ಕೋರಿಕೆ ನೆರವೇರಿತು." ಎಂದನು. ರಾಮನು ಪ್ರಸನ್ನನಾಗಿ ಅವರೆಲ್ಲರೊಂದಿಗೆ ವಿಮಾನದಲ್ಲಿ ನಂದಿಗ್ರಾಮವನ್ನು ತಲಪಿದನು. ಅಲ್ಲಿ ಅವನು ವಿಮಾನದಿಂದಿಳಿದು, ಎಲ್ಲರೂ ಇಳಿದ ಮೇಲೆ, ಆ ವಿಮಾನವನ್ನು ಕುಬೇರನ ಬಳಿಗೆ ಕಳುಹಿಸಿಬಿಟ್ಟನು.

ಆಮೇಲೆ ರಾಮನ ಪಟ್ಟಾಭಿಷೇಕಕ್ಕೆ ಮುಹೂರ್ತವನ್ನು ನಿಶ್ಚಯಿಸಿದರು. ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಕ್ಷೌರಿಕರಿಂದ ಕ್ಷೌರ ಮಾಡಿಸಿಕೊಂಡರು. ಭರತ, ಲಕ್ಷ್ಮಣ, ಸುಗ್ರೀವ, ವಿಭೀಷಣ, ರಾಮ, ಶತ್ರುಘ್ನ ಹೀಗೆ ಕ್ರಮವಾಗಿ ಮಂಗಳ ಸ್ನಾನ ಮಾಡಿದರು.

ರಾಮನು ಪುಷ್ಪ ಮಾಲೆಗಳನ್ನು ಧರಿಸಿ, ಶರೀರಕ್ಕೆ ಚಂದನವನ್ನು ಲೇಪಿಸಿಕೊಂಡು ಪೀತಾಂಬರವನ್ನು ಧರಿಸಿ ಸಿಂಹಾಸನದ ಮೇಲೆ ಆರೂಢನಾದನು. ಶತ್ರುಘ್ನನು ರಾಮ, ಲಕ್ಷ್ಮಣ, ಭರತರಿಗೆ ಅನೇಕ ಬಗೆಯ ಹಾರಗಳನ್ನೂ ಕೇಯೂರವೇ ಮೊದಲಾದ ಇತರ ಆಭರಣಗಳನ್ನೂ ತೊಡಿಸಿ ಅಲಂಕಾರ ಮಾಡಿದನು. ಕೌಸಲ್ಯೆಯೂ, ಕೈಕೆ, ಸುಮಿತ್ರೆಯರೂ ಸೀತೆಯನ್ನು ಅಲಂಕರಿಸಿದರು.

ಸಾರಥಿಯಾದ ಸುಮಂತ್ರನು ರಾಮನಿಗಾಗಿ ರಥವನ್ನು ಭವ್ಯವಾಗಿ ಅಲಂಕರಿಸಿ ತಂದು ನಿಲ್ಲಿಸಲು, ರಾಮನು ಆ ರಥದಲ್ಲಿ ಏರಿಕೊಂಡನು. ಸುಗ್ರೀವ ಹನುಮಂತ, ವಿಭೀಷಣ ಮೊದಲಾದವರು ಪರಿಶುಭ್ರರಾಗಿ ಒಳ್ಳೊಳ್ಳೆಯ ಬಟ್ಟೆಗಳನ್ನು ಧರಿಸಿ ರಾಮನ ರಥದ ಜತೆಯಲ್ಲಿ ಅಯೋಧ್ಯೆಗೆ ಹೊರಟರು.

ಇಷ್ಟರೊಳಗೆ ದಶರಥನ ಮಂತ್ರಿಗಳು ಮುಂದಾಗಿಯೇ ಅಯೋಧ್ಯೆಗೆ ಹೋಗಿ, ವಸಿಷ್ಠನೊಂದಿಗೆ ಕೂಡಿ, ಪಟ್ಟಾಭಿಷೇಕಕ್ಕೆ ಬೇಕಾದ ಸನ್ನಾಹಕ್ಕೆ ತೊಡಗಿದ್ದರು.

ಪೌರರು ರಾಮನ ಮುಖದಿಂದಲೇ ಅವನ ಸಮಾಚಾರವನ್ನು ಕೇಳುತ್ತಾ ನಡೆದರು. ತನಗೆ ಸುಗ್ರೀವನೊಂದಿಗೆ ಉಂಟಾದ ಸ್ನೇಹ, ಹನುಮಂತನ ಪ್ರಭಾವ, ಯುದ್ಧದಲ್ಲಿ ವಾನರರು ತೋರಿಸಿದ



ಪರಾಕ್ರಮ, ವಿಭೀಷಣನು ತನ್ನ ಪಕ್ಷಕ್ಕೆ ಬಂದ ಅವನ ಸದ್ಧರ್ಮ ಪ್ರಿಯತೆ, ಮೊದಲಾದ ದಿವ್ಯ ವೃತ್ತಾಂತಗಳನ್ನು ಕೇಳಿ ಪೌರರ ಆಶ್ಚರ್ಯ ಸಂತೋಷಗಳು ಮೇರೆ ಮೀರುತ್ತಿರಲು, ರಾಮನು ದಶರಥನ ಮಂದಿರವನ್ನು ಪ್ರವೇಶಿಸಿದನು. ರಾಮನ ಮಂದಿರಕ್ಕೆ ಸೇರಿದ ಅಂತಃಪುರ ಉದ್ಯಾನಗಳನ್ನು ಸುಗ್ರೀವನಿಗೆ ಬಿಡದಿಯನ್ನಾಗಿ ಅಣಿಗೊಳಿಸಿ ಕೊಡಲಾಯಿತು.

ಸುಗ್ರೀವನು ನಾಲ್ಕು ಬಂಗಾರದ ಕಲಶಗಳನ್ನು ನಾಲ್ವರು ವಾನರೋತ್ತಮರ ಕೈಗೆ ಕೊಟ್ಟು, "ನಾಳೆ ಬೆಳಗಾಗುವುದರೊಳಗೆ ನೀವು ಚತುರ್ದಿಶೆಗಳ ಸಮುದ್ರಗಳಿಂದ ಜಲವನ್ನು ತಂದು ಸಿದ್ಧರಾಗಿರಬೇಕು" ಎಂದು ಆಜ್ಞೆ ಮಾಡಿದನು.


ಜಾಂಬವಂತ, ಹನುಮಂತ, ವೇಗದರ್ಶಿ, ಋಷಭ ಈ ನಾಲ್ವರೂ ಕಲಶಗಳನ್ನು ತೆಗೆದುಕೊಂಡು, ನಾಲ್ಕು ಸಮುದ್ರಗಳ ನೀರುಗಳನ್ನೂ, ಐನೂರು ನದಿಗಳ ನೀರನ್ನೂ ತೆಗೆದುಕೊಂಡು ಬಂದರು.

ತರುವಾಯ ಸುಮುಹೂರ್ತದಲ್ಲಿ ರಾಮನ ಪಟ್ಟಾಭಿಷೇಕವು ನಡೆಯಿತು. ರಾಮನನ್ನೂ ಸೀತೆಯನ್ನೂ ರತ್ನಖಚಿತವಾದ ಪೀಠದ ಮೇಲೆ ಕುಳ್ಳಿರಿಸಿದರು. ಶಾಸ್ತ್ರೀಯವಾಗಿ ಎಲ್ಲಾ ಕಾರ್ಯಕ್ರಮಗಳೂ ತೊಡಗಿದುವು. ಮೊದಲು ಮಂತ್ರಿಗಳು ರಾಮನನ್ನು ಅಭಿಷೇಕಿಸಿದರು. ತರುವಾಯ ಋತ್ವಿಜರೂ, ಬ್ರಾಹ್ಮಣರೂ ಕನ್ನಿಕೆಯರೂ, ಪೌರರೂ, ಯೋಧರೂ ಒಬ್ಬರ ತರುವಾಯೊ ಒಬ್ಬರಾಗಿ ರಾಮನನ್ನು ಅಭಿಷೇಕ ಮಾಡಿದರು.

ಆ ಮೇಲೆ ಸೀತಾರಾಮರಿಗೆ ಚಕ್ರವರ್ತಿಯ ಅಲಂಕಾರ ಚಿಹ್ನೆಗಳನ್ನೆಲ್ಲ ತೊಡುಗಿಸಲಾಯಿತು. ಶತ್ರುಘ್ನನು ಬಿಳಿಗೊಡೆಯನ್ನು ಹಿಡಿದನು. ಸುಗ್ರೀವನೂ ವಿಭೀಷಣನೂ ಉಭಯ ಪಾರ್ಶ್ವಗಳಲ್ಲಿ ಚಾಮರ ಬೀಸಿದರು.

ಕಾಣಿಕೆಗಳು ರಾಶಿರಾಶಿಯಾಗಿ ಬಂದು ಬಿದ್ದುವು. ಪಟ್ಟಾಭಿಷೇಕದ ಸಂದರ್ಭದಲ್ಲಿ ಅನ್ನದಾನವೂ, ಬ್ರಾಹ್ಮಣರಿಗೆ ಕರುವಿನೊಂದಿಗೆ ಗೋವುಗಳ ದಾನವೂ ನಡೆದುವು. ರಾಮನು ಪ್ರತ್ಯೇಕವಾಗಿ ಬಂಗಾರವನ್ನೂ ಬಟ್ಟೆಗಳನ್ನೂ ದಾನ ಮಾಡಿದನು. ಅವನು ಸೀತೆಯ ಕೈಗೆ ಒಂದು ಮುತ್ತಿನ ಹಾರವನ್ನು ಕೊಟ್ಟು, ವಾನರರೊಳಗೆ ಅವಳಿಗೆ ಹೆಚ್ಚು ಅಭಿಮಾನವಿರುವವನಿಗೆ ಅದನ್ನು ಕೊಡಲು ಹೇಳಿದನು. ಸೀತೆ ಆ ಕ್ಷಣವೇ ಅದನ್ನು ಹನುಮಂತನಿಗೆ ಕೊಟ್ಟುಬಿಟ್ಟಳು. ರಾಮನು ವಾನರ ವೀರರಿಗೆಲ್ಲಾ ಬಹುಮಾನಗಳನ್ನು ಕೊಟ್ಟನು.

ಎಲ್ಲಾ ಮುಗಿದ ಮೇಲೆ ರಾಮನ ಅನುಜ್ಞೆ ಪಡೆದು ವಿಭೀಷಣನು ಲಂಕೆಗೆ ತಿರುಗಿ ಹೋದನು. ರಾಮನು ಭರತನನ್ನು ಯುವರಾಜನನ್ನಾಗಿ ಮಾಡಿಕೊಂಡು ರಾಜ್ಯಪಾಲನೆ ಮಾಡಲು ತೊಡಗಿದನು.





January 1978

ವೀರಹನುಮಾನ್

ರಾಮನು ಅಯೋಧ್ಯೆಯಲ್ಲಿ ಅತಿ ವೈಭವದಿಂದ ಪಟ್ಟಾಭಿಷಿಕ್ತನಾದ ಅನಂತರ ರಾಜ್ಯಪಾಲನೆಯ ವಿಷಯದಲ್ಲಿ ಮುಖ್ಯ ಶ್ರದ್ಧೆಯನ್ನು ಇಡ ತೊಡಗಿದನು. ಪ್ರತಿಯೊಂದು ವಿವರಗಳನ್ನೂ ಆಯಾ ಅಧಿಕಾರಿಗಳೊಂದಿಗೆ ಕೇಳಿ ಕೇಳಿ ತಿಳಿಯ ತೊಡಗಿ, ಮಂತ್ರಿಗಳೊಡನೆ ಆಲೋಚನೆ ಮಾಡು ತ್ತಿದ್ದನು. ಮುಖ್ಯವಾಗಿ ಧನಾಗಾರವು ತುಂಬಾ ಬಡವಾಗಿರುವ ವಿಷಯ ಬಯಲಾಯಿತು.


ಅದನ್ನು ತಿಳಿದು ರಾಮನು ಮುಖ್ಯ ಮಂತ್ರಿ ಯಾದ ಸುಮಂತನನ್ನು ಕರೆಯಿಸಿ "ರಾಜ್ಯದಲ್ಲಿ ಪ್ರಜೆಗಳಿಗೆ ಉಪಯೋಗವಾದ ಅನೇಕ ಕಾರ್ಯ ಗಳನ್ನು ಮಾಡಿಸಬೇಕಾಗಿದೆ. ಅವೆಲ್ಲವೂ ಸರಿಯಾಗಿ ನೆರವೇರಲು ತುಂಬಾ ಧನವು ಬೇಕಾಗಿದೆ. ರಾಜ ಭಂಡಾರದಲ್ಲಿ ನೋಡಿದರೆ ಧನವು ಅಲ್ಪಸ್ವಲ್ಪವೇ ಇದೆ. ಹೀಗೇಕಾಯಿತೋ ? ಅದನ್ನು ತುಂಬಿಸುವ ಕಾರ್ಯವನ್ನು ಮೊದಲು ಮಾಡಬೇಕು" ಎಂದನು. "ಕಳೆದ ಹದಿನಾಲ್ಕು. ವರ್ಷಗಳಿಂದ ಪ್ರಜೆಗಳು ತಾವು ಕಟ್ಟಬೇಕಾದ ಕಪ್ಪಗಳನ್ನು ಕಟ್ಟಲಿಲ್ಲ. ಅದಕ್ಕೇ ಖಜಾನೆ ಹೀಗಿದೆ" ಎಂದನು ಸುಮಂತ.

"ಹಾಗೇಕಾಯಿತು ? ಕಾಲಕಾಲಕ್ಕೆ ಮಳೆಬೀಳದೆ ಬರಗಾಲ ಬಂದು, ಪ್ರಜೆಗಳು ಬಹಳ ಕಷ್ಟಗಳಿಗೆ ಬಿದ್ದಿರಬೇಕೆಂದು ಕಾಣುತ್ತದೆ" ಎಂದು ರಾಮನು ಅನುತಾಪದಿಂದ ಹೇಳಿದನು.

ಸುಮಂತನು ಸ್ವಲ್ಪ ಹೊತ್ತು ಏನೋ ಸಂದೇಹ ದಿಂದ ಸುಮ್ಮನಿದ್ದು, "ಅಂತಹದೇನೂ ಬರಲಿಲ್ಲ ಪ್ರಭೂ. ದೇಶವು ಸಸ್ಯಶ್ಯಾಮಲವಾಗಿ ಚೆನ್ನಾಗಿಯೇ ಇದ್ದಿತು. ಪ್ರಜೆಗಳೇ ಬದಲಾಯಿಸಿ ಬಿಟ್ಟರು. ಧನಿಕರಾದ ವರ್ತಕರು ತೆರಿಗೆ ಕಟ್ಟದೆ ಸುಮ್ಮನಿದ್ದರು. ರೈತರೂ ಕಪ್ಪ ಕಾಣಿಕೆ ಸಲ್ಲಿಸಲಿಲ್ಲ. ಐಶ್ವರ್ಯ ವಂತರು ಇನ್ನಿಷ್ಟು ಐಶ್ವರ್ಯವಂತರಾದರು. ಬಡ ಜನರು ಮತ್ತಿಷ್ಟು ಬಡವರಾದರು. ಇದು ಪರಿಸ್ಥಿತಿ" ಎಂದನು. "ಹಾಗೇಕಾಯಿತು ? ಭರತನು ಏನು ಮಾಡುತ್ತಿದ್ದ ?" ಎಂದು ರಾಮನು ತುಸು ಕೋಪದಿಂದ ಕೇಳಿದನು.

೩೯. ಹನುಮಂತನ ಲೀಲೆಗಳು

39-1



"ಪ್ರಭುವೇ, ಭರತನು ರಾಜ್ಯಪಾಲನೆಯ ಕಡೆಗೆ ದೃಷ್ಟಿ ಹಾಕಿದ್ದಾದರೂ ಉಂಟೆ? ನಿನ್ನನ್ನೇ ನೆನೆದು, ನಿನ್ನ ಪಾದುಕೆಗಳನ್ನೇ ಪೂಜಿಸುತ್ತ ಹದಿನಾಲ್ಕು ವರ್ಷಗಳನ್ನೂ ಕಳೆದುಬಿಟ್ಟನು. ಅವನ ಪರಾಙ್ಮುಖತೆಯನ್ನು ಆಧಾರಮಾಡಿಕೊಂಡು, ಅವನ ಮುಂದೆ ನಿನ್ನ ನಾಮವನ್ನು ಕೀರ್ತನೆಮಾಡಿ, ಅನೇಕರು ಧನವನ್ನು ಬಹುಮಾನ ಪಡೆದುಕೊಂಡು ಹೋದರು. ನಾವು ಯಾರಾದರೂ ದೇಶ ಪರಿಪಾಲನೆಯ ವಿಷಯ ನೆನಪುಮಾಡಿದರೆ, 'ತೆರಿಗೆ ಕಟ್ಟದಿರುವ ಪ್ರಜೆಗಳಿಗೆ ಏನೂ ಮಾಡಬೇಡಿ. ಎಲ್ಲರೂ ನಮ್ಮಣ್ಣ ಶ್ರೀರಾಮನ ಪ್ರೀತಿಯ ಪೌರರೇ ಅಲ್ಲವೇ?' ಎಂದು ಮಾತ್ರ ಹೇಳಿ ಸುಮ್ಮನಿದ್ದುಬಿಡುವನು. ನಾನು ಕೂಡಾ ಪ್ರಭುವಿನ ಆಜ್ಞೆಗೆ ಒಳಪಡಬೇಕಾದವನು ತಾನೇ?" ಎಂದನು ಸುಮಂತ.

ನಡೆದ ಸಂಗತಿ ಏನೆಂಬುದು ರಾಮನಿಗೆ ಅರ್ಥವಾಗಿಹೋಯಿತು. "ಹೀಗಿರುವಾಗ ನಾನು ಮಾತ್ರ ಹೇಗೆ ರಾಜ್ಯಪಾಲನೆ ಮಾಡಲಿ? ಪ್ರಜೆಗಳಿಗೆ ಅಗತ್ಯವಾದ ಸುಖ ಸೌಕರ್ಯಗಳನ್ನು ಹೇಗೆ ಕಲ್ಪಿಸಲಿ? ಪ್ರಜೆಗಳ ಮನಸ್ಸು ನೋವಾಗದಂತೆ ಹೇಗೆ ಧನಸಂಗ್ರಹ ಮಾಡಲಿ?" ಎಂದುಕೊಂಡು ನಿಟ್ಟುಸಿರುಬಿಟ್ಟನು. ಅದೇ ಸಮಯಕ್ಕೆ ಹೇಳಿಟ್ಟಂತೆ ಅಲ್ಲಿಗೆ ಲಕ್ಷ್ಮಣನು ಬಂದನು.

ಅಣ್ಣ ರಾಮನ ಚಿಂತೆಯನ್ನು ನೋಡಿ ಲಕ್ಷ್ಮಣನು ಸುಮಂತನ ಮುಖ ನೋಡಿ ಏನಾಯಿತೆಂಬ ಅರ್ಥವನ್ನು ವ್ಯಕ್ತಪಡಿಸಿದನು. ಸುಮಂತನು ಲಕ್ಷ್ಮಣನಿಗೆ ಧನಾಗಾರದ ಸಂಗತಿಯನ್ನು ಹೇಳಿದನು.

ಆಗ ಲಕ್ಷ್ಮಣನು ಸ್ವಲ್ಪ ಹೊತ್ತು ಆಲೋಚನೆ ಮಾಡಿ. "ಹಾಗಾದರೆ. ನನ್ನ ಮಾತನ್ನು ಮನ್ನಿಸಿ ಒಂದು ಕೆಲಸಮಾಡಿ. ಪ್ರಭುತ್ವಕ್ಕೆ ತೆರಿಗೆ ಸಲ್ಲಿಸಬೇಕಾದವರೆಲ್ಲಾ ತಲಾ ಒಂದೊಂದು ಕುಂಬಳಕಾಯಿಯಷ್ಟು ಬಂಗಾರವನ್ನು ತಂದುಕೊಟ್ಟರೆ ಸಾಕು. ಅವರಿಗೆ ಯಾವ ಶಿಕ್ಷೆಯೂ ಇಲ್ಲ. ಈ ಪದ್ಧತಿಯಿಂದ ಪ್ರಜೆಗಳಿಗೆ ಯಾವ ಹಾನಿಯೂ ಆಗದೆಂದು ನಾನು ಉತ್ತರವಾದಿಯಾಗಿರುತ್ತೇನೆ" ಎಂದನು. ಈ ವ್ಯವಸ್ಥೆಗೆ ರಾಮನು ಅಂಗೀಕರಿಸಿದನು. ಆ ದಿನವೇ ಕೋಸಲ ದೇಶದೊಳಗೆಲ್ಲಾ ಡಂಗುರ ಸಾರಲಾಯಿತು.

ಹದಿನಾಲ್ಕು ವರ್ಷಗಳಿಂದ ತೆರಿಗೆ ಕಟ್ಟದಿದ್ದ ಪ್ರಜೆಗಳಿಗೆ ಒಂದಲ್ಲ ಎಂಟು ಹತ್ತು ಕುಂಬಳಕಾಯಿಗಳಷ್ಟು ಬಂಗಾರವನ್ನು ಕೊಡುವಂತೆ ಹೇಳಲಿಲ್ಲವಲ್ಲಾ. ಎಂದು ಅವರೆಲ್ಲ ತುಂಬ ಸಂತೋಷವನ್ನೇ ಪಡುತ್ತಾರೆ. ಕೇಳಿದರೆ ಆನೆಯ ತಲೆಯಷ್ಟು ದೊಡ್ಡ ಬಂಗಾರವನ್ನಾದರೂ ಕೊಡಲು ಸಿದ್ಧರಾಗಿರುತ್ತಾರೆಂದೂ ಲಕ್ಷ್ಮಣನಿಗೆ ಗೊತ್ತಿತ್ತು. ಆದರೆ ಪ್ರಜೆಗಳ ಮನಸ್ಸು ನೋವಾದರೆ ಮಾತ್ರ ರಾಮನು ಸಹಿಸುವವನಲ್ಲ. ಎಲ್ಲಾ ಪ್ರಜೆಗಳೂ ಒಂದೇ ಬಗೆಯ ಮನಸ್ಸಿನವರಲ್ಲವಷ್ಟೆ? ಅದಕ್ಕೆ


39-2

ಲಕ್ಷ್ಮಣನು ಹನುಮಂತನನ್ನು ಕರೆದು, "ನೀನು ಪ್ರಜೆಗಳ ನಡುವೆ ರಹಸ್ಯವಾಗಿ ತಿರುಗಿ, ಈ ಡಂಗುರದ ವಿಷಯದಲ್ಲಿ ಪ್ರಜೆಗಳು ಅಸಂತೃಪ್ತಿ ವ್ಯಕ್ತಪಡಿಸುತ್ತಾರೋ ತಿಳಿದು ಬಾ" ಎಂದು ಹೇಳಿ ಕಳುಹಿಸಿದನು.

ಹನುಮಂತನು ಸೂಕ್ಷ್ಮರೂಪದಿಂದ ಜನರ ನಡುವೆ ಸುತ್ತಾಡಿ, ಅವರು ಹೇಳಿಕೊಳ್ಳುವ ಮಾತುಗಳನ್ನು ಕಿವಿಗೊಟ್ಟು ಕೇಳಿ, ತಿರುಗಿ ಬಂದು ಲಕ್ಷ್ಮಣನೊಂದಿಗೆ, "ಕುಂಬಳಕಾಯಷ್ಟು ಬಂಗಾರ ಕೊಡಲು ಯಾರಿಗೂ ಕಷ್ಟವೆಂದು ಕಾಣುವುದಿಲ್ಲ. 'ಇಷ್ಟೇನಾ, ರಾಮನು ಪರಮ ಸಾಧು ಅಂತ ಕಾಣುತ್ತೆ' ಎಂದೂ ಹೇಳುತ್ತಾರೆ. 'ಇಷ್ಟು ವರ್ಷದ ಬಾಕಿಗೆ ಎಷ್ಟೋ ಕೇಳಬೇಕಿತ್ತು, ಕೊಡುತ್ತಿದ್ದೆವು' ಎನ್ನುತ್ತಾರೆ. ಕೆಲವರಿಗೆ ಒಂದೇ ಕುಂಬಳಕಾಯಿಯಷ್ಟು ಬಂಗಾರವೆಂದು ಕೇಳಿ ಪರಮ ಸಂತೋಷವಾಗಿದೆ" ಎಂದರು.


ಇದನ್ನು ಕೇಳಿದ ಮೇಲೆ ಲಕ್ಷ್ಮಣನಿಗೆ ಒಂದು ಸಂದೇಹ ಬಂದಿತು. ಪ್ರಜೆಗಳಲ್ಲಿ ಕೆಲವರಾದರೂ ನೀತಿವಂತರು ಇಲ್ಲದೆ ಹೋಗರು. ಅಂತಹವರಿಗೆ ಅನ್ಯಾಯ ನಡೆಯಬಾರದು. ಒಂದು ಕುಂಬಳಕಾಯಿಗಿಂತಲೂ ಕಡಿಮೆ ಶಕ್ತಿಯವರಾರಾದರೂ ಇದ್ದರೆ ಅವರು ನೊಂದುಕೊಳ್ಳದಂತೆ ಕಾರ್ಯ ಕೈಗೂಡಬೇಕು.

ಈ ಸಮಸ್ಯೆಗೆ ಏನು ಪರಿಹಾರವೆಂದು ಲಕ್ಷ್ಮಣನು ಸ್ವಲ್ಪ ಹೊತ್ತು ಆಲೋಚನೆ ಮಾಡಿದನು. ಏನೋ ಒಂದು ಉಪಾಯ ತೋರಿತು. ಕೂಡಲೇ ಅವನು ಹನುಮಂತನನ್ನು ಕರೆದುಕೊಂಡು ಧರ್ಮದೇವತೆಯ ಆಲಯಕ್ಕೆ ಹೋದನು. ಆಲಯದಲ್ಲಿ ಸ್ವಲ್ಪ ಹೊತ್ತಿದ್ದ ಮೇಲೆ, ಲಕ್ಷ್ಮಣನೂ, ಅತಿ ಸೂಕ್ಷ್ಮರೂಪದಿಂದ ಹನುಮಂತನೂ ಸಣ್ಣ ಸ್ವರದಿಂದ ಮಾತಾಡಿಕೊಳ್ಳುತ್ತಾ ಹೊರಗೆ ಬಂದರು. ಆ



ಸಮಯಕ್ಕೆ ಸೂರ್ಯನು ಮುಳುಗಿ ಚೆನ್ನಾಗಿ ಕತ್ತಲೆಯೂ ಆಯಿತು.

ಮರುದಿನ ಬೆಳಗಾಗುವಾಗ ರಾಜಭವನದ ಪ್ರಾಂಗಣದಲ್ಲಿ ದೊಡ್ಡದೊಂದು ತಕ್ಕಡಿಯನ್ನು ನೇತಾಡಿಸಿ ಕಟ್ಟಿಸಿದ್ದರು. ಅದರ ಒಂದು ತಟ್ಟೆಯಲ್ಲಿ ಒಂದು ಕುಂಬಳಕಾಯನ್ನು ಇಟ್ಟಿದ್ದರು. ಪ್ರಜೆಗಳು ಬಂಗಾರವನ್ನು ಮೂಟೆಯಾಗಿ ಕಟ್ಟಿಕೊಂಡು ಆ ಪ್ರದೇಶಕ್ಕೆ ಬಂದರು. ಅವರಲ್ಲಿ ಒಬ್ಬನು ಮುಂದಾಗಿ ತಾನು ತಂದ ಬಂಗಾರವನ್ನು ಎರಡನೇ ತಟ್ಟೆಗೆ ಹಾಕಿದನು. ಕುಂಬಳಕಾಯಿ ಇರುವ ತಟ್ಟೆ ಮೇಲೇಳಲೇ ಇಲ್ಲ. ಆಗ ಅವನು ಆಶ್ಚರ್ಯಪಡುತ್ತ, ತಲೆ ತುರಿಸಿಕೊಂಡು ಮನೆಗೆ ಓಡಿಹೋಗಿ, ಇನ್ನೊಂದು ದೊಡ್ಡ ಬಂಗಾರದ ಮೂಟೆಯೊಂದಿಗೆ ತಿರುಗಿಬಂದು, ಅದನ್ನೆಲ್ಲಾ ಎರಡನೇ ತಟ್ಟೆಯಲ್ಲಿ ಹಾಕಿದ ಮೇಲೆ ತೂಕ ಸರಿಹೋಯಿತು. ಇದನ್ನು ನೋಡಿದ ಪ್ರಜೆಗಳು ಬೇಗಬೇಗನೆ ತಮ್ಮ ತಮ್ಮ



ಮನೆಗೆ ಹೋಗಿ ಮತ್ತಿಷ್ಟು ಬಂಗಾರವನ್ನು ಗಂಟು ಕಟ್ಟಿಕೊಂಡು ತಂದು ಸಿದ್ಧರಾದರು.

ಪ್ರಜೆಗಳಲ್ಲಿ ಒಬ್ಬನು ಭಯಪಡುತ್ತಾ, ತನ್ನ ಹತ್ತಿರವಿರುವ ಸ್ವಲ್ಪ ಮಾತ್ರ ಬಂಗಾರವನ್ನು ತಕ್ಕಡಿಯ ತಟ್ಟೆಗೆ ಹಾಕಿದನು. ಆಷ್ಟೊಂದು ಸ್ವಲ್ಪ ಮಾತ್ರ ಬಂಗಾರದಿಂದ ತಕ್ಕಡಿ ಎದ್ದು ಮುಳ್ಳು ನೆಟ್ಟಗೆ ಮಧ್ಯದಲ್ಲಿ ನಿಂತು ಸರಿತೂಕ ತೋರಿಸಿತು. ಇದನ್ನು ನೋಡಿ ಪ್ರಜೆಗಳಿಗೆ ಬಹಳ ವಿಚಿತ್ರವೆನಿಸಿತು. ರಾಮನ ತಕ್ಕಡಿಗೆ ವಿಶೇಷ ಮಹಿಮೆಯಿರಬೇಕೆಂದು ಕೆಲವರಿಗೆ ತೋರಿತು.

ಹೀಗೆ ಮತ್ತೆ ಕೆಲವರು ತಕ್ಕಡಿಯಲ್ಲಿ ಬಂಗಾರವನ್ನು ಸುರಿದ ತರುವಾಯ ಕೆಲವರಿಗೆ ಹೆಚ್ಚು ಬಂಗಾರವನ್ನೂ, ಕೆಲವರಿಗೆ ಸ್ವಲ್ಪವೇ ಬಂಗಾರವನ್ನೂ ತೂಗುವುದನ್ನು ನೋಡಿ, ಅದು ನ್ಯಾಯದ ತಕ್ಕಡಿಯೆಂದು ಎಲ್ಲರೂ ನಂಬಿ, ನಮಸ್ಕಾರಮಾಡಿ ಬಂಗಾರವನ್ನು ಸುರಿಯುತೊಡಗಿದರು. ನ್ಯಾಯವಾಗಿ ಯಾರು ಎಷ್ಟು ಕೊಡಬೇಕೆಂಬುದನ್ನು ನಿರ್ಣಯಿಸಿಕೊಂಡು ಆ ತಕ್ಕಡಿ ಭಾರ ತೂಗುತ್ತದೆಂದು ಎಲ್ಲರೂ ಮೆಚ್ಚಿದರೇ ಹೊರತು, ಮನಸ್ಸಿನಲ್ಲಿ ಕೂಡಾ ಬೇರೆ ವಿಧವಾಗಿ ಭಾವಿಸಲಿಲ್ಲ. ಪ್ರಜೆಗಳು ಸಂತೋಷದಿಂದ ತಾವು ಕಟ್ಟಬೇಕಾದುದನ್ನೆಲ್ಲಾ ಕಟ್ಟಿದರು. ಕೋಶಾಗಾರವು ತುಂಬಿಹೋಯಿತು.

ಈ ವಿಧವಾಗಿ ತಕ್ಕಡಿ ತೂಗಿದುದನ್ನು ತಿಳಿದು ರಾಮನು ಆಶ್ಚರ್ಯಪಟ್ಟನು. ಅವನು ಲಕ್ಷ್ಮಣನನ್ನೂ, ಮಂತ್ರಿ ಸುಮಂತನನ್ನೂ ತನ್ನ ರಹಸ್ಯ ಮಂದಿರಕ್ಕೆ ಕರೆಯಿಸಿದನು. ಅವರ ಹಿಂದೆಯೇ ಹನುಮಂತನೂ, ಸೂಕ್ಷ್ಮರೂಪದಿಂದ ಮಂದಿರದೊಳಗೆ ಪ್ರವೇಶಿಸಿದನು.

ರಾಮನು ಲಕ್ಷ್ಮಣನನ್ನು ನೋಡಿ, "ಇದೇನು ಆಶ್ಚರ್ಯವಾಗಿದೆ ಲಕ್ಷ್ಮಣಾ! ಕುಂಬಳಕಾಯಿಯು ಭಾರ ಎಷ್ಟಿದ್ದೀತು? ಅದು ಮಣಗಟ್ಟಲೆ ಬಂಗಾರಕ್ಕೆ ಸರಿಸಮವಾಗಿ ತೂಗಿತಲ್ಲಾ? ಅಷ್ಟೇ ಅಲ್ಲದೆ ಬಗೆಬಗೆಯ ಭಾರವನ್ನು ತೋರಿಸಿದೆ. ನೀವೆಲ್ಲರೂ ಕೂಡಿ, ನನ್ನನ್ನು ತೃಪ್ತಿಪಡಿಸಲು ಪ್ರಜೆಗಳಿಗೆ ಮೋಸಮಾಡಿದ್ದೀರಿ! ನಿಜತಾನೇ?" ಎಂದು ಗದರಿಸಿ ಕೇಳಿದನು.

ಲಕ್ಷ್ಮಣನು ಕೈ ಕಟ್ಟಿಕೊಂಡು, "ಇದರಲ್ಲಿ ಯಾವ ಮೋಸವೂ ಇಲ್ಲ. ಎಲ್ಲವೂ ಧರ್ಮದೇವತೆಯ ಆದೇಶಾನುಸಾರವಾಗಿಯೇ ನಡೆದಿದೆ. ಇದರಲ್ಲಿ ನಮ್ಮ ಹನುಮಂತನೂ ಸ್ವಲ್ಪ ಶ್ರಮಪಟ್ಟಿದ್ದಾನೆ. ತಕ್ಕಡಿಯ ನಡುವಿನ ದಂಡವನ್ನು ಹಿಡಿದುಕೊಂಡು ಹನುಮಂತನು ಸೂಕ್ಷ್ಮರೂಪದಿಂದ ನಿಂತಿದ್ದ. ಧರ್ಮದೇವತೆ ಅತನಿಗೆ ಮಾತ್ರ ಕಾಣುವಂತೆ ನಿಂತು, ಯಾರಿಗೆ ಎಷ್ಟು ಬಂಗಾರಕ್ಕೆ ಸರಿತೂಕ ತೋರಿಸಬೇಕೆಂಬುದನ್ನು ಕೈಸನ್ನೆಯಿಂದ ಹೇಳುತ್ತಿದ್ದಳು. ಅವಳ ಸೂಚನೆಗೆ ತಕ್ಕ ಹಾಗೆ ಹನುಮಂತನು ತಕ್ಕಡಿಯನ್ನು ಪಾದದಿಂದ ಒತ್ತಿ

ಹಿಡಿದುಕೊಳ್ಳುತ್ತಿದ್ದ. ಧರ್ಮದೇವತೆಯ ನಿರ್ದೇಶನ ಹನುಮಂತನಿಗೆ ಮಾತ್ರವೇ ಗೊತ್ತಾಗುವಂತಿದ್ದಿತು. ನಾನೂ ಹನುಮಂತನೂ ಧರ್ಮದೇವತೆಯ ಆಲಯಕ್ಕೆ ಹೋಗಿ ಆಕೆಯ ಸಹಾಯವನ್ನು ಬೇಡಿಕೊಂಡು ಪಡೆದುಕೊಂಡೆವು. ಪ್ರಜೆಗಳಲ್ಲಿ ಧರ್ಮ ತಪ್ಪದೆ ತೆರಿಗೆ ಕಟ್ಟಿದವರು ಕೆಲವೇ ಮಂದಿಗಳಿರುತ್ತಾರೆ. ತೆರಿಗೆ ತಪ್ಪಿಸಿದವರು ಹೆಚ್ಚು ಮಂದಿ ಇದ್ದಾರೆ. ಈಗ ನ್ಯಾಯಸಮ್ಮತವಾಗಿ ಬರಬೇಕಾಗಿದ್ದ ತೆರಿಗೆಯೆಲ್ಲವೂ ಬಂದುಬಿಟ್ಟಿತು. ಇದೆಲ್ಲಾ ನ್ಯಾಯವಾಗಿ ಯಾರ ಮನಸ್ಸೂ ನೋವಾಗದೆ ಧರ್ಮಸಮ್ಮತವಾಗಿ ನಡೆದಿದೆ. ಇದಕ್ಕಾಗಿ ನಾನೂ ಹನುಮಂತನೂ ಬಹಳ ಶ್ರಮಪಟ್ಟೆವು" ಎಂದನು.

"ಹೌದು ಹೌದು ! ಲಕ್ಷ್ಮಣನ ಮಾತು ನಿಜ !" ಎಂದು ಧರ್ಮದೇವತೆಯ ಅಶರೀರವಾಣಿಯೂ ಕೇಳಿಸಿತು. ಆ ಕೂಡಲೇ ಹನುಮಂತನು ಸೂಕ್ಷ್ಮ ರೂಪದಿಂದ ನಿಜರೂಪ ಧರಿಸಿ ರಾಮನಿಗೆ ವೀರಾಸನಮಾಡಿ ನಮಸ್ಕಾರ ಮಾಡಿದನು. ರಾಮನು ಹನುಮಂತನನ್ನು ಬಾಯ್ತುಂಬಾ ಪ್ರಶಂಸೆ ಮಾಡಿದನು.

ಆಮೇಲೆ ಪ್ರಜೆಗಳ ಸುಖ ಸೌಕರ್ಯಗಳ ಏರ್ಪಾಡು ರಾಜ್ಯದಲ್ಲೆಲ್ಲಾ ಬಹುಬೇಗನೇ ನಡೆಯಿತು. ಆ ಸಂಬಂಧವಾಗಿ ಒಂದುದಿನ ರಾಮನು ಪುರಜನರೆಲ್ಲರಿಗೂ ಒಂದು ಔತಣ ಕೂಟವನ್ನು ಏರ್ಪಡಿಸಿದನು. ಅದಕ್ಕೆ ಬೇಕಾದ ಸಾಧನ ಸಾಮಗ್ರಿಗಳನ್ನು ತರುವುದರಲ್ಲಿ, ಚಪ್ಪರ ಹಾಕುವುದರಲ್ಲಿ, ಮಂಟಪ ಕಟ್ಟುವುದರಲ್ಲಿ ಹನುಮಂತನೇ ಮುಂದಿದ್ದು, ಒಂದು ಕ್ಷಣ ಕೂಡಾ ವಿಶ್ರಾಂತಿಯಿಲ್ಲದೆ, ಕೆಲಸಮಾಡತೊಡಗಿದನು.

ಸೀತೆ ಹನುಮಂತನು ಪಡುವ ಶ್ರಮವನ್ನು ಗಮನಿಸಿದಳು. ಅವಳಿಗೆ ಹನುಮಂತನ ಮೇಲೆ ತುಂಬ ಪುತ್ರವಾತ್ಸಲ್ಯವಿದ್ದಿತು. ಲಂಕೆಯಲ್ಲಿ ತಾನಿರು



ವುದನ್ನು ಮೊದಲು ತಿಳಿದು ರಾಮನಿಗೆ ತಿಳಿಸಿದವನು ಅವನು. ಅಂತಲೇ ಅವಳು ಅವನ ಮೇಲೆ ಕನಿಕರಗೊಂಡು ಬಳಿಗೆ ಕರೆದು. "ಅಪ್ಪಾ. ಹನುಮಾ ! ಬೆಳಿಗ್ಗೆನಿಂದ ಸ್ವಲ್ಪವೂ ವಿಶ್ರಾಂತಿಯಿಲ್ಲದೆ ಕೆಲಸ ಮಾಡುತ್ತಿರುವೆ. ಊಟದ ವೇಳೆಯಾಗುತ್ತಾ ಇದೆ. ಅತಿಥಿಗಳಿಗೆ ಯಾವುದರ ಕೊರತೆಯೂ ಆಗದಂತೆ ನೋಡಬೇಕಾದವನು ನೀನು. ಆದುದರಿಂದ ಮೊದಲು ನೀನು ಉಂಡುಬಿಡುವುದು ಚೆನ್ನಾಗಿರುತ್ತೆ. ನಾನೇ ಬಡಿಸುತ್ತೇನೆ" ಎಂದಳು.

ಹನುಮಂತನು ಸರಿಯೆಂದು ಸೀತೆಯ ಹಿಂದೆಯೇ ಅಡಿಗೇ ಶಾಲೆಗೆ ಹೋದನು. ಸೀತೆ ಅವನಿಗೆ ದೊಡ್ಡ ಎಲೆ ಹಾಕಿ ಬಡಿಸಲು ಪ್ರಾರಂಭಿಸಿದಳು. ಬಡಿಸಿದ ಪದಾರ್ಥಗಳನ್ನು ಮರುಕ್ಷಣ ಹನುಮಂತನು ತಿಂದುಬಿಡಲು ತೊಡಗಿದನು. ಹೀಗೆ ಸ್ವಲ್ಪ ಹೊತ್ತು ನಡೆಯಲು, ಸಾವಿರ ಜನರಿಗಾಗಿ ಮಾಡಿದ ಅನ್ನ, ಸಾರು, ಮೊದಲಾದ ಪದಾರ್ಥಗಳ ಗಂಗಾಳ



ಗಳೆಲ್ಲವೂ ಖಾಲಿಯಾಗಿ ಹೋದುವು. ಇದನ್ನು ನೋಡಿ ಸೀತೆ ಆಶ್ಚರ್ಯಪಡುತ್ತ ಓಡುತ್ತಾ ರಾಮನ ಬಳಿಗೆ ಹೋಗಿ, ಹನುಮಂತನ ಊಟದ ಸಮಾಚಾರವನ್ನು ಹೇಳಿದಳು.

ರಾಮನು ನಗುತ್ತ, "ಹನುಮಂತನು ಯಾರೆಂದು ಕೊಂಡೆ ? ಸಾಕ್ಷಾತ್ ಪರಮಶಿವನೇ ಈ ರೂಪದಲ್ಲಿ ಅವತರಿಸಿ ನಮ್ಮ ಸೇವಕನಾಗಿದ್ದಾನೆ. ಅವನನ್ನು ಹೇಗೆ ತೃಪ್ತಿಪಡಿಸುವೆಯೋ ನಾನರಿಯೆ. ಎಲ್ಲಾ ನಿನ್ನ ಪ್ರಜ್ಞೆಗೇ ಸೇರಿದ್ದು. ನಾನೇನೂ ಮಾಡು ವಂತಿಲ್ಲ" ಎಂದನು.


ಸೀತೆ ಅಡಿಗೇ ಶಾಲೆಗೆ ತಿರುಗಿ ಬಂದು ಹನುಮಂತನ ಹಿಂದಿನಿಂದ ನಿಂತುಕೊಂಡಳು. ಹನುಮಂತನು ಇನ್ನೂ ಎಲೆಯಲ್ಲಿರುವುದನ್ನು ತಿನ್ನುತ್ತಲೇ ಇದ್ದನು. ಸೀತೆ ತನ್ನ ಮನಸ್ಸಿನಲ್ಲಿ "ಪರಮೇಶ್ವರಾ ! ನೀನು ಯಾರೆಂಬುದನ್ನು ನಾನು ತಿಳಿದುಕೊಂಡೆನು. ಇಷ್ಟರಲ್ಲಿ ನಿನ್ನ ಹಸಿವೆಗೆ ಸ್ವಸ್ತಿ ಮಾಡಿಕೊಂಡು ತೃಪ್ತನಾಗದೆ ಹೋದರೆ ನಮ್ಮ ಮರ್ಯಾದೆ ಉಳಿಯದು ಸ್ವಾಮಿ !" ಎಂದು ಕೊಂಡು ಶಿವಪಂಚಾಕ್ಷರೀ ಮಂತ್ರವನ್ನು ಮೂರುಸಾರಿ ಜಪಿಸಿದಳು.

ಮರುಕ್ಷಣದಲ್ಲಿ ಹನುಮಂತನು ಸಂತೃಪ್ತಿಯಿಂದ ತೇಗಿದನು. ಸೀತೆ ಅವನ ಮುಂದೆ ಬಂದು, "ಏನಪ್ಪಾ, ಇನ್ನೂ ಸ್ವಲ್ಪ ಬಡಿಸಲೆ ?" ಎಂದು ಕೇಳಿದಳು.

"ಬೇಡಮ್ಮಾ ಬೇಡ, ಹೊಟ್ಟೆ ತುಂಬಿ ಹೋಯಿತು. ನಿನ್ನ ಕೈಯಿಂದ ಸ್ವಲ್ಪ ಉಂಡರೂ ಹೊಟ್ಟೆ ತುಂಬುತ್ತದಮ್ಮ" ಎಂದು ಹೇಳಿ ಹನುಮಂತನು ಎದ್ದು ಹೊರಗೆ ಹೋದನು.

ಆಮೇಲೆ ಸೀತೆ ಅನ್ನಪೂರ್ಣಾದೇವಿಯನ್ನು ಧ್ಯಾನಿಸಿದಳು. ಆ ಕೂಡಲೇ ಅಡಿಗೆಶಾಲೆಯಲ್ಲಿ ಮಾಡಿದ ಪದಾರ್ಥಗಳೆಲ್ಲ ಗಂಗಾಳಗಳಲ್ಲಿ ತುಂಬಿ ಕೊಂಡುವು. ಆಮೇಲೆ ಪುರಜನರಿಗೂ ವಾನರರಿಗೂ ಔತಣದ ಊಟ ಪ್ರಾರಂಭವಾಯಿತು. ವಾನರರ ಪಂಕ್ತಿಯಲ್ಲಿ ಕೊನೆಯಲ್ಲಿ ಕುಳಿತಿದ್ದ ಹುಡುಗ ವಾನರನೊಬ್ಬ ತನ್ನ ಎಲೆಯಲ್ಲಿದ್ದ ಮೆದುವಾದ ಕಲ್ಲಂಟೇ ಕಾಯಿಯನ್ನು ಕೈಯಲ್ಲಿ ತಿರುಗಿಸಿ ಚೆಂದ ನೋಡುತ್ತ ಬೆರಳಿನಿಂದ ಒತ್ತಿದ ಕೂಡಲೇ ಕಲ್ಲಂಟೇ ಬೀಜ ತುರ್ರನೆ ಮೇಲಕ್ಕೆಹಾರಿತು.

ಹುಡುಗವಾನರ "ಅರೇ ! ನಿನಗೆ ಮಾತ್ರ ಹಾರಲು ಗೊತ್ತೆಂದುಕೊಂಡಿಯಾ ? ನೋಡು ನನ್ನ ಪ್ರತಾಪ !" ಎನ್ನುತ್ತ ಎದ್ದು ಮೇಲೆ ಹಾರಿದನು. ಅವನು ಹಾರಿದ್ದು ನೋಡಿ ಮತ್ತೊಬ್ಬ ವಾನರನು ಅವನಿ ಗಿಂತ ಹೆಚ್ಚು ಎತ್ತರಕ್ಕೆ ಹಾರಿದ. ಅದನ್ನು ನೋಡಿ ಇನ್ನೊಬ್ಬ ವಾನರ ಇನ್ನಿಷ್ಟು ಎತ್ತರಕ್ಕೆ ಹಾರಿದನು. ಈ ವಿಧವಾಗಿ ವಾನರ ಸಮೂಹವೆಲ್ಲಾ ಒಬ್ಬರನ್ನು ಮಿಂಚಿ ಮತ್ತೊಬ್ಬರು ಅಂತರಿಕ್ಷದಲ್ಲಿ ಹಾರ ತೊಡಗಿದರು. ಅಂಗದನೂ, ನೀಲನೂ, ಸುಗ್ರೀವನೂ ಕೂಡಾ ಹಾರಿದರು. ಹನುಮಂತನು ಮಾತ್ರ ಹೀಗೆ



ಹಾರಬೇಕೆಂಬುದು ರಾಮನ ಆಜ್ಞೆಯೇನೋ ಎಂದುಕೊಂಡು ಲಾಂಛನಪ್ರಾಯವಾಗಿ ಕಪ್ಪೆಯಂತೆ ಒಂದು ಕುಪ್ಪಳಿಕೆ ಹಾಕಿ ನಿಂತನು.

ಹೀಗೆ ಹಾರಾಡುವ ವಾನರರ ಕೋಲಾಹಲವನ್ನು ನೋಡಿ ರಾಮನು ಅಲ್ಲಿಗೆ ಬಂದು ಹನುಮಂತನೊಂದಿಗೆ, "ಎಲ್ಲರೂ ಅಷ್ಟಷ್ಟೆತ್ತರ ಆಕಾಶದಲ್ಲಿ ಹಾರಿದರೆ ನೀನುಮಾತ್ರ ಸಣ್ಣ ಕುಪ್ಪಳಿಕೆ ಹಾಕಿ ಸುಮ್ಮನಿರುವೆಯೇಕೆ ?" ಎಂದು ಕೇಳಿದನು.

"ಇಷ್ಟು ದೊಡ್ಡ ವೀರರ ಮುಂದೆ ನಾನು ಎಷ್ಟರವನು ?" ಎಂದ ಹನುಮಂತ ವಿನಯದಿಂದ.

ಆಗ ಜಾಂಬವಂತನು ಮುಂದೆ ಬಂದು, "ರಾಮಾ, ಈ ಹನುಮಂತನಿಗೆ ಒಬ್ಬರು ಹೇಳಿದರೆ ಹೊರತು ಇವನಿಗಿರುವ ಶಕ್ತಿಸಾಮರ್ಥ್ಯಗಳು ತಿಳಿಯುವುದಿಲ್ಲ." ಎಂದನು.


ರಾಮನು ಒಂದು ಬಿಳಿಯ ತಾಮರೆಯನ್ನು ಹನುಮಂತನಿಗೆ ಕೊಡುತ್ತಾ, "ಹನುಮಾನ್, ನಮ್ಮ ವಂಶಕರ್ತನಾದ ಸೂರ್ಯಭಗವಾನನಿಗೆ ಈ ಬಿಳಿಯ ತಾಮರೆಯನ್ನು ಅರ್ಪಿಸಬೇಕಾಗಿದೆ. ಇದನ್ನು ಸೂರ್ಯನಿಗೆ ಕೊಡಲು ಶಕ್ತನಾದವನು ನೀನೊಬ್ಬನೇ !" ಎಂದನು.

"ರಾಮಾಜ್ಞೆ !" ಎಂದು ಹನುಮಂತನು ಆ ಬಿಳಿದಾವರೆಯನ್ನು ತೆಗೆದುಕೊಂಡು ಒಮ್ಮೆಗೇ ಆಕಾಶದ ಮೇಲೆ ಹಾರಿಹೋಗಿ ಸೂರ್ಯನ ರಥವನ್ನು ಹಿಡಿದು, "ಗುರುದೇವಾ ! ರಾಮನು ಇದನ್ನು ನಿನಗೆ ಸಮರ್ಪಿಸಲು ನನ್ನ ಹತ್ತಿರ ಕೊಟ್ಟು ಕಳುಹಿಸಿದ್ದಾನೆ. ಸ್ವೀಕರಿಸು" ಎಂದು ಹೇಳಿ ಹೂವನ್ನು ಕೊಟ್ಟನು.

ಸೂರ್ಯನು ಹನುಮಂತನನ್ನು "ಚಿರಂಜೀವಿಯಾಗಿರು !" ಎಂದು ಆಶೀರ್ವದಿಸಿ ತನ್ನ ಕೈಯಲ್ಲಿದ್ದ ಒಂದು ಶ್ವೇತಪದ್ಮವನ್ನು ಹನುಮಂತನಿಗೆ ಕೊಟ್ಟು, "ಇದನ್ನು ರಾಮನಿಗೆ ಕೊಡು. ಇದರ ಪ್ರಭಾವದಿಂದ ರಾಮನ ಪರಿಪಾಲನೆಯಲ್ಲಿ ದೇಶವು ಸುಭಿಕ್ಷವಾಗಿರುತ್ತದೆ" ಎಂದನು.

ಆ ಶ್ವೇತಪದ್ಮವು ಬಾಡುವುದಿಲ್ಲ. ಅದು ಇರುವಲ್ಲಿ ಸಕಾಲದಲ್ಲಿ ಮಳೆ ಬೀಳುತ್ತದೆ. ಋತುಧರ್ಮಗಳು ಕ್ರಮ ತಪ್ಪುವುದಿಲ್ಲ. ಅಂತಹ ಸೂರ್ಯ ಪದ್ಮವನ್ನು ತೆಗೆದುಕೊಂಡು ಹನುಮಂತನು ಸೂರ್ಯನಿಂದ ಅಪ್ಪಣೆ ಪಡೆದು, ಹಿಂದಿರುಗಿ ಬಂದು ರಾಮನಿಗೆ ಅದನ್ನು ಕೊಟ್ಟನು.

ರಾಮನು ಅತ್ಯಾನಂದದಿಂದ ಹನುಮಂತನನ್ನು ಆಲಿಂಗಿಸಿಕೊಂಡನು. ಹನುಮಂತನು ಸೀತಾರಾಮರಿಗೆ ಪ್ರಣಾಮಮಾಡಲು, "ಅಪ್ಪಾ, ಹನುಮಾ ! ನೀನು ಚಿರಂಜೀವಿಯಾಗಿರು !" ಎಂದು ಸೀತೆ ಅತ್ಯಂತ ವಾತ್ಸಲ್ಯದಿಂದ ಹರಸಿದಳು.



39-8



Feb 1978

ವೀರಹನುಮಾನ್

ರಾಮನು ಸೊಗಸಾಗಿ ರಾಜ್ಯವನ್ನು ಪರಿಪಾಲಿಸಿ ಕೊಂಡಿದ್ದ ಕಾಲದಲ್ಲಿ, ಉತ್ತರ ದಿಕ್ಕಿನಲ್ಲಿದ್ದ ಗಂಧರ್ವರು ಸ್ವೇಚ್ಛೆಯಿಂದ ರಾಮನನ್ನು ಧಿಕ್ಕರಿಸಿ ಪ್ರಜೆಗಳನ್ನು ನಾನಾ ವಿಧವಾಗಿ ಪೀಡಿಸತೊಡಗಿದರು. ಅದನ್ನು ತಿಳಿದು ರಾಮನು ಭರತನನ್ನು ಗಂಧರ್ವರೊಂದಿಗೆ ಯುದ್ಧಕ್ಕೆ ಕಳುಹಿಸಿದನು.

ಭರತನು ಸೇನೆಯೊಂದಿಗೆ ಹೋಗಿ ಗಂಧರ್ವರೊಂದಿಗೆ ದೊಡ್ಡ ಯುದ್ಧವನ್ನು ಮಾಡಿ ಅವರನ್ನು ಅಡಗಿಸಿದನು. ಗಂಧರ್ವ ಪೀಡೆ ಪರಿಹಾರವಾಗಿ ಪ್ರಜೆಗಳು ಸುಖಪಟ್ಟರು.

ಅದಾದ ಮೇಲೆ ವಾಯುವ್ಯ ದಿಕ್ಕಿನಲ್ಲಿ ಲವಣಾಸುರನೆಂಬ ರಾಕ್ಷಸನು ಪ್ರಳಯಕಾಲದ ರುದ್ರನಂತೆ ತಾನೇ ಸಾರ್ವಭೌಮನೆಂಬಂತೆ ವಿಜೃಂಭಿಸತೊಡಗಿದನು. ರಾಮನು ಶತ್ರುಘ್ನನನ್ನು ಲವಣಾಸುರ ಸಂಹಾರಕ್ಕೆ ನಿಯಮಿಸಿ, ಅನೇಕ ದಿವ್ಯಾಸ್ತ್ರಗಳನ್ನು ಅವನಿಗೆ ಕೊಟ್ಟನು. ರಾಕ್ಷಸ ಮಾಯೆಗಳಿಗೆ ತಕ್ಕ ಪ್ರತಿಕ್ರಿಯೆ ಮಾಡಲು ಅಷ್ಟುಮಾತ್ರ ಸಾಲದೆಂದು ತೋರಿತು. ವಿಭೀಷಣನೂ ಜತೆಯಲ್ಲಿದ್ದರೆ ಒಳ್ಳೆಯದೆನಿಸಿ, ರಾಮನು ಹನುಮಂತನ ಮೂಲಕ ಲಂಕೆಗೆ ಸುದ್ದಿ ಕಳುಹಿಸಿದನು. ಲಂಕೆಯಿಂದ ವಿಭೀಷಣನು ರಾಕ್ಷಸ ವೀರರನ್ನು ಕರೆದುಕೊಂಡು ಬಂದನು. ಶತ್ರುಘ್ನನು ತನ್ನ ಸೇನೆಗಳೊಂದಿಗೆ ರಾಕ್ಷಸ ಸೇನೆಯನ್ನೂ ಕೂಡಿಸಿ ವಿಭೀಷಣನ ಜತೆಯಲ್ಲಿ ಲವಣಾಸುರನೊಂದಿಗೆ ಯುದ್ಧಕ್ಕೆ ಹೊರಟನು.

ಲವಣಾಸುರನೊಂದಿಗೆ ಘೋರಯುದ್ಧವೇ ನಡೆಯಿತು. ಶತ್ರುಘ್ನನು ವಿಷ್ಣುವಿನ ಸುದರ್ಶನ ಚಕ್ರದಂತೆ ವಿಜೃಂಭಿಸಿ ಲವಣಾಸುರನ ಸೇನೆಗಳನ್ನು ಹತಮಾಡಿದನು.

ಆಗ ನಡೆದ ಮಹಾ ಯುದ್ಧದಲ್ಲಿ ವಿಭೀಷಣನ ರಾಕ್ಷಸ ಸೈನ್ಯವೂ ದೊಡ್ಡ ಪರಾಕ್ರಮವನ್ನು ಪ್ರದರ್ಶಿಸಿತು. ಶತ್ರುಘ್ನನ ಕೈಯಿಂದ ಲವಣಾಸುರನು ಸತ್ತುಬಿದ್ದನು. ಹೀಗೆ ವಿಜಯಶಾಲಿಯಾಗಿ ಶತ್ರುಘ್ನನು ಸೇನೆಗಳೊಂದಿಗೆ ಅಯೋಧ್ಯೆಗೆ ಹಿಂದಿರುಗಿದನು.

೪೦. ಶತಕಂಠ ರಾವಣನ ವಧೆ

40-1



ಒಂದು ದಿನ ರಾಮನು ಸೀತೆಯೊಂದಿಗೆ ಸಭೆ ನಡೆಸಿಕೊಂಡಿದ್ದಾಗ, ರಾಮನ ಸಿಂಹಾಸನದ ಮುಂದೆ ಹನುಮಂತನು ಕುಳಿತಿದ್ದನು. ಭರತ, ಲಕ್ಷ್ಮಣ, ಶತ್ರುಘ್ನ, ಸುಗ್ರೀವ, ಅಂಗದ, ನಳ, ನೀಲ, ಜಾಂಬವಂತ, ವಿಭೀಷಣಾದಿಗಳೂ, ವಸಿಷ್ಠ, ವಿಶ್ವಾಮಿತ್ರ ಜಾಬಾಲಿ ಮೊದಲಾದವರೂ ತಕ್ಕ ತಕ್ಕ ಆಸನಗಳಲ್ಲಿ ಸಭೆಯನ್ನು ಅಲಂಕರಿಸಿಕೊಂಡಿದ್ದರು. ಸಾಮಂತರೂ ಪುರಪ್ರಮುಖರೂ ಮಂಡಿಸಿದ್ದರು.

ಅಂತಹ ರಾಮನ ಸಭೆಗೆ ಅಗಸ್ತ್ಯ ಮಹಾಮುನಿ ಆಗಮಿಸಿದನು. ರಾಮನು ಅವನಿಗೆ ಅರ್ಘ್ಯ ಪಾದ್ಯಾದಿಗಳನ್ನಿತ್ತು ನಮಸ್ಕರಿಸಿ, ಆತಿಥ್ಯಗಳನ್ನಿತ್ತು ಕ್ಷೇಮ ಸಮಾಚಾರಗಳನ್ನು ಕುರಿತು ಕೇಳಿದನು.

ಅದಕ್ಕೆ ಅಗಸ್ತ್ಯನು, "ರಾಮಾ, ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಮಾಡತಕ್ಕ ಮಹಾರಾಜನಾಗಿ ನೀನಿರುವಾಗ ನಮ್ಮ ಕ್ಷೇಮಕ್ಕೆ ಏನು ಕೊರತೆ ಇದ್ದೀತು? ನೀನು ದಶಕಂಠನಾದ ರಾವಣನನ್ನು ಕೊಂದು ದೊಡ್ಡ ಕೀರ್ತಿಯನ್ನು ಸಂಪಾದಿಸಿರುವುದೇನೋ ನಿಜ. ಈಗ ನಿನಗೆ ಇನ್ನೊಂದು ಆಪತ್ತು ಒದಗಲಿದೆ. ತಿಕ್ತ ಸಮುದ್ರದಾಚೆಗೆ ಮಾಯಾ ಲಂಕಾ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಶತಕಂಠರಾವಣನೆಂಬ ರಾಕ್ಷಸರ ರಾಜನು ನಿನ್ನ ಸಂಗತಿ ತಿಳಿದು, ನಿನ್ನನ್ನು ಜಯಿಸಬೇಕೆಂಬ ಉದ್ದೇಶದಿಂದ ಹೊರಡಲಿದ್ದಾನೆ. ಇದನ್ನು ತಿಳಿದು ನಿನ್ನನ್ನು ಎಚ್ಚರಿಸಲಿಕ್ಕಾಗಿಯೇ ನಾನು ಬಂದೆ" ಎಂದನು.

ರಾಮನು ಆಶ್ಚರ್ಯಪಟ್ಟು, ಅವನು ಯಾರು ಎಂಥವನೆಂಬುದನ್ನು ವಿವರಿಸಿ ಹೇಳಬೇಕೆಂದು ಅಗಸ್ತ್ಯನನ್ನು ಕೇಳಿದನು. ಅಗಸ್ತ್ಯನು ಹೀಗೆಂದನು:

"ಕಶ್ಯಪ ಪ್ರಜಾಪತಿಗೆ ವಸು ಎಂಬವಳು ಹೆಂಡತಿಯಾಗಿದ್ದಳು. ಅವಳು ಅಸುರ ಸಂಧ್ಯಾವೇಳೆಯಲ್ಲಿ ಗರ್ಭಿಣಿಯಾಗಿ ತುಂಬ ವಿಕೃತಾಕಾರನಾದ ಶತಕಂಠನನ್ನು ಹಡೆದಳು. ಅವನು ಬ್ರಹ್ಮದೇವನನ್ನು ಕುರಿತು ದಾರುಣವಾದ ತಪಸ್ಸು ಮಾಡಿದನು. ಬ್ರಹ್ಮನು ಸಂತುಷ್ಟನಾಗಿ ಶತಕಂಠನ ಮುಂದೆ ಪ್ರತ್ಯಕ್ಷನಾಗಲು, ಇಂದ್ರಾದಿ ದೇವತೆಗಳನ್ನು ಜಯಿಸುವ ಶಕ್ತಿ ತನಗೆ ಬರಬೇಕೆಂದು ಕೇಳಿ ವರವನ್ನು ಪಡೆದನು. ಅವನ ಮಾಯಾ ಲಂಕೆಯಲ್ಲಿ ಹೊರತು ಮತ್ತೆಲ್ಲಿಯೂ ಯಾವ ಗಂಡುಗಲಿಗಳಿಂದಲೂ ಅವನನ್ನು ಕೊಲ್ಲಲು ಸಾಧ್ಯವಿಲ್ಲ. ಈ ಬಗೆಯ ವರಗಳ ಬಲದಿಂದ ಅವನು ಉನ್ಮತ್ತನಾಗಿ ಮೂರು ಲೋಕಗಳನ್ನೂ ಜಯಿಸುವ ಆಲೋಚನೆಯಲ್ಲಿದ್ದಾನೆ. ಅವನನ್ನು ಹತಮಾಡದಿದ್ದರೆ ಧರ್ಮಕ್ಕೆ ಉಳಿಗಾಲವಿಲ್ಲ."

ರಾಮನು ಸ್ವಲ್ಪ ಹೊತ್ತು ಆಲೋಚನೆ ಮಾಡಿ, "ಅವನ ಬಲಪರಾಕ್ರಮಗಳು ಎಷ್ಟರ ಮಟ್ಟಿನದು? ಅವನಿಗಿರುವ ಬೇರೇನಾದರೂ ವಿಶೇಷ ಶಕ್ತಿ ಯಾವುದು?" ಎಂದು ಕೇಳಿದನು

"ಅವನ ಬಲಪರಾಕ್ರಮಗಳು ಎಷ್ಟೇ ಇರಲಿ. ನಿನ್ನ ಬಾಣಗಳಿಗೆ ಅಸಾಧ್ಯವಾದುದು ಯಾವುದೂ

40-2

ಇಲ್ಲ. ಮುಖ್ಯ ಅವನು ದಶಕಂಠ ರಾವಣನಿಗಿಂತ ಹತ್ತು ಪಾಲು ಹೆಚ್ಚು ಪ್ರತಾಪ ಉಳ್ಳವನು. ಅವನ ಕಂಠಸ್ವರವೂ ರಾವಣನಿಗಿಂತ ಹತ್ತು ಪಾಲುದೊಡ್ಡದು. ಅವನ ರಾಜ್ಯಕ್ಕೆ ಹೋಗಲು ದೇವತೆಗಳಿಗೂ ಸಾಧ್ಯವಿಲ್ಲ. ಇಂದ್ರನಿಗೂ ಅಷ್ಟುಭಯ! ಅವನನ್ನು ಹೇಗೆ ಕೊಲ್ಲಬೇಕೆಂಬುದನ್ನು ನಿನಗೆ ನಾನು ಹೇಳಬೇಕಾಗಿಲ್ಲ." ಎಂದನು ಅಗಸ್ತ್ಯ.

ಅಗಸ್ತ್ಯನು ರಾಮನಿಂದ ಬೀಳುಗೊಂಡು ಹೊರಟುಹೋದ ಮೇಲೆ, ರಾಮನು ತನ್ನ ತಮ್ಮಂದಿರೊಂದಿಗೆ, "ನಾನು ಯುದ್ಧದಲ್ಲಿ ರಾವಣ ಕುಂಭಕರ್ಣಾದಿ ಮಹಾ ರಾಕ್ಷಸರನ್ನು ಕೊಂದು ಬಳಲಿದ್ದೇನೆ. ಲಕ್ಷ್ಮಣನು ಕೂಡಾ ನನ್ನ ಜತೆಯಲ್ಲಿ ನನ್ನಷ್ಟೇ ಶ್ರಮಿಸಿ ಬಳಲಿದ್ದಾನೆ. ಭರತನು ಗಂಧರ್ವರೊಂದಿಗೂ, ಶತ್ರುಘ್ನನು ಲವಣಾಸುರನೊಂದಿಗೂ ಯುದ್ಧಮಾಡಿ ಬಳಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಿಯೋ ಸಮುದ್ರಗಳ ಆಚೆಗಿರುವ ಶತಕಂಠರಾವಣನನ್ನು ಕೊಂದುಬರಲು ಯಾವನನ್ನು ನಿಯಮಿಸಲಿ? ಒಂದೆ ನೂರು ಯೋಜನ ಸಮುದ್ರ ದಾಟುವುದೇ ಬಹಳ ಕಷ್ಟವಾಯಿತು. ಈಗ ಸಾವಿರ ಯೋಜನ ದೂರ ದಾಟಬೇಕು" ಎಂದುಕೊಂಡು ರಾಮನು ಸ್ವಲ್ಪ ವಿಚಾರದಲ್ಲಿ ಬಿದ್ದನು.

ಆಗ ರಾಮನ ದೃಷ್ಟಿ ಇದಿರಿನಲ್ಲಿ ಕುಳಿತಿದ್ದ ಹನುಮಂತನ ಮೇಲೆ ಬಿದ್ದಿತು. ಕೂಡಲೇ ರಾಮ, "ಹನುಮಾನ್, ಈ ಕೆಲಸಕ್ಕೆ ಸಹಾಯ ಮಾಡಲು ನೀನೇ ತಕ್ಕವನು. ನೀನು ಯಾರೆಂದು ನನಗೆ ಗೊತ್ತು. ಏಕಪಾದರುದ್ರ ನೀನು. ಎಲ್ಲವನ್ನೂ ಕೇಳುತ್ತ ಏನೂ ತಿಳಿಯದವನಂತೆ ಸುಮ್ಮನೆ ಕುಳಿತಿರುವೆಯಲ್ಲಾ?" ಎಂದನು.

ಅದಕ್ಕೆ ಹನುಮಂತನು ವಿನಯದಿಂದ "ರಾಮಾ! ನಿನಗೆ ಈ ರಾಕ್ಷಸರೆಲ್ಲ ಒಂದು ಲೆಕ್ಕವೆ? ನನ್ನ ಮೇಲೆ ಏರಿಕೊಂಡು ಆ ರಾಕ್ಷಸನಿರುವ ದ್ವೀಪಕ್ಕೆ ಹೋಗಿ



ಲೀಲಾಜಾಲವಾಗಿ ಅವನನ್ನು ಕೊಂದುಬಿಡುವುದೇನು ಕಷ್ಟ?" ಎಂದನು.

ರಾಮನು ಹನುಮಂತನನ್ನು ಆಲಿಂಗಿಸಿಕೊಂಡು, "ನಿನ್ನ ಶೌರ್ಯ ಪರಾಕ್ರಮಗಳಿಗೆ ತಕ್ಕ ಮಾತನ್ನೇ ಹೇಳಿದೆ. ಇಂತಹ ಮಾತು ಬೇರೊಬ್ಬನ ಬಾಯಿಯಿಂದ ಬಾರದು" ಎಂದನು.

ಇದನ್ನೆಲ್ಲಾ ನೋಡಿಕೊಂಡಿದ್ದ ಸೀತೆ ರಾಮನೊಂದಿಗೆ, "ರಾಮಾ, ಹನುಮಂತನನ್ನು ಏಕಪಾದ ರುದ್ರನೆಂದು ಹೇಳಲು ಕಾರಣವೇನು? ರುದ್ರನು ಕೋತಿರೂಪವನ್ನು ಧರಿಸಿದನೇಕೋ?" ಎಂದು ತನ್ನ ಸಂದೇಹವನ್ನು ಕೇಳಿದಳು.

ಅದಕ್ಕೆ ರಾಮನು ಹೀಗೆಂದನು:

"ಒಂದು ಕಾಲದಲ್ಲಿ ರುದ್ರಾಂಶದಿಂದ ಅವತರಿಸಿದ ಏಕಪಾದ ರುದ್ರನು ಬ್ರಹ್ಮಾಂಡವನ್ನು ಕಾಪಾಡಿಕೊಂಡಿದ್ದನು. ರುದ್ರಗಣಗಳು ಅವನ ಸೇವೆ ಮಾಡಿಕೊಂಡಿದ್ದುವು. ಒಂದು ದಿನ ಏಕಪಾದ ರುದ್ರನು



ತನ್ನ ಧ್ಯಾನ ಶಕ್ತಿಯಿಂದ ಮಹಾವಿಷ್ಣುವಿನ ರೂಪವನ್ನು ನೋಡಿ, ಬ್ರಹ್ಮಾಂಡ ಪರಿಪಾಲನೆಯ ಕಾರ್ಯವನ್ನು ವಿಷ್ಣುವಿಗೆ ಒಪ್ಪಿಸಿ, ಅಲ್ಲಿಂದ ಹೊರಟು ವಿಶ್ವವನ್ನೆಲ್ಲಾ ತಿರುಗಿ ಭೂಲೋಕಕ್ಕೆ ಬಂದು ಶಿವನಲ್ಲೇ ಐಕ್ಯನಾದನು. ಆ ಸಮಯದಲ್ಲಿ ಶಿವನ ಅಂಶದಿಂದ ಈ ಹನುಮಂತನು ಹುಟ್ಟಿದ್ದಾನೆ.''

ಸೀತೆಗೆ ತೃಪ್ತಿಯಾಯಿತು. ಆಮೇಲೆ ರಾಮನು ಶತಕಂಠ ರಾವಣನ ಮೇಲೆ ತಾನೇ ಯುದ್ಧಕ್ಕೆ ಹೊರಡಲು ಸಿದ್ಧನಾದನು. ಅವನೊಂದಿಗೆ ಸೀತೆಯೂ ಬರುವೆನೆಂದಳು. ಲಕ್ಷ್ಮಣ, ಭರತ, ಶತ್ರುಘ್ನರೂ, ಸುಗ್ರೀವ, ವಿಭೀಷಣರೂ, ಸೈನ್ಯವೂ ಯುದ್ಧಕ್ಕೆ ಸಿದ್ಧರಾಗಿ ಹೊರಟರು.

ರಾಮನು ಹನುಮಂತನ ಮೇಲೆ ದೃಷ್ಟಿ ಹರಿಸಿದನು. ಹನುಮಂತನು ವಿಶ್ವರೂಪ ಧರಿಸಿ ಆಕಾಶದಷ್ಟೆತ್ತರ ಬೆಳೆದು ದಿಕ್ಕುಗಳನ್ನು ತುಂಬಿಸಿ ನಿಂತಿದ್ದನು. ಆಗಿನ ಅವನ ಪೂರ್ತಿ ರೂಪವನ್ನು ನೋಡಲು ಯಾರಿಗೂ ಸಾಧ್ಯವಿರಲಿಲ್ಲ. ಅಂತಹ ಹನುಮಂತನನ್ನು ನೋಡಿ ಎಲ್ಲರೂ ದಿಗ್ಭ್ರಾಂತರಾದರು. ರಾಮನು ತಲೆ ದೂಗಿದನು.

ತರುವಾಯ ಹನುಮಂತನು ಭೂಮಿಯ ಕಡೆ ಬಾಗಿದನು. ಮೊದಲು ಅವನ ಬೆನ್ನಿನ ಮೇಲೆ ರಾಮನು ಸೀತೆಯನ್ನು ಏರಿಸಿ, ತಾನೂ ಏರಿ, ತನ್ನೊಂದಿಗೆ ಬರುವವರನ್ನೂ, ವಾನರರಾಕ್ಷಸ ಸೈನ್ಯಗಳನ್ನೂ ಏರಿಕೊಳ್ಳುವಂತೆ ಹೇಳಿದನು. ಹನುಮಂತನ ವಿಶೇಷ ಶಕ್ತಿಯಿಂದ ರಾಮನ ಸೇನೆಗಳಿಗೆ ನಡೆಯುವ ಪ್ರಯಾಸವಿಲ್ಲದೆ ಹೋಯಿತು.

ಅವರು ಹಾಯಾಗಿ ಹನುಮಂತನ ವಿಶಾಲವಾದ ಬೆನ್ನಿನ ಮೇಲೆ ಆಕಾಶಯಾನ ಮಾಡಿದರು. ಗಗನಮಾರ್ಗದಲ್ಲಿ ಸಾಗುತ್ತಿರುವ ಹನುಮಂತನು, ಹಾರುವ ಮೇರುಪರ್ವತದಂತೆ ಬ್ರಹ್ಮಾಂಡವಾಗಿ ಕಾಣಿಸಿದನು.

ಹೀಗೆ ಹನುಮಂತನು ವಿಶ್ವರೂಪದಿಂದ ಎಲ್ಲರನ್ನೂ ಹೊತ್ತುಕೊಂಡು ನಾಲ್ಕು ಸಮುದ್ರಗಳ ಮೇಲೆ ಹಾರಿ ಹೋಗುವಾಗ, ರಾಮನು ಸೀತೆಗೆ ಒಂದೊಂದು ಸಮುದ್ರವನ್ನು ತೋರಿಸುತ್ತ ವಿಶೇಷಗಳನ್ನು ಬಣ್ಣಿಸುತ್ತಾ ಹೋದನು. ಕಡೆಗೆ ತಿಕ್ತ ಸಮುದ್ರವನ್ನೂ ದಾಟಿ ಶತಕಂಠ ರಾವಣನ ಮಾಯಾ ಲಂಕೆ ಗೋಚರವಾಯಿತು.

ಆ ನಗರದ ಸುತ್ತಲೂ ಬಂಗಾರದ ಕೋಟೆಯಿದ್ದಿತು. ಹೀಗೆ ಆ ಸ್ಥಳಕ್ಕೆ ಬರಲು ಹನುಮಂತನಿಂದ ಸಾಧ್ಯವಾಯಿತೇ ಹೊರತು, ಬೇರೆಯಾರಿಗೂ ಸಾಧ್ಯವಾಗದು.

ಆ ಮಾಯಾ ಲಂಕೆಯಲ್ಲಿ ಸ್ವರ್ಗಲೋಕದ ನಂದನವನಕ್ಕೆ ಸಮಾನವಾದ ವನವನ್ನು ನೋಡಿ, ರಾಮನು ಅಲ್ಲಿ ಇಳಿಯುವಂತೆ ಹನುಮಂತನಿಗೆ ಹೇಳಿದನು. ರಾಮನ ಎಲ್ಲಾ ಸೇನೆಗಳೂ ಅಲ್ಲಿ ಇಳಿದುವು. ಆಮೇಲೆ ರಾಮನು ಸುಗ್ರೀವನೇ ಮೊದಲಾದವರೊಂದಿಗೆ, ''ಇನ್ನು ತಡಮಾಡಬಾರದು. ನೀವು ಕೋಟೆಯೊಳಗೆ

ನುಗ್ಗಿ ಯುದ್ಧವನ್ನು ಪ್ರಾರಂಭಿಸಿರಿ. ಓಡಿ ಬರಲಿ ಶತಕಂಠರಾವಣ!" ಎಂದು ಹೇಳಿದನು.


ಆ ಕೂಡಲೇ ಸುಗ್ರೀವ, ಅಂಗದ, ವಿಭೀಷಣ ಮೊದಲಾದ ಮಹಾವೀರರು ತಮ್ಮ ಸೇನೆಗಳೊಂದಿಗೆ ಶತಕಂಠನ ಮೇಲೆ ಯುದ್ಧಕ್ಕೆ ಹೋದರು. ವಾನರ ಸೇನೆಯೂ ರಾಕ್ಷಸ ಸೇನೆಯೂ ಕೂಡಿ, ಕೋಟೆಯ ಸುತ್ತಲೂ ಇರುವ ಅಗಳ್ತೆಯನ್ನು ಮುಚ್ಚಿ ನೆಲ ಸಮ ಮಾಡಿ, ಕೋಟೆಯ ಗೋಡೆಗಳನ್ನು ಒಡೆದು. ಗೋಪುರಗಳನ್ನು ಕೆಡವಿ, ದ್ವಾರದ ಬಾಗಿಲುಗಳನ್ನು ಒದ್ದು ಮುರಿದು ಒಳಗೆ ನುಗ್ಗಿದರು.

ಆ ಕೋಟೆಯನ್ನು ರಕ್ಷಿಸುವ ಕಾಲಕೇಯರೆಂಬ ರಾಕ್ಷಸರಿಗೆ, ಈ ಕೋತಿಗಳೂ ರಾಕ್ಷಸರೂ ಹೀಗೆ ಬಂದು ಮುಗಿಬೀಳುವುದನ್ನು ನೋಡಿ ಆಶ್ಚರ್ಯ ವಾಯಿತು. "ಇವರೆಲ್ಲ ಎಲ್ಲಿಂದ ಬಂದರು? ಈ ಪಟ್ಟಣವನ್ನು ಪಾಲಿಸುವುದು ಶತಕಂಠ ರಾವಣನೆಂದು ಇವರಿಗೆ ತಿಳಿಯದೇ? ಇವರೆಲ್ಲ ಇನ್ನು ಜೀವದಿಂದ ಉಳಿಯುವುದುಂಟೇ?" ಎಂದು ಅಂದುಕೊಳ್ಳು ತ್ತಿರುವಾಗಲೇ ಕೋಟೆಯನ್ನು ಪುಡಿಮಾಡಿ ವಾನರ ರಾಕ್ಷಸರು ಒಳಗೆ ನುಗ್ಗಿದ್ದರು.


ಒಮ್ಮೆಲೇ ಗಾಬರಿಯಾದ ಕಾಲಕೇಯರು ಬಗೆ ಬಗೆಯ ಆಯುಧಗಳನ್ನು ತೆಗೆದುಕೊಂಡು ವಾನರ ರಾಕ್ಷಸರ ಮೇಲೆ ಬಿದ್ದರು. ಅವರ ಏಟುಗಳಿಗೆ ತಾಳಿ ಕೊಳ್ಳಲಾಗದೆ ವಾನರರು ದೂರ ದೂರ ಓಡಿದರು. ವಿಭೀಷಣನು ವಾನರರನ್ನು ನಿಲ್ಲಿಸಿ ತನ್ನ ರಾಕ್ಷಸ ಸೇನೆ ಗಳನ್ನು ಉತ್ಸಾಹ ಪಡಿಸಿದನು. ಅವರೊಂದಿಗೆ ವಾನರರು ಕೂಡಾ ಹೊಸ ಉತ್ಸಾಹದಿಂದ ತಿರುಗಿ ಬಂದರು. ಕಾಲಕೇಯ ರಾಕ್ಷಸರಿಗೂ, ವಾನರ ರಾಕ್ಷಸರಿಗೂ ತೀವ್ರ ಯುದ್ಧ ಪ್ರಾರಂಭವಾಯಿತು.

ಆ ಸಮಯದಲ್ಲಿ ಶತಕಂಠ ರಾವಣನು ಶಿವಪೂಜೆ ಮಾಡುತ್ತಿದ್ದವನು, ಯುದ್ಧದ ಕೋಲಾಹಲವನ್ನು ಕೇಳಿದನು. ಅವನು ದ್ವಾರಪಾಲಕರನ್ನು ಕರೆದು "ಏನು ಗಲಾಟೆಯದು?" ಎಂದು ಕೇಳಿದನು.

ದ್ವಾರಪಾಲಕರು ಅವನಿಗೆ ನಮಸ್ಕಾರ ಮಾಡಿ, 'ಸ್ವಾಮಿ, ಯಾವನೋ ರಾಜನು ಕೋತಿಯ



40-5



ಮೇಲೆ ಏರಿಕೊಂಡು ವಾನರ ಮತ್ತು ರಾಕ್ಷಸರ ಸೇನೆಯೊಂದಿಗೆ ಇಲ್ಲಿ ಬಂದು ಅತಿಕ್ರಮ ಪ್ರವೇಶ ಮಾಡಿದ. ನಮ್ಮ ಕಾಲಕೇಯರು ಅವರೊಂದಿಗೆ ಯುದ್ಧ ಮಾಡುತ್ತಿದ್ದಾರೆ. ಅದೇ ಕೋಲಾಹಲ" ಎಂದು ಬಿನ್ನವಿಸಿದರು.

ಶತಕಂಠನು ದ್ವಾರಪಾಲಕರನ್ನು ನೋಡಿ, "ನಿಮಗೆ ತಲೆಗಿಲೆ ಕೆಟ್ಟಿದೆಯೋ? ಯಾವನೋ ರಾಜನು ಕೋತಿಯ ಮೇಲೇರಿ ನನ್ನ ನಗರದ ಮೇಲೆ ಯುದ್ಧಕ್ಕೆ ಬಂದನೆಂದರೆ, ಯಾರಾದರೂ ನಕ್ಕಾರು. ದೇವತೆಗಳೇ ಇಲ್ಲಿಗೆ ಬರಲು ಹೆದರುವಾಗ ಮಾನವ ರಾಜ ವಾನರ ಸೇನೆಯೊಂದಿಗೆ ಬರುವುದುಂಟೇ? ರಾಮಗೀಮ ಅಲ್ಲವಷ್ಟೇ?" ಎಂದನು.

ಆಮೇಲೆ ಆ ಮಾತು ನಿಜವೆಂದೂ, ಹಾಗೆ ಬಂದವನು ಸಣ್ಣ ಲಂಕೆಯ ರಾವಣನನ್ನು ಕೊಂದ ರಾಮನೇ ಎಂದೂ ತಿಳಿದು, ಕ್ರೋಧಗೊಂಡನು. "ನಾನೇ ಹೋಗಬೇಕೆಂದಿರುವಾಗ, ಅವನೇ ಬಂದನೇ! ಒಳ್ಳೆಯದಾಯಿತು" ಎಂದುಕೊಂಡು ತನ್ನ ಸೇನೆಗೆ ಯುದ್ಧಕ್ಕೆ ಹೊರಡಲು ಆಜ್ಞೆಮಾಡಿ ರಣಭೇರಿಯನ್ನು ಮೊಳಗಿಸಿ, ತಾನೂ ಯುದ್ಧಕ್ಕೆ ಸಿದ್ಧನಾಗಿ ಹೊರಟನು.

ಶತಕಂಠನೇ ಯುದ್ಧಕ್ಕೆ ಬಂದನೆಂದು ತಿಳಿದು ರಾಮನೂ ಯುದ್ಧರಂಗಕ್ಕೆ ತೆರಳಿದನು. ತನ್ನ ಮುಂದೆ ನಿಂತ ಶತಕಂಠನ ಕಿರೀಟವನ್ನೂ, ಅಲಂಕಾರದ ಕಾಂತಿಯನ್ನೂ, ಅವನ ಶರೀರವನ್ನೂ, ಮದವನ್ನೂ ನೋಡಿ ರಾಮನು ಅದ್ಭುತವನ್ನು ನೋಡಿದಂತೆ ತಲೆ ದೂಗಿದನು.


ಅದನ್ನು ನೋಡಿ ಹನುಮಂತನು, "ಸ್ವಾಮಿ, ನೀನು ಅವನನ್ನು ನೋಡಿ ಆಶ್ಚರ್ಯ ಪಡುವುದುಂಟೆ? ನಿನ್ನ ಬಾಣಗಳ ಮುಂದೆ ಅವನೆಷ್ಟರವನು? ಬೇಗನೇ ಕೊಂದುಬಿಡು. ನೋಡು ಅವನ ಬಲವನ್ನು" ಎಂದು ಹೇಳಿ ಮುಂದಕ್ಕೆ ಓಡಿ ಹೋಗಿ ಶತಕಂಠರಾವಣನ ವಿಶಾಲವಾದ ಎದೆಯ ಮೇಲೆ ಒಂದು ಗುದ್ದು ಹಾಕಿದನು.

ಆ ಗುದ್ದಿನ ವೇಗಕ್ಕೆ ಶತಕಂಠನು ಕೆಳಗೆ ಬಿದ್ದು, ಕೂಡಲೇ ಎದ್ದು ಹನುಮಂತನನ್ನು ನೋಡಿ, "ಅರೆ! ನಿನ್ನ ಬಲವಾದರೂ ಎಷ್ಟದು? ಎಲೋ ವಾನರನೇ! ಮೂರು ಲೋಕಗಳನ್ನೂ ನಡುಗಿಸುವಂಥವನಾದ ನನ್ನನ್ನು ಬರಿ ಮುಷ್ಟಿಯಿಂದ ಹೊಡೆದು ಬೀಳಿಸಿದೆಯಲ್ಲಾ! ನಾನು ಎಷ್ಟೋ ಕಡೆ ತಿರುಗಿದ್ದೇನೆ. ಎಷ್ಟೋ ದೇವತೆಗಳನ್ನು ಯುದ್ಧಗಳಲ್ಲಿ ಗೆದ್ದು ಇಷ್ಟರಮಟ್ಟಿಗೆ ಆಗಿದ್ದೇನೆ. ನಿನ್ನ ಹಾಗೆ ಯಾರೂ ನನ್ನನ್ನು ಹೀಗೆ ಬೀಳಿಸಿದವರಿಲ್ಲ. ಇರಲಿ, ನಿನ್ನ ಮುಷ್ಟಿಯ ಬಲ ಗೊತ್ತಾಯಿತು. ಈಗ ನನ್ನ ಶೂಲಕ್ಕೆ ಆಹುತಿಯಾಗಿ ಬಿಡುವಿಯಂತೆ!" ಎಂದು ಹೇಳಿ, ತನಗಿಂತಲೂ ಹೆಚ್ಚು ಉದ್ದವಾದ ಶೂಲವನ್ನೆತ್ತಿ ಒಳ್ಳೆಯ ಶಕ್ತಿಯಿಂದ ಹನುಮಂತನ ಮೇಲೆ ಪ್ರಯೋಗಿಸಿದನು. ಅದನ್ನು ಹನುಮಂತನು ಹಿಡಿದು ಒಣಗಿತ ಕಿತ್ತು

ಮುರಿದ ಹಾಗೆ ಟಪ್ಪನೆ ಮುರಿದು ದೂರ ಬಿಸುಟನು. "ಭಲೇ!" ಎಂದು ಶತಕಂಠರಾವಣನು ಹನುಮಂತನ ಮೇಲೆ ಒನಕೆ, ಕೊಡಲಿ, ಖಡ್ಗ ಮೊದಲಾದ ಅನೇಕ ಆಯುಧಗಳನ್ನು ಪ್ರಯೋಗಿಸಿದನು. ಎಲ್ಲವನ್ನೂ ಹನುಮಂತನು ಮುರಿದು ಹಾಕಿದನು. ರಾಮನು ಹನುಮಂತನ ಪರಾಕ್ರಮಗಳನ್ನು ನೋಡಿ ಆನಂದಿಸುತ್ತ, ತಾನೊಂದು ಬಿಲ್ಲನ್ನು ತೆಗೆದುಕೊಂಡು ಶತಕಂಠನ ಮುಂದೆ ಯುದ್ಧಕ್ಕೆ ನಿಂತನು. ರಾಮನ ಜತೆಯಲ್ಲಿ ವಿಭೀಷಣನು ಬಿಲ್ಲು ಬಾಣಗಳೊಂದಿಗೆ ಯುದ್ಧಕ್ಕೆತೊಡಗಿದನು. ಶತಕಂಠನು ಅವರಿಬ್ಬರ ಬಾಣ ಪರಂಪರೆಗಳನ್ನು ನಡುದಾರಿಯಲ್ಲೇ ಮುರಿದು ಹಾಕುತ್ತ, ಕಾಲಿಂದೊದ್ದು ರಾಮವಿಭೀಷಣರಿಬ್ಬರೂ ಲಂಕೆಯಲ್ಲಿ ಹೋಗಿ ಬೀಳುವಂತೆ ಮಾಡಿದನು.

ಆಗ ಹನುಮಂತನು ತನ್ನ ಬಾಲವನ್ನು ನಾಲ್ಕು ಸಮುದ್ರಗಳ ಮೇಲಿನಿಂದ ಸೇತುವಿನ ಹಾಗೆ ಅಡ್ಡ ಮಲಗಿಸಿಟ್ಟನು. ಅದರ ದಪ್ಪವು ಅಗಲವಾದ ಹೆದ್ದಾರಿಯಷ್ಟಿದ್ದಿತು. ರಾಮನೂ ವಿಭೀಷಣನೂ ಅದರ ಮೇಲೇರಿಕೊಂಡು ಬಂದುಬಿಟ್ಟರು. ಶತಕಂಠನೊಂದಿಗೆ ರಾಮನ ಯುದ್ಧವು ಮತ್ತೆ ಪ್ರಾರಂಭವಾಯಿತು, ಅವರ ಜತೆಯಲ್ಲಿ ವಾನರರು ಮರಗಳನ್ನೂ ಕಲ್ಲುಗಳನ್ನೂ ಬಿಸುಟರು. ಶತಕಂಠನು ಎಲ್ಲವನ್ನೂ ನುಗ್ಗುನುರಿ ಮಾಡುತ್ತಲೇ ಬಂದನು. ಶತಕಂಠನಿಂದ ಹೊರಡುವ ಇದಿರೇಟುಗಳನ್ನು ತಾಳಿಕೊಳ್ಳಲಾಗದೆ, ಅಂಗದ, ನಳ, ನೀಲ, ಋಕ್ಷಜ ಮೊದಲಾದ ಪ್ರಮುಖ ವಾನರರೇ ಓಡಿ ಹೋಗುವಾಗ ಉಳಿದವರ ಪಾಡೇನು? ರಾಮನ ಮೂವರು ತಮ್ಮಂದಿರೂ ರಣರಂಗದಿಂದ ಓಡಿಹೋದರು.

ಆಗ ರಾಮನು ಸೀತೆಯೊಂದಿಗೆ ಹನುಮಂತನ ಮೇಲೆ ಏರಿ, ಶತಕಂಠನೊಂದಿಗೆ ಯುದ್ಧ ಮಾಡತೊಡಗಿದನು. ಶತಕಂಠನು ಅವನನ್ನು ನೋಡಿ. "ಎಲೋ ರಾಮಾ, ನನ್ನೊಂದಿಗೆ ಯುದ್ಧವೆಂದರೆ



ರಾವಣನೊಂದಿಗೆ ಯುದ್ಧವೆಂದು ಕೊಂಡೆಯಾ? ಈ ಕೋತಿಯ ಮೇಲೆ ಏರಿ ಇಷ್ಟು ದೂರದವರೆಗೆ ನೀನೇ ಬರುವ ಅಗತ್ಯವೇನಿತ್ತು? ಅದರ ಮೇಲೆ ಸೀತೆಯನ್ನು ಕೂಡಾ ಕರೆದು ತಂದಿರುವೆ! ನಾನು ರಾವಣನಂಥವನೆಂದು ಮಾಡಿದೆಯಾ?" ಎಂದು ಆಕ್ಷೇಪಿಸಿದನು.

ರಾಮನು "ಶತಕಂಠಾ! ನಿನ್ನಿಷ್ಟದಂತೆ ನೀನು ನನ್ನ ಮೇಲೆ ದಂಡೆತ್ತಲು ನೋಡಿದೆ. ನಿನಗೆ ಆ ಶ್ರಮ ಬೇಡವೆಂದು ನಾನೇ ಬಂದೆ. ನಿನ್ನ ರಾಜ್ಯವನ್ನು ನೋಡಲು ಸೀತೆಯೂ ಬಂದಳು. ಸಿದ್ಧನಾಗು!" ಎಂದು ಅವನ ಮೇಲೆ ಬಾಣಗಳನ್ನೂ ಮಂತ್ರಾಸ್ತ್ರಗಳನ್ನೂ ಪ್ರಯೋಗಿಸಿದನು. ಅವೆಲ್ಲವೂ ಅವನ ಮೇಲೆ ವ್ಯರ್ಥವಾಗುತ್ತಿರಲು, ಶತಕಂಠನು ಕೋಟಿ ಸಂಖ್ಯೆಯಲ್ಲಿ ತನ್ನ ಮುಂದಿರುವಂತೆ ರಾಮನಿಗೆ ತೋರಿ ಬಾಣಗಳ ಪರಂಪರೆಗೇ ತೊಡಗಿದನು. ಈ ಸಂದರ್ಭದಲ್ಲಿ ಹನುಮಂತನಿಗೆ ಪ್ರಚಂಡವಾಗಿ

ಆವೇಶ ಬಂದಿತು. ಬಿರುಗಾಳಿಯಂತೆ ಮುನ್ನುಗ್ಗಿ ಶತಕಂಠನ ರಾಕ್ಷಸ ಸೈನ್ಯವನ್ನು ಪೂರ್ತಿ ಹತ ಮಾಡಿದನು. ಆ ಸಮಯದಲ್ಲಿ ರಾಮನು ಸೀತೆಯ ಕೈಗೆ ಬಿಲ್ಲು ಬಾಣಗಳನ್ನು ಕೊಟ್ಟು ತಾನು ವಿಶ್ರಾಂತಿಯಾಗಿದ್ದನು. ಸೀತೆಗೂ ಯುದ್ಧಾವೇಶ ಬಂದಿತ್ತು. ಸೀತೆಯನ್ನು ಕೊಂದರೆ ರಾಮನು ಪಲಾಯನ ಮಾಡುವನೆಂದುಕೊಂಡು ಶತಕಂಠನು ಅವಳ ಮೇಲೆ ಬಾಣ ಪ್ರಯೋಗ ಮಾಡಿದನು. ಹನುಮಂತನು ಕದಲಿ ಅವನ ಗುರಿಗಳನ್ನು ತಪ್ಪಿಸಿದನು. ಸೀತೆ ಬಿಲ್ಲಿನಲ್ಲಿ ರಾಮಬಾಣಗಳನ್ನು ಹೂಡಿ ಪ್ರಯೋಗಿಸ ತೊಡಗಿದಳು. "ರಾಮನು ಸತ್ಯವಾದಿಯಾಗಿದ್ದರೆ, ನಾನು ಪತಿವ್ರತೆ ನಿಜವಾದರೆ ಈ ಬಾಣದಿಂದ ಇವನು ಸಾಯಲಿ!" ಎಂದು ಸೀತೆ ಬಿಟ್ಟ ಒಂದು ಬಾಣದಿಂದ ಶತಕಂಠನು ಸತ್ತುಬಿದ್ದನು. ಸೀತೆ ಬಿಲ್ಲು ಬಾಣಗಳನ್ನು ರಾಮನಿಗೆ ಒಪ್ಪಿಸಿ ನಮಸ್ಕಾರ ಮಾಡಿದಳು.

ರಾಮನು ತನ್ನ ಮಣಿಹಾರವನ್ನು ಸೀತೆಗೆ ಕೊಟ್ಟನು. ತಮ್ಮೆಲ್ಲರನ್ನೂ ಹೊತ್ತುಕೊಂಡು ಬಂದು, ಶತಕಂಠರಾವಣನ ಸಂಹಾರಕ್ಕೆ ಕಾರಣವಾದ ಹನುಮಂತನಿಗೇ ಆ ಹಾರವನ್ನು ಕೊಡಲು ಸೀತೆ ಹೇಳಿದಳು. ರಾಮನು ಕೊಟ್ಟ ಹಾರವನ್ನು ಹನುಮಂತನು ಧರಿಸಿಕೊಂಡು, ಆತ್ಮಾನಂದದಿಂದ "ಸೀತಾರಾಮರು ಪ್ರಸಾದಿಸಿದ ಈ ಹಾರವು ನನ್ನ ವಕ್ಷಸ್ಥಲದ ಮೇಲೆ ಪ್ರಕಾಶಿಸುತ್ತ, ನನ್ನ ಹೃದಯಲ್ಲಿರುವ ಸೀತಾರಾಮರನ್ನು ಯಾವಾಗಲೂ ಪ್ರತಿಫಲಿಸಿಕೊಂಡಿರುತ್ತದೆ" ಎಂದನು.

ಎಲ್ಲರೂ ತಿರುಗಿ ಅಯೋಧ್ಯೆಗೆ ಹೊರಟರು. ರಾಮನಿಂದ ಅಪ್ಪಣೆ ಪಡೆದು ವಿಭೀಷಣನು ತನ್ನ ರಾಕ್ಷಸರೊಂದಿಗೆ ಲಂಕೆಗೆ ಹೋದನು. ಸುಗ್ರೀವನೇ ಮೊದಲಾದ ವಾನರರು ಕಿಷ್ಕಿಂಧೆಗೆ ಹೋದರು. ಹನುಮಂತನು ರಾಮನ ಹತ್ತಿರವೇ ಇದ್ದುಬಿಟ್ಟನು.

ಶತಕಂಠ ರಾವಣನ ಸಂಹಾರದ ಅನಂತರ ರಾಮನು ನಿಷ್ಕಂಟಕವಾಗಿ, ಆದರ್ಶಪ್ರಾಯವಾಗಿ ರಾಜ್ಯಭಾರ ಮಾಡತೊಡಗಿದನು.

ರಾಮನ ರಾಜ್ಯದಲ್ಲಿ ಶೋಕವೂ, ಕ್ರೋಧವೂ, ವೃದ್ಧಾಪ್ಯ ಬಾಧೆಯೂ, ವೈರವೂ, ಲೋಭತ್ವವೂ, ಪ್ರಜಾಸಂಕ್ಷೋಭವೂ ಹೇಗಿರುವುದೆಂದು ಯಾರಿಗೂ ತಿಳಿಯದಂತಾಯಿತು.

ರಾಮನ ಸೇವೆಯಲ್ಲಿ ಅಯೋಧ್ಯೆಯಲ್ಲಿರುವ ಹನುಮಂತನಿಗೆ, ಕೆಲವು ದಿನಗಳ ಮೇಲೆ ತನ್ನ ತಾಯಿಯಾದ ಅಂಜನಾದೇವಿಯನ್ನು ನೋಡಬೇಕೆನಿಸಿತು. ಅವನು ರಾಮನ ಅನುಜ್ಞೆ ಪಡೆದುಕೊಂಡು ಗಂಧಮಾದನ ಪರ್ವತದ ಹತ್ತಿರವಿರುವ ಅಂಜನಾದೇವಿಯ ಆಶ್ರಮಕ್ಕೆ ಹೊರಟನು.



40-8



Ap. March 1978

ವೀರಹನುಮಾನ್

ಅಯೋಧ್ಯಾ ನಗರದ ರಾಜಭವನದ ಸಭಾಸ್ಥಾನದಲ್ಲಿ ರಾಮನು ಮಂತ್ರಿ ಸಾಮಂತಾದಿಗಳೊಂದಿಗೆ ಸಭೆ ನಡೆಯಿಸಿಕೊಂಡಿದ್ದನು. ಆಗ ಎಲ್ಲರಿಗೂ ಆಶ್ಚರ್ಯವಾಗುವಂತೆ ವಿಶ್ವಾಮಿತ್ರ ಮಹರ್ಷಿ ಬಿರುಗಾಳಿಯ ವೇಗದಲ್ಲಿ ಸಭೆಯೊಳಗೆ ಪ್ರವೇಶ ಮಾಡಿ, ರಾಮನ ಸ್ವಾಗತ ಮರ್ಯಾದೆಗಳೊಂದಕ್ಕೂ ಅವಕಾಶ ಕೊಡದೆ, "ರಾಮಚಂದ್ರಾ! ಕಾಶೀಪುರದ ರಾಜ ಯಯಾತಿ ಗರ್ವದಿಂದ ಅಂಧನಾಗಿ ನನ್ನನ್ನು ಅವಮಾನ ಪಡಿಸಿದ್ದಾನೆ. ಆ ರಾಜಾಧಮನನ್ನು ನೀನು ಕೂಡಲೇ ಹತ ಮಾಡಿಬಿಡಬೇಕು. ಇದು ನಿನ್ನ ಗುರುವಿನ ಆಜ್ಞೆ, ಎಂದು ತಿಳಿ! ನಂಬಿದ್ದೇನೆ" ಎಂದು ಹೇಳಿ ರಾಮನ ಸಮ್ಮತಿಗೂ ಕಾದಿರದೆ ಬಂದ ವೇಗದಲ್ಲೇ ಹಿಂದಿರುಗಿ ಹೋಗಿಬಿಟ್ಟನು. ಏನೋ ದೊಡ್ಡ ಅನಾಹುತದ ಸೂಚನೆಯಾಗಿತ್ತು ಅದು.

ರಾಮನೂ ಸಭೆಯಲ್ಲಿದ್ದವರೂ ಎದ್ದು ನಿಂತವರು ಸ್ತಬ್ಧರಾಗಿ ವಿಶ್ವಾಮಿತ್ರನ ಆಜ್ಞಾಧ್ವನಿಯನ್ನು ಕೇಳಿದರು. ಯಯಾತಿ ರಾಮನ ಮೇಲೆ ವಿನಯವಿಧೇಯತೆಗಳಿಂದಿರುವವನು. ಕಾಶೀರಾಜ್ಯವನ್ನು ಧರ್ಮ ತಪ್ಪದಂತೆ ಪರಿಪಾಲಿಸುತ್ತಿರುವ ಸಾಮಂತರಾಜ. ಅಂಥವನನ್ನು ಕೊಲ್ಲಲು ವಿಶ್ವಾಮಿತ್ರನ ಆಜ್ಞೆ. ಅವನಾಜ್ಞೆಯನ್ನು ಮೀರಲು ರಾಮನಿಂದ ಎಂದಿಗೂ ಸಾಧ್ಯವಿಲ್ಲ.

ವಿಶ್ವಾಮಿತ್ರನು ಮೊತ್ತಮೊದಲು ಯಾಗರಕ್ಷಣೆಗಾಗಿ ಬಾಲಕರಾದ ರಾಮಲಕ್ಷ್ಮಣರನ್ನು ಕರೆದೊಯ್ದು, ರಾಮನಿಗೆ ಎಷ್ಟೆಷ್ಟೋ ದಿವ್ಯಾಸ್ತ್ರಗಳನ್ನು ಉಪದೇಶಿಸಿ, ಬಲ ಅತಿಬಲ ಮೊದಲಾದ ವಿದ್ಯೆಗಳನ್ನು ಪ್ರಸಾದಿಸಿದ ಗುರುದೇವ. ಅಂತಹ ಗುರುವಿನ ಆಜ್ಞೆಯನ್ನು ಮೀರುವಂತಿಲ್ಲ. ಅತ್ತ ಪ್ರಜಾನುರಂಜಕನಾಗಿ, ತನ್ನ ಮೇಲೆ ಭಕ್ತಿಯುಳ್ಳವನಾಗಿ, ಧರ್ಮನಿರತನಾಗಿರುವ ಯಯಾತಿಯನ್ನು ಕೊಲ್ಲುವ ಬಗೆ ಹೇಗೆ? ಮಹಾ ಗುರುವಾದ ವಿಶ್ವಾಮಿತ್ರನ ಆಜ್ಞೆಯನ್ನು ನಿರಾಕರಿಸುವುದಾದರೂ ಹೇಗೆ?

ಇಂತಹ ಧರ್ಮಸಂಕಟದಲ್ಲಿ ಬಿದ್ದ ರಾಮನು ಸಭೆಯನ್ನು ಎಬ್ಬಿಸಿ ಒಳಗೆ ಹೋಗಿ, ಅಂತರಂಗಿಕ ಮಂದಿ

೪೧. ರಾಮಾಂಜನೇಯ ಯುದ್ಧ



ರಕ್ಕೆ ಸುಮಂತನನ್ನು ಕರೆಯಿಸಿ, "ಸುಮಂತಾ, ಇದು ನನ್ನ ಆಂತರಂಗಿಕ ವಿಷಯವಾಗಿದೆ. ವ್ಯಕ್ತಿಗತ ಸಮಸ್ಯೆ. ಹೇಗಿದ್ದರೂ ಗುರುವಾಜ್ಞೆ ಮೀರಲಾರೆ. ನಾನು ಒಬ್ಬನೇ ಹೋಗಿ ಯಯಾತಿಯನ್ನು ವಧಿಸಿ ಬರುವುದೆಂದೇ ನಿಶ್ಚಯಿಸಿದ್ದೇನೆ. ನಾವಿಬ್ಬರೂ ದ್ವಂದ್ವಯುದ್ಧ ಮಾಡುತ್ತೇವೆ. ಆದರಿಂದ ಯಾವ ಬಗೆಯ ಪ್ರಜೆಗಳ ಪ್ರಾಣಹಾನಿಯೂ ಆಗುವುದಿಲ್ಲ. ರಾಮನು ನಿನ್ನನ್ನು ಕೊಲ್ಲಲಿಕ್ಕೆ ಬರುತ್ತಾನೆಂದು ಯಯಾತಿಗೆ ಸಮಾಚಾರ ಕಳುಹಿಸಿಬಿಡು" ಎಂದು ಸ್ಥಿರಚಿತ್ತದಿಂದ ಹೇಳಿದನು.

ನಡೆದ ಸಂಗತಿ ಏನೆಂದರೆ, ಕಾಶೀ ನಗರವನ್ನು ಪಾಲಿಸುವ ಯಯಾತಿಯೊಂದಿಗೆ ಗ್ರಾಮಗಳ ಪ್ರಜೆಗಳು ಬಂದು, ಅರಣ್ಯದಿಂದ ಆನೆಗಳ ಮಂದೆಯೂ, ಇತರ ಕಾಡು ಮೃಗಗಳೂ ಬಂದು, ತಮ್ಮ ಹಳ್ಳಿಗಳ ಮೇಲೆ ಬಿದ್ದು ಅಪಾರ ಕಷ್ಟನಷ್ಟಗಳನ್ನುಂಟುಮಾಡುತ್ತವೆಂದು ಮೊರೆಯಿಟ್ಟುಕೊಂಡರು.

ಕೂಡಲೇ ಯಯಾತಿ ಆ ಮೃಗಗಳ ಬೇಟೆಗಾಗಿ ಕಾಡಿಗೆ ಹೊರಟನು. ಆಗ ವಿಶ್ವಾಮಿತ್ರನು ಆ ದಾರಿಯಾಗಿ ಬರುತ್ತಿದ್ದನು. ಬೇಟೆಯ ಸಂರಂಭದಲ್ಲಿ ವೇಗವಾಗಿ ರಥದ ಮೇಲೆ ಧಾವಿಸುತ್ತಿದ್ದ ಕಾಶೀರಾಜನು ವಿಶ್ವಾಮಿತ್ರನ ಆಗಮನವನ್ನು ಗುರುತು ಹಿಡಿಯದೆ ಅಲಕ್ಷ್ಯ ಮಾಡಿ, ಅವನ ಬದಿಯಿಂದಲೇ ರಥವನ್ನು ಹೊಡೆಯಿಸಿಕೊಂಡು ಮುಂದೆ ಸಾಗಿದ್ದನು.

ಅದು ಅವನು ತನಗೆ ತೋರಿಸಿದ ಘೋರವಾದ ಅವಮಾನವೆಂದು ವಿಶ್ವಾಮಿತ್ರನು ಭಾವಿಸಿ, "ರಥದಿಂದಿಳಿದು ನಮಸ್ಕರಿಸಿ, ಭಕ್ತಿಶ್ರದ್ಧೆಗಳಿಂದ ಕುಶಲ ವಿಚಾರಿಸಬೇಕಾಗಿದ್ದ ರಾಜನು, ನನ್ನನ್ನು ಇಷ್ಟು ಅಲಕ್ಷ್ಯದಿಂದ ಪರಾಭವಿಸಿದನಲ್ಲ! ಈ ಯಯಾತಿಯನ್ನು ಅಂತ್ಯಗೊಳಿಸದೇ ಹೋದರೆ ನಾನು ವಿಶ್ವಾಮಿತ್ರನೇ ಅಲ್ಲ!" ಎಂದು ಮೂಗಿನ ತುದಿಯ ಕೋಪದಿಂದ ಪ್ರತಿಜ್ಞೆ ಮಾಡಿ, ಸರಸರನೆ ರಾಮನ ಬಳಿಗೆ ಹೋಗಿ ಆಜ್ಞೆ ಮಾಡಿಬಿಟ್ಟಿದ್ದನು.

ಅಯೋಧ್ಯೆಯ ಚಾರರು ತಂದ ವರ್ತಮಾನವನ್ನು ಕೇಳಿ ಯಯಾತಿ ಮಹಾ ಭೀತಿಯಿಂದ ತತ್ತರಿಸಿದನು. ಯಯಾತಿಯ ಹೆಂಡತಿಯ ಹೆಸರು ಯಶೋಧರೆ. ಈ ದಂಪತಿಗಳಿಗೆ ಚಂದ್ರಾಂಗದನೆಂಬ ಮಗನೂ, ಚಂದ್ರಮುಖಿಯೆಂಬ ಮಗಳೂ ಇದ್ದರು. ಆ ಕುಟುಂಬದವರೆಲ್ಲಾ ರಾಮನ ಮೇಲೆ ತುಂಬಾ ಭಕ್ತಿ ಶ್ರದ್ಧೆಯುಳ್ಳವರು. ಅವರೆಲ್ಲಾ ಈಗ ಒಂದೇ ಬಗೆಯ ಶೋಕಸಮುದ್ರದಲ್ಲಿ ಮುಳುಗಿ ಹೋದರು. ರಾಮನೇ ಕೊಲ್ಲುವನಾದರೆ ಕಾಯುವರಾರು? ದಶದಿಶೆಗಳಲ್ಲಿಯೂ ಯಮನೇ ಕಾಣುತ್ತಿದ್ದನು ಅವರಿಗೆ. ರಾಮನಿಗೆ ವಿರುದ್ಧವಾಗಿ ಯಾರಲ್ಲಿ ಶರಣಾಗತಿ ಹೊಂದುವುದು?

ಮೂರ್ಛೆ ಬಿದ್ದುಬಿಟ್ಟಿದ್ದ ಯಯಾತಿ ಸ್ವಲ್ಪ ಹೊತ್ತಿನ ಮೇಲೆ ತನ್ನಂತೆ ಮೂರ್ಛೆ ತಿಳಿದು, "ರಾಮಾ, ನಿನಗೇ ಶರಣಾಗತನಾಗಿದ್ದೇನೆ. ನಿರಪರಾಧಿ

41-2

ನಾನು. ನಿನ್ನ ದಯವನ್ನೇ ನಂಬಿದ್ದೇನೆ ಎಂದು ನಾನೇ ಸ್ವತಃ ರಾಮನ ಬಳಿಗೆ ಹೋಗಿ ಪ್ರಾರ್ಥಿಸುತ್ತೇನೆ. ಕೊಲ್ಲುವುದಾದರೆ ಅಲ್ಲೇ ಕೊಂದುಬಿಡಲಿ. ಇಲ್ಲಿಯ ವರೆಗೆ ಬರುವ ಶ್ರಮವೇಕೆ ರಾಮನಿಗೆ?" ಎಂದು ಕೊಳ್ಳುತ್ತಾ ಎದ್ದನು.

ಯಯಾತಿ ರಾಜನು ತನ್ನ ಕುಟುಂಬದೊಂದಿಗೆ ಅಯೋಧ್ಯೆಗೆ ಹೊರಡಲು ಸಿದ್ಧನಾದನು. ಸ್ವಲ್ಪ ದೂರ ಹೋಗುವಾಗ ದಾರಿಯಲ್ಲಿ ನಾರದನು ಅವರಿಗೆ ಇದಿರಾಗಿ ಬಂದನು.

ಯಯಾತಿಯನ್ನು ನೋಡಿ ನಾರದನು ಫಕ್ಕನೆ ನಗುತ್ತ, "ಏನೂ ತಿಳಿಯದ ಯಯಾತಿ ರಾಜಾ, ಗುಡ್ಡದಂತೆ ಬೀಳುವ ಆಪತ್ತನ್ನು ನೋಡಿ ಹೆದರಿ ನಿನ್ನ ವಿವೇಕ ಮಣ್ಣು ತಿಂದಹಾಗಿದೆ. ಒಂದೇ ಬಾಣ, ಒಂದೇ ಮಾತು ಎಂಬುದಕ್ಕೆ ಹೆಸರಾದ ರಾಮನು ನಿನ್ನನ್ನು ವಧಿಸುವುದು ನಿಜ. ಬೆಂಕಿಗೆ ಹಾರುವ ಶಲಭದಂತೆ ನೀನಾಗಿ ರಾಮನ ಬಳಿಗೆ ಹೋಗುವ ದೆಂದರೇನಿದು? ಆಲೋಚಿಸುತ್ತಾ ಸಮಯ ಹಾಳು ಮಾಡಬೇಡ. ನನ್ನ ದಿವ್ಯ ಸೂಚನೆ ಕೇಳು. ಅಂಜನಾ ದೇವಿಯ ಆಶ್ರಮಕ್ಕೆ ಈ ಕ್ಷಣವೇ ಹೊರಡು. ಅವ ಳಿಂದ ಅಭಯದಾನ ಪಡೆ. ಹನುಮಂತನು ಅವಳ ಕುಮಾರನೆಂಬುದನ್ನು ಮರೆತೆಯಾ? ಅಲ್ಲಿಯೇ ಇದ್ದಾನೆ, ನಿನ್ನ ಪುಣ್ಯಕ್ಕೆ" ಎಂದು ಹೇಳಿದನು.

ಯಯಾತಿಗೆ ನಾರದನ ಮಾತು ನಂಬುಗೆ ಯನ್ನುಂಟು ಮಾಡಿತು. ಅಲ್ಲಿಂದ ನಿಂತ ಕಾಲಲ್ಲೇ ಅಂಜನಾದೇವಿಯ ಆಶ್ರಮಕ್ಕೆ ಓಡಿದನು. ಆಶ್ರಮ ದಲ್ಲಿ ಅಂಜನಾದೇವಿ ಆಗಲೇ ಧ್ಯಾನ ಮುಗಿಸಿ ಎದ್ದು ಹೊರಗೆ ಬಂದಿದ್ದಳು.


"ಶರಣಾಗತನಾದ ದೀನನು! ರಕ್ಷಿಸು ಅಮ್ಮಾ! ಅಭಯದಾನ! ಅಭಯದಾನ!" ಎಂಬ ಆರ್ತ ನಾದವನ್ನು ಕೇಳಿ ಅಂಜನಾದೇವಿ ಈಚೆಗೆ ಬಂದು ಕೈ ಜೋಡಿಸಿ ಪ್ರಾಣ ಭೀತಿಯಿಂದ ಕಂಪಿಸುತ್ತಾ



ನಿಂತಿರುವ ಯಯಾತಿಯನ್ನು ನೋಡಿದಳು. "ಹೆದರ ಬೇಡವಪ್ಪಾ! ನನ್ನ ಪ್ರಿಯಕುಮಾರ ಹನುಮಂತನ ಮೇಲೆ ಆಣೆ ಹಾಕಿ ಹೇಳುತ್ತೇನೆ. ನಿನಗೆ ಯಾವ ಆಪತ್ತೂ ಬರಲು ಬಿಡಲಾರೆ! ಏನಾಯಿತು ಹೇಳು" ಎಂದು ಅಂಜನಾದೇವಿ ಯಯಾತಿಗೆ ಅಭಯವಚನ ಕೊಟ್ಟಳು.

ಆಗಲೇ ಅಲ್ಲಿಗೆ ಹನುಮಂತನು ಗಂಧಮಾದನ ಪರ್ವತದಿಂದ ಬಂದನು. ಯಯಾತಿ ಆ ತಾಯಿ ಮಗ ಇಬ್ಬರಿಗೂ ದಂಡಪ್ರಣಾಮ ಮಾಡಿ, "ನನ್ನ ಹೆಸರು ಯಯಾತಿ. ಕಾಶೀದೇಶದ ರಾಜ. ರಾಮನ ಸಾಮಂತ ನಾದ ನಾನು ರಾಮನ ಮೇಲೆ ಭಕ್ತಿ ಶ್ರದ್ಧೆಯುಳ್ಳ ವನು. ಈಗ ನನ್ನ ಪ್ರಾಣವನ್ನು ಕಾಪಾಡುವವರು ನಿಮ್ಮ ಹೊರತು ಮತ್ತೊಬ್ಬರಿಲ್ಲ" ಎಂದು ಹೆದ ರುತ್ತಾ ಹೇಳಿದನು.

ಹನುಮಂತನು ಯಯಾತಿಯ ಭುಜ ಹಿಡಿದು ಎಬ್ಬಿಸಿ, "ಓ ರಾಜನೇ, ಈಗತಾನೇ ನನ್ನ ಅಮ್ಮ



ನಿನಗೆ ಅಭಯ ಕೊಟ್ಟಳು ? ಇನ್ನೂ ಭಯದಿಂದ ನಡುಗುವೆ ಏತಕ್ಕೆ ? ನನ್ನ ತಾಯಿಯ ಮಾತನ್ನು ನಡೆಸುವೆನೆಂದು ನಾನೂ ಪ್ರತಿಜ್ಞೆ ಮಾಡಿ ಹೇಳುತ್ತೇನೆ '' ಎಂದನು.

" ಅಯ್ಯೋ ! ಆಂಜನೇಯಾ ! ಏನೆಂದು ಹೇಳಲೀ ? ರಾಮಚಂದ್ರನು ನನ್ನನ್ನು ಕಾರಣವಿಲ್ಲದೆ ಕೊಲ್ಲುವೆನೆಂದು ಹೇಳಿ ಕಳುಹಿಸಿದ್ದಾನೆ. ಇದರಲ್ಲಿ ನನ್ನ ತಪ್ಪೇನೂ ಇಲ್ಲ. ಸಮಯ ಸಂದರ್ಭ ವಿಶ್ವಾಮಿತ್ರನಿಗೆ ಗೊತ್ತಾಗಲಿಲ್ಲ" ಎಂದು ಎಲ್ಲಾ ಸಂಗತಿಯನ್ನೂ ಹೇಳಿದನು ಯಯಾತಿ.

ಹನುಮಂತನು ಎಲ್ಲವನ್ನೂ ನಿಶ್ಚಲನಾಗಿದ್ದು ಕೇಳಿದನು. ಅಂಜನಾದೇವಿ ದೊಡ್ಡ ಚಿಂತೆಯಿಂದ, " ಎಂತಹ ತಪ್ಪಾಗಿ ಹೋಯಿತು ! ನಾನು ದುಡುಕಿ ಅಭಯ ಕೊಟ್ಟುಬಿಟ್ಟೆನಲ್ಲ! ಈಗೇನು ದಾರಿ ?'' ಎಂದು ಚಿಂತಿಸತೊಡಗಿದಳು. ಹನುಮಂತನು ತಾಯಿಯೊಂದಿಗೆ, " ಅಮ್ಮಾ, ಒಂದೇ ದಾರಿ. ಇನ್ನು ಚಿಂತಿಸಿ ಉಪಯೋಗವಿಲ್ಲ. ವಿಶ್ವಾಮಿತ್ರನ ದುಡುಕಿನಾಜ್ಞೆಯಿಂದಲೇ ನೀನು ದುಡುಕಿ ಮಾತು ಕೊಟ್ಟಿರುವೆ. ಅದು ಹಾಗೆಯೇ. ಆರ್ತರನ್ನು ರಕ್ಷಿಸುವುದಕ್ಕಿಂತ ದೊಡ್ಡ ಧರ್ಮ ಇಲ್ಲವಷ್ಟೆ? ನಾನು ಜೀವದಲ್ಲಿರುವಾಗ ಈ ಯಯಾತಿಯ ಪ್ರಾಣಕ್ಕೆ ಯಾವ ಭಯವೂ ಇಲ್ಲ. ಆದುದಾಗಲಿ ! '' ಎಂದು ಹೇಳಿದನು.

ಯಯಾತಿಗೆ ಹನುಮಂತನು ಅಭಯಪ್ರದಾನ ಮಾಡಿದ ಸಂಗತಿ ಎಲ್ಲರಿಗೂ ತಿಳಿಯಿತು. ಅಯೋಧ್ಯೆಗೂ ಹೋಗಿ ಸೇರಿತು. ರಾಮನ ಕಿವಿಗೂ ಈ ಸುದ್ದಿ ಮುಟ್ಟಿತು. ಸೀತೆಗೂ ತಿಳಿಯಿತು. ಯಾರಿಗೂ ಏನೂ ತೋರಲಿಲ್ಲ.

ಸೀತಾದೇವಿ ಅಂತಃಪುರದಿಂದ ಹೊರಗೆ ಬರುತ್ತಿರುವಾಗ, ಯಶೋಧರೆ ಇಬ್ಬರು ಮಕ್ಕಳನ್ನು ಕರೆದುಕೊಂಡು ತನ್ನ ಬಳಿಗೆ ಬರುವುದನ್ನು ನೋಡಿ ನಿಂತಳು. ಯಶೋಧರೆ ಸೀತೆಯನ್ನು ನೋಡಿ, " ಅಮ್ಮಾ, ರಕ್ಷಿಸು. ಭಿಕ್ಷೆ ಕೊಡಿಸು. ನನಗೆ ಪತಿ ಭಿಕ್ಷೆ ಕೊಡಿಸಮ್ಮಾ ! " ಎಂದು ಕಣ್ಣೀರಿಳಿಸುತ್ತ ಆರ್ತಳಾಗಿ ಬೇಡಿದಳು.

ಸೀತೆ ಅವಳನ್ನು ನೋಡಿ, '' ಧೈರ್ಯವಾಗಿರಮ್ಮಾ. ನಿನ್ನ ಗಂಡ ಅಂಜನಾಶ್ರಮದಲ್ಲಿ ಹನುಮಂತನ ಹತ್ತಿರ ಕ್ಷೇಮವಾಗಿರುವನೆಂದು ಗೊತ್ತಾಗಿದೆ. ಅವನಿಗೆ ಇನ್ನು ಯಾವ ಭಯವೂ ಇಲ್ಲವೆಂದು ನಂಬು. ನೀನೂ ನಿನ್ನ ಮಕ್ಕಳೂ ಇಲ್ಲಿಯೇ ನನ್ನ ಜತೆಯಲ್ಲಿದ್ದುಬಿಡಿರಿ '' ಎಂದು ಹೇಳಿ, ಅಂತಃಪುರದಲ್ಲಿ ಅವರಿಗೆ ಸಕಲ ಮರ್ಯಾದೆಗಳೊಂದಿಗೆ ಇರಲು ಏರ್ಪಾಡು ಮಾಡಿಸಿದಳು. ಆ ಮಕ್ಕಳಿಬ್ಬರಿಗೂ ಕ್ಷಣ ಮಾತ್ರದಲ್ಲಿ ಸೀತೆಯೊಂದಿಗೆ ತುಂಬಾ ಸಲಿಗೆಯುಂಟಾಯಿತು. ಅಂತಹ ಮಕ್ಕಳು ತನಗೂ ಇದ್ದರೆ ಒಳ್ಳೆಯದಿತ್ತೆಂದು ಸೀತೆಯ ಮನಸ್ಸಿನೊಳಗೊಂದು ಸಂತಾನವಾಂಛೆಯೂ ಅಂಕುರಿಸಿತು.

41-4

ರಾಮನು ಧನುರ್ಬಾಣಗಳನ್ನು ಧರಿಸಿ ಯಯಾತಿಯನ್ನು ವಧಿಸಲಿಕ್ಕಾಗಿ ಪಾದಚಾರಿಯಾಗಿಯೇ ಹೊರಟನು. ಅವನ ಹಿಂದೆ ಮೂವರು ತಮ್ಮಂದಿರೂ, ಮಂತ್ರಿ ಪರಿವಾರದವರೂ ಹೊರಟಿದ್ದರು. ರಾಮನ ಹೊರತು ಉಳಿದವರ ಕೈಯಲ್ಲಿ ಯಾವುದೊಂದು ಆಯುಧವೂ ಇರಲಿಲ್ಲ.




ಅಂಜನಾದೇವಿಯ ಆಶ್ರಮದಲ್ಲಿ ರಾಮನನ್ನೇ ಇದಿರು ನೋಡಿಕೊಂಡಿದ್ದ ಹನುಮಂತನು, ರಾಮನು ಬಳಿಗೆ ಬಂದ ಕೂಡಲೇ ಸ್ವಾಗತ ವಚನ ಹೇಳುತ್ತ ಅಂಜಲಿಯಲ್ಲಿದ್ದ ಹೂಗಳನ್ನು ನಮಸ್ಕಾರಪೂರ್ವಕ ರಾಮನ ಪಾದಗಳ ಮೇಲೆ ಚೆಲ್ಲಿ ವೀರವಂದನೆ ಮಾಡಿ ನಿಂತನು.

ಅನಂತರ ಹನುಮಂತನು ರಾಮನ ಪಾದಗಳ ಮುಂದೆ ಮಂಡಿಯಿಟ್ಟು ಕೈ ಮುಗಿದು, "ರಾಮಾ, ಯಯಾತಿಯ ಮೇಲೆ ಅನುಗ್ರಹ ತೋರಿಸು. ಅವನು ನಿರಪರಾಧಿ. ಬಲಹೀನನಾದವನನ್ನು ಸುಮ್ಮನೆ ವಧಿಸುವುದು ನಿನ್ನಂಥವನಿಗೆ ತರವಲ್ಲ, ಅದು ಹತ್ಯಕ್ಕೆ ಸಮಾನವೆಂದು ಲೋಕವು ನಿಂದಿಸಲಾರದೇ ? ಅವನ ಪಕ್ಷವಾಗಿ ನಾನು ಬೇಡಿಕೊಳ್ಳುತ್ತೇನೆ. ದಯಮಾಡಿ ಕ್ಷಮಿಸು. ಕಾಪಾಡು !" ಎಂದು ಹೇಳಿದನು.

ರಾಮನು ಕೋಪದಿಂದ, "ಓಹೋ ! ನನಗೇ ಬುದ್ಧಿ ಹೇಳುವಷ್ಟರಮಟ್ಟಿಗೆ ಬಂದೆಯೇನು ?" ಎಂದು ಹನುಮಂತನನ್ನು ಪಾದದಿಂದ ಒದೆದನು. ರಾಮನ ಪಾದದ ಸ್ಪರ್ಶದಿಂದ ಹನುಮಂತನು ಪರವಶನಾಗಿ, "ಆಹಾ ! ಯಾವ ಪಾದವು ತಾಗಿದ ಕೂಡಲೇ ಬಂಡೆಗಲ್ಲಿಗೆ ಶಾಪವಿಮೋಚನೆಯಾಗಿ, ಅಹಲ್ಯೆಗೆ ಪವಿತ್ರತೆ ಬಂದಿತೋ, ಅಂತಹ ನಿನ್ನ ಪಾದ ಸ್ಪರ್ಶದಿಂದ ನನ್ನ ಶರೀರ ಧನ್ಯತೆ ಪಡೆಯಿತು. ಇಂತಹ ಧನ್ಯತೆ ಈವರೆಗೂ ಸಿಕ್ಕಿರಲಿಲ್ಲ. ಇದನ್ನು ಒದಗಿಸಿದ ಯಯಾತಿ ದೀರ್ಘಾಯುವಾಗಿರಲಿ ! ನನ್ನ ಶರೀರಕ್ಕೆ ಈಗ ಅಪೂರ್ವ ಶಕ್ತಿ ಬರುವುದನ್ನು ನೋಡುತ್ತಿದ್ದೇನೆ" ಎಂದನು. ಅವನು ಹೇಳಿದ ಮಾತಿನಿಂದ ರಾಮನು ಇನ್ನಷ್ಟು ಸಿಟ್ಟಿಗೆದ್ದು, "ಎಲವೋ ವಾನರಾ ! ಇಂತಹ ಹೊಗಳಿಕೆಯ ಮಾತುಗಳನ್ನು ಕಟ್ಟಿಟ್ಟು ಯಯಾತಿಯನ್ನು ಹೊರಗೆ ಬಿಡು. ವೀರನಂತೆ ನನ್ನೊಂದಿಗೆ ದ್ವಂದ್ವಕ್ಕೆ ಬರಲಿ. ಗುರುವಾಜ್ಞೆಯನ್ನು ಪಾಲಿಸಬೇಕೆಂದೇ ಬಂದವನು ನಾನು ! ಬರಿಗೆ ಸರಿ. ನನ್ನನ್ನು ತಡೆಯುವ ಸಾಹಸ ಮಾಡಬೇಡ." ಎಂದನು.

"ರಾಮಾ, ನಿನ್ನ ಗುರುವಿನ ಆಜ್ಞೆ ಎಷ್ಟು ಅನ್ಯಾಯವೆಂಬುದನ್ನು ತಿಳಿದುಕೊಳ್ಳದೆ, ಒಬ್ಬ ಸಾಧುವನ್ನು ಕೊಲ್ಲಲು ಇಲ್ಲಿಗೆ ಬಂದಿರುವೆಯಲ್ಲಾ ? ನನ್ನ ತಾಯಿಯ ಮಾತನ್ನು ಕಾಪಾಡಲಿಕ್ಕಾಗಿ ಯಯಾತಿಗೆ ರಕ್ಷೆಯಾಗಿ ನಾನು ನಿಂತಿದ್ದೇನೆ. ನನ್ನನ್ನು ಕೊಂದು ಆಮೇಲೆ ನೀನು ಬಂದ ಕೆಲಸ ನೋಡಿಕೋ" ಎಂದು ಹನುಮಂತನು ಗಂಭೀರವಾಗಿ ಎದ್ದು ನಿಂತನು. ಇದ್ದಕ್ಕಿದ್ದ ಹಾಗೆ ಹನುಮಂತನ ಶರೀರವು ಬೆಳೆಯ



ತೊಡಗಿತು. ಜಗಜಗಿಸುವ ಪ್ರಕಾಶವನ್ನು ಚಿಮ್ಮ ತೊಡಗಿತು ಅವನ ಶರೀರ.

ಅದನ್ನು ನೋಡಿ ರಾಮನು, "ಓಹೋ! ಇಷ್ಟರ ಮಟ್ಟಿನವನಾದೆಯಾ? ಏನೋ ಒಬ್ಬ ವಾನರನೆಂದು ಕೊಂಡನೇ ಹೊರತು, ನನ್ನನ್ನು ಇದಿರಿಸಿ ನಿಲ್ಲುವಂತಹ ವೀರನಾಗುವೆ ಎಂದು ಭಾವಿಸಲಿಲ್ಲ" ಎಂದು ಅವ ಹೇಳನ ಮಾಡಿದನು.

"ರಾಮಾ! ಅದೆಲ್ಲಾ ನಿನ್ನ ದಿವ್ಯ ಪಾದದ ಮಹಿಮೆಯೇ ಎಂದು ಈಗತಾನೇ ಹೇಳಿದೆನಲ್ಲ?" ಎಂದನು ಹನುಮಂತ.

ರಾಮನು ಧನುಸ್ಸನ್ನೆತ್ತಿ ಬಾಣವನ್ನು ಸಂಧಿಸಿದನು. ಹನುಮಂತನು ಬೃಹದಾಕಾರನಾಗಿ ನಿಂತು ತನ್ನ ಬಾಲವನ್ನು ಗಿರಗಿರನೆ ತಿರುಗಿಸತೊಡಗಿದನು. ರಾಮನು ಪ್ರಯೋಗಿಸಿದ ಅಸ್ತ್ರಗಳೆಲ್ಲವನ್ನೂ ಹನುಮಂತನು ತನ್ನ ಬಾಲದ ರಭಸದಲ್ಲೇ ತಡೆದು ಅವೆಲ್ಲಾ ಅಡ್ಡಡ್ಡ ತಪ್ಪಿ ಹೋಗಿ ಬೀಳುವಂತೆ ಮಾಡುತ್ತಿದ್ದನು.


ಆ ಸಮಯದಲ್ಲಿ ವಿಶ್ವಾಮಿತ್ರನು ದೊಡ್ಡ ದೊಡ್ಡ ಪದಾಂಗಗಳನ್ನಿಡುತ್ತ ಅಲ್ಲಿಗೇ ಬರುತ್ತಿದ್ದನು. ಯಯಾತಿಯನ್ನು ಕೊಲ್ಲುವ ಬದಲು ಹನುಮಂತನನ್ನು ಕೊಲ್ಲುತ್ತಾನೆಯೋ ರಾಮ?

ರಾಮನು ಪ್ರಯೋಗಿಸಿದ ಒಂದೊಂದು ಅಸ್ತ್ರಕ್ಕೂ ಹನುಮಂತನು ಶರೀರವನ್ನು ಬೆಳೆಸುತ್ತ, ವಿಶ್ವರೂಪನಾಗುತ್ತಿದ್ದನು. ರಾಮನು ಹನುಮಂತನ ಕಂಠಕ್ಕೆ ಬಾಣದ ಗುರಿಯನ್ನು ಹಿಡಿದು, ನಡುನೆತ್ತಿಯಲ್ಲಿರುವ ಆಕಾಶಕ್ಕೆ ಗುರಿಹಿಡಿಯುವ ಸ್ಥಿತಿಗೇ ಬಂದಿತು. ಆಗ ಹನುಮಂತನು ತಟ್ಟನೆ ವೀರಾಸನ ಹಾಕಿ ಕುಳಿತು, "ರಾಮಾ, ನಿನಗೆ ಕುತ್ತಿಗೆ ನೋವು ಬಂದರೆ ಸಹಿಸಲಾರೆ. ಈಗ ನಿನ್ನ ಗುರಿಗೆ ಸರಿಯಾಗಿ ಕೊರಳಿದೆ ನೋಡು" ಎಂದನು.

ರಾಮನು ಒಮ್ಮೆಗೇ ಮಹೋಗ್ರನಾಗಿ, "ಎಲೋ ಗರ್ವಿಷ್ಠ ಹನುಮಾ! ಇದೇ ಕೊನೆಯ ಬಾಣ! ನಿನ್ನ ಎದೆಗೇ ಗುರಿಯಿಟ್ಟು ಪ್ರಯೋಗಿಸುತ್ತೇನೆ! ಇದರಿಂದ ನಿನ್ನದೂ ನನ್ನದೂ ಕೆಲಸ ಏಕಕಾಲದಲ್ಲಿ ಮುಗಿಯುತ್ತದೆ." ಎನ್ನುತ್ತಾ ಅರ್ಧ ಚಂದ್ರಾಕೃತಿಯ ರಾಮಬಾಣವನ್ನು ತೆಗೆದು ಬಿಲ್ಲಿಗೆ ಸಂಧಿಸಿದನು.

ಅಷ್ಟರಲ್ಲಿ ವಿಶ್ವಾಮಿತ್ರನು ಓಡೋಡಿ ಅಲ್ಲಿಗೆ ಬಂದು "ರಾಮಾ! ಯುದ್ಧ ನಿಲ್ಲಿಸು! ಹನುಮಂತನೊಂದಿಗೆ ಪ್ರಸನ್ನನಾಗು! ಯಯಾತಿ ನಿನ್ನ ದಾಸನ ತಾಯಿಯಾದ ಅಬಲೆಯ ಮುಂದೆ ಶರಣಾಗತನಾದಾಗಲೇ ಸತ್ತಹಾಗಾದನು! ನನ್ನ ಕೋಪವೂ ದುಡುಕಿಗೆ ಕಾರಣವಾಯಿತೆಂದು ತೋರುತ್ತದೆ. ಅವನ ಅಪರಾಧವು ಕ್ಷಮಿಸ ತಕ್ಕಂತಹುದೇ! ಸಾಕು ನಿಲ್ಲಿಸು!" ಎಂದನು.

ರಾಮನು ತಲೆಯಾಡಿಸುತ್ತಾ, "ಸಾಧ್ಯವಿಲ್ಲ ಗುರುದೇವಾ! ನಾನು ಹೂಡಿದ ಅಸ್ತ್ರ ಹಾಗೇ ನಿಂತಿದೆ. ಅದು ಪ್ರಯೋಗವಾಗಲೇ ಬೇಕು. ತಡೆಯಬೇಡಿ!" ಎಂದನು.



"ಹನುಮಾ! ಎಚ್ಚರ! ವೃಥಾ ಸಾಯಬೇಡ. ಈಗಲಾದರೂ ನಿನ್ನ ಅಹಂಕಾರವನ್ನು ಬಿಟ್ಟು ಯಯಾತಿಯನ್ನು ನನಗೆ ಕೊಡು. ನಿಜವಾದ ರಾಮನ ಬಂಟನೆಂದು ಹೆಸರುಪಡೆ!" ಎಂದನು ರಾಮ ಬಿಲ್ಲಿನ ನಾಣನ್ನು ಎಳೆಯುತ್ತ.

ಹನುಮಂತನು ಸ್ಥಿರಚಿತ್ತದಿಂದ, "ಆಗಲೂ ಈಗಲೂ ನಾನು ರಾಮನ ಬಂಟನೇ. ಶರಣಾಗತನನ್ನು ಕಾಪಾಡದೆ ಅರ್ಧದಲ್ಲಿ ಬಿಟ್ಟುಬಿಡುವವನು ನಿನ್ನ ಬಂಟನಾಗಿರಲು ಸಾಧ್ಯವಿಲ್ಲ. ಅದು ನಿನಗೇ ಅವಮಾನ. ಬೇಗನೇ ನಿನ್ನ ಬಾಣವನ್ನು ಬಿಡು. ಹೃದಯಪೂರ್ವಕವಾಗಿ ನಿನ್ನ ಬಾಣವನ್ನು ಸ್ವಾಗತಿಸುತ್ತೇನೆ!" ಎಂದು ತನ್ನ ಎದೆಯನ್ನು ಎರಡು ಕೈಗಳಿಂದ ಒತ್ತಿ ಸೀಳಿ ಅಸ್ತ್ರದ ಗುರಿಗೆ ನೇರಾಗಿ ಒಡ್ಡಿ ಹಿಡಿದನು. ರಾಮನು ಕೈಬಿಟ್ಟ ಬಾಣವು ಅವನ ಗುಂಡಿಗೆಯೊಳಗೆ ಹೊಕ್ಕು ಅದೃಶ್ಯವಾಯಿತು. ಅದೇ ಹೊತ್ತಿಗೆ ಹನುಮಂತನ ಗುಂಡಿಗೆ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಾ ಅದರೊಳಗೆ ರಾಮನ ಪ್ರತಿರೂಪವು ಎಲ್ಲರಿಗೂ ಗೋಚರಿಸಿತು. ಈ ಅದ್ಭುತವನ್ನು ನೋಡಿದವರು ನಿಶ್ಚೇಷ್ಟಿತರಾದರು.

ರಾಮನು ಧನುಸ್ಸನ್ನು ಕೆಳಗಿಳಿಸಿ, "ಹನುಮಾ! ನೀನು ಅಜೇಯನಪ್ಪಾ, ನಾನೇ ಸೋತುಹೋದೆನು" ಎಂದನು. ವಿಶ್ವಾಮಿತ್ರನು ಕೂಡಲೇ "ಇಲ್ಲ ರಾಮಾ! ನಿನ್ನೊಂದಿಗೇ ನೀನು ಹೋರಾಡಿದೆ. ಇದರಲ್ಲಿ ಜಯಾಪಜಯದ ಮಾತೇ ಇಲ್ಲ" ಎಂದನು.

"ನಿಜ ನಿಜ!" ಎಂದು ಆಕಾಶದಲ್ಲೆಲ್ಲಾ ಅಶರೀರವಾಣಿ ಮೊಳಗಿತು.

ಆಗ ಹನುಮಂತನು ಗುಂಡಿಗೆಯನ್ನು ಬಿಡಿಸಿ ಹಿಡಿದ ತನ್ನ ಕೈಗಳನ್ನು ಬಿಟ್ಟ ಕೂಡಲೇ ಗುಂಡಿಗೆ ಯಥಾಪ್ರಕಾರ ಮುಚ್ಚಿಕೊಂಡಿತು. "ರಾಮಾ! ಇದರಲ್ಲಿ ಜಯಾಪಜಯಗಳು ಯಾರದೂ ಅಲ್ಲ. ನಿನ್ನ ಅಸ್ತ್ರವನ್ನು ನನ್ನ ಹೃದಯದಲ್ಲಿರುವ ನೀನೇ ಸ್ವೀಕರಿಸಿದೆ. ಅದು ನಿನ್ನಲ್ಲೇ ಲೀನವಾಯಿತು. ಇದರಲ್ಲಿ ನನ್ನ ಪ್ರತಾಪ ಏನೂ ಇಲ್ಲ" ಎಂದನು ಹನುಮಂತ ತಲೆಬಾಗಿ ನಮಸ್ಕರಿಸುತ್ತ.

ವಿಶ್ವಾಮಿತ್ರನು ಹನುಮಂತನ ಬಳಿಗೆ ಹೋಗಿ ಬೆನ್ನು ತಟ್ಟುತ್ತ, "ಹನುಮಂತಾ, ಶರಣಾಗತ ರಕ್ಷಣೆಯಲ್ಲಿ ನೀನು ರಾಮನಂತಹನೊಂದಿಗೆ ಎದೆಯೊಡ್ಡಿ ಪ್ರತಿಜ್ಞಾಪಾಲನೆಯನ್ನು ನೆರವೇರಿಸಿ ಈಗ ನಿಜವಾದ ವೀರನಾದೆ. ವೀರಹನುಮಾನ್ ಎಂಬ ಸಾರ್ಥಕನಾಮ ನಿನ್ನದಾಯಿತು" ಎಂದು ಮುಕ್ತಕಂಠದಿಂದ ಹೊಗಳಿದನು.

ಅನಂತರ ಹನುಮಂತನು ಸೀತಾರಾಮರಿಗೆ ನಮಸ್ಕಾರ ಮಾಡಿ, ಗಂಧಮಾದನ ಪರ್ವತಕ್ಕೆ ಹೋಗಿ ಅಲ್ಲಿ ತಪಸ್ಸು ಮಾಡಲು ಕುಳಿತನು.



41-8



April 1978

ವೀರಹನುಮಾನ್

ಅಂಜನಾದೇವಿ ತನ್ನ ಮನೆಗೆ ಬಂದವರಿಗೆಲ್ಲಾ ಘನವಾಗಿ ಅತಿಥಿ ಸತ್ಕಾರ ಮಾಡಿದಳು. ಅವಳು ನೀಡಿದ ಔತಣವನ್ನುಂಡು ಎಲ್ಲರೂ ಅಯೋಧ್ಯಾಪುರಿಗೆ ಹಿಂದಿರುಗಿದರು.

ದಾರಿಯಲ್ಲಿ ಸೀತೆ ತನ್ನೊಂದಿಗಿದ್ದ ಯಶೋಧರೆಯೊಂದಿಗೆ, "ಎಲ್ಲಾ ಸಮಸ್ಯೆ ಹೇಗೆ ಬಗೆಹರಿಯಿತು ನೋಡಿದೆಯಾ? ನಾನು ಮೊದಲೇ ನಿನಗೆ ಹೇಳಿದೆ, ನಿನ್ನ ಗಂಡನಿಗೆ ಯಾವ ಭಯವೂ ಇಲ್ಲವೆಂದು. ಕಡೆಗೆ ನಮ್ಮ ಹನುಮಂತನಿಗೆ ಶರಣಾಗತಿ ಹೊಂದಿ ಚರಿತಾರ್ಥನಾದನು." ಎಂದಳು ಆನಂದದಿಂದ.

ಯಶೋಧರೆ ಕೃತಜ್ಞತೆಯಿಂದ ಸೀತೆಯನ್ನು ನೋಡುತ್ತ, "ಅದಕ್ಕೆಲ್ಲವೂ ಮೂಲ ನೀವು ಸೀತಾರಾಮರ ಅನುಗ್ರಹವೇ ಅಲ್ಲವೇನು? ಆಹಾ! ಎಂತಹ ದಿವ್ಯ ದೃಶ್ಯ ನೋಡಿದೆ! ಹನುಮಂತನ ಹೃದಯದಲ್ಲಿ ರಾಮನೊಂದಿಗೆ ನೀವು ಕೂಡಾ ನಮಗೆಲ್ಲಾ ಕಾಣಿಸಿದಿರಿ!" ಎಂದಳು. "ಹೌದು ಹೌದು ಸೀತಮ್ಮಾ, ನಾವೂ ನೋಡಿದೆವು. ಅದೆಲ್ಲಾ ಬಹಳ ಚೆನ್ನಾಗಿತ್ತು!" ಎಂದು ಹೇಳುತ್ತ ಚಂದ್ರಾಂಗದ ಚಂದ್ರಮುಖಿಯರೂ ಆನಂದೋತ್ಸಾಹದಿಂದ ಚಪ್ಪಾಳೆ ತಟ್ಟಿದರು.


ಯಶೋಧರೆ "ಹುಶ್" ಎಂದು ಆ ಮಕ್ಕಳನ್ನು ತಡೆದು, ತನ್ನ ಮಕ್ಕಳನ್ನು ಮಮತೆಯಿಂದ ನೋಡುವ ಸೀತೆಯನ್ನು ನೋಡಿ, "ಅಮ್ಮಾ, ಬೇಗದಲ್ಲೇ ನೀವು ಸಂತಾನವತಿಯಾಗುವಿರಿ. ನಿಮ್ಮ ಮುಖದಲ್ಲಿ ಮಾತೃಕಳೆ ಮಿನುಗುತ್ತಾ ಇದೆ" ಎಂದಳು.

ಸೀತೆ ನಾಚಿಕೆಯಿಂದ ಕೆಂಪಗಾಗಿ ಮುಗುಳು ನಗುತ್ತ ಯಶೋಧರೆಯೊಂದಿಗೆ, "ನೀನು ವಯಸ್ಸಿನಲ್ಲಿ ಚಿಕ್ಕವಳಂತೆ ಕಂಡರೂ ಇಂತಹ ರತ್ನಗಳನ್ನು ಪಡೆದಿರುವ ನೀನು ನನಗಿಂತಲೂ ಹೆಚ್ಚಿನವಳಮ್ಮ. ಅದೃಷ್ಟವಂತೆ ನೀನು. ನಿನ್ನ ಮಾತುಗಳನ್ನು ಆಶೀರ್ವಾದದಂತೆ ಭಾವಿಸುತ್ತೇನೆ." ಎಂದಳು.

ಈ ವಿಧವಾಗಿ ಪಲ್ಲಕಿಯಲ್ಲಿ ಇಷ್ಟಾಗೋಷ್ಠಿ ನಡೆಯಿಸಿಕೊಂಡು ಅಯೋಧ್ಯೆಗೆ ತಲಪಿದರು. ಯಯಾತಿ ಕೆಲವುದಿನ ರಾಮನ ಅತಿಥಿಯಾಗಿ

೪೨. ಅಶ್ವಮೇಧಯಾಗ

42-1



ಸಕುಟುಂಬದೊಂದಿಗೆ ಅಲ್ಲಿಯೇ ಇದ್ದನು. ಅವನು ಹಾಗೆ ಅಲ್ಲಿರಲು ಸೀತೆಯ ಕೋರಿಕೆಯೇ ಮುಖ್ಯ ಕಾರಣವಾಗಿತ್ತು. ಅವರು ಇದ್ದಷ್ಟು ದಿನಗಳವರೆಗೆ ಸೀತೆ ಯಶೋಧರೆಯೊಂದಿಗೆ ಉತ್ಸಾಹದಿಂದ ಮಾತುಕತೆಯಾಡುತ್ತ, ಅವಳ ಮಕ್ಕಳೊಂದಿಗೆ ಆಟ ಪಾಟಗಳಲ್ಲಿ ಹೊತ್ತು ಕಳೆಯುತ್ತ ಸಂತೋಷವನ್ನು ಅನುಭವಿಸುತ್ತಿದ್ದಳು.

ಕೆಲವು ದಿನಗಳ ಮೇಲೆ ಯಯಾತಿ ಸೀತಾರಾಮರ ಅಪ್ಪಣೆ ಪಡೆದು, ತನ್ನ ಹೆಂಡತಿ ಮಕ್ಕಳೊಂದಿಗೆ ತನ್ನ ರಾಜ್ಯಕ್ಕೆ ಹೊರಟುಹೋದನು.

ಅನಂತರ ಒಂದು ಹುಣ್ಣಿಮೆಯ ದಿನ ಸಾಯಂಕಾಲದ ಹೊತ್ತಿನಲ್ಲಿ ರಾಮನು ಸೀತೆಯೊಂದಿಗೆ ಅಂತಃಪುರದ ಉದ್ಯಾನದಲ್ಲಿ ವಿಹರಿಸಿಕೊಂಡಿದ್ದನು. ಸೂರ್ಯನು ಮುಳುಗಿ ಚಂದ್ರೋದಯವಾಗಲು ತೊಡಗಿತು. ರಾಮನು ಸೀತೆಯೊಂದಿಗೆ "ಜಾನಕೀ, ಅತ್ತನೋಡು !" ಎಂದು ಚಂದ್ರನನ್ನು ತೋರಿಸಿದನು. —ಸೀತೆ ನೋಡುತ್ತ "ಪೂರ್ವದಿಶೆಯೆಂಬ ಕೌಸಲ್ಯಾದೇವಿಗೆ ರಾಮಚಂದ್ರನೆಂಬ ಪುತ್ರನು ಉದಯಿಸುತ್ತಿದ್ದಾನೆ" ಎಂದಳು.

ಕೂಡಲೇ ರಾಮನು, "ಅದು ಹಳೇ ಕತೆ. ಈಗ ಪೂರ್ವದಿಶೆಯೆಂಬ ಸೀತಾದೇವಿಗೂ ಅಂತಹ ಚಂದ್ರೋದಯವೇ ಆಗುತ್ತದೆ. ಇದು ಮೂಡಣ ದಿಕ್ಕು ನನ್ನ ಕಿವಿಯಲ್ಲಿ ಹೇಳುವ ಜೋತಿಷ್ಯ" ಎಂದು ಮುಗುಳು ನಕ್ಕನು.

"ಆ ಚಂದ್ರನು ಈ ರಾಮಚಂದ್ರನ ಹಾಗೆಯೇ ಇರುತ್ತಾನೆಂತಲೂ ಹೇಳುತ್ತದೆ ಅಲ್ಲವೇ ?" ಅಂದಳು ಸೀತೆ.

"ಊಹುಂ. ಆ ಚಂದ್ರನು ಜಾನಕೀದೇವಿಯ ಹೋಲಿಕೆಯಲ್ಲೇ ಇರುತ್ತಾನೆಂದು ಹೇಳುತ್ತದೆ" ಎಂದನು ರಾಮ.

ಆಮೇಲೆ ಇಬ್ಬರೂ ಒಬ್ಬರನೊಬ್ಬರು ನೋಡಿ ಆನಂದವಾಗಿ ನಗಾಡಿಕೊಂಡರು. ಅವರು ಕುಳಿತುಕೊಂಡಿದ್ದ ಚಂದ್ರಶಿಲಾವೇದಿಕೆಯ ಬಳಿಯಲ್ಲಿದ್ದ ಅಂದವಾದ ಚಿಕ್ಕ ಕೊಳದಲ್ಲಿ ಎರಡು ಕುಮುದ ಕುಸುಮಗಳು ಜೋಡಿಯಾಗಿ ಅರಳಿಕೊಂಡಿದ್ದುವು. ಅವುಗಳನ್ನು ಎಷ್ಟು ನೋಡಿದರೂ ತಣಿವೆ ತೀರದವಳಂತೆ ಸೀತೆ, ಅವುಗಳನ್ನೇ ತಿರುತಿರುಗಿ ನೋಡುತ್ತಾ ರಾಮನ ಜತೆಯಲ್ಲಿ ಅಂತಃಪುರಕ್ಕೆ ಹೋದಳು.

ಸ್ವಲ್ಪ ರಾತ್ರಿ ಕಳೆದ ಮೇಲೆ ಸೀತೆ ಒಂದುಸಾರಿ ಉಪ್ಪರಿಗೆಯಲ್ಲಿ ಹೊರಗೆ ಬಂದು, ಉದ್ಯಾನವನದ ಕೊಳದಕಡೆಗೆ ದೃಷ್ಟಿ ಹಾಯಿಸಿದಳು. ಆ ಕೊಳದ ಜತೆ ಕುಮುದಗಳು ಬೆಳುದಿಂಗಳಲ್ಲಿ ಜಗಜಗನೆ ಹೊಳೆಯುತ್ತಿದ್ದುವು. ರಾಮನು ಬಂದು ಕರೆಯುವವರೆಗೂ ಅವಳು ಅಲ್ಲಿಂದ ಕದಲಲಿಲ್ಲ.

* * *

ಹನುಮಂತನು ಗಂಧಮಾದನ ಪರ್ವತದ ಮೇಲೆ ಜಪತಪ ಧ್ಯಾನಗಳಿಂದ ದಿನಗಳನ್ನು ಕಳೆಯುತ್ತಿರಲು

ಎಷ್ಟುಕಾಲ ಉರುಳಿತೆಂಬ ಪರಿವೆಯಿಲ್ಲದೆ ಅನೇಕ ವರ್ಷಗಳನ್ನು ಕಳೆದುಬಿಟ್ಟನು. ಹೃದಯದಲ್ಲಿ ಸೀತಾ ರಾಮರನ್ನಿರಿಸಿ ಕೊಂಡವನಿಗೆ ಗಂಧಮಾದನ ಪರ್ವತವು ಅಯೋಧ್ಯೆಯಂತಾಗಿದ್ದರೆ ಆಶ್ಚರ್ಯ ವೇನಿಲ್ಲ. ಆಗ ಅಯೋಧ್ಯೆಯಿಂದ ಮುಖ್ಯನಾದವ ನೊಬ್ಬ ಹನುಮಂತನಬಳಿಗೆ ಬಂದನು. ಅವನು ರಾಮನ ಅಂತರಂಗಿಕನೂ, ವಯೋವೃದ್ಧನೂ ಆದ ಭದ್ರನೆಂಬವನೇ. ರಾಮನ ಅಜ್ಞನಂತಹವನು. ರಾಮನ ಅಭಿಪ್ರಾಯದಂತೆ ಅವನು ಹನುಮಂತ ನನ್ನು ಕರೆಯಲು ಬಂದಿದ್ದನು.


"ರಾಮನು ನಿನ್ನನ್ನು ಬರಲಿಕ್ಕೆ ಹೇಳಿದ್ದಾನೆ" ಎಂದು ಭದ್ರನು ಹೇಳಿದುದನ್ನು ಕೇಳಿ ಹನುಮಂತನು ಭದ್ರನ ಮುಖವನ್ನು ನೋಡಿದನು. ಭದ್ರನು ಬಹಳ ಚಿಂತೆಯಲ್ಲಿರುವಂತೆ ಕಂಡಿತು. "ಏನು ನಡೆಯಿತು ಭದ್ರಯ್ಯಾ? ನಿನ್ನಂಥವನನ್ನು ರಾಮನು ಕಳುಹಿಸಿದ ನೆಂದರೆ ಏನೋ ವಿಶೇಷವಿರಬೇಕಷ್ಟೆ?" ಎಂದು ಹನುಮಂತನು ಪ್ರಶ್ನಿಸಿದನು.

ಭದ್ರನು ಬಿಸಿಯಾದೊಂದು ನಿಟ್ಟುಸಿರುಬಿಟ್ಟು, "ಆಗಿಹೋಯಿತು! ಎಲ್ಲಾ ಮುಗಿದುಹೋಯಿ ತಪ್ಪಾ, ಹನುಮಂತಾ!" ಎಂದನು.

"ಏನು ಹೇಳುವೆ? ವಿವರವಾಗಿ ಹೇಳು" ಎಂದ ಹನುಮಂತ. "ಸಂಕ್ಷೇಪವಾಗಿ ಹೇಳುತ್ತೇನೆ. ವಿವರ ವಾಗಿ ಹೇಳಲಿಕ್ಕೆ ಏನೂ ಇಲ್ಲ." ಎಂದು ಭದ್ರನು ಅಲ್ಲಿ ನಡೆದ ಸಮಾಚಾರಗಳನ್ನೆಲ್ಲಾ ಹೇಳಿದನು.

ಅದೇನೆಂದರೆ, ಒಂದು ದಿನ ಋಷಿಗಳ ಗುಂಪೊಂದು ರಾಮನಬಳಿಗೆ ಬಂದಿತು. ಅವರೊಂದಿಗೆ ಬ್ರಾಹ್ಮಣರ ಗುಂಪು ಸಹಾ ಸೇರಿತ್ತು.


ಶಂಬೂಕನೆಂಬ ಶೂದ್ರನೊಬ್ಬ ವೇದಾಧ್ಯಯನ ಮಾಡಿ ತಪಸ್ಸಿನಲ್ಲಿರುವ ಕಾರಣದಿಂದ ಧರ್ಮಕ್ಕೆ ಹಾನಿಯಾಯಿತೆಂದೂ, ಆದರಿಂದ ತಮ್ಮ ಹುಡುಗ ನೊಬ್ಬ ಅಕಾಲಮರಣಕ್ಕೆ ತುತ್ತಾದನೆಂದೂ, ಕೂಡಲೇ



ಆ ಶಂಬೂಕನನ್ನು ವಧಿಸಬೇಕೆಂದೂ ಅವರು ರಾಮನಿಗೆ ಆಜ್ಞಾಪಿಸುವ ಧೋರಣೆಯಲ್ಲಿ ಹೇಳಿದರು.

ಎಲ್ಲಾ ವರ್ಗದ ಜನರನ್ನೂ ಸಂತೃಪ್ತಿಪಡಿಸುತ್ತ ರಾಜ್ಯವಾಳಬೇಕೆಂದು ದೀಕ್ಷೆ ಹಿಡಿದವನಾದ ರಾಮನು, ಆ ಕೂಡಲೇ ಶಂಬೂಕನ ಕಡೆಗೆ ಹೋದನು. ಸಾಧು ಜೀವನ ನಡೆಸುತ್ತ ತಲೆಕೆಳಗಾಗಿ ತಪಸ್ಸಿನಲ್ಲಿ ಮಗ್ನ ನಾಗಿದ್ದ ಶಂಬೂಕನನ್ನು ಖಡ್ಗದ ಒಂದೇಟಿಗೇ ಕಡಿದು ಹಾಕಿದನು. ಆಗ ಶಂಬೂಕನ ಹೆಂಡತಿ ರಾಮನನ್ನು ನೋಡಿ, "ಓ ಮಹಾರಾಜನೇ, ನಿನಗೆ ಏನೋ ಅನರ್ಥವು ಕಾದಿರುವುದೆಂಬುದಕ್ಕೆ ಸೂಚನೆಯಾಗಿ ಈ ಕೃತ್ಯ ನಡೆಸಿರುವೆ. ಯಾವುದಕ್ಕೂ ಎಚ್ಚರಿಕೆ ಯಿಂದಿರಯ್ಯಾ!" ಎಂದು ಹೇಳಿ ಅಗ್ನಿಪ್ರವೇಶ ಮಾಡಿ ಪ್ರಾಣಬಿಟ್ಟಳು.

ಈ ಘಟನೆ ನಡೆದ ಕೆಲವು ದಿನಗಳ ಮೇಲೆ ಒಂದು ದಿನ ರಾತ್ರಿ ರಾಮನು ಭದ್ರನನ್ನು ಕರೆದು ಕೊಂಡು ವೇಷ ಬದಲಾಯಿಸಿಕೊಂಡು ಗಸ್ತುತಿರು



ಗುತ್ತಾ ಹೊರಟನು. ಇಬ್ಬರೂ ಅಯೋಧ್ಯೆಯ ಕೊನೆ ಭಾಗದಲ್ಲಿರುವ ಅಗಸರಕೇರಿಯ ಬಳಿಗೆ ತಲಪಿದರು. ಅಲ್ಲಿ ಒಂದು ಮನೆಯ ಹತ್ತಿರ ಗಂಡ ಹೆಂಡಿರೊಳಗೆ ಏನೋ ಜಗಳ ನಡೆಯುತ್ತಿದ್ದಿತು. ಇಬ್ಬರೂ ಕೇಳುತ್ತಾ ನಿಂತರು.

ಎಲ್ಲಿಗೋ ಹೋಗಿ ಕೆಲವಾರು ದಿನಗಳ ಮೇಲೆ ಹಿಂದಿರುಗಿ ಬಂದ ಹೆಂಡತಿಯನ್ನು ಒಬ್ಬ ಅಗಸನು ಹೊಡೆದುಬಡೆದು ಆಟಾಕಾಯಿಸುತ್ತಿದ್ದನು. ಹೆಂಡತಿ ಮನೆಬಾಗಿಲು ಮೆಟ್ಟದಂತೆ ಬೈಯುತ್ತ ತಡೆಯುತ್ತಿದ್ದನು. ಅವನ ಹೆಂಡತಿ ರಕ್ತ ಒಸರುವ ಬೆನ್ನನ್ನು ಇತರರಿಗೆ ತೋರಿಸುತ್ತ, ಬಿಕ್ಕಿಬಿಕ್ಕಿ ಅಳುತ್ತ, "ಆ ಸೀತಮ್ಮನನ್ನು ರಾಮನಂಥಾ ಮಾರಾಜನೇ ಮನೆಯೊಳಗೆ ತಂದು ಕೊಂಡಾಟವಾಡಿರುವಾಗ ನೀನೊಬ್ಬ ಅವನಿಗಿಂತ ಹೆಚ್ಚಿನವನಾ?..." ಎಂದಳು. ಕುತ್ತಿಗೆ ಮಟಕುಡಿದು ಓಲಾಡುತ್ತಿದ್ದ ಅಗಸ ಕೆಂಗಣ್ಣು ತಿರುಗಿಸುತ್ತ, ಕತ್ತೆಯ ಕೂಗಿನಂತೆ, "ಅವನೊಬ್ಬ ಮಾರಾಜ, ಹೇಳುವವರಾರು ಕೇಳುವವರಾರು? ಅಷ್ಟುಕಾಲ ಲಂಕೇಲಿ ಯಾವನೊಂದಿಗೋ ಇದ್ದವಳನ್ನು ತಂದು ನಾಚಿಕೆಯಿಲ್ಲದೆ ಕುಲುಕುವ ಹಾಗೆ, ನಾನೊಬ್ಬ ಹುಚ್ಚುರಾಮಾ ಅಂತ ಮಾಡಿದಿಯೇನೇ?" ಎಂದು ಎಲ್ಲರ ಮುಂದೂ ಕೂಗಿದನು.

ಇಂತಹ ಕರ್ಣಕರ್ಕಶ ಮಾತುಗಳನ್ನು ಕೇಳಿದ ಪರಿಣಾಮವಾಗಿ ರಾಮನು ಸೀತೆಯನ್ನು ಅರಣ್ಯಕ್ಕೆ ಒಯ್ದು ಬಿಟ್ಟುಬರುವಂತೆ ಲಕ್ಷ್ಮಣನಿಗೆ ಆಜ್ಞೆಮಾಡಿದನು. ಆಗ ಸೀತೆ ತುಂಬು ಗರ್ಭಿಣಿ. ಆದರ ಮುಂಚಿನ ದಿನವೇ ಸೀತೆ ರಾಮನೊಂದಿಗೆ ತನಗೆ ಋಷ್ಯಾಶ್ರಮಗಳಿಗೆ ಹೋಗಿ ಮುನಿಪತ್ನಿಯರೊಂದಿಗೆ ಮಾತುಕತೆಯಾಡಬೇಕೆಂದು ಕೋರಿಕೊಂಡಿದ್ದಳು. ಆ ನೆವನದಿಂದಲೇ ಲಕ್ಷ್ಮಣನು ಸೀತೆಯನ್ನು ರಥದಲ್ಲಿ ಕೂಡಿಸಿ ಅರಣ್ಯದಲ್ಲಿ ಬಿಟ್ಟು ಹಿಂದಿರುಗಿಬಿಟ್ಟನು.

ಸೀತೆಯನ್ನು ತ್ಯಜಿಸಿದ ರಾಮನು ಸಂತೋಷವನ್ನೆಲ್ಲಾ ಕಳೆದು, ನಿದ್ರಾಹಾರಗಳನ್ನು ಬಿಟ್ಟು ಕುಂದಿ ಕೊರಗಿಹೋಗುವುದನ್ನು ಭದ್ರನಿಂದ ನೋಡಲಾಗಲಿಲ್ಲ. ಭದ್ರನು ಚಿಕ್ಕಂದಿನಿಂದಲೇ ರಾಮನನ್ನು ಎತ್ತಿ, ತಿರುಗಿಸಿ, ಲಾಲಿಸಿ, ಆಡಿಸಿ ಬೆಳೆಸಿದವನು. ಮಗುವಾಗಿದ್ದ ರಾಮನು ಆಕಾಶದ ಚಂದ್ರನನ್ನು ನೋಡಿ ತಾ ತಾ ಎಂದು ಹಟಮಾಡಿದಾಗ ಭದ್ರನು ಕನ್ನಡಿಯನ್ನು ತಂದು ಚಂದ್ರನನ್ನು ತೋರಿಸಿದನು. ಆದರಲ್ಲಿ ತನ್ನ ಮುಖವನ್ನೂ ಚಂದ್ರನನ್ನೂ ನೋಡಿ ರಾಮನು ಮುದ್ದುಮುದ್ದಾಗಿ "ರಾಮ-ಚಂದ್ರ" ಎಂದು ತೊದಲ್ನುಡಿಯಲು, ಭದ್ರನು ರಾಮನ ಪಕ್ಕದಲ್ಲಿ ತನ್ನ ಮುಖವನ್ನಿಟ್ಟು "ಈಗಲೋ?" ಎಂದನು. "ರಾಮ-ಭದ್ರ" ಎಂದು ಮತ್ತಷ್ಟು ಮುದ್ದಾಗಿ ಹೇಳಿದ ರಾಮ. ಆಗಿನಿಂದಲೂ ರಾಮನಿಗೆ ರಾಮಚಂದ್ರ, ರಾಮಭದ್ರ ಎಂಬ ಹೆಸರುಗಳು ಬಂದಿದ್ದುವು. ರಾಮನೊಂದಿಗೆ ಅಂತಹ ಅನುಬಂಧಗಳಿರುವ ಭದ್ರನಿಗೆ, ಆ ಹುಚ್ಚ ಅಗಸನನ್ನು ಹಿಡಿದು

42-4


ಚಿತ್ರವಧೆ ಮಾಡಬೇಕೆಂದು ತೋರಿ ಅಗಸರಕೇರಿಗೆ ಹೋಗಿ ಹುಡುಕತೊಡಗಿದನು.

"ಅವನು ಅಂಥಾ ಕೆಟ್ಟಮಾತು ಆಡಿದ್ದಕ್ಕೆ ಅಲ್ಲಿದ್ದವರೆಲ್ಲಾ ಅವನನ್ನು ಹಿಡಿದು ಒಗೆದು ಹಿಂಡಿಹಾಕಲು ನೋಡಿದರು. ಯಾರಿಗೂ ಸಿಕ್ಕದೆ ಅವನು ಓಡಿಹೋದ. ಅವನ ಹೆಂಡತಿಯೂ ಕಾಣುವುದಿಲ್ಲ" ಎಂದು ಅಲ್ಲಿದ್ದವರು ಭದ್ರನೊಂದಿಗೆ ಹೇಳಿದರು.

ಲಕ್ಷ್ಮಣನು ಸೀತೆಯನ್ನು ಕಾಡಿನೊಳಗೆ ಅನಾಥೆಯನ್ನಾಗಿ ಮಾಡಿ ಹಿಂದಿರುಗಿದ ಮೇಲೆ, ಆವಳು ದೊಡ್ಡ ಬಂಡೆಯ ಮೇಲಿನಿಂದ ನದೀಪ್ರವಾಹಕ್ಕೆ ಹಾರಿಕೊಳ್ಳಲು ಪ್ರಯತ್ನಿಸುವಾಗ, ವಾಲ್ಮೀಕಿ ಮಹಾಮುನಿ ಅವಳನ್ನು ತಡೆದು ತನ್ನಾಶ್ರಮಕ್ಕೆ ಕರೆದುಕೊಂಡು ಹೋದನು. ಅಲ್ಲಿ ಸೀತೆ ಇಬ್ಬರು ಗಂಡು ಮಕ್ಕಳನ್ನು ಹಡೆದಳು. ಅವಳಿಜವಳಿಗಳಾಗಿ ಹುಟ್ಟಿದ ಆ ಮಕ್ಕಳಿಗೆ, ವಾಲ್ಮೀಕಿ ಕುಶ ಮತ್ತು ಲವ ಎಂದು ಹೆಸರಿಟ್ಟು, ಸಕಲ ವಿದ್ಯಾಬುದ್ಧಿಗಳನ್ನೂ ಕಲಿಸಿದನು. ವಿಶೇಷವಾಗಿ ತಾನು ರಚಿಸಿದ ರಾಮಾಯಣ ಕಥೆಯನ್ನು ಗಾನಮಾಡುವ ಪದ್ಧತಿಯನ್ನೂ ಅವರಿಗೆ ಕಲಿಸಿದನು. ಆ ಹುಡುಗರಿಗೆ ಬಿಲ್ಲು ವಿದ್ಯೆಗಳನ್ನು ಕಲಿಸಿಕೊಟ್ಟವಳು ಸೀತೆಯೇ.

ಒಂದು ದಿನ ಕುಶಲವರು ರಾಮಾಯಣದಲ್ಲಿ ಬರುವ ರಾಮನು ಹೇಗಿರುವನೋ, ತಮ್ಮ ತಾಯಿಯ ಹೆಸರೇ ಇರುವ ರಾಮನ ಹೆಂಡತಿ ಹೇಗಿರುವಳೋ ನೋಡಬೇಕೆಂದು, ರಾಮ ಕಥೆಯನ್ನು ಹಾಡುತ್ತಾ ಅಯೋಧ್ಯೆಗೆ ಹೋದರು.

ರಾಮನು ಸೀತೆಯ ಧ್ಯಾನದಲ್ಲೇ ಕೃಶನಾಗುವುದನ್ನು ನೋಡಿ, ಅದನ್ನು ಸ್ವಲ್ಪವಾದರೂ ಉಪಶಮನವಾಗುವಂತೆ ಮಾಡುವುದು ಹೇಗೆಂದು ವಸಿಷ್ಠ ಮೊದಲಾದ ಹಿರಿಯರು ಆಲೋಚನೆ ಮಾಡಿದರು. ರಘು ವಂಶದ ರಾಜಪರಂಪರೆಯವರು ಮಾಡಿದಂತೆ, ಲೋಕಕಲ್ಯಾಣದ ನಿಮಿತ್ತವಾಗಿ ಅಶ್ವಮೇಧ ಯಾಗ



ವನ್ನು ಮಾಡುವುದು ಒಳ್ಳೆಯದೆಂದು ನಿರ್ಣಯಿಸಿ ರಾಮನಿಗೂ ಆದೇಶ ಮಾಡಿದರು. ಅದಕ್ಕಾಗಿ ಬಂಗಾರದಿಂದ ಮಾಡಿದ ಸೀತೆಯ ವಿಗ್ರಹವನ್ನು ಪಕ್ಕದಲ್ಲಿಟ್ಟುಕೊಳ್ಳುವುದು ಶಾಸ್ತ್ರಸಮ್ಮತವಾದುದೆಂದೂ ಹೇಳಿದರು. ರಾಮನು ಗುರುಹಿರಿಯರ ಆದೇಶದಂತೆ, ಸೀತೆಯ ಸ್ವರ್ಣವಿಗ್ರಹ ಮಾಡಿಸಿ ಪಕ್ಕದಲ್ಲಿಟ್ಟುಕೊಂಡು ಅಶ್ವಮೇಧ ಯಾಗವನ್ನು ಪ್ರಾರಂಭಿಸಿದನು. ಅದೇ ದಿನ ಮುನಿಬಾಲಕರೆಂದು ಹೇಳಿಕೊಳ್ಳುತ್ತ ಕುಶಲವರು ರಾಮಾಯಣವನ್ನು ಗಾನ ಮಾಡಿಕೊಂಡು ನಗರದ ಬೀದಿಗಳಲ್ಲಿ ತಿರುಗಾಡುತ್ತಿದ್ದರು. ಲಕ್ಷ್ಮಣನು ಅವರನ್ನು ನೋಡಿ, ಅವರು ಯಾರಾಗಿರಬಹುದೆಂಬುದನ್ನು ಊಹಿಸಿ ರಾಜಮಂದಿರಕ್ಕೆ ಕರೆದುಕೊಂಡು ಹೋದನು.

ರಾಜಪ್ರಾಸಾದಕ್ಕೆ ಹೋದ ಕುಶಲವರು ರಾಮಾಯಣದಲ್ಲಿಯ ಸೀತೆ ಅಗ್ನಿ ಪ್ರವೇಶ ಮಾಡಿದ ಘಟ್ಟವನ್ನು ಕಣ್ಣಿಗೆ ಕಟ್ಟುವ ಹಾಗೆ ಹಾಡುವಾಗ ಕೇಳುವವ

42-5




ರೆಲ್ಲಾ ಚಿತ್ರದ ಬೊಂಬೆಗಳಂತಾದರು. ಅಲ್ಲದೆ ಕೌಸಲ್ಯೆ ಮೊದಲಾದ ಅಂತಃಪುರ ಸ್ತ್ರೀಯರು, ಯಾಗ ಮಾಡಿಸುತ್ತಿದ್ದ ಹಿರಿಯರು, ರಾಜಪರಿವಾರದವರು, ಪುರಪ್ರಮುಖರು ಮೊದಲಾದವರೆಲ್ಲಾ ಕಣ್ಣೀರು ಸುರಿಸುತ್ತಾ, ಸ್ವರ್ಣಸೀತೆಯನ್ನು ನೋಡಿ ಕೈಗಳನ್ನು ಜೋಡಿಸಿ ಕಣ್ಣಿಗೊತ್ತಿಗೊಂಡರು. ರಾಮನು ಕುಶ ಲವರು ಮುನಿಬಾಲಕರೇ ಎಂದುಕೊಂಡು, ತನಗೆ ತಿಳಿಯದಂತೆಯೇ ಅವರನ್ನು ಬರಸೆಳೆದು ಮುದ್ದಾಡಿ ಅನೇಕ ಕಾಣಿಕೆಗಳನ್ನೂ ಚೀನಾಂಬರಗಳನ್ನೂ ಕೊಟ್ಟು ಸತ್ಕರಿಸಿ ಕಳುಹಿಸಿ ಕೊಟ್ಟನು.

ಅಶ್ವಮೇಧ ಯಾಗದ ಪ್ರಾರಂಭ ಕ್ರಿಯೆಗಳೆಲ್ಲಾ ಮುಗಿದ ಮೇಲೆ ರಘುವಂಶದ ಕುರುಹಾದ ಸೂರ್ಯ ಪತಾಕೆಯನ್ನು ಅಳವಡಿಸಿ ಅಲಂಕರಿಸಲ್ಪಟ್ಟ ಯಾಗಾಶ್ವವನ್ನು, ಸ್ವೇಚ್ಛೆಯಾಗಿ ಸ್ವೈರವಿಹಾರಕ್ಕೆ ಬಿಡಲಾಯಿತು. ಆ ಕುದುರೆ ಉತ್ಸಾಹದಿಂದ ಪುಟಿದು ನಾಗಾಲೋಟದಿಂದ ಹೋಗಿ ಹೋಗಿ ನೆಟ್ಟಗೆ ವಾಲ್ಮೀಕಿಯ ಆಶ್ರಮದ ಹತ್ತಿರ ಹೋಯಿತು. ಕುದುರೆಯ ನೊಸಲಿನಲ್ಲಿರುವ ಬಂಗಾರದ ಬಾಸಿಂಗ ದಲ್ಲಿ ಕಾಣುವ ಅಕ್ಷರಗಳನ್ನು ಕುಶಲವರು ಓದಿದರು. ಅದು ಯಾಗಾಶ್ವವೆಂದು ತಿಳಿದು ಕೂಡಲೇ ಅದನ್ನು ಎಳೆದುಕೊಂಡು ಹೋಗಿ ಕಟ್ಟಿಹಾಕಿದರು.

ಕುದುರೆಯನ್ನು ಬಿಡಿಸಿಕೊಳ್ಳಲು ಹೋದ ಭರತ, ಲಕ್ಷ್ಮಣ, ಶತ್ರುಘ್ನರು ಕುಶಲವರೊಂದಿಗೆ ಯುದ್ಧ ಮಾಡಿ ಸೋತು ಮೂರ್ಛೆ ಬಿದ್ದರು. ಈ ಸಮಾಚಾರ ತಿಳಿದು ಸ್ವತಃ ರಾಮನೇ ಹೊರಟು ಬಂದು ಕುಶಲವ ರೊಂದಿಗೆ ಯುದ್ಧ ಮಾಡಿದನು.

ಕುಶಲವರು ತಮ್ಮ ತಾಯಿ "ಮಹಾಸಾಧ್ವಿ ನಿಜವಾದರೆ" ಎಂದು ಪ್ರತಿಜ್ಞೆ ಉಚ್ಚರಿಸಿಕೊಂಡು ಪ್ರಯೋಗಿಸಿದ ಬಾಣಗಳಿಂದ ರಾಮನೂ ಮೂರ್ಛಿತ ನಾಗಿ ಬಿದ್ದನು. ಅದನ್ನು ತಿಳಿದು ಸೀತೆ ಓಡಿ ಬಂದು ರಾಮನ ಪಾದಗಳನ್ನು ಹಿಡಿದು ಉಪಚರಿಸಿ ಅವನಿಗೆ ಎಚ್ಚರಿಕೆ ಬರಿಸಿದಳು. ಆಗ ವಾಲ್ಮೀಕಿ ಮುನಿ ಅಲ್ಲಿಗೆ ಬಂದು, ಸೀತೆ ಪತಿವ್ರತೆ ಎಂದೂ, ಅವಳನ್ನು ಸ್ವೀಕರಿಸಿ ಕರೆದೊಯ್ಯುವುದು ಒಳ್ಳೆಯದೆಂದೂ ರಾಮನಿಗೆ ಹೇಳಿದನು. ಅದಕ್ಕೆ ರಾಮನು, ಆ ವಿಧವಾಗಿ ಸೀತೆ ಶಪಥ ಮಾಡಿ, ಅಯೋಧ್ಯೆಯ ಪೌರರೆಲ್ಲರನ್ನೂ ಮೆಚ್ಚಿಸುವಂತೆ ಮಾಡಿದರೆ ತುಂಬಾ ಒಳ್ಳೆಯದೆಂದು ಪ್ರತ್ಯುತ್ತರ ಹೇಳಿದನು.

ಸೀತೆ ರಾಮನ ಹಿಂದೆ ಅಯೋಧ್ಯೆಗೆ ಬಂದು, ಕುಮಾರರನ್ನು ರಾಮನಿಗೆ ಒಪ್ಪಿಸಿ, "ನನ್ನ ಪವಿತ್ರತೆಗೆ ನಿದರ್ಶನವಾಗಿ ಭೂದೇವಿ ನನ್ನನ್ನು ಸ್ವೀಕರಿಸಲಿ!" ಎಂದಳು. ಮರುಕ್ಷಣದಲ್ಲಿ ಭೂಮಿ ಕಂಪಿಸಿತು. ದಿಕ್ಕುಗಳಲ್ಲಿ ಧೂಳೆದ್ದು ಕತ್ತಲೆ ಕವಿಯಿತು. ಮಿಂಚು ಗಳು ಮಿಂಚಿದುವು. ಸಿಡಿಲುಗಳು ಮೊಳಗಿದುವು. ಅಯೋಧ್ಯೆಯ ಪುರವಾಸಿಗಳು ಮನೆಯೊಳಗಿನಿಂದ ಹೊರಗೆ ಬಂದು ಕೋಲಾಹಲವಾಗಿ ಓಡಾಡುತ್ತ, ಸೀತೆ ಇರುವ ಸ್ಥಳಕ್ಕೆ ಬಂದು ಗುಂಪುಗೂಡಿದರು.



ಆಗ ಸೀತೆ ನಿಂತಿದ್ದ ಸ್ಥಳದಲ್ಲಿ ಭೂಮಿ ಬಾಯಿ ಬಿಟ್ಟಿತು. ಅದರೊಳಗಿನಿಂದ ಮಣಿಮಯವಾದ ಸಿಂಹಾಸನದ ಮೇಲೆ ಮಂಡಿಸಿದ್ದ ಭೂದೇವಿ ಪ್ರತ್ಯಕ್ಷ ಎದ್ದು ಬಂದಳು. ಆ ಸಿಂಹಾಸನವನ್ನು ನಾಗಕಾಂತೆಯರು ಹೊತ್ತುಕೊಂಡಿದ್ದರು. ಭೂದೇವಿ ಸಿಂಹಾಸನದಿಂದಿಳಿದು ತಾಯಿ ಮಗುವನ್ನು ಎತ್ತಿಕೊಳ್ಳುವಂತೆ ಎರಡು ಕೈಗಳಿಂದಲೂ ಸೀತೆಯನ್ನು ಎತ್ತಿಕೊಂಡು, ತನ್ನ ಮಡಿಲ ಮೇಲೆ ಕೂಡಿಸಿಕೊಂಡಳು. ಆ ಕೂಡಲೇ ಭೂಮಿ ಮತ್ತೆ ಕಂಪಿಸಿತು. ಅಯೋಧ್ಯಾ ನಗರವು ಮತ್ತೆ ಓಲಾಡಿತು. ಆದರೆ ಒಂದೇ ಒಂದು ಮನೆಯ ಮಾಡಿನ ಮೂಲೆ ಕೂಡಾ ಕುಸಿಯಲಿಲ್ಲ; ಗೋಡೆಗಳು ಸೀಳಲಿಲ್ಲ. ಸೀತೆಯೊಂದಿಗೆ ಭೂದೇವಿ ಭೂಮಿಯೊಳಗೆ ಹೊರಟುಹೋದಳು. ಭೂಮಿ ಸೀಳಿದ ಗುರುತು ಸಹಾ ಇಲ್ಲದಂತೆ ಮೊದಲಿದ್ದಂತೆ ನಯವಾಗಿ ಮುಚ್ಚಿಕೊಂಡುಹೋಗಿತ್ತು.

ಸ್ತಂಭಿಸಿ ನಿಂತಿದ್ದ ರಾಮನು ಎಚ್ಚರಕ್ಕೆ ಬಂದ ಮೇಲೆ ಭೂಮಿಯನ್ನು ಸೀಳುತ್ತೇನೆಂದು ತನ್ನ ಕೋದಂಡವನ್ನೆತ್ತಿ ಬಾಣವನ್ನು ಸಂಧಿಸಲು ನೋಡಿದನು. ಅಷ್ಟರಲ್ಲಿ ಆಕಾಶದಿಂದ, "ರಾಮಾ! ರಘುವಂಶದ ರಾಜರೆಲ್ಲರೂ ಭೂಮಿಯನ್ನು ತಣ್ಣಗೆ ಪಾಲಿಸಿಕೊಂಡವರಾಗಿರುವಾಗ, ನೀನು ಭೂಮಿಯನ್ನು ಸೀಳುವೆಯಾ? ಕೈಯಾರೆ ಬಾಯಾರೆ ನೀನೇ ಶಪಥ ಮಾಡಿಸಿ ಸೀತೆಯನ್ನು ಅವಳ ತೌರುಮನೆಗೆ ಕಳುಹಿಸಿದೆಯಲ್ಲಾ? ಇನ್ನೇಕೆ ಈ ದುರಾಶೆ?" ಎಂದು ಅಶರೀರವಾಣಿ ಗಂಭೀರ ಧ್ವನಿಯಿಂದ ಮೊಳಗಿತು. ರಾಮನು ಧನುಸ್ಸನ್ನು ಕೆಳಗಿಳಿಸಿದನು.

ಕಡೆಗೆ ರಾಮನು ಕುಶಲವರಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಿ ಸಿಂಹಾಸನದ ಮೇಲೆ ಕೂಡಿಸಿ, ತಾನು ವಿಷಾದವೇ ಮೂರ್ತಿವೆತ್ತವನಂತೆ ಆಗಿಬಿಟ್ಟನು.

"ಹನುಮಂತಾ, ಇದಿಷ್ಟು ಈ ಮಧ್ಯ ಕಾಲದಲ್ಲಿ ಅಯೋಧ್ಯೆಯಲ್ಲಿ ನಡೆದ ಕಥೆ. ಈಗ ಅಶ್ವಮೇಧ ಯಾಗವು ನಡೆಯುತ್ತಾ ಇದೆ. ಯಾಗಾಶ್ವವು ಉತ್ತರದಿಂದ ಪೂರ್ವ ದಿಕ್ಕಿಗೆ ತಿರುಗಿ ಹೋಗುತ್ತಿದೆ. ಭರತ ಲಕ್ಷ್ಮಣ ಶತ್ರುಘ್ನರು ಸೈನ್ಯದೊಂದಿಗೆ ಅದರ ಹಿಂದೆ ಹೋಗುತ್ತಿದ್ದಾರೆ." ಎಂದು ಭದ್ರನು ಹೇಳುವುದನ್ನು ಮುಗಿಸಿ, ನಿಟ್ಟುಸಿರುಬಿಟ್ಟನು.

ಶಿಲಾ ಪ್ರತಿಮೆಯಂತೆ ಕಣ್ಣೀರಿಳಿಸುತ್ತ ಎಲ್ಲವನ್ನೂ ಕೇಳಿದ ಹನುಮಂತನು, ಕಣ್ಣುಗಳನ್ನು ಒತ್ತಿಕೊಂಡು ಎದ್ದು, "ಭದ್ರಾ, ನಾನು ಈಗಲೇ ರಾಮನ ಬಳಿಗೆ ಹೋಗುತ್ತೇನೆ. ನೀನು ಹಿಂದಿನಿಂದ ನಿಧಾನವಾಗಿ ಬಾ" ಎಂದು ಹೇಳಿ, ತನ್ನ ಗದೆಯನ್ನು ಹೆಗಲಿಗೇರಿಸಿಕೊಂಡು ಆಕಾಶಕ್ಕೆ ಉಡ್ಡಾಣ ಮಾಡಿ ಅಯೋಧ್ಯೆಯ ಕಡೆಗೆ ಹೋದನು.





May 1978

ವೀರಹನುಮಾನ್

ಗಂಧಮಾದನದಿಂದ ಅಯೋಧ್ಯೆಗೆ ಹೊರಟ ಹನುಮಂತನು ದಾರಿಯಲ್ಲಿ ವಾಲ್ಮೀಕಿಯ ಆಶ್ರಮದಲ್ಲಿ ಇಳಿದು, ವಾಲ್ಮೀಕಿ ಮುನಿಗೆ ನಮಸ್ಕಾರ ಮಾಡಿ, "ಮಹಾನುಭಾವರೇ, ಅಯೋಧ್ಯೆಯಲ್ಲಿ ನಡೆದ ಘೋರವನ್ನೆಲ್ಲಾ ಕೇಳಿ ತಿಳಿದೆನು. ಸೀತಾರಾಮರಿಗೆ ಹೀಗಾಯಿತೆಂದರೆ ನಂಬುವುದೇ ಕಷ್ಟವಾಗಿದೆ. ಅದೇಕೆ ಹೀಗಾಯಿತು?" ಎಂದುಕೇಳಿದನು.

ಹನುಮಂತನ ಪ್ರಶ್ನೆ ಕೇಳಿ, ವಾಲ್ಮೀಕಿ ಮುಗುಳ್ನಗೆ ಸೂಸಿ, "ಹನುಮಂತಾ, ರಾಜ್ಯಪಾಲನೆ ಮಾಡುವುದೆಂದರೆ ಎಷ್ಟು ಕಠೋರವೋ ? ಶಂಬೂಕನಂತಹ ಪರಮ ಸಾಧುವಾದ ನಿರಪರಾಧಿಗಳು, ಅಧಿಕಾರ ವರ್ಗದವರ ಪ್ರಾಬಲ್ಯದಿಂದ ಹೇಗೆ ಬಲಿಯಾಗುವರೋ ? ಕೇಳಿದೆಯಷ್ಟೆ ? ಅದುಮಾತ್ರವಲ್ಲದೆ ಪಾಪವನ್ನು ಗಂಟುಕಟ್ಟಿ ಕೊಳ್ಳಬೇಕಾಗುವುದೆಂದು ಗೊತ್ತಿದ್ದರೂ, ಮಾಯಾವಿಗಳ ದುಷ್ಟಬುದ್ಧಿಯ ಬಾಯಿಗಳಿಂದ ಹೊರಬೀಳುವ ವಿಷಬೀಜಗಳು ಪಾಮರ ಪ್ರಜೆಗಳಲ್ಲಿ ಹುಟ್ಟಿ ಬೆಳೆಯದಂತೆ ನೋಡಿಕೊಳ್ಳಲು ಎಂತಹ ತ್ಯಾಗಗಳನ್ನು ಮಾಡಬೇಕಾಗಿ ಬರುವುದೋ ತಿಳಿಯಿತಷ್ಟೆ? ಇದೆಲ್ಲಾ ನಿರೂಪಣೆಯಾಗಲಿಕ್ಕಾಗಿಯೇ ಹೀಗೆಲ್ಲಾ ನಡೆಯಿತೆಂದು ಹೇಳಬಹುದೇ ಹೊರತು ಬೇರೆ ಸಮಾಧಾನವೇನಿದೆ ? ಇದು ನಿನ್ನಂತಹ ತಿಳಿದವನಿಗೆ ಅನೂಹ್ಯವಾದುದೇನಲ್ಲ. ಹೆಚ್ಚಿಗೆ ನಾನು ಬಿಡಿಸಿ ಹೇಳಬೇಕೇ ? " ಎಂದನು.

ಹನುಮಂತನು ವಾಲ್ಮೀಕಿಯ ಆಶ್ರಮದಲ್ಲಿ ಸೀತೆ ಇದ್ದ ಕುಟೀರವನ್ನೂ, ಲವಕುಶರು ಮರಗಳ ಕಾಂಡಗಳಲ್ಲಿ ಬಾಣಗಳಿಂದ ಮಾಡಿದ ಗುರುತುಗಳನ್ನೂ ಮನದಣಿಯುವಂತೆ ನೋಡಿದನು. ಸೀತೆ ಸಂಚರಿಸಿದ ನೆಲವನ್ನು ಕಣ್ಣಿಗೆ ಅದ್ದಿಕೊಂಡು ಆ ಮೇಲೆ ವಾಲ್ಮೀಕಿ ಮುನಿಯ ಅಪ್ಪಣೆ ಪಡೆದು, ಅಯೋಧ್ಯೆಯ ಕಡೆಗೆ ಹಾರಿದನು.

ಹನುಮಂತನು ಆಕಾಶಮಾರ್ಗದಲ್ಲಿ ಅಯೋಧ್ಯೆಯನ್ನು ತಲಪಿ ರಾಜಭವನದ ಮುಂದೆ ಇದ್ದ ಉದ್ಯಾನವನದಲ್ಲಿ ಇಳಿದನು. ಆ ವಿಶಾಲವಾದ ಉದ್ಯಾನ ಪ್ರದೇಶದಲ್ಲಿ ಕುಶಲವರು ಬಿಲ್ಲು ವಿದ್ಯೆಗಳಲ್ಲಿ ವಿನೋದಿ



ಸುತ್ತಿದ್ದರು. ಅವರಿಬ್ಬರ ನಡುವೆ ಬಾಣಗಳಿಂದಲೇ ಆದ ಒಂದು ಸ್ತಂಭವು ಭವನದಷ್ಟೆತ್ತರಕ್ಕೆ ಎದ್ದಿತ್ತು. ಅಲ್ಲಿ ಬಂದಿಳಿದ ಹನುಮಂತನನ್ನು ನೋಡಿ ಲವ ಕುಶರು, ಆಶ್ಚರ್ಯ ಪಟ್ಟರು. ಆಮೇಲೆ ತಮ್ಮೊಳಗೆ ಏನೋ ಕಣ್ಣು ಸನ್ನೆ ಮಾಡಿಕೊಂಡು, ಇಬ್ಬರೂ ಸುಮ್ಮನೆ ನಿಂತ ಹನುಮಂತನ ಸುತ್ತಲೂ ಬಾಣಗಳಿಂದಲೇ ಒಂದು ಬೇಲಿಯನ್ನು ಕಟ್ಟಿದರು.

ಅನಂತರ ಸಮೀಪ ಬಂದು, "ಮಾಯಾವಿಯೇ ? ಯಾರು ನೀನು? ನಿಜ ಹೇಳು !" ಎಂದು ಲವನು ಗದರಿಸಿ ಕೇಳಿದನು.

ಲವನಲ್ಲಿ ಸೀತೆಯ ಹೋಲಿಕೆ ಹೆಚ್ಚಾಗಿದ್ದಿತು. ಕುಶನಲ್ಲಿ ರಾಮನ ಹೋಲಿಕೆ ಕಾಣುತ್ತಿತ್ತು. ಅವರಿಬ್ಬರನ್ನು ನೋಡಿದಾಗ ಹನುಮಂತನಿಗೆ ಸೀತಾರಾಮರನ್ನೇ ನೋಡಿದಂತಾಯಿತು. ಕಣ್ಣಿಗೆ ಹಬ್ಬವಾಗುವಂತೆ ಅವರನ್ನು ನೋಡುತ್ತ, "ನಾನು ಹನುಮಂತ. ರಾಮನನ್ನು ನೋಡಲು, ಬಂದೆನು" ಎಂದನು.

"ನಿನ್ನ ಮಾತು ನಂಬಲಾರೆವು. ಗದೆ ಗಿದೆ ಹಿಡಿದುಕೊಂಡು ಹನುಮಂತನ ವೇಷ ಹಾಕಿಕೊಂಡುಬಂದ ಯಾವನೋ ಮಾಯಾವಿ ನೀನು. ಮಾರೀಚನು ನಿನಗೇನಾಗಬೇಕು ?" ಎನ್ನುತ್ತಾ ಲವನು ಬಿಲ್ಲನ್ನೆತ್ತಿ ಬಾಣಹೂಡಿದನು.

"ದುಡುಕ ಬಾರದೋ ಲವಾ" ಎಂದು ಕುಶನು ಲವನನ್ನು ಶಾಂತಪಡಿಸುತ್ತ, ರಾಮನಂತೆ ಶಾಂತ ಸ್ವರದಿಂದ, "ನೀನು ಹನುಮಂತನೆಂದು ಹೇಳಿದರೆ ಸಾಲದು. ನಿರೂಪಿಸಿದ ಹೊರತು ನಿನ್ನನ್ನು ಕದಲಲು ಬಿಡಲಾರೆವು. ಹನುಮಂತನಿಗಿರುವ ಶಕ್ತಿಸಾಮರ್ಥ್ಯ ನಿನಗಿದೆಯೇನು ?" ಎಂದನು.

"ಹೌದು. ಹನುಮಂತನ ಪ್ರತಾಪಗಳನ್ನು ತೋರಿಸು. ಮೊದಲು ನಿನ್ನ ಪ್ರಬಲ ವಿಶ್ವರೂಪ ತೋರಿಸು." ಎಂದನು ಲವ.

ಹನುಮಂತನು ದೊಡ್ಡದಾಗಿ ಬೆಳೆದು ಅವರಿಬ್ಬರನ್ನೂ ಆಲಿಂಗನ ಮಾಡಿಕೊಂಡನು. ಅವರನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಆಕಾಶಕ್ಕೆ ಹಾರಿ ಸರಯೂ ನದಿಯ ಮೇಲಿಂದಾಗಿ ಅಯೋಧ್ಯಾ ನಗರದ ಸುತ್ತಲೂ ತಿರುಗಾಡಿದನು. ಆಕಾಶದಷ್ಟೆತ್ತರ ಬೆಳೆದು ಸೀತೆಗೆ ತೋರಿಸಿದ ವಿಶ್ವರೂಪವನ್ನು ತೋರಿಸಿದನು. ಬಾಲವನ್ನು ಬೆಳೆಸಿ ಗಿರಿಗಿರಿ ತಿರುಗಿಸಿ ಸುತ್ತುಸುತ್ತಿ ಕೋಟೆ ಕಟ್ಟಿ ತೋರಿಸಿದನು. ಲವಕುಶರನ್ನು ಭುಜಗಳ ಮೇಲೇರಿಸಿಕೊಂಡು, "ಮೈರಾವಣ ಸಂಹಾರದಲ್ಲಿ ರಾಮಲಕ್ಷ್ಮಣರನ್ನು ಹೀಗೆಯೇ ಹೊತ್ತುಕೊಂಡೆನು" ಎಂದು ಕೋಟೆಯ ಗೋಡೆಗಳ ಮೇಲೆ ಸುತ್ತಲೂ ತಿರುಗಾಡಿದನು. ಲವಕುಶರಿಗಾದ ಆನಂದಕ್ಕೆ ಮೇರೆ ಇರಲಿಲ್ಲ.


ಲವಕುಶರು ಹನುಮಂತನಿಗೆ ನಮಸ್ಕಾರ ಮಾಡಿ, "ಹನುಮಂತಾ, ನಿನ್ನ ಪ್ರತಾಪಗಳನ್ನು ಕಣ್ಣು ತುಂಬಾ ನೋಡಬೇಕೆಂದೇ ನಿನ್ನನ್ನು ಆಟ ಆಡಿಸಿದೆವು. ನಮ್ಮನ್ನು ಕ್ಷಮಿಸು" ಎಂದರು.

"ನಿಮ್ಮ ಕೋರಿಕೆ ತೀರಿಸಬೇಕೆಂತಲೇ ನಾನೂ ನಿಮ್ಮನ್ನು ಆಡಿಸಿದೆ ಗೊತ್ತಾ?" ಎಂದ ಹನುಮಂತನೂ ಮುಗುಳುನಗುತ್ತ.

ಲವಕುಶರು ಅವನ ಇಬ್ಬದಿಗಳಲ್ಲಿ ಕೈಗಳನ್ನು ಹಿಡಿದುಕೊಂಡು ರಾಮನಬಳಿಗೆ ಕರೆದುಕೊಂಡು ಹೋಗಿ. "ಅಪ್ಪಾ, ನೋಡಿರಿ, ನಿಮ್ಮ ಹನುಮಂತ ಬಂದಿದ್ದಾನೆ!" ಎಂದರು.

ರಾಮನು ಹನುಮಂತನನ್ನು ನೋಡಿದ ಕೂಡಲೇ ದುಃಖಾತಿಶಯದಿಂದ ಮಾತಾಡಲಾರದವನಾಗಿ ಕಣ್ಣೀರು ತುಂಬಿಕೊಂಡನು. ಹನುಮಂತನು ರಾಮನ ಮುಂದೆ ಮೊಣಕಾಲೂರಿ ನಮಸ್ಕರಿಸಿ, "ರಾಮಾ, ನೀನು ಕೂಡಾ, ಪಾಮರರಂತೆ ದುಃಖಕ್ಕೆ ವಶನಾದರೆ ಹೇಗೆ? ರಾಜ್ಯಪಾಲನೆ ಸುಖಭೋಗಗಳ ಹೂವಿನ ಹಾಸಿಗೆಯಲ್ಲವೆಂತಲೂ, ಎಂತಹ ಕೆಲಸವನ್ನಾದರೂ ಮಾಡಿಸುವಂತಹುದೆಂತಲೂ, ಎಂತಹ ತ್ಯಾಗವನ್ನಾದರೂ ಮಾಡಬೇಕಾಗಿ ಬರುವುದೆಂತಲೂ ಗೊತ್ತಿರುವುದಲ್ಲವೆ? ಮುಂದಿನ ಯುಗಗಳಲ್ಲಿ ಕೂಡಾ ರಾಮರಾಜ್ಯವೆಂದು ಆದರ್ಶವಾಗಿ ಹೇಳಿಕೊಳ್ಳಲು ಹೀಗೆಲ್ಲಾ ನಡೆಯುವುದೆಂದು ಜ್ಞಾನಿಗಳು ಹೇಳುತ್ತಾರೆ. ನಿನ್ನಿಂದ ನಡೆಯುವ ಎಲ್ಲಾ ಕಾರ್ಯಗಳಲ್ಲಿಯೂ ಏನೋ ಒಂದು ಪರಮಾರ್ಥವಿದ್ದೇ ಇರುತ್ತದೆ. ಅರ್ಥ ಮಾಡಿಕೊಳ್ಳಬಲ್ಲವರಿಗೆ ಅದೆಲ್ಲಾ ಗೊತ್ತಾಗುತ್ತದೆ. ನೀನು ಲೀಲಾಮಾನುಷನಾಗಿರುವ ಅವತಾರ ಪುರುಷನಾದುದರಿಂದ ಸುಖದುಃಖಗಳಲ್ಲಿ ನಿರ್ಲಿಪ್ತನಾಗಿರಬೇಕಾದವನು. ನಿನ್ನ ಈ ದುಃಖವೂ ಆ ಲೀಲೆಯೊಳಗಿನದೇ ಎಂದು ನಾನು ನಂಬುತ್ತೇನೆ. ಇನ್ನು ಸಾಕು." ಎಂದು ಹೇಳಿದನು.

ಆಗ ರಾಮನು ಹನುಮಂತನನ್ನು ನೋಡಿ, "ಹನುಮಾನ್, ನಿನ್ನನ್ನು ನೋಡಿ, ನಿನ್ನ ಮಾತುಗಳನ್ನು ಕೇಳಿ ನನಗೆಷ್ಟೋ ಸಮಾಧಾನವಾಯಿತು. ಸೀತೆ ಇಲ್ಲದ ದುಃಖಕ್ಕೆ ಜತೆಯಾಗಿ, ಈಗ ಕೈಕೊಂಡಿ



ರುವ ಅಶ್ವಮೇಧಯಾಗವು ವಿಫಲವಾದರೆ ನಿನ್ನ ರಾಮನು ದಕ್ಕಲಾರನು. ಯಾಗಾಶ್ವವೀಗ ಮಣಿಪುರದ ಕಡೆಗೆ ಹೋಗುತ್ತಿದೆ ಎಂದು ಗೊತ್ತಾಗಿದೆ. ಅಶ್ವರಕ್ಷಣೆಯ ಭಾರವನ್ನು ನಿನ್ನ ಭುಜಸ್ಕಂಧಗಳ ಮೇಲೂ ಹಾಕುತ್ತೇನೆ. ಅದಕ್ಕೇ ನಿನ್ನನ್ನು ಕರೆಯಿಸಿದೆನು. ಅಶ್ವದ ಬೆಂಗಾವಲಿಗರಾಗಿ ನನ್ನ ಮೂವರು ತಮ್ಮಂದಿರೂ ಹೋಗಿದ್ದಾರೆ. ನೀನೂ ಅವರೊಂದಿಗಿದ್ದರೇನೇ ಎಲ್ಲವೂ ನಿರ್ವಿಘ್ನವಾಗುವುದೆಂದು ನಂಬುತ್ತೇನೆ. ಹೋಗಿ ಅವರನ್ನು ಸೇರು." ಎಂದನು.

ರಾಮನ ಆಜ್ಞೆಯನ್ನು ಸಿರಸಾವಹಿಸಿಕೊಂಡು ಹನುಮಂತನು ಆಕಾಶಮಾರ್ಗದ ಮೇಲೆ ಹಾರಿದನು.

ಗಗನಮಾರ್ಗದಲ್ಲಿ ಹನುಮಂತನು ಹೋಗುತ್ತಿರುವಾಗ, ದಟ್ಟವಾಗಿದ್ದೊಂದು ಅರಣ್ಯದಲ್ಲಿ ಒಬ್ಬಳು ರಾಕ್ಷಸಿಯೂ, ಇನ್ನೊಬ್ಬ ರಾಕ್ಷಸನೂ ವಿಜಯದ ಬೊಬ್ಬೆಗಳನ್ನು ಹಾಕುತ್ತ, ಸುರಾಪಾನದಿಂದ ಮತ್ತರಾಗಿ ಕುಣಿದು ಕುಪ್ಪಳಿಸುವುದನ್ನು ನೋಡಿದನು.



ಹನುಮಂತನಿಗೆ ಏನೋ ಅನುಮಾನವಾಯಿತು. ಅವನು ಸೂಕ್ಷ್ಮರೂಪದಿಂದ ಅವರ ಸಮೀಪಕ್ಕೆ ಹೋಗಿ ಒಂದು ಮರದ ಮೇಲೆ ಹೊಂಚಿ ಕುಳಿತನು. ಅವರು ನೃತ್ಯ ಮಾಡುವುದನ್ನು ನಿಲ್ಲಿಸಿ, ಅದೇ ಮರದ ಕೆಳಗೆ ಸೇರಿ ಮಾತಾಡಲು ತೊಡಗಿದರು. ಹನುಮಂತನು ಕಿವಿಗೊಟ್ಟು ಕೇಳುತ್ತಿದ್ದನು. ಅವರು ನಿರ್ಭೀತಿಯಿಂದ ಗಟ್ಟಿಯಾಗಿ ಮಾತಾಡುತ್ತಿದ್ದರು.

"ಘಾತಕನಾದ ರಾಮನಿಗೆ ಹಾಗೇ ಆಗಬೇಕು. ಕರಾಳಕಂಠಾ! ನನ್ನ ಸಂತೋಷಕ್ಕೆ ಮೇರೆ ಇಲ್ಲದಂತಾಗಿದೆ. ಶತ್ರುಶೇಷವಿರಬಾರದೆಂದು ಸುಮ್ಮನೆ ಹೇಳುತ್ತಾರೆಯೇ? ಅಂಥಾ ಶತ್ರುಶೇಷವಾಗಿ ಉಳಿದ ನಾವಿಬ್ಬರು ನಮ್ಮವರ ಋಣವನ್ನು ಬಹಳ ಚೆನ್ನಾಗಿ ತೀರಿಸಿಬಿಟ್ಟೆವು. ಆಹಾ! ನೀನು ಆಗಸರವನಾಗಿ ಎಷ್ಟು ಮೋಜಾಗಿ ಅರಚಿದೆಯೋ! ರಾಮನ ಬಾಣ ಯಾವ ಮೂಲೆಗೆ!" ಎಂದಳು ಆ ರಾಕ್ಷಸಿ. ಜತೆಗಾರನ ಬೆನ್ನು ಬಡಿಯುತ್ತಾ.

"ನೀನು ಮಾತ್ರ ಏನಂತೆ? ನಿನ್ನ ಕೋಪತಾಪ ಶೋಕಗಳು ಎಷ್ಟು ಚೆನ್ನಾಗಿದ್ದುವು ಗೊತ್ತೇ? ನನ್ನ ಒಯ್ಯಾರಿ ಆಗಸರಸುಂದರಿ ಶೂರ್ಪನಖೀ! ನನಗೆ ತಕ್ಕವಳಾಗಿ ನೀನೊಬ್ಬಳು ಸಿಕ್ಕಿದ್ದು ಎಂಥಾ ನನ್ನ ಪುಣ್ಯ!" ಎಂದು ರಾಕ್ಷಸನು ಅವಳ ಬೆನ್ನನ್ನು ಬಡಿದನು.

ಕರಾಳಕಂಠನು ಶತಕಂಠ ರಾವಣನ ತಮ್ಮ. ಯುದ್ಧದಲ್ಲಿ ಮರಣದಿಂದ ತಪ್ಪಿಸಿಕೊಂಡು ಓಡಿಹೋಗಿ, ತನ್ನ ಅಣ್ಣ ಶತಕಂಠ ರಾವಣನನ್ನು ಕೊಂದ ಸೀತೆಯ ಮೇಲೂ, ರಾಮನ ಮೇಲೂ ಹಗೆ ಸಾಧಿಸಲು ಆಗಸರವನ ರೂಪದಲ್ಲಿ ಅಯೋಧ್ಯೆಗೆ ಬಂದು ಸೇರಿದ್ದನು.

ರಾವಣಾಸುರನ ತಂಗಿ ಶೂರ್ಪನಖಿ ಕೂಡಾ ಬದುಕಿಯೇ ಇದ್ದಳು. ಕಾಕತಾಳೀಯವಾಗಿ ಅವಳು ಕೂಡಾ ಹಗೆ ಸಾಧಿಸಲಿಕ್ಕೇ ಅಗಸರವಳ ರೂಪದಲ್ಲಿ ಅಯೋಧ್ಯೆಗೆ ಬಂದಿದ್ದಳು. ಅವರಿಬ್ಬರೂ ಸಂಧಿಸಿಕೊಂಡ ರೀತಿಕೂಡಾ ವಿಚಿತ್ರವಾಗಿತ್ತು.

ಇಬ್ಬರೂ ಹಸಿವಿನಿಂದ ಯಾವ ಮನುಷ್ಯನನ್ನಾದರೂ ಹಿಡಿದು ತಿನ್ನೋಣವೆಂದು ಊರಹೊರಗೆ ತಿರುಗಾಡುತ್ತ, ಒಬ್ಬರನ್ನೊಬ್ಬರು ನೋಡಿ ಸಮೀಪಿಸಿದರು. ಶೂರ್ಪನಖಿ ಒಯ್ಯಾರದಿಂದ ಕುಲುಕುತ್ತ ದೃಷ್ಟಿ ಕುಣಿಸಿದಳು. ಹಸಿವೆಗೆ ಹೆಣ್ಣಿನ ಮಾಂಸವಾದರೇನಾಯಿತು? ಏನೋ ಒಂದು ತಿನ್ನದೆ ಉಪಾಯವಿಲ್ಲವೆಂದು ಕರಾಳಕಂಠನು ಅವಳ ಹಿಂದೆ ಬಿದ್ದು ಒಂದು ರಹಸ್ಯ ಪ್ರದೇಶಕ್ಕೆ ಹೋದನು. ಅಲ್ಲಿ ಅವನನ್ನು ಮುರಿದು ತಿನ್ನಲು ಸಿದ್ಧಳಾದ ಶೂರ್ಪನಖಿ ರಾಕ್ಷಸಾಕಾರದಲ್ಲಿ ಪ್ರತ್ಯಕ್ಷಳಾದಳು. "ಅರೆ! ನೀನೂ ರಾಕ್ಷಸಿಯೇನೇ?" ಎನ್ನುತ್ತಾ, ಕರಾಳನೂ ರಾಕ್ಷಸನಾಗಿ ನಿಂತನು.

ಹೀಗೆ ಅವರಿಬ್ಬರೂ ಜತೆ ಕುದರಿಸಿಕೊಂಡು, ಅಗಸರ ದಂಪತಿಗಳಾಗಿ, ಕಪಟ ನಾಟಕವಾಡಿ,



ಅಯೋಧ್ಯೆಯಿಂದ ಓಡಿಹೋಗಿ ಅರಣ್ಯ ಸೇರಿದ್ದರು. ಮರದ ಮೇಲಿರುವ ಹನುಮಂತನು ಅವರ ಮಾತನ್ನು ಆಲಿಸಿಕೊಂಡಿದ್ದನು.

ಕರಾಳಕಂಠನು ಶೂರ್ಪನಖಿಯನ್ನು ತಟ್ಟುತ್ತ, "ನನ್ನ ಪುಣ್ಯ ವಿಶೇಷದಿಂದ ನೀನೊಬ್ಬಳು ಸಿಕ್ಕಿದೆ. ಆಗ ಹನುಮಂತ ಅಲ್ಲಿ ಇಲ್ಲದಿದ್ದುದರಿಂದ ಸರಿ ಹೋಯಿತು. ಅವನು ಅಯೋಧ್ಯೆಯಲ್ಲೇ ಇರುತ್ತಿದ್ದರೆ, ನಮ್ಮ ಜಾಡು ಹಿಡಿದು ನಮ್ಮನ್ನು ಅಣ್ಣಂದಿರ ಬಳಿಗೇ ಕಳುಹಿಸುತ್ತಿದ್ದ. ನಮ್ಮ ಅದೃಷ್ಟ ಚೆನ್ನಾಗಿರುವುದರಿಂದಲೇ ಅವನಿಗೆ ಗುಡ್ಡದ ಮೇಲೆ ಕುಳಿತಿರುವ ಬುದ್ಧಿ ಬಂತು." ಎಂದನು.

"ಆ ಹನುಮಂತನನ್ನು ಹೊಗಳಿ ನನ್ನನ್ನು ರೇಗಿಸಬೇಡ. ಅವನನ್ನು ನೆನೆದರೆ ಮಹಾ ಕೋಪ ಬರುತ್ತೆ!" ಎಂದಳು ಶೂರ್ಪನಖಿ.

"ಕೋಪ ಅನ್ನಬೇಡ್ವೇ! ಎದೆ ಹಾರುತ್ತೇ ಅನ್ನು ಭಯದಿಂದ." ಎನ್ನುತ್ತಾ ಕರಾಳಕಂಠ ಹಲ್ಲು ಗಿಂಜಿದ.

"ಭಯ ನಿನಗೆ! ಆ ಬಾಲದ ಭೂತ ನನ್ನ ಬಂಗಾರದ ಮನೆಯನ್ನೇ ಸುಟ್ಟು ಕರಗಿಸಿ ಹಾಕಿದ. ಅವನ ಹೆಸರು ಕೇಳಿದರೆ ನನಗೆ ಭಯಗಿಯ ಏನೂ ಇಲ್ಲ. ಕೆಟ್ಟ ಉರಿ! ಅವನ ಬಾಲ ಕಳಚಿಬೀಳ!" ಎನ್ನುತ್ತಾ ಶೂರ್ಪನಖಿ ತನ್ನ ಬೆನ್ನನ್ನು ತಡವಿಕೊಂಡಳು.


ಅವಳ ಬೆನ್ನಿನಲ್ಲಿ ದೊಡ್ಡದೊಂದು ಸುಟ್ಟ ಮಚ್ಚೆ ಇತ್ತು. ಅದು ಲಂಕಾ ದಹನದ ವೇಳೆಯಲ್ಲಿ ಉರಿಯುವ ತೊಲೆಯೊಂದು ಅವಳ ಬೆನ್ನಿನ ಮೇಲೆ ಬಿದ್ದು ಸುಟ್ಟು ಉಂಟಾದ ಮಚ್ಚೆ.

ಕರಾಳಕಂಠನು ಅವಳ ಮಚ್ಚೆಯನ್ನು ತಡವಿ ನೋಡಿ ಅಣಕಿಸುವವನಂತೆ, "ಈ ಮುದ್ರೆ ಬಿದ್ದುದಕ್ಕಾಗಿ ಉರಿ ಅನ್ನುವಿಯಾ? ಇನ್ನೂ ಚುರು ಚುರು ಉರಿಯುತ್ತದೇನೋ ಪಾಪ! ಮನೆ ಹೋದರೂ ನೆನಪಿಗೆ ಇದೊಂದು ಮಚ್ಚೆಯಾದರೂ ಉಂಟಲ್ಲ ಬಿಡು." ಎಂದನು. ಅವನ ಲೇವಡಿ ಮಾತಿಗೆ ಶೂರ್ಪನಖಿ ಮುಖ ಮುದುಡಿಕೊಂಡು, "ಸಾಕು ಬಿಡು, ನಿನ್ನ ಸಮಾಧಾನದ ಮಾತೋ, ನೀನೋ! ನನ್ನ ಚಿಂತೆ ನಿನಗೆ ಅರ್ಥವಾದರೆತಾನೆ?" ಎಂದು ಕೈಗಂಟಿನಿಂದ ತಿವಿದಳು.

"ಅದಲ್ಲ ಶೂರ್ಪಣೀ! ನನಗೂ ಹನುಮಂತನೆಂದರೆ ಉರಿಯುತ್ತೆ. ರಾವಣನ ಗುಂಪಿನಲ್ಲಿ ಅವನೇ ಮಹಾ ಕೆಟ್ಟವನು!" ಎಂದನು.

"ಹಾಗೆ ಹೇಳು ನನ್ನರಾಜ! ಸುಮ್ಮನೆ ಮಹಾ ವೀರನ ಹಾಗೆಲ್ಲಾ ಬೊಗಳಬೇಡ. ಅವನ ಕಣ್ಣು ತಪ್ಪಿಸಿ ಓಡಿಬಂದ ದೊಡ್ಡ ಹೇಡಿ ನೀನು! ಯುದ್ಧದಲ್ಲಿ ವೀರನಂತೆ ಸಾಯಬಾರದಿತ್ತೇ?" ಎಂದಳು ಶೂರ್ಪನಖಿ.

"ಸತ್ತರೆ ಹಗೆ ತೀರಿಸೋದು ಹೇಗೇ ಅಂತ? ನಿನ್ನಂಥ ಸುಂದರಿ ರಾಕ್ಷಸಿ ಸಿಗುತ್ತಿದ್ದಳೆ? ನಿನಗಾದರೂ ಜತೆ ಸಿಗುತ್ತಿತ್ತೇ? ಆಗುವುದೆಲ್ಲಾ ಒಳ್ಳೇದಕ್ಕೇ ಅಂತ



ಈಗಾದರೂ ಗೊತ್ತಾಯಿತೆ ? " ಎಂದನು. " ಸಾಕು. ಬಿಡು. ಎಲ್ಲಾ ಚಂದಾಯ್ತು. ಇನ್ನು ಎತ್ತಾದರೂ ದೂರ ಹೋಗಿ ಹಾಯಾಗಿರೋಣ, ಏಳು ಬಾ" ಎಂದಳು ಶೂರ್ಪನಖಿ.

"ಇನ್ನೊಂದು ಕೆಲಸ ಮುಗಿಸಿ ಹೋಗಿಬಿಡುವ. ಆಮೇಲೆ ಈ ಕಡೆಗೆ ಮುಖ ತಿರುಗಿಸುವುದೇಬೇಡ. ರಾಮನ ಯಾಗಾಶ್ವವನ್ನು ನಾವು ಹಿಡಿದು ಬಿಡಬೇಕು" ಎಂದ ಕರಾಳಕಂಠ.

"ಭಲೆ ! ಆದರ ಮೇಲೆ ಸವಾರಿ ಮಾಡಿಕೊಂಡು ಹೋಗಬಹುದು" ಎಂದು ಕುಪ್ಪಳಿಸಿದಳು ಶೂರ್ಪನಖಿ.

"ಸವಾರಿಗಲ್ಲವೇ ಹುಚ್ಚು ಮೂತೀ !" ಎಂದು ಕರಾಳಕಂಠನು ಹೇಳುತ್ತಲೇ ಶೂರ್ಪನಖಿ ಅವನ ಕುತ್ತಿಗೆ ಬಳಸಿ, "ಏನು ಕಿರಿಚಿದೆ ? ಇನ್ನೊಮ್ಮೆ ಹಾಗಂದರೆ ಹಿಸುಕಿಬಿಡ್ತೇನೆ ! ನನ್ನ ಉಗುರಿನ ರುಚಿ ಗೊತ್ತಾದೀತು ! ಜಾಗ್ರತೆ ! ನನ್ನ ಮೂಗೂ ಕಿವಿಗಳೂ ಸ್ವಲ್ಪ ಮೊದ್ದು ಕಟ್ಟಿದ್ದರೂ ಚಂದಕ್ಕೇನು ಕಡಿಮೆಯಾಗಿದೆ ? ಲಕ್ಷ್ಮಣನು ಕೊಯ್ಯುವುದಕ್ಕೆ ಮೊದಲು ಗೇಣುದ್ದ ಮೂಗೂ ಮಾರುದ್ದ ಕಿವಿಗಳೂ ಇದ್ದುವು. ಈಗಲೇ ನನ್ನ ಮುಖ ಅಂದವಾಗಿದೆಯೆಂದು ಎಲ್ಲರೂ ಹೇಳುತ್ತಾರೆ ಗೊತ್ತಾ ? ಹೌದು, ಕಾಮಗಾಮಿಗಳಾದ ನಮಗೆ ಕುದುರೆ ಗಿದುರೆ ಏತಕ್ಕೇ ? " ಎಂದಳು.

"ಕೊಂದು ಹಾಕಲಿಕ್ಕೆ !" ಎಂದು ಕರಾಳಕಂಠನು ಹೇಳಿದುದನ್ನು ಕೇಳಿ ಶೂರ್ಪನಖಿ, "ಅಯ್ಯೋ ಪಾಪವೇ ! ಆ ಕುದುರೇ ಮೇಲೆ ನಮಗೇನು ಹಗೆ ?" ಎಂದು ತಿರುಗಿ ಕೇಳಿದಳು.

"ಕುದುರೇ ಮೇಲೆ ಹಗೆಯಿಲ್ಲವೇ ಶೂರ್ಪಣೀ ! ರಾಮನ ಮೇಲೆ ಹಗೆ. ಕುದುರೆ ಕಾಣದೆಹೋದರೆ ರಾಮನ ಯಾಗನಾಶವಾಗುತ್ತದೆ. ಆಗ ಏನಾಗುತ್ತೆ ಗೊತ್ತಾ ಮೊದ್ದು ಮುಂಡೆಯುವಳೇ ? ಸೀತೆ ಇಲ್ಲದೆ ಅರೆ ಜೀವದಲ್ಲಿರುವ ರಾಮ ಪೂರಾ ಸಾಯುತ್ತಾನೆ. ನಿನ್ನ ವೈರದ ಬಿಸಿ ಪೂರ್ತಿ ತಣ್ಣಗಾಗುತ್ತದೆ." ಎಂದ ಕರಾಳಕಂಠ.

"ನಿಜ ನಿಜ ! ಒಳ್ಳೇ ಆಲೋಚನೆ. ಕುದುರೆಯ ತಲೆಯ ಮಾಂಸ ಬಲುರುಚಿಯಾಗಿರುತ್ತೆ. ಆನಂದವಾಗಿ ಹೊಟ್ಟೆಯನ್ನೂ ತುಂಬಿಸಿಕೊಂಡು ಹೋಗಬಹುದು." ಎಂದಳು ಶೂರ್ಪನಖಿ.

"ತಿಂಡಿಪೋತಳು ! ನಡೆನಡೆ !" ಎಂದು ಕರಾಳನು ಮುಂದೆ ಹೊರಟನು. ಆಗ ಹನುಮಂತನು ಮರದ ಕೊಂಬೆಗಳನ್ನು ಅವರ ಮೇಲೆ ಹಾಕಲು, "ಓಹೋ ! ನಮ್ಮ ಮೇಲೆ ಹಿರಿಯರು ಹೂಮಳೆ ಸುರಿಸುತ್ತಾರಲ್ಲಾ !" ಎಂದಳು ಶೂರ್ಪನಖಿ. "ಹೂಮಳೆಯಲ್ಲವೇ, ಇದು ಮರದ ಎಲೆಗಳ ಮಳೆ" ಎಂದ ಕರಾಳ.

ಶೂರ್ಪನಖಿ ಕರಾಳಕಂಠನ ಕೈಯನ್ನು ಹಿಡಿದುಕೊಂಡು ಮುಂದಡಿ ಇಡುವಾಗ, ಹನುಮಂತನು ತನ್ನ

43-6


43-7

ಬಾಲವನ್ನು ಅವರ ದಾರಿಗೆ ಅಡ್ಡವಾಗಿ ಕಳುಹಿಸಿದನು. ಚಲಿಸಿ ಬಂದ ಅದನ್ನು ನೋಡಿ ಇಬ್ಬರೂ ಗಕ್ಕನೆ ನಿಂತರು.

"ಓಹೋಯ್! ಸರ್ಪ! ಮಹಾಸರ್ಪ!" ಎಂದು ಕೂಗಿ ಕರಾಳಕಂಠನು ಹಾರಿಬಿದ್ದನು. ಶೂರ್ಪನಖಿ ದೊಡ್ಡದಾಗಿ ಕಣ್ಣು ತಿರುಗಿಸುತ್ತ, "ಸರ್ಪವಲ್ಲ, ಬಾಲ! ಯಮಪಾಶ! ಓಹೋ! ಹನುಮಂತನ ಬಾಲ!" ಎಂದು ಕೆಟ್ಟದನಿಯಿಂದ ಕಿರಿಚಿದಳು.

"ಸುಮ್ಮನಿರೆ! ಇಲ್ಲೆಲ್ಲಿಯ ಹನುಮಂತನೇ! ನೋಡಿದಲ್ಲೆಲ್ಲಾ ನಿನಗೆ ಹನುಮಂತನದೇ ಭಯ!" ಎಂದ ಕರಾಳಕಂಠ.


"ಅಯ್ಯೋ! ನನಗ್ಗೊತ್ತು! ಲಂಕೆಯನ್ನು ಸುಟ್ಟ ಬಾಲ ಇದೇ! ಇದೇ!" ಎಂದು ಶೂರ್ಪನಖಿ ಆ ಬಾಲದ ಚಲನೆಯನ್ನು ನೋಡುತ್ತ ಗಡಗಡ ನಡುಗಿದಳು. ಶೂರ್ಪನಖಿಯ ಭಯವನ್ನು ನೋಡಿ ಕರಾಳಕಂಠನು ಒಮ್ಮೆಗೇ ಹೆದರಿ ಓಡಿಹೋಗಲು ನೋಡಿದನು. ಶೂರ್ಪನಖಿ ಹಾರಿಹೋಗಿ ಅವನನ್ನು ಗಟ್ಟಿಯಾಗಿ ಹಿಡಿದು, "ನನ್ನೊಬ್ಬಳನ್ನೇ ಬಿಟ್ಟು ಓಡಿಹೋಗುವೆಯಾ!" ಎಂದು ಕೂಗುತ್ತಾ ಅವನನ್ನು ಬಿಗಿಯಾಗಿ ಹಿಡಿದಳು. ಹನುಮಂತನು ಭೀಕರಾಕಾರ ತಾಳಿ ಅವರ ಮುಂದೆ ನಿಂತನು.

ರಾಕ್ಷಸರಾಕ್ಷಸಿಯರು ಓಡಲು ದಾರಿಯಿಲ್ಲದೆ ಭೀಕರಾಕಾರ ತಾಳಿ ಹನುಮಂತನ ಮೇಲೆಯೇ ಬಿದ್ದು ಹಿಂಸಿಸ ತೊಡಗಿದರು. ಹನುಮಂತನು ದೊಡ್ಡದೊಂದು ಶಿಲಾಪರ್ವತವನ್ನೆತ್ತಿ ಅವರ ಮೇಲೆ ಹಾಕಿ, ಇಬ್ಬರನ್ನೂ ಒಂದೇಬಾರಿ ಕೊಂದನು. ಹೀಗೆ ಶತ್ರುಶೇಷ ಅಳಿಯಿತು.

ತನ್ನ ಕೈಯಿಂದಲೇ ಶತ್ರುಶೇಷವು ನಾಶವಾದುದನ್ನು ನೋಡಿ ಹನುಮಂತನಿಗೆ ಬಹಳ ಸಂತೋಷವಾಗಿ, ದೊಡ್ಡ ಸಿಂಹನಾದ ಮಾಡಿ ಆಕಾಶಕ್ಕೆ ಹಾರಿ ಮಣಿಪುರದ ದಿಕ್ಕಿಗೆ ಸಾಗಿದನು.

ಹನುಮಂತನು ಗಗನಮಾರ್ಗದಲ್ಲಿ ಹೋಗುತ್ತಾ, ಸುಂದರವಾದ ವನಗಳ ನಡುವೆ ಸೀಳಿಕೊಂಡು ಹರಿಯುವ ಗಂಗಾನದಿಯನ್ನು ದಾಟಿ ಮಣಿಪುರರಾಜ್ಯವನ್ನು ಸಮೀಪಿಸಿದನು. ದೂರದಲ್ಲಿ ಬ್ರಹ್ಮಪುತ್ರಾ ನದಿ ಬೆಳ್ಳಿಯ ಬೆಟ್ಟವು ಕರಗಿ ಹರಿಯುತ್ತಿರುವಂತೆ ಮಿರಿಮಿರಿ ಹೊಳೆಯುತ್ತಿದ್ದಿತು.

ಅಷ್ಟರಲ್ಲಿ ಮಣಿಪುರರಾಜ್ಯದ ಮೇರೆಯಲ್ಲಿರುವ ಆಕಾಶದಲ್ಲಿ ಒಂದು ಮಿಂಚು ಮಿಂಚಿ ದೊಡ್ಡ ಧ್ವನಿಯಿಂದ ರಿವ್ವನೆ ತೂರಿಕೊಂಡು ಹೋಗುವಂತೆ ಕಂಡಿತು. ಅದನ್ನು ನೋಡಿ ಹನುಮಂತನು ಆ ಮಿಂಚನ್ನು ಮಿಂಚುವ ವೇಗದಿಂದ ಆ ಕಡೆಗೇ ಹಾರಿ ಹೋದನು.



43-8



June 1978

ವೀರಹನುಮಾನ್

ಮಣಿಪುರ ರಾಜ್ಯವನ್ನಾಳುವ ಮಣಿಧ್ವಜನು ಜನ್ಮತಃ ವೀರ ಧೀರ ಪರಾಕ್ರಮವಂತನಾಗಿದ್ದುದು ಮಾತ್ರವಲ್ಲದೆ ಎಣೆಯಿಲ್ಲದ ಶಿವಭಕ್ತ. ಶಿವನ ಪ್ರೀತಿಗಾಗಿ ನೂರು ಸಾರಿ ಹೋಮ ಮಾಡಿ, ಹೋಮ ಕುಂಡಕ್ಕೆ ತನ್ನನ್ನೇ ಸಮರ್ಪಿಸಿ, ಅನೇಕ ಸಾರಿ ಪುಟ ಮಾಡಿದ ಸುವರ್ಣದಂತಹ ಶರೀರ ಪಡೆದವನು. ಹತ್ತು ಸಾರಿ ತನ್ನ ತಲೆಯನ್ನೇ ಕಡಿದು ಹೋಮ ಕುಂಡಕ್ಕೆ ಹಾಕಿದ್ದನು. ಆ ಬಗೆಯ ಅತ್ಯುಗ್ರ ಸಾಧನೆಗಳಿಂದ ಸಾರಿ ಸಾರಿಗೂ ಶಿವನನ್ನು ಪ್ರತ್ಯಕ್ಷ ಮಾಡಿಕೊಂಡು ವರಗಳನ್ನು ಪಡೆದ ಮಹಾವೀರ ಶೈವನು.

ಅವನು ನೆನೆಸಿದಾಗಲೆಲ್ಲಾ ಶಿವನ ತ್ರಿಶೂಲವು ಬಂದು ಅವನ ಶತ್ರುಗಳನ್ನು ಸಂಹಾರ ಮಾಡಿ ಮಾಯವಾಗಿಹೋಗುತ್ತಿತ್ತು. ಬೇಕೆನಿಸಿದಾಗ ಪಾಶುಪತಾಸ್ತ್ರವನ್ನು ಸಹಾ ಪಡೆಯಬಲ್ಲವನಾಗಿದ್ದನು. ಎಲ್ಲಕ್ಕೂ ಮಿಗಿಲಾಗಿ ಅವನಿಗೆ ಬೇಕೆನಿಸಿದಾಗ ಶಿವನೇ ಬಂದು ಸಹಾಯಕನಾಗಿ ನಿಂತು, ಅವನಿಗಾಗಿ ಅವನ ಶತ್ರುಗಳೊಂದಿಗೆ ಯುದ್ಧ ಮಾಡುವಂತಹ ಅಪೂರ್ವ ವರವನ್ನೂ ಪಡೆದಿದ್ದನು. ಎಲ್ಲರೂ ಅವನಿಗೆ ಹೆದರುತ್ತಿದ್ದರು. ಹೀಗಾದುದರಿಂದ, ತನಗೆ ಯಾರೂ ಇದಿರಿಲ್ಲವೆಂಬ ಗರ್ವವು ಅವನಲ್ಲಿ ಮಿತಿ ಮೀರಿತ್ತು. ಅಂತೆಯೇ ಮಣಿಧ್ವಜನು ನಿರಂಕುಶ ಪ್ರಭುವಾಗಿ ರಾಜ್ಯಪಾಲನೆ ಮಾಡುತ್ತಿದ್ದನು.

ಅವನ ಅಧರ್ಮ ಪರಿಪಾಲನೆಯ ಚೆಂದ ಹೇಗಿದ್ದಿತೆಂದರೆ, ಶಿವನ ಹೊರತು ಬೇರೆ ದೇವರನ್ನು ಪೂಜಿಸುವವರನ್ನೂ, ಬೇರೆ ಮತಗಳನ್ನು ಅವಲಂಬಿಸುವವರನ್ನೂ ತನ್ನ ರಾಜ್ಯದಿಂದಲೇ ಹೊರಗೆ ಓಡಿಸಿಬಿಟ್ಟಿದ್ದನು. ಶಿವಾಲಯಗಳ ಹೊರತು ಬೇರೆ ಆಲಯಗಳನ್ನೆಲ್ಲಾ ಧ್ವಂಸ ಮಾಡಿಸಿಬಿಟ್ಟನು.

ಹೀಗೆ ಮಣಿಧ್ವಜನಿಂದ ಓಡಿಸಲ್ಪಟ್ಟವರೆಲ್ಲಾ ಅಯೋಧ್ಯೆಗೆ ಶರಣಾರ್ಥಿಗಳಾಗಿ ಹೋಗಿ, ರಾಮನೊಂದಿಗೆ ತಮ್ಮ ಕಷ್ಟಗಳನ್ನು ಮೊರೆಯಿಟ್ಟುಕೊಂಡರು. "ಹೆದರ ಬೇಡಿರಿ. ಮಣಿಧ್ವಜನ ಅಹಂಕಾರವು ನಾಶವಾಗುವ ಕಾಲವು ಸಮೀಪಿಸಿತು. ನೀವು ಬೇಗದಲ್ಲೇ ನಿಮ್ಮ ಊರುಗಳಿಗೆ ಹೋಗುವಂತಾಗು

೪೪. ಅಶ್ವಮೇಧ ಸಮಾಪ್ತಿ

44-1



ತ್ತದೆ. ಅದುವರೆಗೆ ನೆಮ್ಮದಿಯಾಗಿ ನನ್ನ ರಾಜ್ಯ ದಲ್ಲಿರಿ" ಎಂದು ರಾಮನು ಅವರಿಗೆ ಅಭಯ ಹೇಳಿ, ಅವರೆಲ್ಲ ಸುಖವಾಗಿರುವಂತೆ ತಕ್ಕ ಏರ್ಪಾಡುಗಳನ್ನು ಮಾಡಿಸಿ ಕೊಟ್ಟಿದ್ದನು.

ಸ್ವೈರವಿಹಾರದ ರೀತಿಯಲ್ಲಿ ಹೋಗುತ್ತಿದ್ದ ರಾಮನ ಯಾಗಾಶ್ವವು ಮಣಿಪುರ ರಾಜ್ಯವನ್ನು ಪ್ರವೇಶ ಮಾಡಿತು. ಆ ಯಾಗಾಶ್ವದ ಸಂಗತಿಯನ್ನು ಮೊದಲೇ ಅರಿತಿದ್ದ ಮಣಿಧ್ವಜನು, ಅದು ತನ್ನ ರಾಜ್ಯದ ಮೇರೆಯೊಳಗೆ ಬಂದ ಕೂಡಲೇ ಅದನ್ನು ಹಿಡಿದು ತನ್ನ ರಾಜಧಾನಿಗೆ ತೆಗೆದುಕೊಂಡು ಹೋಗಿ ತನ್ನ ಅಶ್ವಶಾಲೆಯಲ್ಲಿ ಬಂಧಿಸಿದನು.

ಅದನ್ನು ನೋಡಿ ಲಕ್ಷ್ಮಣನು, ಕುದುರೆಯನ್ನು ಬಿಟ್ಟುಕೊಟ್ಟು, ರಾಮನ ಮೇಲೆ ಸ್ನೇಹಭಾವವನ್ನು ತಾಳಿ ಯಾಗಕ್ಕೆ ಸಹಾಯಕನಾಗಿರುವಂತೆ, ದೂತನ ಮೂಲಕ ರಾಜಮರ್ಯಾದೆಗಳೊಂದಿಗೆ ಮಣಿಧ್ವಜ ನಿಗೆ ಹೇಳಿ ಕಳುಹಿಸಿದನು.

ದೂತನು ಹೇಳಿದ ಮಾತು ಕೇಳಿ ಮಣಿಧ್ವಜನು, ಆ ದೂತನ ಬೆನ್ನಿನ ಮೇಲೆ, ತ್ರಿಶೂಲದ ಮುದ್ರೆ ಬೀಳುವಂತೆ ಕಾಯಿಸಿಟ್ಟು, "ಹೇಳು ನಿನ್ನ ರಾಮನಿಗೆ. ರಾವಣನೇ ಮೊದಲಾದ ಶಿವಭಕ್ತರನ್ನು ಕೊಂದ ರಾಮನನ್ನು ಶಿವ ಪ್ರೀತಿಗಾಗಿ ಭೈರವನ ವಿಗ್ರಹದ ಮುಂದೆ ಚಿತ್ರವಧೆ ಮಾಡಿ ಬಲಿಕೊಡಲು ಕಾದಿದ್ದೇನೆ. ಮಣಿಧ್ವಜನೆಂದರೆ ಏನೆಂದು ತಿಳಿಯಬೇಕಾದರೆ ಬರಲಿ! ಕೋಟಿ ಮಂದಿ ರಾಮಂದಿರು ಬರಲಿ! ನನಗೆ ಹುಲ್ಲಿಗೆ ಸಮ. ರಾಮದೂತರಿಗೆಲ್ಲಾ ತ್ರಿಶೂಲದ ಮುದ್ರೆಯೊತ್ತಲು ಕಾದಿದ್ದೇನೆಂದು ಹೇಳು. ನಡೆ" ಎಂದು ಹೇಳಿ, ಆ ದೂತನ ನೆತ್ತಿಯ ಮೇಲೆ ಬುಟ್ಟಿ ತುಂಬ ಭಸ್ಮವನ್ನು ಸುರಿದು ಕಳುಹಿಸಿದನು.

ಅದುವರೆಗೂ ಯಾವ ಪ್ರತಿಭಟನೆಯೂ ಇಲ್ಲದೆ ಬರುತ್ತಿದ್ದ ಭರತ ಲಕ್ಷ್ಮಣ ಶತ್ರುಘ್ನರಿಗೆ ಮಣಿಧ್ವಜ ನೊಂದಿಗೆ ಯುದ್ಧವು ತಟಸ್ಥವಾಯಿತು. ಭರತನು ಪಾಂಚಜನ್ಯಕ್ಕೆ ಸಮಾನವಾದ ಶಂಖಧ್ವನಿಯನ್ನು ಮಾಡಲು ದಿಕ್ಕುಗಳೆಲ್ಲಾ ಕಿವುಡಾದುವು.

ಯುದ್ಧವು ಪ್ರಾರಂಭವಾಗಿ ನಿಮಿಷನಿಮಿಷಕ್ಕೂ ತೀವ್ರವಾಯಿತು. ಒಂದು ಕಡೆಯಲ್ಲಿ ಶತ್ರುಘ್ನನು ಸುದರ್ಶನ ಚಕ್ರದಂತೆ ವಿಜೃಂಭಿಸಿ ಯುದ್ಧ ಮಾಡುತ್ತಿರಲು, ತನ್ನ ಕಡೆಗೆ ಸಾವಿರ ಹೆಡೆಗಳ ಶೇಷ ಸರ್ಪದಂತೆ ಚಾಚಿಕೊಂಡು ಪರಂಪರೆಯಾಗಿ ಬರುವ ಲಕ್ಷ್ಮಣನ ಶಸ್ತ್ರಾಸ್ತ್ರಗಳನ್ನು ಮಣಿಧ್ವಜನಿಂದ ತಾಳಿಕೊಳ್ಳಲಾಗಲಿಲ್ಲ. ಕಡೆಗೆ ಮಣಿಧ್ವಜನು ಶಿವನ ತ್ರಿಶೂಲವನ್ನು ಕರೆದನು.

ಆಗ ಮಣಿಧ್ವಜನ ಪೂಜಾಮಂದಿರದೊಳಗಿನಿಂದ ಮಿಂಚಿನಂತೆ ಪ್ರಕಾಶಿಸಿ, ಸಿಡಿಲಿನಂತೆ ಗುಡುಗುಡಿಸಿಕೊಂಡು ತ್ರಿಶೂಲವು ಲಕ್ಷ್ಮಣನ ಕಡೆಗೆ ತೂರಿ ಬಂದಿತು. ಸರಿಯಾಗಿ ಅದೇ ಸಮಯಕ್ಕೆ ಹನುಮಂತನು ಲಕ್ಷ್ಮಣನ ಬಳಿಗೆ ಬಂದೆರಗುತ್ತ, ಆನೆ ತನ್ನ ಸೊಂಡಿಲಿನಿಂದ ಕಬ್ಬಿನ ಜಲ್ಲೆಯನ್ನು ಹಿಡಿಯು

4-2

ಗಂತೆ, ಸಂಹಾರಕ್ಕೆ ಬರುವ ಶಿವನ ತ್ರಿಶೂಲವನ್ನು ಎಡಗೈಯಿಂದ ಹಿಡಿದುಕೊಂಡು, ಗಂಭೀರಾಕಾರದಿಂದ ಪ್ರತ್ಯಕ್ಷ ಶಿವನಂತೆಯೇ ನಿಂತುಕೊಂಡನು.

ಅದನ್ನು ನೋಡಿ ಮಣಿಧ್ವಜನು ಸಂಭ್ರಮದಿಂದ ಶಿವನೇ ಇಳಿದು ಬಂದನೆಂದುಕೊಂಡು, ಕೈಯೆತ್ತಿ ಜೋಡಿಸಿ ನಮಸ್ಕರಿಸುವುದನ್ನು ನೋಡಿ, ಹನುಮಂತನು ನಕ್ಕು, "ಎಲವೋ ಮಹಾ ಶಿವ ಭಕ್ತನೇ! ನಾನು ಶಿವನಲ್ಲ. ಸಾಧಾರಣ ಕೋತಿ! ಹನವಂತನು. ರಾಮನ ಬಂಟ ಹನುಮಂತನು! ಗೊತ್ತಾಯಿತೇ? ಸರಿಯಾಗಿ ನೋಡಿ ಕೆಲಸ ಮಾಡು! ಈಗ ಬಾ ನನ್ನ ಮುಂದೆ!" ಎನ್ನುತ್ತಾ, ಗದೆಯನ್ನೆತ್ತಿ ಲಂಘಿಸಿದನು ಮಣಿಧ್ವಜನ ಮೇಲೆ.

ಮಣಿಧ್ವಜನು ತಪ್ಪಿಸಿಕೊಂಡು ಬಹುದೂರ ಓಡಿ ಹೋಗಿ ಹನುಮಂತನನ್ನು ನೋಡಿ ಅಪ್ರತಿಭನಾದನು. ಹನುಮಂತನ ಜಟಾಜೂಟವು ಗಾಳಿಯಲ್ಲಿ ಹಾರಾಡುತ್ತಿದ್ದಿತು. ಅವನ ಕಣ್ಣುಗಳು ಎರಡು ಅಗ್ನಿ ಗೋಳಗಳಂತೆ ಹೊಳೆಯುತ್ತಿದ್ದುವು. ಒಂದು ಕೈಯಲ್ಲಿ ತ್ರಿಶೂಲವನ್ನು ನೆಲಕ್ಕೆ ಆನಿಸಿಕೊಂಡು ಅಪರ ಮಹೇಶ್ವರನ ಹಾಗೆ ನಿಂತಿದ್ದನು.

ಇನ್ನು ತನಗೆ ಮರಣವು ತಪ್ಪಲಾರದೆಂದು ಅನುಮಾನವಾಯಿತು ಮಣಿಧ್ವಜನಿಗೆ. ಆದರೂ ಧೈರ್ಯ ಬಿಡದೆ ಪಾಶುಪತಾಸ್ತ್ರವನ್ನು ನೆನಪು ಮಾಡಿಕೊಂಡು ಮಂತ್ರವನ್ನು ಜಪಿಸುತ್ತ, ಬಿಲ್ಲಿಗೆ ಸಂಧಿಸಿ ಪ್ರಯೋಗಿಸಿದನು.

ಪಾಶುಪತಾಸ್ತ್ರದ ಉಷ್ಣೋಗ್ರತೆಯಿಂದ ಆ ಪ್ರದೇಶವೆಲ್ಲಾ ಕುದಿದುಹೋಯಿತು. ಲಕ್ಷ್ಮಣ, ಭರತ, ಶತ್ರುಘ್ನರೂ ಅವರ ಸೈನ್ಯವೂ ಮೂರ್ಛಿತರಾಗಿ ನೆಲಕ್ಕೊರಗಿದರು. ಹನುಮಂತನು ರಾಮನಾಮವನ್ನು ಜಪಿಸುತ್ತ ಎದೆಚಾಚಿಕೊಂಡು ಆ ಮಹಾಸ್ತ್ರಕ್ಕೆ ಇದಿರಾಗಿಹೋದನು. ಪಾಶುಪತಾಸ್ತ್ರವು ರಭಸದಿಂದ ಬಂದು ಹನುಮಂತನ ಗುಂಡಿಗೆಗೆ ತಾಗಿ ಮುರಿದು ಪುಡಿಪುಡಿಯಾಗಿ ಅಲ್ಲೇ ಐಕ್ಯವಾಯಿತು. ಹನುಮಂತನು ಮಣಿಧ್ವಜನ ರಥವನ್ನು ಗುದ್ದಿ ಪುಡಿಪುಡಿ ಮಾಡಿ, ಗದೆಯನ್ನು ಮಣಿಧ್ವಜನ ತಲೆಯ





ಮೇಲೆ ಗುರಿಯಿಟ್ಟು ಎತ್ತಿಕೊಂಡು ಧುಮುಕಿದನು. ಗದೆಯ ಪೆಟ್ಟು ಮಣಿಧ್ವಜನ ಬೆನ್ನಿಗೆ ಒರೆಸಿದಂತೆ ಬಿದ್ದಿತು. ಆ ನೋವಿನಿಂದ ಮಣಿಧ್ವಜನು ಹರಹರಾ ಎಂದು ಕೂಗುತ್ತ, ಬೇರೇನೂ ತೋರದೆ ಓಡಿ ಹೋಗಿ ಪೂಜಾ ಮಂದಿರದೊಳಗೆ ನುಗ್ಗಿ, ಶಿವ ಲಿಂಗಕ್ಕೆ ತಲೆಯನ್ನು ಹೊಡೆದುಕೊಳ್ಳುತ್ತ, "ಹರ ಹರಾ! ಮಹಾದೇವಾ! ಶರಣಾದೆ! ಬೇಗ ಬಾ! ರಕ್ಷಿಸು!" ಎಂದು ಕೂಗಿದನು.

"ಇದೇನು ಮಣಿಧ್ವಜಾ? ಕೋಟಿಮಂದಿ ರಾಮರು ಬಂದರೂ ಲೆಕ್ಕಿಸಲಾರೆ ಎಂದೆಯಲ್ಲಾ! ಕೇವಲ ರಾಮನ ಬಂಟನೊಬ್ಬನನ್ನು ಇದಿರಿಸಲಾರದೆ ಹೋದೆಯಾ? ಹೋಗು. ಯುದ್ಧ ಮಾಡು. ನಿನಗೆ ಬೆಂಬಲವಾಗಿ ನಾನಿದ್ದೇನೆ" ಎಂದು ಶಿವಲಿಂಗದಿಂದ ಮಾತುಗಳು ಹೊರಟುವು.

ಧೈರ್ಯಗೊಂಡು ಮಣಿಧ್ವಜನು ಮತ್ತೆ ಯುದ್ಧ ರಂಗಕ್ಕೆ ತಿರುಗಿದನು. ಶಿವನು ನಂದಿವಾಹನನಾಗಿ ಯುದ್ಧರಂಗದಲ್ಲಿ ಮಣಿಧ್ವಜನ ಮುಂದೆ ಸಾಕ್ಷಾತ್ಕಾರ ನಾದನು. ಆಗ ಹನುಮಂತನು ಶಿವನನ್ನು ನೋಡಿ, "ನೀನು ಮಹಾದೇವನೇ ಆಗಿರಬಹುದು. ಆದರೂ ರಾಮನ ಬೆಂಬಲವಿರುವ ನಾನು ನಿನಗೇನೂ ಅಂಜ ಲಾರೆ! ತಾಳಿಕೋ" ಎಂದು ಸಿಂಹಗರ್ಜನೆ ಮಾಡಿ ಭಯಂಕರ ರೂಪದಿಂದ ಶಿವನ ಮೇಲೆ ಹೋದನು. ಅವನ ಗರ್ಜನೆಗೆ ಹೆದರಿ ನಂದಿ ಶಿವನನ್ನು ಕೆಳಕ್ಕೆ ಹಾಕಿ ಓಡಿಹೋಯಿತು.

ಶಿವನು ಎದ್ದು ನಿಂತು ಹನುಮಂತನೊಂದಿಗೆ, "ನನ್ನ ತ್ರಿಶೂಲವನ್ನು ಹಿಡಿದೆ! ಪಾಶುಪತಾಸ್ತ್ರ ವನ್ನು ನುಂಗಿದೆ. ಹೀಗೆ ಮಾಡಲು ವಿಷ್ಣುದೇವ ನೊಬ್ಬನಿಗೇ ಸಾಧ್ಯ. ನಿನ್ನಲ್ಲಿ ವಿಷ್ಣು ಅಡಗಿರುವ ನೇನು? ನಿಜ ಹೇಳು" ಎಂದನು.

"ಶಿವನೋ ವಿಷ್ಣುವೋ ನನಗೇನೂ ಸಂಬಂಧ ವಿಲ್ಲ. ನಾನು ಮಾನವ ಮಾತ್ರನಾದ ರಾಮನನ್ನು ನಂಬಿಕೊಂಡಿರುವವನು. ಕೋತಿಯಾದ ನನಗೆ ಆ ಮಾನವನೇ ದೇವರು. ನನ್ನ ಬುದ್ಧಿಯೂ ಕೋತಿಯ ಹಾಗೆ ಚಂಚಲವೆಂದೇ ಹೇಳುತ್ತಾರೆ. ನಾನು ನನ್ನ ಬುದ್ಧಿಯನ್ನು ಏಕಾಗ್ರತೆಯಿಂದ ಮಾನವರಾಜ ರಾಮನ ಮೇಲಿರಿಸಿ, ಬೇಕಾದಷ್ಟು ಮನೋಬಲ ಪಡೆದಿದ್ದೇನೆ. ಎಷ್ಟೋ ಸಾಹಸಗಳನ್ನು ಮಾಡಿದ್ದೇನೆ. ಪರಾಕ್ರಮಗಳನ್ನು ತೋರಿಸಿದ್ದೇನೆ. ಇದನ್ನು ಭಕ್ತಿ ಎಂದರೂ ಲಕ್ಷ್ಯಸಾಧನೆ ಎಂದರೂ ಒಂದೇ. ನಾನು ನಂಬಿರುವ ರಾಮಚಂದ್ರನು ಲೋಕಕಲ್ಯಾಣಕ್ಕಾಗಿ ಮಾಡುವ ಅಶ್ವಮೇಧಯಾಗವನ್ನು ಯಾರದೇ ಎಂತಹ ಶಕ್ತಿಗಳೂ ಇದಿರಿಸಲಾರವು. ಭಕ್ತರೆಂದು ಹೇಳಿ, ಮಣಿಧ್ವಜನಂತಹವರು ಮಾಡುತ್ತಿರುವು ದೇನು? ಇಂತಹ ಅಹಂಕಾರಿಗಳಿಗೆ ಸ್ವಾರ್ಥಪರರಿಗೆ ಸಹಾಯಕನಾಗಿರುವ ದೇವನು ಮಹಾದೇವನಾದ ರೇನು, ವಿಷ್ಣುದೇವನಾದರೇನು? ಅಂತಹ ದೇವರು ಗಳಿಂದ ಪ್ರಜೆಗಳಿಗೆ ಪ್ರಯೋಜನವಾದರೂ ಏನು?"

44-4


ಎಂದು ಹೇಳಿ ಹನುಮಂತನು ದಿಕ್ಕುಗಳು ನಡುಗುವ ಹಾಗೆ ಪ್ರಾಣಿಗಳು ಮೂರ್ಛೆ ಬೀಳುವ ಹಾಗೆ ಗರ್ಜಿಸಿದನು. ಅವನ ಮಾತು ಕೇಳಿ ಶಿವನು ನೆಗಾಡಿ ಕೂಡಲೇ ಗಂಭೀರನಾಗಿ "ಹುಂ. ನಿನ್ನ ನೀತಿ ಮಾತುಗಳನ್ನು ಕೇಳಿ ನೆಗಾಡುವ ಸಮಯವಲ್ಲ. ನನ್ನ ಭಕ್ತನಿಗೆ ಸಹಾಯಕನಾಗಿ ಬಂದೆ. ನಾನೀಗ ನನ್ನ ಕೊನೆಯ ಆಯುಧ ಹಣೆಯ ಕಣ್ಣನ್ನು ತೆರೆದುಬಿಡುತ್ತೇನೆ. ತಾಳಿಕೋ!" ಎಂದನು.

"ಬೇಗ ತೆರೆದು ನಿನ್ನ ಮಹಾಭಕ್ತನಿಗೆ ಜ್ಞಾನದ ಕಣ್ಣು ಬರುವಂತೆ ಮಾಡು" ಎಂದ ಹನುಮಂತ.

ಶಿವನು ತನ್ನ ಮೂರನೇ ಕಣ್ಣನ್ನು ತೆರೆದ ಕೂಡಲೇ, ಭಗ್ಗನೆ ಪ್ರಳಯಾಗ್ನಿ ಎದ್ದು ಹನುಮಂತನ ಮೇಲೆ ಸುಳಿದು ಬಂತು. ಹನುಮಂತನು ಬಲಗೈಯನ್ನು ಚಾಚಿ, ಆ ಅಗ್ನಿಯನ್ನು ಸೆಳೆದು, ಹಿಂದೊಮ್ಮೆ ಶಿವನು ಹಾಲಾಹಲವನ್ನು ಹಿಡಿದು ಕುಡಿದ ಹಾಗೆ "ರಾಮಾರ್ಪಣ!" ಎನ್ನುತ್ತಾ ಬಾಯಿಯೊಳಗೆ ಹಾಕಿ ನುಂಗಿಬಿಟ್ಟನು.

ಆಗ ಶಿವನು ತಲೆ ದೂಗುತ್ತಾ ಮಣಿಧ್ವಜನನ್ನು ನೋಡಿ, "ನೋಡಿದೆಯಾ ಮಣಿಧ್ವಜಾ! ಇನ್ನು ನಾನೇನೂ ಮಾಡುವಂತಿಲ್ಲ. ಎಲ್ಲವೂ ನಿನ್ನ ಕಣ್ಣೆದಿರೇ ನಡೆದುದರಿಂದ ನಿನಗೂ ತಿಳಿದಿರಬಹುದು. ಹನುಮಂತನೆಂದರೆ ಯಾರೆಂದು ಇನ್ನೂ ಅನುಮಾನದಲ್ಲಿರುವೆಯಾ? ಬೇಡ. ಅನುಮಾನಬಿಡು. ಹನುಮಂತನು ನನ್ನ ಆತ್ಮಸ್ವರೂಪದವನು. ನನ್ನ ಅಂಶದಿಂದ ಅವತರಿಸಿದ ಅವನಲ್ಲಿ ನನ್ನ ಸರ್ವಶಕ್ತಿಗಳೂ ಲೀನವಾಗಿವೆ. ಭಕ್ತಿ ಎಂದರೆ ಏನೆಂಬುದನ್ನು ಅವನಿಂದಲೇ ತಿಳಿ! ನಿನಗೆ ಒಳಿತಾಗಲಿ!" ಎಂದು ಹೇಳಿ ಶಿವನು ಅಂತರ್ಧಾನನಾದನು.

ಇಷ್ಟರಲ್ಲಿ ಶಿವನು ಆಕಾಶದಲ್ಲಿ ಹಾರಿ ದ್ರೋಣ ಪರ್ವತಕ್ಕೆ ಹೋಗಿ, ಸಂಜೀವಕರಣಿಯನ್ನು ಕಿತ್ತುಕೊಂಡುಬಂದನು. ಅದರಿಂದ ಮೂರ್ಛೆ ಬಿದ್ದಿದ್ದ



ಲಕ್ಷ್ಮಣ, ಭರತ, ಶತ್ರುಘ್ನ ಮತ್ತು ಸೈನಿಕರನ್ನೂ ಬದುಕಿಸಿಬಿಟ್ಟನು. ಎಲ್ಲರೂ ನಿದ್ದೆಮಾಡಿ ಎದ್ದವರಂತೆ ಉತ್ಸಾಹದಿಂದ ಎದ್ದರು.

ಅಷ್ಟರಲ್ಲಿ ಮಣಿಧ್ವಜನಿಗೂ ಜ್ಞಾನದೃಷ್ಟಿ ತೆರೆದುಕೊಂಡಿತ್ತು. ಅವನು ಹನುಮಂತನ ಮುಂದೆ ಮೊಣಕಾಲೂರಿ ಕೈಜೋಡಿಸಿ ತಲೆಬಾಗಿ ನಮಸ್ಕಾರ ಮಾಡಿದನು.

ಆಗ ಹನುಮಂತನು ಮಣಿಧ್ವಜನೊಂದಿಗೆ, "ಮಣಿಧ್ವಜಾ! ಕೇವಲ ಸ್ವಾರ್ಥದಿಂದ ನಿನ್ನ ಭಕ್ತಿ ಎಷ್ಟೊಂದು ಕ್ಷುದ್ರತೆಗಿಳಿಯಿತೆಂಬುದನ್ನು ತಿಳಿದೆಯಾ? ಸ್ವಂತ ಪ್ರಯೋಜನಕ್ಕಾಗಿ ಪರಮಶಿವನನ್ನು ಸೇವಕನಂತೆ ವಿನಿಯೋಗಿಸಿಕೊಳ್ಳುವುದು ಭಕ್ತಿಯಾಗದು. ಜೀವಕೋಟಿಗಳೆಲ್ಲಾ ಸುಖವಾಗಿರಬೇಕೆಂಬ ಈಶ್ವರ ಸಂಕಲ್ಪವನ್ನು ನೆರವೇರಿಸುವುದೇ ನಿಜವಾದ ಭಕ್ತಿ. ನಿನ್ನಂತೆ ಮಾಡುವವರಿಂದಲೇ ದೇವತೆಗಳ ದೊಡ್ಡತನಗಳು ಕಡಿಮೆಯಾಗುತ್ತವೆ. ಭಕ್ತರೆಂದು

44-5



ಹೇಳಿಕೊಳ್ಳುವ ಸ್ವಾರ್ಥಸಾಧಕರನ್ನೂ, ಅಹಂಕಾರಿಗಳನ್ನೂ ನೋಡಿ ಅಸಹ್ಯಪಡುತ್ತ, ಒಳ್ಳೆಯವರು ನಾಸ್ತಿಕರಾಗಿ ಬದಲಾಯಿಸುತ್ತಿದ್ದಾರೆ. ಈಗ ನಿನ್ನ ಅಜ್ಞಾನವು ತೊಲಗಿಹೋದುದರಿಂದ, ಇನ್ನುಮೇಲೆ ದ್ವೇಷವನ್ನು ಬಿಟ್ಟು, ಎಲ್ಲದರಲ್ಲಿಯೂ ಅಡಗಿರುವುದು ಒಂದೇ ದೈವತ್ವವೆಂಬುದನ್ನು ಗುರುತಿಸಿಕೊಂಡು, ಎಲ್ಲಾ ಬಗೆಯ ಪ್ರಜೆಗಳಿಗೂ ಸುಖವಾಗುವಂತೆ ಮಾಡುವುದೇ ನಿನ್ನ ಜೀವನದ ಧ್ಯೇಯವಾಗಿಟ್ಟುಕೊಂಡು ಪರಿಪಾಲನೆ ಮಾಡು" ಎಂದು ಬೋಧಿಸಿದನು.

ಆಗ ಮಣಿಧ್ವಜನು ಹೀಗೆಂದನು: "ಆಂಜನೇಯ ಸ್ವಾಮಿಯೆ! ಗರ್ವವು ಮಿತಿಮೀರಿಹೋದರೆ ಹೊರತು ಜ್ಞಾನದೃಷ್ಟಿ ಬರುವುದಿಲ್ಲವೆಂದು ನನ್ನ ವಿಷಯದಲ್ಲಿ ನಿಜವಾಯಿತು. ನನ್ನ ಗರ್ವವು ವಿಪರೀತವಾಗಬೇಕೆಂತಲೇ ಶಿವನು ನಾನು ಕೇಳಿಕೊಂಡ ವರಗಳನ್ನೆಲ್ಲಾ ಕೊಟ್ಟನೆಂದು ಈಗ ಅರ್ಥವಾಗುತ್ತದೆ. ಗರ್ವದಿಂದ ನಾನು ಬಂಧಿಸಿದ ರಾಮನ ಯಾಗಾಶ್ವದಿಂದ ನನಗೆ ಒಳ್ಳೆಯದೇ ಆಯಿತು. ಜ್ಞಾನೋದಯವಾಗುವಂತಾಯಿತು. ಇದೆಲ್ಲವೂ ರಾಮಚಂದ್ರನ ದಯೆ! ನಾನು ರಾಮನ ಹತ್ತಿರ ಹೋಗಿ ಕ್ಷಮಾಪಣೆ ಕೇಳಿಕೊಂಡು, ಆತನ ಬಂಧು ಕೋಟಿಯಲ್ಲಿ ಒಬ್ಬನಾಗಬೇಕಾಗಿದೆ. ಅದುವರೆಗೂ ನನಗೆ ಶಾಂತಿಯಿಲ್ಲ." ಎಂದು ಹೇಳಿ ಯಾಗಾಶ್ವವನ್ನು ತಂದು, ನಮ್ರತೆಯಿಂದ ಲಕ್ಷ್ಮಣನಿಗೆ ಒಪ್ಪಿಸಿದನು. ಅದರೊಂದಿಗೆ ಅಪರಿಮಿತ ಧನಕನಕ ವಸ್ತ್ರಾಭರಣಗಳನ್ನು ಕಾಣಿಕೆಯಾಗಿಯೂ ಸಮರ್ಪಿಸಿಕೊಂಡನು.

ಮತ್ತೆ ಯಾಗಾಶ್ವವನ್ನು ಸ್ವೇಚ್ಛೆಯಾಗಿ ಹೋಗಲು ಬಿಟ್ಟು ಎಲ್ಲರೂ ಅದರ ಹಿಂದೆ ಹೊರಟರು. ಅವರನ್ನು ಕಳುಹಿಸಿಕೊಟ್ಟ ಮೇಲೆ ಮಣಿಧ್ವಜನ ಮನಸ್ಸು ತೀವ್ರವಾಗಿ ರಾಮನ ಮೇಲೆ ಹರಿಯಿತು.

ಮಣಿಧ್ವಜನಿಗೆ ಶುಭ, ಶೋಭ ಎಂಬ ಇಬ್ಬರು ಸುಂದರಿಯರಾದ ಕುಮಾರಿಯರಿದ್ದರು. ಆ ಮಕ್ಕಳು ಅವಳಿಜವಳಿಗಳಾಗಿಯೇ ಹುಟ್ಟಿದವರು. ಅವರನ್ನು ಕರೆದುಕೊಂಡು, ಮಂಗಳ ದ್ರವ್ಯಗಳೊಂದಿಗೆ ಮಣಿಧ್ವಜನು ಅಯೋಧ್ಯೆಗೆ ಹೊರಟನು. ಅಲ್ಲಿ ಅವನು ರಾಮನ ದರ್ಶನಮಾಡಿ, ತನ್ನ ಅಪರಾಧವನ್ನು ಹೇಳಿಕೊಂಡು, ಕ್ಷಮೆ ಕೇಳಿಕೊಂಡನು. ರಾಮನು ಮಣಿಧ್ವಜನನ್ನು ಆದರಿಸಿ ಸಮಾಧಾನ ಹೇಳಿ ಮಿತ್ರನನ್ನಾಗಿ ಸ್ವೀಕರಿಸಿಕೊಂಡನು. ತರುವಾಯ ಮಣಿಧ್ವಜನು ತನ್ನ ಕುಮಾರಿಯರನ್ನು ಲವಕುಶರ ವಧುಗಳಾಗಿ ಅಂಗೀಕರಿಸಿ, ತನಗೆ ರಘುವಂಶದೊಂದಿಗೆ ಬಾಂಧವ್ಯ ಭಾಗ್ಯ ನೀಡಬೇಕೆಂದು ರಾಮನನ್ನು ಪ್ರಾರ್ಥಿಸಿದನು. ರಾಮನು ಸಂತೋಷದಿಂದ ಅಂಗೀಕರಿಸಿ, ಅಶ್ವಮೇಧ ಯಾಗವು ಪೂರ್ತಿಯಾದ ಮೇಲೆ, ವಿವಾಹ ನಡೆಸೋಣವೆಂದೂ ಹೇಳಿದನು. ಮಣಿಧ್ವಜನು ತಾನು ತನ್ನ ರಾಜ್ಯದಿಂದ ಹೊರಡಿಸಿದವರನ್ನೆಲ್ಲಾ ಆದರಪೂರ್ವಕವಾಗಿ ತನ್ನ ರಾಜ್ಯಕ್ಕೆ ಕರೆದುಕೊಂಡು




ಹೋಗಿ, ಪ್ರಜೆಗಳ ಶ್ರೇಯಸ್ಸೇ ಶಿವಪೂಜೆ ಎಂದೂ, ಪ್ರಜೆಗಳ ಸೇವೆಯೇ ಭಕ್ತಿ ಎಂದೂ ಭಾವಿಸಿ ರಾಜ್ಯ ಪರಿಪಾಲನೆಗೆ ತೊಡಗಿದನು.

ರಾಮನ ಯಾಗಾಶ್ವವು ಪೂರ್ವದಿಕ್ಕಿನಿಂದ ಆಗ್ನೇಯಕ್ಕೆ ತಿರುಗಿ, ಹಾಗೆಯೇ ದಕ್ಷಿಣ ಪಶ್ಚಿಮ ದೇಶಗಳ ಮೇಲಿಂದಾಗಿ ಅಯೋಧ್ಯೆಗೆ ಹಿಂದಿರುಗಿ ಬಂದಿತು. ಆಮೇಲೆ ಅಶ್ವಮೇಧಯಾಗದ ಕ್ರಮಗಳು ಮುಂದುವರಿದುವು. ಕಿಷ್ಕಿಂಧೆಯಿಂದ ಸುಗ್ರೀವಾದಿ ವಾನರರು, ಲಂಕೆಯಿಂದ ವಿಭೀಷಣ, ಮಣಿಪುರದಿಂದ ಮಣಿಧ್ವಜ ಇನ್ನೂ ಅನೇಕಮಂದಿ ನಾನಾ ದೇಶಗಳ ರಾಜರು ದೊಡ್ಡದೊಡ್ಡ ಕಾಣಿಕೆಗಳೊಂದಿಗೆ ಬಂದರು. ವಿಭೀಷಣನು ಒಳ್ಳೆಯ ಮುತ್ತುಗಳನ್ನೂ, ಹವಳಗಳನ್ನೂ ಗಾಡಿಗಳಲ್ಲಿ ಸಾಗಿಸಿಕೊಂಡು ಬಂದನು. ಸುಗ್ರೀವನು ವಜ್ರಗಳನ್ನೂ, ಬಂಗಾರವನ್ನೂ ತಂದನು. ಮಣಿಧ್ವಜನು, ಮರಕತ, ಕೆಂಪುಗಳನ್ನೂ, ಚೀನಾಂಬರಗಳನ್ನೂ ತೆಗೆದುಕೊಂಡು ಬಂದನು. ಹೀಗೆ ಇನ್ನೂ ಅನೇಕರಾಜರು ತಂದ ಬೆಳ್ಳಿ ಬಂಗಾರ ಮಣಿಮಾಣಿಕ್ಯಗಳ ರಾಶಿಗಳು ಕೋಶಾಗಾರದಲ್ಲಿ ತುಂಬಿ ಹೋಗಿ ಹೊರಭಾಗದಲ್ಲಿ ಕೂಡಾ ರಾಶಿರಾಶಿಯಾಗಿ ಸೇರಿಸಿಡಲ್ಪಟ್ಟುವು.


ಲಕ್ಷ್ಮಣ, ಭರತ, ಶತ್ರುಘ್ನರು ನಾನಾ ದೇಶಗಳಲ್ಲಿ ಘನಸ್ವಾಗತಗಳಿಂದ, ರಾಜಮರ್ಯಾದೆಗಳನ್ನು ಹೊಂದಿ ದಿಗ್ವಿಜಯಮಾಡಿಕೊಂಡು, ತಮ್ಮ ಸೇನೆಗಳ ಕೀರ್ತಿಯನ್ನು ದೇಶಗಳಲ್ಲೆಲ್ಲಾ ಸ್ಥಾಪಿಸಿದರು. ಹನುಮಂತ, ಭರದ್ವಾಜ, ಗೌತಮ, ಅತ್ರಿ, ಅಗಸ್ತ್ಯ ಮೊದಲಾದ, ದೊಡ್ಡ ದೊಡ್ಡ ಋಷಿಗಳೂ ಅಶ್ವಮೇಧಯಾಗಕ್ಕೆ ಬಂದಿದ್ದರು. ರಾಮನ ಅಸ್ತ್ರ ಗುರುವಾದ ವಿಶ್ವಾಮಿತ್ರನಿಗೆ ಪ್ರತ್ಯೇಕ ಆಹ್ವಾನವು ಹೋಗಿತ್ತು.

ಹೀಗೆ ರಾಮನ ಅಶ್ವಮೇಧಯಾಗವು ಅತ್ಯಂತ ವೈಭವವಾಗಿ ನಡೆಯಿತು. ರಾಮನು ಧಾನ್ಯಗಳನ್ನು ಪ್ರತಿ ಮನೆಗಳಿಗೂ ಹಂಚಿ ಕೊಡಿಸಿದನು. ರಾಜ್ಯದೊಳಗಿನ ಸ್ತ್ರೀಯರಿಗೆಲ್ಲಾ ಚಿನ್ನವನ್ನೂ ಆಭರಣಗಳನ್ನೂ ಪಾಲು ಮಾಡಿ ಕೊಡಿಸಿದನು. ರಾಜ್ಯದಲ್ಲಿ ಪ್ರಜಾಹಿತವಾದ ಕಾರ್ಯಗಳನ್ನು ಮಾಡುವ ಬೇರೆ ಬೇರೆ ತರಗತಿಯವರಿಗೆ ಅನೇಕ ಬಹುಮಾನಗಳಿಂದ ಗೌರವ ನೀಡಿಸಿದನು.

ತರುವಾಯ ಎಲ್ಲರೂ ಮಣಿಧ್ವಜನ ಆಹ್ವಾನವನ್ನು ಸ್ವೀಕರಿಸಿ ಮಣಿಪುರಕ್ಕೆ ಹೊರಟರು. ಮಣಿಪುರದಲ್ಲಿ ಕುಶನಿಗೆ ಶುಭಳೊಂದಿಗೂ, ಲವನಿಗೆ ಶೋಭಳೊಂದಿಗೂ ಘನ ವೈಭವದಿಂದ ವಿವಾಹ ನಡೆಯಿತು. ಮದುವೆಯ ಸಂದರ್ಭದಲ್ಲಿ ಮಣಿಧ್ವಜನು ತನ್ನ ರಾಜ್ಯವನ್ನೆಲ್ಲಾ ಲವಕುಶರಿಗೆ ಕಾಣಿಕೆಯಾಗಿ ಸಮರ್ಪಿಸಿ, ಕೆಲವು ದಿನಗಳ ಮೇಲೆ ತಪಸ್ಸು ಮಾಡಲು ಅರಣ್ಯಕ್ಕೆ ಹೊರಟುಹೋದನು.



44-8



July 1978

ಪೀಠಾನುಮಾನ್


ರಾಮನ ರಾಜ್ಯದಲ್ಲಿ ಯಾರಿಗೆ ಬೇಕಾದರೂ ನ್ಯಾಯ ದಾನ ಪಡೆಯಬಹುದಾಗಿತ್ತು. ಮಾನವರನ್ನೊಳ ಗೊಂಡ ಯಾವ ಪ್ರಾಣಿಗಳಿಗಾದರೂ ಯಾವ ಹೆಚ್ಚು ಕಡಿಮೆಯೂ ಇಲ್ಲದೆ ನಿರಾತಂಕವಾಗಿ ರಾಜನ ಬಳಿಗೆ ಹೋಗಿ ತನಗೆ ಬಂದ ಕಷ್ಟಗಳನ್ನು ಹೇಳಿಕೊಳ್ಳ ಬಹುದು. ಅದುವೇ ರಾಮನ ರಾಜ್ಯದ ವಿಶೇಷ.

ಒಂದು ದಿನ ರಾತ್ರಿ ಒಂದು ನಾಯಿ. ತನ್ನ ಶರೀರ ದಲ್ಲಿರುವ ರಕ್ತಗಾಯಗಳಿಂದ ರಕ್ತವು ತೊಟ್ಟಿಕ್ಕು ತ್ತಿರಲು, ಕೊನೆಯುಸಿರಿನೊಂದಿಗೆ ರಾಮನ ಅರ ಮನೆಯ ಬಳಿಗೆ ಬಂದಿತು. ಆರ್ತಧ್ವನಿಯಿಂದ ರಾಮ ನನ್ನು ಕರೆಯುವಂತೆ ಬೊಗಳತೊಡಗಿತು.

ರಾಮನು ಎಚ್ಚೆತ್ತು ಬಂದು ಆ ನಾಯಿಯ ತಲೆ ಯನ್ನು ನೀವಿದನು. ಆಗ ಅದರ ನೋವು ಉಪ ಶಮನವಾದಂತೆ ಉತ್ತೇಜನಗೊಂಡಿತು. ಕೂಡಲೇ ಅದು ಮಾನವಭಾಷೆಯಲ್ಲಿ "ಓ, ರಾಮಾ! ಒಬ್ಬ ಯುವಕನು ಅನ್ಯಾಯವಾಗಿ ನನ್ನನ್ನು ಸಾಯುವ ಹಾಗೆ ಹೊಡೆದನು. ಅವನಿಗೆ ಯಾವ ಕೆಲಸವೂ ಇಲ್ಲದೆ ಸುಮ್ಮನೆ ತಿರುಗೂಳಿಯಾಗಿದ್ದಾನೆ. ಅವ ನನ್ನು ದೊಡ್ಡದೊಂದು ದೇವಸ್ಥಾನಕ್ಕೆ ಧರ್ಮಕರ್ತ ನನ್ನಾಗಿ ಮಾಡಬೇಕೆಂದು ಹೇಳಲಿಕ್ಕೇ ಬಂದೆನು" ಎಂದು ಹೇಳಿತು.

ಅದರ ಮೊರೆ ಕೇಳಿ ರಾಮನು ಆಶ್ಚರ್ಯಪಟ್ಟು, "ಅವನಿಗೆ ಮರಣದಂಡನೆಯೋ ಮತ್ತೇನಾದರೂ ಕಠಿಣಶಿಕ್ಷೆಯೋ ವಿಧಿಸಬೇಕೆಂದು ಹೇಳುವುದನ್ನು ಬಿಟ್ಟು, ಅಪಕಾರಿಗೆ ಉಪಕಾರ ಮಾಡಬೇಕೆಂದು ಹೇಳುವೆಯಲ್ಲಾ?" ಎಂದು ಕೇಳಿದನು.

"ಇದರಲ್ಲಿ ಹಾಗೇನೂ ಇಲ್ಲ ಪ್ರಭುವೇ. ಹೋದ ಜನ್ಮದಲ್ಲಿ ನಾನು ದೊಡ್ಡದೊಂದು ದೇವಸ್ಥಾನದ ಧರ್ಮಾಧಿಕಾರಿಯಾಗಿದ್ದೆ. ಅಲ್ಲಿಗೆ ಬರುವ ದೇವಾ ದಾಯವನ್ನು ಕದ್ದುಕೊಂಡು. ಹೀನಕಾರ್ಯಗಳನ್ನು ಮಾಡಿ ಕಡೆಗೆ ಹೀಗೆ ನಾಯಿಯಾಗಿ ಹುಟ್ಟಿದೆ. ಈಗ ಆ ಯುವಕನಿಗೆ ಅದೇ ಕೆಲಸ ಕೊಟ್ಟರೆ, ಅವನೂ ನಾಯಿಯಾಗಿ ಹುಟ್ಟಿ ನನ್ನ ಹಾಗೆ ನಾನಾಕಷ್ಟಗಳಿಗೆ ಬಿದ್ದು ನನ್ನ ಹಗೆ ತೀರುತ್ತದೆ. ಅದಕ್ಕೇ ಹಾಗೆ



ಹೇಳಿದೆ. ಆದರೆ ಈಗ ಪತಿತಪಾವನನಾದ ನಿನ್ನ ಸ್ಪರ್ಶ ಮಾತ್ರದಿಂದ ನನ್ನ ಹಗೆ ತೀರಿಹೋಯಿತು. ನಾನಿನ್ನು ಉತ್ತಮ ಗತಿಗೆ ಹೋಗಲಿದ್ದೇನೆ. ಸ್ವರ್ಗಕ್ಕೆ ಕರೆದೊಯ್ಯಲು ದೇವದೂತರು ಬರುತ್ತಿದ್ದಾರೆ" ಎಂದು ಹೇಳಿ ಆ ನಾಯಿ ಪ್ರಾಣಬಿಟ್ಟಿತು. ಆಮೇಲೆ ಅದನ್ನು ಹೊಡೆದ ಯುವಕನು ಈ ಸಂಗತಿಯನ್ನೆಲ್ಲಾ ತಿಳಿದುಕೊಂಡು ಪಶ್ಚಾತ್ತಾಪಪಡುತ್ತ, ಉತ್ತಮ ಮನುಷ್ಯನಾಗಿ ಬದಲಾವಣೆಗೊಂಡನು.

* * *

ರಾಮನು ಅಶ್ವಮೇಧಯಾಗವನ್ನು ಮುಗಿಸಿ ರಾಜಾಧಿರಾಜನಾಗಿ ಕೆಲವು ವರ್ಷ ರಾಜ್ಯಭಾರ ಮಾಡಿದ ಮೇಲೆ, ಒಂದು ದಿನ ಯಮನು ಬ್ರಾಹ್ಮಣನ ರೂಪದಲ್ಲಿ ರಾಮನ ಬಳಿಗೆ ಬಂದು, "ರಾಮಾ, ನಿನ್ನೊಂದಿಗೆ ರಹಸ್ಯವಾಗಿ ಮಾತಾಡಬೇಕಾಗಿದೆ. ನಾವು ಮಾತಾಡುವಾಗ ಯಾರೂ ಬರಕೂಡದು. ತಪ್ಪಿ ಬಂದವರಿಗೆ ಶಿರಚ್ಛೇದ ಶಿಕ್ಷೆ ವಿಧಿಸಬೇಕು" ಎಂದು ಹೇಳಿದನು. ರಾಮನು ಮರುಮಾತಾಡದೆ ಅದಕ್ಕೆ ಒಪ್ಪಿ, ಲಕ್ಷ್ಮಣನನ್ನು ಕರೆದು ಆ ಸಂಗತಿಯನ್ನು ಹೇಳಿ, ಅವನನ್ನೇ ದ್ವಾರದಲ್ಲಿ ಕಾವಲಿಗಿರಿಸಿದನು. ಆಮೇಲೆ ರಾಮನು ಯಮನೊಂದಿಗೆ ರಹಸ್ಯ ಮಂದಿರದಲ್ಲಿ ಕುಳಿತುಕೊಂಡು ಯಮನು ಹೇಳುವುದನ್ನು ಕೇಳಿದನು.

"ರಾಮಾ, ನೀನು ಮಹಾವಿಷ್ಣುವಾಗಿರುವಿ. ನಿನ್ನ ಅವತಾರದ ಉದ್ದೇಶವು ಸಮಾಪ್ತಿಯಾಯಿತು. ಸೀತೆ ಲಕ್ಷ್ಮೀದೇವಿಯಾಗಿ, ಅವಳ ತೌರುಮನೆಯಾದ ಕ್ಷೀರ ಸಾಗರದಲ್ಲಿ ನಿನ್ನನ್ನು ನಿರೀಕ್ಷಿಸಿಕೊಂಡಿದ್ದಾಳೆ. ಆದಿಶೇಷನೂ, ಶಂಖಚಕ್ರಗಳಾದ ನಿನ್ನ ತಮ್ಮಂದಿರೊಂದಿಗೆ ನೀನು ಕ್ಷೀರಸಾಗರವನ್ನು ಸೇರಿಕೊಳ್ಳಬೇಕು. ಇದನ್ನು ತಿಳಿಸುವ ಕಾಲ ಬಂದುದರಿಂದಲೇ ಬಂದೆ" ಎಂದನು ಯಮ.

ಅದೇ ಸಮಯದಲ್ಲಿ ದೂರ್ವಾಸಮುನಿ ಅತ್ಯವಸರವಾಗಿ ಬಂದು ಲಕ್ಷ್ಮಣನೊಡನೆ, "ನನಗೆ ಈಗಲೇ ರಾಮನನ್ನು ನೋಡಬೇಕಾಗಿದೆ. ತಡೆದರೆ ರಘುವಂಶವೇ ನಾಶ! ಶಪಿಸುತ್ತೇನೆ!" ಎಂದನು.

ವಂಶನಾಶಕ್ಕೆ ಬದಲಾಗಿ ತನ್ನ ಶಿರಚ್ಛೇದವೇ ಒಳ್ಳೆಯದೆಂದುಕೊಂಡು ಲಕ್ಷ್ಮಣನು, ದೂರ್ವಾಸನು ಬಂದ ವಿಷಯವನ್ನು ತಿಳಿಸಲು ರಾಮನ ಬಳಿಗೆ ಹೋದನು. ಅವನನ್ನು ನೋಡಿದ ಕೂಡಲೇ ಯಮನು ಅಂತರ್ಧಾನನಾದನು.

ರಾಮನು ಯಮನಿಗೆ ಮಾತು ಕೊಟ್ಟ ಪ್ರಕಾರ ಲಕ್ಷ್ಮಣನಿಗೆ ಶಿರಚ್ಛೇದ ಶಿಕ್ಷೆಯನ್ನು ವಿಧಿಸಿ, ದೂರ್ವಾಸನೊಂದಿಗೆ ಮಾತಾಡಿ ಕಳುಹಿಸಿದನು. ಲಕ್ಷ್ಮಣನ ಶಿಕ್ಷೆಯನ್ನು ತಿಳಿದು ಹಿರಿಯರು ಆಲೋಚನೆ ಮಾಡಿ, ದೇಶಬಹಿಷ್ಕರಣ ಶಿಕ್ಷೆ ಕೂಡಾ ಶಿರಚ್ಛೇದಕ್ಕೆ ಸಮಾನವೆಂದು ನಿರ್ಣಯಿಸಿ, ಲಕ್ಷ್ಮಣನನ್ನು ದೇಶದಿಂದ ಹೊರಗೆ ಕಳುಹಿಸಿದರೆ ಸರಿಯಾಗುವುದೆಂದು ರಾಮನೊಡನೆ ತಿಳಿಸಿದರು. ಅದರಂತೆ ಲಕ್ಷ್ಮ

45-2

ಣನು ರಾಜನಗರವನ್ನು ಬಿಟ್ಟು, ಅಯೋಧ್ಯೆಯನ್ನು ದಾಟಿ, ಸರಯೂ ನದಿಯೊಳಗೆ ಹೊಕ್ಕು ತನ್ನ ಅವತಾರವನ್ನು ಮುಗಿಸಿ ಮಾಯವಾದನು.

ಹೀಗೆ ಲಕ್ಷ್ಮಣನು ಸರಯೂ ನದಿಯಲ್ಲಿ ಮುಳುಗಿ ಹೋದ ಮೇಲೆ, ರಾಮನು ಭರತಶತ್ರುಘ್ನರಿಗೆ ಎಲ್ಲಾ ವಿಷಯವನ್ನೂ ಹೇಳಿ, ಪಟ್ಟಾಭಿಷೇಕಕ್ಕೆ ಸಿದ್ಧಗೊಳಿಸಲು ಅನುಜ್ಞೆ ಕೊಟ್ಟನು. ಇದ್ದಕ್ಕಿದ್ದ ಹಾಗೆ ಅಯೋಧ್ಯಾನಗರವು ಅಲಂಕಾರವಾಗತೊಡಗಿತು. ಮನೆಗಳೆಲ್ಲಾ ತಳಿರುತೋರಣಗಳಿಂದ ಅಲಂಕೃತವಾದುವು. ಪ್ರತಿಯೊಬ್ಬರ ಮನೆಗೂ ಪಟ್ಟೆವಸ್ತ್ರಗಳೂ, ನಗನಟ್ಟುಗಳೂ, ಅರಸಿನ ಕುಂಕುಮಗಳೂ ಹೋದುವು. ಜನರೆಲ್ಲಾ ಸಂಭ್ರಮಾಶ್ಚರ್ಯಗಳಿಂದ ಉತ್ಸಾಹಿತರಾದರು.


ಬೇಗದಲ್ಲೇ ಬಂದ ಶುಭಮುಹೂರ್ತದಲ್ಲಿ ರಾಮನು ಲವಕುಶರಿಗೆ ಪಟ್ಟಾಭಿಷೇಕ ಮಾಡಿ, ಹನುಮಂತನನ್ನು ಕರೆದು, "ಹನುಮಂತಾ! ನಾನು ಬಹಳ ಕಾಲ ರಾಜ್ಯಪಾಲನೆ ನಿರ್ವಹಿಸಿ ಇನ್ನು ವಿಶ್ರಾಂತಿ ಪಡೆಯಲಿದ್ದೇನೆ. ಕುಶಲವರಿಗೆ ನೀನೇ ಮುಖ್ಯ ಆಧಾರ ಸ್ತಂಭನಾಗಿರಬೇಕು. ರಾಜ್ಯರಕ್ಷಣೆಯ ಭಾರವನ್ನು ನಿನ್ನ ಮೇಲೆಯೇ ಹಾಕಿದ್ದೇನೆಂದು ತಿಳಿ. ಲವಕುಶರನ್ನೇ ನಾನೆಂದು ನೋಡಿಕೋ. ಅವರಿಗೆಲ್ಲಾ ತಿಳಿಸಿ ಹೇಳಿ ಉತ್ತಮ ಪರಿಪಾಲಕರಾಗುವಂತೆ ತಿದ್ದಬೇಕಾದುದು ನಿನ್ನ ಕರ್ತವ್ಯ" ಎಂದನು.

ಅನಂತರ ರಾಮನು ಸರಯೂ ನದಿಯಕಡೆಗೆ ಹೊರಡಲು ಅಣಿಯಾಗಿ ದೊಡ್ಡ ಮೆರವಣಿಗೆಗೆ ಏರ್ಪಾಡು ಮಾಡಿದನು. ಆದಿನ ಉದಯಕಾಲವೇ ಮಹೋದಯ ಪರ್ವದಿನವೆನಿಸಿತು. ಮಂಗಳ ಧ್ವನಿಗಳು ಮಾರ್ಮೊಳಗ ತೊಡಗಿದುವು. ಬ್ರಾಹ್ಮಣರು ವೇದಘೋಷ ಮಾಡುತ್ತಿದ್ದರು. "ಶ್ರೀರಾಮಜಯ" ನಾದವು ಬಾನಿಗೇರಿತು. ರಾಮನು ಸರಯೂ ನದಿಗೆ ಪಾದಚಾರಿಯಾಗಿ ನಡೆದನು. ಭರತನು ಅವನಿಗೆ



ಬಿಳಿಗೊಡೆಯನ್ನು ಹಿಡಿದನು. ಶತ್ರುಘ್ನನು ಚಾಮರ ಬೀಸುತ್ತಾ ಸಾಗಿದನು. ಪುಣ್ಯಾಂಗನೆಯರು ಉಪ್ಪರಿಗೆಗಳ ಮೇಲೆ ನಿಂತು ಪುಷ್ಪಾಂಜಲಿ ಚೆಲ್ಲುತ್ತಿದ್ದರು. ಹನುಮಂತನು ರಾಮನ ಹಿಂದೆ ಜಡಮಂದನಂತೆ ಸಪ್ಪೆಯಾಗಿ ಅಡಿಮೇಲಡಿಯಿಟ್ಟು ನಡೆಯುತ್ತಿದ್ದನು. ಇದೆಲ್ಲಾ ಏನು? ಏಕೆ? ರಾಮನು ಸರಯೂ ನದಿಗೆ ಹೋಗುತ್ತಿರುವುದು ಯಾವ ಕಾರ್ಯಕ್ಕಾಗಿ? ಇದೊಂದೂ ತಿಳಿಯದ ಪ್ರಜೆಗಳು ಪರಿಪರಿಯಾಗಿ ತಮ್ಮೊಳಗೆ ಮಾತಾಡಿಕೊಳ್ಳುತ್ತ ಅನುಸರಿಸಿಕೊಂಡಿದ್ದರು. ಹೀಗೆ ಆ ದೊಡ್ಡ ಮೆರವಣಿಗೆ ಸರಯೂ ನದಿಯ ತೀರವನ್ನು ತಲಪಿತು.

ರಾಮನು ಸರಯೂ ನದಿಯ ನೀರಿನಲ್ಲಿ ಪಾದಗಳನ್ನು ಇಳಿಸಿದನು. ಭರತನು ಶಂಖವನ್ನು ಊದಿದನು. ಶತ್ರುಘ್ನನು ಕರ್ಪೂರಾರತಿ ಬೆಳಗಿಸಿ ರಾಮನ ಸುತ್ತಲೂ ಚಕ್ರದಂತೆ ತಿರುಗಿಸಿದನು. ಬ್ರಾಹ್ಮಣರು ಸಾಮವೇದವನ್ನು ಉಚ್ಚಕಂಠದಿಂದ



ಹಾಡಿದರು. ಮಂಗಳವಾದ್ಯಗಳಿಂದ ದಿಕ್ಕುಗಳು ತುಂಬಿಕೊಂಡುವು. ಭರತ ಶತ್ರುಘ್ನರು ಕೂಡ ನದಿಯಲ್ಲಿಳಿದು ರಾಮನ ಭುಜಗಳ ಹಿಂದೆ ಎರಡು ಬದಿಯಲ್ಲಿ ನಿಂತರು.

ರಾಮನು ಮೆಲ್ಲನೆ ನದಿಯಲ್ಲಿ ಮುಂದೆ ಮುಂದೆ ನಡೆಯುತ್ತ ಎದೆಮಟ ಆಳದಲ್ಲಿಳಿದು ನಿಂತು, ಬಲದ ಕೈಯನ್ನೆತ್ತಿ ಅಂಗೈಯನ್ನು ಅಭಯ ಮುದ್ರೆ ಮಾಡಿ ತೋರಿಸಿ ಜನರಿಗೆ ಆಶೀರ್ವಾದ ಮಾಡುತ್ತ, "ಎಲ್ಲರೂ ಸಂತೋಷದಿಂದ ಮನೆಗೆ ಹೋಗಿರಿ. ಸುಖಸಂತೋಷಗಳಿಂದ ಅಭಿವೃದ್ಧಿಗೊಂಡು ಬಾಳಿರಿ, ಚಿರಕಾಲಬಾಳಿಕೊಂಡಿರಲಿ ಪ್ರಪಂಚ!" ಎಂದು ಗಂಭೀರ ಧ್ವನಿಯಿಂದ ಹೇಳಿದನು.

ಸರಯೂ ನದಿಯ ತೀರದುದ್ದಕ್ಕೂ ಪ್ರಜೆಗಳು ಚಿತ್ರ ಪ್ರತಿಮೆಗಳಂತೆ ನಿಂತುಕೊಂಡು ನೋಡುತ್ತಿದ್ದರು. ಲವಕುಶರ ಬದಿಯಲ್ಲಿ ನಿಂತಿದ್ದ ಹನುಮಂತನು ಚಡಪಡಿಸುತ್ತ, "ರಾಮಾ! ನಿಲ್ಲು! ತಡೆ! ನಿನಗಿಂತ ಮೊದಲು ನಾನೇ ನದಿಯಲ್ಲಿ ದೇಹ ಬಿಡುತ್ತೇನೆ. ನೀನಿಲ್ಲದ ಮೇಲೆ ನಾನೇಕೆ ಭೂಮಿಯಲ್ಲಿರಲೀ?" ಎಂದು ಕೂಗಿ ಬೇಗಬೇಗನೇ ನದಿಗಿಳಿಯಲು ನೋಡಿದನು.

ಆಗ ರಾಮನು ಮೂಗಿನ ಮೇಲೆ ಬೆರಳಿಟ್ಟು ಅವನನ್ನು ತಡೆದು, "ಹನುಮಾ! ನೀನು ಚಿರಂಜೀವಿ! ನಾನು ಹೇಳಿದುದನ್ನೆಲ್ಲಾ ಮರೆತುಬಿಟ್ಟೆಯಾ? ಲವಕುಶರನ್ನು ಕರೆದುಕೊಂಡು ಇಲ್ಲಿಂದ ನಡೆ! ಬೇಗನೇ ಹೋಗಿ ಬಿಡು!" ಎಂದು ಒತ್ತಿ ಆಜ್ಞೆ ಮಾಡಿದನು. ಹನುಮಂತನ ಭ್ರಮೆಯು ಮಂಜು ಸರ್ರನೆ ಇಳಿಯಿತು. ತಿಳಿಮನದಿಂದ ಲವಕುಶರನ್ನು ಕರೆದುಕೊಂಡು ಅಯೋಧ್ಯೆಗೆ ಹೊರಟನು.

ಸರಯೂ ನದಿಯ ಆಳದೊಳಗೆ ರಾಮನು ಮಾಯವಾದನು. ಅವನೊಂದಿಗೇ ಭರತಶತ್ರುಘ್ನರು ಕೂಡಾ ನದಿಯಲ್ಲಿ ಲೀನರಾದರು. ರಾಮಾವತಾರವು ಮುಗಿಯಿತು.

ಕ್ಷೀರಸಾಗರದಲ್ಲಿ ಲಕ್ಷ್ಮಣನು ಮುಂದಾಗಿ ಹೋಗಿ ಆದಿಶೇಷನಾಗಿ ಹಾಸಿಗೆಯಂತೆ ಅಳವಡಿಸಿಕೊಂಡಿದ್ದನು. ರಸಾತಲದಿಂದ ಬಂದ ಸೀತೆ ಮಹಾಲಕ್ಷ್ಮಿಯಾಗಿ ಬಂದು ಕುಳಿತುಕೊಂಡು ಕಾಯುತ್ತಿದ್ದಳು. ರಾಮನು ವಿಷ್ಣುವಾಗಿ ಶೇಷತಲ್ಪದ ಮೇಲೆ ಬಂದೊರಗಿದನು. ಭರತಶತ್ರುಘ್ನರು ಶಂಖ ಚಕ್ರಗಳಾಗಿ ಅವನ ಕೈಗಳನ್ನು ಸೇರಿದರು. ಲಕ್ಷ್ಮಿ ವಿಷ್ಣುವಿನ ಪಾದಕಮಲಗಳ ಮೇಲೆ ತನ್ನ ಕರಕಮಲ ಮುಖಕಮಲಗಳನ್ನು ಇರಿಸಿದಳು.

* * *

ಕುಶಲವರು ರಾಮನ ಮೇಲು ಪಂಕ್ತಿಯನ್ನು ನೋಡಿಕೊಂಡು ಸುಗಮವಾಗಿ ರಾಜ್ಯವಾಳಲು ತೊಡಗಿ, ಒಮ್ಮಿಂದೊಮ್ಮೆಗೆ ತಾಯಿಯನ್ನೂ ತಂದೆಯನ್ನೂ ನೆನೆದು ಕಣ್ಣೀರು ಸುರಿಸುತ್ತ ಬಿಕ್ಕಿಬಿಕ್ಕಿ ಅಳತೊಡಗಿದರು. ಹನುಮಂತನು ಅವರಿಗೆ ಸಮಾ

ಧಾನ ಹೇಳುತ್ತ, "ರಘುವಂಶ ದೀಪಕರಾದ ನೀವು ರಾಮನ ಹೆಸರು ಉಳಿಯುವಂತೆ ರಾಜ್ಯಪಾಲನೆ ಮಾಡಬೇಕೇ ಹೊರತು, ಹೀಗೆ ದಿಗಿಲು ಬೀಳ ಬಹುದೇ ? ನಿಮಗೆ ನೋಡಬೇಕೆಂದಾಗಲೆಲ್ಲಾ ಸೀತಾ ರಾಮರನ್ನು ನಾನು ತೋರಿಸುತ್ತೇನೆ. ಅವರು ನನ್ನ ಎದೆಯೊಳಗೆ ಎಷ್ಟೊಂದು ಸಂತೋಷದಲ್ಲಿದ್ದಾ ರೆಂದು ನೋಡಿರಿ!" ಎನ್ನುತ್ತ ತನ್ನ ಎದೆಯನ್ನು ತೆರೆದು ತೋರಿಸಿದನು. ಅಲ್ಲಿ ಕಿರುನಗುವಿ ನೊಂದಿಗೆ ಪ್ರೇಮಾವಲೋಕನದಿಂದ ಆಶೀರ್ವದಿಸು ತ್ತಿರುವ ತಮ್ಮ ತಾಯಿ ತಂದೆಯರನ್ನು ನೋಡಿ ಕುಶಲವರು ತುಂಬ ಸಂತೋಷಪಟ್ಟರು.

ಯುವಕರಾದ ಕುಶಲವರು ಬಹಳ ಚೆನ್ನಾಗಿ ರಾಜ್ಯಪಾಲನೆ ಮಾಡಿಕೊಂಡಿದ್ದರು. ಪೂರ್ವಭಾಗ ದಲ್ಲಿ ಮಣಿಪುರವನ್ನು ರಾಜಧಾನಿಯನ್ನಾಗಿ ಮಾಡಿ ಶುಭಳೊಂದಿಗೆ ಕುಶನೂ, ಪಶ್ಚಿಮ ಭಾಗದಲ್ಲಿ ಮಥುರಾ ನಗರವನ್ನು ರಾಜಧಾನಿಯನ್ನಾಗಿ ಮಾಡಿ ಶೋಭಳೊಂದಿಗೆ ಲವನೂ, ಆಗಾಗ ಅಲ್ಲಿಗೆ ಹೋಗಿ ಕೆಲವು ಕಾಲವಿದ್ದು ಎಲ್ಲಾ ಕಡೆಯಲ್ಲಿ ಶಾಂತಿ ಭದ್ರತೆ ಗಳನ್ನು ನೋಡಿಕೊಳ್ಳುತ್ತ ರಾಜ್ಯಪಾಲನೆ ಮಾಡು ತ್ತಿದ್ದರು. ಉಳಿದ ಕಾಲಗಳಲ್ಲಿ ಇಬ್ಬರೂ ಅಯೋಧ್ಯೆ ಯಲ್ಲಿರುತ್ತಿದ್ದರು.

ಹೀಗಿರುವಾಗ ದೇಶಕ್ಕೆ ದೊಡ್ಡದೊಂದು ಆಪ ದವು ಮುಸುಕಿತು. ರಾಕ್ಷಸರಿಗಿಂತಲೂ ಕ್ರೂರಾತಿ ಕ್ರೂರನಾದ ಘೋರಕಲಿ ಎಂಬ ನರರೂಪರಾಕ್ಷಸನು, ಶಕರು, ಕುಷಾಣರು ಮೊದಲಾದ ಪಾಷಾಣರಂತಹ ಗುಡ್ಡಗಾಡು ಜಾತಿಯ ದುಷ್ಟರೊಂದಿಗೆ ಕೂಡಿ ಕೊಂಡು ದಂಡಯಾತ್ರೆ ಹೊರಟು ವಾಯವ್ಯ ದಿಕ್ಕಿ ನಿಂದ ಮುಗಿಬಿದ್ದನು. ಅವರೆಲ್ಲ ಪಶ್ಚಿಮೋತ್ತರ ಭಾಗಗಳ ಮೇಲೆ ಬಿದ್ದು ಕಲಹ ಪ್ರಾರಂಭಿಸಿದರು.

ಆ ಘೋರಕಲಿಗೆ ಜತೆಯಾಗಿ ಪಶ್ಚಿಮ ದಿಕ್ಕಿನಿಂದ ಕಾಲಕಲಿ ಎಂಬ ಮತ್ತೊಬ್ಬ ನರರೂಪರಾಕ್ಷಸನು



ದೊಡ್ಡ ನೌಕಾಬಲದಿಂದ ಕಾಲಕೇಯರೆಂಬ ಸಮುದ್ರ ರಾಕ್ಷಸರ ಸೇನೆಯೊಂದಿಗೆ, ಸಮುದ್ರಮಾರ್ಗವಾಗಿ ಬಂದು ದೇಶದ ಪ್ರಜೆಗಳ ಮೇಲೆ ಬಿದ್ದನು. ಈ ಕಾಲಕಲಿಯ ಆಜ್ಞೆಯ ಪ್ರಕಾರ ಕಾಲಕೇಯರು ಕಂಡ ಕಂಡಲ್ಲಿ ಕೊಳ್ಳೆಹೊಡೆಯುತ್ತ, ಅಪಾರವಾದ ಧನ ವನ್ನೂ, ಧಾನ್ಯವನ್ನೂ ಅವರ ಸ್ಥಾನವಾದ ಕಾಲ ಕೂಟದ್ವೀಪಕ್ಕೆ ಕೊಂಡೊಯ್ಯುತ್ತಿದ್ದರು.

ಪ್ರಜೆಗಳೆಲ್ಲ ಭೀತಿಯಿಂದ ಆರ್ತನಾದ ಮಾಡುತ್ತ ಅವರವರ ಧನವನ್ನೂ ಪ್ರಾಣವನ್ನೂ ಕಾಪಾಡಿ ಕೊಳ್ಳಲು ದಾರಿ ಹುಡುಕಿಕೊಂಡಿದ್ದರು. ಆಗ ಹನು ಮಂತನು ಅವರ ನಡುವೆ ಬಂದು, ಯಾರ ಪಾಡನ್ನು ಅವರು ನೋಡಿಕೊಳ್ಳುವುದು ಸರಿಯಲ್ಲವೆಂದೂ ಎಲ್ಲರೂ ಒಗ್ಗಟ್ಟಾಗಿ ದೇಶರಕ್ಷಣೆ ಮಾಡಬೇಕೆಂದೂ, ಉತ್ತೇಜನಗೊಳಿಸುತ್ತ "ರಾಮಸೇನೆ" ಎಂಬ ಹೆಸರಿ ನಿಂದ ಪ್ರಜೆಗಳಲ್ಲಿ ವೀರರಾಗಿರುವವರಿಂದ ಒಂದು ಸೇನಾಸಮೂಹವನ್ನು ತಯಾರಿಸತೊಡಗಿದನು.

45-65



ರಾಮನು ಪಾಲಿಸಿದ ರಾಮರಾಜ್ಯದಲ್ಲಿ ದೇಶದಲ್ಲೆಲ್ಲಾ ರಾಮಸೇನೆಯೊಂದು ಇದ್ದುಬಿಟ್ಟರೆ ಸಾಧಿಸಲಾಗದುದು ಯಾವುದೂ ಇಲ್ಲವೆಂದು ಹನುಮಂತನು ಎಲ್ಲೆಲ್ಲಿಯೂ ಪ್ರಚಾರಮಾಡಿದನು. ಎಲ್ಲಿ ನೋಡಿದರೂ ಅಂತಹ ರಾಮಸೇನೆಗಳಿದ್ದರೆ, ಯಾವ ಉಪದ್ರಗಳೂ ಭಯವೂ ಬರಲಾರದೆಂದು ಎಲ್ಲರನ್ನೂ ಹುರುಡಿಸಿದನು. ಇಂತಹ ರಾಮಸೇನೆ ದುಷ್ಟರಿಗೆ ಸರಿಸಾಟಿಯಾಗಿ ನಿಂತು ಇದಿರಿಸಿ ಹೊಡೆದು ಓಡಿಸತೊಡಗಿತು. ಹೀಗೆ ದೇಶದ ಪ್ರಜೆಗಳೆಲ್ಲಾ ಯೋಧರಾಗಿ ಹನುಮಂತನ ನಾಯಕತ್ವದಲ್ಲಿ ಘೋರಕಲಿ, ಕಾಲಕಲಿಗಳೊಂದಿಗೆ ಯುದ್ಧಕ್ಕೆ ತೊಡಗಿದರು. ಆಗ ಹನುಮಂತನು ಎರಡು ಕಡೆಗಳ ಯುದ್ಧರಂಗಗಳಲ್ಲಿಯೂ, ಸಾವಿರ ರೂಪಗಳಿಂದ ಕಂಡುಬಂದನು. ಎಲ್ಲಿ ನೋಡಿದರೂ ಹನುಮಂತನೇ ಮುಂದಾಳಾಗಿದ್ದನು. ಇದರಿಂದ ಅವನಿಗೆ ಸಹಸ್ರ ರೂಪಾಂಜನೇಯನೆಂಬ ಹೆಸರು ಬಂತು.

ಕುಶನು ಮಹಾಯುದ್ಧವನ್ನು ಪ್ರಾರಂಭಿಸಿ ಘೋರಕಲಿಯನ್ನು ಆಗ್ನೇಯಾಸ್ತ್ರದಿಂದ ಕೊಂದನು. ರಾಮಸೇನೆ ಅವನ ಸೇನೆಗಳನ್ನೆಲ್ಲಾ ಬೆಂಬತ್ತಿ ಕೊಂದುಹಾಕಿತು. ಬದುಕಿದ ದುಷ್ಟರು ಓಡಿಹೋದರು.

ಲವನು ಕಾಲಕಲಿಯೊಂದಿಗೆ ಘೋರಯುದ್ಧವನ್ನು ಮಾಡಿ, ವಾರಣಾಸ್ತ್ರದಿಂದ ಅವನನ್ನು ಕೊಂದುಹಾಕಿದನು. ರಾಮಸೇನೆ ಉಳಿದ ಕಾಲಕೇಯರನ್ನು ಸಿಕ್ಕಸಿಕ್ಕಲ್ಲಿ ಹತಮಾಡಿತು. ಹನುಮಂತನು ತನ್ನ ಬಾಲದಿಂದ ಅವರ ನೌಕೆಗಳನ್ನು ಸುತ್ತಿ ಎತ್ತಿ ಸಮುದ್ರದೊಳಗೆ ಮುಳುಗಿಸಿ ಹಾಕಿದನು. ಆದುದರಿಂದ ಕಾಲಕೇಯರು ಒಬ್ಬರೂ ಉಳಿಯದೆ ನೌಕೆಗಳೊಂದಿಗೆ ಸಮುದ್ರತಳ ಸೇರಿದರು.

ಎರಡು ಘನವಿಜಯಗಳನ್ನು ಸಾಧಿಸಿದ ಪ್ರಜೆಗಳೊಂದಿಗೆ ಹನುಮಂತನು, "ನೋಡಿದಿರಾ, ರಾಮನು ಆಳಿದ ಈ ಭೂಮಿಯಲ್ಲಿ ಪ್ರತಿ ಪೌರನೂ ಲವಕುಶರಿಗೆ ಸೋದರನೇ. ಸೋದರರೆಲ್ಲಾ ಸರಿಸಮಾನರಾಗಿ, ರಾಮಸೇನೆಯಾಗಿರುತ್ತ, ಯಾರೊಬ್ಬರಿಗೆ ಏನು ಕಷ್ಟ ಬಂದರೂ ಅದು ತಮ್ಮದೆಂದೇ ಭಾವಿಸಿ ತೊಲಗಿಸಬೇಕು. ಅದುವೇ ನಿಜವಾದ ದೇಶಭಕ್ತಿ." ಎಂದು ಉದ್ಬೋಧನೆ ಮಾಡಿ, ರಾಜ್ಯವು ಸುರಕ್ಷಿತವಾಗಿರುವಂತೆ ಬಲಪಡಿಸಿದನು.

ಈ ವಿಜಯದ ಚಿಹ್ನೆಗಳಾಗಿ ಹನುಮಂತನ ಪ್ರೋತ್ಸಾಹದಿಂದ ಕುಶನ ಹೆಸರಿನಲ್ಲಿ "ಕುಶಾವತಿ" ಎಂಬ ನಗರವನ್ನೂ, ಲವನ ಹೆಸರಿನಲ್ಲಿ "ಲವಂತಿಕ" ಎಂಬ ನಗರವನ್ನೂ ನಿರ್ಮಿಸಲಾಯಿತು.

ಆ ಮೇಲೆ ಲವಕುಶರು ಯಾರ ಭಯವೂ ದಾಳಿಯೂ ಇಲ್ಲದೆ ರಾಜ್ಯಪಾಲನೆ ಮಾಡಿಕೊಂಡಿದ್ದರು. ಅವರ ಬಲಪರಾಕ್ರಮಗಳ ಮೇಲೆ ಹನುಮಂತನಿಗೆ ಒಳ್ಳೆಯ ನಂಬುಗೆಯುಂಟಾಯಿತು. ಅವರು ರಾಮರಾಜ್ಯದ ಹೆಸರನ್ನು ಉಳಿಸ ತಕ್ಕವರೆಂಬುದರಲ್ಲಿ ಅವನಿಗೇನೂ ಸಂದೇಹವಿರಲಿಲ್ಲ. ಇನ್ನು



ತಾನು ಗಂಧಮಾದನ ಪರ್ವತಕ್ಕೆ ಹೋಗಬಹುದೆಂದು ನಿರ್ಧರಿಸಿ, ತನ್ನ ನಿಶ್ಚಯವನ್ನು ಲವಕುಶರಿಗೆ ಹೇಳಿದನು.

ಕುಶಲವರು ದೊಡ್ಡ ಉತ್ಸವದೊಂದಿಗೆ ತಮ್ಮ ಗುರು ಹನುಮಂತನನ್ನು ಗಂಧಮಾದನ ಪರ್ವತದ ವರೆಗೆ ಕಳುಹಿಸಿಕೊಟ್ಟರು.

ಚಿರಂಜೀವಿಯಾದ ಹನುಮಂತನಿಂದ ರಘುವಂಶದ ಕೀರ್ತಿ ಪ್ರವರ್ಧಮಾನವಾಗುತ್ತಿರಲೆಂದು ಲವಕುಶರು ತಮ್ಮ ಆಶಯವನ್ನು ಘೋಷಿಸಿದರು. ತನ್ನ ಮುಂದೆ ನಿಂತ ಪ್ರಜಾ ಸಮೂಹವನ್ನು ನೋಡಿ ಹನುಮಂತನು,

"ನೀವೆಲ್ಲರೂ ರಾಮಸೇವಕರೆಂಬ ಭಾವನೆಯಲ್ಲಿ ರಾಮಸೇನೆಯಾಗಿ ಜಾತಿಭೇದವಿಲ್ಲದೆ ಒಗ್ಗಟ್ಟಾಗಿರುವ ವರೆಗೂ ನಿಮಗೇನೂ ಕೊರತೆಯಿಲ್ಲ. ಭಯವಿಲ್ಲ. ರಾಮರಾಜ್ಯದಲ್ಲಿ ಎಲ್ಲರೂ ಲವಕುಶರೇ" ಎಂದು ಹೇಳಿ ಗಂಧಮಾದನ ಪರ್ವತದ ಮೇಲೇರಿದನು.

ಪ್ರಜೆಗಳು ಹನುಮಂತನಿಗೆ ಕೈಗಳನ್ನೆತ್ತಿ ನಮಸ್ಕಾರ ಮಾಡುತ್ತ, "ವೀರ ಹನುಮಾನ್ ಜಯ ಜಯ!" ಎಂದು ಜಯಘೋಷ ಮಾಡುತ್ತಿರಲು, ಹನುಮಂತನು ಪರ್ವತದ ಮೇಲೆ ಏರುತ್ತಾ ಸಣ್ಣಗಾಗಿ ಕಾಣದೆಹೋದನು. ಆಮೇಲೆ ಎಲ್ಲರೂ ತಿಳಿಮನದಿಂದ ಹಿಂದಿರುಗಿದರು.

ಕುಶಲವರೂ ಅವರ ಸಂತತಿಯವರೂ ರಾಮರಾಜ್ಯದ ಹೆಸರು ಉಜ್ವಲಿಸುವಂತೆ ಚಿರಕಾಲ ರಾಜ್ಯ ಪಾಲನೆ ಮಾಡುತ್ತಿದ್ದರು. ಹನುಮಂತನು ಗಂಧಮಾಧನ ಪರ್ವತದ ಮೇಲೆ ತಪಸ್ಸಿನಲ್ಲೇ ಮಗ್ನನಾಗಿದ್ದನು.

ಎಷ್ಟೋ ಕಾಲದಿಂದ ಧ್ಯಾನಮಗ್ನನಾಗಿದ್ದ ಹನುಮಂತನಿಗೆ ಎಂದೋ ಒಂದು ಸಾರಿ ಧ್ಯಾನ ಭಂಗವಾಗಿ ಕಣ್ಣು ತೆರೆದನು. ಅವನಿಗೆ ಆಶ್ಚರ್ಯ. ಸುತ್ತುಮುತ್ತಲಿನ ಪರ್ವತಗಳು ಸಣ್ಣ ಸಣ್ಣ ದಿಣ್ಣೆಗಳಂತೆ ಕಾಣುತ್ತಿವೆ. ಮಹಾ ವೃಕ್ಷಗಳೆಲ್ಲ ಚಿಕ್ಕಪುಟ್ಟ ಗಿಡಗಳಂತಿವೆ. ಆನೆಗಳಂತಹ ಮೃಗಗಳು ಇಲಿಗಳಂತೆ ಕಾಣುತ್ತಿವೆ. ಆಕಾಶದಲ್ಲಿ ಸಪ್ತರ್ಷಿ ಮಂಡಲವು ಧ್ರುವ ನಕ್ಷತ್ರಕ್ಕೆ ದೂರ ಸಾಗಿ ನಿಂತಿದೆ. ಇದನ್ನೆಲ್ಲಾ ನೋಡಿ ಯುಗವು ಬದಲಾಯಿಸಿತೆಂದು ಹನುಮಂತನಿಗೆ ತಿಳಿಯಿತು.

ಅದೇ ಸಮಯದಲ್ಲಿ ತ್ರಿಕಾಲಜ್ಞಾನಿಯಾದ ನಾರದನು ಅಲ್ಲಿಗೆ ಬಂದು, "ಹನುಮಾನ್, ಈಗ ದ್ವಾಪರ ಯುಗದ ಮೊದಲನೇ ಪಾದ ಪ್ರಾರಂಭವಾಗಿದೆ. ಈ ದ್ವಾಪರ ಯುಗದ ನಾಲ್ಕನೇ ಪಾದದಲ್ಲಿ ನಿನಗೆ ರಾಮನ ದರ್ಶನವಾಗುತ್ತದೆ!" ಎಂದು ಹೇಳಿ ಹೊರಟು ಹೋದನು. ಹನುಮಂತನು ಮತ್ತೆ ತಪಸ್ಸಿಗೆ ಕುಳಿತು ಕಣ್ಣು ಮುಚ್ಚಿದನು.



45-8



ವೀರಹನುಮಾನ್

ತ್ರೇತಾಯುಗವು ಹೊರಟುಹೋಯಿತು. ದ್ವಾಪರ ಯುಗವು ಪ್ರಾರಂಭವಾಗಿ ಕಾಲಚಕ್ರವು ತಿರುಗುತ್ತಿರಲು, ಯದು ವಂಶದಲ್ಲಿ ಕೃಷ್ಣನು ಜನಿಸಿದನು. ಅವನು ದ್ವಾಪರ ಯುಗದ ನಾಯಕನಂತೆ ಮೆರೆಯುತ್ತ ಕಂಸನೇ ಮೊದಲಾದ ದುಷ್ಟರನ್ನು ಸಂಹಾರ ಮಾಡಿ, ದ್ವಾರಕಾನಗರದಲ್ಲಿ ಎಂಟು ಮಂದಿ ರಾಣಿಯರೊಡನೆ ವಿರಾಜಿಸಿಕೊಂಡಿದ್ದನು. ಅವನ ಅಣ್ಣನಾದ ಬಲರಾಮನು ಯಾದವರಿಗೆ ನಾಯಕನಾಗಿ ರಾಜ್ಯ ಪಾಲನೆ ಮಾಡುತ್ತಿದ್ದನು. ಗರುತ್ಮಂತನು ಕೃಷ್ಣನಿಗೆ ವಾಹನವಾಗಿ ದ್ವಾರಕೆಯಲ್ಲೇ ಇದ್ದನು.

ಕೃಷ್ಣನ ಪತ್ನಿಯರಲ್ಲಿ ಸತ್ಯಭಾಮೆ ವೀರಪತ್ನಿ. ಕೃಷ್ಣನು ನರಕಾಸುರನನ್ನು ವಧಿಸಲು ಹೊರಟಾಗ ಸತ್ಯಭಾಮೆಯೂ ಅವನೊಂದಿಗಿದ್ದಳು. ಕೃಷ್ಣನೊಂದಿಗೆ ಯುದ್ಧದಲ್ಲಿ ಸತ್ಯಭಾಮೆ ಕೂಡಾ ಸಹಾಯ ಮಾಡಿದುದರಿಂದಲೇ ನರಕಾಸುರನ ವಧೆಯಾದುದರಿಂದ, ಕೃಷ್ಣನ ಅಷ್ಟಮಹಿಷಿಯರಲ್ಲಿ ತಾನೇ ಮೇಲಾದವಳೆಂಬ ಗರ್ವ ಸತ್ಯಭಾಮೆಯಲ್ಲಿತ್ತು.

ಒಂದು ದಿನ ನಾರದನು ದೇವಲೋಕದಿಂದ ದ್ವಾರಕೆಗೆ ಬರುವಾಗ ಅಪೂರ್ವವಾದ ಪಾರಿಜಾತ ಪುಷ್ಪವನ್ನು ತಂದು ರುಕ್ಮಿಣಿಗೆ ಕೊಟ್ಟನು. ಕೃಷ್ಣನ ನಿಜವಾದ ಅರ್ಧಾಂಗಿನಿಯಂತೆ ತಾನಿರುವಾಗ ತನ್ನ ಸವತಿ ರುಕ್ಮಿಣಿಗೆ ಅಪೂರ್ವ ಪುಷ್ಪವನ್ನು ಕಾಣಿಕೆ ಕೊಡುವುದೆಂದರೇನು ? ಎಂದು ಸತ್ಯಭಾಮೆಗೆ ಕೋಪ ಬಂತು.

ಅವಳ ಕೋಪವನ್ನು ತಣಿಸಲಿಕ್ಕಾಗಿ ಕೃಷ್ಣನು ಸತ್ಯಭಾಮೆಯೊಂದಿಗೆ ಗರುತ್ಮಂತನ ಮೇಲೇರಿಕೊಂಡು ದೇವಲೋಕಕ್ಕೆ ಹೋಗಿ ಪಾರಿಜಾತದ ವೃಕ್ಷವನ್ನೇ ಕಿತ್ತುಕೊಂಡು ಹಿಂದಿರುಗಿದನು.

ಆಗ ಇಂದ್ರನಿಗೆ ಕೋಪ ಬಂದು, ತನ್ನ ವಜ್ರಾಯುಧವನ್ನು ಗರುಡವಾಹನದ ಮೇಲೆ ಬೀಸಿ ಹೊಡೆದನು. ಗರುತ್ಮಂತನು ಆ ವಜ್ರಾಯುಧವನ್ನು ತನ್ನ ರೆಕ್ಕೆಗಳಿಂದ ಹೊಡೆದು ದೂರ ಬೀಸಿ ಒಗೆದನು, ಆದರಿಂದ ಗರುತ್ಮಂತನಿಗೂ ತಾನು ಇಂದ್ರನಿಗಿಂತ ಹೆಚ್ಚಿನ ಬಲಿಷ್ಠನೆಂಬ ಗರ್ವ ಉಂಟಾಯಿತು. ದ್ವಾರ



ಕೆಗೆ ಬಂದ ಮೇಲೆ ಸತ್ಯಭಾಮೆ ಪಾರಿಜಾತ ವೃಕ್ಷವನ್ನು ತನ್ನ ವಠಾರದಲ್ಲಿ ನೆಡಿಸಿ ಇನ್ನಿಷ್ಟು ಹೆಮ್ಮೆಯಿಂದ ಬೀಗಿಕೊಂಡಳು.

ಬಲರಾಮನು ಕೂಡಾ ಹೆಚ್ಚಿನ ಬಲವನ್ನು ತೋರಿಸಿ ಗರ್ವಿಷ್ಠನಾದನು. ಮಹಾಬಲಿಷ್ಠರಾದ ಅನೇಕ ಮಂದಿ ದುಷ್ಟರನ್ನು ಬಲರಾಮನು ಕೊಂದಿದ್ದನು. ನರಕಾಸುರನ ಪ್ರಾಣ ಮಿತ್ರನಾದ ದ್ವಿದನೆಂಬ ಬಾಲವಿಲ್ಲದ ನರವಾನರನೊಬ್ಬನು ಅತಿಭಯಂಕರನಾಗಿ ಮುಗಿಬೀಳಲು, ಬಲರಾಮನು ತನ್ನ ಹಲಾಯುಧದಿಂದ ಅವನನ್ನು ಹತ ಮಾಡಿ, ತನ್ನ ಬಲ ಪರಾಕ್ರಮಕ್ಕೆ ಈಡು ಜೋಡಿಲ್ಲವೆಂದು ಗರ್ವಪಡತೊಡಗಿದರು.

ಹೀಗೆ ಸತ್ಯಭಾಮೆ, ಗರುತ್ಮಂತ, ಬಲರಾಮ ಇವರ ಗರ್ವವು ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತಿದ್ದಿತು. ಅದನ್ನೆಲ್ಲ ಗುಣಿಸಿಕೊಂಡು ಕೃಷ್ಣನು ತಲೆದೂಗುತ್ತ, ಸಮಯ ಕಾದುಕೊಂಡಿದ್ದನು.

ಒಂದು ದಿನ ಗರುತ್ಮಂತನು ಒಬ್ಬ ನಾಗಬಾಲನನ್ನು ಕಬಳಿಸಬೇಕೆಂದು ಹಿಡಿಯಲು ಹೋದನು. ಅವನ ತಾಯಿ ಕಾಂಚನೇಲಾ ಎಂಬ ನಾಗಿಣಿಯಾಗಿದ್ದಳು. ಅವಳು ಗಭಾಲನೆ ತನ್ನ ಮಗುವನ್ನು ಎತ್ತಿಕೊಂಡು ಓಡಿದಳು.

ಗರುತ್ಮಂತನು ಅವಳ ಬೆಂಬತ್ತಿಕೊಂಡು ಹೋದನು. "ರಕ್ಷಿಸಿ! ಕಾಪಾಡಿ!" ಎಂದು ಆರ್ತನಾದ ಮಾಡುತ್ತಾ ಓಡುವ ನಾಗಿಣಿಯ ಇದಿರಾಗಿ ನಾರದನು ಬಂದು, "ನಾಗಮ್ಮಾ, ಸೀದಾ ಗಾಂಧಮಾದನಕ್ಕೆ ಹೋಗಿ ರಾಮನಾಮ ಜಪಿಸಿಕೊಂಡಿರುವ ಹನುಮಂತನಿಗೆ ರಾಮರಾಮ ಎನ್ನುತ್ತ ಶರಣಾಗು. ನಿಮ್ಮಿಬ್ಬರನ್ನು ರಕ್ಷಿಸುವವನು ಅವನೊಬ್ಬನೇ. ಬೇಗ ಹೋಗು!" ಎಂದು ದಾರಿ ತೋರಿಸಿ ತನ್ನ ದಾರಿ ಹಿಡಿದು ಹೋದನು.

ನಾಗಿಣಿ ಕಾಂಚನೇಲಾ ತನ್ನ ಮಗನೊಂದಿಗೆ ರೊಯ್ಯನೆ ಹೋಗಿ ಗಂಧಮಾದನದಲ್ಲಿ ತಪಸ್ಸಿನಲ್ಲಿರುವ ಹನುಮಂತನ ಮುಂದೆ, ಶರಣು ಬಿದ್ದು "ರಕ್ಷಿಸು! ಹನುಮಾ! ರಾಮ! ರಾಮಾ!" ಎಂದು ಕೂಗಿದಳು. ಹನುಮಂತನು ಕಣ್ಣು ಬಿಡಿಸಿ, "ಹೆದರಬೇಡ! ನನ್ನ ಆಶ್ರಯದಲ್ಲಿ ನಿರ್ಭಯವಾಗಿರು" ಎಂದು ಅವಳಿಗೆ ಅಭಯವಿತ್ತನು.

ಗರುತ್ಮಂತನು ಅಲ್ಲಿಗೆ ಬಂದು ಆ ತಾಯಿಮಗಂದಿರನ್ನು ಹಿಡಿಯಲು ಹೋಗಲು, ಹನುಮಂತನು, "ಓ ಪಕ್ಷೀಂದ್ರಾ, ನಿನಗೆ ಹಸಿವಾಗಿದ್ದರೆ ನನ್ನನ್ನು ತಿವಿದು ತಿನ್ನು!" ಎಂದನು.

"ನಾಗ ಜಾತಿಯೇ ನನ್ನ ಆಹಾರ. ನೀನೊಬ್ಬ ಕೋತಿರಾಯ. ನನ್ನ ಆಹಾರ ನೀನಲ್ಲ, ಬಿಡು" ಎಂದು ಗರುಡನು ಹುಂಕರಿಸಿ, ಆಶ್ರಮದೊಳಗೆ ತೂರಲು ನೋಡಿದನು. ಆಗ ಹನುಮಂತನ ಬಾಲವು ಗರುತ್ಮಂತನ ರೆಕ್ಕೆಗಳನ್ನು ಹಿಡಿದು ಬಿಗಿಯಿತು. ಗರುತ್ಮಂತನ ಶಕ್ತಿ ಹುಲ್ಲಿಗೆ ಸಮನಾಯಿತು. ಹನು



ಮಂತನ ಬಾಲವು ಗರುತ್ಮಂತನನ್ನು ಎಳೆದು ಆಕಾಶಕ್ಕೆ ಎತ್ತಿ ಸುಳಿ ಸುಳಿಯಾಗಿ ಬೀಸಿ ಬಹುದೂರ ಎಸೆದು ಬಿಟ್ಟಿತು. ಹಾಗೆ ಎಸೆಯಲ್ಪಟ್ಟ ಗರುತ್ಮಂತನು ಬಾಣ ದೇಟು ತಿಂದ ಚಿಕ್ಕ ಹಕ್ಕಿಯು ಹಾಗೆ ದ್ವಾರಕಾನಗರ ದಲ್ಲಿರುವ ಬಲರಾಮನ ಮುಂದೆಯೇ ಹೋಗಿ ಧೊಪ್ಪನೆ ಬಿದ್ದನು.

ನಾಗಿಣಿ ಕಾಂಚನೇಲಾ ಹನುಮಂತನಿಗೆ ನಮಸ್ಕಾರ ಮಾಡಿ, ತನ್ನ ಕುಮಾರನೊಂದಿಗೆ ಹೊರಟು ಪಾತಾಳ ದಲ್ಲಿರುವ ತನ್ನ ಅಣ್ಣನಾದ ವಾಸುಕಿಯ ಬಳಿಗೆ ಹೋಗಿ ಸೇರಿಕೊಂಡಳು.


ಗರುತ್ಮಂತನು ಬಲರಾಮನೊಂದಿಗೆ ತನಗಾದ ಪರಾಭವವನ್ನು ಕುರಿತು ಹೇಳಿದನು. "ಹಾಗೇನು? ಚಿಂತಿಸಬೇಡ ಗರುಡಾ. ಆ ಕೋತಿಗೆ ತಕ್ಕ ಶಾಸ್ತಿ ಮಾಡದೆ ಬಿಡಲಾರೆ. ನೀನಂದರೇನು, ನಿನ್ನನ್ನು ಕಟ್ಟಿ ಬಿಸುಡುವುದೆಂದರೇನು? ನೀನೀಗಲೇ ಆ ಕೋತಿ ರಾಯನಬಳಿಗೆ ಹೋಗಿ, ಬಲರಾಮದೇವನ ಆಜ್ಞೆ ಯಾಗಿದೆ, ಈಗಲೇ ಬರಬೇಕಂತೆ, ಎಂದು ಹೇಳು!" ಎಂದನು ಗಂಭೀರದಿಂದ.

ಗರುತ್ಮಂತನು ಬಲರಾಮನ ದೂತನಾಗಿ ಹೆದರುತ್ತಾ ಹನುಮಂತನಬಳಿಗೆ ಹೋಗಿ ಹಾಗೆಯೇ ಹೇಳಿದನು. ಹನುಮಂತನು ಅವನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಮುಚ್ಚಿದ ಕಣ್ಣು ತೆರೆಯಲೂ ಇಲ್ಲ. ಗರುತ್ಮಂತನು ರೆಕ್ಕೆಗಳನ್ನು ಬೀಸಿ ಬೀಸಿ, ಕೂಗಿ ಕೂಗಿ ಮತ್ತೆ ಮತ್ತೆ ಅದನ್ನೇ ಹೇಳಿದನು. ಕಡೆಗೆ ತನ್ನ ಮೂಗಿನಿಂದ ಹನುಮಂತ ನನ್ನು ತಿವಿಯಲು ಮುಂದುವರಿದು ಧೈರ್ಯಬಾರದೆ ನಾಲಗೆ ಕಚ್ಚಿಕೊಂಡು, ಸುಮ್ಮನೆ ಹಿಂದಿರುಗಿ ಹೋದನು.

ಆಗ ಬಲರಾಮನೊಂದಿಗೆ ಏನೋ ರಾಜಕೀಯದ ವಿಷಯ ಮಾತಾಡಲು ಬರುವವನಂತೆ ಕೃಷ್ಣನು ಬಂದನು. ಆಗಲೇ ಬಂದ ಗರುತ್ಮಂತನು ಹನು ಮಂತನು ಎಷ್ಟು ಕರೆದರೂ ಮಾತಾಡಲಿಲ್ಲ ಎಂಬ ಸಂಗತಿಯನ್ನು ಹೇಳಿದನು. ಅದನ್ನು ಕೇಳಿ ಕೃಷ್ಣನು, "ಈಗ ಹೋಗಿ ರಾಮನು ಕರೆಯುತ್ತಾನೆಂದು ಹೇಳು. ಯಾಕೆ ಬರುವುದಿಲ್ಲವೋ ನೋಡುತ್ತೇನೆ" ಎಂದು ಗರುತ್ಮಂತನನ್ನು ತಿರುಗಿ ಹನುಮಂತನಬಳಿಗೆ ಕಳುಹಿಸಿದನು.

ಗರುತ್ಮಂತನು ಹಾಗೆ ಹೇಳಿದ ಕೂಡಲೇ ಹನು ಮಂತನು ತಟ್ಟನೆದ್ದು ಗರುತ್ಮಂತನೊಂದಿಗೆ ದ್ವಾರಕೆಗೆ ಬಂದು, "ರಾಮಾ! ನನ್ನ ರಾಮಾ! ಎಲ್ಲಿರುವೆ?" ಎಂದು ಗಟ್ಟಿಯಾಗಿ ಕೂಗಿದನು.

ಬಲರಾಮನು ಎದ್ದು ಅವನ ಮುಂದೆ ಬಂದು, "ರಾಮನಲ್ಲ, ನಾನು ಬಲರಾಮನು. ನೀನು ಮಾಡಿದ ತಪ್ಪಿಗೆ, ಬಲರಾಮದೇವಾಯನಮಃ ಎಂದು ಮೂರು ಸಾರಿ ಹೇಳಿ ನಮಿಸಿದರೆ ಮಾತ್ರ ನಾನು ಕ್ಷಮಿಸುತ್ತೇನೆ" ಎಂದನು ಕಣ್ಣು ತಿರುಗಿಸುತ್ತಾ. ಹನುಮಂತನಿಗೆ ಜರ್ರನೆ ಕೋಪವೇರಿ, "ಏನೇನು? ನೀನು ಬಲ



"ರಾಮನೇ ? ಯಾವ ಅಬಲರಾಮ ನೀನು ?" ಎಂದು ಹಲ್ಲು ತೋರಿಸಿ ಅಣಕಿಸಿದನು.

ಕೂಡಲೇ ಬಲರಾಮನು ತನ್ನ ಹಲಾಯುಧವನ್ನು ಹನುಮಂತನ ಮೇಲೆ ಎತ್ತಿದನು. ತತ್‌ಕ್ಷಣವೇ ಹನುಮಂತನು ಅದನ್ನು ತನ್ನ ಬಾಲದಿಂದ ಹಿಡಿದು ಕಿತ್ತು ದೂರ ಬಿಸುಟನು. ಅವನನ್ನು ಹೊಡೆಯಲು ಬಂದ ಬಲರಾಮನ ಎರಡು ಕೈಗಳನ್ನೂ ಹನುಮಂತನು ಹಿಡಿದೆತ್ತಿ ಸುಳಿಸಿ ಬೀಸುತ್ತಿರಲು ಬಲರಾಮನಿಗೆ ಮೂರ್ಛೆ ಬಂದಿತು. ಆ ಮೂರ್ಛೆಯಲ್ಲಿ ಕನಸಿನಂತೆ ಹಳೆಯ ವೃತ್ತಾಂತವು ಅವನ ಗೋಚರಕ್ಕೆ ಬಂದಿತು.

ಆ ದೃಶ್ಯವೇನಂದರೆ, ರಾಮಪಟ್ಟಾಭಿಷೇಕವಾದ ಮರುಕ್ಷಣದಲ್ಲೇ ಲಕ್ಷ್ಮಣನು ತೂಕಡಿಸಿಬಿದ್ದು ಫಕ್ಕನೆ ನಕ್ಕನು. ಸಭೆಯಲ್ಲಿದ್ದ ಪ್ರತಿಯೊಬ್ಬರೂ ಅದನ್ನು ನೋಡಿ, ತಮ್ಮನ್ನೇ ಲಕ್ಷ್ಮಣನು ಪರಿಹಾಸಮಾಡಿ ನಕ್ಕನೆಂದು ಮುಖಗಳನ್ನು ಕಹಿಮಾಡಿಕೊಂಡರು.

ರಾಮನೂ ಸಿಟ್ಟಿನಿಂದ ಲಕ್ಷ್ಮಣನ ಮೇಲೆ ಕತ್ತಿಯನ್ನೆತ್ತಿದನು. ಆಗ ಹನುಮಂತನು ರಾಮನನ್ನು ತಡೆದು ಲಕ್ಷ್ಮಣನನ್ನು ನಯವಾಗಿ ವಿಚಾರಿಸಿ ಅವನು ನಕ್ಕುದರ ಕಾರಣ ತಿಳಿದು ಸಭೆಯವರನ್ನು ನೋಡಿ ಹೀಗೆಂದನು: "ವನವಾಸಕಾಲದಲ್ಲಿ ಸೀತಾರಾಮರನ್ನು ಸರ್ವಕಾಲದಲ್ಲಿಯೂ ಲಕ್ಷ್ಮಣನು ಕಣ್ಣುಬಿಡಿಸಿ ಹದಿನಾಲ್ಕು ವರ್ಷಗಳವರೆಗೆ ನಿದ್ರೆಯನ್ನೂ ಆಹಾರವನ್ನೂ ಬಿಟ್ಟು ಕಾವಲು ಕಾದುಕೊಂಡಿದ್ದನು. ರಾಮನಿಗೆ ಪಟ್ಟಾಭಿಷೇಕವಾದ ಕೂಡಲೇ ನಿದ್ರೆಯನ್ನು ಬರಲು ಹೇಳಿದ್ದ. ಅವನ ನಿದ್ದೆಯನ್ನು ಅವನ ಅರ್ಧಾಂಗಿ ಊರ್ಮಿಳೆ ಕೂಡಾ ಕಳೆದಿದ್ದಳು. ಹದಿನಾಲ್ಕು ವರ್ಷ ನಿದ್ರಾಹಾರಬಿಟ್ಟವನೇ ಇಂದ್ರಜಿತ್ತುವನ್ನು ಕೊಲ್ಲಬಲ್ಲನೆಂದು ವಿಧಿನಿಯತಿ ಕೂಡಾ ಇತ್ತು. ಆ ವಿಧದಲ್ಲಿ ಕಟ್ಟುಗೊಂಡಿದ್ದ ಲಕ್ಷ್ಮಣನ ನಿದ್ದೆ, ಪಟ್ಟಾಭಿಷೇಕವಾದ ಮರುಕ್ಷಣದಲ್ಲೇ ತೂಕಡಿಕೆಯಾಗಿ ಬಂದುದನ್ನು ನೆನೆದು ಲಕ್ಷ್ಮಣನು ನಕ್ಕನು."


ಹನುಮಂತನು ಹೇಳಿದುದನ್ನು ಕೇಳಿ ರಾಮನು, "ಹಾಗಾದರೆ ವನವಾಸಕಾಲದಲ್ಲಿ ಒಂದು ದಿನ ನಾನು ಲಕ್ಷ್ಮಣನಿಗೆ ತಿನ್ನಲು ಒಂದು ಬಾಳೇ ಹಣ್ಣು ಕೊಟ್ಟಿದ್ದೆನಲ್ಲಾ ? ಅದೇನಾಯಿತು ?" ಎಂದು ಕೇಳಿದನು.

ಆಗ ಲಕ್ಷ್ಮಣನು ಕತ್ತಿಯಿಂದ ತನ್ನ ತೊಡೆಯನ್ನು ಸೀಳಿ ಅದರೊಳಗಿದ್ದ ಬಾಳೇ ಹಣ್ಣನ್ನು ತೆಗೆದು, "ಅಣ್ಣನು ಸ್ವಂತ ಕೈಯಿಂದ ಕೊಟ್ಟಿದನ್ನು ರಾಮಪ್ರಸಾದವೆಂದು ಭದ್ರಪಡಿಸಿ ಇಟ್ಟುಕೊಂಡಿದ್ದೇನೆ. ಈಗ ಇದರಿಂದಲೇ ಉಪವಾಸವನ್ನು ಮುಗಿಸಿಕೊಳ್ಳುತ್ತೇನೆ" ಎಂದು ಹೇಳಿ ಆ ಹಣ್ಣನ್ನು ನುಂಗಿದನು.

ರಾಮನು ಲಕ್ಷ್ಮಣನನ್ನು ಗಾಢಾಲಿಂಗನ ಮಾಡಿಕೊಂಡು ಆನಂದಬಾಷ್ಪ ಒಸರಿಸುತ್ತ, "ತಮ್ಮಾ, ಬರುವ ಜನ್ಮದಲ್ಲಿ ನಾನು ನಿನ್ನ ತಮ್ಮನಾಗಿ ಹುಟ್ಟಿ

ನಿನ್ನ ಋಣ ತೀರಿಸಿಕೊಳ್ಳುತ್ತೇನೆ" ಎಂದು ಸಭೆಯವರೆಲ್ಲಾ ಕೇಳುವಂತೆ ಗಟ್ಟಿಯಾಗಿ ಹೇಳಿದನು.

ಈ ಸ್ವಪ್ನ ದೃಶ್ಯದಿಂದ ಬಲರಾಮನಿಗೆ ತಾನು ಲಕ್ಷ್ಮಣನಾಗಿದ್ದವನೆಂಬ ಪೂರ್ವಜ್ಞಾನ ಬಂದಿತು. ಮೂರ್ಛೆಯಿಂದೆಚ್ಚೆತ್ತು ಹನುಮಂತನನ್ನು ನೋಡಿ, "ಸಂಜೀವರಾಯಾ! ಆ ದಿನ ಸಂಜೀವಿನಿಯನ್ನು ತಂದು ನನ್ನನ್ನು ಮೂರ್ಛೆಯಿಂದ ಎಬ್ಬಿಸಿದೆ. ಈ ದಿನ ಮೂರ್ಛೆಯಲ್ಲಿ ನಾನಾರೆಂಬುದನ್ನು ನನಗೆ ತಿಳಿಯುವ ಹಾಗೆ ಮಾಡಿದೆ. ಚಿರಂಜೀವಿಯಾದ ಮಹಾ ಮಹಿಮನೇ, ಬಾ, ನಿನ್ನ ರಾಮನನ್ನು ನೋಡುವೆಯಂತೆ!" ಎಂದು ಹನುಮಂತನನ್ನು ಕೃಷ್ಣನಬಳಿಗೆ ಕರೆದೊಯ್ದನು.




ಕೃಷ್ಣನು ಅವನನ್ನು ನೋಡಿದ ಕೂಡಲೇ ಕೋಪದಿಂದ "ಏನೋ, ಸೊಕ್ಕಿದ ಕೋತಿರಾಯಾ! ನನ್ನಣ್ಣನಂಥವನನ್ನೇ ಧಿಕ್ಕಾರ ಮಾಡುವಿಯಾ? ತಾಳಿಕೋ" ಎಂದು ಮುಷ್ಟಿಬಿಗಿದು ಯುದ್ಧಕ್ಕೆ ಬರುವವನಂತೆ ಸಿಡಿದೆದ್ದನು. ಹನುಮಂತನೂ ಬಿಡಲಿಲ್ಲ.

ಕೃಷ್ಣಾಂಜನೇಯರ ಯುದ್ಧವು ಬಹಳ ಹೊತ್ತಿನವರೆಗೆ ನಡೆಯಿತು. ತನ್ನೊಂದಿಗೆ ಅತ್ಯಂತಲಾಘವದಿಂದ ಹೋರಾಡುತ್ತಿರುವ ಕೃಷ್ಣನ ಪೌರುಷವನ್ನೂ ವೇಗವನ್ನೂ ಒಳಗೊಳಗೇ ಮೆಚ್ಚಿಕೊಳ್ಳುತ್ತ ಹನುಮಂತನು, ತನ್ನ ಸತ್ವವನ್ನೆಲ್ಲಾ ಸೇರಿಸಿ ಒಂದು ಗುದ್ದನ್ನು ಕೃಷ್ಣನ ಮೇಲೆ ಎರಗಿಸಿದನು: ಅದರಿಂದ ಕೃಷ್ಣನು ಹಿಂದೆ ಮಗುಚಿ ಹಾಗೆಯೇ ಎದ್ದು ಕೈಗಳನ್ನು ಅಲುಗಿಸುತ್ತ, ಹನುಮಂತನು ಆಯಾಸಗೊಂಡ ಸಂಧಿ ನೋಡಿ, ಸಿಂಹದಂತೆ ಹಾರಿ ಅವನ ಎದೆಯ ಮೇಲೆ ಮುಷ್ಟಿಘಾತ ಕೊಟ್ಟನು. ಆಗ ಕೃಷ್ಣನ ಪಾದವು ಹನುಮಂತನ ಮೇಲೆ ತಾಗಿತು.

ಆ ಪಾದಸ್ಪರ್ಶದಿಂದ ಹನುಮಂತನ ಸರ್ವಾಂಗವೂ ಪುಲಕಿತವಾಗಿ, ರಾಮನೇ ಕೃಷ್ಣನಾಗಿ ಅವತರಿಸಿದವನೆಂದು ಗೊತ್ತಾಗಿ ಹೋಯಿತು. ಹಿಂದೆ ಲಂಕೆಯಲ್ಲಿ ಸೀತೆಯು ಅಗ್ನಿಪ್ರವೇಶಕ್ಕೆ ಮೊದಲು ರಾಮನ ಬಾಯಿಯಿಂದ ಹೊರಟ ಪರುಷವಾಕ್ಯಗಳಿಂದ ಸೀತೆ ಕಣ್ಣೀರು ಸುರಿಸಿಕೊಂಡಿದ್ದಾಗ, ಹನುಮಂತನಿಗೆ ರಾಮನ ಮೇಲೆ ಬಹಳ ಕೋಪ ಬಂದಿತ್ತು. ಆಗ ಅವನು ಮುಷ್ಟಿಗಳನ್ನು ಬಿಗಿದು "ರಾಮಾ! ನನ್ನೊಂದಿಗೆ ಯುದ್ಧಮಾಡಿ ಗೆಲ್ಲು!" ಎಂದು ಹೇಳಿದ್ದನು.

ಆಗ ರಾಮನು, "ಈಗ ನಾನು ನಿನ್ನೊಂದಿಗೆ ಯುದ್ಧಮಾಡುವಷ್ಟು ಶಕ್ತಿಹೊಂದಿಲ್ಲ. ಮುಂದ ಅದಕ್ಕೂ ಒಂದು ಕಾಲ ಬರುತ್ತೆ, ತಾಳಿಕೋ" ಎಂದಿದ್ದನು.

ಆ ಸನ್ನಿವೇಶವು ಹನುಮಂತನಿಗೆ ಈಗ ನೆನಪಿಗೆ ಬಂತು. ಆಗ ಅವನು ಕೃಷ್ಣನನ್ನು ನೋಡುತ್ತ "ಓಹೋ! ಅವನೇ ನೀನೋ? ಆಗ ಹೇಳಿದ ಮಾತನ್ನೇನೋ ಈಗ ನಡೆಸಿದೆ. ಇದು ಸಾಲದು. ರಾಮನಾಗಿಯೇ ನನಗೆ ತೋರಿ ಅನುಗ್ರಹಿಸು!"



ಎಂದು ತಲೆವಾಗಿ ಕೈಮುಗಿದು ಬೇಡಿಕೊಂಡನು. "ಹನುಮಾ ! ಸ್ವಲ್ಪ ನಿಲ್ಲು. ಲಕ್ಷ್ಮಣನು ಇಲ್ಲಿಯೇ ಇರುವನು. ಸೀತೆ ಇನ್ನು ಮೇಲೆ ಬರಬೇಕಷ್ಟೆ" ಎಂದು ಹೇಳಿ ಕೃಷ್ಣನು ಸೀತೆಯಾಗಿ ಬರುವಂತೆ ಸತ್ಯಭಾಮೆಗೆ ಸಮಾಚಾರ ಕಳುಹಿಸಿದನು.

ಪ್ರತಿ ಜನ್ಮದಲ್ಲಿಯೂ ಕೃಷ್ಣನಿಗೆ ತಾನೇ ನಿಜವಾದ ಪತ್ನಿ ಎಂದುಕೊಂಡು ಗರ್ವದಲ್ಲಿದ್ದ ಸತ್ಯಭಾಮೆ "ಅದಕ್ಕೇನಾಗಬೇಕು, ಇದೋ ಬಂದೆ !" ಎಂದು ಹೇಳಿ ಮೈ ತುಂಬಾ ದಿವ್ಯಾಭರಣಗಳನ್ನು ಧರಿಸಿ, ತಲೆ ತುಂಬಾ ಪಾರಿಜಾತಪುಷ್ಪಗಳನ್ನು ಮುಡಿದು, ಠೀವಿಯೂ ಒಯ್ಯಾರವೂ ಕಲೆತ ನಡಿಗೆಯಿಂದ ಬಂದು ಕೃಷ್ಣನ ಪಕ್ಕದಲ್ಲಿ ನಿಂತಳು.


ಹನುಮಂತನು ಅವಳನ್ನು ನೋಡಿದ ಕೂಡಲೇ "ಓಹೊ ! ನೀನು ಚಂದ್ರಸೇನೆಯಲ್ಲವೇನಮ್ಮಾ ? ಆ ದಿನ ರಾಮನು ಕೃಷ್ಣಾವತಾರ ಕಾಲದಲ್ಲಿ ಅಷ್ಟ ಪತ್ನಿಯರಲ್ಲಿ ಒಬ್ಬಳಾಗಿ ನಿನ್ನನ್ನು ಮದುವೆಯಾಗುತ್ತೇನೆಂದು ಹೇಳಿದ್ದನಲ್ಲಾ ? ರಾಮನು ಹೇಳಿದ ಮಾತು ನಡೆಸಿದನು. ಧನ್ಯಳಾದೆಯಮ್ಮಾ ನೀನು !" ಎಂದು ಕೈಮುಗಿದನು.

ಹನುಮಂತನ ಮಾತು ಕೇಳಿದ ಕೂಡಲೇ ಸತ್ಯಭಾಮೆಗೆ ಪೂರ್ವಸ್ಮೃತಿಯುಂಟಾಯಿತು. ಅವಳ ಗರ್ವ ಹೇಳ ಹೆಸರಿಲ್ಲದೆ ಹೋಯಿತು. ಅವಳು ಅಲ್ಲಿಂದ ಸೀದಾ ರುಕ್ಮಿಣಿಯ ಬಳಿಗೆ ಹೋಗಿ, "ಅಕ್ಕ ! ಸೀತೆಯಾಗಿ ನೀನು ಹನುಮಂತನನ್ನು ಅನುಗ್ರಹಿಸಬೇಕಂತೆ ! ಹೋಗು" ಎಂದು ಬೇಡಿಕೊಂಡಳು.

ಅದರಂತೆ ರುಕ್ಮಿಣಿ ಹೇಗಿದ್ದಳೋ ಹಾಗೆಯೇ ಬಂದು ಕೃಷ್ಣನ ಬದಿಯಲ್ಲಿ ನಿಂತಳು. ಕೃಷ್ಣನು ಕೋದಂಡರಾಮನಾಗಿ ಹನುಮಂತನ ತಲೆನೀವಿ ಬೆನ್ನು ತಡವಿ ಆಶೀರ್ವದಿಸಿದನು. ಹನುಮಂತನು ರಾಮನ ಪಾದವನ್ನು ತದೇಕ ದೃಷ್ಟಿಯಿಂದ ನೋಡುತ್ತ ಕೈಜೋಡಿಸಿ ಬ್ರಹ್ಮಾನಂದದಲ್ಲಿ ಮುಳುಗಿ ಹೋದನು. ಸೀತೆ, "ಚಿರಂಜೀವಿ! ನಿನ್ನ ನೋಡಿ ಸಂತೋಷವಾಯಿತಪ್ಪಾ!" ಎಂದಳು.

ಆಮೇಲೆ ಕೃಷ್ಣನು ರಾಮಾವತಾರದ ರೂಪವನ್ನು ಉಪಸಂಹರಿಸಿ ಹನುಮಂತನ ಬೆನ್ನುತಟ್ಟಿ, "ಹನುಮಾ, ಇನ್ನು ನೀನು ಹೋಗಿ ಹಿಮಾಲಯದ ಸಾನು ಪ್ರದೇಶದಲ್ಲಿರುವ ಕದಳೀವನದಲ್ಲಿರು. ಅಲ್ಲಿಗೆ ನಿನ್ನ ತಮ್ಮನಾಗಬೇಕಾದ ವಾಯುಕುಮಾರ ಭೀಮನು ಬರುತ್ತಾನೆ. ಅವನಿಗೆ ಗದಾಯುದ್ಧ ಮಲ್ಲಯುದ್ಧಗಳಲ್ಲಿರುವ ಸೂಕ್ಷ್ಮವಾದ ಹಿಡಿತಪಟ್ಟು ಮುಂತಾದುವನ್ನು ಮಾಡಿ ತೋರಿಸಿ ಕಲಿಸಿಕೊಡು" ಎಂದು ಹೇಳಿದನು.

ಆಗ ಸತ್ಯಭಾಮೆ ಹನುಮಂತನ ಮುಂದೆ ಬಂದು, "ಹನುಮಾ, ಆ ದಿನ ನೀನು ರಾಮನನ್ನು ನನ್ನ ಹತ್ತಿರ ಕರೆಕೊಂಡು ಬಂದು, ಈ ದಿನದ ನನ್ನ ಭಾಗ್ಯಗಳಿಗೆ ಕಾರಣನಾದ ನಿನಗೆ ನನ್ನ ಕೃತಜ್ಞತೆ ಹೇಳಿಕೊಳ್ಳುತ್ತೇನೆ" ಎಂದು ನಮಸ್ಕಾರ ಮಾಡಿದಳು.




ಹನುಮಂತನು ಅವಳಿಗೆ ತಿರುಗಿ ನಮಸ್ಕಾರ ಮಾಡುತ್ತ, "ಅಮ್ಮಾ, ನೀನು ಸತ್ಯಭಾಮೆಯಾಗಿರುವೆ. ದೇವರು ಸತ್ಯಕ್ಕೆ ಯಾವಾಗಲೂ ವಶನಾಗಿರುತ್ತಾನೆಂಬ ಅರ್ಥವು ಸ್ಫುರಿಸುವ ಹಾಗೆ ಕೃಷ್ಣನು ನಿನ್ನನ್ನು ವರಿಸಿ ನಿನ್ನ ಮುದ್ದು ಮುಂಚ್ಚಟೆಗಳನ್ನು ತೀರಿಸುತ್ತ ಸತ್ಯಪತಿ ಎಂಬ ಬಿರುದು ಪಡೆದಿದ್ದಾನೆ. ಧನ್ಯಳಾದೆಯಮ್ಮಾ ! ನೀನು ನನಗೆ ಸೀತೆಗೆ ಸಮಾನಳು !" ಎಂದನು.

ಅವನ ಮಾತು ಕೇಳಿ ಸತ್ಯಭಾಮೆ ಆನಂದಪುಲಕಿತೆಯಾಗಿ ಕೃಷ್ಣನ ಪಾದಗಳನ್ನು ಹಿಡಿದುಕೊಂಡು, "ಇಷ್ಟು ಕಾಲದ ಮೇಲೆ ಹನುಮಂತನ ಮಾತುಗಳಿಂದ ನಿಜಸಂಗತಿಯನ್ನು ತಿಳಿದುಕೊಂಡೆನು. ನನ್ನಲ್ಲಿ ಮನೆಮಾಡಿಕೊಂಡಿದ್ದ ಗರ್ವವೂ ಪೂರಾ ತೊಳೆದು ಹೋಯಿತು" ಎಂದಳು.

ಹನುಮಂತನು ರುಕ್ಮಿಣೀ ಸತ್ಯಭಾಮೆಯರೊಂದಿಗೆ ಕೂಡಿದ ಕೃಷ್ಣನಿಗೆ ನಮಸ್ಕಾರ ಮಾಡಿ ಹೊರಡಲು ಸಿದ್ಧನಾದಾಗ ಬಲರಾಮನು ಅವನನ್ನು ಆಲಿಂಗಿಸಿಕೊಂಡು, "ಸಂಜೀವರಾಯಾ ! ನಿನ್ನಿಂದಲೇ ನನ್ನನ್ನು ನಾನು ತಿಳಿದುಕೊಂಡೆ. ಅಹಂಕಾರವನ್ನು ಕಳೆದುಕೊಂಡೆ. ನಿನಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು !" ಎಂದು ಹೇಳಿದನು. ಗರುತ್ಮಂತನೂ ಸಹ ಹನುಮಂತನಿಗೆ ಪ್ರಣಾಮ ಮಾಡಿ, "ವೀರಹನುಮಾನ್ ! ಕ್ಷೀರಸಾಗರದಲ್ಲಿ ತನ್ನ ಸನ್ನಿಧಾನದಲ್ಲಿ ನನಗೆ ಜತೆಗಾರನಾಗಿ ನೀನು ಕೂಡಾ ಬಂದು ಕೂಡುವೆ ಎಂದು ಮಹಾವಿಷ್ಣು ನನ್ನೊಂದಿಗೆ ಹೇಳಿರುವುದು ಈಗ ನೆನಪಿಗೆ ಬರುತ್ತದೆ. ನಾನೂ ನೀನೂ ಭೇದವಿಲ್ಲದವರು" ಎಂದು ಹೇಳಿ, ಹನುಮಂತನೊಂದಿಗೆ ಕದಳೀವನದವರೆಗೂ ಹೋದನು.

ಹಿಮಾಲಯದ ಸಾನುಭೂಮಿಯ ಪ್ರದೇಶದಲ್ಲಿದ್ದ ಕದಳೀವನವು ಬಾಳೆಯ ಗಿಡಗಳಿಂದ, ಇನ್ನೂ ಅನೇಕ ಬಗೆಯ ಫಲವೃಕ್ಷಗಳ ತೋಪುಗಳಿಂದ ತುಂಬಾ ಆಹ್ಲಾದಕರವಾಗಿತ್ತು. ಹಿಮ ಶಿಖರಗಳಿಂದ ಜಾರಿ ಬರುವ ಚಿಕ್ಕ ಚಿಕ್ಕ ಬೆಟ್ಟದ ತೊರೆಗಳು ಬೆಳ್ಳಿಯ ರೇಖೆಗಳಂತೆ ಅಲ್ಲಲ್ಲಿ ಹೊಳೆಯುತ್ತಿದ್ದುವು.

ಅಂತಹ ಸೊಗಸಾದ ಕದಳೀವನವನ್ನು ಪ್ರವೇಶಿಸಿ ಹನುಮಂತನು ಹಣ್ಣು ಮುದಿಕೋತಿಯ ರೂಪದಲ್ಲಿ ದೊಡ್ಡದೊಂದು ಬಾಳೇ ಮರದಕಾಂಡಕ್ಕೆ ಒರಗಿಕೊಂಡು ಕಾಲುಗಳನ್ನು ಚಾಚಿ ಕುಳಿತುಕೊಂಡನು. ಅವನ ಬಾಲವು ದಾರಿಗೆ ಅಡ್ಡವಾಗಿ ಸುತ್ತಿಕೊಂಡು ಬಿದ್ದಿತ್ತು. ಈ ಚೇಂದದಲ್ಲಿ ಹನುಮಂತನು ಕಣ್ಣುಗಳನ್ನು ಮುಚ್ಚಿಕೊಂಡು ರಾಮನನ್ನು ಧ್ಯಾನಿಸುತ್ತ ರಾಮನಾಮವನ್ನು ಜಪಿಸುತ್ತ, ಹಾಗೆಯೇ ಸುಮ್ಮನೆ ಕುಳಿತಿರಲು, ಅವನನ್ನು ನೋಡಿ ತಲೆ ದೂಗುತ್ತಾ ಗರುತ್ಮಂತನು ದ್ವಾರಕೆಗೆ ಹಿಂದಿರುಗಿದನು.






ವೀರಹನುಮಾನ್

ಪಾಂಡವರು ಕೌರವರೊಂದಿಗೆ ಕಪಟದ ಜೂಜಿನಲ್ಲಿ ಸೋತು, ಎಲ್ಲವನ್ನೂ ಕಳೆದುಕೊಂಡು ದ್ರೌಪದಿಯೊಂದಿಗೆ ವನವಾಸಕ್ಕೆ ಹೋದರು. ಹಾಗೆ ಅವರು ವನವಾಸದಲ್ಲಿರುವ ಕಾಲದಲ್ಲಿ, ದ್ರೌಪದಿ ಭೀಮನೊಂದಿಗೆ ಒಂದು ದಿನ ವನವಿಹಾರ ಮಾಡಿಕೊಂಡಿರುವಾಗ ಒಂದು ಸಾನು ಪ್ರದೇಶವನ್ನು ನೋಡಿದಳು. ಭೀಮನೊಂದಿಗೆ ಅಲ್ಲಿಗೆ ಹೋಗಿ, ಅಲ್ಲಿರುವ ಸ್ಫಟಿಕ ಶಿಲೆಯ ಮೇಲೆ ಕುಳಿತು, ದೂರದಲ್ಲಿ ಕಾಣುವ ಹಿಮಗಿರಿ ಶಿಖರದ ಅಂದಚೆಂದಗಳನ್ನು ನೋಡ ತೊಡಗಿದಳು.

ಆ ಸಮಯದಲ್ಲಿ ಭಾರಿ ಗಾಳಿ ಬೀಸತೊಡಗಿತು. ಆ ಗಾಳಿಯಲ್ಲಿ ತೇಲಿಕೊಂಡು ಅಪೂರ್ವವಾದುದೊಂದು ಹೂವು ಬಂದು ದ್ರೌಪದಿಯ ಮಡಿಲಲ್ಲಿ ಬಿದ್ದಿತು. ಅಷ್ಟರಲ್ಲಿ ಆ ಪ್ರದೇಶವೆಲ್ಲಾ ಅದರಿಂದ ಹೊರಟ ಸುಪರಿಮಳದಿಂದ ತುಂಬಿಹೋಯಿತು. ಆ ಹೂವಿನಲ್ಲಿ ಅನೇಕ ದಳಗಳಿದ್ದುವು. ಗಾಳಿಯಿಂದಲೋ ಅಥವಾ ಮತ್ತಾವುದರಿಂದಲೋ ದಳಗಳೆಲ್ಲ ಸ್ವಲ್ಪ ಹಿಸುಕಿದಂತಿದ್ದುವು. ಅದುವೇ ಅಪೂರ್ವವಾದ ಸೌಗಂಧಿಕಾ ಕಮಲ ಪುಷ್ಪ. ಕುಬೇರನ ಪಟ್ಟಣವಾದ ಅಲಕಾಪುರಿಗೆ ಸಮೀಪದಲ್ಲಿರುವ ಮಾನಸ ಸರೋವರದೊಂದಿಗೆ ಬೆರೆತ ದಳಸರೋವರದಲ್ಲಿ ಅದು ದಿನಕ್ಕೊಂದು ಹೂ ಮಾತ್ರ ಅರಳುತ್ತದೆ. ಕುಬೇರನು ಪ್ರತಿದಿನ ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ಹೋಗುವಾಗ ಆ ಪುಷ್ಪವನ್ನೊಯ್ದು ಶಿವನನ್ನು ಪೂಜಿಸಿ, ಮುಂಚಿನ ದಿನ ಅರ್ಚಿಸಿದ ಹೂವನ್ನು ದೇವ ನಿರ್ಮಾಲ್ಯವಾಗಿ ತೆಗೆದುಕೊಂಡು ಹೋಗುವನು. ಅದು ಆ ದಿನ ಪುಷ್ಪಕವಿಮಾನದಿಂದ ಹೇಗೋ ಜಾರಿಕೊಂಡು ಗಾಳಿಯಲ್ಲಿ ತೇಲಿ ಬಂದು ದ್ರೌಪದಿಗೆ ದೊರಕಿತ್ತು.

ದ್ರೌಪದಿ ಅತ್ಯಾಶ್ಚರ್ಯದಿಂದ ಆ ಪುಷ್ಪವನ್ನು ನೋಡಿ ಆನಂದ ಪುಲಕಿತೆಯಾಗಿ ಅಂತಹದೇ ಹೊಸ ಹೂವನ್ನು ತಂದು ಕೊಡುವಂತೆ ಭೀಮನನ್ನು ಕೇಳಿಕೊಂಡಳು. ಸಮೀಪದಲ್ಲೆಲ್ಲೋ ಅದು ಇರಬಹುದೆಂದುಕೊಂಡು ಭೀಮನು ಈಗ ತರುತ್ತೇನೆಂದು ಹೇಳಿ



ಗದೆಯನ್ನು ಭುಜದಮೇಲೇರಿಸಿಕೊಂಡು ಆ ಪುಷ್ಪವನ್ನು ಹುಡುಕುತ್ತಾ ಹೊರಟನು.

ಆದರ ಪರಿಮಳ ಹೊರಟು ಬರುವ ದಿಕ್ಕನ್ನೇ ಗುರಿಯಾಗಿಟ್ಟುಕೊಂಡು ಹೋಗಿ ಹೋಗಿ ಹಿಮಾಲಯದ ಸಾನು ಭೂಮಿಯಲ್ಲಿರುವ ಕದಳೀ ವನವನ್ನು ಪ್ರವೇಶಿಸಿ ಮುಂದೆ ಮುಂದೆ ಹೋದನು.

ಆ ವನದಲ್ಲಿಯೇ ಹನುಮಂತನು ದೊಡ್ಡದೊಂದು ಬಾಳೇ ಗಿಡದ ಕಾಂಡವನ್ನು ಒರಗಿಕೊಂಡು ಹಣ್ಣು ಮುದುಕನ ರೂಪದಲ್ಲಿ ರಾಮ ಸ್ಮರಣೆ ಮಾಡಿಕೊಂಡಿದ್ದನು. ಅವನ ಬಾಲವು ಬಹು ದೂರದವರೆಗೂ ದಾರಿಗಡ್ಡವಾಗಿ ಬಿದ್ದಿತ್ತು.

ಭೀಮನು ಅದನ್ನು ದಾಟಿಕೊಂಡು ಹೋಗಲು ಸಹಜವಾದ ರಾಜಸಗುಣವು ಅಡ್ಡ ಬಂದು, ಸುತ್ತಲೂ ನೋಡಿದನು. ಎಲ್ಲಿಯೋ ರಾಮರಾಮ ಎಂಬ ಧ್ವನಿ ಕೇಳಿ ಬರುತ್ತಿದ್ದಿತು. ಅದು ತೂಕಡಿಸುವವನಂತಿದ್ದ ಹನುಮಂತನ ಕಂಠದಿಂದ ಹೊರಡುವ ಧ್ವನಿ ಎಂದು ಅವನಿಗೆ ತಿಳಿಯಲಿಲ್ಲ. ಯಾವುದೋ ಮುದಿ ಕೋತಿ ದಾರಿಗಡ್ಡವಾಗಿ ಬಾಲ ಚಾಚಿ ಕುಳಿತಿದೆ ಎಂದೇ ತಿಳಿದು, ನೆಲ ಅದುರುವ ಹಾಗೆ ಕಾಲಿನ ಸಪ್ಪಳ ಮಾಡಿ ಹೆದರಿಸಿದನು.

ಹನುಮಂತನು ಆಯಾಸಪಟ್ಟವನ ಹಾಗೆ ಅರೆಗಣ್ಣಿನಿಂದ ಭೀಮನನ್ನು ನೋಡಿ, "ಅಪ್ಪಾ, ಹಣ್ಣು ಮುದುಕ. ಮೈ ಭಾರ ತಾಳಲಾರೆ. ನೀನೇ ಆ ಬಾಲವನ್ನು ಸ್ವಲ್ಪ ಎತ್ತಿ ಆಚೆಗಿಡಪ್ಪ! ಸ್ವಲ್ಪ ಶ್ರಮಪಡು! ಹುಡುಗನಾಗಿದ್ದೀಯೇ!" ಎಂದನು.

ಭೀಮನು ಗದೆಯನ್ನು ತಗ್ಗಿಸಿ ಬಾಲವನ್ನು ಅದರಿಂದ ತಳ್ಳಲು ನೋಡಿದನು. ಅದು ಸ್ವಲ್ಪವೂ ಅಲುಗಲಿಲ್ಲ. ಕೈಯಿಂದ ದೂಡಿ ನೋಡಿದನು, ಗದೆಯನ್ನು ಕೆಳಗಿಟ್ಟು ಎರಡು ಕೈಗಳಿಂದಲೂ ಪೂರ್ತಿ ಬಲದಿಂದ ದೂಡಲು ನೋಡಿದನು. ಅವನು ವಿಶ್ವ ಪ್ರಯತ್ನ ಮಾಡಿದರೂ ಅದೇನೂ ಕದಲಲಿಲ್ಲ. ಆಶ್ಚರ್ಯವಾಗತೊಡಗಿತು ಅವನಿಗೆ.

ಅವನ ಅವಸ್ಥೆಯನ್ನು ನೋಡಿ ಹನುಮಂತನು ಬೇಸತ್ತು, "ಏನಪ್ಪ ನೀನು ? ಹಿಡಿದು ಹಿಸುಕಿಹಿಸುಕಿ ನನ್ನ ಕೊಲ್ಲುವೆಯಲ್ಲಾ ? ಒಂದು ಮುದಿ ಕೋತಿಯ ಬಾಲಕ್ಕಾಗಿ ಪ್ರಾಣ ಬಿಡುವೆಯಾ ? ಏನು ಘನ ಕಾರ್ಯ ಸಾಧಿಸಬೇಕೆಂತ ಗದೆಗಿದೆ ಹೊತ್ತುಕೊಂಡು ದೊಡ್ಡ ಭೀಮನ ಹಾಗೆ ಹೊರಟಿದ್ದೀ ? ನಿಮ್ಮಂಥ ಹುಡುಗರಿಗೆ ದುಡುಕು ಬುದ್ಧಿಯಲ್ಲದೆ ಆಲೋಚನೆಯೇ ಇಲ್ಲ. ಅದರಲ್ಲಿಯೂ ಪ್ರಿಯಳಾದ ಹೆಣ್ಣಿನ ಆಶೆ ತೀರಿಸಬೇಕೆನ್ನುವಾಗ ಮತ್ತಿಷ್ಟು ಅವಸರ. ಎಲ್ಲಿಲ್ಲದ ಚುರುಕು ಬಂದ ಹಾಗೆ! ಅಂಥಾದ್ದೇನೂ ನಿನಗಿಲ್ಲವಷ್ಟೇ" ಎಂದನು.

ಭೀಮನು ಕೋಪದಿಂದ ಕುದಿಯುತ್ತ, "ಅಧಿಕ ಪ್ರಸಂಗ ಸಾಕು ಮಾಡು!" ಎನ್ನುತ್ತಾ ಗದೆಯನ್ನು ಎತ್ತಿಹಿಡಿದು ಹನುಮಂತನ ಮೇಲೆ ಹೊಡೆಯುವ ಭಂಗಿಯಲ್ಲಿ ನಿಂತನು.


ಹನುಮಂತನು ನಗುತ್ತ, "ಓಹೋಹೊ! ಗದಾ ಯುದ್ಧಕ್ಕೆ ನನ್ನನ್ನು ಕರೆಯುವಿಯೇನು? ಇಷ್ಟು ದಿನ ಯುದ್ಧಾಭ್ಯಾಸ ಮಾಡಿದ್ದಕ್ಕೆ ಸಾರ್ಥಕವಾಯಿತು ಬಿಡು! ಈ ಮುದುಕನ ಹತ್ತಿರ ಯುದ್ಧಕ್ಕೆ ಇಳಿಯುವಿಯಲ್ಲಾ! ನಿನ್ನಂಥ ದುಡುಕು ತಮ್ಮಂದಿರಿದ್ದರೆ ಅಣ್ಣಂದಿರಿಗೆ ವನವಾಸವೇ ಗತಿ! ಸರಿ ಸರಿ! ಬಾ. ನನಗೂ ಒಂದು ಗದೆ ಇದೆ. ನನ್ನ ಹಾಗೇ ಅದು ಕೂಡ ಮುದಿ ಗದೆಯೇ!" ಎಂದು ಹೇಳುತ್ತ, ದೂರದಲ್ಲಿರುವ ತನ್ನ ಗದೆಗೆ ಕೈ ಚಾಚಿದನು.

ಅದು ಎಟಕದಿರಲು, "ಸ್ವಲ್ಪ ಆ ಗದೆಯನ್ನು ಈಚೆಗೆ ಕೊಡುತಮ್ಮಾ. ಗದಾ ಯುದ್ಧಕ್ಕೆ ತಯಾರಾದೆಯಲ್ಲ ಮತ್ತೆ!" ಎಂದನು.

ಭೀಮನು ಆ ಗದೆಯನ್ನು ಎತ್ತಿ ಅವನಿಗೆ ಕೊಡಲು ಪ್ರಯಾಸಪಡತೊಡಗಿದನು. ಆಗ ಹನುಮಂತನು, "ನಮ್ಮ ಕಾಲದಲ್ಲಿ ಇಂತಹ ಗದೆಗಳಲ್ಲದೆ, ಈಗಿನಂಥ ತಗಡಿನ ಆಟದ ಗದೆಗಳೆಲ್ಲ ಇರಲಿಲ್ಲ. ಇನ್ನೂ ಹಿಂದಿನ ಕಾಲದಲ್ಲಿ ಬಂಡೆ ಕಲ್ಲಿನ ಗದೆಗಳನ್ನೇ ಉಪಯೋಗಿಸುತ್ತಿದ್ದೆವು." ಎನ್ನುತ್ತಾ, ತನ್ನ ಗದೆಯನ್ನು ಹಿಡಿದು ತಟಕ್ಕನೆತ್ತಿ ಲೀಲೆಯಿಂದ ತಿರುಗಿಸಿ ಭೀಮನ ತಲೆಯ ಮೇಲೆ ಆಶೀರ್ವದಿಸುವಂತೆ ತಾಗಿಸಿದನು.

ಭೀಮನು ಕಲ್ಲು ತಾಗಿದಂತೆ ನೊಂದು ಹಾಯ್ಯೆಂದು ಕೋಪದಿಂದ ಅವಡುಗಚ್ಚಿ ತನ್ನ ಗದೆಯಿಂದ ಹನುಮಂತನನ್ನು ಹೊಡೆದನು. ಹನುಮಂತನು ಗಟ್ಟಿಯಾಗಿ ನಿಂತು ತನ್ನ ಗದೆಯನ್ನು ಎತ್ತಿ ಹುಂಕರಿಸಿದನು. ಆ ಹೂಂಕಾರಕ್ಕೆ ಕದಳೀವನವೇ ಪ್ರತಿಧ್ವನಿಸಿತು ನಡುಗುತ್ತಾ.

ಆ ಮೇಲೆ ಇಬ್ಬರೂ ಬಹಳ ಹೊತ್ತಿನವರೆಗೆ ಗದಾಯುದ್ಧ ಮಾಡಿದರು, ಭೀಮನ ಗದೆ ಪಟ್ಟು ತಪ್ಪಿ ದೂರ ಹೋಗಿಬಿತ್ತು. ಕೂಡಲೇ ಹನುಮಂತನು ತನ್ನ ಗದೆಯನ್ನೂ ಕೆಳಗೆ ಹಾಕಿ, ಮಲ್ಲಯುದ್ಧಕ್ಕಾಗಿ ತೊಡೆಯನ್ನು ತಟ್ಟಿದನು. ಇಬ್ಬರೂ



ಮಲ್ಲಯುದ್ಧ ಮಾಡುತ್ತಿರುವಾಗ ಭೀಮನಿಗೆ ಒಂದು ಹೊಸ ವಿಷಯ ಗೊತ್ತಾಯಿತು.

ಈ ಮುದಿಕೋತಿಯವನು ಮನಸ್ಸು ಮಾಡಿದ್ದರೆ ತನ್ನನ್ನು ಯಾವಾಗಲೋ ಮಣ್ಣು ಮುಕ್ಕಿಸಿಬಿಡುತ್ತಿದ್ದನು. ಆದರೆ ಇವನು ಗದಾಯುದ್ಧದಲ್ಲಿಯೂ, ಈ ಮಲ್ಲಯುದ್ಧದಲ್ಲಿಯೂ ತನಗೆ ತಿಳಿಯದ ಹಿಡಿತ ಹೊಡೆತ, ಪಟ್ಟು, ಗುಟ್ಟುಗಳನ್ನು ಶಿಷ್ಯನಿಗೆ ಕಲಿಸಿಕೊಡುವ ಗುರುವಿನಂತೆ ಯುದ್ಧ ತೋರಿಸುತ್ತಿದ್ದಾನೆ. ಹಾಗಾದರೆ ಓ! ತಿಳಿಯಿತು! ಇವನು ಸಾಮಾನ್ಯ ಕೋತಿಯಲ್ಲ!"

ತಟ್ಟನೆ ಭೀಮನು ಹನುಮಂತನ ಮುಂದೆ ಮೊಣಕಾಲೂರಿ ಅಡ್ಡ ಬಿದ್ದು, "ಮಹಾನುಭಾವಾ! ತಿಳಿದೆನು! ತಿಳಿದೆನು! ನೀನು ಯಾರೆಂದು ತಿಳಿದೆನು. ನೀನು ಸಾಕ್ಷಾತ್ ಹನುಮಂತನೇ ನಿಜ. ನಾನು ವಾಯುದೇವನ ವರಪ್ರಸಾದದಿಂದ ಬಂದವನು. ಕುಂತೀಕುಮಾರ ಭೀಮಸೇನ. ಧರ್ಮರಾಯನ



ದೊಡ್ಡ ತಮ್ಮ. ಅನುಗ್ರಹಿಸಬೇಕು ನನ್ನನ್ನು ದೊಡ್ಡಣ್ಣಾ !" ಎಂದು ಸ್ತೋತ್ರ ಮಾಡಿದನು.

ಹನುಮಂತನು ಭೀಮನನ್ನು ವಾತ್ಸಲ್ಯದಿಂದ ಎಬ್ಬಿಸಿ, "ಹೌದು ತಮ್ಮಾ! ನಾವಿಬ್ಬರೂ ವಾಯು ನಂದನರೇ !" ಎಂದನು.


ಭೀಮಮನು, "ಅಣ್ಣಾ! ನಿನ್ನ ವಿಷಯವಾಗಿ ತುಂಬಾ ಕೇಳಿದ್ದೇನೆ. ನಿನ್ನ ಬ್ರಹ್ಮಾಂಡವಾದ ರೂಪವನ್ನು ನೋಡಬೇಕೆಂದು ಆಶೆಯಾಗಿದೆ." ಎಂದು ಕೈಗಳನ್ನು ಜೋಡಿಸಿದನು.


"ಭೀಮಾ, ಇದು ದ್ವಾಪರಯುಗ. ನನ್ನ ಪೂರ್ತಿ ವಿಶ್ವರೂಪವನ್ನು ನೀನು ನೋಡಲು ಸಾಧ್ಯವಾಗದು. ನಿನ್ನ ದೃಷ್ಟಿ ಶಕ್ತಿಯ ಮೇರೆಯವರೆಗೆ ತೋರಿಸುತ್ತೇನೆ ನೋಡು !" ಎಂದನು.

ಕೂಡಲೇ ಹನುಮಂತನ ಶರೀರವು ಮೇಘ ಮಂಡಲವನ್ನು ದಾಟಿ ಬೆಳೆದುಕೊಂಡುಹೋಯಿತು. ಬಾಲವನ್ನು ಎತ್ತಿ ಆಕಾಶವನ್ನು ಸುತ್ತುತ್ತಾ ಹನುಮಂತನು ಭೀಕರವಾಗಿ ಗರ್ಜಿಸಿದನು. ಆಸಿಡಿಲ್ದನಿಗೆ ಭೀಮನು ಬೆದರಿ ಬೀಳುತ್ತ, ಆ ಮಹಾ ರೂಪವನ್ನು ನೋಡಲಾಗದೆ, ಕಣ್ಣುಮುಚ್ಚಿಕೊಳ್ಳುತ್ತ, ವಿಶ್ವರೂಪವನ್ನು ಉಪಸಂಹರಿಸಿಕೊಳ್ಳುವಂತೆ ಪ್ರಾರ್ಥಿಸಿಕೊಂಡನು.

ಕೂಡಲೇ ಹನುಮಂತನು ಯಥಾ ಪ್ರಕಾರಕ್ಕೆ ಬಂದನು. ಮೊದಲಿನಂತೆ ಮುದಿ ಹನುಮನಾಗಿ, ಭೀಮನ ಬೆನ್ನು ತಟ್ಟುತ್ತ, "ಇನ್ನೂ ನೀನು ಹೀಗೆ ಹೊರಟಿರುವುದರ ಕಾರಣ ಹೇಳಲೇ ಇಲ್ಲ," ಎಂದು ನೆನಪೂಡಿಸಿದನು.

ಭೀಮನು ತಾನು ಬಂದುದರ ಕಾರಣವನ್ನು ಹೇಳಿದನು. ಅದನ್ನು ಕೇಳಿ ಹನುಮಂತನು, "ಭೀಮಸೇನಾ, ಅದರ ವಿಷಯ ನನಗೆ ಗೊತ್ತಿದೆ. ಸೌಗಂಧಿಕಾ ಕಮಲವಿರುವ ದಳ ಸರೋವರವನ್ನು ಕೇಶಿಕಿ ಎಂಬ ಯಕ್ಷಿಣಿ ಕಾವಲು ಕಾಯುತ್ತಿದ್ದಾಳೆ. ಅವಳು ಬಹಳ ಪ್ರಚಂಡಳು. ಅವಳ ಮುಂದೆ ಎಂತಹ ಬಲ ಪರಾಕ್ರಮಗಳೂ ಉಪಯೋಗಕ್ಕೆ ಬಾರವು. ಅವಳ ಮೋಹಕರವಾದ ಮಾಯಾಜಾಲಗಳಿಗೆ ವಶವಾಗದವರೇ ಇಲ್ಲ. ನಿನ್ನ ಮುಂದೆ ಅವಳು ಆಟ ತೋರಿಸುವಾಗ, ನಾನು ಜಪಿಸುವ ರಾಮನಾಮವು ನಿನಗೆ ಎಚ್ಚರಿಕೆ ಕೊಡುತ್ತದೆ. ಆಗ ಜಾಗರೂಕನಾಗು. ಇನ್ನೊಂದನ್ನು ನೆನಪಿಟ್ಟುಕೋ. ಅವಳು ಅಪ್ರತಿಮ ಶಿವಭಕ್ತಳು. ಒಂದು ಮುಷ್ಟಿ ನನ್ನ ರೋಮಗಳನ್ನು ಹಿಡಿದುಕೊಂಡುಹೋಗು. ಅವಳು ನಿನ್ನನ್ನು ನಿಜ ರೂಪದಿಂದ ಅಡ್ಡಗಟ್ಟಿದಾಗೆಲ್ಲಾ ಒಂದು ರೋಮ ಅವಳ ಮುಂದೆ ಹಾಕು. ಆ ರೋಮ ಬಿದ್ದ ಜಾಗದಲ್ಲಿ ಒಂದು ಶಿವಲಿಂಗವೇಳುತ್ತದೆ. ಕೂಡಲೇ ಯಕ್ಷಿಣಿ ಸಹಸ್ರನಾಮಗಳಿಂದ ಅದನ್ನು ಅರ್ಚಿಸುತ್ತಾ ಕೂಡುತ್ತಾಳೆ. ಈ ವಿಧವಾಗಿ ನಿನ್ನ ಕೆಲಸ ಮುಗಿಸಿಕೊಂಡು ಬಂದುಬಿಡು." ಎಂದು ಹೇಳಿ ಹನುಮಂತನು ತನ್ನ ಬಾಲದ ಕುಚ್ಚಿನಿಂದ ಸ್ವಲ್ಪ ರೋಮ ತೆಗೆದು





ಭೀಮನಿಗೆ ಕೊಟ್ಟನು. ಆ ಮೇಲೆ ದಳ ಸರೋವರಕ್ಕೆ ಹೋಗುವ ದಾರಿ ತೋರಿಸಿದನು.

ಯಕ್ಷಿಣಿ ಕೇಶಿಕಿ ದೂರದಲ್ಲಿ ಬರುವ ಭೀಮನನ್ನು ನೋಡಿದಳು. ಆ ಕೂಡಲೇ ಎಂಥವರನ್ನಾದರೂ ಸಮ್ಮೋಹನ ಮಾಡಬಲ್ಲ ಅದ್ಭುತ ಸೌಂದರ್ಯವತಿಯಾಗಿ ರೂಪತಾಳಿ ಹಾಡನ್ನೂ ನಾಟ್ಯವನ್ನೂ ಪ್ರಾರಂಭಿಸಿದಳು.

ಅವಳನ್ನು ನೋಡುತ್ತಾ ಭೀಮನು ಪರವಶನಾದನು. ದ್ರೌಪದಿಯನ್ನೂ ತಾನು ಬಂದ ಕಾರ್ಯವನ್ನೂ ಮರೆತನು. ಆಗ ರಾಮನಾಮವು ಅವನ ಕಿವಿಗಳಲ್ಲಿ ಮಾರ್ಮೊಳಗ ತೊಡಗಿತು. ಕೂಡಲೇ ಭೀಮನು ತಿಳಿವಿಗೆ ಬಂದು ಅವಳನ್ನು ಲಕ್ಷ್ಯಮಾಡದೆ ಮುಂದೆ ಸಾಗಿದನು. ಅವಳು ಎಷ್ಟೇ ವಿಧವಾಗಿ ಮರುಳು ಮಾಡಲು ನೋಡಿದರೂ ಭೀಮನು ಅವಳ ಮಾಯಾಜಾಲದಲ್ಲಿ ಬೀಳದೆ ಹೋಗಲು, ಯಕ್ಷಿಣಿ ಬೇಸತ್ತು, ಕಡೆಗೆ ಭಯಂಕರಾಕಾರದಿಂದ ಅವನನ್ನು ಅಡ್ಡಗಟ್ಟಿದಳು. ಭೀಮನು ಹನುಮಂತನನ್ನು ನೆನೆಸುತ್ತಾ ಅವನು ಕೊಟ್ಟ ಒಂದು ರೋಮವನ್ನು ಅವಳ ಮುಂದೆ ಹಾಕಿದ ಕೂಡಲೇ ಸಾಕ್ಷಾತ್ಕರಿಸಿದ ಶಿವಲಿಂಗಕ್ಕೆ ಕೇಶಿಕಿ ಮಣಿದು ಕುಳಿತು ಕಣ್ಣು ಮುಚ್ಚಿ ಸಹಸ್ರ ನಾಮಾರ್ಚನೆಗೆ ತೊಡಗಿದಳು, ಅವಳ ಆರಾಧನೆ ಪೂರ್ತಿಯಾಗುವುದರೊಳಗೆ ಭೀಮನು ದಳ ಸರೋವರದಲ್ಲಿಳಿದು ಸೌಗಂಧಿಕಾ ಕಮಲವೊಂಧನ್ನು ಕಾಂಡದೊಂದಿಗೇ ಕಿತ್ತು ಪಲಾಯನ ಕೈಕೊಂಡನು.


ಕೇಶಿಕಿ ಪ್ರಚಂಡವೇಗದಿಂದ ಅವನನ್ನು ಬೆಂಬತ್ತಿದಳು. ಆಗ ಅವಳ ತಲೆ ಕೂದಲ ರಾಶಿ ಅಗ್ನಿಜ್ವಾಲೆಗಳಂತೆ ಕಿಡಿಗಾರುತ್ತಾ ಭೀಮನನ್ನು ಮುತ್ತಿದುವು.

ಭೀಮನು ಏನೂ ಅಂಜದೆ ದಾರಿಯುದ್ದಕ್ಕೂ, ಒಂದೊಂದು ಹನುಮಂತನ ರೋಮವನ್ನು ಹಾಕಿ, ಆ ಮಹಾ ಶಿವಭಕ್ತೆಗೆ ಪೂಜಾ ಕಾಲಕ್ಷೇಪ ಕಲ್ಪಿಸುತ್ತ, ತಪ್ಪಿ ಪಾರಾಗಿ ಹನುಮಂತನಿರುವ ಕದಳೀವನವನ್ನು ಸೇರಿಕೊಂಡನು.

ಅವನು ತನ್ನ ಕೈಯಲ್ಲಿದ್ದ ಸೌಗಂಧಿಕಾ ಕಮಲವನ್ನು ಹನುಮಂತನಿಗೆ ತೋರಿಸುತ್ತ, "ಮಹಾನುಭಾವಾ! ಈಗ ನಿನ್ನ ಅನುಗ್ರಹದಿಂದ ನನಗೆ ವಿಜಯವು ಕೈ ಗೂಡಿದಂತಾಯಿತು. ಆದರೆ ಮುಂದೆ ಕೌರವರೊಂದಿಗೆ ನಮಗೆ ನಡೆಯಲಿರುವ ಯುದ್ಧದಲ್ಲಿ ನೀನು ಸಹಾಯಮಾಡಬೇಕೆಂದು ನಮ್ಮ ಪಾಂಡವರೈವರ ಪಕ್ಷದಿಂದ ನಾನು ಬೇಡಿಕೊಳ್ಳುತ್ತೇನೆ." ಎಂದು ಕೈಮುಗಿದು ಬೇಡಿಕೊಂಡನು.

ಆದಕ್ಕೆ ಹನುಮಂತನು, "ಭೀಮಾ, ನಾನು ಈ ಯುಗದಲ್ಲಿ ಯುದ್ಧ ಮಾಡುವುದಿಲ್ಲ. ಆದರೆ ನೀನು ಕೇಳಿಕೊಂಡದ್ದರಿಂದ, ನಿಮ್ಮ ಸಂಗ್ರಾಮವು ನಡೆಯುವಾಗ, ನಿನ್ನ ತಮ್ಮ ಅರ್ಜುನನ ರಥದ ಮೇಲೆ ಧ್ವಜವನ್ನು ಅಂಟಿ ಹಿಡಿದುಕೊಂಡು ರಕ್ಷೆಯಾಗಿರು

ತ್ರೇನೆ. ನಿಮಗೆ ವಿಜಯ ಉಂಟಾಗುತ್ತದೆ. ಇನ್ನು ನೀನು ನಿಶ್ಚಿಂತನಾಗಿ ಹೋಗಿ, ಸೌಗಂಧಿಕಾಕಮಲವನ್ನು ದ್ರೌಪದಿಗೆ ಕೊಟ್ಟು ಅವಳ ಆಶೆ ತೀರಿಸು. ಮಾಯಾ ಜಿಂಕೆಯನ್ನು ಬಯಸಿ ಆ ದಿನ ಸೀತೆ ಎಷ್ಟೋ ಕಷ್ಟಗಳನ್ನು ತಂದುಕೊಂಡಳು. ಈಬಗೆಯ ಕೋರಿಕೆಗಳನ್ನು ಕೋರುವುದು ಅಷ್ಟು ಒಳ್ಳೆಯದಲ್ಲವೆಂದು ನಾನು ಹೇಳಿದೆನೆಂದು ಹೇಳು. ಸೌಗಂಧಿಕಾ ಕಮಲವನ್ನು ಶಿವಾರ್ಚನೆ ಮಾಡಿ, ಹಾಗೇ ಒಂದು ದಿನ ಬಿಟ್ಟು ಮರುದಿನ ಸ್ನಾನಮಾಡಿ-ಶಿವ ನಿರ್ಮಾಲ್ಯವಾಗಿ ಇದನ್ನು ಮುಡಿದುಕೊಳ್ಳಲಿ. ಶಿವಾರ್ಚನೆ ಮಾಡಿದುದರಿಂದ ನಿಮಗೆ ಶುಭವೂ ಕುಬೇರನ ಐಶ್ವರ್ಯವೂ ಉಂಟಾಗುತ್ತದೆ. ಸೌಗಂಧಿಕಾ ಕಮಲ ಎಂದಿಗೂ ಬಾಡದು" ಎಂದು ತಿಳಿಹೇಳಿ ಭೀಮನನ್ನು ಆಶೀರ್ವದಿಸಿ ಕಳುಹಿಸಿದನು.



ಭೀಮನು ಸೌಗಂಧಿಕಾ ಕಮಲವನ್ನು ದ್ರೌಪದಿಗೆ ಕೊಟ್ಟು ಅವಳಿಂದ ಶಿವಾರ್ಚನೆ ಮಾಡಿಸಿದನು. ಹನುಮಂತನು ಹೇಳಿದ ಬುದ್ಧಿ ಮಾತನ್ನೂ ಹೇಳಿದನು. ದ್ರೌಪದಿ ಅದನ್ನು ಕೇಳಿ ನಾಚಿಕೆಯಿಂದ ಸ್ವಲ್ಪ ಹೊತ್ತು ಸುಮ್ಮನಿದ್ದು, ಆಮೇಲೆ ಮಂದಹಾಸದಿಂದ ಮುಖವರಳಿಸಿ, "ನಾನು ಸೌಗಂಧಿಕಾ ಕಮಲವನ್ನು ಕೋರಿಕೊಂಡದ್ದರಿಂದಲೇ ಆ ಮಹಾನುಭಾವನ ರಕ್ಷೆ ನಮಗೆ ಲಭಿಸಿತು. ನನ್ನ ಆಶೆಯಿಂದ ನಮಗೆಲ್ಲ ಒಳ್ಳೇದೇ ಆಯಿತನ್ನಿ." ಎಂದಳು.

ಅವಳ ಮಾತು ಕೇಳಿ ಭೀಮನೊಂದಿಗೆ ಪಂಚ ಪಾಂಡವರೂ ಒಂದೇ ಕೊರಳಿನಿಂದ, "ಹೌದು! ಹೌದು!" ಎಂದರು. ಹನುಮಂತನ ಅನುಗ್ರಹ ತಮ್ಮ ಮೇಲಾದುದಕ್ಕೆ ಅವರಿಗಾದ ಆನಂದ ಅಷ್ಟಿಷ್ಟಲ್ಲ.

ಆಮೇಲೆ ಪಾಂಡವರ ಕಥೆ ನಡೆದೇ ನಡೆಯಿತು. ಅವರು ನಿಯಮ ಪ್ರಕಾರ ಹನ್ನೆರಡು ವರ್ಷ ವನವಾಸ ಮುಗಿಸಿ, ತರುವಾಯ ಒಂದು ವರ್ಷ ಅಜ್ಞಾತವಾಸವನ್ನೂ ಜಯಪ್ರದವಾಗಿ ಮುಗಿಸಿ ಹಿಂದಿರುಗಿ ಬಂದು ಕೃಷ್ಣನನ್ನು ಕೌರವರ ಬಳಿಗೆ ತಮ್ಮ ರಾಯಭಾರಿಯಾಗಿ ಕಳುಹಿಸಿಕೊಟ್ಟರು.

ಕೃಷ್ಣನು ಹೇಳಿದ ಹಿತವಚನಗಳೊಂದೂ ದುರ್ಯೋಧನನಿಗೆ ತಾಗಲಿಲ್ಲ. ಸಂಧಿ ಸಂಧಾನ ಯಾವುದೂ ನೆರವೇರಲಿಲ್ಲ. ಹದಿನೆಂಟುದಿನ ಯುದ್ಧವೆಂದೇ ನಿಶ್ಚಯವಾಯಿತು. ಉಭಯ ಪಕ್ಷಗಳ ಸೇನೆಗಳು ಸೇರಿದುವು, ರಣ ದುಂದುಭಿ ಮೊಳಗಿತು. ಅರ್ಜುನನ ರಥದ ಮೇಲೆ ರಪರಪಿಸುವ ಪತಾಕೆಯನ್ನು ಹನುಮಂತನು ಸೂಕ್ಷ್ಮರೂಪದಿಂದ ಅಂಟಿಹಿಡಿದುಕೊಂಡು ಹಾರಿದನು. ಕೃಷ್ಣನು ಅರ್ಜುನನ ರಥವನ್ನು ಓಡಿಸುವ ಸಾರಥಿಯಾಗಿದ್ದನು. ವಿಜಯಂ ಧ್ವಜವು ಉಜ್ವಲವಾಗಿ ಹಾರಾಡಿತು.

ಕುರುಕ್ಷೇತ್ರದಲ್ಲಿ ಮಹಾಭಾರತ ಯುದ್ಧವು ಆಚಂದ್ರಾರ್ಕಸ್ಥಾಯಿಯಾಗಿರುವಂತೆ ನಡೆಯಿತು. ಕೃಷ್ಣನು ಚಕ್ರಧಾರಿಯಾಗಿ ಸುಮ್ಮನಿದ್ದಂತೆ, ಚಾಟಿಯಿಂದ ಕುದುರೆಗಳನ್ನು ಕದಲಿಸುತ್ತಾ ಅರ್ಜುನನಿಂದ

ಮಹಾಯುದ್ಧ ಮಾಡಿಸುವ ಸೂತ್ರಧಾರಿಯಾಗಿ ಮೆರೆದನು. ವಿಜಯಶಾಲಿಯಾದ ಅರ್ಜುನನಿಗೆ ವಿಜಯನೆಂಬ ಸಾರ್ಥಕ ನಾಮ ಪ್ರಾಪ್ತವಾಯಿತು. ಕೃಷ್ಣನು ವಿಜಯಸಾರಥಿ ಅನ್ನಿಸಿಕೊಂಡನು.

ದುಶ್ಶಾಸನನು ದ್ರೌಪದಿಯ ಜುಟ್ಟು ಹಿಡಿದು ಸಭೆಗೆ ಎಳೆದುಕೊಂಡು ಬಂದಾಗ ಬಿಚ್ಚಿದ ಕೂದಲನ್ನು, ಅವನ ರಕ್ತದಿಂದಲೇ ನೆನೆಸಿ ಕಟ್ಟುವೆನೆಂದು ಭೀಮನು ಘೋರ ಪ್ರತಿಜ್ಞೆ ಮಾಡಿದ್ದನು. ಹಾಗೆಯೇ ಯುದ್ಧದಲ್ಲಿ ಭೀಮನು ದುಶ್ಶಾಸನನ ಎದೆ ಸೀಳಿ ಆ ರಕ್ತವನ್ನು ದ್ರೌಪದಿಯ ತಲೆಗೂದಲಿಗೆ ಸವರಿ ಮುಡಿಗಟ್ಟಿಸಿದನು. ಆಗ ದ್ರೌಪದಿ ಸೌಗಂಧಿಕಾ ಕಮಲವನ್ನು ತಲೆಯಲ್ಲಿ ಮುಡಿದುಕೊಂಡು ವಿಜಯಧ್ವಜನಾಗಿದ್ದ ಹನುಮಂತನನ್ನು ನಮಸ್ಕರಿಸಿದಳು.

ಗದಾಯುದ್ಧದಲ್ಲಿ ಭೀಮನು ದುರ್ಯೋಧನನ ತೊಡೆಗಳನ್ನು ಮುರಿದು ಹಾಕಿದನು. ಅಲ್ಲಿಗೆ ಭೀಮನ ಪ್ರತಿಜ್ಞೆಗಳು ತೀರಿದುವು. ಕೌರವರು ನಿಶ್ಶೇಷರಾಗಿ ಹತರಾದರು. ಪಾಂಡವರಿಗೆ ಪೂರ್ಣ ವಿಜಯ ಕೈಗೂಡಿತು.

ಕೃಷ್ಣನು ಹನುಮಂತನನ್ನು ಅಭಿನಂದಿಸಿ, "ಹನುಮಾನ್, ನಿನ್ನ ಕಾರ್ಯದೀಕ್ಷೆಯಿಂದ ಆ ಕಾಲದಲ್ಲಿ ರಾಮನಿಗೆ ಮುಖ್ಯ ಸಹಾಯಕನಾದೆ. ಈಗ ಕುರುಕ್ಷೇತ್ರ ಯುದ್ಧದಲ್ಲಿ ವಿಜಯಧ್ವಜನಾಗಿ ಹಾರಿ ಧರ್ಮರಾಯನಿಗೆ ಜಯವನ್ನು ಕೈಗೂಡಿಸಿದೆ! ಧನ್ಯನು ನೀನು ಹನುಮಾ!" ಎಂದನು.

ಆಗ ಹನುಮಂತನು ವಿನಯದಿಂದ, "ಮಹಾರಥನಾದ ಅರ್ಜುನನಿಗೆ ನೀನು ಚಕ್ರಪಾಣಿಯಾಗಿ ಸಾರಥ್ಯ ಮಾಡುತ್ತಿರುವಾಗ, ಜಯವಾಗದೆ ಎಲ್ಲಿಗೆ ಹೋಗುತ್ತದೆ ? ಕ್ರಿಯಾ ಸಿದ್ಧಿಗೆ ನಿನ್ನ ಮಹಾ ಸತ್ವವನ್ನು ಮೀಂಚಿದ ಬಲ ಬೇರೆ ಇದೆಯೆ ? ನಾನು ಕೇವಲ ಒಂದು ಚಿಹ್ನೆ ಮಾತ್ರವೇ. ಸಾಧನ ಸಾಮಗ್ರಿಗಳ ಮಹತ್ವವನ್ನು ತೋರಿಸುವುದು ನಿನ್ನದೊಂದು ಲೀಲೆಯಲ್ಲವೇ ? " ಎಂದನು.

"ಹೌದು. ಹೌದು. ಕ್ರಿಯಾ ಸಿದ್ಧಿಗೆ ನೀನೊಬ್ಬ ಚಿಹ್ನೆಯೂ ನಿಜವೇ. ಯಾವ ಕಾಲದಲ್ಲಿಯೇ ಆಗಲಿ, ನಿನ್ನ ಗುರುತಿನ ಪತಾಕೆಯಿರುವಲ್ಲಿ ವಿಜಯವೇ ಸಿದ್ಧಿಸುತ್ತದೆ. ನಿನ್ನ ವಿಜಯಧ್ವಜವು ಚಿರಾಯುವಾಗಿ ಕೀರ್ತಿಯಿಂದ ಬೆಳಗುವಂತಹುದು!" ಎಂದು ಕೃಷ್ಣನು ಭರತವಾಕ್ಯಗಳನ್ನು ಉದುರಿಸಿದನು.

ಕಡೆಗೆ ಹನುಮಂತನು ಪಾಂಡವರೆಲ್ಲರ ವಂದನೆಗಳನ್ನು ಪಡೆದುಕೊಂಡು, ಕೃಷ್ಣನಿಂದ ಅಪ್ಪಣೆ ಪಡೆದು, ಗಂಧಮಾದನ ಪರ್ವತಕ್ಕೆ ಹಾರಿ ಹೋದನು. ಅಲ್ಲಿ ರಾಮನಾಮದ ಸ್ಮರಣೆ ಮಾಡುತ್ತ ತಪಸ್ಸಿನಲ್ಲಿ ಮಗ್ನನಾದನು.






ವೀರಹನುಮಾನ್

ಶ್ರೀರಾಮನ ಕಾಲದಿಂದ ಕೃಷ್ಣನ ಕಾಲದವರೆಗೆ ಮೆರೆದ ಹನುಮಂತನು ಗಂಧಮಾದನ ಪರ್ವತದ ಮೇಲೆ ಕುಳಿತು ರಾಮನಾಮವನ್ನೇ ಶ್ವಾಸೋಚ್ಛ್ವಾಸವಾಗಿ, ತದೇಕ ಧ್ಯಾನದಿಂದ ತಪಸ್ಸಿನಲ್ಲಿರಲು, ಬ್ರಹನು ಅವನ ಬಳಿಗೆ ಬಂದನು.

"ನನ್ನ ಪ್ರಿಯನಾದ ಹನುಮಾನ್. ಏಳು. ಕಲಿಯುಗವು ಪ್ರಾರಂಭವಾಗಲಿಕ್ಕಾಯಿತು. ಕಲಿಯುಗವು ನಿನಗೆ ಸರಿಹೊಂದುವಂತಹುದಲ್ಲ. ಕಲಿಯುಗದ ಕಳಂಕಗಳಿಗೆಲ್ಲಾ ಅತೀತವಾಗಿರುವ ಕ್ಷೀರಸಾಗರಕ್ಕೆ ಹೋಗಿ ಮಹಾ ವಿಷ್ಣುವಿನ ಬಳಿಯಲ್ಲಿರು. ಅವನೇ ನಿನ್ನನ್ನು ಕರೆಸಿಕೊಳ್ಳುತ್ತಾನೆ." ಎಂದು ಅಪ್ಪಣೆ ಕೊಟ್ಟು ಹೊರಟುಹೋದನು.

ಕ್ಷೀರಸಾಗರದಲ್ಲಿ ಶೇಷಪರ್ಯಂಕದ ಮೇಲೆ ಪವಡಿಸಿಕೊಂಡಿದ್ದ ವಿಷ್ಣುವಿನ ಬಳಿಯಲ್ಲಿ ತುಂಬುರು ನಾರದರು ಸದಾ ಕೀರ್ತನೆ ಸಂಗೀತವನ್ನು ನಡೆಯಿಸಿ ಕೊಂಡಿದ್ದರು. ನಾರದನು ತನ್ನ ಮಹತೀ ವೀಣೆಯನ್ನು ಮೀಟುತ್ತ ತುಂಬಾ ಭಕ್ತಿ ಭಾವಗಳು ತುಳುಕುವ ಕೀರ್ತನೆಗಳನ್ನು ಹಾಡುತ್ತಿದ್ದನು. ತುಂಬುರು ಹಯಗ್ರೀವ ವೀಣೆಯ ಮೇಲೆ ಮೃದಂಗದ ಧ್ವನಿಗಳನ್ನು ಹೊರಡಿಸುತ್ತ ಕಟ್ಟುದಿಟ್ಟವಾದ ಶಾಸ್ತ್ರೀಯ ಗಾನವನ್ನು ತಾಳ ಪ್ರಧಾನವಾಗಿ ಹಾಡಿ ಕೊಂಡಿದ್ದನು. ಒಬ್ಬರಾದ ಮೇಲೆ ಇನ್ನೊಬ್ಬರಂತೆ ಹಾಡಿ ಕೊಂಡಿದ್ದ ಅವರಲ್ಲಿ ಒಂದು ಬಗೆಯ ಸ್ಪರ್ಧೆ ತನ್ನಂತಾನೇ ಹೊರಟಿತ್ತು. ಬರುಬರುತ್ತ ತಾನೇ ಹೆಚ್ಚಿನ ಸಂಗೀತವೇತ್ತನೆಂಬ ಗರ್ವವೂ, ದ್ವೇಷಾಸೂಯೆಗಳೂ ಇಬ್ಬರಲ್ಲಿಯೂ ಹೆಚ್ಚು ಹೆಚ್ಚಾಗಿ ಉಕ್ಕುತ್ತಿದ್ದಿತು.

ಕಡೆಗೆ ಇಬ್ಬರೂ ತಮ್ಮೊಳಗೆ ಬಹಿರಂಗವಾಗಿಯೇ ಸ್ಪರ್ಧೆಗಿಳಿದರು. ಇಬ್ಬರೂ ಸಣ್ಣ ಪುಟ್ಟ ಧಿಃಕ್ಕಾರಗಳಿಗೆ ಪ್ರಾರಂಭಿಸಿ, ಅದೇ ದೊಡ್ಡದಾಗುತ್ತ ತಮ್ಮ ತಮ್ಮ ವೀಣೆಗಳನ್ನು ಗದಾಯುಧದಂತೆ ಎತ್ತಿ ಹೊಡೆದಾಡಲೂ ತೊಡಗಿದರು. ಆದರಿಂದೇನೂ ಬಗೆಹರಿಯದೆ "ನಮ್ಮೊಳಗೆ ಯಾರ ಸಂಗೀತ ದೊಡ್ಡದು? ನೀವೇ ತೀರ್ಪು ಹೇಳಬೇಕು" ಎಂದು ಮಹಾ



ವಿಷ್ಣುವನ್ನೇ ಒತ್ತಾಯಿಸತೊಡಗಿದರು. ವಿಷ್ಣು ಅವರನ್ನು ಸಮಜಾಯಿಸಲು ಸಾಧ್ಯವಾಗದೆ ಯೋಗ ನಿದ್ರೆಗೆ ಜಾರಿಕೊಂಡರೂ ಅವರು ಬಿಡದೆ ವಿಷ್ಣುವಿನ ಒಂದೊಂದು ಕಿವಿಯ ಹತ್ತಿರ ಬಾಯಿಯಿಟ್ಟು, "ನಮ್ಮಿಬ್ಬರಲ್ಲಿ ಯಾರು ಹೆಚ್ಚಿನವನೆಂದು ಹೇಳುವಿರೋ ಇಲ್ಲವೊ? ಹೇಳುವವರೆಗೂ ನಾವು ಬಿಡಲಾರೆವು. ನಮ್ಮ ತಗಾದೆಯನ್ನು ನೀವಲ್ಲದೆ ಬೇರೆ ಯಾರು ತೀರಿಸುವರು ?" ಎಂದರು.

ವಿಷ್ಣು ಬೇಸರದಿಂದ, "ನಿಮ್ಮ ಪೂರ್ತಿ ಸಂಗೀತ ಸಾಮರ್ಥ್ಯವನ್ನು ನಾನೆಲ್ಲಿ ಕೇಳಿದ್ದೇನೆ? ನಿಮ್ಮ ಸಂಗೀತದ ಆನಂದದಲ್ಲಿ ನಾನು ಮೈಮರೆತು ಯೋಗ ನಿದ್ರೆಯಲ್ಲಿ ಬೀಳುತ್ತಾ ಏಳುತ್ತಾ ಇರುವವನು. ಆದುದರಿಂದ ನಾನು ಹೇಳುವ ತೀರ್ಪು ಸರಿಯಾಗಲಾರದು. ಒಂದು ಕೆಲಸ ಮಾಡಿರಿ. ಗಂಧಮಾದನ ಪರ್ವತದ ಮೇಲೆ ಒಂದು ಕೋತಿ ಇದೆ. ರಾಮನು ಕರೆಯುವನೆಂದು ಹೇಳಿದರೆ, ಹಾಗೆ ಹೇಳಿದವರ ಹಿಂದೆಯೇ ಹೊರಟುಬಿಡುತ್ತದೆ. ಆ ಕೋತಿಯನು ಇಲ್ಲಿಗೆ ಕರೆದುಕೊಂಡು ಬನ್ನಿ. ಅವನು ನಿಮ್ಮ ಹೆಚ್ಚು ಕಡಮೆಗಳನ್ನು ಸರಿಯಾಗಿ ಗುರುತಿಸಿ ಹೇಳಬಲ್ಲನು." ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟನು.

ವಿಷ್ಣುವಿನ ಮಾತು ಕೇಳಿ ತುಂಬುರು ನಾರದರು ಬೇಸದಿಂದ, ಒಬ್ಬರನ್ನೊಬ್ಬರು ಚುರುಚುರು ನೋಡಿಕೊಂಡು, ಗಂಧಮಾದನ ಪರ್ವತ ಪ್ರಾಂತಕ್ಕೆ ಹೊರಟರು. ಅವರು ಗಂಧಮಾದನ ಪರ್ವತವನ್ನು ಸೇರಿದಾಗ, ಹನುಮಂತನ ಕಂಠದೊಳಗಿನಿಂದ ಏಕ ಧಾರೆಯಾಗಿ ಹೊರಡುವ ರಾಮನಾಮದ ಧಾರಾವಾಹಿ ಜಪವು ಓಂಕಾರನಾದವಾಗಿ ಕೇಳಿ ಬರತೊಡಗಿತು. ತುಂಬುರು ನಾರದರು ಪರ್ವತದ ಮೇಲೆ ಹೋಗಿ ಹನುಮಂತನ ಸಮೀಪದಲ್ಲಿ ನಿಂತುಕೊಂಡರು. ಹನುಮಂತನು ಕಣ್ಣು ಮುಚ್ಚಿ ರಾಮನಾಮದ ಸ್ಥಾಯಿಯನ್ನು ಹೆಚ್ಚಿಸುತ್ತ ತಗ್ಗಿಸುತ್ತ ಸ್ವರಯುಕ್ತವಾಗಿ ಗಾನ ಮಾಡುತ್ತಿರುವಂತೆ, ಕೇಳುವವರ ಹೃದಯದಲ್ಲಿ ಅನೇಕ ಭಾವಗಳನ್ನು ಎಬ್ಬಿಸುವಂತಿದ್ದಿತು.


ರಾ, ಮ ಎಂಬ ಎರಡೇ ಅಕ್ಷರಗಳು ಅನೇಕ ತಾಳ ಗತಿಗಳೊಂದಿಗೆ ಲಯವಿನ್ಯಾಸ ಮಾಡುವುದನ್ನು ನೋಡಿ ತುಂಬುರು ನಾರದರು ಬೆರಗಾಗಿ ಬಂದ ಕಾರ್ಯವನ್ನೇ ಮರೆತರು. ಹನುಮಂತನು ದೊಡ್ಡ ನಾದೋಪಾಸಕನೆಂದು ಅವರಿಗೆ ಗೊತ್ತಾಯಿತು. ಸಾಹಿತ್ಯಕ್ಕಿಂತ, ಶಾಸ್ತ್ರಕ್ಕಿಂತ, ಗಾತ್ರ ಮಾಧುರ್ಯವು ಎಷ್ಟು ದೊಡ್ಡದೆಂದು ಆಶ್ಚರ್ಯಪಡುತ್ತಿದ್ದರು. ಅವರಿಗೇ ತಿಳಿಯದಂತೆ ಅವರ ಬಾಯಿಗಳಿಂದಲೂ ರಾಮನಾಮವು ಹೊರಟು ಹನುಮಂತನ ಸ್ವರದೊಂದಿಗೆ ಸೇರಲು ಪ್ರಯತ್ನಿಸುತ್ತಿದ್ದಿತು. ಹನುಮಂತನ ಗಂಭೀರ ಮಂದ್ರಗಾತ್ರದೊಂದಿಗೆ ಅವರ ಕಂಠಸ್ವರವು ಕೂಡದೆ ಅಪಶ್ರುತಿಯುಂಟಾಗಲು, ಇದೇನಾಯಿತೆಂದು ಹನುಮಂತನು ಕಣ್ಣು ತೆರೆದನು.

ತನ್ನ ಇದಿರಿನಲ್ಲಿ ಕಣ್ಣು ಮುಚ್ಚಿ ರಾಮನಾಮ ಜಪಿಸುವ ದೇವಗಾಯಕರಾದ ತುಂಬುರು ನಾರದರನ್ನು ನೋಡಿ ಆಶ್ಚರ್ಯವೇಳಲು, ಧಿಗ್ಗನೆದ್ದು ಅವರ ಪಾದಗಳನ್ನು ಹಿಡಿದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡನು ಹನುಮಂತ.

ಆಗಲೇ ತುಂಬುರು ನಾರದರು ಎಚ್ಚರಕ್ಕೆ ಬಂದು ತಮ್ಮ ಕಾಲುಗಳನ್ನು ಹಿಂದಕ್ಕೆ ಎಳೆದುಕೊಂಡು, "ಮಹಾ ಮಹಿಮನೇ ! ನಮ್ಮ ಕಾಲುಗಳನ್ನು ನೀನು ಹಿಡಿಯುವುದೆಂದರೇನು ? ನಮ್ಮನ್ನು ಯಾರೆಂದು ಭಾವಿಸಿದೆಯೋ ? ನಾವು ಸಾಮಾನ್ಯ ತುಂಬುರು ನಾರದರು !" ಎಂದರು.

"ನೀವು ಯಾರೇ ಆಗಿದ್ದರೂ ರಾಮನಾಮ ಸ್ಮರಣೆ ಮಾಡುವವರೆಲ್ಲಾ ನನಗೆ ಆರಾಧ್ಯರೇ. ಅವರ ಪಾದ ಧೂಳಿಯನ್ನು ನನ್ನ ಶಿರಸ್ಸಿನಲ್ಲಿ ಧರಿಸಿಕೊಂಡರೇನೇ ನನಗೆ ತೃಪ್ತಿ, ಆನಂದ, ಸೌಭಾಗ್ಯ ಎಲ್ಲವೂ! ನಿಜಕ್ಕೂ ಈ ದಿನ ನಿಮ್ಮ ದರ್ಶನದಿಂದ ನಾನು ಧನ್ಯನಾದೆನು." ಎಂದನು ಹನುಮಂತ. ಹನುಮಂತನು ಎಷ್ಟು ದೊಡ್ಡ ಗಾನಕಲಾಕೋವಿದನೋ. ಎಷ್ಟು ದೊಡ್ಡ ರಾಮ ಭಕ್ತನೋ ಎಂಬುದನ್ನು ಅಳೆಯಲು ಸಾಧ್ಯವಾಗದೆ ತುಂಬುರು ನಾರದರು ಆಶ್ಚರ್ಯಪಡುತ್ತ, ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ತಮ್ಮಿಬ್ಬರ ಹೆಚ್ಚಳಿಕೆಗೆ ಅರ್ಥವಿಲ್ಲವೆಂದು ಈಗ ಅವರಿಗೆ ಹೊಳೆಯ ತೊಡಗಿತು. ಅಂತೆಯೇ ಅವರೊಳಗಿನ ದ್ವೇಷಾಸೂಯೆಗಳೂ ಇಳಿಯತೊಡಗಿದುವು. ಆಗ ಅವರು ತಾವು ಬಂದ ಕೆಲಸವನ್ನು ನೆನಪು ಮಾಡಿಕೊಂಡು, "ರಾಮನು ನಿನ್ನನ್ನು ಕರೆದುಕೊಂಡು ಬರಲು ನಮ್ಮನ್ನು ಕಳುಹಿಸಿದ್ದಾನೆ. ಆತನು ಕ್ಷೀರ ಸಾಗರದಲ್ಲಿ ಶೇಷತಲ್ಪದ ಮೇಲೆ ವಿಶ್ರಾಂತಿಪಡೆಯುತ್ತಿದ್ದಾನೆ" ಎಂದು ತುಂಬುರು ಹೇಳಿದನು.

"ಸೀತಾದೇವಿ ಆತನ ಪಾದಗಳನ್ನು ಒತ್ತಿಕೊಂಡಿದ್ದಾಳೆ. ಲಕ್ಷ್ಮಣನು ಸಾವಿರ ಹೆಡೆಗಳ ಕೊಡೆಯನ್ನು ಹಿಡಿದಿದ್ದಾನೆ. ಭರತ ಶತ್ರುಘ್ನರು ಅವನ ಭುಜಸ್ಕಂಧಗಳನ್ನು ಅಲಂಕರಿಸಿ ಕೊಂಡಿದ್ದಾರೆ" ಎಂದು ನಾರದನು ಹೇಳಿದನು.





"ಹಾಗಾದರೆ ನಡೆಯಿರಿ" ಎಂದು ಹನುಮಂತನು ಕೂಡಲೇ ಹೊರಟನು. ಇದನ್ನು ಮುಂದಾಗಿಯೇ ಸೂಚಿಸಿದ್ದ ಬ್ರಹ್ಮನ ಸಂಕಲ್ಪದಂತೆಯೇ ಇದೆಲ್ಲಾ ನಡೆಯುವುದೆಂದು ಅವನಿಗೆ ಗೊತ್ತಾಯಿತು.

ಹನುಮಂತನು ತುಂಬುರು ನಾರದರೊಂದಿಗೆ ಕ್ಷೀರಸಾಗರವನ್ನು ಸೇರಿದನು. ಗರುತ್ಮಂತನು ಅವನಿಗೆ ಇದಿರಾಗಿ ಬಂದು ಸ್ವಾಗತ ಹೇಳಿ, ಆನಂದದಿಂದ ಹನುಮಂತನ ಹೆಗಲಿನ ಮೇಲೆ ಕೈಗಳನ್ನು ಹಾಕಿ ಯೋಗಕ್ಷೇಮ ವಿಚಾರಿಸುತ್ತ, ಅವನನ್ನು ವಿಷ್ಣುವಿನ ಬಳಿಗೆ ಕರೆದೊಯ್ದನು.

ಆಗ ಹನುಮಂತನ ಕಣ್ಣಿಗೆ ವಿಷ್ಣು ರಾಮನಂತೆಯೇ ಕಾಣಿಸಿದನು. ವಿಷ್ಣುವೇ ರಾಮನೆಂದೂ, ರಾಮನೇ ವಿಷ್ಣುವೆಂದೂ, ಹನುಮಂತನು ವಿಷ್ಣುವಿನ ದಶಾವತಾರಗಳನ್ನೂ ನೆನೆಯುತ್ತ ತಲೆ ಬಾಗಿ ಕೈಜೋಡಿಸಿ ಲಕ್ಷ್ಮೀನಾರಾಯಣರಿಗೆ ವಂದಿಸಿದನು. ವಿಷ್ಣು ಮುಗುಳ್ನಗುತ್ತ ಹನುಮಂತನನ್ನು ನೋಡಿ, "ಹನುಮಂತಾ! ಇದು ಭೇದಭಾವಗಳಿಗೆ ಎಡೆಯಿಲ್ಲದ ವೈಕುಂಠ. ಇಲ್ಲಿ ತುಂಬುರು ನಾರದರೊಳಗೆ ಒಂದು ಸಂದೇಹವೂ ಸ್ಪರ್ಧೆಯೂ ಉಂಟಾಗಿದೆ. ನಾನಂತೂ ಅವರ ಗಾನ ಮಾಧುರ್ಯದಲ್ಲಿ ತೇಲಾಡಿ ಕೊಂಡಿರುವವನು. ಹೆಚ್ಚು ಕಡಿಮೆಯಾವುದೂ ಹೇಳಲಾಗದವನು. ನೀನು ಅವರ ಪಾಂಡಿತ್ಯವನ್ನು ಪರೀಕ್ಷಿಸಿ ಯಾರದು ಹೆಚ್ಚು ಎಂಬುದನ್ನು ಹೇಳಬೇಕು. ಆದಕ್ಕೇ ನಿನ್ನನ್ನು ಕರೆಯಿಸಿದೆನು. ಅವರನ್ನು ಪರೀಕ್ಷಿಸುವ ಮೊದಲು ನಿನ್ನ ಗಾನ ಹೇಗಿದೆಯೋ ನೋಡಬೇಕೆಂದಿದ್ದೇನೆ. ಮೊದಲು ಸ್ವಲ್ಪ ನೀನೇ ಹಾಡಿಬಿಡು!" ಎಂದನು.

ಹನುಮಂತನು, "ರಾಮರಾಮ! ನಾನು ಸಂಗೀತವೇತ್ತನೇ ಅಲ್ಲವಲ್ಲಾ! ಸರಿಗಮವೆನ್ನಲು ಕೂಡಾ ತಿಳಿಯದ ಕಪಿ! ವಾಯುವಿನ ಮಗ. ನನ್ನದು ಕೇವಲ ಗಾಳೀ ಹಾಡು. ಮಹಾ ಮಹಿಮರ ಮುಂದೆ ಹಾಡುವಂತಹ ಶಕ್ತಿವಂತನು ನಾನಲ್ಲ ಸ್ವಾಮಿ!" ಎಂದನು.

"ಹನುಮಾ! ಇದೇ ನೋಡು ನಿನ್ನ ಹತ್ತಿರ ಬರುವ ತಂಟೆ! ನಿನಗಿರುವ ಶಕ್ತಿ ಏನೆಂಬುದು ನಿನಗೆ ಗೊತ್ತಿಲ್ಲ. ನೀನು ಸೂರ್ಯನ ಹತ್ತಿರ ಎಲ್ಲಾ ಶಾಸ್ತ್ರಗಳನೂ ಸಾಹಿತ್ಯ ಕಲೆಗಳನ್ನೂ, ನವ ವ್ಯಾಕರಣಗಳನೂ ಕಲಿತು ಸಕಲ, ಕಲಾವಲ್ಲಭನಾದವನು. ಯಾರೋ ಒಬ್ಬರು ನಿನ್ನ ಸತ್ವವೇನೆಂಬುದನ್ನು ಎತ್ತಿ ತೋರಿಸಿದ ಹೊರತು ನಿನಗೆ ಆವೇಶ ಬಾರದು. ನಾನು ಹೇಳುತ್ತೇನಷ್ಟೆ? ಇನ್ನು ಹಾಡು, ಹುಂ," ಎಂದನು ವಿಷ್ಣು.

ಆಗ ಹನುಮಂತನು ತನ್ನ ಹೆಸರಿನ ಮೊದಲನೆಯ 'ಹ' ಕಾರದ 'ಹಾ' ಎಂಬ ಧ್ವನಿಯನ್ನು ಮಂದ್ರ ಗಂಭೀರನಾದದಿಂದ ಪ್ರಾರಂಭಿಸಿ ವಿಷ್ಣುವಿಗೆ ಪ್ರಿಯವಾದ ಹಿಂದೋಳರಾಗವನ್ನು ಆಲಾಪನೆಯನ್ನಾಗಿ ಹಿಡಿದನು. ತುಂಬುರು ನಾರದರು ಆ ಸ್ವರದ

ಮಾಧುರ್ಯಕ್ಕೆ, ಗಾತ್ರಗಾಂಭೀರ್ಯಕ್ಕೆ, ಸಂಭ್ರಮಾಶ್ಚರ್ಯಪಡುತ್ತ ಬಾಯಿಯನ್ನು ಅರೆದೆರೆದು, ಕಿವಿನಿಗುರಿಸಿ ಕೇಳುತ್ತಿದ್ದರು.

ಹನುಮಂತನು ಹಿಂದೋಳ ರಾಗವನ್ನು ವೈಜಯಂತಿಗೆ ತಿರುಗಿಸಿ ರಾಮನಾಮವನ್ನೇ ಹಿಡಿದನು. ರಾಮ ಎಂಬ ಎರಡು ಅಕ್ಷರಗಳಿಂದಲೇ ಸ್ಥಾಯೀ ಭೇದಗಳನ್ನು ತೋರಿಸಿ, ಅನೇಕ ಬಗೆಯ ತಾಳಗತಿಗಳಿಂದ ಅನೇಕ ರಾಗಗಳಿಂದ ಹನುಮಂತನು ಹಾಡುತ್ತಿರುವಾಗ, ಹಾಲಿನ ಸಮುದ್ರದಲ್ಲಿ ತೆರೆಗಳು ಎದ್ದೆದ್ದು ನಾಟ್ಯಕ್ಕೆ ತೊಡಗಿದುವು. ಕೇಳುವವರ ಎದೆಯೊಳಗೆ ನಾದತರಂಗಗಳು ಉಕ್ಕುಕ್ಕಿ ಆನಂದದಲ್ಲಿ ಹೊರಳುತಿದ್ದುವು. ತುಂಬುರು ನಾರದರಿಗೆ ಇದುವರೆಗೂ ಅನುಭೂತಿಗೆ ಬಾರದ ಭಕ್ತಿಭಾವಗಳು ಬರತೊಡಗಿದುವು. ಹಾಡುತ್ತಾ ಹನುಮಂತನ ಧ್ವನಿ ತಾರಸ್ಥಾಯಿಗೆ ಏರಿತು. ಹಾಲಸಮುದ್ರದ ತೆರೆಗಳು ಆಗಸದ ಕಡೆಗೆ ಏಳುತ್ತ ನಕ್ಷತ್ರಮಂಡಲವನು ಮುಸುಕಿದುವು. ಶೇಷನ ಸಾವಿರ ಹೆಡೆಗಳು ಓಲಾಡತೊಡಗಿದುವು.

ಹನುಮಂತನ ಧ್ವನಿ ಒಮ್ಮೆಗೇ ಮಂದ್ರಸ್ಥಾಯಿಗಿಳಿದು ದೇವಗಾಂಧಾರ ರಾಗವನ್ನು ಹಿಡಿಯಿತು. ಶಾಂತರಸ ಪ್ರಧಾನವಾದ ಆ ರಾಗಕ್ಕೆ ಹಾಲಸಮುದ್ರವು ಕ್ರಮಕ್ರಮವಾಗಿ ಸಂಕೋಚಿಸಿ ಹೆಪ್ಪುಗಟ್ಟುತ್ತ ಗಡ್ಡೆ ಕಟ್ಟಿತು. ತುಂಬುರು ನಾರದರ ಹಯಗ್ರೀವ ಮಹತೀವೀಣೆಗಳು ಜೋಳದ ಗದ್ದೆಯಲ್ಲಿದ್ದ ಮೊಳಕೆಗಳಂತೆ ಅದರಲ್ಲಿ ಸಿಕ್ಕಿಕೊಂಡುವು. ಕ್ಷೀರಸಾಗರವು ಇನ್ನಿಷ್ಟು ಗಟ್ಟಿಯಾಗಿ ಹಾಲುಗಲ್ಲಿನಂತಾಯಿತು. ಅದರಲ್ಲಿ ಸಿಕ್ಕಿಕೊಂಡ ಮಹಾಶೇಷನಿಗೆ ಕದಲಲಾಗದಂತಾಗಿ ಹೋಯಿತು.

ಇದನ್ನೆಲ್ಲ ನೋಡಿ ವಿಷ್ಣು ಹಾಡು ನಿಲ್ಲಿಸುವಂತೆ ಹನುಮಂತನಿಗೆ ಸಂಜ್ಞೆ ಮಾಡಿದನು. ಹಠಾತ್ತಾಗಿ ಗಾನ ನಿಂತು ಹೋಗಲು, ಎಲ್ಲರೂ ಗಾಬರಿಯಾದಂತೆ



ಮೆಟ್ಟಿಬಿದ್ದರು. ತುಂಬುರು ನಾರದರೂ ತಮ್ಮ ವೀಣೆಗಳಿಗಾಗಿ ಅತ್ತಿತ್ತ ನೋಡುತ್ತ ಹಾಲು ಗಲ್ಲಿನಂತಾದ ಸಮುದ್ರದಲ್ಲಿ ತಮ್ಮ ವೀಣೆಗಳು ಸಿಕ್ಕಿಕೊಂಡಿರುವುದನ್ನು ಕಂಡು ಕಕವಿಕರಾದರು.

"ಅದೇನು ಮಹಾ! ನೀವು ಹಾಡಿ ಸಮುದ್ರವನ್ನು ಕರಗಿಸಿ ನಿಮ್ಮ ವೀಣೆಗಳನ್ನು ತೆಗೆದುಕೊಳ್ಳಿ!" ಎಂದು ವಿಷ್ಣು ಆಜ್ಞೆ ಮಾಡಿದನು.

ಮೊದಲು ನಾರದನು ಹಾಡಿದನು. ಅವನ ಭಕ್ತಿಸಾಹಿತ್ಯಸಂಕೀರ್ತನೆಗಳಿಂದ ಏನೂ ಉಪಯೋಗವಾಗಲಿಲ್ಲ. ಆ ಮೇಲೆ ತುಂಬುರುವಿನ ಹಾಡು ಪ್ರಾರಂಭವಾಯಿತು. ಅವನ ಕಟ್ಟುಪಾಡಿನ ಶಾಸ್ತ್ರೀಯವಾದ ತಾಳಬದ್ಧಸಂಗೀತದಿಂದಲೂ ಯಾವ ಪರಿಣಾಮವೂ ಕಾಣಲಿಲ್ಲ. ಹಾಲಸಮುದ್ರವು ಸ್ವಲ್ಪ ಕೂಡಾ ಮೆತ್ತಗಾಗಲಿಲ್ಲ. ತುಂಬುರು ನಾರದರು ಈ ಮೊದಲು ತಾವು ಪಟ್ಟ ಗರ್ವಕ್ಕಾಗಿ ನಾಚಿಕೆಪಟ್ಟು ಗೌರವದಿಂದ ತಲೆವಾಗಿಸಿದರು.



ಅನಂತರ ವಿಷ್ಣುವಿನ ಆದೇಶದಂತೆ ಹನುಮಂತನೇ ಹಾಡತೊಡಗಿದನು. ಭೂಪಾಳ ರಾಗದಿಂದ ತೊಡಗಿ, ವಸಂತ, ಜಂಝೂಟಿ, ದೀಪಕ ಮೊದಲಾದ ರಾಗಗಳನ್ನು ಹಿಡಿದು ರಾಮನಾಮವನ್ನೇ ಗಾನ ಮಾಡಲು ತೊಡಗಿದನು.

ಆಗ ರಾಗರಾಗಿಣಿಯರು ರೂಪತಾಳಿ ನೃತ್ಯ ಮಾಡತೊಡಗಿದರು. ಹನುಮಂತನ ಗಾನಕ್ಕೆ ಸರಿಯಾಗಿ ರಾಗರಾಗಿಣಿಯರು ನರ್ತಿಸುತ್ತಿದ್ದರು. ಹನುಮಂತನ ಗಾನವು ಮತ್ತೆ ತಾರಸ್ಥಾಯಿಗೆ ಹೋಯಿತು. ಆ ರಾಗದಲ್ಲಿ ಪ್ರಳಯ ಕಂಪನವುಂಟಾಗಿ ಇತರ ಲೋಕಗಳವರೆಗೂ ಹರಡಿತು. ಕೈಲಾಸದಿಂದ ಶಿವನು ಢಮರುಕವನ್ನು ಬಾರಿಸುತ್ತಾ ತಾಂಡವನೃತ್ಯ ಮಾಡುತ್ತಾ ಬಂದನು. ಅವನ ಹಿಂದೆಯೇ ಪಾರ್ವತಿಯೂ, ಗಣಪತಿಯೂ, ಪ್ರಮಥಗಣಗಳೂ ಬಂದರು. ಬ್ರಹ್ಮನೂ ಪದ್ಮಾಸನದಿಂದಿಳಿದು ಅಲ್ಲಿಗೆ ಬಂದನು. ಅವನೊಂದಿಗೆ ವೀಣೆ ಬಾರಿಸುತ್ತಾ ಸರಸ್ವತಿಯೂ ಬಂದಳು. ಇಂದ್ರಾದಿ ದೇವತೆಗಳೂ ದಿಕ್ಪಾಲಕರೂ ಸಾಲು ಸಾಲಾಗಿ ಬಂದರು. ಹಾಲಸಮುದ್ರವು ಕರಗಿ ಅಗಲಗಲವಾದ ತರಂಗಗಳಿಂದ ಉಯ್ಯಾಲೆಯಾಡತೊಡಗಿತು.

ಆಗ ಕ್ಷೀರಸಾಗರವು ದೊಡ್ಡದೊಂದು ವಿವಾಹ ಮಂಟಪದಂತೆ ಕಂಗೊಳಿಸತೊಡಗಿತು. ನವವಧೂವರರಂತೆ ಲಕ್ಷ್ಮೀನಾರಾಯಣರು ಕಂಡು ಬಂದರು. ಸೀತಾರಾಮರ ಕಲ್ಯಾಣವು ಹೀಗೆಯೇ ನಡೆದಿರಬೇಕೆಂದು ಹನುಮಂತನು ಆನಂದತನ್ಮಯತೆಯಲ್ಲಿ ಮುಳುಗಿಹೋದನು. ತುಂಬುರು ನಾರದರು ತಮ್ಮ ತಮ್ಮ ವೀಣೆಗಳನ್ನು ತೆಗೆದುಕೊಂಡರು. ಶೇಷನೂ ತನ್ನ ಹಾಸಿಗೆಯನ್ನು ಸರಿಪಡಿಸಿಕೊಂಡನು.

ಬ್ರಹ್ಮನ ಆದೇಶದಂತೆ ಹನುಮಂತನ ಸಂಗೀತವು ನಿಂತಿತು. ಸರಸ್ವತಿ ಬ್ರಹ್ಮಾನುಜ್ಞೆಯನ್ನು ಪಡೆದು ತನ್ನ ಅಭಿಪ್ರಾಯವನ್ನು ಹೀಗೆ ಹೇಳಿದಳು :

“ಹನುಮಂತನು ಹಾಡಿದ ರೀತಿ ‘ಹನುಮದ್ಗಾನ’ ಎಂದು ಹೆಸರು ಪಡೆದು ಚಿರಕಾಲ ವರ್ಧಿಸಿಕೊಂಡಿರುತ್ತದೆ. ಇದು ಪಂಡಿತರಿಗೂ ಪಾಮರರಿಗೂ ಸಮಾನ ರೀತಿಯ ಆಕರ್ಷಣೀಯವೆನಿಸಿ ಹೃದಯವನ್ನು ಅರಳಿಸಿ ಮನಸ್ಸಿನ ಶಕ್ತಿಯನ್ನು ಹೆಚ್ಚಿಸುವಂತಹುದು. ಇದುವೇ ಸಂಗೀತ ಕಲೆಯ ಪರಮಾವಧಿ. ನಾರದರ ಸಂಗೀತವು ಭಾವ ಪ್ರಧಾನವಾದುದು. ತುಂಬುರುರ ಸಂಗೀತ ತಾಳ ಪ್ರಧಾನವಾದುದು. ಭಾವವನ್ನೂ ತಾಳವನ್ನೂ ಸಮನ್ವಯಗೊಳಿಸುವಂತಹುದು ರಾಗ. ಭಾವ, ರಾಗ, ತಾಳಗಳು ಮೂರೂ ಸಮಾನವೇ ಆದರೂ, ರಾಗವು ಜೀವದಂತಹುದು; ರಸಾತ್ಮಕವಾದುದು. ಮನಸ್ಸಿನ ಮೇಲೆ ಅದರ ಪ್ರಭಾವವೇ ಹೆಚ್ಚು. ಹನುಮದ್ಗಾನವು ರಾಗ ಪ್ರಧಾನವಾದುದರಿಂದ ಅದು ತಾಳವಾದ್ಯ ಮೊದಲಾದ ಹಿಮ್ಮೇಳಗಳ ಆಗತ್ಯವಿಲ್ಲದಿದ್ದರೂ, ಯಾವಾಗಲೂ ಜನ ಮನರಂಜಕವಾಗಿರುತ್ತದೆ !”



ಸರಸ್ವತಿಯ ತೀರ್ಪವನ್ನು ಕೇಳಿ ಎಲ್ಲರೂ ನಿಜ ನಿಜವೆಂದು ಉಲಿದರು. ಬ್ರಹ್ಮನು ಹನುಮಂತನ ಹತ್ತಿರ ಬಂದು. "ಹನುಮಾ. ನೀನು ಯಾವ ಕೋರಿಕೆಯನ್ನೂ ಕೋರದಿದ್ದರೂ ನಿನ್ನ ತಪಸ್ಸಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಬ್ರಹ್ಮಪದವಿ ಕೂಡಾ ಅದಕ್ಕೆ ಸಾಲದು. ಆದರೆ ಅದಕ್ಕಿಂತ ಹೆಚ್ಚಿನದೇನೂ ಇಲ್ಲದುದರಿಂದ ನೀನು ಭವಿಷ್ಯದ್‌ಬ್ರಹ್ಮನಾಗಿರುವಿ! ನೀನು ಆ ಪದವಿಯನ್ನು ನಿರ್ವಹಿಸದೆ ತಪ್ಪದೆಂದು ಬರೆದಿಡಲಾಗಿದೆ. ಬರಲಿರುವ ಕಲ್ಪದಲ್ಲಿ ನಿನ್ನಿಂದಲೇ ಸೃಷ್ಟಿಯುಂಟಾಗುತ್ತದೆ" ಎಂದು ಹೇಳಿದನು.

ಆಗ ಶಿವನು ಮುಂದೆ ಬಂದು, "ಹನುಮಾ! ಈ ಬ್ರಹ್ಮದೇವನ ಸೃಷ್ಟಿಯಲ್ಲಿ ಒಳ್ಳೆಯವರಿಗಿಂತಲೂ ಕೆಟ್ಟವರೇ ಹೆಚ್ಚಾಗಿ ಹುಟ್ಟುತ್ತಿದ್ದಾರೆ, ಹುಟ್ಟಿದ್ದಾರೆ, ಹುಟ್ಟುವರು! ತಾನು ದೇವನೆಂಬ ಅಹಂಕಾರದಿಂದ. ಪರಿಪೂರ್ಣ ಮಾನವತ್ವದ ಮೇಲೆ ಗುರಿ ತಪ್ಪಿದುದರಿಂದ ಈ ಬ್ರಹ್ಮನ ಸೃಷ್ಟಿ ಹೀಗಾಗಿದೆ. ನೀನು ಕೋತಿಯಾದರೂ. ನಿನ್ನ ಧ್ಯಾನದಲ್ಲಿ ವಿನಯವಿದ್ದು ಶ್ರೀರಾಮನು ತುಂಬಿರುವುದರಿಂದ ನಿನ್ನ ಸೃಷ್ಟಿಯಲ್ಲಿ ರಾಮನಂತಹ ಪರಿಪೂರ್ಣ ಮಾನವರು. ಸೀತೆಯಂತಹ ಮಾನಿನಿಯರು, ಲಕ್ಷ್ಮಣನಂತಹ ಸಹೋದರರು ಬಹಳ ಮಂದಿ ಇರಬಲ್ಲರು. ಅದುವರೆಗೂ ನೀನು ವಿಷ್ಣುಸಾನ್ನಿಧ್ಯದಲ್ಲಿರು!" ಎಂದು ಹೇಳಿದನು.

ಆಗ ಬ್ರಹ್ಮನು "ಹೌದು ಹನುಮಾ! ಶಿವನು ನಿಜವಾಗಿರುವುದನ್ನೇ ಹೇಳಿದನು. ಅನೇಕ ಮಂದಿ ಒಳ್ಳೆಯವರ ನಡುವೆ ಕೆಲವು ಮಂದಿ ದಾರಿ ತಪ್ಪಿದವರಿದ್ದರೂ ಅವರನ್ನು ಸರಿ ದಾರಿಗೆ ತರುವ ಸದವಕಾಶವು ಹೆಚ್ಚಾಗಿಯೇ ನಿನ್ನ ಸೃಷ್ಟಿಯಲ್ಲಿರುತ್ತದೆ. ಅದೇ ನಿನ್ನ ಸೃಷ್ಟಿಯ ವಿಶೇಷ. ಬರಲಿರುವ ಬ್ರಹ್ಮಕಲ್ಪದಲ್ಲಿ ವಿಷ್ಣುವಿನ ಹೊಕ್ಕಳಿನಿಂದ ಹೊಸ ಬ್ರಹ್ಮಕಮಲವು ಅರಳುತ್ತದೆ. ಆ ಪದ್ಮಾಸನವನ್ನು ನೀನು ಬ್ರಹ್ಮನಾಗಿ ಅಲಂಕರಿಸುವಿ. ನೀನು ಭವಿಷ್ಯದ್ ಬ್ರಹ್ಮದೇವ! ಸೃಷ್ಟಿಕರ್ತ!" ಎಂದನು ಬ್ರಹ್ಮ ವಾಕ್ಯದಂತೆ.

ಎಲ್ಲರೂ ಹನುಮಂತನನ್ನು ಮಂಗಳಗಾನ ಮಾಡುವಂತೆ ಕೇಳಿಕೊಂಡರು. ಹನುಮಂತನು "ಪವಮಾನಸುತನು ಹಿಡಿಯುವ ರಾಮನ ಪಟ್ಟೆ ಪಾದಾರವಿಂದಗಳಿಗೆ ನಿತ್ಯ ಜಯಮಂಗಳ!" ಎಂದು ಶ್ರೀರಾಗದಿಂದ ಮಂಗಳಗಾನ ಮಾಡಿದನು.

ಹನುಮಂತನು ನಾರದ ತುಂಬುರು ಗರುತ್ಮಂತರೊಂದಿಗೆ ಕ್ಷೀರಸಾಗರದಲ್ಲಿ ಶೇಷತಲ್ಪಶಾಯಿಯಾದ ವಿಷ್ಣುವಿನ ಸನ್ನಿಧಾನದಲ್ಲಿ, ಲಕ್ಷ್ಮೀನಾರಾಯಣರನ್ನು ಸೀತಾರಾಮರನ್ನಾಗಿಸಿ ಸೇವೆ ಮಾಡಿಕೊಂಡು ಚಿರಂಜೀವಿಯಾಗಿರುವನು. ಬರಲಿರುವ ಬ್ರಹ್ಮ ಅವನೇ!

(ಮುಗಿಯಿತು)

